Those guarding law and order have to be housed and no efforts will be spared to provide good accommodation to the members of the police service.

Home Guards

The Government of India have fixed for this State a strength of 15,000 Home Guards. As against this there are at present 12,342 Home Guards. In order to step up the enrolment of volunteers to the Home Guards force, it is proposed to start New Units in a few more places. Since December 1967, a combined Central Home Guards and Civil Defence Training Institute has been functioning in Bangalore. The object of the Institute is to give advanced and specialised training to the Home Guards in fire fighting, rescue operations, etc. The Home Guards have been a source of sustained assistance to the Police all over the State in the maintenance of Law and Order.

Prisons

In the State prisons, increasing emphasis is laid on the reformative aspect of the punishment during the custody of the prisoners. In line with this policy, for the first time in the State, an open air jail has been started at Saundatti in Belgaum District from April 25, 1968. The special features are that security arrangements are minimised and the prisoners are allowed a considerable amount of freedom in addition to an opportunity for earning good wages from remunerative work like digging of canals, etc.

Road Transport

During the year 1968 the Mysore State Road Transport Corporation made further strides in its programme of progressive nationalisation of bus routes. The approved schemes of Mangalore and Shimoga sectors were implemented with effect form July 1, 1968. Services on 79 new routes—31 routes in Mangalore and 48 routes in Shimoga sectors—were taken over for operations. These new schemes cover 40,626 service kms. per day. A major scheme of nationalisation in Kolar sector has been implemented with effect from January 1, 1969. Under this scheme 87 notified routes covering 29,730 service kms. daily have been taken over by the Corporation. Besides this, in the exisiting areas of operation the services are being augmented to cater to the needs of different localities.

Considerable progress has also been achieved in the provision of increased amenities and facilities given to the travelling public as also in improving the working conditions of the employees. A new luxury snight service is proposed to be started between Bangalore and Bellary hortly.

LABOUR

The Industrial and Labour-Management relations in the State have been satisfactory. The Industrial relations machinery of the State has been effective in intervening and securing settlement of disputes raised by the workers. In order to avoid delay in the adjudication of disputes, Government have set up one more Labour Court at Mangalore. The additional Industrial Tribunal which is functioning at Bangalore has also been continued for further period of one year. Upto the end of October, 1968, there were only 49 strikes involving 64,851 workers and resulting in the loss of 5,01,941 mandays. These figures undoubtedly reflect a positive improvement in labour relations over the previous years.

The Employees' State Insurance Scheme has been extended to the workers employed in the Industries situated in the suburbs of Bangalore from November 24, 1968. Hospitalisation facilities have been made available to the families of insured persons in Bangalore City. In Mangalore, the panel system—providing medical facilities to the insured persons through clinics of private practitioners—has been replaced by service system, *i.e.*, providing medical facilities to the insured persons through dispensaries. It is hoped that this change will result in better medical facilities being made available to insured persons at less costs.

INFORMATION AND PUBLICITY

The Department has reoriented its programmes in order to lay greater emphasis on arranging exhibitions, documentary films and news reels, photographic display, strengthening the rural broadcasting organisation and radio rural forums. The Department has installed nearly 3,900 Community Radio sets and has organised 1,000 radio rural forums. A permanent exhibition cell is being set up in order to organise exhibitions on a regular and phased basis in all district headquarters in the State. It is also proposed to organise mobile exhibitions in the interior parts of the State.

A Song and Drama Unit has recently been organised and it has proved effective in organising publicity through this popular medium. Plays, skits, Harikathas, lavanies and other cultural programmes are used for publicity purposes.

A number of films portraying the developmental activities in the Divisions have been produced and more have been taken on hand.

Publications on Industry and exports of the State have been widely distributed and a series of feature articles on the various developmental activities released to the Press.

FILM UNIT

Previously, the Government had instituted schemes for grant of subsidy for films produced in the State and of cash awards to the three

best Kannada feature films. While these schemes gave a fillip to the Industry, it was felt that with a view to serving as an incentive to produce films of a high standard it would be necessary also to give recognition to the directors, actors, actresses, story writers, music directors, play-back singers, camera-men and sound engineers. Therefore recently a scheme has been sanctioned for the grant of cash awards and for giving certificates of merit to these persons.

TOURISM

The tempo of activities for the promotion of tourism has been stepped up with the result there has been a marked increase in the number of tourists visiting the State. To attract more tourists to the State several schemes are on hand for provision of accommodation, transport, food and entertainment to foreign tourists, at places of tourist interest. Preliminary work on the construction of Airports at Bijapur and Hassan has commenced.

PAY COMMISSION

The State Government appointed the Hon'ble Mr. Justice T. K. Tukol of Mysore High Court as a One-man Pay Commission on 17th November 1966.

The Commission has since submitted its final report, copies of which have already been supplied to the Hon'ble Members.

Comprehensive recommendations regarding Pay Scales, Dearness Allowance and for streamlining administration and improving efficiency have been made. In view of the financial and other implications of these recommendations Government will be glad to have the views of the Hon'ble Members, before it takes necessary decisions.

LEGISLATION

A few Bills placed before you in the previous Sessions could not be taken up for want of time. These and the following new Bills are proposed to be placed before you for your consideration :—

1. The Mysore Religious and Charitable Institutions and Trusts Bills, 1969.
2. The City of Bangalore Municipal Corporation (Amendment) Bill, 1969.
3. The Mysore Village Panchayats and Local Boards (Amendment) Bill, 1969.
4. The Mysore Legislature Salaries (Amendment) Bill, 1969.
5. The Mysore Land Reforms (Amendment) Bill, 1969.
6. The Mysore Land Revenue (Amendment) Bill, 1969.
7. The Indian Registration (Mysore Amendment) Bill, 1969.
8. The Mysore Co-operative Societies (Amendment) Bill, 1969.

9. The Mysore Police (Amendment) Bill, 1969.
10. The Mysore Shops and Commercial Establishments (Amendment) Bill, 1969.
11. The University of Agricultural Sciences (Amendment) Bill, 1969.
12. The Motor Vehicles (Mysore Amendment) Bill, 1969.
13. The Mysore Beedi Industrial Premises (Regulation of Conditions of Work) Repealing Bill, 1969.
14. The Mysore State Aid to Industries (Amendment) Bill, 1969.

Democracy thrives on discussion, and in the process each idea has to undergo intensive examination and test before it is embodied in a final decision. The democratic experiment to which we are wedded carries with it the spirit of give and take. I hope, Honourable Members will lend their helping hand to surmount many difficulties confronting the State. Destiny has cast upon you all in your representative roles the heavy responsibility of helping the people of Mysore State to solve their problems. I am sure you will discharge your obligations in a fitting manner.

With this brief review, I conclude my address and once again extend my greeting and best wishes to you all for success in your deliberations. I earnestly hope your endeavours will be fruitful and help to formulate such wise and carefully considered decisions as will contribute to the progress and prosperity of the State.

Jai Hind

Papers laid on the Table

Sri VEERENDRA PATIL (Chief Minister).—I beg to lay :

(*a*) (i) The Annual Report of the Mysore Public Service Commission for the year 1965-66 ;

No. GAD 49 SSC 66, dated 7th October 1968 ;

under Article 323 (2) of the Constitution of India.

(ii) Amendments to the Hindu Marriages (Mysore) Rules 1966; Notification No. HD 20 PIM 67 dated 18th November 1968 ;

under Section 8 (3) of the Hindu Marriages Act.

(*b*) Annual Financial Statement of the M.S.E.B. for 1968-69 Volume II pertaining to details of establishment ;

under Section 61 (3) of the Electricity (Supply) Act, 1948.

Sri H. C. BORAIAH (Deputy Minister for Transport).—I beg to lay :

(a) (i) The Mysore Motor Vehicles (Third Amendment) Rules 1968 ;

Notification No. HD 106 TMR 67, dated 27th July 1968 ;

(ii) The Mysore Motor Vehicles (Fourth Amendment) Rules 1968 ;

Notification No. HD 205 TMA 65, dated 25th November 1968 ;

under Section 133 (3) of the Motor Vehicles Act 1939.

(b) (i) The Mysore Motor Vehicles Taxation (Amendment) Rules 1968 ;

Notification No. HD 73 TMT 67, dated 20/21 August 1967 ;

(ii) Reduction of rates of vehicles not used during the quarter not less than a calendar month ;

Notification No. HD 121 TMT 67, dated 5th September 1968 ;

(iii) Exemption of tax payable under the Act relating to Sangli Municipality of Maharashtra State ;

Notification No. HD 94 TMT 67, dated 24th October 1968 ;

(iv) The Reduction of Tax payable in respect of State Carriages flying on the routes specified in column (1) of the table ;

Notification No. HD 60 TMI 63, dated 4th November 1967 ;

under Section 16 (2) of the Mysore Motor Vehicles Taxation Act 1957.

(c) The Administration Report of the M.S.R.T.C. for the year 1966-67 ;

under Section 35 (3) of the Road Transport Corporation Act, 1950.

(d) The Audit Report of the Accounts of the M.S.R.T.C. for the year ending 31st March 1967 ;

under Section 33 (4) of the Road Transport Corporation Act, 1950.

(e) The Mysore Motor Vehicles (Taxation and Passengers Goods) (Amendment) Rules 1968 ;

Notification No. HD 39 TMT 68, dated 27th September 1968 ;

under Section (21) (3) of the Mysore Motor Vehicles (Taxation on passengers Goods) Act, 1961.

Sri D. B. PAWAR (Deputy Minister for Agriculture).—I beg to lay :

(i) The Cotton Transport (Mysore) (Amendment) Rules 1968 ;

Notification No. AF 204 AMS 67, dated 25th September 1968 ;

under Section 8 of the Cotton Transport Act 1923.

(ii) Regarding Rinderpest outbreak in Gundlupet Taluk;

Notification No. AF 378 VAD 68, (3), dated 20th September 1968;

under Section 5 of the Mysore Animal Disease (Control) Act 1961.

SRI K. PUTTASWAMY (Minister for Law, Labour and Parliamentary Affairs).—I beg to lay:

(i) The Mysore Legislature (Members Travelling Allowances) (Second Amendment) Rules 1968;

Notification No. LAW 110 LGR 66, dated 11th September 1968;

(ii) The Mysore Legislature Rate of Rent accommodation to Mofussil Members (Amendment) Rules 1968;

Notification No. LAW 84 LGR 68, dated 31st August 1968;

under Section 15 of the Mysore Legislature Salaries Act 1956.

I beg to lay on behalf of the Minister for Education:

Annual Accounts of the Mysore University for the year 1964-65 and 1965-66;

under Section 37 (2) of the Mysore University Act, 1966.

SRI B. L. GOWDA (Deputy Minister for Co-operation).—I beg to lay:

(*a*) (i) The Mysore Village Panchayat and Local Boards (Delegation of powers of Government) Amendment Rules, 1967;

Notification No. DPC 19 BAC 64, dated 13th November 1967;

under Section 246 of the Mysore Village Panchayats and Local Boards Act 1959.

(ii) Annual Report and Audited Accounts of the Mysore State Warehousing Corporation for the year 1967-68;

under Section 31 (11) of the Warehousing Corporation Act, 1962;

(*b*) (i) The Mysore Agricultural Produce Marketing (Regulation) (Removal of difficulties) Order 1968 dated 29th November 1968;

(ii) The Mysore Agricultural Produce Marketing (Regulation) (Removal of difficulties) (No. 2) order 1968 dated 6th December 1968;

under Section 153 of the Mysore Agricultural Produce Marketing (Regulation) Act, 1966.

SRI M. RAJASEKHARA MURTHY (Minister for Industries, Information and Publicity).—I beg to lay:

(*a*) Annual Report of the Khadi and Village Industries Board for the year 1966-67;

under Section 26 of the Mysore State Khadi and Village Industries Act 1956;

(SRI M. RAJASEKHARA MURTHY)

(*b*) Twenty-Second Annual Report of the REMCO Ltd., for the year ended 31st March 1968;

under Section 619A of the Companies Act, 1956.

SRI H. V. KOUJALGI (Minister for Revenue).—I beg to lay:

(*a*) (i) Suspension and remission of Land Revenue in certain villages in Sindgi Taluk of Bijapur District;

Notification Nos. RDF 23 TRM 65-I-II-III-IV and V, dated 18th September 1968;

(ii) Suspension and remission of Land Revenue in certain villages in Muddebihal Taluk, Bijapur District;

Notification Nos. RDF 31 TRM 65-I-II-III and IV dated 18th September 1968;

(iii) Postponment of Land Revenue collection in scarcity affected areas in Chickmagalur District;

Notification, dated 2nd April 1968;

under Section 194 (2) of the Mysore Land Revenue Act, 1964.

(*b*) (i) The Mysore Land Reforms (Amendment) Rules 1968;

Notification No. RD 189 LRY 67, dated 18th Ssptember 1968;

(ii) Schedule relating to Topalgatti (Unkal) Village in Hubli Taluk, Dharwar District regarding exemption from the provisions of Sections 80 and 81 A of the Act;

under Section 140 of the Mysore Land Reforms Act, 1961.

(*c*) The Mysore Rent Control (Second Amendment) Rules, 1968;

Notification No. RD 82 GHR 66, dated 20th August 1968;

under Section 60 of the Mysore Rent Control Act, 1961.

SRI B. M. PATIL (Minister of State for Municipal Administration).—I beg to lay:

Election programme of Municipalities;

Notification No. HMA 95 MNC 68, dated 4th October 1968;

under Section 383 (3) of the Mysore Municipalities Act, 1964.

SRI B. RACHAIAH (Minister for Agriculture).—On behalf of the Minister for Finance, Planning and Youth Welfare, I beg to lay on the Table the Report of the Mysore Pay Commission, 1966-68.

On behalf of the Minister of State for Minor Irrigation, I beg to lay on the Table of the House copy of the list showing the details of 15 Minor Irrigation Works as promised during the Fourth Session on 14th September 1968 in reply to Starred Question No. 285 by Shri M. N. Ramanna.

MR. SPEAKER—The Reports, Statements and notifications are laid on the Table.

Presentation of the Second Report of the Committee on Estimates

SRI M. Y. GHORPADE (Sandur).—I beg to present the second Report of the Committee on Estimates on the Bangalore Water Supply Rates.

MR. SPEAKER.—The Report of the Committee on Estimates on the Bangalore Water Supply Rates is presented.

Mysore Court Fees and Suits Valuation (Amendment) Bill, 1968

(Introduction)

SRI P. M. NADGOUDA (Minister for Development) On behalf of Minister for Law, Labour and Parliamentary Affairs Sir, I beg to introduce the Mysore Court Fees and Suits Valuation (Amendment) Bill 1968.

MR. SPEAKER.—The Bill is introduced.

Mysore Inams Abolition Laws (Amendment) Bill, 1968

(Introduction)

SRI H. V. KOUJALGI (Minister for Revenue).—Sir...........

SRI M. NAGAPPA.—Sir, I take objection to the introduction of this Bill. Rule 68 says :

> "A Bill involving expenditure shall be accompained by a financial memorandum which shall invite particular attention to the clauses involving expenditure and shall also give an estimate of the recurring and non-recurring expenditure involved in case the Bill is passed into law."

(SRI M. NAGAPPA)

This particular Bill involves, many financial commitments on the part of the Government. This will be clear from the Statement of Objects and Reasons which says :

"It is discovered that in some cases either excess payment towards compensation has been made or less amount than what is actually due to the claimant has been paid. It is considered necessary to insert suitable provision in both the Acts enabling the Deputy Commissioner to revise the amount of compensation detremined by him, either by increasing or decreasing it and to recover excess compensation paid as arrears of land revenue."

According to the Statemeat of Objects and Reasons there are about 60,000 inamdars and if anything is to be paid by amending the Act, Government is responsible to pay it from the funds of the Government. Therefore, this Bill necessarily requires a financial memorandum. Otherwise, it cannot be moved.

Similarly, there is another, Bill namely, the Hyderabad Jagirs (Commutation) Regulation (Mysore Amendment) Bill, 1967 which is going to be introduced but to that a financial memorandum has been appended, because the Government is amending certain provisions therein which involve financial commitments. So, unless a financial memorandum is furnishad it cannot be introduced.

SRI H. V. KOUJALGI.—I will have to get it examined. It is an old Bill which was to have been introduced long ago.

MR. SPEAKER.—I shall take it up on some other day; in the meanwhile Government may study it. The matter is held over.

Hyderabad Jagirs (Commutation) Regulation (Mysore Amendment) Bill, 1967

(Introduction)

SRI H. V. KOUJALGI.—Sir, I beg to introduce............

SRI M NAGAPPA.—Sir, I take objection to the introduction of the Hyderabad Jagirs (commutation) Regulation (Mysore Amendment) Bill, under rule 69 of the Rules of Procedure and Conduct of Business in the Mysore Legislative Assembly. In clause 2 of the Bill on page 3, the following proviso is sought to be added :—

"Provided further that where the particulars required for the calculation of the average annual gross revenue are not

available or where the particulars available are in the opinion of the Jagir Administrator, incorrect in material respects, the average annual gross revenue shall be calculated in such manner as may be prescribed."

The power to calculate the average annual gross revenue is going to be delegated by adding this proviso. Therefore, there is delegation of legislative power to the Government and as per rule 69, a Bill involving proposals for the delegation of legislative power shall further be accompained by a memorandum explaining such proposals and drawing attention to their scope and stating also whether they are of normal or exceptional character.

The second objection is that though a financial memorandum has been appended, it is not in accordance with rule 68 (2) which says :

"Clauses or provisions in Bills involving expenditure from public funds shall be printed in thick type or in italics ;"

Such a thing has not been done. Therefore, the publication itself is not according to the rules.

These two objections may be taken into consideration before the Bill is introduced.

It is also stated on page 6 that the application of the amounts paid to a religious or charitable institution under sub-section (2) shall be effected in such manner as may be prescribed.

Sri H. V. KOUJALGI.—All these questions will not arise at the time of introduction.

Mr. SPEAKER.—Under the Rules, when there is delegated legislation, a Bill must be accompained by the requisite memorandum. The Hon'ble Minister may consider this matter. As regards printing it in italics, etc., that cannot be a serious lacuna.

City of Bangalore Improvement (Second Amendment) Bill, 1967

Introduction

Sri H. C. BORIAH (Deputy Minister for Transport).—Sir, on behalf of the Minister of State for Minicipal Administration, I beg to introduce the City of Bangalore Improvement (Second Amendment) Bill, 1967.

Sri M. NAGAPPA.—Sir, I have got an objection to its introduction. Already this House is seized of the Urban Development Bill which has been referred to a Joint Select Committee and this particular bill is sought to be repealed under that bill. If this bill is now taken into consideration, it will be taken as if it is still alive. These two things cannot go on simultaneously.

Mr. SPEAKER.—Your objection may be taken up at the consideration stage. The Hon'ble member may advance your arguments then.

Sri M. NAGAPPA.—At that time it should not be said that my objection has been overruled.

Mr. SPEAKER.—It is not overruled. It is a question of doing certain things at proper time and logically. If the hon. Member thinks that since there is already one Bill before the House and the present Bill will be inconsistent with that, then it will be a matter for the House to accept the one and reject the other. Hon. Member may advance that argument at the consideration stage.

The City of Bangalore Improvement (Second Amendment) Bill, 1967, is introduced.

Mysore Gift Goods (Unlawful Possession) (Amendment) Bill 1968.

Introduction

Sri P. M. NADGOUDA (Minister for Development).—On behalf of the Minister for Education, I introduce the Mysore Gift Goods (Unlawful Possession) (Amendment) Bill, 1968, under rule 64 of the Rules of Procedure and Conduct of Business in the Mysore Legislative Assembly.

Mr. SPEAKER.—The Mysore Gift Goods (Unlawful Possession) (Amendment) Bill, 1968, is introduced.

Mysore Local Authorities (Disciplinary Proceedings against Employees) Bill, 1968.

Introduction.

Sri H. C. BORAIAH (Deputy Minister for Transport).—On behalf of the Minister for Municipal Administration Introduce the Mysore Local Authorities (Disciplinary Proceedings against Employees) Bill, 1968.

Mr. SPEAKER.—The Mysore Local Authorities (Disciplinary Proceedings against Employees) Bill, 1968, is introduced.

Motion of Thanks to the Governor's Address.

ಶ್ರೀ ಡಿ. ಎಂ. ಸಿದ್ದಯ್ಯ (ಬೆಳಗೆರೆ).—ನನ್ನ ಪ್ರಸ್ತಾವ: ಈ ರೀತಿ ಇದೆ.

'ದಿನಾಂಕ ಜನವರಿ 13, 1969ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯು

ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ'.

Sri S. RUDRAPPA (Chitapur).—I second the resolution moved by Sri Siddaiah.

Mr. SPEAKER.—Motion moved :

"We the Members of the Mysore Legislative Assembly assembled in this Session beg leave to thank the Governor for the address delivered to the Members of the Legislature on 13th January 1969."

Sri K. H. PATIL (Hubli).—Before the hon'ble member begnis his speech, I would like to submit that the amendments to the motion sent by members may also be circulated to all members because after all the amendments are not meant only for the Opposition ; it is also the privilege of the Treasury Benches to make their observations on the amendments while speaking the motion of thanks.

Mr. SPEAKER.—I can see the point of the hon'ble member Sri Patil. The amendments are being cyclostyled and after that, they will be circulated to members. They will be moved after the speech of the hon'ble member Sri Siddaiah and the hon'ble member Sri S. Rudrappa. In the meantime it is not good to wait for them and lose time. So the hon'ble member Sri Siddaiah will begin his speech now.

† ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ರಾಜ್ಯದ ಎಲ್ಲಾ ವಿಚಾರಗಳ ಬಗೆಗೂ ಹೇಳಬೇಕಾದುದನ್ನು ಸ್ಪಷ್ಟವಾದ ಮಾತಿನಲ್ಲಿ ಹೇಳಿದ್ದಾರೆ. ಸರಕಾರ ಸಾಧಿಸಿರುವ ಸಾಧನೆಗಳ ಬಗ್ಗೆ ಸ್ಪಷ್ಟಪಡಿಸಿರುವುದರ ಜೊತೆಗೆ ಸಾಧನೆ ಮಾಡದೆ ಬಿಟ್ಟಿರತಕ್ಕ ಅಂಶಗಳ ಬಗೆಗೂ ಸಾಧಿಸಬೇಕಾದ ಮಹತ್ಸಾಧನೆಗಳ ಬಗೆಗೂ ಬಿಚ್ಚು ಮಾತಿನಲ್ಲಿ ಹೇಳಿರತಕ್ಕದ್ದು ನಿಜವಾಗಿಯೂ ಕೂಡ ಬಹಳ ವಂದನಾರ್ಹವಾದುದು.

ಪ್ರಪ್ರಥಮವಾಗಿ ಅವರು ತಮ್ಮ ಭಾಷಣದಲ್ಲಿ ಬಹಳ ಪ್ರಾಮುಖ್ಯವಾದ ನಾಲ್ಕು ಅಂಶಗಳ ಬಗ್ಗೆ ಪ್ರಸ್ತಾಪ ಮಾಡಿ ಉಳಿದ ವಿಚಾರಗಳನ್ನು ತಮ್ಮ ಉದ್ಘಾಮ ಭಾಷಣದಲ್ಲಿ ಹೇಳಿದ್ದಾರೆ. ಯಾವ ಯಾವ ಇಲಾಖೆಗಳಲ್ಲಿ ಏನೇನು ಸಾಧನೆ ಮಾಡಲಾಗಿದೆ, ಮತ್ತು ಇನ್ನೂ ಸಾಧಿಸಬೇಕಾದ ಅಂಶಗಳಾವುವು ಎನ್ನುವುದರ ಬಗ್ಗೆ ಮನ ಬಿಚ್ಚಿ ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿದ್ದಾರೆ.

ಪ್ರಪ್ರಥಮವಾಗಿ ಪಂಚಾಯಿತಿ ರಾಜ್ಯ ಸಂಸ್ಥೆಗಳ ವಿಷಯದಲ್ಲಿ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಚುನಾವಣೆಗಳ ಬಗ್ಗೆಯೂ ಅವರು ಇಲ್ಲಿ ಅಪ್ಪಣೆ ಕೊಡಿಸಿದ್ದಾರೆ. ತಾಲ್ಲೂಕು ಅಭಿವೃದ್ಧಿ ಮಂಡಲಗಳ ಚುನಾವಣೆಗಳು ರಾಜ್ಯದಲ್ಲಿ ಬಹಳ ಶಾಂತಿಯುತವಾದ ರೀತಿಯಲ್ಲಿ ನಡೆದು ಪ್ರಜೆಗಳು ತಮ್ಮ ಹಕ್ಕು ಭಾಧ್ಯತೆಗಳನ್ನು ಚಲಾಯಿಸಿದ್ದಾರೆ. ಎನ್ನತಕ್ಕಂಥ ಮಾತನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. 1968ರಲ್ಲಿ ಗ್ರಾಮ ಪಂಚಾಯಿತಿಗಳ ಚುನಾವಣೆ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆ ನಡೆಯಿತು. ಆದರೆ ಪಂಚಾಯಿತಿ ರಾಜ್ಯ ಪರಿಪೂರ್ಣವಾಗಿ ಕೆಲಸ ಮಾಡಬೇಕಾದರೆ ಒಂದು ಬಹಳ ಪ್ರಾಮುಖ್ಯವಾದ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಅದು ಏನೆಂದರೆ ಜಿಲ್ಲಾ ಪರಿಷತ್ತುಗಳ ಚುನಾವಣೆ ಆಗಬೇಕು. ಖಾಸಗಿ ಅಧ್ಯಕ್ಷರಿಂದ ಜಿಲ್ಲಾ ಪರಿಷತ್ತುಗಳು ಕಾರ್ಯ ನಡೆಸುವಂತಾಗಬೇಕು. ಅದರಿಂದ ಸಂಪೂರ್ಣವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಹೀಗಾದರೆ ಚುನಾಯಿತ ರಾಜ್ಯ ಪರಿಪೂರ್ಣವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇಲ್ಲಿಯ ಮಾನ್ಯ ಸಭೆಯ ಸದಸ್ಯರುಗಳು, ಲೆಜಿಸ್ಲೇಟೀವ್ ಕೌನ್ಸಿಲ್ ಸದಸ್ಯರುಗಳು, ಪಾರ್ಲಿಮೆಂಟ್ ಸದಸ್ಯರುಗಳು ತಾಲ್ಲೂಕು ಅಭಿವೃದ್ಧಿ ಮಂಡಲಗಳ ಸದಸ್ಯರುಗಳನ್ನು ಒಳಗೊಂಡ ಈ ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರವನ್ನು ಹಂಚಿಕೊಟ್ಟರೆ ಅವು ಬಲಗೊಳ್ಳುವಂತಾಗುತ್ತದೆ. ಆದುದರಿಂದ ಅದಕ್ಕೆ

(ಶ್ರೀ ಡಿ. ಎಂ. ಸಿದ್ದಯ್ಯ)

ಸಂಬಂಧಪಟ್ಟ ಮಸೂದೆಯನ್ನು ಈ ಮಾನ್ಯ ಸಭೆಯ ಮುಂದೆ ತಂದು ಗ್ರಾಮ ಪಂಚಾಯಿತಿಗಳ ಕೆಲಸ ಮತ್ತು ಸ್ಥಳೀಯ ಸಂಸ್ಥೆಗಳ ಕೆಲಸವನ್ನು ಪರಿಪೂರ್ಣಗೊಳಿಸುವಂತೆ ಮಾಡಬೇಕೆಂದು ನಾನು ಈ ಸಭೆಯಲ್ಲಿ ಕೇಳಿಕೊಳ್ಳುತ್ತೇನೆ. ಕಳೆದ 20 ವರ್ಷಗಳಿಂದಲೂ ಈ ಸಂಸ್ಥೆಗಳು ಯಾವ ರೀತಿ ನಡೆಯುತ್ತಿವೆ ಎನ್ನುವುದು ತಮಗೆಲ್ಲಾ ತಿಳಿದ ವಿಷಯವಾಗಿದೆ. ಆದುದರಿಂದ ಸಾಧ್ಯವಾದಷ್ಟು ಬೇಗ ಈ ಮಾನ್ಯ ಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸಿ ಅನಂತರ ಆದಷ್ಟು ಜಾಗ್ರತೆ ಜಿಲ್ಲಾ ಮಟ್ಟದಲ್ಲಿ ಖಾಸಗಿ ಅಧ್ಯಕ್ಷರನ್ನೊಳಗೊಂಡಂತೆ ಪಂಚಾಯಿತಿ ರಾಜ್ಯವನ್ನು ಪರಿಪೂರ್ಣ ಮಾಡಿ ಅಧಿಕಾರವನ್ನು ವಿಕೇಂದ್ರಿಕೃತ ಮಾಡಿ, ನಮ್ಮ ಪ್ರಜಾ ಪ್ರಭುತ್ವ ತತ್ವ ಏನು ಇದೆ ಅದನ್ನು ಅನುಷ್ಠಾನಕ್ಕೆ ತಂದು ಪ್ರಜಾ ಕೋಟಿಗೆ ನಾವು ಹೇಗೆ ದೇಶದ ಸಮಸ್ಯೆಗಳನ್ನು ಬಗೆಹರಿಸಬಲ್ಲೆವು ಎನ್ನುವುದನ್ನು ತೋರಿಸಿದರೆ ದೇಶದ ಆಡಳಿತ ಇನ್ನೂ ಹೆಚ್ಚಿನ ಮಟ್ಟದಲ್ಲಿ ನಡೆಯುವಂತಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕಾಗಿ ಮಾನ್ಯ ಸರ್ಕಾರದವರು ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ ಅವರ ಒಂದು ರಿಪೋರ್ಟನ್ನೂ ಕೂಡ ಕೊಟ್ಟಿದ್ದಾರೆ. ಮತ್ತು ಈ ಮಸೂದೆ ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆ ಆಗಿ ಈ ಸಭೆಯ ಮುಂದೆ ಇದೆ. ಈ ಪ್ರಜಾ ಪ್ರಭುತ್ವದಲ್ಲಿ ಪ್ರತಿಯೊಬ್ಬ ಪ್ರಜೆಗೂ ಓಟಿನ ಹಕ್ಕು ಇದೆ ಮತ್ತು ಪ್ರತಿಯೊಬ್ಬ ಪ್ರಜೆಗೂ ಪೂರ್ಣ ಪಾತ್ರ ಇದೆ. ಆದುದರಿಂದ ಈವೊತ್ತಿನ ದಿವಸ ನಾವು ಜಿಲ್ಲಾ ಮಟ್ಟದಲ್ಲಿ ಅಧಿಕಾರವನ್ನು ಪ್ರಜೆಗಳಿಗೆ ಕೊಟ್ಟಿದ್ದ ಪಕ್ಷದಲ್ಲಿ ಈ ಪ್ರಜಾಪ್ರಭುತ್ವ ಯಶಸ್ವಿಯಾಗಬಹುದೆನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಆದುದರಿಂದ ಆದಷ್ಟು ಜಾಗ್ರತೆಯಾಗಿ ಈ ಮಸೂದೆ ಮಾನ್ಯ ಸಭೆಯ ಮುಂದೆ ಬಂದು ಪಂಚಾಯಿತಿ ರಾಜ್ಯ ಪರಿಪೂರ್ಣತೆ ಪಡೆಯಲಿ ಎಂದು ಆಶಿಸುತ್ತೇನೆ.

2.30 P.M.

ಎರಡನೆಯದಾಗಿ ರಾಜ್ಯಪಾಲರು ಮಹಾರಾಷ್ಟ್ರ-ಮೈಸೂರು, ಮೈಸೂರು-ಕೇರಳ ಗಡಿ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಮಾನ್ಯ ಸಭೆಗೆ ಗೊತ್ತಿರುವ ಹಾಗೆ ಗತಿಸಿದ ಚೀಫ್ ಜಸ್ಟಿಸ್ ಮಹಾಜನ್ ಅವರ ಅಧ್ಯಕ್ಷತೆಯಲ್ಲಿ ಒಂದು ಏಕಸದಸ್ಯ ಆಯೋಗ ಸ್ಥಾಪನೆ ಆಯಿತು. ಅವರು ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಆದರೆ ಇವೊತ್ತಿನ ದಿವಸ ಕೇಂದ್ರ ಸರ್ಕಾರದವರು ಆ ವರದಿಯ ವಿಚಾರದಲ್ಲಿ ತೀರ್ಮಾನ ತಗೆದುಕೊಳ್ಳುವುದಕ್ಕೆ ಹಿಂದುಮುಂದು ನೋಡುತ್ತ ತಟಸ್ಥರಾಗಿ ಕುಳಿತಿದ್ದಾರೆ. ಇದು ಬಹಳ ವಿಷಾದಕರವಾದ ಸಂಗತಿ. ಬಹುಶಃ ಕೇಂದ್ರ ಸರ್ಕಾರದವರು ಈ ತರಹ ಒಬ್ಬ ದೊಡ್ಡ ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ನಡೆಸಿದಂಥ ಒಂದು ಆಯೋಗದ ವರದಿಗೆ ಅಥವಾ ತೀರ್ಮಾನಕ್ಕೆ ಮನ್ನಣೆ ಕೊಡದೆ ಇದ್ದ ಪಕ್ಷದಲ್ಲಿ ಮುಂದೆ ಯಾವ ದೊಡ್ಡ ಮನುಷ್ಯರೂ ಕೂಡ ಈ ತರಹ ಆಯೋಗಗಳಲ್ಲಿ ಕೆಲಸಮಾಡುವುದಕ್ಕೆ ಒಪ್ಪುವುದು ಬಹಳ ಕಷ್ಟವಾದೀತು. ಪ್ರಜಾಪ್ರಭುತ್ವದಲ್ಲಿ ಈ ರೀತಿಯಾದ ಒಂದು ಆಯೋಗವನ್ನು ರಚನೆ ಮಾಡಿ, ಅವರು ಏನು ತೀರ್ಮಾನ ಕೊಡುತ್ತಾರೆ ಅದನ್ನು ಅನುಷ್ಠಾನಕ್ಕೆ ತರದೆ ಇದ್ದರೆ, ಆ ತೀರ್ಮಾನದ ವಿಷಯದಲ್ಲಿ ಒಂದು ಅಭಿಪ್ರಾಯಕ್ಕೆ ಬರತಕ್ಕ ದಿಟ್ಟತನವನ್ನು ಕೇಂದ್ರ ಸರ್ಕಾರ ಮಾಡದೆ ಇದ್ದರೆ, ನಮಗಾದರು ಅನಿಸುತ್ತದೆ, ಕೇಂದ್ರ ಸರ್ಕಾರ ಈ ಮಹತ್ವದ ಸಮಸ್ಯೆಯ ವಿಚಾರದಲ್ಲಿ ಇಷ್ಟೊಂದು ಉದಾಸೀನವಾಗಿರತಕ್ಕದು ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿದೆಯೇ ಎಂದು ಕೇಂದ್ರ ಸರ್ಕಾರವನ್ನು ಕೇಳಬೇಕಾಗುತ್ತದೆ; ಮತ್ತು ರಾಜ್ಯಪಾಲರು ಮಹಾಜನ್ ಕಮಿಷನ್ ವರದಿಯನ್ನು ಅಪಾರ್ಥ ಎಂದು ಪರಿಗಣಿಸಿ ಅದನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕು ಎನ್ನುವ ಮಾತನ್ನು ಸ್ಪಷ್ಟಪಡಿಸಿದ್ದಾರೆ. ಈ ಸಂದರ್ಭದಲ್ಲಿ ಅವರೇನೋ 'ವೆಕ್ಸೆಡ' ಕ್ವೆಸ್ಚನ್'' ಎಂದು ಕರೆಯುತ್ತಾರೆ. ಅದು ಹೇಗೆ ಜಟಿಲ ಸಮಸ್ಯೆಯಾಗುವುದೋ ನನಗೆ ಅರ್ಥವಾಗುವುದಿಲ್ಲ. ಇವೊತ್ತಿನ ದಿವಸ ಕೇಂದ್ರ ಸರ್ಕಾರಕ್ಕೆ ಕಷ್ಟ ಬಂದಿರತಕ್ಕದು ಮಹಾರಾಷ್ಟ್ರದ ಪ್ರತಿನಿಧಿಗಳಾಗಿ ಕೇಂದ್ರ ಮಂತ್ರಿಮಂಡಲದಲ್ಲಿ ಇರತಕ್ಕ ಮಂತ್ರಿಗಳಾದವರಿಂದ, ವ್ಯಕ್ತಿಗತವಾದ ಒಬ್ಬ ಮಂತ್ರಿಯಾದವರ ಪ್ರಭಾವಕ್ಕೆ ಅವರು ತಲೆಬಾಗಬೇಕಾಗಿಲ್ಲ.

ಮಹಾಜನ್ ವರದಿಯಿಂದ ಮೈಸೂರಿಗೆ ಹೆಚ್ಚಿನ ಉಪಯೋಗವಾಗಿದೆ ಎಂದು ನನಗನ್ನಿಸುವುದಿಲ್ಲ. ಆದರೆ ಒಂದು ವರದಿಯನ್ನು ಕೊಡುವಾಗ 'ಗಿವ್ ಅಂಡ್' ಟೇಕ್'' ಪಾಲಿಸಿ ಇರಬೇಕು. ನಾವು ಕೆಲವು ಭಾಗಗಳನ್ನು ಬಿಡಬೇಕು, ನಮ್ಮ ನೆರೆಹೊರೆಯ ಮಹಾರಾಷ್ಟ್ರ ಸರ್ಕಾರದವರೂ ಕೆಲವು ಭಾಗಗಳನ್ನು ಬಿಡುವುದಕ್ಕೆ ಸಿದ್ಧರಾಗಿರಬೇಕು. ನಾವೆಲ್ಲ ಭರತಖಂಡದಲ್ಲಿದ್ದೇವೆ, ಭರತ ಖಂಡದ ಪ್ರಜೆಗಳು ಎನ್ನುವ ರಾಷ್ಟ್ರೀಯ ಮನೋಭಾವನೆಯನ್ನು ತೋರಬೇಕು.

ಹಾಗಿಲ್ಲದೆ ಬರೀ ಹಂಚಿಕೆಯಲ್ಲಿ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ವ್ಯರ್ಥ ಮಾಡಿ ಮೂಲ ಸಮಸ್ಯೆಗೆ ತಿಲಾಂಜಲಿ ಕೊಡುತ್ತೇವೆಯೋ ಎನ್ನುವ ಭಯ ನನಗೆ ಉಂಟಾಗುತ್ತದೆ.

ಈ ಮಹಾಜನ್ ವರದಿ ಏಕೆ ಇಷ್ಟು ನಿಧಾನವಾಗಿದೆ, ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಈ ವರದಿಯನ್ನು ಅನುಷ್ಠಾನಕ್ಕೆ ತನ್ನಿ ಎಂದು ಹೇಳಲಿಲ್ಲವೋ ಅಥವಾ ನಮ್ಮ ಸರ್ಕಾರದ ಮಾತಿಗೆ ಕೇಂದ್ರದಲ್ಲಿ ಬೆಲೆಯಿಲ್ಲವೇ, ಏನು ಎನ್ನುವ ಅನೇಕ ವಿಚಾರಗಳು ನನ್ನ ಮನಸ್ಸನ್ನು ಬಾಧಿಸುತ್ತಿವೆ. ಪತ್ರಿಕೆಗಳಲ್ಲಿ ನಾನು ಓದಿದಂತೆ ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳು ಕೇಂದ್ರ ಸರ್ಕಾರದಲ್ಲಿ ಪತ್ತೆ ಇಲ್ಲವೆಂದು ಗೊತ್ತಾಗಿದೆ. ನಾನು ಈ ಬಗ್ಗೆ ಒಂದು ಪ್ರಶ್ನೆಯನ್ನು ಕೂಡ ಕಳಿಸಿದ್ದೇನೆ. ಪತ್ರಿಕೆಗಳಲ್ಲಿ ಬಂದಿರುವುದು ನಿಜವಾದರೆ ಅದಕ್ಕಿಂತ ಪ್ರಜಾಪ್ರಭುತ್ವಕ್ಕೆ ಅಪಘಾತ ಬೇರೆ ಯಾವುದೂ ಇಲ್ಲ ಎಂದು ಹೇಳಿ ಅದನ್ನು ತೀವ್ರವಾಗಿ ಖಂಡಿಸುತ್ತೇನೆ ಮತ್ತು ಜೊತೆಗೆ ಕೇಂದ್ರ ಸರ್ಕಾರದವರು ಈ ವಿಷಯದಲ್ಲಿ ಆದಷ್ಟು ಜಾಗ್ರತೆ ತೀರ್ಮಾನವನ್ನು ತೆಗೆದುಕೊಂಡು, ಮಹಾಜನ್ ವರದಿಯಲ್ಲಿ ಹೇಳಿರುವಂತೆ ಅನುಷ್ಠಾನಕ್ಕೆ ತರುವುದು ಅವರ ಕರ್ತವ್ಯವಾಗಿದೆ ಎಂದು ಹೇಳುತ್ತೇನೆ.

ನಮ್ಮ ಸರ್ಕಾರದವರು ಈ ವಿಷಯದಲ್ಲಿ ದಿಟ್ಟತನದಿಂದ ಕೇಂದ್ರ ಸರ್ಕಾರದವರು ಸರಿಯಾದ ತೀರ್ಮಾನ ತೆಗೆದುಕೊಳ್ಳುವಂತೆ ಒತ್ತಾಯಪಡಿಸಬೇಕು. ಹಾಗೇನಾದರೂ ತೀರ್ಮಾನ ತೆಗೆದುಕೊಳ್ಳದೆ ಉದಾಸೀನ ಮಾಡಿದ ಪಕ್ಷದಲ್ಲಿ ನಿಜವಾಗಿಯೂ ರಾಜ್ಯಸರ್ಕಾರಕ್ಕೆ ಮರ್ಯಾದೆ ಬರತಕ್ಕ ಮಾತಲ್ಲ. ಮೈಸೂರು ಒಂದು ಭಾಗವಾಗಿರಬಹುದು, ಮಹಾರಾಷ್ಟ್ರ ಒಂದು ಭಾಗವಾಗಿರಬಹುದು, ಕೇರಳ ಒಂದು ಭಾಗವಾಗಿರಬಹುದು. ಆದರೆ ಎಲ್ಲರೂ ಸೇರಿ ದೇಶಕ್ಕೆ ಗಂಡಾಂತರ ಬಂದಾಗ ಕೆಲಸ ಮಾಡಲಿಲ್ಲವೆ ? ಈ ದೇಶದ ಮೇಲೆ ಆಕ್ರಮಣ ನಡೆದಾಗ, ದೇಶದಲ್ಲಿ ಬಹಳ ಸಂಕಟಗಳು ಬಂದಾಗ ಎಲ್ಲರೂ ಸೇರಿ ನೆರವು ನೀಡಲಿಲ್ಲವೇ ? ಚೀಣಾ ಮತ್ತು ಪಾಕಿಸ್ತಾನ ದೇಶದವರು ಆಕ್ರಮಣ ಮಾಡಿದಾಗ ಹಿಂದೂಸ್ಥಾನದಲ್ಲಿ ಎಲ್ಲರೂ ಕೂಡ ಯಾವ ಮಟ್ಟದಲ್ಲಿ ಹೋರಾಟ ನಡೆಸಿದರು, ದೇಶವನ್ನು ಉಳಿಸಿಕೊಳ್ಳಲಿಕ್ಕೆ ಯಾವ ರೀತಿಯಲ್ಲಿ ಪ್ರಯತ್ನ ಮಾಡಿದರು ಎನ್ನುವುದನ್ನು ಮರೆಯಬಾರದು. ಹೀಗಿರುವಾಗ ಕೇಂದ್ರ ಸರ್ಕಾರದವರು ಮಲತಾಯಿ ಧೋರಣೆಯನ್ನು ಅನುಸರಿಸುತ್ತಿರುವುದು ಸರಿಯಲ್ಲ. ನಾವು ಈ ಸಭೆಯಲ್ಲಿ ಒಂದು ನಿರ್ಣಯವನ್ನು ಕೂಡ ಮಾಡಿ ಕಳಿಸಿಕೊಟ್ಟಿದ್ದೇವೆ. ಇವೆಲ್ಲಕ್ಕೂ ಕೂಡ ಗೌರವ ಕೊಡುವುದು ಕೇಂದ್ರ ಸರ್ಕಾರದ ಕರ್ತವ್ಯ. ಮತ್ತು ಹಾಗೆ ನಡೆಯುವಂತೆ ಮಾಡತಕ್ಕದು ನಮ್ಮ ನಿಲುವು ಎನ್ನುವಂಥ ಸಲಹೆಗಳನ್ನು ನಮ್ಮ ಸರ್ಕಾರಕ್ಕೆ ಕೊಡಬಯಸುತ್ತೇನೆ.

ರಾಜ್ಯಪಾಲರು 1969ನೆಯ ವರ್ಷವನ್ನು ಗಾಂಧಿ ಶತಾಬ್ದಿಯ ವರ್ಷವೆಂದು ಕರೆದಿದ್ದಾರೆ. ಆ ವಿಷಯದಲ್ಲೇ ಮಾತನಾಡುತ್ತಾ ಮಹಾತ್ಮಾಜೀಯವರು ಕೊಟ್ಟ ಸಂದೇಶ, ಉಪದೇಶ ಗಮನಿಸಿ ಸಾಮಾನ್ಯ ಜನರನ್ನು ಉದ್ಧಾರಮಾಡಬೇಕು, ಜಾತಿಮತ ಭೇದವಿಲ್ಲದೆ ಸಕಲ ಪ್ರಜೆಗಳಿಗೂ ಸ್ಥಾನಮಾನ ಮತ್ತು ಅವಕಾಶ ಕಲ್ಪಿಸಿಕೊಡಬೇಕು, ಹಕ್ಕುಬಾಧ್ಯತೆಗಳನ್ನು ಗಳಿಸಿಕೊಡಬೇಕು, ಹಾಗೆ ಮಾಡಿ ಈ ದೇಶವನ್ನು ಆದರ್ಶವಾಗಿರುವಂತೆ ಮಾಡಬೇಕು ಎಂಬುದಾಗಿ ರಾಜ್ಯಪಾಲರು ತಿಳಿಸಿದ್ದಾರೆ. ಇವೆಲ್ಲವೂ ಕೂಡ ಶಾಸನದಲ್ಲೇ ಅಡಕವಾಗಿದೆ. ಇದನ್ನು ಸರಿಯಾದ ರೀತಿಯಲ್ಲಿ ಆಚರಣೆಗೆ ತರಬೇಕಾಗಿದೆ. ಹೀಗೆ ಮಾಡಬೇಕಾದ್ದು ಅತ್ಯವಶ್ಯಕ. ಈ ಉದ್ದೇಶದಿಂದ ಸರಿಯಾದ ರೀತಿಯಲ್ಲಿ ಗಾಂಧಿ ಶತಾಬ್ದಿಯನ್ನು ಆಚರಿಸಬೇಕೆಂದು ರಾಜ್ಯಪಾಲರು ಹೇಳಿದ್ದಾರೆ. ಇದು ಸೂಕ್ತವಾಗಿದೆ. ಆದರೆ ಯಾವ ಮಹಾತ್ಮ ಗಾಂಧಿಯವರಂಥ ಮಹಾಪುರುಷರ ನೇತೃತ್ವದಲ್ಲಿ ಸ್ವರಾಜ್ಯ ಪಡೆದೆವೋ ಅವರ ಸೆಂಟಿನೆರಿಯನ್ನು ವೈಭವದಿಂದ ಆಚರಿಸಿದರೆ ಸಾಲದು. ಅದರಿಂದ ಉದ್ದೇಶ ಸಫಲವಾಗುವುದಿಲ್ಲ. ಅವರು ಹಾಕಿಕೊಟ್ಟ ಮಾರ್ಗ, ಆದರ್ಶ ಮೊದಲಾದುವನ್ನು ಅನುಷ್ಠಾನಕ್ಕೆ ತರಬೇಕು. ಅದಕ್ಕೆ ಸಕಲ ಪ್ರಯತ್ನಗಳನ್ನೂ ಮಾಡಬೇಕು. ಹೃದಯ ಪರಿವರ್ತನೆ ಮಾಡಿಕೊಂಡು ಯಾವ ದೃಷ್ಟಿಯಿಂದ ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ್ದೇವೋ, ಅದು ಸಾಧನೆಯಾಗುವಂತೆ, ಚುನಾಯಿತರಾಗಿ ಬರುವಾಗ ಏನು ಪ್ರಣಾಳಿಕೆಯನ್ನು ಜನರ ಮುಂದಿಟ್ಟಿದ್ದೇವೋ ಅದು ಈಡೇರುವಂತೆ ಶ್ರದ್ಧೆಯಿಂದ ಎಲ್ಲರೂ ಕೆಲಸ ಮಾಡಬೇಕಾದ್ದು ಅತ್ಯಗತ್ಯ. ಇದಕ್ಕಿಂತ ಹೆಚ್ಚಿನ ಗೌರವ ಬೇರೆ ರೀತಿಯಲ್ಲಿ ಕೊಡಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ನಾನು ಸೂಚಿಸುತ್ತೇನೆ. 'ಗಾಂಧಿಜಿಯವರು ನವಭಾರತ ಕನಸು ನನಸಾಗುವಂತೆ, ಈ ಪ್ರಖ್ಯಾತ ದೇಶದ ಮಿಲಿಯಾಂತರ ಜನತೆಗೆ ಒಂದು ನೂತನ ಆಶಾಕಿರಣ ಹೊಳೆಯುವಂತೆ ರಚನಾತ್ಮಕ ಕಾರ್ಯಗಳ ನಿರ್ವಹಣೆಗೆ ಈ ಸಮಿತಿಯು ಒಂದು ಸವಿವರ ಕಾರ್ಯಕ್ರಮವನ್ನು ಹಾಕಿಕೊಂಡಿದೆ' ಎಂದು ರಾಜ್ಯಪಾಲರು ತಿಳಿಸಿದ್ದಾರೆ. ಯಾವ ಜನರ ಭವಿಷ್ಯವನ್ನು ನಾವು ನಮ್ಮ ರಾಜ್ಯದಲ್ಲಿ ರೂಪಿಸಲು ಈ ಎಲ್ಲಾ ವಿಷಯಗಳನ್ನೂ

(ಶ್ರೀ ಡಿ. ಎಂ. ಸಿದ್ದಯ್ಯ)

ಗಮನಿಸಿ ಮಾಡಬೇಕಾದ ಕಾರ್ಯ ನಿಜವಾಗಿಯೂ ಕೂಡ ಅಗಾಧವಾಗಿದೆ. ಇದಕ್ಕಾಗಿ ನಿಜವಾದ ಗಾಂಧಿ ಭಕ್ತರು, ಅನುಯಾಯಿಗಳು ಶ್ರದ್ಧೆಯಿಂದ ದುಡಿದು ಈ ಶತಮಾನೋತ್ಸವವನ್ನು ಚೆನ್ನಾಗಿ ಆಚರಿಸಬೇಕೆಂದು ನಾನು ವಿಜ್ಞಾಪನೆಮಾಡಿಕೊಳ್ಳುತ್ತೇನೆ.

ನಂತರ ರಾಜ್ಯಪಾಲರು ಕನ್ನಡವನ್ನು ಆಡಳಿತ ಭಾಷೆ ಮಾಡುವ ಬಗ್ಗೆ ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಇದನ್ನು ನೋಡಿ ಬಹಳ ಸಂತೋಷವಾಯಿತು. ಕನ್ನಡ ಮಾಧ್ಯಮ ವಿಶ್ವವಿದ್ಯಾನಿಲಯದಲ್ಲಿ ಸ್ವಲ್ಪಮಟ್ಟಿಗೆ ಫಲಪ್ರದವಾಗಿದೆ, ತಾಲ್ಲೂಕು ಮಟ್ಟದಲ್ಲಿ ಕನ್ನಡವನ್ನು ಉಪಯೋಗಿಸಬೇಕೆಂದು ಈಗ ತೀರ್ಮಾನಮಾಡಿದ್ದಾರೆ. ನಮ್ಮ ಭಾಷೆ ಕನ್ನಡ, ಸಂಸ್ಕೃತಿ ಕನ್ನಡ. ಹೀಗಿದ್ದರೂ ಕೂಡ ಏಕೆ ಒಂದು ದಿಟ್ಟತನದ ನಿಲುವನ್ನು ಈ ವಿಚಾರದಲ್ಲಿ ತಳೆದಿಲ್ಲ, ಹಾಗೆ ಮಾಡಲು ತೊಂದರೆಯೇನಾಗಿದೆ ಎಂದು ಈ ಸಂದರ್ಭದಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಪರ ಭಾಷೆಯಾದ ಇಂಗ್ಲೀಷಿನ ವ್ಯಾಮೋಹ ಇನ್ನೂ ಬಿಟ್ಟಿಲ್ಲವೋ ಅಥವಾ ಕನ್ನಡ ಭಾಷೆಯ ತಜ್ಞರ ಅಭಾವವಿದೆಯೋ ಹೇಗೆ ಎಂಬುದನ್ನು ವಿಚಾರಮಾಡಬೇಕಾದ ಕಾಲ ಈಗ ಸನ್ನಿಹಿತವಾಗಿದೆ. ರಾಜ್ಯಪಾಲರು 'ಕಾರ್ಯಾಲಯದ ಕೈಪಿಡಿಯನ್ನು ಪ್ರಕಟಿಸಲಾಗಿದೆ, ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರರವರ ಸಮರ್ಥ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯು ಈ ಕೈಪಿಡಿಯನ್ನು ಕ್ಲುಪ್ತ ಕಾಲದೊಳಗೆ ಸಿದ್ಧಗೊಳಿಸಿತು. ಎಂದು ತಿಳಿಸಿದ್ದಾರೆ.

ಆದರೆ ಇದನ್ನು ನಿಧಾನ ಮಾಡುವುದರಲ್ಲಿ ಅರ್ಥವಿಲ್ಲ. ನಮ್ಮಲ್ಲಿ ಎಲ್ಲರೂ ಕನ್ನಡಿಗರೇ. ಆಲ್ ಇಂಡಿಯಾ ಸರ್ವೀಸಸ್‌ನಿಂದ ಬಂದವರೂ ಕೂಡ ಕನ್ನಡ ಕಲಿತುಕೊಂಡು ಕನ್ನಡವನ್ನು ಚೆನ್ನಾಗಿ ಆಡುತ್ತಾರೆ—ಕನ್ನಡವನ್ನು ಬರೆಯುವುದು ಕಷ್ಟವಾಗಬಹುದು. ನಾವು ಈ ದೇಶದಲ್ಲಿ ಹುಟ್ಟಿ ಬೆಳೆದು ಕನ್ನಡ ನಾಡಿನ ಜನ ಕನ್ನಡ ಭಾಷೆಯನ್ನು ಬಳಸಿ ನಮ್ಮ ರಾಜ್ಯದ ವ್ಯವಹಾರಗಳನ್ನು ಮಾಡುವುದು ಅಷ್ಟೇನೂ ಕಷ್ಟವಾಗುವುದಿಲ್ಲ. ಎಷ್ಟು ಜಾಗ್ರತೆ ಈ ಕನ್ನಡ ಎಲ್ಲಾ ಮಟ್ಟದಲ್ಲೂ ಕೂಡ ವ್ಯಾವಹಾರಿಕ ಭಾಷೆಯಾಗುತ್ತದೆಯೋ ಅಷ್ಟು ಈ ನಾಡಿಗೆ ಒಳ್ಳೆಯದು ಎಂಬ ಮಾತನ್ನು ಹೇಳಿ ಆ ವಿಷಯದಲ್ಲಿ ಸರ್ಕಾರ ತೀವ್ರಾಸಕ್ತಿಯನ್ನು ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ರಾಜ್ಯಪಾಲರು ಮುಂದೆ ಹೇಗೆ ಇಲಾಖೆಗಳು ಕೆಲಸ ಮಾಡುತ್ತವೆ ಎಂಬುದನ್ನು ವಿವರಿಸಿದ್ದಾರೆ. ಅವರು ಪ್ರಪ್ರಥಮವಾಗಿ ಮಳೆಯ ಅಭಾವದಿಂದ, ಬೆಳೆ ಸರಿಯಾಗಿ ಆಗದೆ ಏನು ಎಂದು ಅಭಾವ ಬಂದಿದೆ ಆ ಬಗ್ಗೆ ಸರ್ಕಾರ ನಡೆಸಿದಂತಹ ಕೆಲಸ ಕಾರ್ಯಗಳನ್ನು ಪ್ರಸ್ತಾಪಿಸಿದ್ದಾರೆ. ನಿಜವಾಗಿಯೂ ಕೂಡ ಇದು ಶ್ಲಾಘನೀಯವಾದ ವಿಚಾರ. 9 ಕೋಟಿ ರೂಪಾಯಿಗಳಲ್ಲಿ 7 ಕೋಟಿ ರೂಪಾಯಿಗಳನ್ನು ರಿಲೀಫ್ ಕಾಂಗಾರಿಗಾಗಿ ಖರ್ಚು ಮಾಡಿದ್ದಾರೆ. ಅದರಿಂದ ತಾತ್ಕಾಲಿಕವಾಗಿ ಬೆಳೆಯನ್ನೇ ಕಾಣದೆ ಕಂಗೆಟ್ಟ ಜನರಿಗೆ ಸಹಾಯವಾದರೂ ಕೂಡ ಶಾಶ್ವತವಾದ ಪರಿಹಾರವನ್ನು ನೀಡಬೇಕಾದ್ದು ಸರ್ಕಾರದ ಕರ್ತವ್ಯ. ಇವತ್ತಿನ ದಿವಸ ಮಳೆ ಬರದಿದ್ದರೆ ಜನ ಕೈ ಕಟ್ಟಿ ಕುಳಿತುಕೊಳ್ಳತಕ್ಕ ಕಾಲ ಇಲ್ಲ, ಹೋಗಿದೆ. ಹೇಗಾದರೂ ಮಾಡಿ ತನ್ನ ಅನ್ನವನ್ನು ಹುಟ್ಟಿಸಿಕೊಂಡು ಜೀವ ಉಳಿಸಿಕೊಳ್ಳುವುದಕ್ಕೆ ಸಹಾಯ ಮಾಡುವುದು, ಜನರನ್ನು ಬದುಕಿಸುವುದು ಪ್ರಜಾಸತ್ತಾತ್ಮಕ ಸರ್ಕಾರದ ಶ್ರೇಷ್ಠವಾದ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ ಸರ್ಕಾರದವರು 20 ಕೋಟಿ ರೂಪಾಯಿಗಳಲ್ಲಿ ಶಾಶ್ವತವಾದಂತಹ ಒಂದು ಯೋಜನೆಯನ್ನು ತಯಾರಿಸಿ ಅದನ್ನು ಕೇಂದ್ರ ಸರ್ಕಾರದವರಿಗೆ ಕಳುಹಿಸಿಕೊಟ್ಟಿದ್ದಾರೆ. ಒತ್ತಾಯ ಮಾಡಿ ಕೇಂದ್ರ ಸರ್ಕಾರದಿಂದ ಆ 20 ಕೋಟಿ ರೂಪಾಯಿಗಳ ಯೋಜನೆಗೆ ಒಪ್ಪಿಗೆಯನ್ನು ಪಡೆಯಬೇಕು. ಇದು ಮಹಾಜನ್ ರಿಪೋರ್ಟ್ ಆದ ಹಾಗೆ ಆಗಬಾರದು. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಇದು ಸಾವು ಬದುಕಿನ ಪ್ರಶ್ನೆ. ಕ್ಷಾಮ ಯಾವಾಗ ಬರುತ್ತದೆ, ಮಳೆ ಯಾವಾಗ ಬರುತ್ತದೆ ಎಂಬುದನ್ನು ಹೇಳುವುದು ಕಷ್ಟವಾಗುತ್ತದೆ. ಈ ಒಂದು ಪರಿಸ್ಥಿತಿಯಲ್ಲಿ 20 ಕೋಟಿ ರೂಪಾಯಿಗಳ ಆ ಯೋಜನೆಯನ್ನು ಪಡೆಯುವುದರಲ್ಲಿ ಸರ್ಕಾರದವರು ಯಶಸ್ವಿಯಾಗುತ್ತಾರೆ, ಯಶಸ್ವಿಯಾಗಬೇಕು ಎಂದು ಸೂಚಿಸಬಯಸುತ್ತೇನೆ.

ಎರಡನೆಯದಾಗಿ ಲ್ಯಾಂಡ್ ರಿಫಾರಂಸ್ ಮತ್ತು ಲ್ಯಾಂಡ್ ರಿಕಾರ್ಡ್ಸ್ ವಿಷಯದಲ್ಲಿ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ 5 ಲಕ್ಷ ಎಕರೆ ಜಮೀನನ್ನು ಯಾರು ಭೂಮಿ ಮಾಡುತ್ತಾ ಇದ್ದಾರೋ ಅವರಿಗೆ ಕೊಡಲಾಗಿದೆ ಮತ್ತು ಯಾರು ಒಡೆಯರು ಇದ್ದಾರೆ ಅವರಿಗೆ 2·5 ಕೋಟಿ ರೂಪಾಯಿಗಳಷ್ಟು ಕೊಟ್ಟಿದೆ ಎಂದು ಹೇಳಿದ್ದಾರೆ. ಆದರೆ ಇನ್ನೂ ಕೆಲವು ಇನಾಂ ಜಮೀನುಗಳ ಪ್ರಶ್ನೆ ಇದೆ, ಅದನ್ನು ಅಬಾಲಿಷ್ ಮಾಡುವುದಕ್ಕೆ ಈ ಸರ್ಕಾರ ತೀವ್ರಾಸಕ್ತಿಯನ್ನು ವಹಿಸಿದೆ ಎಂಬ ಮಾತನ್ನು ಹೇಳಿದ್ದಾರೆ. ಲ್ಯಾಂಡ್ ರಿಫಾರಂಸ್ ವಿಚಾರದಲ್ಲಿ ಹೇಳುವುದಾದರೆ

ಅದನ್ನು ಅನುಷ್ಠಾನಕ್ಕೆ ತರುವುದರಲ್ಲಿ ಬಹಳ ನಿಧಾನವಾಗಿದೆ. ಸ್ಟ್ಯಾಂಡರ್ಡ್ ಏಕರ್ ಅಂತ ಏನಿದೆ ಅದು ಲ್ಯಾಂಡ್ ರಿಫಾರಂಸ್ ಅಂತ ಅನ್ನಿಸಿಕೊಳ್ಳುವುದಿಲ್ಲ ಲ್ಯಾಂಡ್‌ಲಾರ್ಡ್ಸ್ ರಿಫಾರಂಸ್ ಅಂತ ಅನ್ನಿಸಿಕೊಳ್ಳುವುದಾಗಿದೆ, ಯಾರು ಹೆಚ್ಚು ಭೂಮಿಯನ್ನು ಹೊಂದಿದ್ದಾರೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಈ ಭೂ ಸುಧಾರಣೆ ನಡೆದಿದೆ. ಜಾಗ್ರತೆ ಇದು ಅನುಷ್ಠಾನಕ್ಕೆ ಬಂದು ಯಾರು ನಿಜವಾಗಿಯೂ ಭೂಮಿಯನ್ನು ಉಳುತ್ತಾನೆಯೋ ಅವನಿಗೆ ಭೂಮಿಯ ಒಡೆತನವನ್ನು ಕೊಡುವುದು ಸರ್ಕಾರದ ಕರ್ತವ್ಯವಾಗಿದೆ. 1961ರಲ್ಲಿ ಅವಂತಹ ಭೂಸುಧಾರಣೆಯ ಕಾನೂನು ಇನ್ನೂ ಪರಿಪೂರ್ಣವಾಗಿ ಅನುಷ್ಠಾನಕ್ಕೆ ಬಾರದೇ ಇರುವುದು ವಿಷಾದಕರ. ಮಾನ್ಯ ರಾಜ್ಯಪಾಲರು 77 ಲ್ಯಾಂಡ್ ಟ್ರಿಬ್ಯೂನಲ್‌ಗಳನ್ನು ಮಾಡಿದ್ದೇವೆ ಅದರಲ್ಲಿ 53 ಭೂಸುಧಾರಣೆ ಮತ್ತು ಸಿವಿಲ್ ಮ್ಯಾಟರ್ಸ್‌ನಲ್ಲಿ ಕೆಲಸ ಮಾಡುತ್ತಾ ಇವೆ, ಮತ್ತು ಇನ್ನು 24 ಹೋಲ್‌ಟೈಂ ಲ್ಯಾಂಡ್ ಟ್ರಿಬ್ಯೂನಲ್ಸ್ ಆಗಿ ಕೆಲಸ ಮಾಡುತ್ತಾ ಇವೆ ಎಂದು ಹೇಳಿದ್ದಾರೆ. ಅನುಭವ ಹೊಂದಿದ ಪ್ರಕಾರ ಲ್ಯಾಂಡ್ ರಿಫಾರಂಸ್ ಆಕ್ಟ್‌ಗೆ ತಿದ್ದುಪಡಿ ಮಾಡುವುದಕ್ಕೆ ಯೋಚನೆ ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ಇವತ್ತಿನ ದಿವಸ 1969ರಲ್ಲಿ ಯಾವ ವರ್ಷ ಗಾಂಧಿಜಿ ಶತಮಾನೋತ್ಸವ ಆಚರಿಸುತ್ತಾ ಇದ್ದೇವೆಯೋ ಈ ವರ್ಷವಲ್ಲಾದರೂ ಕೂಡ ಈ ಲ್ಯಾಂಡ್ ರಿಫಾರಂಸ್‌ಗೆ ತಿದ್ದುಪಡಿಯನ್ನು ತಂದು ಅದಷ್ಟು ಜಾಗ್ರತೆ ಯಾವನು ಭೂಮಿಯನ್ನು ಉಳುತ್ತಾನೆಯೋ ಅವನಿಗೆ ಭೂಮಿಯ ಒಡೆತನವನ್ನು ಕೊಡದಿದ್ದ ಪಕ್ಷದಲ್ಲಿ ಸೋಷಿಯಲಿಸ್ಟಿಕ್ ಸ್ಟೇಟ್ ಸ್ಥಾಪನೆ ಮಾಡುತ್ತೇವೆ ಅದರಿಂದ ನಮ್ಮ ಬೃಹತ್ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಅನ್ನತಕ್ಕ ಮಾತು ಕನಸಿನ ಮಾತು ಆದೀತು ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಈ ಭೂಸುಧಾರಣೆ ಸಮಾಜವಾದ ಸಮಾಜವನ್ನು ಕಟ್ಟುವುದಕ್ಕೆ ಅಡಿಗಲ್ಲು. ಇವತ್ತಿನ ದಿವಸ ಕೋಟ್ಯಾಂತರ ಜನ ಸ್ವಾತಂತ್ರ್ಯ ಬಂದರೆ ಸಾಕು ಎಂದು ಕಾದಿದ್ದಂತಹ ಜನ ಯಾರಿದ್ದಾರೆ ಅವರ ಆಶೆ ಕಳೆದ 20 ವರ್ಷಗಳಿಂದ ನಿರಾಶೆಯಾಗಿದೆ. ನಮ್ಮ ಜನರು ನಿಜವಾಗಿಯೂ ಪ್ರಜಾರಾಜ್ಯದ ಆ ಸವಿಯನ್ನು ಆನಂದವನ್ನು ಈ ದಿವಸ ಅವರು ಯಾವರೀತಿ ಅನುಭವಿಸುತ್ತಿದ್ದಾರೆಂದರೆ ಅವರು ಐದು ವರ್ಷಕ್ಕೆ ಒಮ್ಮೆ ತಮಗಿರತಕ್ಕ ಓಟು ಹಾಕತಕ್ಕ ಆ ಅಧಿಕಾರ ಏನಿದೆ ಅಂದೊಂದನ್ನು ಮಾತ್ರ ಚಲಾಯಿಸುತ್ತಿದ್ದಾರೆಯೇ ಶಿವಾಯಿ ಅವರಿಗೆ ಇದನ್ನು ಬಿಟ್ಟರೆ ಇನ್ನಾವ ಆನಂದವೂ ಇಲ್ಲ. ಅವರ ಆರ್ಥಿಕ ಪರಿಸ್ಥಿತಿ ಮೊದಲು ಸ್ವಾತಂತ್ರ್ಯ ಬರುವ ಮುನ್ನ ಎಲ್ಲಿ ಇತ್ತೋ ಈ ದಿವಸ ಕೂಡ ಅದು ಅಲ್ಲೇ ಇದೆ. ನಮಗೆ ಸ್ವರಾಜ್ಯ ಬಂದಮೇಲೆ ಅದರ ಸಂಪತ್ತನ್ನು ಅನುಭವಿಸತಕ್ಕವರು ಕೆಲವೇ ಜನರು ಮಾತ್ರ ಆಗಿದ್ದಾರೆ; ಅಂದರೆ ಅಂದೇನೂ ಒಂದು ಅತಿಶಯೋಕ್ತಿಯಲ್ಲ. ದೇಶದಲ್ಲಿ ಒಂದು ಮಹಾ ಕ್ರಾಂತಿ ಆಗದ ವಿನಾ ಜನರೆಲ್ಲರಿಗೂ ಒಂದು ಆರ್ಥಿಕ ಪ್ರಗತಿಯುಂಟಾಗದ ವಿನಾ ನಮಗೆ ನಮ್ಮ ಸ್ವರಾಜ್ಯ ಸಂಪತ್ತನ್ನು ಉಳಿಸಿ ಕೊಳ್ಳುವುದಕ್ಕೆ ಕಷ್ಟವಾಗಬಹುದು ಎಂಬುದು ನನ್ನ ಅಭಿಪ್ರಾಯ. ನಮಗೆ ಲಭಿಸಿರತಕ್ಕ ಸ್ವಾತಂತ್ರ್ಯದ ಬೆಲೆ ನಮಗೆ ಚೆನ್ನಾಗಿ ಗೊತ್ತಿಲ್ಲ. ಏಕೆಂದರೆ ನಮಗೆ ಅದು ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಬಹಳ ಸುಲಭವಾಗಿ ಲಭಿಸಿದ್ದರಿಂದ ನಮಗೆ ಅದರ ಸಂಪೂರ್ಣ ಮಹತ್ವ ಇನ್ನೂ ಅರಿವಾಗಿಲ್ಲ. ನಾವು ಅದನ್ನು ಹೆಚ್ಚು ಕಷ್ಟಪಟ್ಟು ಗಳಿಸಿದ್ದರೆ ಆಗ ನಮಗೆ ಅದರ ಖಿಮ್ಮತ್ತು ತಿಳಿಯುತ್ತಿತ್ತು. ಆದರೆ ನಾನೀ ಸಂದರ್ಭದಲ್ಲಿ ತಿಳಿಸಬಯಸುವುದೇನೆಂದರೆ ಎಲ್ಲಿಯತನಕ ನಾವು ನಮ್ಮ ಆರ್ಥಿಕ ಸ್ವಾತಂತ್ರ್ಯವನ್ನು ಬೆಳೆಸಿಕೊಳ್ಳುವುದಿಲ್ಲವೋ ಅಲ್ಲಿಯತನಕ ನಮ್ಮ ನಮಗೆ ಲಭ್ಯವಾಗಿರತಕ್ಕ ರಾಜಕೀಯ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡುವುದರಲ್ಲಿ ಬಹಳ ಅಪಾಯಕ್ಕೆ ನಾವು ತುತ್ತಾಗಬೇಕಾದೀತು ಎಂಬುದನ್ನು ಸೂಚಿಸಬಯಸುತ್ತೇನೆ. ಈ ದಿವಸ ನಮ್ಮಲ್ಲಿ ಕೋಟ್ಯಾಂತರ ಜನರು ಭೂಮಿ ಇತ್ಯಾದಿಯೂ ಆಸ್ತಿಪಾಸ್ತಿಗಳೂ ಇಲ್ಲದೆ ಅವರು ಕೇವಲ ಸೇವಕರಾಗಿ ಮಾತ್ರ ಉಳಿಯಬೇಕಾದ ಪರಿಸ್ಥಿತಿಯುಂಟಾಗಿದೆ. ಅವರಿಗೆ ದಿನವಹಿ ಕೂಲಿಗೆ ಹೋಗಿ ದುಡಿದುಕೊಂಡು ಬಂದರೆ ಅವರ ಹೆಂಡತಿ ಮಕ್ಕಳ ಜೀವನಕ್ಕೆ ಮಾರ್ಗ. ಇಲ್ಲದಿದ್ದರೆ ಇಲ್ಲ. ಇಂಥ ಒಂದು ಸನ್ನಿವೇಶದಲ್ಲಿ ನಾವು ಸಮಾಜವಾದ ಸಮಾಜವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿರುವಾಗ ಅದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ನಾವು ಯುದ್ಧಕ್ಕೆ ಸನ್ನದ್ಧರಾಗತಕ್ಕ ರೀತಿಯಲ್ಲಿ ಕೆಲಸ ಮಾಡಿದರೆ ಅದು ಸಾಧ್ಯವೇ ವಿನಾ ಇಲ್ಲದಿದ್ದರೆ ಅದು ಸಾಧ್ಯವಾಗಲಾರದೆಂದು ನನ್ನ ಅಭಿಪ್ರಾಯ. ಆದ್ದರಿಂದ ಸರ್ಕಾರದವರು ಭೂಮಿ ಉಳತಕ್ಕವನಿಗೆ ಅದರ ಸ್ವಾಮ್ಯವನ್ನು ಬೇಗ ದೊರಕಿಸಿಕೊಡಬೇಕೆಂದು ಸೂಚಿಸ ಬಯಸುತ್ತೇನೆ.

ಇನ್ನು ನಮ್ಮ ರಾಜ್ಯಪಾಲರು ನಮ್ಮ ಯೋಜನೆಯ ಬಗ್ಗೆ ಒಂದು ಬಹಳ ಉಪಯುಕ್ತವಾದ ಮಾತನ್ನು ಅಪ್ಪಣೆ ಕೊಡಿಸಿದ್ದಾರೆ. ಅದು ಏನೆಂದರೆ ಕೇಂದ್ರ ಸರ್ಕಾರದವರು ರಾಜ್ಯಗಳಿಗೆ ಕೊಡ ತಕ್ಕ ಸಹಾಯಧನವೇನಿದೆ ಅದು ಆಯಾ ರಾಜ್ಯಗಳ ಜನಸಂಖ್ಯೆಯ ಆಧಾರದಮೇಲೂ ಮತ್ತು ಪ್ರತಿಯೊಬ್ಬರು ಆಯಾಯ ರಾಜ್ಯದಲ್ಲಿ ತೆರತಕ್ಕ ಆದಾಯ ತೆರಿಗೆಯ ಆಧಾರದಮೇಲೂ ಹಂಚ

(ಶ್ರೀ ಡಿ. ಎಂ. ಸಿದ್ದಯ್ಯ)

ಬೇಕೆಂಬ ತೀರ್ಮಾನಕ್ಕೆ ಬಂದಿರುವುದರಿಂದ ಇನ್ನು ಮುಂದೆ ನಮ್ಮ ರಾಜ್ಯ ಇನ್ನು ಮುಂದೆ ಸಾಧ್ಯವಾದಷ್ಟು ತನ್ನ ಸಂಪನ್ಮೂಲಗಳನ್ನು ತಾನು ಹೆಚ್ಚಿಸಿಕೊಳ್ಳಲು ಪ್ರಯತ್ನ ಮಾಡಬೇಕು ಎಂಬುದಾಗಿ ತಿಳಿಸಿದ್ದಾರೆ.

> "The State Government is also expected to raise resources to the maximum extent possible. It is proposed to accord high priority to the completion of schemes of Irrigation and power projects and agricultural production."

ಇತ್ಯಾದಿಯಾಗಿ ಹೇಳಿದ್ದಾರೆ. ನಮಗೀಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಹೆಚ್ಚು ಹಣ ಬೇಕಾಗಿದೆ. ಅದಕ್ಕಾಗಿ ನಮ್ಮ ಸಂಪನ್ಮೂಲಗಳನ್ನು ನಾವು ಹೆಚ್ಚಿಸಿಕೊಳ್ಳಬೇಕು ಎಂಬ ಮಾತನ್ನು ರಾಜ್ಯಪಾಲರು ಹೇಳಿದ್ದಾರೆ. ಆದರೆ ನಮ್ಮ ಸರ್ಕಾರದವರು ಈ ವರ್ಷ ವಿತ್ತೀಯ ಆಯೋಗದ ಮುಂದೆ ತಮ್ಮ ಮೆಮೊರಾಂಡಂನ್ನು ಇಟ್ಟಿರುವುದಾಗಿಯೂ ಮತ್ತು ಅವರು ಅದನ್ನು ಬಹಳವಾಗಿ ಮೆಚ್ಚಿಕೊಂಡಿರುವುದಾಗಿಯೂ ಇಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಆದರೆ ನಾವು ಯಾವಾಗಲೂ ಹೀಗೆ ಬೆಗ್ಗಿಂಗ್ ಬೌಲನ್ನು ಹಿಡಿದುಕೊಂಡು ಕೇಂದ್ರ ಸರ್ಕಾರದವರ ಮುಂದೆ ಹೋಗತಕ್ಕದ್ದು ಸರಿಯಲ್ಲ. ಹೀಗಾಗೇ ನಮ್ಮ ಕೃಷ್ಣಾ ಮತ್ತು ಕಾವೇರಿ ಯೋಜನೆಗಳೆಲ್ಲಾ ಹಾಗೇ ನಿಂತಿರುತ್ತವೆ. ಆದರೆ ಆ ಆಂಧ್ರದವರಿಗೆ ಆ ನಾಗಾರ್ಜುನ ಸಾಗರವನ್ನು ಕಟ್ಟಲು ಹಣವನ್ನು ಒದಗಿಸಿದಂತೆ ಮತ್ತು ಆ ಪಂಜಾಬಿನಲ್ಲಿರತಕ್ಕವರಿಗೆ ಕೈಗಾರಿಕಾಭಿವೃದ್ಧಿಗೆ ಹಣವನ್ನು ಒದಗಿಸಿದಂತೆ ಮತ್ತು ಆ ಮದ್ರಾಸಿನವರಿಗೆ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳ ಅಭಿವೃದ್ಧಿಗೆ ಹಣವನ್ನು ಒದಗಿಸಿದಂತೆ ಕೇಂದ್ರದವರು ನಮಗೆ ಹಣವನ್ನು ಒದಗಿಸಲಿಲ್ಲ. ಅದಕ್ಕೆ ತಕ್ಕಂತೆ ನಾವಿಲ್ಲಿ ನಮ್ಮ ಸಂಪನ್ಮೂಲವನ್ನು ವೃದ್ಧಿ ಮಾಡಿಕೊಳ್ಳದೆ ಕೈಬಿಟ್ಟಿದ್ದರಿಂದ ನಮ್ಮ ಪ್ರಗತಿಗೆ ಬಹಳ ಕುಂದುಕ ಉಂಟಾಯಿತು. ನಾವು ಇಲ್ಲಿ ನಮ್ಮ ಸಂಪನ್ಮೂಲಗಳನ್ನು ಚೆನ್ನಾಗಿ ರೂಢಿಸಿಕೊಳ್ಳದೆ ಇರುವುದಷ್ಟೇ ಅಲ್ಲ ಅದನ್ನು ಬಾಯಲ್ಲಿ ವೃದ್ಧಿ ಮಾಡಿಕೊಳ್ಳಬೇಕು ಎಂದು ಹೇಳುತ್ತಾ ಇನ್ನೊಂದು ಕಡೆ ಕಂದಾಯ ವಜಾ ಮಾಡಿದ್ದೇವೆನ್ನುತ್ತಾರೆ. ನಾವು ಒಂದು ಬಾಯಿಯಲ್ಲಿ ಕೇಂದ್ರ ಸರ್ಕಾರದವರ ಸಹಾಯವನ್ನು ಕೇಳುತ್ತೇವೆ. ಮತ್ತೊಂದು ಬಾಯಿಯಲ್ಲಿ ಕಂದಾಯ ವಜಾ ಮಾಡಿದ್ದೇವೆಂದು ಹೇಳುತ್ತೇವೆ. ಏನೇನು ತೆರಿಗೆಗಳು ಇವೆಯೋ ಅವೆಲ್ಲವನ್ನೂ ಹಾಕುವುದು ನಿಧಾನವಾದರೂ ಚಿಂತೆ ಇಲ್ಲವೆಂದು ಆಡಿಕೊಂಡು ಬಂದಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಯಾರಿಗೆ ಕಂದಾಯ ಕೊಡುವ ಯೋಗ್ಯತೆ ಇದೆಯೋ ಅವರು ಕಂದಾಯವನ್ನು ಕೊಡಬೇಕು. ಟ್ಯಾಕ್ಸೇಷನ್ ತತ್ವ ಇದ್ದರೂ ಕೂಡ ಅದು ತೆರಿಗೆಯನ್ನು ಕೊಡುವ ಒಂದು ಕೆಪಾಸಿಟಿಯ ಮೇಲೆ ಹೋಗುತ್ತದೆ. ಇವತ್ತಿನ ದಿವಸ ಮಾರಾಟ ತೆರಿಗೆಯಾಗಲೀ, ವರಮಾನ ತೆರಿಗೆಯಾಗಲೀ, ಅಥವಾ ವಾಣಿಜ್ಯ ತೆರಿಗೆಯಾಗಲೀ ಕೊಡುವುದರಲ್ಲಿ ಎಷ್ಟೋ ಲೀಕೇಜಸ್ ಇವೆಯೆಂದು ನಾನು ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ದಿವಸ ಪ್ರಭಾವಶಾಲಿಗಳು ಯಾರು ಇದ್ದಾರೆಯೋ, ವೆಸ್ಟೆಡ್ ಇಂಟರೆಸ್ಟ್ ಯಾರು ಇದ್ದಾರೋ, ಅಂತಹವರು ತೆರಿಗೆಗಳನ್ನು ಕೊಡುವುದಿಲ್ಲ. ಬಡ ರೈತರಾದವರು ಕ್ರಮವಾಗಿ ತೆರಿಗೆಗಳನ್ನು ಕೊಡುತ್ತಿದ್ದಾರೆ. ಹಳ್ಳಿಗಳಲ್ಲಿ ಕಂದಾಯವನ್ನು ಜಾಸ್ತಿ ಮಾಡಿದ್ದರೂ ಒಂದು ರೂಪಾಯಿ ತೆರಿಗೆ ಕೊಡುವವರಿಗೆ ಎರಡು ರೂಪಾಯಿ ಕೊಡಬೇಕೆಂದು ಹೇಳಿದರೆ ಸಂತೋಷದಿಂದ ರೈತರು ಕೊಡುತ್ತಾರೆ. ಆದರೆ ಲ್ಯಾಂಡ್ ರೆವಿನ್ಯೂ ಬಗ್ಗೆ ಈಗ ಏನು ವ್ಯವಸ್ಥೆಯಾಗಿದೆಯೋ ಅದು ಸರಿಯಾದ ರೀತಿಯಲ್ಲಿ ವ್ಯವಸ್ಥೆಯಾಗಲಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಯಾವ ಹಳ್ಳಿ ಜನ ಒಂದು ರೂಪಾಯಿ ಕೊಡುವವರು ಎರಡು ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಆ ಊರಿನ ಜನ ಮತ್ತು ಆ ಊರಿನ ಹೆಸರು ಹೇಳಿದರೆ ನನಗೆ ಬಹಳ ಸಂತೋಷವಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.—ನಾನು ಮಾನ್ಯ ಶ್ರೀ ಗಂಗಾಧರ್ ಅವರಿಗೆ ಹೇಳುವುದೇನೆಂದರೆ, ರೈತರಾದವರು ಕಂದಾಯವನ್ನು ಕೊಡುವುದಕ್ಕೆ ಹಿಂಜರಿಯುತ್ತಾ ಇಲ್ಲವೆಂದು. ಮುಖ್ಯವಾಗಿ ಸರ್ಕಾರಕ್ಕೆ ಕೊಡಬೇಕಾದ ನಾನಾ ವಿಧವಾದ ತೆರಿಗೆಗಳ ಬಗ್ಗೆ ಬಂಡವಾಳ ಷಾಹಿಗಳಾದವರು, ಪ್ರಭಾವಶಾಲಿಗಳಾದವರು, ವೆಸ್ಟೆಡ್ ಇಂಟರೆಸ್ಟ್ ಯಾರು ಇದ್ದಾರೋ ಅಂತಹ ಜನರು, ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆಲ್ಲಾ ಹಣವನ್ನು ಕೇಂದ್ರ ಸರ್ಕಾರದಿಂದಲೇ ಪಡೆಯುವುದು ಬಹಳ ಕಷ್ಟವಾಗುತ್ತದೆ. ರೈತರಾದವರು ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಚೆನ್ನಾಗಿ ಬೆಳೆಯನ್ನು ಬೆಳೆಯುವುದಕ್ಕಾಗಿ ಚೆನ್ನಾಗಿ

ದುಡಿಯಲೂ ಸಿದ್ಧ. ತೆರಿಗೆಯನ್ನು ಒಂದು ರೂಪಾಯಿ ಕೊಡುವುದಕ್ಕೆ ಬದಲಾಗಿ ಎರಡು ರೂಪಾಯಿಗಳನ್ನು ಕೊಟ್ಟೇ ಕೊಡುತ್ತಾನೆ. ರೈತರಾದವರು ನಮ್ಮ ಪಟ್ಟಣವಾಸಿಗಳಿಗಿಂತ ತೆರಿಗೆಯನ್ನು ಕೊಡುವುದರಲ್ಲಿ ಸಾವಿರಪಾಲು ಮೇಲು. ಆದ್ದರಿಂದ ಸರ್ಕಾರದವರು ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. ಸಂಪನ್ಮೂಲಗಳನ್ನೂ ಸಹ ಜಾಸ್ತಿ ಮಾಡಬೇಕು. ಇಲ್ಲದಿದ್ದರೆ ನಮ್ಮ ಪ್ರಾಜೆಕ್ಟುಗಳ ಸ್ಥಿತಿ ಏನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ಅವುಗಳ ಕಥೆ ಏನಾಗಿದೆಯೆಂದರೆ, ವಿಶೇಷವಾಗಿ ಹಣ ಕೇಂದ್ರ ಸರ್ಕಾರದಿಂದ ನಾವು ಪಡೆಯುತ್ತಾ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸದಸ್ಯರು ತೆರಿಗೆಯನ್ನು ರೈತರು ಕೊಟ್ಟಿದ್ದಾರೆಂದು ಹೇಳಿದರು. ಯಾವ್ಯಾವ ರೈತರು ಕೊಟ್ಟಿದ್ದಾರೆ. ಅವರಲ್ಲಿ ಶ್ರೀಮಂತರು ಬಡವರು ಎಲ್ಲರೂ ಇದ್ದಾರೆ. ಅಂದಮೇಲೆ ಎಲ್ಲ ರೈತರು ಆ ರೀತಿ ಕೊಟ್ಟಿದ್ದಾರೆಯೇ? ಆ ರೀತಿ ಕೊಡುವುದಕ್ಕೆ ಬಡ ರೈತರಿಗೆ ಶಕ್ತಿ ಇದೆಯೇ! ಯಾರ್ಯಾರು ಆ ರೀತಿ ಕೊಟ್ಟಿದ್ದಾರೆ! ರೈತರ ವಿಭಾಗದಲ್ಲಿಯೂ ತೆರಿಗೆಯಿಂದ ತಪ್ಪಿಸಿಕೊಳ್ಳುವವರು ಇಲ್ಲವೇ? ಜಮೀನ್‌ದಾರರಿಗೆ, ಹಾಗೂ ಕೃಷಿ ರೈತರಿಗೆ ಯಾವ ರೀತಿ ಕಷ್ಟವಿದೆಯೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆಯೇ?

ಶ್ರೀ ಡಿ. ಎಂ. ಸಿದ್ದಯ್ಯ.—ರಾಜ್ಯಪಾಲರು ತಮ್ಮ ಭಾಷಣದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಕಟ್ಟುವ ವಿಷಯವನ್ನು ಪ್ರಸ್ತಾಪಿಸಿ ಸುಮಾರು 10—15 ಪ್ರಾಜೆಕ್ಟುಗಳ ಜೊತೆಗೆ 26 ಮೀಡಿಯಂ ಪ್ರಾಜೆಕ್ಟುಗಳನ್ನು ಕಟ್ಟುವ ಬಗ್ಗೆ ಹೇಳಿದ್ದಾರೆ. ಇವೆಲ್ಲಕ್ಕೂ ಹಣ ಎಷ್ಟು ಮಟ್ಟದಲ್ಲಿ ಬೇಕಾಗುತ್ತದೆಂದರೆ, ಸುಮಾರು 300 ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಾವು ಅದಕ್ಕಾಗಿ 129 ಕೋಟಿ ರೂಪಾಯಿ ಖರ್ಚುಮಾಡಿ 11ಲಕ್ಷ ಎಕರೆ ನೀರಾವರಿ ಮಾಡಿದ್ದೇವೆ, ಅಂದರೆ ನೀರಾವರಿಯನ್ನು ಸೇಕಡ 9ಕ್ಕೆ ಏರಿಸಿದ್ದೇವೆ. ನಮ್ಮ ರಾಜ್ಯದಲ್ಲಿ ಮೊದಲು ಅದು ಇದ್ದುದು ಸೇಕಡ 7ರಷ್ಟು. ಇಷ್ಟೆಲ್ಲಾ ಹಣವನ್ನು ಖರ್ಚು ಮಾಡಿದ ಮೇಲೆ ಅದು ಸೇಕಡ 9ಕ್ಕೆ ಬಂದಿದೆ. ನಾವು ಸ್ವಲ್ಪವೂ ಬಿಡದೆ ಪೂರ್ತಿಯಾಗಿ ಎಲ್ಲ ನೀರನ್ನೂ ಉಪಯೋಗಿಸಿಕೊಂಡರೆ ನಮ್ಮದು ಸೇಕಡ 24ರವರೆಗೆ ಏರುವುದು ಕಷ್ಟವಾಗುತ್ತದೆ. ಮದ್ರಾಸ್ ಮತ್ತು ಆಂಧ್ರ ರಾಜ್ಯಗಳಲ್ಲಿ ಸೇಕಡ 40 ಅಥವಾ 45ರಷ್ಟು ನೀರಾವರಿ ಇದೆ. ಆದುದರಿಂದ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಿ ನೀರಾವರಿ ಸೇಕಡ 24ರವರೆಗಾದರೂ ಮುಟ್ಟಿಸಬೇಕಾಗುತ್ತದೆ. 1969—70ರಲ್ಲಿ ಈ ಬಾಬಿಗೆ 10—12 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಕೃಷ್ಣಾ ಪ್ರಾಜೆಕ್ಟ್ ಮತ್ತು ಕಾವೇರಿ ಬೇಸಿನ್‌ನಲ್ಲಿರುವ ಪ್ರಾಜೆಕ್ಟುಗಳಿಗೆ, ಮತ್ತು ಕಪಿನಿ ಮತ್ತು ಇತರ ಇನ್ನೂ ಅನೇಕ ಮೀಡಿಯಂ ಪ್ರಾಜೆಕ್ಟುಗಳಿಗೆ ಎಷ್ಟು ಖರ್ಚಾಗುತ್ತದೆಂಬುದನ್ನು ಯೋಚಿಸಿ ಆ ಕೆಲಸಗಳನ್ನು ಪೂರೈಸಬೇಕು. ಇವತ್ತಿನ ದಿವಸ ಆ ನೀರಾವರಿ ಕೆಲಸಗಳು ಪೂರ್ತಿಯಾಗಬೇಕಾದರೆ ಅದರಲ್ಲಿಯೂ ಕೂಡ ಕಾವೇರಿ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟುಗಳು 1974ರೊಳಗೆ ಅಗ್ರಿಮೆಂಟ್ ಪ್ರಕಾರ ಮುಗಿಯಬೇಕಾದರೆ ಸುಮಾರು 50—60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ವರ್ಷಕ್ಕೆ ಸುಮಾರು 10—12 ಕೋಟಿ ರೂಪಾಯಿಗಳಾದರೂ ಕಾವೇರಿ ಬೇಸಿನ್‌ನಲ್ಲಿರುವ ಪ್ರಾಜೆಕ್ಟುಗಳಿಗೆ ಖರ್ಚು ಮಾಡಬೇಕಾಗುತ್ತದೆ. ಕೃಷ್ಣಾ ಪ್ರಾಜೆಕ್ಟು ಸಹ ತೆಗೆದುಕೊಳ್ಳಬೇಕು.

[MR. DEPUTY SPEAKER in the Chair]

ನಮಗೆ 20-25 ಕೋಟಿ ರೂಪಾಯಿಗಳು ವರ್ಷ ಒಂದಕ್ಕೆ ಇದ್ದರೆ ಮಾತ್ರ ನಮ್ಮ ಬಾರೀ ಯೋಜನೆಗಳು ಮತ್ತು ಮಾಧ್ಯಮ ಯೋಜನೆಗಳು ಪೂರ್ತಿಯಾಗಬಹುದು. ಇದಕ್ಕೆ ಹಣವನ್ನು ಎಲ್ಲಿಂದ ತರಬೇಕಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ರಾಜ್ಯಪಾಲರು, ಮಾನ್ಯ ಸದಸ್ಯರುಗಳ ಸಲಹೆಗಳನ್ನು ಕೇಳಿದ್ದಾರೆ. ನಾನಾದರೂ ಹೇಳುತ್ತೇನೆ, ನಮ್ಮ ರಸ್ತೆ ಕೆಲಸಗಳನ್ನು ನಿಲ್ಲಿಸಬೇಕು, ಸೇತುವೆಗಳನ್ನು ನಿಲ್ಲಿಸಿ, ಕಟ್ಟಡಗಳನ್ನು ನಿಲ್ಲಿಸಿ, ಇಂಥ ಯೋಜನೆಗಳಿಗೆ ಹಣವನ್ನು ಖರ್ಚು ಮಾಡಬೇಕು. ಆಂಧ್ರದವರು ಈ ರೀತಿ ಮಾಡಿದ್ದಾರೆ; ಮತ್ತು ಕೇಂದ್ರದಿಂದ ಹಣವನ್ನು ತಂದಿದ್ದಾರೆ. ಮೊನ್ನೆ ನಾವು ಅಲ್ಲಿ ಹೋದಾಗ, ಇವನ್ನೆಲ್ಲಾ ನೋಡಿ ಒಂದು ಕಡೆ ಸಂತೋಷವಾಗುತ್ತದೆ, ಇನ್ನೊಂದು ಕಡೆಯಲ್ಲಿ ನಮಗೆ ನಮ್ಮ ಕೃಷ್ಣಾದಂಡೆಯಲ್ಲಿ ಕಟ್ಟಲಿಲ್ಲವಲ್ಲಾ ಎಂದು ವ್ಯಥೆಯಾಗುತ್ತದೆ. ಇವತ್ತು ನಮ್ಮ ದೇಶದಲ್ಲಿ ಯಾವ ಕಾರ್ಯಗಳನ್ನು ಮಾಡುವುದರಿಂದ ನಮ್ಮ ಜನತೆಗೆ ಆರ್ಥಿಕವಾಗಿ ಅನುಕೂಲವಾಗುವುದಿಲ್ಲವೋ, ಅಂಥವುಗಳನ್ನು ಬಿಡತಕ್ಕ ಧೈರ್ಯವನ್ನು ನಾವು ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಯವರು ಪಿ. ಡಬ್ಲ್ಯು. ಡಿ. ಮಂತ್ರಿಯಾಗಿದ್ದಾಗ ಅನೇಕ ವರ್ಷಗಳಿಂದ ಅವರ ಡಿಮ್ಯಾಂಡ್ ಮೇಲೆ ಮಾತನಾಡುತ್ತಾ, ಅನೇಕ ಸಲಹೆಗಳನು

(ಶ್ರೀ ಡಿ. ಎಂ. ಸಿದ್ದಯ್ಯ)

ಈ ವಿಚಾರದಲ್ಲಿ ಕೊಟ್ಟಿದ್ದೇನೆ. ಅವರು ಆ ಸಲಹೆಗಳನ್ನು ಒಪ್ಪಿಕೊಂಡಿದ್ದಾರೆ. ಇವತ್ತು ಧೈರ್ಯ ಮಾಡಿ ಯಾವ್ಯಾವ ಬಾಬುಗಳಿಗೆ ಖರ್ಚುಮಾಡಬೇಕೋ, ಅವುಗಳನ್ನೆಲ್ಲಾ ನಿಲ್ಲಿಸಿ, ನೀರಾವರಿ ಯೋಜನೆಗಳ ಕೆಲಸಗಳನ್ನು ಮಾಡಬೇಕು. ಆದರ ಜೊತೆಗೆ ಕೇಂದ್ರದವರು ನಮ್ಮ ಯೋಜನೆಗಳಲ್ಲಿ ಒಂದನ್ನಾದರೂ ನ್ಯಾಶನಲ್ ಪ್ರೊಜೆಕ್ಟಾಗಿ ಗಣನೆಗೆ ತೆಗೆದುಕೊಂಡಿಲ್ಲ. ಇವತ್ತು ಏಕೆ ಅವರು ಈ ರೀತಿ ನಮ್ಮ ಮೇಲೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆಂದು ಅರ್ಥವಾಗುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯ ಮಂತ್ರಿಯಾಗಿದ್ದವರು ಸರಿಯಾದ ಕರ್ತವ್ಯವನ್ನು ಮಾಡುತ್ತಿಲ್ಲವೇ, ಅಥವಾ ಅಲ್ಲಿ ಸರಿಯಾದ ಪ್ರಭಾವವನ್ನು ಬೀರುತ್ತಾ ಇಲ್ಲವೇ, ಅಥವಾ ಮೈಸೂರು ಸರ್ಕಾರದವರು ಅವರಿಗೆ ಅರ್ಥವಾಗುವ ರೀತಿಯಲ್ಲಿ ಮಾತನಾಡುತ್ತಿಲ್ಲವೇ ಎಂಬುದು ಸಂಶಯವಾಗುತ್ತದೆ. ಇವತ್ತಿನ ದಿವಸ ಆಂಧ್ರದವರಿಗೆ ಕೊಡುತ್ತಿದ್ದಾರೆ, ಮದ್ರಾಸಿನವರಿಗೆ ಕೊಡುತ್ತಿದ್ದಾರೆ, ಆದರೆ ಮೈಸೂರು ಸರ್ಕಾರಕ್ಕೆ ಏಕೆ ಉದಾಸೀನತೆಯನ್ನು ತೋರಿಸುತ್ತಿದ್ದಾರೆ ಎಂಬುದು ಬಹಳ ವಿಷಾದಕರವಾದ ಸಂಗತಿಯಾಗಿದೆ. ಒಂದು ನೀರಾವರಿ ಯೋಜನೆಯನ್ನಾದರೂ ಕೇಂದ್ರ ಸರ್ಕಾರದವರು ಕಟ್ಟದಿದ್ದ ಪಕ್ಷದಲ್ಲಿ ಮುಂದಿನ ನಮ್ಮ ಪೀಳಿಗೆಯು ನಮ್ಮನ್ನು ಶಪಿಸಬಹುದು. ಇವತ್ತು ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ಕೇಂದ್ರ ಸರ್ಕಾರದವರು ನ್ಯಾಶನಲ್ ಪ್ರೊಜೆಕ್ಟಾಗಿ ವಹಿಸಿಕೊಂಡರೆ, ಉಳಿದ ಮೇಜರ್ ಮತ್ತು ಮೀಡಿಯಂ ಯೋಜಗಳನ್ನು ನಮ್ಮ ರಾಜ್ಯ ಸರ್ಕಾರದ ಸಂಪನ್ಮೂಲಗಳಿಂದ ಮಾಡಬಹುದು. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಇದನ್ನು ಕೇಂದ್ರ ಸರ್ಕಾರದವರು ಸರಿಯಾದಂತಹ, ನ್ಯಾಯವಾದಂತಹ, ಧರ್ಮವಾದಂತಹ ರೀತಿಯಲ್ಲಿ ಮಾಡಬೇಕು. ಹಾಗೆ ಕೇಂದ್ರದವರು ನಮಗೆ ಏನು ಕೆಲಸಗಳನ್ನು ಮಾಡಲು ನೇಮಿಸಿದ್ದಾರೆ, ಅದನ್ನು ಅವರು ಪುನಃ ನಮಗೆ ಬೆರಳು ತೋರಿಸದ ರೀತಿಯಲ್ಲಿ ಮಾಡಿದರೆ, ಅವರಿಂದ ಬರತಕ್ಕಂತಹ ಹಣವನ್ನು ನಾವು ಪಡೆಯಬಹುದು ಎಂದು ಹೇಳಬಹುದು.

ಆಮೇಲೆ ರಾಜ್ಯಪಾಲರು, ವ್ಯವಸಾಯದ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಮುಖ್ಯವಾದ ಕಸಬು. ಇತ್ತೀಚೆಗೆ ರೈತರು ನೀರಾವರಿ ಬಾವಿಗಳನ್ನು ತೆಗೆದು ಪಂಪುಸೆಟ್ಟುಗಳನ್ನು ಹಾಕಿ ಬೆಳೆಯನ್ನು ಬೆಳೆಯುವುದರಲ್ಲಿ ಬಹಳ ಮುಂದೆ ಬರುತ್ತಿದ್ದಾರೆ.

3-00 P.M.

ಒಂದಾನೊಂದು ಕಾಲದಲ್ಲಿ ಬಾವಿಯನ್ನು ತೆಗೆಯಬೇಕಾಗಿದ್ದರೆ ಜನಗಳು ಹಿಂಜರಿಯುತ್ತಿದ್ದರು. ಇವೊತ್ತಿನದಿವಸ ಅದರ ಮುಖಾಂತರ ರೈತಬಾಂಧವರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವ ದೃಷ್ಟಿಯಿಂದ ಬಾವಿಗಳನ್ನು ತೋಡಲು ನಾನು ಮುಂದು ತಾನು ಮುಂದು ಎಂದು ಮುಂದೆ ಬರುತ್ತಿದ್ದಾರೆ. ಲ್ಯಾಂಡ್ ಇಂಪ್ರೂವ್ಮೆಂಟ್ ಬ್ಯಾಂಕುಗಳು ಮತ್ತು ಸೆಂಟ್ರಲ್ ಬ್ಯಾಂಕುಗಳು ಇವುಗಳ ಮುಖಾಂತರ ಸರ್ಕಾರದವರು ರೈತರಿಗೆ ಬಾವಿಗಳನ್ನು ತೋಡಲು ಹಣವನ್ನು ಒದಗಿಸುತ್ತಿದ್ದಾರೆ. ಆದರೆ ಸಾಕಷ್ಟು ರೀತಿಯಲ್ಲಿ ಬಾವಿಗಳ ಕೆಲಸ ಇನ್ನೂ ಕೂಡ ಆರಂಭವಾಗಿಲ್ಲ. ರಾಜ್ಯಪಾಲರು ಅಪ್ಪಣೆ ಕೊಡಿಸಿದ ಹಾಗೆ ಈವರೆಗೆ 7,590 ನೀರಾವರಿ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. 33,800 ಬಾವಿಗಳಿಗೆ ಸರ್ಕಾರದವರು ಹಣವನ್ನು ಒದಗಿಸಿದ್ದರೂ ಕೂಡ ಇನ್ನೂ ಅನೇಕ ಬಾವಿಗಳ ಕೆಲಸ ಪೂರ್ತಿಯಾಗಿಲ್ಲ. ಅವುಗಳನ್ನು ಪೂರ್ತಿ ಮಾಡಲು ಏನು ತೊಂದರೆಯಾಗಿದೆ ಎಂಬುದನ್ನು ಸರ್ಕಾರದವರು ಗಮನಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಒಂದು ಲಕ್ಷ ನೀರಾವರಿ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಒಂದು ಬೃಹತ್ ಯೋಜನೆಯನ್ನು ಸರ್ಕಾರದವರು ಕೈಗೊಂಡಿದ್ದಾರೆ. ನಿಜವಾಗಿಯೂ ಇದು ಸ್ವಾಗತಾರ್ಹವಾಗಿದೆ. ಈ ಯೋಜನೆಯನ್ನು ಕೈಗೊಳ್ಳುವುದರ ಜೊತೆಗೆ ಕ್ಲುಪ್ತ ಕಾಲದಲ್ಲಿ ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾಗಿ ನೀರಾವರಿ ವಿಷಯದಲ್ಲಿ ಹೆಚ್ಚು ರೈತರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಕೆಲಸ ಮಾಡಿದರೆ ಅದರಿಂದ ನಮ್ಮ ದೇಶದ ಆಹಾರ ಸಮಸ್ಯೆ ಸುಲಭವಾಗಿ ಬಗೆಹರಿಯಬಹುದು ಎಂದು ನಾನು ತಿಳಿಸಬಯಸುತ್ತೇನೆ.

ಮೈನರ್ ಇರಿಗೇಷನ್ನಿಗಾಗಿ ನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರಿಂದ ಸಾಕಷ್ಟು ರೀತಿಯಲ್ಲಿ ಪ್ರಯೋಜನವಾಗಿದೆ. ಆ ಬಾಬಿಗೆ ಇನ್ನೂ ಹೆಚ್ಚು ಹಣವನ್ನು ಖರ್ಚು ಮಾಡುವುದು ಉಪಯುಕ್ತವಾಗಿದೆ. ಮೈನರ್ ಇರಿಗೇಷನ್ನಿನಿಂದ ದೊಡ್ಡ ಅನುಕೂಲವೇನೆಂದರೆ ಅದರಲ್ಲಿ ಬಹಳ ಜಾಗ್ರತೆಯಾಗಿ ಫಲವನ್ನು ಕೊಡುತ್ತದೆ. ದೊಡ್ಡ ದೊಡ್ಡ ಯೋಜನೆಗಳನ್ನು ಕಟ್ಟಿದರೆ ಅವುಗಳಿಂದ ಫಲ ಬರಬೇಕಾದರೆ ಹತ್ತಾರು ವರ್ಷಗಳಾಗುತ್ತವೆ. ಆದರೆ ಸಣ್ಣ ಸಣ್ಣ

ನೀರಾವರಿ ಯೋಜನೆಗಳಿಂದ ಅಲ್ಪ ಕಾಲದಲ್ಲಿಯೇ ಫಲ ದೊರೆಯುತ್ತದೆ. ಅದರಿಂದ ರೈತರಿಗೆ ಬೆಳೆಯನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಮೈನರ್ ಇರಿಗೇಷನ್ ಸಾಕಷ್ಟು ಉಪಯುಕ್ತವಾದ ಕೆಲಸವಾಗಿದೆ. ಆದ್ದರಿಂದ ಹೆಚ್ಚು ಹಣವನ್ನು ಮೈನರ್ ಇರಿಗೇಷನ್ನಿಗೆ ಖರ್ಚು ಮಾಡುವುದು ಸೂಕ್ತ ಎಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ವಿದ್ಯಾಭ್ಯಾಸ ವಿಷಯದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಸಹಸ್ರಾರು ಶಾಲೆಗಳನ್ನು ತೆಗೆದರೂ ಕೂಡ ಇನ್ನೂ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಪ್ರಗತಿ ಆಗಬೇಕಾಗಿದೆ. ಮಾನ್ಯ ವಿದ್ಯಾ ಸಚಿವರು ಒಂದು ಕಡೆ ಹೇಳಿದ್ದಾರೆ ಪ್ರಾಥಮಿಕ ಶಾಲೆಯ ಉಪಾಧ್ಯಾಯರುಗಳು ಪಾಠ ಹೇಳುವುದನ್ನು ಬಿಟ್ಟು ಉಳಿದ ಎಲ್ಲಾ ಕೆಲಸಗಳನ್ನೂ ಮಾಡುತ್ತಾರೆ ಎಂದು. ಆದ್ದರಿಂದ ಅದನ್ನು ಸುಧಾರಿಸುವ ದೃಷ್ಟಿಯಿಂದ ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬರು ಡೆಪ್ಯುಟಿ ಡೈರೆಕ್ಟರನ್ನು ನೇಮಕ ಮಾಡಬೇಕು. ಅವರು ಪ್ರಾಥಮಿಕ ಶಾಲೆಗಳ ಸೂಪರ್‌ವಿಜನ್ ಮಾಡಿ ಆ ಉಪಾಧ್ಯಾಯರುಗಳು ಸರಿಯಾದ ರೀತಿಯಲ್ಲಿ ಮಕ್ಕಳಿಗೆ ಪಾಠವನ್ನು ಹೇಳುವ ಹಾಗೆ ಕ್ರಮವನ್ನು ಕೈಗೊಳ್ಳಬೇಕು ಎಂದು ನಾನು ಸೂಚಿಸಬಯಸುತ್ತೇನೆ. ಮಕ್ಕಳ ಮನಸ್ಸು ಎಳೆಯದಾಗಿರುವಾಗ ಅವರ ಮನಸ್ಸಿನಲ್ಲಿ ಒಂದು ಶಿಸ್ತು, ನಿಯಮ ಮತ್ತು ಶ್ರದ್ಧೆ ಇವುಗಳನ್ನು ಮೂಡಿಸಿದರೆ ಅವರು ಮುಂದೆ ಉಚ್ಚ ವ್ಯಾಸಂಗಕ್ಕೆ ಹೋದಾಗ ಅವರಿಗೆ ಅದರಿಂದ ಅನುಕೂಲವಾಗುತ್ತದೆ. ಬಾಲ್ಯದಲ್ಲಿಯೇ ಮಕ್ಕಳಿಗೆ ತರಪೇತಿಯನ್ನು ಕೊಡುವುದು ವ್ಯತ್ಯಾಸವಾದರೆ, ತರಪೇತಿಯನ್ನು ಕೊಡುವುದು ಮುಂದೆ ನಿರರ್ಥಕವಾಗುತ್ತದೆ.

ಕನ್ನಡ ಭಾಷೆಯನ್ನು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಬೋಧಕ ಭಾಷೆಯನ್ನಾಗಿ ಉಪಯೋಗಿಸಬೇಕು ಎನ್ನತಕ್ಕಂಥಾದ್ದನ್ನು ಪ್ರಸ್ತಾಪಿಸಿದ್ದಾರೆ. ಈಗಾಗಲೇ ಅನೇಕ ಕನ್ನಡ ಟೆಕ್ಸ್ಟ್ ಬುಕ್‌ಗಳನ್ನು ಪ್ರವೀಣರಿಂದ ಬರೆಸಿ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಕನ್ನಡ ಬೋಧಕ ಭಾಷೆಯಾಗಬೇಕು ಎನ್ನುವ ಕೆಲಸದಲ್ಲಿ ಸರ್ಕಾರದವರು ತೀವ್ರ ಗಮನವನ್ನು ತೋರಿಸುತ್ತಿದ್ದಾರೆ. ಇದು ಬಹಳ ಪ್ರಶಂಸನೀಯವಾದ ವಿಚಾರ. ವಿದ್ಯಾಭ್ಯಾಸಕ್ಕೋಸ್ಕರ ಸರ್ಕಾರದವರು 30 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಮಕ್ಕಳು ವಿದ್ಯಾವಂತರಾಗಿ ಪ್ರಜಾಪ್ರಭುತ್ವದಲ್ಲಿ ಪ್ರಭಾವಯುತ ಪಾತ್ರವನ್ನು ವಹಿಸಬೇಕಾದರೆ ನಮ್ಮ ದೇಶದಲ್ಲಿ ಎಲ್ಲಾ ಮಕ್ಕಳೂ ಕೂಡ ವಿದ್ಯಾವಂತರಾಗುವುದು ಬಹಳ ಮುಖ್ಯ ವಿಷಯ.

ಬಡ ಮಕ್ಕಳಿಗೆ ಹೆಚ್ಚಿನ ಅನುಕೂಲತೆಯನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ ಮಧ್ಯಾಹ್ನದ ಉಪಹಾರಕ್ಕಾಗಿ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈಗ ಬಡವರ ಮಕ್ಕಳು ಹೆಚ್ಚು ಇರುವುದರಿಂದ ಮಧ್ಯಾಹ್ನದ ಉಪಹಾರಕ್ಕಾಗಿ ಸರ್ಕಾರದವರು ಈಗ ಏನು ಹಣವನ್ನು ಕೊಡುತ್ತಿದ್ದಾರೆಯೋ ಅದನ್ನು ದ್ವಿಗುಣಗೊಳಿಸಿ ಬಡ ಮಕ್ಕಳಿಗೆ ಸಹಾಯ ಮಾಡುವುದು ಬಹಳ ಮುಖ್ಯ ಎನ್ನತಕ್ಕಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಕೈಗಾರಿಕೆಗಳ ವಿಷಯವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೈಸೂರು ರಾಜ್ಯದ ಉದ್ಯಮಾಭಿವೃದ್ಧಿ ಸಮಿತಿಯನ್ನು ಸರ್ಕಾರದವರು ಇತ್ತೀಚೆಗೆ ರಚಿಸಿದ್ದಾರೆ ಎಂದು ರಾಜ್ಯಪಾಲರು ಅಪ್ಪಣೆ ಕೊಡಿಸಿದ್ದಾರೆ. ಅದು ದೊಡ್ಡ, ಮಧ್ಯಮವರ್ಗದ ಮತ್ತು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ದೃಷ್ಟಿಯಿಂದ ಒಂದು ಇಂಟಿಗ್ರೇಟೆಡ್ ಪ್ಲಾನ್ ತಯಾರು ಮಾಡುವುದು ಆ ಕಮಿಟಿಯ ಉದ್ದೇಶ ಎಂದು ಪ್ರಸ್ತಾಪಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳುವುದಾದರೆ ಕರ್ನಾಟಕ ರಾಜ್ಯ ಸ್ಥಾಪನೆಯಾಗುವುದಕ್ಕಿಂತ ಮುಂಚೆ ಹಳೆಯ ಮೈಸೂರಿನಲ್ಲಿ ಕೈಗಾರಿಕೆ ಬಹಳ ಚೆನ್ನಾಗಿ ಅಭಿವೃದ್ಧಿಯಾಗಿತ್ತು.

ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರನ್ನು ಈ ಸಂದರ್ಭದಲ್ಲಿ ತರುವುದಕ್ಕೆ ಇಷ್ಟಪಡುತ್ತೇನೆ. ಕೈಗಾರಿಕೆಯ ವಿಷಯದಲ್ಲಿ ಇವರು ಮೈಸೂರು ದೇಶವನ್ನು ಒಂದು ಮಾದರೀ ರಾಜ್ಯವನ್ನಾಗಿ ಮಾಡಿದರು. ಮಹಾತ್ಮಗಾಂಧಿಯವರಿಂದ ನಮ್ಮ ರಾಜ್ಯಕ್ಕೆ ರಾಮರಾಜ್ಯವೆಂದು ಹೆಸರು ಬರಬೇಕಾದರೆ, ಅಖಿಲಭಾರತದ ಮಟ್ಟದಲ್ಲಿ ನಮ್ಮ ರಾಜ್ಯಕ್ಕೆ ಎಂತಹ ಹೆಸರು ಇತ್ತು ಎಂದು ತಿಳಿದುಕೊಳ್ಳಬಹುದು. ಸರ್ ಎಂ. ವಿಶ್ವೇಶ್ವರಯ್ಯನವರು ಕೈಗಾರಿಕೆಗೆ ಬಹಳ ಪ್ರೋತ್ಸಾಹ ಕೊಟ್ಟರು. ನಮ್ಮಲ್ಲಿ ಇವತ್ತಿಗೂ ಬಹಳ ತಜ್ಞರು ಇದ್ದಾರೆ. ನಮ್ಮ ಕೈಗಾರಿಕೆಗಳನ್ನು ಸ್ಥಾಪಿಸಲು ತಕ್ಕ ವಾತಾವರಣ ಇದೆ, ರಾ–ಮೆಟೀರಿಯಲ್ಸ್ ಇವೆ, ಇವುಗಳನ್ನು ಉಪಯೋಗಿಸಿಕೊಂಡು ನಮ್ಮ ರಾಜ್ಯದವರೇ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರದವರು ತಕ್ಕ ಪ್ರೋತ್ಸಾಹ ಕೊಡಬೇಕು. ಈ ಸಂದರ್ಭದಲ್ಲಿ

(ಶ್ರೀ ಡಿ. ಎಂ. ಸಿದ್ದಯ್ಯ)

ಒಂದು ವಿಚಾರ ಹೇಳಬೇಕಾದರೆ ನಮ್ಮ ಸರ್ಕಾರದವರು ಹೊರಗಿನವರನ್ನು ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಕರೆಯುತ್ತಿದ್ದಾರೆ. ಮತ್ತು ಅವರಿಗೆ ಎಲ್ಲಾ ರೀತಿಯ ಪ್ರೋತ್ಸಾಹಗಳನ್ನು ಸಹ ಕೊಡುವುದಾಗಿ ಪದೇ ಪದೇ ಹೇಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿಯೇ ಹಣವಂತರು ಬಹಳಷ್ಟು ಇದ್ದಾರೆ. ಅವರು ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ಸುಕರಾಗಿದ್ದಾರೆ. ಇಂತಹವರಿಗೆ ಸರ್ಕಾರದವರು ಪ್ರೋತ್ಸಾಹ ಕೊಡಬೇಕು. ನಮ್ಮವರು ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರದಿದ್ದರೆ ಮಾತ್ರ ಹೊರಗಿನವರನ್ನು ಕರೆಸಬಹುದು. ಅದು ತಪ್ಪಲ್ಲ. ನಮ್ಮ ರಾಜ್ಯದವರಿಗೆ ಮೊದಲ ಪ್ರಾಶಸ್ತ್ಯ ಕೊಡಬೇಕು. ಈ ಮೂಲಕ ನಮ್ಮ ರಾಜ್ಯದ ಸಂಪತ್ತನ್ನು ಹೆಚ್ಚು ಮಾಡಬೇಕು.

ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ಸರ್ಕಾರದವರು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ನಮ್ಮಲ್ಲಿ ಅರಣ್ಯ ಸಂಪತ್ತು ಹೇರಳವಾಗಿದೆ. ರಬ್ಬರ್ ತೋಟಗಳನ್ನು ಹೆಚ್ಚು ಹೆಚ್ಚು ಬೆಳೆಸುವಂತೆ ಎಣ್ಣೆ ಬೀಜಗಳ ಮರಗಳನ್ನು ಸಹ ಹೆಚ್ಚು ಹೆಚ್ಚು ಬೆಳೆಸುವುದಕ್ಕೆ ಏರ್ಪಾಡು ಮಾಡಬೇಕು. ಹಳ್ಳಿಗಳಲ್ಲಿ ಕಾಟೇಜ್ ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡಬಹುದು. ಅದಕ್ಕೆ ಬೇಕಾದ ಅನುಕೂಲಗಳು ಅಲ್ಲಿ ಇರುತ್ತದೆ. ಗ್ರಾಮಾಭಿವೃದ್ಧಿ ದೃಷ್ಟಿಯಿಂದ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಸಣ್ಣ ಕೈಗಾರಿಕೆಗಳಿಗೆ ನಾವು ಹೆಚ್ಚು ಹಣವನ್ನು ಖರ್ಚು ಮಾಡುವುದಾದರೆ, ದೊಡ್ಡ ಕೈಗಾರಿಕೆಗಳಿಂದ ಏನು ಒಂದು ವರಮಾನವನ್ನು ನಿರೀಕ್ಷಣೆ ಮಾಡುತ್ತೇವೋ ಅದಕ್ಕಿಂತ ಹೆಚ್ಚು ವರಮಾನ ಬರುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಅರಣ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಅರಣ್ಯ ಸಂಪತ್ತು ಬಹಳ ಇದೆ. ಅದನ್ನು ಬೆಳೆಸುವುದಕ್ಕೆ ಮತ್ತು ಇರುವುದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಮಾನ್ಯ ಸಭಾಪತಿಗಳ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಏನೆಂದರೆ ಮೊನ್ನೆ ಗುಂಡ್ಲುಪೇಟೆಯ ಕಾಡಿನಲ್ಲಿ ಕೆಲವರು ತೇಗದ ಮರಗಳನ್ನು ತೆಗೆದುಕೊಂಡು ಹೋಗುತ್ತಿದ್ದಾಗ, ಇಬ್ಬರು ಅರಣ್ಯಾಧಿಕಾರಿಗಳು ಅವರನ್ನು ಹಿಡಿಯುವುದಕ್ಕೆ ಹೋದಾಗ ಅವರು ಈ ಅಧಿಕಾರಿಗಳನ್ನು ನಗ್ನರನ್ನಾಗಿ ಮಾಡಿ ಮರಕ್ಕೆ ಕಟ್ಟಿಸುಟ್ಟಿದ್ದಾರೆ. ಆ ಅಧಿಕಾರಿಗಳು ಕರ್ತವ್ಯ ದೃಷ್ಟಿಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡಲು ಹೋದರೆ ಇದೇ ಪ್ರತಿಫಲವೇನು? ಈ ಸಂಬಂಧವಾಗಿ ಸರ್ಕಾರದವರು ಕೆಲವರನ್ನು ಅರೆಸ್ಟ್ ಮಾಡಿದ್ದಾರೆಂದು ಕೇಳಿದ್ದೇನೆ. ಅವರ ಬಗ್ಗೆ ಸರ್ಕಾರದವರು ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ತೇಗದ ಮರಗಳೇ ಈ ರೀತಿ ಕಳ್ಳತನವಾಗುತ್ತಿದ್ದರೆ ಇನ್ನು ಗಂಧದ ಮರಗಳು ಯಾವ ರೀತಿ ಕಳ್ಳತನವಾಗುತ್ತಿರಬಹುದು ಎಂಬುವನ್ನು ನಾವೇ ತಿಳಿದುಕೊಳ್ಳಬಹುದು. ಸಮಾಜದ ಒಂದು ವರ್ಗದ ಜನ ಈ ರೀತಿ ಅರಣ್ಯ ಸಂಪತ್ತನ್ನು ಹಾಳು ಮಾಡುತ್ತಿದ್ದಾರೆ. ಇಂತಹವರ ಬಗ್ಗೆ ಸರ್ಕಾರದವರು ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಅರಣ್ಯ ಸಂಪತ್ತು ಹೆಚ್ಚುವುದಿಲ್ಲವೆಂದು ಹೇಳುತ್ತೇನೆ.

ಅರಣ್ಯವನ್ನು ಬೆಳೆಸಿಕೊಂಡು ಮತ್ತು ಅದನ್ನುಳಿಸಿಕೊಂಡು ಹೋಗಿದ್ದ ಪಕ್ಷದಲ್ಲಿ ನಮ್ಮ ರಾಜ್ಯ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ನಮ್ಮ ದೇಶದ ಜನಕ್ಕೆ ಸೇವೆ ಮಾಡುವಂತಹ ಅಧಿಕಾರಿಗಳು ಅವರುಗಳ ಕರ್ತವ್ಯವನ್ನು ನಿರ್ವಹಿಸುವಾಗ ಅವರಿಗೆ ಅನುಕೂಲಗಳನ್ನು ಮಾಡಿಕೊಟ್ಟರೆ ಅದರಿಂದ ಎಲ್ಲ ಜನತೆಗೂ ಅನುಕೂಲಗಳು ಸಿಕ್ಕಿ ಹೆಚ್ಚು ಪ್ರಯೋಜನಗಳನ್ನು ಪಡೆಯಬಹುದು. ಆದರೆ ಇಂತಹ ಅಧಿಕಾರಿಗಳನ್ನು ಒಂದುಕಡೆಯಿಂದ ಇನ್ನೊಂದುಕಡೆಗೆ ವರ್ಗಾಯಿಸುತ್ತಿದ್ದರೆ ಅದರಿಂದ ಜನತೆಗೆ ಅನುಕೂಲಗಳಾಗುವುದಿಲ್ಲ. ಪೋಲೀಸು ಅಧಿಕಾರಿಗಳನ್ನು ಹಾಗೂ ರಿಸರ್ವ್ ಪೋಲೀಸು ಅಧಿಕಾರಿಗಳನ್ನು ಅಲ್ಲಲ್ಲಿ ನೇಮಿಸಿ ಆದಷ್ಟು ಹೆಚ್ಚು ಪ್ರಯೋಜನ ಜನತೆಗೆ ಸಿಗುವಂತೆ ಮಾಡಬೇಕಾದುದು ಆವಶ್ಯಕ ಎಂದು ಹೇಳುತ್ತಾ ಮಾನ್ಯ ರಾಜ್ಯಪಾಲರು ಇನ್ನೂ ಅನೇಕ ವಿಷಯಗಳನ್ನು ಇದರಲ್ಲಿ ತಿಳಿಸಿದ್ದಾರೆ. ಒಂದು ಸಾರಿ ನಮ್ಮ ಕ್ಷೇತ್ರದ ಬಾರ್ಡರಿನಲ್ಲಿ ನಾಲ್ಕು ಲಾರಿ ಅಕ್ಕಿ ತುಂಬಿದ್ದ ಲಾರಿಯೊಂದನ್ನು ಇಲ್ಲಿದ್ದ ಒಬ್ಬರು ಸಬ್‌ಇನ್ಸ್‌ಪೆಕ್ಟರವರು ಹಿಡಿದಾಗ ಅವರಿಗೆ ಸುಮಾರು 27 ಸಾವಿರ ರೂಪಾಯಿಗಳಷ್ಟು ಲಂಚವನ್ನು ಕೊಡುತ್ತೇವೆಂದು ಹೇಳಿದರೂ ಆ ಅಧಿಕಾರಿಯೂ ತೆಗೆದುಕೊಳ್ಳದೆ, ಈಗ ಅವರ ಮೇಲೆ ಕೇಸು ಮಾಡಿ ಅವರನ್ನೆಲ್ಲಾ ಅರೆಸ್ಟು ಮಾಡಿದ್ದಾರೆ. ಮೈಸೂರು ಕಡೆಯಿಂದ ಕೇರಳದ ಬಾರ್ಡರಿಗೆ ಒಂದು ಲಾರಿ ಅಕ್ಕಿ ಸಾಗಿಸಿದರೆ ಸುಮಾರು ಎಂಟು ಸಾವಿರ ರೂಪಾಯಿಗಳಷ್ಟು ಲಾಭ ಬರುತ್ತದೆ ಎಂದು ಇದಕ್ಕೆ ಸುಮಾರು

ಎರಡು ಮೂರು ಸಾವಿರ ಲಂಚವಾದರೂ ಸರಿಯೇ ಅದನ್ನು ಪೋಲೀಸಿನವರಿಗೆ ಕೊಡಬಹುದು ಎಂದು ಹೀಗೆ ಮಾಡುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಯಾವ ಅಧಿಕಾರಿಗಳೇ ಆಗಲೀ ಅವರು ನಿರ್ದಾಕ್ಷಿಣ್ಯವಾಗಿ ಅವರ ಕೆಲಸಗಳನ್ನು ಮಾಡಬೇಕು. ನಮ್ಮ ಅರಣ್ಯದಲ್ಲಿ ಒಳ್ಳೆಯ ತೇಗದ ಮರಗಳನ್ನು ಕಳ್ಳ ಸಾಗಾಣಿಕೆ ಮಾಡಿ ಸಾಗಿಸುತ್ತಿರುವುದನ್ನು ತಡೆಗಟ್ಟಬೇಕು. ಕೆಲವು ಕಡೆ ಇರುವ ಅಧಿಕಾರಿಗಳು ಇದರ ಬಗ್ಗೆ ಸರಿಯಾದ ಕ್ರಮಗಳನ್ನು ಅನುಸರಿಸಿ ಕೆಲಸ ಮಾಡುತ್ತಿಲ್ಲ. ಪ್ರಜಾಪ್ರಭುತ್ವದೊಳಗಿರುವ ರಾಜ್ಯದಲ್ಲಿ ಇಂತಹ ಕಳ್ಳ ಸಾಗಾಣಿಕೆಗಳು ನಡೆಯುತ್ತಿದ್ದರೂ ಇದನ್ನು ತಡೆಗಟ್ಟದೇ ಇರುವುದು ಸರಿಯಲ್ಲ ಎಂದು ನಾನು ವಿಷಾದದಿಂದ ಇಲ್ಲಿ ತಮ್ಮ ಗಮನಕ್ಕೆ ತರಬೇಕಾಗಿದೆ. ದುಷ್ಟರಾಗಿರುವವರು ಯಾರೇ ಆಗಲೀ ಅವರನ್ನು ಶಿಕ್ಷಿಸುವಾಗ ಯಾವ ಪ್ರಭಾವಕ್ಕೂ ಒಳಗಾಗದೇ ವಿಥೌಟ್ ಫಿಯರ್ ಆರ್ ಫೇವರ್ ಅವರನ್ನು ಶಿಕ್ಷಿಸಬೇಕು. ಇದರಿಂದ ರಾಜ್ಯದ ಗೌರವವನ್ನು ಉಳಿಸಿಕೊಂಡು ಬಂದಂತಾಗುತ್ತದೆ. ಯಾವ ಧ್ಯೇಯ ಧೋರಣೆಗಳನ್ನು ಅನುಸರಿಸಿಕೊಂಡು ಹೋಗಬೇಕು ಎಂದು ಇದೆಯೋ ಅದನ್ನು ಅನುಸರಿಸಬೇಕು. ರಾಷ್ಟ್ರದ ಗೌರವವನ್ನು ಕಾಪಾಡಬೇಕು. ನಾವು ಈಗ ಸಮಾಜವಾದದ ಮೇಲೆ ನಿಂತಿರುವುದರಿಂದ ಇದರ ಪ್ರಣಾಳಿಕೆಗಳಿಗೆ ಅನುಸಾರವಾಗಿ ನಮ್ಮ ಧ್ಯೇಯ ಧೋರಣೆಗಳನ್ನು ಅನುಸರಿಸಿಕೊಂಡು ಹೋಗುವುದು ಅವಶ್ಯಕ, ಜನತೆಗೆ ಕೆಲಸ ಮಾಡುವಾಗ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ನಮ್ಮ ದೇಶದಲ್ಲಿ ಜನತೆಗೆ ಒಳ್ಳೆಯದಾಗಬೇಕಾದರೆ ಇಂದು ನಮ್ಮ ದೇಶದಲ್ಲಿ ಕೆಲಸ ಮಾಡುವ ಅಧಿಕಾರಿಗಳ ಮೇಲೆ ಇದರ ಜವಾಬುದಾರಿ ನಿಂತಿದೆ. ಇಲ್ಲಿ ನಾವು ನೋಡಿದ ಹಾಗೆ ದೇಶದ ಮಹಾ ಸಮಸ್ಯೆಗಳ ಬಗ್ಗೆ ಚರ್ಚೆ ಬಂದಾಗ, ಇದರಲ್ಲಿ ಆಡಳಿತದ ಪಕ್ಷವೇ ಆಗಲೀ ವಿರೋಧ ಪಕ್ಷವೇ ಆಗಲಿ ಬೇರೆ ಬೇರೆಯಾಗಿಲ್ಲ ಎಲ್ಲರೂ ಒಗ್ಗಟ್ಟಿನಿಂದ ರಾಜ್ಯದ ಮಹಾ ಸಮಸ್ಯೆಗಳನ್ನು ಬಗೆಹರಿಸಬೇಕು ಎನ್ನುವ ದೃಷ್ಟಿಯಿಂದ ಇಲ್ಲಿ ಕೆಲಸ ಮಾಡುತ್ತಿದ್ದೇವೆ. ಇದರಲ್ಲಿ ಪಕ್ಷಾತೀತವಾಗಿ ಎಲ್ಲರೂ ಕೆಲಸ ಮಾಬೇಕೆಂದು ಮಾಡುತ್ತಿದ್ದೇವೆ. ಇವೊತ್ತು ತಮಗೆಲ್ಲಾ ತಿಳಿದ ಹಾಗೆ ಕಾವೇರಿ ನೀರಿನ ಹಂಚಿಕೆ ಬಗ್ಗೆ ಆಗಲೀ ಮಹಾರಾಷ್ಟ್ರದ ಬಾರ್ಡರಿನ ವಿಚಾರದ ಬಗ್ಗೆಗಾಲೀ ಇಲ್ಲವೇ ಕೇಂದ್ರದವರಿಂದ ಪಡೆಯುವ ಹೆಚ್ಚಿನ ಸಹಾಯದ ಬಗೆಗಾಲೀ ಈ ಸಭೆಯ ಎಲ್ಲ ಸದಸ್ಯರೂ ಒಂದೇ ಅಭಿಪ್ರಾಯದಿಂದ ಕೆಲಸ ಮಾಡುತ್ತಿದ್ದಾರೆ. ಇದರಿಂದ ಪ್ರಜಾಪ್ರಭುತ್ವಕ್ಕೆ ಮಾನ್ಯತೆ ದೊರಕಿದಂತಾಗುತ್ತದೆ. ಮಾನ್ಯ ರಾಜ್ಯಪಾಲರೂ ಕೂಡ ಅವರ ಭಾಷಣದಲ್ಲಿ ಎಲ್ಲ ವಿಷಯಗಳನ್ನೂ ಚರ್ಚೆ ಮಾಡುವಾಗ ಗಿವ್ ಅಂಡ್ ಟೇಕ್ ಪಾಲಿಸಿ ಮೇಲೆ ಚರ್ಚೆ ಮಾಡಿ ಮಥನ ಮಾಡಿ ಕೆಲಸ ಮಾಡಬೇಕು ಎಂದು ಹೇಳಿದ್ದಾರೆ. ಇದರಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷ ಎನ್ನುವುದೇ ಇಲ್ಲ. ಎಲ್ಲರೂ ಜನತೆಗೆ ಅನುಕೂಲ ವಾಗುವಂತೆ ಕೆಲಸ ಮಾಡಿದರೆ ನ್ಯಾಯವಾಗುತ್ತದೆ ಮತ್ತು ಇದಕ್ಕೆ ತಕ್ಕಂತೆ ಪ್ರಜಾಪ್ರಭುತ್ವವೂ ಹೊಂದಿಕೊಳ್ಳುತ್ತದೆ. ಪ್ರಜಾಪ್ರಭುತ್ವದ ತತ್ವಗಳನ್ನು ಅನುಷ್ಠಾನಕ್ಕೆ ತರುವುದು ಅವಶ್ಯಕ. ಇವೆಲ್ಲಾ ದೃಷ್ಟಿಗಳಿಂದ ನಾವು ಆಲೋಚನೆ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳ ಮುಖಂಡತ್ವದಲ್ಲಿ ನಮ್ಮ ಪಕ್ಷದವರ ಹಾಗೂ ಇತರ ಪಕ್ಷಗಳವರ ಬೆಂಬಲ ಪಡೆದು ಕೆಲಸ ಮಾಡಿದರೆ ಮಹತ್ಸಾಧನೆ ಯಾಗುತ್ತದೆ ಎಂದು ಇಲ್ಲಿ ನಾವು ಎಲ್ಲರೂ ಏಕಕಂಠದಿಂದ ಹೇಳಲು ಇಚ್ಛೆಪಡುತ್ತೇನೆ. ನಮ್ಮ ರಾಜ್ಯಪಾಲರೇ ಅವರ ಭಾಷಣದಲ್ಲಿ ಅಪ್ಪಣೆ ಕೊಡಿಸಿರುವಂತೆ ನಾವೆಲ್ಲರೂ ಒಂದುಗೂಡಿ ದೇಶದ ಮಹತ್ಸಾಧನೆಗಳನ್ನು ಸಾಧಿಸಲು ಬಹಳ ವಿಶಾಲ ಮನಸ್ಸಿನಿಂದ ಸಹಕರಿಸಿ ಮನಸ್ಸು ಮಾಡಬೇಕು ಎಂದು ಮತ್ತು ಪ್ರಜಾಪ್ರಭುತ್ವದ ಭಾವನೆಗಳಿಗೆ ಅನುಗುಣವಾಗಿ ಸಾಮಾಜಿಕವಾಗಿ ಸಹಬುದ್ಧಿ ಯಿಂದ ಕೆಲಸ ಮಾಡಿದರೆ ದೇಶದ ಕಲ್ಯಾಣವಾದೀತು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೊನೆಯದಾಗಿ ಮಾನ್ಯ ಶ್ರೀ ಟಿ. ಕೆ. ತುಕೋಳ್ ಅವರ ರಿಪೋರ್ಟನ್ನೂ ಕೂಡ ಮಾನ್ಯ ರಾಜ್ಯಪಾಲರು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಆದರೆ ಈ ರಿಪೋರ್ಟನ್ನು ನೋಡಿದರೆ ಹೆದರಿಕೆಯಾಗುತ್ತದೆ. ಅದು 4 ವಾಲ್ಯೂಂ ಇದೆ. ಇದನ್ನು ಓದುವುದಕ್ಕೆ ಒಂದು ತಿಂಗಳು ಬೇಕಾಗುತ್ತದೆ. ಅದರ ವಿಷಯದಲ್ಲಿ ಏನು ಅಭಿಪ್ರಾಯ ಕೊಡಬೇಕು ಎಂಬುದು ನಮಗೆ ಗಾಬರಿಯಾಗಿದೆ. ಆದುದರಿಂದ ನಾನು ವಿನಯಪೂರ್ವಕವಾಗಿ ಭಿನ್ನವಿಸಿಕೊಳ್ಳುವುದು ಏನೆಂದರೆ ಅದನ್ನೆಲ್ಲಾ ಓದುವುದಕ್ಕೆ ಸ್ವಲ್ಪ ಅವಕಾಶ ಕೊಡಿ. ಮತ್ತು ಸರ್ಕಾರದವರೂ ತಾವೂ ಕೂಡ ಅಧ್ಯಯನ ಮಾಡಿ ಯಾವುದನ್ನು ಬಿಡಬೇಕು, ಯಾವುದನ್ನು ಮಾಡಬೇಕು ಎಂಬುದನ್ನು ತಿಳಿಸಿದರೆ ಎರಡನ್ನೂ ಆಲೋಚನೆ ಮಾಡಿ ಯಾವುದು ಮಾಡಬೇಕು ಎಂಬುದನ್ನು ಸಲಹೆ ಮಾಡುತ್ತೇವೆ. ಇದಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗುವುದರಿಂದ ನಾವು ಸಂಪನ್ಮೂಲಗಳನ್ನು ಹೆಚ್ಚು ಮಾಡಬೇಕು, ಕೇಂದ್ರದಿಂದ ಹೆಚ್ಚು ಸಹಾಯ ಪಡೆಯಬೇಕು. ಇದನ್ನು ಸರ್ಕಾರದವರು ಆಲೋಚನೆ ಮಾಡಿ ಆಡಳಿತ ಪಕ್ಷದ ಸಲಹೆ ಪಡೆದು, ಒಂದು ತೀರ್ಮಾನಕ್ಕೆ ಬಂದು ನಮ್ಮ ಮುಂದೆ ಇಟ್ಟರೆ, ಆಗ ನಾವು ಬಡ್ಜೆಟ್ ಹೊತ್ತಿಗೆ ಅದನ್ನೆಲ್ಲಾ ಅಧ್ಯಯನ ಮಾಡಿಕೊಂಡು ನಮ್ಮ ಸಲಹೆ ಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ತಮ್ಮ ಮುಂದೆ ಪ್ರಸ್ತಾಪಿಸುತ್ತೇನೆ.

(ಶ್ರೀ ಡಿ. ಎಂ. ಸಿದ್ದಯ್ಯ)

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸ್ಪಷ್ಟವಾದ ಮಾತುಗಳನ್ನು ಹೇಳಿದ್ದಾರೆ. ಸರ್ಕಾರದವರು ಮಾಡಿರುವುದನ್ನೂ, ಮಾಡಬೇಕಾದಂಥದನ್ನೂ ಕೂಡ ಹೇಳಿದ್ದಾರೆ. ಇದು ನಿಜವಾಗಿಯೂ ಮೇಲ್ಮಟ್ಟದ ಭಾಷಣ. ಅದಕ್ಕಾಗಿ ರಾಜ್ಯಪಾಲರನ್ನು ವಂದಿಸಿ, ಮತ್ತು ಅಧ್ಯಕ್ಷರು ವಂದನಾ ನಿರ್ಣಯವನ್ನು ಮಂಡಿಸಲು ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ರುದ್ರಪ್ಪ (ಚಿತಾಪೂರ್).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇದುವರೆಗೆ ಸರ್ಕಾರದವರು ವಿವಿಧ ರಂಗಗಳಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ್ದಂಥ ಪ್ರಗತಿಯ ಬಗ್ಗೆ ಹೇಳಿದ್ದಾರೆ. ಮತ್ತು ವಿವಿಧ ಕ್ಷೇತ್ರಗಳಲ್ಲಿ ಸರ್ಕಾರದ ಧೋರಣೆ ಏನು ಇದೆ, ಮತ್ತು ಸರ್ಕಾರದ ನೀತಿ ಏನು ಎಂಬುದು ಸ್ಪಷ್ಟವಾಗಿ ತಿಳಿಸಿದ್ದಾರೆ. ನನ್ನ ಸ್ನೇಹಿತರಾದಂಥ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಹೇಳಿದಂತೆ ಇದು ಬಹಳ ಮೇಲ್ಮಟ್ಟದ ಒಂದು ಭಾಷಣವಾಗಿದೆ. ಸರ್ಕಾರದವರು ಇಂದಿನವರೆಗೂ ಮಾಡಿದಂಥ ಕೆಲಸ ಮತ್ತು ಯಾವುದು ಮಾಡಿಲ್ಲ, ಮುಂದೆ ಏನು ಮಾಡಬೇಕು ಎಂಬುದನ್ನೂ ಕೂಡ ಅವರು ಹೇಳಿದ್ದಾರೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ವ್ಯವಸಾಯದ ಬಗ್ಗೆ ಪ್ರಸ್ತಾಪಿಸುತ್ತಾ ಈ ರೀತಿ ಹೇಳಿದ್ದಾರೆ. As a cumulative result of a number of short-term and long-term measures undertaken by the Department, it has been possible to achieve a real breakthrough in agricultural production in spite of the handicap of the adverse effect of delayed rains on the Kharif crop in certain parts of the State. ವ್ಯವಸಾಯ ಎಂಬುದು ನಮ್ಮ ರೈತರ ಮುಖ್ಯವಾದ ಒಂದು ಭಾರಿ ಉದ್ದಿಮೆ. ರಾಷ್ಟ್ರದ ಮತ್ತು ನಮ್ಮ ರಾಜ್ಯದ ಆದಾಯದಲ್ಲಿ ಸುಮಾರು ಅರ್ಧದಷ್ಟು ಆದಾಯ ಈ ವ್ಯವಸಾಯದಿಂದ ಬರುತ್ತದೆ. ಅಂದರೆ ವ್ಯವಸಾಯವು ಆರ್ಥಿಕ ರಂಗದಲ್ಲಿ ಯಾವ ರೀತಿ ಮಹತ್ವದ ಪಾತ್ರವನ್ನು ಹೊಂದಿದೆ ಎಂಬುದು ಗೊತ್ತಾಗುತ್ತದೆ. ವ್ಯವಸಾಯದಲ್ಲಿ ಸರ್ಕಾರವು ಬಹಳಮಟ್ಟಿಗೆ ಸಾಧಿಸಿದೆ ಎಂಬುದು ಗೊತ್ತಾಗುತ್ತದೆ. ರೈತರ ಆರ್ಥಿಕ ಪರಿಸ್ಥಿತಿ ಅನುಕೂಲವಾಗಬೇಕು, ರೈತರು ತಮ್ಮ ಹುಟ್ಟುವಳಿಯನ್ನು ಹೆಚ್ಚಿಸಬೇಕೆಂದು ನಾನಾ ರೀತಿಯಿಂದ ಸರ್ಕಾರದವರು ಅವರಿಗೆ ಸಹಾಯ ಮಾಡಿದ್ದಾರೆ. ರೈತನು ತನ್ನ ಭೂಮಿಯನ್ನು ಅಭಿವೃದ್ಧಿ ಮಾಡುವ ಸ್ಟೇಜ್‌ನಿಂದ ಹಿಡಿದುಕೊಂಡು ಬೆಳೆಯನ್ನು ಬೆಳೆದು ಹಾರ್ವೆಸ್ಟ್ ಮಾಡಿ ಮನೆಗೆ ತರುವವರೆಗೂ ಅವನಿಗೆ ಸರ್ಕಾರದವರು ಸೌಕರ್ಯಗಳನ್ನು ಕೊಟ್ಟಿದ್ದಾರೆ. ತನ್ನ ಭೂಮಿಯನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರವಾಗಿ ಸರ್ಕಾರದವರು 'ಲ್ಯಾಂಡ್ ರೆಕ್ಲಮೇಷನ್' ಕಾರ್ಯಕ್ರಮವನ್ನು ತೆಗೆದುಕೊಂಡು ಮತ್ತು ಭೂಮಿಯಲ್ಲಿರುವ ಸತ್ವವನ್ನು ಹಿಡಿದಿಡುವುದಕ್ಕಾಗಿ ಕಾಂಟೂರ್ ಬಂಡಿಂಗ್ ಕಾರ್ಯಕ್ರಮವನ್ನು ತೆಗೆದುಕೊಂಡು, ಬೆಳೆಗಳಿಗೆ ರೋಗ ಬಂದರೆ ಅದನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ ಔಷಧಿಗಳನ್ನು ಕೂಡ ಒದಗಿಸಿದ್ದಾರೆ. ಹೀಗೆ ನಾನಾ ರೀತಿಯಲ್ಲಿ ಸರ್ಕಾರದವರು ರೈತನಿಗೆ ಅನುಕೂಲ ಆಗಬೇಕೆಂದು ಸೌಕರ್ಯಗಳನ್ನು ಒದಗಿಸಿದ್ದಾರೆ. ಇದರಿಂದ ರೈತನು ತನ್ನ ಹುಟ್ಟುವಳಿಯನ್ನು ಹೆಚ್ಚಿಸಿದ್ದಾನೆ. ಈ ಮೂರು ನಾಲ್ಕು ವರ್ಷಗಳಲ್ಲಿ ವ್ಯವಸಾಯದ ಉತ್ಪನ್ನ ಪ್ರತಿಯೊಂದು ಎಕರೆಗೂ ಹೆಚ್ಚಾಗಿದೆ. 1956–57ರಲ್ಲಿ ರೈತನು ಉತ್ಪಾದನೆ ಮಾಡಿರುವುದನ್ನೂ 1963–64ರಲ್ಲಿ ಉತ್ಪಾದನೆ ಮಾಡಿರುವುದನ್ನೂ ಹೋಲಿಸಿ ನೋಡಿದರೆ ಇದು ತಿಳಿಯುತ್ತದೆ. ಬತ್ತದ ಬೆಳೆ ತೆಗೆದುಕೊಂಡರೆ 1956-57ರಲ್ಲಿ ಒಂದು ಎಕರೆಗೆ 1,162 ಪೌಂಡ್ ಇದ್ದುದು 1963–64ರಲ್ಲಿ 1,281 ಪೌಂಡ್ ಆಗಿದೆ, ಜೋಳ 1956–57ರಲ್ಲಿ 308 ಪೌಂಡ್ ಇದ್ದುದು 1963–64ರಲ್ಲಿ 419 ಪೌಂಡ್ ಆಗಿದೆ, ಗೋಧಿ 1956–57ರಲ್ಲಿ ಒಂದು ಎಕರೆಗೆ 739 ಪೌಂಡ್ ಉತ್ಪಾದನೆ ಇದ್ದುದು 1963–64ರಲ್ಲಿ 799 ಪೌಂಡ್ ಆಗಿದೆ. ಹೀಗೆ ಒಂದು ಎಕರೆಗೆ ಆಹಾರ ಧಾನ್ಯಗಳ ಉತ್ಪಾದನೆ 1963–64ರಲ್ಲಿ ಹೆಚ್ಚಾಗಿದೆ. ಇದಕ್ಕೆ ಕಾರಣವೇನೆಂದರೆ ಸರ್ಕಾರದವರು ಅನೇಕ ಸೌಲಭ್ಯಗಳನ್ನು, ಸೌಕರ್ಯಗಳನ್ನು ಕೊಟ್ಟಿರುವುದು.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೈಬ್ರಿಡ್ ಬೀಜಗಳ ಬಗೆಗೆ ರೈತರಿಂದ ಸ್ವಾಗತವಿದೆ, ರೈತರು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಹೈಬ್ರಿಡ್ ಜೋಳ ತೆಗೆದುಕೊಂಡು ಬೆಳೆಗಳನ್ನು ಬೆಳೆಸುತ್ತಿದ್ದಾರೆ ಎಂದು ಹೇಳಿದ್ದಾರೆ. ಮೆಕ್ಕೆ ಜೋಳ ಒಂದು ಎಕರೆಗೆ ಸರಾಸರಿ 4,500ರಿಂದ 5,000 ಪೌಂಡ್ ಇಳುವರಿ ಕೊಡುತ್ತದೆ, ಸಜ್ಜೆ 2 ಸಾವಿರದಿಂದ ಮೂರು ಸಾವಿರ ಪೌಂಡ್ ಇಳುವರಿ ಕೊಡುತ್ತದೆ ಮತ್ತು ಗೋಧಿ ಒಂದು ಎಕರೆಗೆ ಸರಾಸರಿ 3 ಸಾವಿರದಿಂದ ಮೂರು ಸಾವಿರದ

ಐದುನೂರು ಪೌಂಡ್ ಇಳುವರಿ ಕೊಡುತ್ತದೆ. ಹೀಗೆ ಹೆಚ್ಚು ಇಳುವರಿ ಕೊಡತಕ್ಕ ಹೈಬ್ರಿಡ್ ಬೀಜಗಳನ್ನು ಉಪಯೋಗ ಮಾಡಿ ರೈತನಾದವನು ಹೆಚ್ಚು ಬೆಳೆಯನ್ನು ಬೆಳೆದಿದ್ದಾನೆ.

ನಾನು ಹೇಳುವುದೇನೆಂದರೆ, ಸರ್ಕಾರದವರು ಸಾಕಷ್ಟು ಪ್ರಗತಿಯನ್ನು ವ್ಯವಸಾಯದಲ್ಲಿ ಸಾಧಿಸಿದ್ದಾರೆ. ಆದರೆ ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ, ಆಂಧ್ರ ಪ್ರದೇಶಕ್ಕಾಗಲೀ, ಮದ್ರಾಸ್ ರಾಜ್ಯಕ್ಕಾಗಲೀ, ಮಹಾರಾಷ್ಟ್ರಕ್ಕಾಗಲೀ ಹೋಲಿಸಿದರೆ ಅವರು ನಮಗಿಂತ ಹೆಚ್ಚಿನ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸಿದ್ದಾರೆ. ಏಕೆಂದರೆ ಕೇಂದ್ರ ಸರ್ಕಾರದವರು ರಾಜ್ಯಸರ್ಕಾರಗಳಿಗೆ ಕೊಡತಕ್ಕ ಕೇಂದ್ರದ ನೆರವು ಸಾಲವಾಗಲೀ ಸಹಾಯ ಧನವಾಗಲೀ, ಅದನ್ನೆಲ್ಲ ಬಹು ಬೇಗನೆ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಕ್ಕೆ ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಆದರೆ ರಾಜ್ಯಸರ್ಕಾರ ಇದರಲ್ಲಿ ಬಹಳ ಹಿಂದುಳಿದಿದೆ ಎನ್ನುವ ಮಾತನ್ನು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಇದಕ್ಕೆ ನನ್ನ ಸೂಕ್ತವಾದ ಸಲಹೆ ಏನೆಂದರೆ ಅನೇಕ ರಾಜ್ಯಗಳಿಂದ ಕೇಂದ್ರ ಸರ್ಕಾರದಲ್ಲಿ ತಮ್ಮ ಅಧಿಕಾರಿಗಳನ್ನು ಇಟ್ಟಿದ್ದಾರೆ. ನಮ್ಮ ಸರ್ಕಾರದಿಂದಲೂ ಎರಡು ಮೂರು ಜನ ಐ.ಎ.ಎಸ್. ಅಧಿಕಾರಿಗಳು ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿಂದ ಹೋದಂಥ ಯೋಜನೆಗಳನ್ನು ಪ್ರೋಸೆಸ್ ಮಾಡಿ, ನಮಗೆ ಕೊಡತಕ್ಕ ಸ್ಕೀಮುಗಳನ್ನು ಮಂಜೂರು ಮಾಡಲಿಕ್ಕೆ ನಮ್ಮ ಅಧಿಕಾರಿಗಳು ಕೇಂದ್ರದಲ್ಲಿದ್ದರೆ ಅನುಕೂಲವಾಗುತ್ತದೆ. ನಮ್ಮ ಸರ್ಕಾರದ 2–3 ಅಧಿಕಾರಿಗಳು ಅಲ್ಲಿದ್ದರೂ ಅದರಿಂದ ಹೆಚ್ಚು ನಮಗೆ ಅನುಕೂಲವಾಗಿಲ್ಲ. ರಾಜ್ಯಸರ್ಕಾರದಲ್ಲಿ ನಾಲ್ಕೈದು ಜನ ಸೂಪರ್ ಟೈಂ ಸ್ಕೇಲ್ ಅಧಿಕಾರಿಗಳಿದ್ದಾರೆ. ಅವರನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇ ಆದರೆ ವ್ಯವಸಾಯ ಇಲಾಖೆಯಿಂದ ಬರತಕ್ಕ ಸ್ಕೀಮುಗಳನ್ನು ಬಹಳ ತ್ವರಿತವಾಗಿ ಮತ್ತು ವೇಗವಾಗಿ ಪ್ರೋಸೆಸ್ ಮಾಡಿ ನಮ್ಮ ಸ್ಕೀಮುಗಳನ್ನು ಮಂಜೂರು ಮಾಡಲಿಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಸೂಪರ್ ಟೈಂ ಸ್ಕೇಲ್ ಆಫೀಸರ್ಸ್ ನಮ್ಮ ರಾಜ್ಯದಲ್ಲಿ ಏನಿದ್ದಾರೆ ಅವರನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟು ನಮ್ಮ ಸರ್ಕಾರದಿಂದ ಹೋಗತಕ್ಕ ಸ್ಕೀಮುಗಳನ್ನು ತ್ವರಿತವಾಗಿ ಮತ್ತು ವೇಗವಾಗಿ ಮಂಜೂರು ಆಗಲಿಕ್ಕೆ ಅನುಕೂಲ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಹಕಾರ ಸಂಸ್ಥೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯಾಗಬೇಕಾಗಿದ್ದರೆ ಪ್ರತಿಯೊಂದು ಗ್ರಾಮದಲ್ಲಿಯೂ ಒಂದು ಗ್ರಾಮ ಪಂಚಾಯಿತಿ, ಒಂದು ಸಹಕಾರ ಸಂಘ ಇರಬೇಕು. ಆರ್ಥಿಕ ಕ್ಷೇತ್ರದಲ್ಲಿ ಪ್ರಗತಿ ಆಗಬೇಕಾಗಿದ್ದರೆ ಸಹಕಾರ ಸಂಘಗಳ ಮೂಲಕ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಅಭಿವೃದ್ಧಿ ಆಗಬೇಕಾಗಿದ್ದರೆ ಗ್ರಾಮ ಪಂಚಾಯಿತಿ ಮೂಲಕ. ಆದ್ದರಿಂದ ಸಹಕಾರ ಸಂಘಗಳು ಆರ್ಥಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡತಕ್ಕ ಪಾತ್ರವನ್ನು ವಹಿಸುತ್ತಿವೆ. ರೈತರ ಆರ್ಥಿಕ ಸ್ಥಿತಿ ಉತ್ತಮ ಆಗಬೇಕು, ರೈತರಿಗೆ ಅನುಕೂಲವಾಗಬೇಕು ಎಂದು ಸಹಕಾರ ಸಂಘಗಳಿಂದ ಅಲ್ಪಕಾಲಾವಧಿ ಸಾಲ ಮತ್ತು ಮಧ್ಯಮ ಕಾಲಾವಧಿ ಸಾಲ ಎಂದು ಸುಮಾರು 25 ಕೋಟಿ ರೂಪಾಯಿಗಳನ್ನು ಸಾಲ ರೂಪವಾಗಿ ಕೊಟ್ಟಿದ್ದಾರೆ. ಈಗ ಎರಡು ಮೂರು ವರ್ಷಗಳಲ್ಲಿ 33 ಸಾವಿರ ಸಾವಿರ ಬಾವಿಗಳನ್ನು ತೋಡಲಿಕ್ಕೆ ಸಾಲಗಳನ್ನು ಕೊಟ್ಟಿದ್ದಾರೆ. ಭೂ ಅಭಿವೃದ್ಧಿ ಬ್ಯಾಂಕುಗಳು ಮತ್ತು ಕೇಂದ್ರ ಸಹಕಾರಿ ಬ್ಯಾಂಕಿನಿಂದ ಮತ್ತು ಇನ್ನೂ ಇತರ ಬ್ಯಾಂಕುಗಳಿಂದ ರೈತರಿಗೆ ಅನುಕೂಲವಾಗಲಿಕ್ಕೆ ಮತ್ತು ಹೆಚ್ಚು ಉತ್ಪಾದನೆ ಮಾಡಲಿಕ್ಕೆ ಸಹಕಾರ ಸಂಘಗಳಿಂದ ಸಹಾಯ ಮಾಡಿದ್ದಾರೆ. ಸಹಕಾರ ಸಂಘಗಳು ಗ್ರಾಮಾಂತರ ಪ್ರದೇಶಗಳಲ್ಲಿ ಬೆಳೆದಿವೆ. ಆದರೆ ಇದರಿಂದ ಲಾಭ ಎಷ್ಟರ ಮಟ್ಟಿಗೆ ರೈತರಿಗೆ ಆಗಿದೆ ಎಂದು ನೋಡಿದರೆ ಸುಮಾರು ಸೇಕಡ 40 ಜನರಿಗೆ ಮಾತ್ರ ಪ್ರತಿ ವರ್ಷವೂ ಸೌಕರ್ಯ ಮತ್ತು ಸೌಲಭ್ಯಗಳು ಮುಟ್ಟುತ್ತಿವೆ. ಇನ್ನುಳಿದ ಸೇಕಡ 60 ಜನರಿಗೆ ಈ ಸಹಕಾರ ಸಂಘಗಳಿಂದ ಅನುಕೂಲವಾಗಿಲ್ಲ, ಸೌಲಭ್ಯಗಳು ಸಿಕ್ಕಿಲ್ಲ. ಆದ್ದರಿಂದ ಸಹಕಾರ ಸಂಘಗಳಿಂದ ಇನ್ನೂ ಸೇಕಡ 60 ಜನರಿಗೆ ಅನುಕೂಲವಾಗಬೇಕು. ಇಲ್ಲದೆ ಇದ್ದರೆ ಶ್ರೀಮಂತನು ಶ್ರೀಮಂತನಾಗುತ್ತ ಹೋಗುತ್ತಾನೆ, ಮತ್ತು ಬಡವನಾದವನು ಬಡವನಾಗಿಯೇ ಉಳಿಯುತ್ತಾನೆ. ಈ ನೀತಿ ಬದಲಾವಣೆಯಾಗಬೇಕು ; ಇದರಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಬೇಕು ಮತ್ತು ಸಹಕಾರ ಸಂಘಗಳಿಂದ ಎಲ್ಲರಿಗೂ ಅನುಕೂಲವಾಗುವಂತೆ ಕೆಲಸ ಮಾಡಬೇಕು. ಸಹಕಾರ ಸಂಘಗಳಲ್ಲಿ 'ಮಿಸ್ ಯೂಸ್, ಮಿಸ್ ಅಪ್ರೋಪ್ರಿಯೇಷನ್ ಇದೆ. The success or failure of the co-operation movement depends upon the integrity, honesty and lastly the interest of the co-operators. ಸಹಕಾರ ಸಂಘಗಳಲ್ಲಿ ಕೆಲಸ ಮಾಡುವವರ ಮೇಲೆ ಬಹಳ ಜವಾಬ್ದಾರಿ ಇದೆ. ಆದುದರಿಂದ ಸರಕಾರದವರು ಎಷ್ಟೇ ಸಹಾಯ ಮತ್ತು ಮಾರ್ಗದರ್ಶನ ಮಾಡಿದರೂ ಕೂಡ ಸಹಕಾರ ಸಂಘಗಳನ್ನು ಸುಧಾರಣೆ ಮಾಡುವ ಜವಾಬ್ದಾರಿ

(ಶ್ರೀ ಎಸ್. ರುದ್ರಪ್ಪ)

ಕೋಆಪರೇಟಿವ್ ಲೀಡರ್‌ಷಿಪ್ ಮೇಲೆ ಇದೆ. ಒಂದು ವೇಳೆ ಸಹಕಾರ ಸಂಘಗಳಲ್ಲಿ ಅಥವಾ ಸಹಕಾರ ಆಂದೋಳನದಲ್ಲಿ ಯಾವ ರೀತಿಯ ಬದಲಾವಣೆಯೂ ಆಗದಿದ್ದರೆ ಈಗ ಅಲ್ಲಿ ನಡೆಯುತ್ತಿರುವ ಮಿಸ್ ಯೂಸ್, ಮಿಸ್ ಅಪ್ರೋಪ್ರಿಯೇಷನ್ ತಪ್ಪಿಸಲು ಸರಕಾರ ಬೇರೆ ಏಜೆನ್ಸಿಗೆ ಪ್ರೋತ್ಸಾಹ ಮಾಡಬೇಕಾಗುತ್ತದೆ. ಈಗ ಕೆನರಾ ಬ್ಯಾಂಕು, ಸಿಂಡಿಕೇಟ್ ಬ್ಯಾಂಕು ಮುಂತಾದ ಎಷ್ಟೋ ಕಮರ್ಷಿಯಲ್ ಬ್ಯಾಂಕುಗಳಿವೆ, ಅವು ಮುಂದೆ ಬಂದು ರೈತರಿಗೆ ಸಹಾಯ, ಸೌಲಭ್ಯ ನೀಡುತ್ತಿವೆ. ಅವು ಯಾವ ರೀತಿಯಲ್ಲಿ ಯಶಸ್ವಿಯಾಗಿ ಕೆಲಸ ಮಾಡುತ್ತಿವೆ ಎಂಬುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಅದೇ ಸಹಕಾರ ಸಂಘಗಳು ಆ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಸಹಕಾರ ಸಂಘಗಳಲ್ಲಿ ರಿಕವರಿ ಪೊಸಿಷನ್ ಬಹಳ ಚಿಂತಾಜನಕವಾಗಿದೆ. ಅಲ್ಲಿ ಬರಬೇಕಾದ ಹಣ ಸರಿಯಾಗಿ ವಸೂಲಾಗುತ್ತಿಲ್ಲ. ಅವುಗಳಲ್ಲಿ ಬಹಳಮಟ್ಟಿಗೆ ಗ್ರಾಮಾಂತರಗಳಲ್ಲಿರುವ ಪುಡಾರಿಗಳ ಹಾವಳಿ ಹೆಚ್ಚಾಗಿದೆ. ಮತ್ತು, ಸಹಕಾರ ಸಂಸ್ಥೆಗಳು ರೈತರು ಉತ್ಪಾದನೆ ಮಾಡಿದ ಮಾಲನ್ನು ಮಾರ್ಕೆಟಿಂಗ್ ಸೊಸೈಟಿಗಳ ಮೂಲಕ ಮಾರಾಟ ಮಾಡಬೇಕಾಗುತ್ತದೆ. ಈ ಕೆಲಸ ಕೂಡ ಈ ದಿವಸ ಸಹಕಾರ ಸಂಘಗಳು ಮಾಡುತ್ತಿಲ್ಲ. ಹೀಗೆ ಅನೇಕ ಲೋಪದೋಷಗಳಿವೆ. ಇದನ್ನು ಗಮನಿಸಿ ಕೋಆಪರೇಟಿವ್ ಮೂವ್‌ಮೆಂಟಿನಲ್ಲಿ ಕೆಲಸ ಮಾಡುವ ನಾಯಕರು ಸುಧಾರಣೆ ಮಾಡಬೇಕು. ಇಲ್ಲದಿದ್ದರೆ ಸರಕಾರದವರು ನಾನು ಹೇಳಿದಂತೆ ಬೇರೆ ಕಮರ್ಷಿಯಲ್ ಬ್ಯಾಂಕುಗಳಿಗೆ ಉತ್ತೇಜನ ಕೊಡಬೇಕಾಗುತ್ತದೆಯೋ ಏನೋ ಎಂದು ನನಗನ್ನಿಸುತ್ತದೆ.

3-30 P.M.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ರಂಗದಲ್ಲಿ ಬಹಳಮಟ್ಟಿಗೆ ಪ್ರಗತಿ ಸಾಧಿಸಿದ್ದಾರೆ. ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆ ಸದ್ಯಕ್ಕೆ 32,165 ಇವೆ ಎಂದು ತಿಳಿಸಿದ್ದಾರೆ. ಪ್ರಾಥಮಿಕ ಶಿಕ್ಷಣ ರಂಗದಲ್ಲಿ ಕ್ವಾಲಿಟಿ ಇಲ್ಲ, ಸ್ಟ್ಯಾಂಡರ್ಡ್ ಆಫ್ ಎಜುಕೇಷನ್ ಇಂಪ್ರೂವ್ ಆಗಿಲ್ಲ ಎಂಬ ದೂರು ಎಲ್ಲಾ ಕಡೆಯೂ ಇದೆ. ಇದು ಸರಕಾರಕ್ಕೆ ಮನವರಿಕೆಯಾಗಿದೆ, ಈ ಸಂಬಂಧದಲ್ಲಿ ಸಾಕಾದಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಸುಮಾರು 94 ಸಾವಿರ ಉಪಾಧ್ಯಾಯರು ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಸೇಕಡ 72 ಉಪಾಧ್ಯಾಯರು ಟ್ರೈನಿಂಗ್ ಆದವರಿದ್ದಾರೆ. ಜೂನಿಯರ್ ಪ್ರೈಮರಿ ಶಾಲೆಗಳಲ್ಲಿ ಸೇಕಡ 57 ಮಂದಿಗೆ ಮಾತ್ರ ಟ್ರೈನಿಂಗ್ ಆಗಿದೆ. ಈ ಪ್ರಾಥಮಿಕ ಹಂತದಲ್ಲಿ ಶಿಕ್ಷಕರಿಗೆ ತರಬೇತು ಇನ್ನೂ ಕೊಡಬೇಕಾಗಿದೆ. ಕ್ವಾಲಿಟಿ ಆಫ್ ಎಜುಕೇಷನ್ ಇಂಪ್ರೂವ್ ಮಾಡಬೇಕೆಂದು ಪ್ರತಿ ವರ್ಷ ಸುಮಾರು 5 ಸಾವಿರ ಉಪಾಧ್ಯಾಯರಿಗೆ ಸರಕಾರದವರು ಟ್ರೈನಿಂಗ್ ಕೊಡುತ್ತಿದ್ದಾರೆ. ಇದೇ ರೀತಿ ಮುಂದುವರೆಸಿದರೆ ನಾಲ್ಕನೆಯ ಯೋಜನೆಯ ಕೊನೆಯಲ್ಲಿ ಸುಮಾರು ಸೇಕಡ 97 ಮಂದಿಗೆ ಟ್ರೈನಿಂಗ್ ದೊರೆಯಬಹುದೆಂದು ಹೇಳುತ್ತಾರೆ. ಟ್ರೈನಿಂಗ್ ಕೊಡುವ ವಿಷಯದಲ್ಲಿ ಯಾವ ರೀತಿಯ ಧೋರಣೆಯನ್ನು, ನೀತಿಯನ್ನು ಸರಕಾರದವರು ಅನುಸರಿಸುತ್ತಿದ್ದಾರೆಂದರೆ ತಮಗೆ ಬೇಕಾದವರನ್ನು ಟ್ರೈನಿಂಗಿಗೆ ಕಳುಹಿಸುವುದು, ಜೂನಿಯರ್ ಉಪಾಧ್ಯಾಯರನ್ನು ಕಳಿಸಿ ಸೀನಿಯರ್ ಉಪಾಧ್ಯಾಯರನ್ನು ಕಳುಹಿಸದಿರುವ ಸಂದರ್ಭಗಳೂ ಇವೆ. ಇದರಿಂದ ಪ್ರಾಥಮಿಕ ಶಾಲೆಗಳಲ್ಲಿ ಕೆಲಸಮಾಡುವ ಅಧ್ಯಾಪಕರಲ್ಲಿ ಒಂದು ಅತೃಪ್ತಿಯುಂಟಾಗಿದೆ. ಆದುದರಿಂದ ಸೀನಿಯಾರಿಟಿ ಕಂ ಮೆರಿಟ್ ಬೇಸಿಸ್ ಮೇಲೆ ಉಪಾಧ್ಯಾಯರನ್ನು ಟ್ರೈನಿಂಗಿಗೆ ಕಳಿಸಿದರೆ ಇರುವ ಅತೃಪ್ತಿಯು ಹೋಗಿ ಸಮಾಧಾನಕರವಾಗಿ ಕೆಲಸವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಗ್ರಾಮಾಂತರಗಳಲ್ಲಿ ಸರಕಾರದವರು ಪ್ರಾಥಮಿಕ ಶಾಲೆಗಳ ಕಟ್ಟಡಗಳಿಗಾಗಿ ಸಾಕಾದಷ್ಟು ಹಣವನ್ನು ಕೊಟ್ಟಿದ್ದಾರೆ. ತಾಲ್ಲೂಕು ಬೋರ್ಡುಗಳಿಗೆ ಪ್ರತಿ ವರ್ಷ ಒಂದೊಂದು ಶಾಲಾ ಕಟ್ಟಡಕ್ಕಾಗಿ ಒಂದು ಸಾವಿರ ರೂಪಾಯಿ ಗ್ರಾಂಟನ್ನು ಕೊಡುತ್ತಿದ್ದಾರೆ. ಈಗ ಗಾಂಧಿ ಸೆಂಟಿನರಿ ಸೆಲಬ್ರೇಷನ್ ಪ್ರಾರಂಭವಾಗಿನಿಂದ ಒಂದೊಂದು ರೂಮಿಗೆ 2 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ, ಇದರಿಂದ ಹೆಚ್ಚು ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆ. ಈ ಅನುಕೂಲವನ್ನು ಪಡೆದು ತಾಲ್ಲೂಕು ಬೋರ್ಡು ಮತ್ತು ಮುನಿಸಿಪಾಲಿಟಿಯವರು ಕೆಲಸ ಪ್ರಾರಂಭಿಸಿದರೆ ಪ್ರತಿಯೊಂದು ಹಳ್ಳಿಯಲ್ಲೂ ಶಾಲಾ ಕಟ್ಟಡವನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆ ಎಂದು ಅನ್ನಿಸುತ್ತದೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸುತ್ತಾ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ವಿಚಾರ ಹೇಳಿದ್ದಾರೆ. ಹೊಸ ಹೊಸ ಕೈಗಾರಿಕೆಗಳನ್ನು ರಾಜ್ಯದಲ್ಲಿ ಸ್ಥಾಪಿಸುವುದಕ್ಕೆ ಅನುಕೂಲವಾದ ವಾತಾವರಣವನ್ನುಂಟು ಮಾಡಿದ್ದಾರೆಂದು ಹೇಳಿದ್ದಾರೆ. ಈಗಾಗಲೆ ರಾಜ್ಯದ ಮುಖ್ಯ ಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳು ಇದರ ಬಗ್ಗೆ ಸಾಕಾದಷ್ಟು ಪ್ರಯತ್ನ ನಡೆಸಿ ಹೊರಗಿನವರಿಗೆ ಆಮಂತ್ರಣ ಕೊಟ್ಟಿದ್ದಾರೆ. ಮೈಸೂರು ರಾಜ್ಯದಲ್ಲಿ ಉದ್ಯಮ ಸ್ಥಾಪಿಸುವವರಿಗೆ ಎಲ್ಲ ವಿಧವಾದ ಸೌಕರ್ಯ ಮತ್ತು ಸೌಲಭ್ಯ ಕೊಡುವುದಾಗಿ ತಿಳಿಸಿದ್ದಾರೆ. ನೀರಿನ ದರದಲ್ಲಿ ಕಡಮೆ ಮಾಡುವುದು, ವಿದ್ಯುಚ್ಛಕ್ತಿಗೆ ರಿಬೇಟ್ ಕೊಡುವುದು, ಮಾರಾಟ ತೆರಿಗೆ ಬಗ್ಗೆ ರಿಯಾಯಿತಿ ಮತ್ತು ಆಕ್ಟ್ರಾಯ ಬಗ್ಗೆ ರಿಯಾಯಿತಿ ಮುಂತಾದ ಸಹಾಯ ಮಾಡುವುದಾಗಿ ಹೇಳಿದ್ದಾರೆ. ಆದರೆ ಮೈಸೂರು ರಾಜ್ಯದಲ್ಲಿ ಯಾರಾದರೂ ಮುಂದೆ ಬಂದರೆ, ಹೊಸಹೊಸ ಕೈಗಾರಿಕೆ ಸ್ಥಾಪಿಸಲು ಬಂದರೆ ಅವರಿಗೆ ಮೊದಲು ಪ್ರಾಶಸ್ತ್ಯ ಕೊಡಬೇಕು, ಇಲ್ಲ ಯಾರೂ ಮುಂದೆ ಬರದಿದ್ದರೆ ಹೊರಗಿನವರಿಗೆ ಅವಕಾಶ ಕೊಡಬೇಕು. ಕೈಗಾರಿಕೆಗಳನ್ನು ಸ್ಥಾಪಿಸುವಾಗ ಎಲ್ಲವನ್ನು ಬೆಂಗಳೂರಿನಲ್ಲಾಗಲೀ ಅಥವಾ ಹುಬ್ಬಳ್ಳಿ ಮುಂತಾದ ದೊಡ್ಡ ಕಡೆಗಳಲ್ಲೇ ಸ್ಥಾಪಿಸದೆ ದೇಶದ ಎಲ್ಲಾ ಭಾಗಗಳಲ್ಲೂ ಸ್ಥಾಪಿಸಲು ಸರಕಾರ ಪ್ರಯತ್ನ ಮಾಡಬೇಕು.

ಸ್ಥಳದ ಜನರಿಗೆ ನೌಕರಿ ಕೊಡಬೇಕು, ಅದೂ ಕೂಡ ಅವರಿಗೆ ಹೇಳಬೇಕು, ಏಕೆಂದರೆ ಹೊರಗಿನಿಂದ ಬಂದಿರತಕ್ಕ ಉದ್ಯಮದಾರರು ಇದ್ದಾರೆ, ಅವರು ಇಲ್ಲಿಯ ಜನರಿಗೆ ಸಾಕಾದಷ್ಟು ನೌಕರಿಯಲ್ಲಿ ಅವಕಾಶ ಕೊಟ್ಟಿಲ್ಲ ಬೇರೆಯವರಿಗೆ ಪ್ರಿಫರನ್ಸ್ ಕೊಡುತ್ತಾ ಇದ್ದಾರೆ ಎಂಬ ಕೂಗು ಏನಿದೆ ಅದನ್ನು ದೂರ ಮಾಡಬೇಕು. ಅದನ್ನೂ ಕೂಡ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಅನುಕೂಲ ಮಾಡುತ್ತಾರೆ ಎಂದು ನನಗೆ ಅನಿಸುತ್ತದೆ.

ಸ್ವಾತಂತ್ರ್ಯ ಪಡೆದು ಸುಮಾರು 20 ವರ್ಷಗಳಾದರೂ ಕೂಡ ಗ್ರಾಮಗಳಲ್ಲಿ ಕುಡಿಯುವ ನೀರು ಇಲ್ಲ. ಸರ್ಕಾರದವರು ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದರೆ, ಸುಮಾರು 11 ಸಾವಿರದ 256 ಬಾವಿಗಳನ್ನು ತೋಡಿಸಿದ್ದಾರೆ. ಸುಮಾರು 3 ಸಾವಿರದ 486 ಬಾವಿಗಳ ಕಟ್ಟಡ ಅನೇಕ ಹಂತದಲ್ಲಿ ಇವೆ. ಇನ್ನೂ 3 ಸಾವಿರದ 288 ಹಳ್ಳಿಗಳಲ್ಲಿ ಬಾವಿಗಳು ಇಲ್ಲ ಎಂದು ಹೇಳಿದ್ದಾರೆ. ಇಂತಹ ಒಂದು ಪರಿಸ್ಥಿತಿ ಏನಿದೆ ಇದು ಬಹಳ ಚಿಂತಾಜನಕವಾದದ್ದು. ಏಕೆಂದರೆ ಜನರಿಗೆ ನಾವು ಸೌಕರ್ಯ ಮಾಡಿಕೊಡುತ್ತೇವೆ ಎಂದು ಹೇಳುತ್ತೇವೆ, ಕುಡಿಯಲಿಕ್ಕೆ ನೀರು ಕೂಡ ವ್ಯವಸ್ಥೆ ಮಾಡದಿದ್ದರೆ ಪ್ರಜಾಪ್ರಭುತ್ವದ ಅರ್ಥವೇನು ಎಂದು ಇವತ್ತಿನದಿವಸ ಹಳ್ಳಿಗರು ಕೇಳುತ್ತಾರೆ ? ಅವರಿಗೆ ಒಂದು ಶಾಲೆ, ಕುಡಿಯುವ ನೀರಿನ ಬಾವಿ ಮತ್ತು ಗ್ರಾಮಪಂಚಾಯ್ತಿ ಕೊಟ್ಟರೆ ಅವರು ಎಷ್ಟೋ ಸರ್ಕಾರದವರನ್ನು ಸ್ಮರಿಸುತ್ತಾರೆ. ಇವತ್ತಿನ ದಿವಸ ನೋಡಲಿಕ್ಕಾಗಿ ನಾವು ಗಾಂಧೀಜಿ ಸೆಂಟಿನರಿ ಸೆಲಿಬ್ರೆಷನ್ಸ್ ಮಾಡುತ್ತಾ ಇದ್ದೇವೆ. ಗಾಂಧೀಜಿಯವರ ಉದಾತ್ತ ಭಾವನೆಗಳನ್ನು ಅನುಷ್ಠಾನದಲ್ಲಿ ತರಬೇಕೆಂದು ನಾವೆಲ್ಲಾ ಘಂಟಾ ಘೋಷವಾಗಿ ಹೇಳುತ್ತೇವೆ. ಗ್ರಾಮಗಳಲ್ಲಿ ಕುಡಿಯುವ ನೀರು ಇಲ್ಲ ಎಂದರೆ ಬಹಳ ಖೇದದ ಸಂಗತಿ. ಆದ್ದರಿಂದ ತಾಲ್ಲೂಕು ಬೋರ್ಡುಗಳಿಗೆ ಮತ್ತು ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಪಬ್ಲಿಕ್ ಹೆಲ್ತ್ ಡಿಪಾರ್ಟ್‌ಮೆಂಟ್ ಇಂಜಿನಿಯರಿಂಗ್ ಡಿವಿಜನ್‌ಗೆ ಆದೇಶ ಕೊಟ್ಟು ಈ ವಿಷಯದಲ್ಲಿ ಕ್ರಮ ತೆಗೆದುಕೊಂಡು ಈ ವರ್ಷ ಸಾಕಾದಷ್ಟು ಬಾವಿಗಳನ್ನು ಕಟ್ಟಿಸಬೇಕು. ನೀರಿನ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರೂರಲ್ ವಾಟರ್ ಸಪ್ಲೈ ಸ್ಕೀಂ ಬಗ್ಗೆ ಹೇಳುವುದಾದರೆ ಈಗಾಗಲೇ 195 ಯೋಜನೆಗಳು ಇವೆ ಎಂದು ಹೇಳಿದ್ದಾರೆ. ಇನ್ನು 471 ಯೋಜನೆಗಳು ವಿವಿಧ ಹಂತದಲ್ಲಿ ಇವೆ ಎಂದು ಹೇಳಿದ್ದಾರೆ. ಹೀಗೆ 250 ಯೋಜನೆಗಳನ್ನು ಸರ್ಕಾರ ಇಟ್ಟುಕೊಂಡು ಸುಮಾರು ಎರಡು ವರ್ಷ ಆಯಿತು ಎಂದು ಕಾಣುತ್ತದೆ. ಪ್ರತಿ ಜಿಲ್ಲೆಯಲ್ಲೂ ಏನು ಪಿ. ಎಚ್. ಡಿ. ಡಿವಿಜನ್ ಇದೆ ಅದಕ್ಕೆ ಸಾಕಾದಷ್ಟು ಕೆಲಸ ಇಲ್ಲ, ಆದ್ದರಿಂದ ಆ ಡಿವಿಜನನ್ನು ಅಬಾಲಿಷ್ ಮಾಡ್ರಿ ಇಲ್ಲದೇ ಇದ್ದರೆ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಏನಿದೆ ಈಗ ಸರ್ಕಾರದ ಗಮನದಲ್ಲಿರುವ ಈ 250 ಯೋಜನೆಗಳು ಏನಿವೆ ಇದನ್ನು ತ್ವರಿತವಾಗಿ ಮಂಜೂರು ಮಾಡಿ ಕಾರ್ಯಗತ ಮಾಡಿರಿ ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಹೀಗೆಯೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ರಾಜ್ಯಸರ್ಕಾರದವರು ಹೋದ ವರ್ಷದಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ಹೇಳಿದ್ದಾರೆ. ಹೋದ ವರ್ಷದಲ್ಲಿ ಅಭಾವ ಪರಿಸ್ಥಿತಿ ಬಂದಿತ್ತು, ಅದರ ಬಗ್ಗೆ ನಾನು ಹೇಳಬೇಕಾಗಿದ್ದರೆ ಸರ್ಕಾರದವರು ಜನರು ಅಚ್ಚುಮೆಚ್ಚುವಂತಹ ಒಂದು ದೊಡ್ಡ ಕೆಲಸ ಮಾಡಿದ್ದಾರೆ. ಸುಮಾರು

(ಶ್ರೀ ಎಸ್. ರುದ್ರಪ್ಪ)

7 ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದಾರೆ, ಸುಮಾರು 8 ಸಾವಿರದ 700 ಕಾಂಗಾರಿಗಳನ್ನು ತೆಗೆದುಕೊಂಡು ಅವು ಅನೇಕ ಹಂತದಲ್ಲಿ ಇವೆ. ಕೆಲಸ ಮಾಡತಕ್ಕ ಕೂಲಿಗಾರರು ಯಾರಿದ್ದಾರೆ ಅವರಿಗೆ ಪ್ರತಿದಿನ ಸುಮಾರು ಎರಡು ಲಕ್ಷ 16 ಸಾವಿರ ಜನರಿಗೆ ಉದ್ಯೋಗವನ್ನು ಒದಗಿಸಿದ್ದಾರೆ. ಹೀಗೆ ಸರ್ಕಾರದವರು ಅನೇಕ ತರಹದಿಂದ ಈ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಕ್ರಮ ತೆಗೆದುಕೊಂಡು ಸಕಾಲದಲ್ಲಿ ಸಹಾಯ ಮಾಡಿರುತ್ತಾರೆ. ಅದರಿಂದ ಜನರಿಗೆ ಎಷ್ಟೋ ಅನುಕೂಲವಾಯಿತು. ಈ ಅಭಾವ ಪರಿಸ್ಥಿತಿ ಪ್ರತಿ ವರ್ಷ ಕೆಲವೊಂದು ಪ ಕೆಟ್‌ನಲ್ಲಿ ಬರುತ್ತಾ ಇರುತ್ತದೆ ಅದಕ್ಕೆ ಶಾಶ್ವತವಾದ ಒಂದು ರಿಲೀಫ್ ಮೆಷರ್ಸ್ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿ ಈಗಾಗಲೇ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಒಂದು ಯೋಜನೆಯನ್ನು ಕಳುಹಿಸಿಕೊಟ್ಟಿದ್ದಾರೆ ಎಂದು ತಿಳಿಸಿದ್ದಾರೆ. ನಾವು ಪ್ರತಿ ವರ್ಷವೂ ಕೇಳುತ್ತೇವೆ. ಅಭಾವ ಪರಿಸ್ಥಿತಿ ಬಂದಾಗೆಲ್ಲಾ ನಾವು ಶಾಶ್ವತವಾದ ಮೆಷರ್ಸ್‌ನ್ನು ತೆಗೆದುಕೊಳ್ಳುವುದಕ್ಕೆ ಯೋಜನೆ ಕಳುಹಿದ್ದೇವೆ ಅದು ಮಂಜೂರಾಗಬಹುದು ಎಂಬ ಆಶೆ ಇದೆ ಎಂದು ಹೇಳುತ್ತಾರ. ಅದೇ ಪ್ರಕಾರ ಈ ಸಲವೂ ಹೇಳಿರುತ್ತಾರೆ. ರಾಜ್ಯ ಸರ್ಕಾರದವರು ಕೇಂದ್ರಸರ್ಕಾರದ ಮೇಲೆ ಒತ್ತಾಯ ತಂದು ಅವರು ಕಳುಹಿಸಿಕೊಟ್ಟಿರತಕ್ಕ 20 ಕೋಟಿ ರೂಪಾಯಿಗಳ ಯೋಜನೆ ಮಂಜೂರಾದದ್ದೇ ಆದರೆ ಪುನಃ ಈ ಅಭಾವ ಪರಿಸ್ಥಿತಿ ಬರಲಿಕ್ಕಿಲ್ಲ ಎಂದು ಅನಿಸುತ್ತದೆ. ಈಗ ರಾಜ್ಯ ಸರ್ಕಾರದವರಿಗೆ ವಾತಾವರಣ ಬಹಳ ಬದಲಾಗಿದೆ. ಕೇಂದ್ರ ಸರ್ಕಾರದಲ್ಲಿ ನಮ್ಮ ಪ್ರತಿನಿಧಿಗಳು ಇದ್ದಾರೆ ಮತ್ತು ನಮ್ಮ ನೆಚ್ಚಿನ ನಾಯಕರಾದ ಶ್ರೀಮಾನ್ ನಿಜಲಿಂಗಪ್ಪನವರು ಈಗ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದಾರೆ. ಆದ್ದರಿಂದ ನಮ್ಮ ಮುಖ್ಯಮಂತ್ರಿಗಳು ಕೇಂದ್ರಸರ್ಕಾರದವರ ಮೇಲೆ ಒತ್ತಾಯ ಮಾಡಿ, ಅವರ ಮೇಲೆ ಒತ್ತಾಯ ತಂದು ಆ 20 ಕೋಟಿ ರೂಪಾಯಿಗಳ ಯೋಜನೆಯನ್ನು ಮಂಜೂರು ಮಾಡಿಸಬೇಕೆಂದು ಪುನಃ ಹೇಳಬಯಸುತ್ತೇನೆ.

[MR. DEPUTY SPEAKER in the Chair]

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಭಾರಿ, ಮಧ್ಯಮ ಹಾಗೂ ಚಿಕ್ಕ ಪ್ರಮಾಣದ ನೀರಾವರಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. 1969ನೇ ಇಸವಿ ಕೊನೆಯವರೆಗೂ ಸುಮಾರು 119 ಕೋಟಿ ರೂಪಾಯಿ ಆಗುತ್ತದೆ ಎಂತಲೂ ಮತ್ತು ಸುಮಾರು 11 ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಕರ್ಯ ಕೊಡಬಹುದು ಎಂದು ನಿರೀಕ್ಷಿಸಲಾಗಿದೆ ಎಂತಲೂ ಹೇಳಿದ್ದಾರೆ. ಕೃಷ್ಣಾ ಗೋದಾವರಿ ವಿವಾದ ಟ್ರಿಬ್ಯೂನಲ್‌ಗೆ ಹೋಗಿದೆ ಎಂತಲೂ ಹೇಳಿದ್ದಾರೆ. ಸತತವಾಗಿ ಬರಗಾಲಕ್ಕೆ ಈಡಾದಂಥಹ ಬಿಜಾಪುರದ ಬಹು ಭಾಗ, ರಾಯಚೂರು ಜಿಲ್ಲೆಯ ಕೆಲವು ಭಾಗಗಳು ಮತ್ತು ಗುಲ್ಬರ್ಗಾ ಜಿಲ್ಲೆಯ ಶಹಪುರ, ಶೋರಾಪುರ ಮತ್ತು ಇತರ ಭಾಗಗಳಿಗೆ ಅನುಕೂಲವಾಗುವಂತಹ ಅಪ್ಪರ್ ಕೃಷ್ಣಾ ಬಗ್ಗೆ ಏನೂ ಪ್ರಸ್ತಾಪ ಮಾಡಿಲ್ಲ. ಭಾರಿ ನೀರಾವರಿ ಯೋಜನೆಗಳ ಬಗ್ಗೆ ಮುಂದಿನ ವರ್ಷ ಸುಮಾರು 10-12 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಏನೂ ಹೇಳಿಲ್ಲ. ಇದೊಂದು ಆ ಭಾಗದವರ ಕಾಮಧೇನು; ಆ ಭಾಗದ ಜನರಿಗೆ ಅವರ ಅರ್ಥಿಕರಂಗದಲ್ಲಿ ಅವರಿಗೆ ಮೋಕ್ಷವಾಗಬೇಕಾಗಿದ್ದರೆ ಈ ಅಪ್ಪರ್ ಕೃಷ್ಣಾ ಯೋಜನೆಯು ಬಹಳ ತೀವ್ರಗತಿಯಿಂದ ಕಾರ್ಯಗತವಾಗಬೇಕು. ಈ ದಿವಸ ಅಲ್ಲೇನು ವರ್ಷಂಪ್ರತಿ 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ ಆ ಹಣವು ಅಲ್ಲಿರತಕ್ಕ ಅಧಿಕಾರಿಗಳ ಸಂಬಳಕ್ಕೆ ಮತ್ತು ಅಲ್ಲಿ ಅವರಿಗೆ ವಾಸದ ಮನೆಗಳನ್ನು ಕಟ್ಟುವುದಕ್ಕೆ ಉಪಯೋಗವಾಗುತ್ತೆ. ಆದರೆ ಅಲ್ಲಿ ಮತ್ತೇನು ಕಾರ್ಯಮಾತ್ರ ಆಗಿಲ್ಲ ಆದ್ದರಿಂದ ಸರ್ಕಾರದವರು ಈ ಪ್ರಾಜೆಕ್ಟಿನ ಬಗ್ಗೆ ಹೆಚ್ಚಿನ ಲಕ್ಷ್ಯಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿಯ ಜನತೆ ಅದು ಎಂದು ಕಾರ್ಯರೂಪಕ್ಕೆ ಬಂದೀತು ಎಂಬುದನ್ನೇ ಆಶಿಸುತ್ತಿರುವುದರಿಂದ ಅದನ್ನು ತೀವ್ರವಾಗಿ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮ ಹೈದ್ರಾಬಾದ್ ಕರ್ಣಾಟಕದ ಜನತೆ ಒಂದು ಯೂನಿವರ್ಸಿಟಿ ಬೇಕು ಎನ್ನುವುದರ ಬಗ್ಗೆ ಬಹಳ ಆಸೆಯಿಟ್ಟುಕೊಂಡು ಸರ್ಕಾರಕ್ಕೆ ಅನೇಕ ಸಲ ಬೇಡಿಕೆ ಇಟ್ಟಿದ್ದಾರೆ. ಅಲ್ಲಿ ಈಗ 24 ಕಾಲೇಜುಗಳು ಕೆಲಸಮಾಡುತ್ತಿವೆ. ಅಲ್ಲಿ ಒಳ್ಳೆಯ ವಾಯುಗುಣವಿದೆ. ವಾತಾವರಣ ಚೆನ್ನಾಗಿದೆ. ಅಲ್ಲಿ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸುವುದಕ್ಕೆ ಏನೇನು ಅಗತ್ಯವಾಗಿರಬೇಕೋ ಅದೆಲ್ಲವೂ ಇದೆ. ಅಲ್ಲಿ ಮೆಡಿಕಲ್ ಕಾಲೇಜಿದೆ, ಇಂಜಿನಿಯರಿಂಗ್ ಕಾಲೇಜಿದೆ, ಏಮೆನ್ಸ್

ಕಾಲೇಜಿದೆ. ಇಷ್ಟೆಲ್ಲಾ ಇರುವುದರಿಂದ ಜನತೆ ಒಂದು ಯೂನಿವರ್ಸಿಟಿಯನ್ನು ಕೊಡಬೇಕೆಂದು ಬೇಡುತ್ತಿದ್ದಾರೆ. ಈಗಾಗಲೇ ಮಂಗಳೂರಿನಲ್ಲಿ ಒಂದು ಪೋಸ್ಟ್‌ಗ್ರ್ಯಾಜುಯೇಟ್ ಕೋರ್ಸನ್ನು ತೆರೆಯಲಾಗಿದೆ. ಇದೂ ಸಹಾ ಯೂನಿವರ್ಸಿಟಿಗೆ ಬಹಳ ಅಗತ್ಯವಾದದ್ದು. ಇದನ್ನು ನಮ್ಮ ಗುಲ್ಬರ್ಗದಲ್ಲಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸುವುದಾಗಿ ಸರ್ಕಾರದವರು ತಿಳಿಸಿದ್ದಾರೆ. ಮೊನ್ನೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಬೆಂಗಳೂರಿನವರಿಗೆ ಹೊಸ ವರ್ಷದ ಒಂದು ಹೊಸ ಉಡುಗರೆಯನ್ನು ಕೊಡುವುದಾಗಿ ತಿಳಿಸಿ ಅದರಂತೆ ಇಲ್ಲಿಯ ಜನಕ್ಕೆ ಹೆಚ್ಚು ನೀರಿನ ಸರಬರಾಯಿಯನ್ನೂ ಮತ್ತು ಸ್ಕೂಟರ್ ತೆರಿಗೆ ವಿನಾಯಿಗಳನ್ನು ಕೊಟ್ಟರು. ಅದೇರೀತಿ ನಮ್ಮ ಗುಲ್ಬರ್ಗಕ್ಕೆ ಹೊಸ ಉಡುಗರೆಯೇನಾದರೂ ಕೊಡಬಹುದು. ಆ ಉಡುಗರೆ ಬಹುಶಃ ಈ ಯೂನಿವರ್ಸಿಟಿಯೇ ಇರಬಹುದು ಎಂದು ನಾನು ಅಂದುಕೊಂಡಿದ್ದೆ. ಆದರೆ ಅದೇನೂ ಕಂಡು ಬರಲಿಲ್ಲ. ಆದರೆ ಈಗಲೂ ಕೂಡ ಅದನ್ನು ಅಲ್ಲಿ ಮಾಡುವುದಕ್ಕೆ ತಡವೇನೂ ಆಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹುಟ್ಟುಹಬ್ಬದ ದಿವಸವಾದರೂ ಕೂಡಾ ಅದನ್ನು ತಿಳಿಸಬಹುದು ಅಂತ ನಾನು ಅಂದುಕೊಂಡಿದ್ದೇನೆ. ಹೀಗೆ ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸರ್ಕಾರದವರು ಸಾಧಿಸಿರತಕ್ಕ ಪ್ರಗತಿದಾಯಕ ಕೆಲಸಗಳನ್ನೂ ಮತ್ತು ಅವರ ನೀತಿ ಮತ್ತು ಅವರು ತಾಳುವ ಧೋರಣೆ ಇತ್ಯಾದಿ ವಿಷಯಗಳನ್ನೆಲ್ಲಾ ಬಹಳ ಉಚ್ಚಮಟ್ಟದಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ.

ಇನ್ನು ಈ ಸೂಚನೆಯನ್ನು ಮಂಡಿಸಿದ ನನ್ನ ಮಾನ್ಯ ಮಿತ್ರರಾದ ಶ್ರೀ ಡಿ. ಎಂ. ಸಿದ್ದಯ್ಯನವರು ಇದರ ಬಗ್ಗೆ ಸವಿಸ್ತಾರವಾಗಿ ಎಲ್ಲಾ ವಿಷಯಗಳನ್ನೂ ಹೇಳಿರುವುದರಿಂದ ಅವರು ಹೇಳಿರತಕ್ಕದ್ದನ್ನೆಲ್ಲಾ ನಾನು ಸಮರ್ಥನೆ ಮಾಡಿ, ನನಗಿಷ್ಟು ಮಾತನಾಡುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—All the amendments given notice of by Member's will be deemed to have been moved.

Sri B. P. KADAM (Karwar).—I beg to move :

"That the following words shall be added at the end of the motion of Thanks to the Governor's address but regret that :—

(i) the address has failed to unequivocally condemn the Mahajan Commission Report on the Maharastra-Mysore and Mysore-Kerala border issue as inconsistent and suggest an immediate solution on the democratic lines based the wishes of the people from the border areas ;

(ii) the address has failed to initiate realistic approch in levy procurement drive by adopting a simple machinery and exempting the small holders of land from payment of levy in food grains ;

(iii) the Governor has failed to boldly declare that the talk of land reforms is only a show and not a reality as the Land Reforms are not in the real interst of the actual cultivator or tenant."

Sri M. H. JAYAPRAKASH NARAYAN (Srisi).—I beg to move:

"That the following words shall be added at the end of the motion: but regret that the Council of Ministers have failed :

(i) to make adequate provision for the progress of Scheduled Caste and Scheduled Tribes in the field of education as the

(SRI M. H. JAYAPRAKASH NARAYAN)

percentage of literacy of Scheduled Caste and Scheduled Tribes is below 5 per cent whereas the State (average) percentage of literacy is 25.4 per cent;

(ii) to make adequate measures for eradicating the evil of untouchability in the rural parts;

(iii) to take steps to grant land to landless and also to take immediate steps to make the tiller is the owner of the land;

(iv) to take steps to exempt "levy" to the small land-holders up to 5 acres in North Kanara District;

(v) to take steps to implement, the rehabilitation of landless agricultural labourers schemes in the State;

(vi) to make provision in all developmental schemes in both plan and non-plan schemes, to allocate 18 per cent of the total allotted budget, for the welfare of Scheduled castes and tribes in all departments;

(vii) to take steps to give representations to Scheduled Castes, and tribes in all committees Boards corporating constituted by Government in order to create equal opportunities and to give special safeguards as guaranteed in the Constitution of India;

(viii) to mention in the address about the development of Scheduled Castes and Tribes in the field of "small scale industries".

(ix) to mention in the address about the constitutional safeguards and their implementation of the Scheduled Castes and Scheduled Tribes in services in the development of education facilities and create minimum programme of Housing, Food and Cloth to the neglected section of the Society."

SRI K. H. PATIL (Gadag).—I beg to move:

"That the following be added to the end of the motion 'but regret to note:

(i) that the Government has failed miserably in implementing the true democracy in the State in respect of the Taluka Development Board's Elections as the entire election machinery was not free from political pressure and the elections were carried illegally, improperly, high-handedly without earing for rules and regulations resulting in a number of writ petitions and election petitions;

(ii) that the Government has failed to maintain purety in the elections by mis-utilising the scarcity conditions and distribution of foodgrains supplied by Bharat Sevak Samaj to distribute among the poorest classs ;

(iii) that the Government bas failed to take up adequate relief measures in the scarcity area and to complete the works on hand to safeguard the funds spent ;

(iv) that the Government has not introduced any effective developmental schemes in respect of Co-operative movement in comparison with other States ;

(v) that the Co-operative movement has been paralysed and is deteriorating day by day due to lack of efficiency, lack of knowledge in co-operation and purity in administration, resulting the increase in quantum and decrease in quality ;

vi) that the Co-operative Department has shown no tangible result either in the industrial side or in the co-operative farming but only concentrating its efforts in harming and harassing the political opponents working in the field of co-operation ;

(vii) that the Government has failed even in implementing an uniform primary education Act in the State even though 12 years have lapsed after re-organisation. Differentiate treatment in the field of education is the result of this failure ;

(viii) that the Government has continued unconstitutionally the District School Boards in the Bombay Karnatak area with a view to help their partymen ;

(ix) that the Government has miserably failed in erradicating corruption and inefficiency prevailing in all the departments ;

(x) that the Government has failed to take suitable steps in nationalising the private electric licensees in the State which has resulted the public with discriminatery treatment in getting the power supply ;

(xi) that the Government has failed to eradicate the problem of unemployment by sponsoring adequate industries;

(xii) that the Government has failed in the proper implementation of the Khadi Board, Social Welfare activities ;

(xiii) that the Government has failed in implementation of the principles of Mahatma Gandhiji especially in the field of prohibition, taxation, removal of untouchability, village industrialisation, etc."

Sri T. R. SHAMANNA (Fort-Bangalore).—I beg to move:

"That the following words shall be added at the end of the motion but regret that—

(i) the Government has failed to give the citizens of Bangalore, the benefits in respect of free allowance and revised lower rates for excess water retrospectively though the Estimates Committee has clearly pointed out that the Bangalore Water Supply and Sewerage Board has made during last 3 years a profit of Rs. 45 lakhs, after allowing higher rate of interest payable to Government and allowing 28 per cent wastage of water;

(ii) the Government has failed to give relief in respect of property tax that is now arbitrarily charged to charitable institutions, like, schools, students hostels and other public and charitable institutions;

(iii) the Government has failed to run B.T.S. Buses in Bangalore City according to Schedule, in reducing waiting line and Bus Stops and in stopping pilferage and misbehaviour of conductors;

(iv) there is inordinate delay in respect of construction of the sub-way near Krishnarajendra Market which has caused great hardship to the public and caused heavy loss to the merchants;

(v) Government has failed to check the large scale corruption prevailing in Bangalore City Corporation and the harassment that the public are subjected to get their plans, licences, etc.;

(vi) Government has failed to check malpractices in some of the private managed schools and the collection of abnormal and unauthorised fees, donations, etc., by the managements;

(vii) Government has failed to take steps to replace the fused street lights particularly in extensions and undeveloped areas;

(viii) Government has failed to provide in Fair Price Depots, good quality rationed articles at fair rates;

(ix) Government has failed to take suitable steps to check mal administration in many Co-operative Societies and the group politics particularly in the Bangalore City.

(x) Government has caused heavy National loss by its wavering policies in the matter of education;

(xi) Government has failed to give 50 per cent D.A. contribution to Bangalore City Corporation as given to all the other local bodies ;

(xii) Government has not given the legitimate share of Motor Vehicle Tax to the Bangalore City Municipal Corporation ;

(xiii) Government has failed to provide water mains to Revenue pockets and other undeveloped areas like Thyagarajanagar, Dasaranalli, Ashokanagar, etc;

(xiv) Government has failed to provide employment to young men in State including technically qualified men ;

(xv) Government has failed to locate all subordinate civil and criminal courts in one place though there has been a demand in this behalf for the last 40 years ;

(xvi) Failure of the Government to grant withheld portion of the enhanced Dearness Allowance to the State Non-Gazetted Officers ;

(xvii) Government has failed to satisfactorily settle the problems of Revenue sites in Bangalore City purchased by poor and middle class people for bona fide house building purposes without undue heavy burden;

(xviii) Government has failed to free people of Bangalore City from the mosquito nuisance."

SRI D. B. KALMANKAR (Aland).—I beg to move :

" That the following words shall be added at the end of the motion but regret on —

(i) the party in power had subverted the Government machinery to its advantage and to the disadvantage of the parties in opposition in the recent Taluka Board Elections as a result of which the elections were not held in fair and genuine democratic manner and the party in power used all types of corrupt practices and threw away all canons of democratic conventions to the winds.

(ii) Government has failed to radicate the evils of untouchbality prevailing in rural areas of the State;

(iii) the Government machinery is suffering from evils of castism, communalism, nepotism and corruption from top to the bottom as a result of which common man has lost faith in the Government ;

(iv) Government has failed to provide drinking water wells to all Villages in Mysore State treating it on top priority basis ;

(SRI D. B. KALMANKAR)

(v) Government has failed to utilise co-operative Societies to cater to the needs of the poor and the needy and to prevent it from misuse of funds, etc.;

(vi) Government has failed to provide employment to the Growing number of the educated.

(vii) the Police Department has failed to check smuggling of essential food grains into the Maharashtra on Gulbarga border.

(viii) Government has failed to run efficiently the State owned concerns and State controlled industries to the best advantage of the State causing huge loss to the State exchequer.

(ix) Government has failed to guarantee the minimum wages to agricultural labourers.

(x) Government has failed to fix minimum and maximum salary to the Government servants in accordance with the declared object of socialistic pattern of Society to start with."

SRI M. H. JAYAPRAKASH NARAYAN (Sirsi).—I beg to move : "That the following words shall be added at the end of the motion of Thanks to the Governor's Address but regret that —

(i) no concrete steps have been taken regarding the "removal" or "improvement" slums in Bangalore Corporation,

(ii) no concrete liberalized proposals have been made to provide house sites to the hut-dwellers and other slum dwellers by City Improvement Trust Board, Bangalore,

(iii) plan amounts in Social Welfare Department have not been fully utilised to the best advantage of scheduled castes,

(iv) there is no planned dynamic programme to continue the policy of nationalisation in the Departments of mining,

(v) there is a failure in safeguarding and protecting the basic rural industries in sericulture,

(vi) corruption and black marketing have not been put down,

(vii) the problem of unemployment has not been solved.

(viii) a national policy in relation to land reforms and the need for abolition of Land Revenue has not been innunciated.

(ix) there is no programme to introduce prohibition for the fulfilment of Gandhiji's dream of New India and to bring the new hope to the millions.

(x) Government has failed to take measures for getting the Kannada Speaking majority areas in the neighbouring States and also to name the State as " Karnataka "

(xi) ಸಣ್ಣ ಹಿಡುವಳಿದಾರರು ಮತ್ತು ಗೇಣಿದಾರರುಗಳಿಗೆ ಅಹಾರಧಾನ್ಯ ವಸೂಲಾತಿಯಲ್ಲಿ ವಿನಾಯಿತಿ ಕೊಡದೆ, ಬೇಸಾಯಗಾರರಿಂದ, ಮಾರು ಕಟ್ಟೆಯ ಬೆಳೆಗಿಂತ ಬಹಳ ಕಡಿಮೆ ಬೆಲೆಯಲ್ಲಿ ಕಡ್ಡಾಯವಾಗಿ ಆಹಾರ ಧಾನ್ಯವನ್ನು ಉತ್ತರ ಕನ್ನಡ ಜಿಲ್ಲೆಯ ರೈತರಿಂದ ಮತ್ತು ಇತರ ಕಡೆ ವಸೂಲ ಮಾಡಿ ಅವರಿಗೆ ರಕ್ಷಣೆಕೊಡುವುದರಲ್ಲಿ ವಿಫಲವಾಗಿರುವುದು. "

SRI M. NAGAPPA (Mandya).—I beg to move :

" That the following words shall be added at the end of the motion. But regret that :

the address does not contain important matters, pertaining to general administration in State, since there is no security of property and life. "

SRI M. S. KRISHNAN (Malleswaram).—I beg to move :

" That the following words shall be added at the end of the motion but regret that Government has failed to —

(i) implement the land Reforms Act as well as to enunciate a proper policy regarding the implementation of the same,

(ii) take such steps as would prove the Central Government to accept the Mahajan Commission award and implement *in toto*,

(iii) abolish the outmoded system of land revenue,

(iv) formulate a progressive and proper policy in regard to planning,

(v) obtain adequate and due financial assistance from the Central Government to implement the State Plan in the interests of the people,

(vi) enunciate a suitable policy in respect of fix in prices of essential commodities of life and foodgrains such as rice, sugar etc., and the need for taking effective steps to arrest the same.

(vii) enunciate any policy in respect of the acute unemployment problem in the State,

(viii) take effective steps to put down corruption and black marketing,

(SRI M. S. KRISHNAN)

(ix) take action in the direction of payment of salaries of teachers in Private Aided Primary Schools,

(x) take adequate and effective action against mushroom growth and existence of several non-functioning/non-effectively funtioning privately run schools with grants from Government,

(xi) take any steps to stop the deteriorating conditions in several Government owned or Government Managed Industrial Concerns such as REMCO, Government Electric Factory etc.,

(xii) enunciate a forward looking policy of strengthening the public sector as against the private sector,

(xiii) accept retrospective effect for implementation of the recommendations of the Estimates Committee in respect of Bangalore City Water Rates,

(xiv) name the State as "Karnataka",

(xv) abolish the outmoded octroi levy in Bangalore and other places,

(xvi) take a lenient view in regard to those employees of the Government who were arrested in connection with and after the token strike on September 19, 1968,

(xvii) enunciate or formulate a progressive labour policy,

(xviii) implement the awards of Wage Boards in respect of non-working Governments, Engineering and Textile Workers,

(xix) pay the pending D. A. to the N. G. O's of the State,

(xx) accept and implement the recommendation of the Tukol Pay Commission."

SRI B. B. SAYANAK (Belgaum).—I beg to move :

"That the following words shall be added at the end of the motion : But regret that the Ministers have failed—

(i) to promote efficient and good administration in aligning themselves with partymen in the Stete,

(ii) to check the increasing number of dacoity, robbery and other crimes in the State,

(iii) to take a bold decision on Pay Commission's recommendations,

(iv) to give proper status to the Marathi language in the State,

(v) to eradicate social evils like coruption which is increasing collapsing moral of administration,

(vi) to bring about a sense of solidarity and emotionl integrity among the people of different integrating areas of the Mysore State,

(vii) to mention about the removal of unemployment in the State,

(viii) to make a reference regarding efforts to lessen the wide disparity between the rich and the poor."

Sri B. L. NARAYANA SWAMY (Srinivasapur).—I beg to move:

That the following words shall be added at the end of the motion :

" But for the glaring ommission of any reference to the failure of the Government in not even trying to improve the lot of the economically oppressed and depressed unskilled labourers and the marginal cultivators so as to enable them to lead minimum standard of life. "

Sri V. N. PATIL (Humanabad).—I beg to move :

That the following words shall be added at the end of the motion of thanks to the Governor's Address but regret to note —

(i) the failure of the Council of Ministers to give guidance for the speedy and equitable implementation of the famine relief works resulting into a benefit to the vested interests and loss to the rural poor. Mismanagement in the famine relief funds and funds having been given to the caffers of the Congressmen and their henchmen, the Contractors,

(ii) the failure of the Council of Ministers to put down the harassment of the land lord classes over the tenants who are dispossessing the tenants from their lands,

(iii) the failure of the Council of Ministers to put an end to the harassment over the Central Government employees who went on token strike and whose cases are advised by the Central Government to be considered sympathetically and liberally without giving scope for revenge,

(iv) failure of the Council of Ministers to bring forward any uniform system of education and syllabus in all the areas of Karnatak including the collegiate education and to bring forward a uniform code to govern all the Universities in the Mysore State,

(v) the failure of the Council of Ministers to name Mysore State as Karnatak inspite of the fact that this linguistic re-alignment was to attain the cherished goal of the alround development of Kannadigas who were scattered in five different States as linguistic minorities,

(SRI V. N. PATIL)

(vi) the failure of the Council of Ministers to fulfill their promise of giving relief to the drought stricken areas and failure of the Government to give remissions and suspension of Land Revenue and suspension of Takavi collections in drought stricken areas,

(vii) the failure of the Government to fulfill its promise given on the floor of this House on 22-12-1967 by the then acting Home Minister to visit Markhal Village and to bring peace between the two villages, Boothagi and Markhal and to withdraw cases launched against 74 persons in view of the circumstances that tention between two villages was a result of the wrong method adopted by the Deputy Commissioner, Bidar, at the instance of the Member of Parliament from Bidar and as a criminal case pending in the Court are result of political tussel between the two rival groups of the Congressmen in Bidar District and to withdraw the above cases in order to bring harmony between the two villages,

(viii) the failure of the Government to protect the agriculturists whose lands are being auctioned whose moveable and immoveable properties are put to auction for recovery of Takavi and land revenue arrears in addition to the procurement of levy. This is being done with the full knowledge that during March 1968 there was a hail storm in Bidar District and the Jowar was totally ruined and due to failure of rains khariff crops was zero and now the rabi crop being less than 25 per cent to 50 per cent,

(ix) the failure of the Government to protect the innocent voters and to give protection to the lives and respects of the villagers at Bhatboral Taluk in Bidar District where organised roudism by the local congress candidate resulted into axe injuries on 4 persons heads. The Congress candidate himself hit with an axe in the very presence of the Sub-Inspector, Chincholi and no action has been taken so far,

(x) the failure of the Government to put under suspension and to conduct enquiry against the Medical Officer, Humnabad who has refused to admit the Ghatboral incident patients who were bleeding profusely and turning them out of the Hospital without even caring to give minimum human First Aid treatment inspite of the fact that this matter was brought to the notice of the Medical Officer, Bidar, Health Minister and the Chief Minister of Mysore,

(xi) the failure of the Council of Ministers to start Developmental activities in Bidar District and to give more hospitals, High Schools and College inspite of the fact that the Bidar District is one of the most backward District in Hyderbad Karnatak area,

(xii) the failure of the Government to start Upper Krishna Project work immediately,

(xiii) the failure of the Government to bring Kannada as the official language in all branches of Administration,

(xiv) the failure of the Government to check the downward trend of jaggery prices of the sugarcane growers by imposing inter district and inter-state jaggery export ban and the Government failure to support the price resulting into the agriculturists being compelled to sell the jaggery below their cost price,

(xv) the failure of Government to impress upon the Central Government to implement the Mahajan Commission Award forthwith,

(xvi) the failure of the Government to stop the unending expansion of the Ministry at the cost of the pepole for the benefits of their own party to placade the rival groups,

(xvii) the failure of the Government to stop the excess collections being made in Bidar Municipality against the provisions of the Municipal Act and failure to refund the excess amount collected from the Agriculturists,

(xviii) the failure of the Government to grant patta rights to those poor peasants who are in possession of the Government waste land for more than 20 years,

(xix) the failure of the Government to bring uniform law to apply to all the religious and charitable institutions and the lands held by them to protect the tenants who are in possession of such lands,

(xx) the failure of the Government to assure employment to all the educated young citizens in Karnataka,

(xxi) the failure of the Government to start industries in Gulbarga Division,

(xxii) the failure of the Government to compel the Excise Contractors to give additional securities as per the Rule 19 of the Mysore Excise and Retail Vendors Rules 1967.........which was not collected deliberately by the Commissioner of Excise bringing lakhs together loss to the Government and exposing the Government to

(SRI V. N. PATIL)

the unsecured position for recovering the loss to be suffered by giving only 2 months collateral security which is in contravention of the rules and to take consequential steps against the Excise Contractors,

(xxiii) The failure of the Government to maintain law and order during Taluk Board elections in Bidar District inspite of the fact being brought to the notice of the Chief Minister that the Opposition parties are being attacked in Bhalki, Humnabad and Bidar Taluks during Taluk Board election."

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗುಳ).—ಸಭಾಪತಿಯವರೇ, ರಾಜ್ಯಪಾಲರ ಭಾಷಣದಲ್ಲಿ ಏನಿದೆ ಅವರೇನು ಹೇಳಿದ್ದಾರೆಂಬುದನ್ನು ಎರಡೇ ವಾಕ್ಯದಲ್ಲಿ ಹೇಳುವುದಾದರೆ ಈ ರಾಜ್ಯಪಾಲರ ಭಾಷಣ ಸರ್ಕಾರದ ನಾನಾ ಇಲಾಖೆಗಳೇನಿವೆ ಅವುಗಳೆಲ್ಲದರ ವಾರ್ಷಿಕವರದಿಯನ್ನು ಒಟ್ಟು ಗೂಡಿಸಿ ರಾಜ್ಯಪಾಲರಿಂದ ಇಲ್ಲಿ ಒಂದು ಗಂಟೆಯಕಾಲ ಭಾಷಣ ಮಾಡುವಂತೆ ಮಾಡಿದ್ದಾರೆಂದು ಹೇಳಬಹುದು. ಆದರೆ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದವರ ಯಾವ ಒಂದು ನೀತಿಯನ್ನು ಆ ಪ್ರಣಾಳಿಕೆಯಲ್ಲಿ ಇಡಬೇಕಾಗಿತ್ತೋ ಅದನ್ನು ಇಡದೆ ಇರುವುದರಿಂದ ಆ ಪ್ರಣಾಳಿಕೆಯ ಮಹತ್ವ ಅಳಿಸಿಹೋಗಿ ಅದು ಒಂದು ನಗಪಾಟಲಿಗೆ ಅವಕಾಶನ್ನುಂಟುಮಾಡಿದೆ. ಇಂದು ದೇಶದಲ್ಲಿ ಪ್ರಚಲಿತ ವಾಗಿರತಕ್ಕ ಸಮಸ್ಯೆಗಳು ಬಹಳವಾಗಿವೆ. ಅವುಗಳನ್ನು ನಿವಾರಣೆ ಮಾಡತಕ್ಕ ಮಾರ್ಗದಲ್ಲಿ ಸರ್ಕಾರದವರು ತೋರಿಸತಕ್ಕ ಸಾಹಸವೇನು ಎಂಬುದನ್ನು ಈ ಪ್ರಣಾಳಿಕೆಯಲ್ಲಿ ನಾವು ಕಾಣದಿರು ವುದು ಬಹಳ ಆಶ್ಚರ್ಯವನ್ನುಂಟುಮಾಡಿದೆ. ನಾವು ಈ ದಿವಸ ನಮ್ಮ ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡತಕ್ಕ ಕಾಲದಲ್ಲಿ ನಾವಿರುವುದರಿಂದ, ಆ ಯೋಜನೆಯ ಗಾತ್ರವೇನು, ಅದರ ರೂಪರೇಖೆಗಳೇನು ಎಂಬುದನ್ನು ನಿರ್ಧರಿಸುವುದಕ್ಕೆ ಸಾಧ್ಯವಾಗದೆ ಆ ಕೇಂದ್ರದವರೇ ಇನ್ನೂ ತವಕ ಪಡುತ್ತಿದ್ದಾರೆ. ನಾವು ಈ ಯೋಜನೆಗೆ ಎಷ್ಟು ಹಣ ತರಬೇಕು, ಅದನ್ನು ಎಲ್ಲಿಂದ ತರಬೇಕು ಅನ್ನುವ ಪರಿಸ್ಥಿತಿಯಲ್ಲಿ ಅವರಿದ್ದಾರೆ. ಅವರು ಅಮೇರಿಕಾದವರು ಎಷ್ಟು ಹಣ ಕೊಡುತ್ತಾರೋ ರಷ್ಯಾದೇಶದವರು ಎಷ್ಟು ಹಣ ಕೊಡುತ್ತಾರೋ ಎಂದು ಕೇಂದ್ರ ಸರ್ಕಾರದವರು ಕೈಚಾಚಿ ತಮ್ಮ ಭಿಕ್ಷಾಪಾತ್ರೆಯನ್ನು ಹಿಡಿದು ನಿಂತಿದ್ದಾರೆ. ಅವರು ಕೊಡತಕ್ಕ ಹಣದ ಮೇಲೆ ನಮ್ಮ ಯೋಜನೆಯ ಗಾತ್ರ ಮತ್ತು ಅದರ ರೂಪರೇಖೆಗಳು ನಿಂತಿರುತ್ತವೆ. ಇಂಥಾ ಕಾಲದಲ್ಲಿ ನಮ್ಮ ರಾಜ್ಯಪಾಲರು ನಮ್ಮ ರಾಜ್ಯದಲ್ಲಿ ದೊರೆಯತಕ್ಕ ರಿಸೋರ್ಸಸ್ ಎಷ್ಟಿರುತ್ತದೆಯೋ ನಮ್ಮ ಪ್ಲಾನು ಅದನ್ನು ಅವಲಂಬಿಸಿರುತ್ತದೆ ಅನ್ನುವಂಥ ಮಾತನ್ನು ಹೇಳಿದ್ದಾರೆ. ಅವರು ತಮ್ಮ ವರದಿಯ ಕೊನೆಯಲ್ಲಿ ಹೀಗೆ ಹೇಳಿದ್ದಾರೆ :—

The total size of the 4th Plan will depend upon the resources that we can mobilize.

ಹೀಗೆ ನಮ್ಮ ಆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನೂ ಗಾಳಿ ಗೋಪುರವಾಗೇ ಇದೆ. ಅದರ ನಿಜವಾದ ಗಾತ್ರ ಹಾಗೂ ಅದರ ರೂಪರೇಖೆಗಳನ್ನು ನಮ್ಮ ಮುಂದಿಡುವುದಕ್ಕೆ ಆಗಿಲ್ಲ. ಈಗ ನಮ್ಮಲ್ಲಿರತಕ್ಕ ರಾಜ್ಯಪಾಲರಿಗೆ ಇದು ಎರಡನೆಯ ಭಾಷಣ. ಅವರು ಈಗ ರಚಿತವಾಗಿರತಕ್ಕ ಹೊಸ ಮಂತ್ರಿ ಮಂಡಲದಲ್ಲಿರತಕ್ಕ 29 ಜನ ಮಂತ್ರಿಗಳೇನಿದ್ದಾರೆ ಅವರಿಂದ ದೇಶದಲ್ಲಿರತಕ್ಕ ಇಂದಿನ ಸಮಸ್ಸೆಗಳನ್ನು ಬಗೆಹರಿಸುವುದಕ್ಕೆ ಒಂದು ಧೈರ್ಯವಾದ ನೀತಿಯನ್ನು ಹೊರಗೆಡುವುತ್ತಾರೆ ಎಂದು ಜನರಲ್ಲಿ ಒಂದು ನಂಬಿಕೆ ಇತ್ತು. ರಾಜ್ಯಪಾಲರ ಭಾಷಣವನ್ನು ನೋಡಿದ ನಂತರ ಆ ನಂಬಿಕೆ ಮಾಯವಾಯಿತು. ಸರ್ಕಾರದವರು ರಾಜ್ಯಪಾಲರಿಂದ ಈ ಅವರ ಒಂದು ವರಧಿಯನ್ನು ಓದಿಸತಕ್ಕ ಕೆಲಸವನ್ನು ಮಾಡಿದ್ದಾರೆ. ದೇಶದಲ್ಲಿ ತಾಂಡವವಾಡತಕ್ಕ ನಿರುದ್ಯೋಗ ಹಾಗೂ ಹಸಿವು ಇವುಗಳನ್ನು ನಿವಾರಣೆ ಮಾಡತಕ್ಕ ಧೋರಣೆ ಏನೆಂಬುದನ್ನು ಈ ವರದಿಯಲ್ಲಿ ತಿಳಿಸುವುದಕ್ಕೆ ಪ್ರಯತ್ನ ಕೂಡ ಮಾಡಿಲ್ಲ. ಇಂಥ ಸಮಸ್ಯೆಗಳು ನಮ್ಮಲ್ಲಿ ಹೊರೆಗಟ್ಟಿರೆ ಇವೆ. ನಮ್ಮ ಮಂತ್ರಿ ಮಂಡಲದಲ್ಲಿ 29 ಜನ ಮಂತ್ರಿಗಳಿದ್ದರೂ ಸಮಸ್ಸೆಗಳು ಪರಿಹಾರವಾಗದೆ ಹಾಗೇ ಉಳಿದಿರು ವುದನ್ನು ಕಂಡ ಜನತೆ ತುಂಬ ನಿರಾಸೆಯಿಂದಿದ್ದಾರ.

ರಾಜ್ಯಪಾಲರು ತಮ್ಮ ಭಾಷಣದ ಪ್ರಾರಂಭದಲ್ಲಿ ತಾಲ್ಲೂಕ್ ಬೋರ್ಡುಗಳ ಚುನಾವಣೆಯನ್ನು ಪ್ರಸ್ತಾಪ ಮಾಡಿ ತಮ್ಮ ಭಾಷಣದ ಕೊನೆಯಲ್ಲಿ ಡೆಮಾಕ್ರಸಿ ವಿಚಾರವನ್ನು ಹೇಳಿ ಭಾಷಣವನ್ನು ಮುಕ್ತಾಯ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ರಾಜ್ಯಪಾಲರು ತಮ್ಮ ಭಾಷಣದ ಕೊನೆಯಲ್ಲಿ ಈ ಡೆಮಾಕ್ರಸಿ ವಿಚಾರವನ್ನು ಪ್ರಸ್ತಾಪ ಮಾಡದಿದ್ದರೆ ಚೆನ್ನಾಗಿತ್ತು ಎಂದು ಅನಿಸುತ್ತದೆ. ಏಕೆಂದರೆ, ತಾವು ಇವತ್ತು ತಾಲ್ಲೂಕು ಬೋರ್ಡ್ ಚುನಾವಣೆಗಳನ್ನು ಮಾಡಿದಂಥ ರೀತಿನೀತಿಯನ್ನು ನೋಡಿದರೆ, ಈ ದೇಶದಲ್ಲಿ ಪ್ರಜಾಪ್ರಭುತ್ವ ಇದೆಯೇ ಎನ್ನುವ ಸಂಶಯ ನನಗೆ ಆಗಿದೆ, ಈ ಕಡೆ ಇರುವ ಎಲ್ಲ ಸದಸ್ಯರಿಗೂ ಆಗಿದೆ. ಇವತ್ತು ಅಭಾವ ಪರಿಸ್ಥಿತಿ ನೆಪದಲ್ಲಿ 9 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿ ಸುಮಾರು 7 ಕೋಟಿ ರೂಪಾಯಿಗಳನ್ನು ಅಭಾವ ಪರಿಸ್ಥಿತಿ ನಿವಾರಣೆಗಾಗಿ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಈವೊತ್ತು ಈ ದೇಶದಲ್ಲಿ ಯಾವ ಅಭಾವವನ್ನು ನಿವಾರಣೆ ಮಾಡಿದ್ದೀರಿ ಎಂಬುದು ಪ್ರಶ್ನೆ. ಕಾಂಗ್ರೆಸ್ಸಿನವರ ಅಭಾವವನ್ನು ನಿವಾರಣೆ ಮಾಡಿದ್ದೀರಾ ಅಥವಾ ಮಳೆ ಬೆಳೆ ಹೋಗಿ ಬೆಂಡಾಗಿರತಕ್ಕ ಜನಗಳ ಕಷ್ಟಸ್ಥಿತಿಯನ್ನು ನಿವಾರಣೆ ಮಾಡಿದ್ದೀರಾ ? ಇವತ್ತು ಈ 7 ಕೋಟಿ ರೂಪಾಯಿಗಳನ್ನು ಏತಕ್ಕಾಗಿ ಖರ್ಚು ಮಾಡಿದ್ದೀರಾ ಎಂಬುದು ಇವತ್ತಿನ ಪ್ರಶ್ನೆ.

4-00 P.M.

ತಾಲ್ಲೂಕು ಬೋರ್ಡ್‌ಗಳ ಚುನಾವಣೆಗಳು 8 ವರ್ಷಗಳು ಮುಂದೆ ಹೋಗಿ ಈ ಚುನಾವಣೆ ನವಂಬರ್ ತಿಂಗಳಲ್ಲಿ ಆಗಬೇಕೆಂದು ತೀರ್ಮಾನವಾದಾಗ, ದೇಶದಲ್ಲಿನ ಆಹಾರ ಅಭಾವ ಪರಿಹಾರಕ್ಕೋಸ್ಕರವಾಗಿ ಈ ಶಾಸನ ಸಭೆ, ಈ ಸರ್ಕಾರ 50 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕು, ಈ ದೇಶದಲ್ಲಿ ಕೂಡಲೆ ಕ್ಷಾಮ ನಿವಾರಣೆ ಮಾಡಬೇಕು ಎಂಬುದಾಗಿ ವಾದ ಮಾಡಿತ್ತು. ಈಗ ಈ 7 ಕೋಟಿ ರೂಪಾಯಿಗಳನ್ನು ಆಹಾರ ಅಭಾವ ಪರಿಹಾರಕ್ಕೋಸ್ಕರವಾಗಿ ಖರ್ಚು ಮಾಡುತ್ತೇವೆಂದು ಹೇಳಿ ಆ ಹಣವನ್ನು ತಾಲ್ಲೂಕು ಬೋರ್ಡ್ ಚುನಾವಣೆ ನಿಧಿಗಾಗಿ ಉಪಯೋಗ ಮಾಡುವ ವೈಶಿಷ್ಟ್ಯದಲ್ಲಿ ಖರ್ಚು ಮಾಡಿದ್ದೀರಿ. ಇದು ಸರಿಯಲ್ಲ. ಈಗಿರತಕ್ಕ 29 ಜನ ಮಂತ್ರಿಗಳಿಗೆ ಕೆಲಸವಿಲ್ಲ. ಚುನಾವಣೆ ಸಂದರ್ಭದಲ್ಲಿ 19 ಜನರನ್ನು 19 ಜಿಲ್ಲೆಗಳಿಗೆ ಕಳುಹಿಸಿದ್ದೀರಿ. ಆ 19 ಜನ ಮಂತ್ರಿಗಳು 19 ಜಿಲ್ಲೆಗಳಿಗೆ ಹೋಗಿ ಇವತ್ತು ಸರ್ಕಾರಿ ಕೆಲಸ ಮಾಡಿಲ್ಲ. ನಮ್ಮ ಸರ್ಕಾರದ ಖಜಾನೆ ಹಣವನ್ನು ಖರ್ಚುಮಾಡಿ, ಅಭಾವ ಪರಿಸ್ಥಿತಿಗೆ ಮೀಸಲಾಗಿಟ್ಟಿದ್ದ ಹಣವನ್ನು ತಾಲ್ಲೂಕು ಬೋರ್ಡ್ ಚುನಾವಣೆಗೋಸ್ಕರ ಖರ್ಚುಮಾಡಿ, ಈ ಪ್ರಜಾಪ್ರಭುತ್ವದ ಬಗ್ಗೆ ಒಂದು ದೊಡ್ಡ ವ್ಯಾಖ್ಯಾನವನ್ನು ರಾಜ್ಯಪಾಲರ ಬಾಯಿಯಿಂದ ಹೇಳಿಸಿದ್ದೀರಿ. ಇದರಿಂದ ಪ್ರಜಾಪ್ರಭುತ್ವವೆಂಬುದು ಅಪಹಾಸ್ಯವಾದೀತು, ಕೊರೆಯಾದೀತೆಂದು ನಾನು ಹೇಳುತ್ತೇನೆ. ಪ್ರಜಾಪ್ರಭುತ್ವ ನೆಪದಲ್ಲಿ 22 ವರ್ಷಗಳಿಂದಲೂ ಮೋಸ ಮಾಡಿದ್ದೀರಿ. 22 ವರ್ಷಗಳಿಂದಲೂ ನಿರಾತಂಕವಾಗಿ ಈ ದೇಶದ ಜನತೆಯನ್ನು ಮೋಸಗೊಳಿಸಿದ್ದೀರಿ. ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಹೆಚ್ಚು ಮೋಸ ಮಾಡಿದ್ದೀರಿ. ಏನು ಮಾಡಿದರೂ ಕೂಡ ನೀವು ಸರ್ಕಾರದ ಖಜಾನೆಯ ಹಣವನ್ನು ನಿಮ್ಮ ಪಕ್ಷದ ಮೇಲ್ಮೆಗಾಗಿ ಖರ್ಚುಮಾಡುತ್ತಿದ್ದೀರಿ. ಅದು ಸರಿಯಲ್ಲವೆಂಬುದು ನಿಮ್ಮ ಮನಸ್ಸಿಗೆ ತಟ್ಟುವುದಿಲ್ಲವೇ ? ಇವತ್ತು ಭಾರತದೇಶದಲ್ಲಿ ಪ್ರಜಾಪ್ರಭುತ್ವ ಅಡಕವಾಗಿದ್ದರೂ ಅದು ಮಹಾತ್ಮಾಜಿಯವರ ಕಾಲದಿಂದ ಬಂದಿದೆ. ಈ ದೇಶದಲ್ಲಿ 22 ವರ್ಷಗಳ ಹಿಂದೆ ಏನು ರಾಜ್ಯಾಂಗ ರಚಿಸಿತ್ತೋ ಅದರ ಪ್ರಕಾರ ನೀವು ಹೋಗದೆ, ಕಾಂಗ್ರೆಸ್ ಬಾವುಟವನ್ನು ರಾಷ್ಟ್ರದ ಬಾವುಟವನ್ನಾಗಿ ಪರಿವರ್ತನ ಮಾಡಿದ್ದೀರಿ. ರಾಷ್ಟ್ರದ ಹೆಸರಿನಲ್ಲಿ ಸರ್ಕಾರದ ಖಜಾನೆಯ ಹಣವನ್ನು ಖರ್ಚುಮಾಡಿ ಮೋಸ ಮಾಡುತ್ತಿದ್ದೀರಿ. ಮಹಾತ್ಮ ಗಾಂಧಿಯವರ ಶತಮಾನೋತ್ಸವನ್ನು ಈ ವರ್ಷ ಮಾಡುತ್ತಿದ್ದೀರಿ. ಈಗ ಒಂದು ವೇಳೆ ಮಹಾತ್ಮ ಗಾಂಧಿಯವರು ಬದುಕಿದ್ದಿದ್ದರೆ, ಈ ಕಾಂಗ್ರೆಸ್ ಪಕ್ಷವನ್ನು ವಜಾಮಾಡಿ ಬೇರೊಂದು ಪಕ್ಷವನ್ನು ಕಟ್ಟುತ್ತಿದ್ದರು. 1948ನೇ ಇಸವಿಯಲ್ಲಿ ಅದಕ್ಕೆ ಒಂದೆರಡು ವರ್ಷಗಳ ಹಿಂದೆ ಮಹಾತ್ಮ ಗಾಂಧಿಯವರು ಈ ವಿಚಾರವಾಗಿ ಬರೆದು ಇಟ್ಟಿದ್ದರೂ ಅದನ್ನು ಇವರು ಬಚ್ಚಿಟ್ಟಿದ್ದಾರೆ. ಮಹಾತ್ಮ ಗಾಂಧಿಯವರು ಈಗ ಇದ್ದಿದ್ದರೆ, ಮತ್ತೊಂದು ಸಂಸ್ಥೆಯನ್ನು ಮುಂದಿಟ್ಟುಕೊಂಡು ಅದರಂತೆ ಬೇರೊಂದು ರಾಜ್ಯಾಂಗವನ್ನು ಪರಿವರ್ತನೆ ಮಾಡುತ್ತಿದ್ದರು. ಈ ದೇಶದಲ್ಲಿ ಇಷ್ಟು ಮೋಸ ಮಾಡಿರುವಂಥ ಇಂಥ ಕಾಂಗ್ರೆಸ್ ಸಂಸ್ಥೆ ಪ್ರಪಂಚದ ಯಾವ ಮೂಲೆಯಲ್ಲಿಯೂ ಇಲ್ಲ. 22 ವರ್ಷಗಳಿಂದ ಮೂರು ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತಮಾಡಿ, ಈಗ 4ನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ನಿಮ್ಮಲ್ಲಿ ಸಾಕಷ್ಟು ದುಡ್ಡು ಇಲ್ಲ. ಇನ್ನೂ 3ನೇ ಪಂಚವಾರ್ಷಿಕ ಯೋಜನೆಯ ಅನೇಕ ಕಾಮಗಾರಿಗಳು ಆಗಬೇಕಾಗಿವೆ. 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾಡುವಂಥ ಯೋಜನಾ ಕಾಮಗಾರಿಗಳಿಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ ಎಂಬ ಬಗ್ಗೆ ಅಂಕಿ ಅಂಶಗಳು ಇಲ್ಲಿಲ್ಲ. ಯಾವ್ಯಾವ ಯೋಜನೆಗಳನ್ನು ಈ 4ನೇ ಪಂಚವಾರ್ಷಿಕ ಯೋಜನೆಯಲ್ಲಿ

(ಶ್ರೀ ಎಸ್. ಶಿವಪ್ಪ)

ಕೈಗೊಳ್ಳುತ್ತೀರಿ ಎಂಬುದನ್ನು ಇಲ್ಲಿ ಬಾಯಿಬಿಟ್ಟು ಹೇಳಬೇಕಾಗಿದೆ. 1966 ನೇ ಇಸವಿಯಲ್ಲಿ ಆಗಬೇಕಾದ ಕಾಮಗಾರಿಗಳು ಇನ್ನೂ ಅನೇಕ ಕಾರ್ಯಗತವಾಗಬೇಕಾಗಿದೆ. ಮೂರು ನಾಲ್ಕು ವರ್ಷಗಳು ಆಗುತ್ತಾ ಬಂದರೂ ಅವು ಪೂರ್ತಿಯಾಗಿಲ್ಲ. ನಿಮ್ಮ 4ನೇ ಪಂಚವಾರ್ಷಿಕ ಯೋಜನೆ ಎಲ್ಲಿದೆ, ಅದರ ರೂಪರೇಷೆಗಳು ಏನು ಎಂಬುದು ಗೊತ್ತಾಗಲಿಲ್ಲ. ನಿಮ್ಮ ಈ 22 ವರ್ಷಗಳ ಆಡಳಿತದಲ್ಲಿ ಬೇಕಾದಷ್ಟು ಮೋಸ ಮಾಡಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ ಗಾಂಧಿ ಶತಮಾನೋತ್ಸವ ವಿಷಯವನ್ನು ಹೇಳಿದೆ. ಮಹಾತ್ಮ ಗಾಂಧಿಯವರ ವಿಚಾರವನ್ನು ಹೇಳುವುದಕ್ಕೆ ಎಷ್ಟರಮಟ್ಟಿಗೆ ನಿಮಗೆ ಹಕ್ಕು ಇದೆಯೆಂದು ಹೇಳಲಿಕ್ಕೆ ನಾನು ಪ್ರಶ್ನೆ ಮಾಡುತ್ತೇನೆ. ಗಾಂಧಿಯವರ ಹೆಸರನ್ನು ಬಾಹ್ಯಾಡಂಬರವಾಗಿ ಹೇಳುತ್ತಿದ್ದೀರಿ. ಅಷ್ಟೇ ಹೊರತು ಅವರ ಅಂತರ್ಯದಲ್ಲಿದ್ದಂಥ ತತ್ವಗಳನ್ನು ನೀವು ಆಚರಿಸುತ್ತಾ ಇಲ್ಲ. ಮಹಾತ್ಮ ಗಾಂಧೀಜಿಯವರ ಉಡುಪು ಧರಿಸಿಕೊಂಡು ಅವರ ಹೆಸರನ್ನು ಹೇಳುವುದರಲ್ಲಿ ಒಂದು ರೀತಿಯ ಬಾಹ್ಯಾಡಂಬರವಿದೆ. ಅಂತರ್ಯವಾಗಿ ಅವರು ಈ ಪ್ರಪಂಚಕ್ಕೆ ಏನು ತೋರಿಸಿ ಕೊಟ್ಟರು, ಅವರ ಆತ್ಮ ಪರಿಶುದ್ಧತೆ ಹೇಗಿತ್ತು ಎಂಬ ಬಗ್ಗೆ ನೀವು ಇನ್ನೂ ಆತ್ಮಶೋಧನೆ ಮಾಡಿಕೊಂಡಿಲ್ಲವೆಂದು ನಾನು ಹೇಳಬೇಕಾಗಿದೆ. ಮಹಾತ್ಮ ಗಾಂಧಿಯವರ ಶತಮಾನೋತ್ಸವ ಆಚರಿಸುವ ಈ ವರ್ಷದಲ್ಲಿ ಪ್ರತಿಯೊಬ್ಬ ಮಂತ್ರಿಗೂ ನಾನು ಪ್ರಶ್ನೆ ಮಾಡಿ ಕೇಳುತ್ತೇನೆ, ನಿಮ್ಮ ಆತ್ಮ ಅವರ ಹಾಗೆ ಸತ್ಯಶೋಧನೆಯಾಗಬೇಕು, ಅವರ ಹಾಗೆ ಪರಿಶುದ್ಧತೆಯಾಗಬೇಕು. ನಿಮ್ಮ ತಪ್ಪುಗಳನ್ನು ಬಿಚ್ಚಿ ಬಿಚ್ಚಿ ಸತ್ಯಶೋಧನೆ ಮಾಡಿಕೊಳ್ಳಬೇಕು. ನೀವು ಮಾಡುವ ತಪ್ಪನ್ನು ಎತ್ತಿ ಈ ದೇಶದಲ್ಲಿ ಅವನ್ನು ಬಹಿರಂಗ ಮಾಡುವ ಶಕ್ತಿ ನಿಮ್ಮಲ್ಲಿ ಎಷ್ಟು ಜನರಿಗೆ ಇದೆಯೆಂದು ನಾನು ಪ್ರಶ್ನೆ ಮಾಡುತ್ತೇನೆ. 1947 ರಿಂದೀಚೆಗೆ ನೀವು ಏನು ಆಗಿದ್ದೀರಿ, 1968 ರಲ್ಲಿ ಮತ್ತು ಆದರಿಂದೀಚೆಗೆ ನೀವು ಏನಾಗಿದ್ದೀರಿ ಎಂಬ ಬಗ್ಗೆ ನೀವೇ ಆತ್ಮಪರಿಶೋಧನೆ ಮಾಡಿಕೊಳ್ಳಬೇಕಾಗಿದೆ. ನಿಮ್ಮ ಬಂಧುಗಳಿಗೆ, ನಿಮ್ಮ ಹೆಂಡತಿಯವರಿಗೆ, ನಿಮ್ಮ ಮಕ್ಕಳಿಗೆ ನೀವು ಎಷ್ಟು ಆಸ್ತಿ ಮಾಡಿಕೊಂಡಿದ್ದೀರಿ, ಹಿಂದೆ ಎಷ್ಟು ಆಸ್ತಿ ಇತ್ತು, ಈಗ ಎಷ್ಟು ಇದೆ, ನಿಮ್ಮ ಅಣ್ಣ ತಮ್ಮಂದಿರ, ನಿಮ್ಮ ಬಂಧುವರ್ಗದವರ ಹೆಸರಿನಲ್ಲಿ ಎಷ್ಟೆಷ್ಟು ಆಸ್ತಿ ಮಾಡಿದ್ದೀರಿ. ನ್ಯಾಯ ರೀತಿಯಲ್ಲಿ ಆಡಳಿತವನ್ನು ನಡೆಸುತ್ತೇವೆಂದು ಹೇಳುವ ಜನ ನೀವು ಈ ಶಾಸನ ಸಭೆಯ ಮುಂದೆ ಬಹಿರಂಗವಾಗಿ ಆ ವಿಚಾರವಾಗಿ ಒಂದು ಪಟ್ಟಿಯನ್ನು ಈ ಸಭೆಗೆ ತೋರಿಸಬೇಕು. ಅನಂತರ ನಿಮಗೆ ಗಾಂಧೀಜಿಯವರ ಹೆಸರನ್ನು ಸ್ಮರಣೆ ಮಾಡುವುದಕ್ಕೆ ಧೈರ್ಯ ಬರುತ್ತದೆ. ಗಾಂಧಿಯವರ ಶತಮಾನೋತ್ಸವವನ್ನು ನಡೆಸುವುದಕ್ಕೂ ನಿಮಗೆ ಧೈರ್ಯ ಬರುತ್ತದೆ. ಇಲ್ಲದಿದ್ದರೆ ಅದು ಬಾಹ್ಯಾಡಂಬರವಾಗುತ್ತದೆ. ಮಹಾತ್ಮ ಗಾಂಧಿಯವರು ಇಡೀ ಜನತೆಗೆ ಒಬ್ಬ ಮಹಾತ್ಮರಾಗಿದ್ದರು. ಅವರಿಂದ ಈ ದೇಶದಲ್ಲಿ ಎಲ್ಲೂ ಸಾಧನೆಯಾಗದೇ ಇರುವಂಥಾದ್ದು ಸಾಧನೆಯಾಗಿದೆ. ಅವರೇ ಅದನ್ನು ಸಾಧನೆ ಮಾಡಿದ್ದಾರೆ. 1947 ರಲ್ಲಿ ನಡೆದಂಥ ಸ್ವಾತಂತ್ರ ಸಂಗ್ರಾಮ ಚಳುವಳಿಯಲ್ಲಿ ಸತ್ಯಾಗ್ರಹಮಾಡಿ ಬೇಕಾದಷ್ಟು ಶ್ರಮಪಟ್ಟು ಈ ದೇಶದಲ್ಲಿ ಸ್ವಾತಂತ್ರ್ಯವನ್ನು ತಂದು ಕೊಟ್ಟಿದ್ದಾರೆ. ಆದರೆ ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಾಡಿದಂಥ ಚಳುವಳಿ ಸಂದರ್ಭದಲ್ಲಿ ಪರರಾಷ್ಟ್ರಕ್ಕೆ ಹೋಗಿ ಭಿಕ್ಷೆ ಬೇಡಲಿಲ್ಲ. ಅಮೇರಿಕಾ, ರಷ್ಯಾ ಮತ್ತು ಪ್ರಪಂಚದ ಯಾವ ರಾಷ್ಟ್ರದಲ್ಲಿಯೂ ಹೋಗಿ ಸಹಾಯ ಕೇಳಲಿಲ್ಲ. ಈ ದೇಶದಲ್ಲಿ 33 ಕೋಟಿ ಜನತೆಯ ಪ್ರೇಮಕ್ಕಾಗಿ, ತ್ಯಾಗಕ್ಕಾಗಿ ಹೋರಾಡಿದರು. ಈ ದೇಶದ ಜನ ಮಹಾತ್ಮ ಗಾಂಧಿಯವರ ಹಿಂದೆ ಇದ್ದುಕೊಂಡು ಅವರು ಏನು ಹೇಳಿದರೂ ಮಾಡುತ್ತೇವೆಂದು ಅನೇಕ ಸಾರಿ ಹೇಳಿದ್ದಾರೆ. ಮಹಾತ್ಮ ಗಾಂಧಿಯವರಲ್ಲಿ ಒಂದು ಆತ್ಮ ಶಕ್ತಿ, ದೇಶಭಕ್ತಿ, ರಾಷ್ಟ್ರಪ್ರೇಮ ಇತ್ತು. ಮಹಾತ್ಮ ಗಾಂಧಿಯವರು ಜನತೆಯ ಪ್ರೇಮದ ಭಿಕ್ಷೆಯಿಂದ ಈ ದೇಶವನ್ನು ಕಟ್ಟಿದರು. ಅಂದಮೇಲೆ ಮಹಾತ್ಮ ಗಾಂಧಿಯವರ ಭಕ್ತಾಗ್ರೇಸರರಾಗಿ ತಾವು ಏನು ಮಾಡಿದ್ದೀರಿ ನಮ್ಮದೇ ಆದ ಒಂದು ರಾಜ್ಯವನ್ನು ಕಟ್ಟಿ ಅವರು ಜನತೆಯ ಪ್ರೇಮವನ್ನು ಮತ್ತಷ್ಟು ಹೆಚ್ಚಿಸುವ ಹಕ್ಕನ್ನು ಪಡೆದುಕೊಂಡಿದ್ದರು. ಈ ದೇಶದಲ್ಲಿ ತಾವು ಅವರು ಮಾಡಿದಂತೆ ಏನೂ ಮಾಡಲಿಲ್ಲ. ಇವತ್ತು ನೀವು ಅನ್ನದ ಭಿಕ್ಷೆಗಾಗಿ, ಹಣದ ಭಿಕ್ಷೆಗಾಗಿ ಪರರಾಷ್ಟ್ರಗಳ ದಾಸ್ಯರಾಗಿ, ಈ ದೇಶವನ್ನೇ ಸಾಲಕ್ಕಾಗಿ ಇಟ್ಟಂತೆ ಮಾಡಿದ್ದೀರಿ. ಅಮೇರಿಕಾ, ಇಂಗ್ಲೆಂಡ್ ಮತ್ತು ಇತರ ರಾಷ್ಟ್ರಗಳವರು ಎಷ್ಟೆಷ್ಟು ಭಿಕ್ಷೆ ಕೊಡುತ್ತಾರೋ ಎಂದು ಹೇಳಿ, ಭಿಕ್ಷಾಂದೇಹಿ ಎಂದು ಪರಕೀಯರ ದಾಸ್ಯಕ್ಕೊಳಗಾಗಿ, ಪರರಾಷ್ಟ್ರಗಳಿಂದ ಆಹಾರವನ್ನು ಆಮದು ಮಾಡುವ ಚಿತ್ರವನ್ನು ಈ ದೇಶಕ್ಕೆ ಕೊಟ್ಟಿದ್ದೀರಿ. ಮಹಾತ್ಮ ಗಾಂಧಿಜೀಯವರ ಶತಮಾನೋತ್ಸವ ಕಾಲದಲ್ಲಿ ಪ್ರತಿಯೊಬ್ಬರೂ ತಮ್ಮ ಆತ್ಮಶೋಧನೆ ಮಾಡಿಕೊಳ್ಳಬೇಕು. ನಮ್ಮ ದೇಶದದಲ್ಲಿ ಪ್ರಜಾಪ್ರಭುತ್ವ ಎಲ್ಲಿದೆ? Is there democracy in the State ?

(MR. SPEAKER in the Chair.)

ನಮ್ಮ ಪ್ರಜಾಪ್ರಭುತ್ವ ಎತ್ತ ಸಾಗುತ್ತದೆ ಎಂಬುದನ್ನು ವಿಚಾರ ಮಾಡತಕ್ಕ ಪರಿಸ್ಥಿತಿಗೆ ಬಂದಿದ್ದೇವೆ. ನಮ್ಮ ಪ್ರಜಾಪ್ರಭುತ್ವ ಜನತೆಯಿಂದ ದೂರ ಸಾಗಿದೆಯೇ, ಅಥವಾ ಹತ್ತಿರದಲ್ಲಿದೆಯೇ ಎಂಬುದನ್ನು ಪರೀಕ್ಷೆ ಮಾಡತಕ್ಕ ಕಾಲ ಈ ಗಾಂಧೀಜಿಯ ಶತಮಾನೋತ್ಸವ ಕಾಲ. ನಾನಾದರೂ ಹೇಳುತ್ತೇನೆ—ಪ್ರಜಾಪ್ರಭುತ್ವದ 22 ವರ್ಷದಲ್ಲಿ ದೇಶದಲ್ಲಿ ಏನು ಸಾಧನೆಯನ್ನು ಮಾಡಬೇಕಾಗಿತ್ತೋ, ಆ ಸಾಧನೆಗಿಂತ ಹೆಚ್ಚಾಗಿ ನಮ್ಮ ದೇಶದಲ್ಲಿ ಆರ್ಥಿಕದ ಸಂಕಲೆಯ ನೊಗವನ್ನು ಹೊತ್ತಿರುವ ಇಂಡಿಯಾ ದೇಶದ ಚಿತ್ರ ಎಲ್ಲೆಲ್ಲೂ ಹರಡಿದೆ ಎಂಬುದನ್ನು ಬಹಳ ವ್ಯಸನದಿಂದ ನೋಡಬೇಕಾಗಿದೆ. ನಾನು ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಕಾನ್‌ಫರೆನ್ಸಿಗೆ ಭಾರತ ರಾಷ್ಟ್ರದ ಹೆಮ್ಮೆಯ ಪುತ್ರನಾಗಿ ಹೋಗಿದ್ದೇನೆ. ಆ ಸಮ್ಮೇಳನದಲ್ಲಿ ಅನೇಕ ರಾಷ್ಟ್ರದ ಪ್ರತಿನಿಧಿಗಳು ಭಾರತ ದೇಶದ ವಿಚಾರದಲ್ಲಿ ತಳೆದಿದ್ದ ಅಭಿಪ್ರಾಯವನ್ನು ಕೇಳಲು ನನಗೆ ಬಹಳ ಬೇಸರವುಂಟಾಯಿತು. ನನಗೆ ಎಷ್ಟು ಗೌರವ ಆದರಿಂದ ಸಿಗಬೇಕಾಗಿತ್ತೋ ಅಷ್ಟು ಪಡೆಯದವನಾಗಿ ಹೋದೆ. ಅವರು ಕೇಳುವ ಪ್ರಶ್ನೆ, ಅವರ ಅಭಿಪ್ರಾಯ ಎಲ್ಲಾ ತೀರಾ ಬೇಸರವನ್ನು ಉಂಟುಮಾಡುತ್ತದೆ. ಅವರು ಭಾರತ ದೇಶವು ಒಂದು ಹಸಿವಿನಿಂದ ತುಂಬಿ ತುಳುಕಾಡುವ ದೇಶ, ಬಡಜನರಿಂದ ತುಂಬಿದ ದೇಶ ಹಣಕ್ಕಾಗಿ ಪರಕೀಯರಲ್ಲಿ ಭಿಕ್ಷೆ ಬೇಡುವ ರಾಷ್ಟ್ರ ಎಂಬಿತ್ಯಾದಿ ಅಭಿಪ್ರಾಯಗಳಿಂದ ಇದ್ದಾರೆ. ಹೊಸದಾಗಿ ಪ್ರಜಾಪ್ರಭುತ್ವವನ್ನು ಹೊಂದಿದಂತಹ ಅಮೇರಿಕ ಮತ್ತು ಆಫ್ರಿಕದ ರಾಷ್ಟ್ರಗಳು ನಮ್ಮ ಬಗ್ಗೆ ಬಹಳ ಸಣ್ಣ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ, ನನ್ನ ಪ್ರತಿಷ್ಠೆಗೆ ಒಂದು ಮುಳ್ಳಿಂದ ಚುಚ್ಚಿದ ಹಾಗೆ ಆಯಿತು. ಅವರು ಕೇಳಿರತಕ್ಕ ಪ್ರಶ್ನೆಗಳಲ್ಲಿ ನೋಡಿದರೆ ಅದರಲ್ಲಿ ನಿಜಾಂಶ ಇದೆ. ನಮ್ಮ ದೇಶದಲ್ಲಿ ಅವರು ಹೇಳಿದ ಹಾಗೆ ಬಡವರು ಇರತಕ್ಕಂತದ್ದು, ನಾವು ಪರದೇಶಗಳಿಂದ ಸಾಲ ಮಾಡಿರತಕ್ಕದ್ದು ಎಲ್ಲಾ ನಿಜವೇ. ನಾವು ಇಂದು ಭಾರತ ರಾಷ್ಟ್ರ ಇಂತಹ ಒಂದು ಅವಸ್ಥೆಗೆ ಬಂದು ನಿಂತಿರತಕ್ಕ ಚಿತ್ರವನ್ನು ನೋಡಬೇಕಾಗಿದೆ. ಮಹಾತ್ಮಾ ಗಾಂಧೀಜಿಯವರು ಈ ದೇಶದಲ್ಲಿರತಕ್ಕಂತಹ ಶಕ್ತಿಯನ್ನು ಕ್ರೋಢೀಕರಿಸಿದರು, ಇಲ್ಲಿರತಕ್ಕ ಜನತೆಯ ತ್ಯಾಗವನ್ನು ಕ್ರೋಢೀಕರಿಸಿದರು, ಜನತೆಯ ಪ್ರೇಮವನ್ನು ಕ್ರೋಢೀಕರಿಸಿದರು. ಆದರೆ, ಅದೆಲ್ಲವೂ 22 ವರ್ಷಗಳಾದ ಮೇಲೆ ಮಾಯವಾಗಿ ಹೋಯಿತು. ನೀವು ಇವತ್ತು ಶ್ರಮದಾನ ಮಾಡಿ ಎಂದು ಹೇಳುತ್ತಿದ್ದೀರಿ, ಯಾರಿಗೆ ಶ್ರಮದಾನ, ಯಾರಿಗೆ ಅದರ ಫಲ ? ಶ್ರಮದಾನ ಬಡವನದ್ದು, ಅದರ ಫಲ ಮಂತ್ರಿಗಳಿಗಾಯಿತು. ಗಾಂಧೀಜಿಯವರು ಹೇಳಿದಂತಹ ಶ್ರಮದಾನಕ್ಕೆ ಜನರು ಪುಂಕಾನುಪುಂಕವಾಗಿ ಬಂದರು. ಅಷ್ಟೊಂದು ಶಕ್ತಿ ಮಹಾತ್ಮಾ ಗಾಂಧೀಜಿಯವರಲ್ಲಿತ್ತು. ಆದರೆ ಅದು ಇವತ್ತು ಮಾಯವಾಗಿ ಹೋಯಿತ್ತು. ರಾಜ್ಯಪಾಲರ ಭಾಷಣದಲ್ಲಿ, ಈ ಪ್ರಜಾಪ್ರಭುತ್ವ ಏನಿದೆ, ಅದು ಈ ದೇಶದಲ್ಲಿಲ್ಲ ಎಂಬ ಭಾವನೆ ಅರಿವಾಗುತ್ತದೆ. ಇವತ್ತು ಇವರು ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಮಾಡಿದಂತಹ ಕೆಲಸ, ಅದು ಈ ಪ್ರಜಾಪ್ರಭುತ್ವಕ್ಕೆ ಹೆಸರು ತರತಕ್ಕಂತಹ ಕೆಲಸವಲ್ಲ. ಗಾಂಧೀಜಿಯ ಶಿಷ್ಯರಾದಂತವರು, ತಮ್ಮ ಆತ್ಮಶೋಧನೆ ಮಾಡಿ, ನಾವು ಮಾಡಿದ್ದು ತಪ್ಪು ಆಯಿತು ಎಂಬುದನ್ನು ಹೇಳಿದರೆ, ಅದು ನಿಜವಾಗಿಯೂ ಶ್ಲಾಘನೀಯವಾದುದು ಮತ್ತು ಮಹಾತ್ಮಾ ಗಾಂಧೀಜಿಯವರಿಗೆ ಶ್ರೇಯಸ್ಸು ಬರುತ್ತದೆ. ಆದರೆ ಇವರು ಭಂಡತನದಿಂದ ಏನು ಬೇಕಾದರೂ ಹೇಳಬಹುದು. ಇವರು ಏನು ಕೆಲಸ ಮಾಡಿದ್ದಾರೆಂದು ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಇವರು ನಮ್ಮ 9 ಕೋಟಿ ರೂಪಾಯಿ ತೆಗೆದುಕೊಂಡು ಎಲ್ಲಾ ಕಡೆ ಹೋದರು. ಹೋಗಿ, ಜನರಲ್ಲಿ, "ಏನು ನಿಮ್ಮ ಊರಿಗೆ ರಸ್ತೆ ಬೇಕೋ, ನಿಮ್ಮ ಊರಿಗೆ ಬಾವಿ ಬೇಕೋ, ಯಾವುದು ಬೇಕು, ಕೇಳಿ. ಆದರೆ ನೀವು ನಮಗೆ ಓಟು ಕೊಡುತ್ತೀರಾ!" ಎಂದು ಕೊಟ್ಟರು, ಕೊಟ್ಟರು ಈ ಓಟಿಗಾಗಿ. ಪಾಪ ಡಿಸೇಬಲ್ಡ್ ಪರ್‌ಸನ್ಸ್‌ಗೂ ಕೊಡತಕ್ಕದ್ದನ್ನು ತೆಗೆದುಕೊಂಡು ಹೋಗಿ ಕೊಟ್ಟರು. ಇವತ್ತು ಇಂಗ್ಲೆಂಡ್, ಅಮೇರಿಕ, ಜಪಾನ್, ಜರ್ಮನಿ, ಇವುಗಳನ್ನು ಬಿಟ್ಟು ಬಿಡಿ. ನಿಮ್ಮ ಈ ದೇಶದಲ್ಲಿ ನೀವು ಸರಿಯಾದ ದಾರಿಯನ್ನು ಬಿಟ್ಟು ಬಿಟ್ಟು, ಬೇರೆ ದಾರಿಯನ್ನು ಹಿಡಿದರೆ, ಅದರಿಂದ ಎಲ್ಲಿ ನಮ್ಮ ರಾಷ್ಟ್ರ ಅಭಿವೃದ್ಧಿಯಾಗುತ್ತದೆ? ಒಂದು ದೇವರನ್ನು ನೋಡಲು ಬೆಟ್ಟಕ್ಕೆ ಹತ್ತುವಾಗ, ಅದರ ಸರಿದಾರಿಯನ್ನು ಹಿಡಿದರೆ ಇವತ್ತಲ್ಲ, ನಾಳೆಯಾದರೂ ದೇವರ ಹತ್ತಿರ ತಲುಪಬಹುದು, ಅದು ಬಿಟ್ಟು ಬೇರೆ ಯಾವುದೋ ದಾರಿಯನ್ನು ಹಿಡಿದರೆ, ಅದು ಎಲ್ಲೋ ಪಕ್ಕದ ಊರಿಗೆ ಹೋಗಬಹುದಲ್ಲದೆ, ದೇವರ ಹತ್ತಿರ ಹೇಗೆ ಹೋಗುತ್ತದೆ ?

ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ನಾನು ಮೊನ್ನೆ ಸಿಂಗಾಪುರಕ್ಕೆ ಹೋಗಿದ್ದೆ. ಅಲ್ಲಿ ಒಬ್ಬ ಮಂತ್ರಿಯವರ ಪರಿಚಯ ನನಗೆ ಆಯಿತು. ಅವರು ಒಂದು ವಿಚಾರವನ್ನು ನನಗೆ ಹೇಳಿದರು. ಅಲ್ಲಿ ಅವರು ಅಲ್ಲಿರತಕ್ಕ ಪ್ರತಿಯೊಂದು ಸಂಸಾರಕ್ಕೂ ಕೂಡ ಒಂದು ಮನೆಯನ್ನು ಕೊಡತಕ್ಕಂತಹ ತೀರ್ಮಾನವನ್ನು ಮಾಡಿದ್ದಾರೆ. ಅದೇ ಪ್ರಕಾರವಾಗಿ ಒಂದು ಸಾವಿರ ಫ್ಲಾಟ್ ಇರತಕ್ಕ 10-20 ಹಂತಸ್ತಿನ ಕಟ್ಟಡಗಳನ್ನು ಕಟ್ಟಿದ್ದಾರೆ. ಇವತ್ತು 11 ಗಂಟೆಗೆ ಯಾರಾದರೂ

(ಶ್ರೀ ಎಸ್. ಶಿವಪ್ಪ)

ಒಂದು ಮನೆ ಬೇಕೆಂದು ಅರ್ಜಿಯನ್ನು ಹಾಕಿದರೆ, ಅವನಿಗೆ 24 ಗಂಟೆಯೊಳಗೆ ಅದೆಲ್ಲವೂ ಇತ್ಯರ್ಥವಾಗಿ ಅವನು ಯಾವ ಮನೆಗೆ ಹೋಗಬೇಕೆಂಬುದನ್ನು ತೋರಿಸಿಕೊಡಬೇಕು. ಇಲ್ಲದಿದ್ದರೆ, ಆ ಅಧಿಕಾರಿಗೆ ಶಿಕ್ಷೆ ಮಾಡುತ್ತಾರೆ. ಇಂತಹ ಒಂದು ಒಳ್ಳೆಯ ಕೆಲಸವನ್ನು ಆ ಒಂದು ಸಣ್ಣ ರಾಷ್ಟ್ರ ಮಾಡುತ್ತದೆ. ಅದೇ ರೀತಿಯಲ್ಲಿ ಇಲ್ಲಿ ಯಾರಾದರೂ ಒಬ್ಬ ಮನೆ ಬೇಕೆಂದು ಅರ್ಜಿ ಹಾಕಿದರೆ, ಆ ಅರ್ಜಿ ಹಾಕಿದವನು ಯಾರು ? ಇವನು ಯಾರಿಗೆ ಸಂಬಂಧ, ಇವನಿಗೆ ಮನೆ ಕೊಟ್ಟರೆ, ಓಟು ಕೊಡುತ್ತಾನೆಯೇ ಎಂಬುದನ್ನೆಲ್ಲಾ ತಲೆಯಿಂದ ಬುಡದವರೆಗೆ ಪರೀಕ್ಷೆ ಮಾಡಿ ಅವನಿಗೆ ಮನೆ ಕೊಡಬಹುದು ಎಂದು ಹೇಳುತ್ತಾರೆ. ನಿಮ್ಮ ದೃಷ್ಟಿಯಲ್ಲಿರುವುದು ಓಟು. ನಿಮ್ಮ ಪಕ್ಷಕ್ಕೆ ಯಾರು ಸಹಾಯ ಮಾಡುತ್ತಾರೆ, ಯಾರು ಓಟು ಕೊಡುತ್ತಾರೆ, ಅವರ ಹಿತದೃಷ್ಟಿ ಮತ್ತು ನಿಮ್ಮ ಪಕ್ಷದ ಹಿತದೃಷ್ಟಿಯಲ್ಲದೆ, ನಿಮ್ಮಲ್ಲಿ ಒಂದು ರಾಷ್ಟ್ರದ ಹಿತದೃಷ್ಟಿಯಲ್ಲಿ ಕೆಲಸ ಮಾಡುವ ಪದ್ಧತಿ ಇಲ್ಲ. ಇದರಿಂದ ಅಧಿಕಾರವೆಲ್ಲಾ ಕೆಟ್ಟು ಹೋಯಿತು. ಅಂದಮೇಲೆ, ನಿಮ್ಮ 19 ಜನರೂ 19 ಜಿಲ್ಲೆಗೆ ಹೋಗಿ ಮಾಡಿದ್ದು ಇದೇ ಕೆಲಸ. ಈ ಅಭಾವ ಪರಿಸ್ಥಿತಿಗೆ ಬಂದಂತಹ ಹಣವನ್ನು ಕೊಡುವಾಗ ಕೂಡ ರಾಜಕೀಯ ಮಾಡಿದರು. ಯಾರಿಗೆ ಸಹಾಯ ಮಾಡಿದರೆ, ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಓಟು ಬರುತ್ತದೆ ಎಂಬ ಒಂದು ದೃಷ್ಟಿಯನ್ನು ಇಟ್ಟುಕೊಂಡು ಮಾಡಿದ್ದಾರೆ. ಚುನಾವಣೆಯ ಕಾಲದಲ್ಲಿ ಮಂತ್ರಿಗಳು ಹಗಲಿರುಳು ತಿರುಗಾಡುತ್ತಿದ್ದಾರೆ. ಏನು ಬೇಕಾದರೂ ಕೇಳುತ್ತಾರೆ, '' ಏನು ಬೇಕಯ್ಯಾ ನಿನಗೆ, ಕೇಳು '' ಎಂದು. ಪಾಪ ಅವನಿಗೆ ಕೊಟ್ಟಿರಿ, ಕೊಟ್ಟಿರಿ, ಎಷ್ಟು ಕೊಟ್ಟಿರಿ ! ಚುನಾವಣೆಯ ಕಾಲದಲ್ಲಿ ದೇಶದಲ್ಲೆಲ್ಲಾ ಸುತ್ತಿಕೊಂಡು ಬಂದಿದ್ದೀರಿ. ಎಷ್ಟೊಂದು ಜನರಿಗೆ ಏನೇನು ಕೊಡುತ್ತೀರೆಂದು ಹೇಳಿಕೊಂಡು ಬಂದಿದ್ದೀರಿ ? ಅವನ್ನೆಲ್ಲಾ ಕೊಡುತ್ತೀರಾ ! ಮತ್ತು ಅದಕ್ಕೆ ಎಲ್ಲಾ ರಿಕಾರ್ಡು ಏನಾದರೂ ಇದೆಯೇ ! ನೀವು ಹೇಳಿದನ್ನೆಲ್ಲಾ ಸ್ಯಾಂಕ್ಷನ್ ಮಾಡಿ ಕೊಟ್ಟರೆ ನಾನು ಖಂಡಿತವಾಗಿಯೂ, ನೀವು ಪರವಾಗಿಲ್ಲವೆಂದು ಹೇಳಬಲ್ಲೆನು.

ಇವೊತ್ತು ನೀವು ಆಡತಕ್ಕ ಮಾತಿನಂತೆ ಮಾಡುತ್ತಿದ್ದೀರಾ ? ಆಡುವುದು ಒಂದು, ಮಾಡುವುದು ಮತ್ತೊಂದು. ಆಡತಕ್ಕ ಮಾತನ್ನು ಕೃತಿಯಲ್ಲಿ ಮಾಡಿದಾಗ ಮೋಸವನ್ನು ಮಾಡುತ್ತಿದ್ದೀರಿ. ಇದರಿಂದ ಪ್ರಜಾಪ್ರಭುತ್ವದಲ್ಲಿ ಜನಗಳಿಗೆ ನಂಬಿಕೆ ಹೊರಟು ಹೋಗಿದೆ. ಅದರಲ್ಲೂ ಕೂಡ ಯುವಕರಿಗೆ ಸಂಬಂಧಪಟ್ಟ ಹಾಗೆ ಒಂದು ಯೂತ್ ವೆಲ್‌ಫೇರ್ ಬೋರ್ಡ್ ಮಾಡುತ್ತೇವೆಂದು ಹೇಳಿದ್ದೀರಿ, ನೀವು ಅವರಿಗೆ ಏನು ಮಾಡಿದ್ದೀರಿ ! ಯುವಕರು ರೊಚ್ಚಿಗೆದ್ದು ನಿಂತಿದ್ದಾರೆ. ಇಡೀ ದೇಶದಲ್ಲಿರತಕ್ಕ ಯುವಕರಿಗೆಲ್ಲರಿಗೂ ನಿಮ್ಮಲ್ಲಿ ನಂಬಿಕೆ ಹೊರಟು ಹೋಗಿದೆ. ವಿದ್ಯಾಭ್ಯಾಸದಲ್ಲಿಯೂ ನ್ಯೂನತೆಗಳಿವೆ. ಯುವಕರು ವಿದ್ಯಾಭ್ಯಾಸ ಮಾಡಿ ಬಂದ ಮೇಲೆ ಅವರಿಗೆ ಜೀವನ ನಡೆಸಲಿಕ್ಕೆ ದಾರಿ ಇದೆಯೇ ? ಆ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಈಗ 22 ವರ್ಷಗಳಿಂದ ಕಾಂಗ್ರೆಸ್ ಸರ್ಕಾರದವರು ಮಾಡಿದಂತಹ ಪಾಪದ ಫಲದಿಂದ ಇವೊತ್ತು ಯುವಕರು ರೊಚ್ಚಿಗೆದ್ದು ಅವರಿಗೆ ಸಮಾಜವಾದದಲ್ಲಿ ನಂಬಿಕೆಯಿಲ್ಲ, ಈಗಿನ ರಾಜ್ಯ ಭಾರದಲ್ಲಿ ಅವರಿಗೆ ನಂಬಿಕೆ ಇಲ್ಲ. ಪ್ರಜಾಪ್ರಭುತ್ವ ಈ ದೇಶದಲ್ಲಿ ಬಾಳಿ ಬೆಳೆಯಬೇಕು ಎಂದು ಆಶೆಯನ್ನಿಟ್ಟುಕೊಂಡಿದ್ದವರಿಗೆ ನೀವು ಅಧಿಕಾರ ಮಾಡತಕ್ಕ ರೀತಿಯಿಂದ ಪ್ರಜಾಪ್ರಭುತ್ವವೇ ಬುಡಮೇಲಾಗುವ ಪರಿಸ್ಥಿತಿಗೆ ಈ ದೇಶವನ್ನು ತಂದಿದ್ದೀರಿ. ಇವರು ರಾಜ್ಯಪಾಲರ ಬಾಯಲ್ಲಿ ಹೇಳಿಸುತ್ತಾರೆ ಪ್ರಜಾಪ್ರಭುತ್ವಕ್ಕೆ ಪರಸ್ಪರ ಚರ್ಚೆಯೇ ಆಧಾರ, ಅಭಿಪ್ರಾಯ ಸ್ವಾತಂತ್ರ್ಯ ಇದೆ ಎಂದು. ಪಾಪ ರಾಜ್ಯಪಾಲರು ಒಳ್ಳೆಯ ಮಾತುಗಳನ್ನ ಈ ಸಭೆಯಲ್ಲಿ ಹೇಳಿ ಹೋಗಿದ್ದಾರೆ. ಈ ಮಾತು ಹೇಗಿಯೆಂದರೆ ಪ್ರಜಾಪ್ರಭುತ್ವದಲ್ಲಿ ಜನತೆಗೆ, ಆತ್ಮ ಬಹಳ ಸೂಕ್ಷ್ಮವಾಗಿರಬೇಕು. ಆತ್ಮ ಮಂದವಾಗಿದ್ದರೆ ಏನು ಮಾಡಬೇಕಾಗುತ್ತದೆ ! ಶ್ರೀಮಾನ್ ರಾಚಯ್ಯನವರಿಗೂ ಮತ್ತು ಶ್ರೀಮಾನ್ ರಾಜಶೇಖರ ಮೂರ್ತಿಯವರಿಗೂ ಗೊತ್ತಿದೆ. ಬೆಟ್ಟದಪುರದ ಎತ್ತುಗಳು ಬಹಳ ಚುರುಕಾಗಿವೆ, ಒಳ್ಳೆಯ ಕೆಲಸ ಮಾಡುವ ಎತ್ತುಗಳು ಎಂದು. ಆ ಎತ್ತುಗಳಿಗೆ ಸ್ವಲ್ಪ ಹೊಡೆದರೆ ಸಾಕು ಅವು ಚುರುಕಾಗಿ ಓಡುತ್ತವೆ. ಅವುಗಳಿಗೆ ಹೆಚ್ಚಿಗೆ ಹೊಡೆಯಬೇಕಾಗಿಲ್ಲ. ಊರಿನ ಬಸವ ಇದೆಯಲ್ಲ ಅದಕ್ಕೆ ಹಗ್ಗ ಮೂಗುದಾರ ಏನೂ ಇಲ್ಲ. ಅದು ಊರಿನ ಸುತ್ತಲೂ ಇರತಕ್ಕ ಎಲ್ಲಾ ಹೊಲಗಳಲ್ಲಿಯೂ ಮೇಯುತ್ತದೆ. ಆದ್ದರಿಂದ ಅದಕ್ಕೆ ಚಕ್ಕಳ, ಅಥವಾ ಚರ್ಮ ದಪ್ಪನಾಗಿರುತ್ತದೆ. ಅದಕ್ಕೆ ಚುರುಕು ಮುಟ್ಟಿಸಬೇಕಾದರೆ ಚುಚ್ಚಬೇಕು. ಆ ರೀತಿ ನಮ್ಮ ಪ್ರಜಾಪ್ರಭುತ್ವ ಆಗಿದೆ, ಈ ಸರ್ಕಾರ ಆ ರೀತಿ ಆಗಿದೆ. ಇದಕ್ಕೆ ಚಾಟಿಯ ಏಟು ಸಾಕಾಗುವುದಿಲ್ಲ. ಆನೆಯ ಅಂಕುಶದಲ್ಲಿ ಹೊಡೆಯಬೇಕು. ಅಷ್ಟೊಂದು ಜಡತ್ವ ಬೆಳೆದು ಬಂದಿದೆ. ಈ ದೇಶದಲ್ಲಿ ಜಡತ್ವ ಹೋದ ಹೊರತು ಪ್ರಜಾಪ್ರಭುತ್ವ ಉಳಿಯುವುದಿಲ್ಲ ಎಂದು ನಾನು ಸಾರಿ ಸಾರಿ ಹೇಳಬೇಕಾಗಿದೆ. ರಾಜ್ಯಪಾಲರ ಭಾಷಣದಲ್ಲಿ ಅನೇಕ ಇಲಾಖೆಗಳ ವರದಿಯನ್ನು ಕೊಟ್ಟಿದ್ದಾರೆ.

ಇದರ ಬಗ್ಗೆ ಒಂದೆರಡು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಅಭಾವ ಪರಿಸ್ಥಿತಿಗೋಸ್ಕರ 9 ಕೋಟಿ ರೂಪಾಯಿಗಳ ಕಾರ್ಯಕ್ರಮಕ್ಕೆ ಮಂಜೂರಾತಿ ಕೊಟ್ಟು ಇದನ್ನು ಕಾರ್ಯಗತ ಮಾಡಲಾಯಿತು. ಈ ಅಭಾವ ಪರಿಹಾರ ಕಾರ್ಯಗಳಿಗಾಗಿ ಈಗಾಗಲೇ 7 ಕೋಟಿ ರೂಪಾಯಿಗಳು ಖರ್ಚಾಗಿದೆ. ಇನ್ನು 2 ಕೋಟಿ ರೂಪಾಯಿಗಳ ಕೆಲಸವನ್ನು ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಇನ್ನೂ ಅಭಾವ ನಿಂತಿಲ್ಲ. ಈ ವರ್ಷ ಸರಿಯಾಗಿ ಮಳೆ ಬೆಳೆ ಆಗದೇ ಇರುವುದರಿಂದ ಅಭಾವ ಜಾಸ್ತಿಯಾಗುತ್ತದೆ. ಈಗೇನೋ ಸುಗ್ಗಿಯ ಕಾಲ ಇದೆ. ಜನವರಿ ತಿಂಗಳಿನಲ್ಲಿ ಸುಗ್ಗಿಕಾಲವಾಗಿರುವುದರಿಂದ ಜನಗಳಿಗೆ ಸ್ವಲ್ಪ ಕಾಳು ಬಂದಿದೆ. ಈ ಸಾರಿ ಅಭಾವ ಪರಿಸ್ಥಿತಿ ಫೆಬ್ರವರಿ ಮಾರ್ಚಿ ತಿಂಗಳಿನಲ್ಲಿಯೇ ಪ್ರಾರಂಭವಾಗುತ್ತದೆ ದೊಡ್ಡ ಅಭಾವವುಂಟಾಗುತ್ತದೆ ಕಷ್ಟಪರಿಸ್ಥಿತಿ ಜನಗಳಿಗೆ ಇದೆ. ತಾಲ್ಲೂಕು ಬೋರ್ಡುಗಳ ಚುನಾವಣೆಯನ್ನು ನಡೆಸುವುದಕ್ಕೋಸ್ಕರ ಅಭಾವ ಪರಿಹಾರ ಕಾರ್ಯಗಳನ್ನು ಸರ್ಕಾರದವರು ಮಾಡಿಸಿದ್ದಾರೆ. ನಿಜವಾಗಿಯೂ ದೇಶದಲ್ಲಿ ಅಭಾವ ಪರಿಸ್ಥಿತಿಯನ್ನು ನಿವಾರಣೆ ಮಾಡಬೇಕಾದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಾವ ಪರಿಸ್ಥಿತಿಯ ಕಾರ್ಯವನ್ನು ಮುಂದೂಡಬೇಕು ಎಂದು ನಾನು ಸರ್ಕಾರಕ್ಕೆ ಸೂಚನೆ ಮಾಡುವುದಕ್ಕೆ ಇಚ್ಛೆ ಮಾಡುತ್ತೇನೆ.

ಲೆವಿ ಪದ್ಧತಿಯ ವಿಚಾರ. ಮಾನ್ಯ ಆಹಾರಶಾಖೆಯ ಮಂತ್ರಿಗಳು ಈಗ ಸಭೆಯಲ್ಲಿದ್ದಾರೆ. ಅವರು ಇದನ್ನು ಗಮನಿಸಬೇಕು. ಲೆವಿ ಪದ್ಧತಿ ಮುಖಾಂತರ ರೈತರಿಂದ ಆಹಾರ ಧಾನ್ಯವನ್ನು ವಸೂಲು ಮಾಡುತ್ತಿದ್ದಾರೆ. ಇವೊತ್ತು ಸರ್ಕಾರದವರು ರೈತರಿಂದ ವಸೂಲು ಮಾಡತಕ್ಕ ಕಾಳುಗಳಿಗೆ, ಧಾನ್ಯಕ್ಕೆ ಸರ್ಕಾರದವರು ಕೊಡುವ ಧಾರಣೆ ಏನು ? ಇವರು ಪೇಟೆ ಧಾರಣೆಯನ್ನು ರೈತರಿಂದ ವಸೂಲು ಮಾಡಿದ ಧಾನ್ಯಕ್ಕೆ ಕೊಡುತ್ತಾರೆಯೇ ? ಯಾವ ರೈತ ತನ್ನ ಭೂಮಿಯಲ್ಲಿ ಕಷ್ಟಪಟ್ಟು ಧಾನ್ಯವನ್ನು ಬೆಳೆಯುತ್ತಾನೆಯೋ ಆ ಧಾನ್ಯಕ್ಕೆ ಪೇಟೆಯಲ್ಲಿರತಕ್ಕ ಧಾರಣೆಯನ್ನು ಸರ್ಕಾರ ಕೊಡುವುದಿಲ್ಲ. ಧರ್ಮ ಎಲ್ಲಿದೆ ? ಪರದೇಶಕ್ಕೆ ಆಹಾರಕ್ಕಾಗಿ ಭಿಕ್ಷಾಪಾತ್ರೆಯನ್ನು ಒಡ್ಡಿ ನೂರಾರು ಕೋಟಿ ರೂಪಾಯಿಗಳನ್ನು ಕೊಟ್ಟು ಅಲ್ಲಿಂದ ಆಹಾರ ಧಾನ್ಯವನ್ನು ತರುತ್ತಿದ್ದಾರೆ. ನಮ್ಮ ರೈತ ಕಷ್ಟಪಟ್ಟು ಬೆಳೆದಂತಹ ಧಾನ್ಯಕ್ಕೆ ಇವೊತ್ತಿನ ದಿವಸ ಸರ್ಕಾರ ಪೇಟೆ ಧಾರಣೆಯನ್ನು ಕೊಡುವುದಿಲ್ಲ ಎಂದು ಹೇಳಿದರೆ ಇದನ್ನು ಸರ್ಕಾರ ಎಂದು ಹೇಗೆ ಕರೆಯುವುದು ! ರೈತ ಬೆಳೆದಂತಹ ಧಾನ್ಯಕ್ಕೆ ಪೇಟೆ ಧಾರಣೆಯನ್ನು ಕೊಡಬೇಕೆಂದು ಮದ್ರಾಸ್ ಹೈಕೋರ್ಟಿನವರು ಒಂದು ಆದೇಶವನ್ನು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ರೈತ ಬೆಳೆದಂತಹ ಧಾನ್ಯಕ್ಕೆ ಪೇಟೆ ಧಾರಣೆಯನ್ನು ಕೊಡುವುದು ಸರ್ಕಾರದ ಕರ್ತವ್ಯ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ನಮ್ಮ ಸರ್ಕಾರ ಕಣ್ಣು ತೆರೆದು ರೈತರಿಂದ ವಸೂಲು ಮಾಡತಕ್ಕ ಧಾನ್ಯಕ್ಕೆ ಪೇಟೆ ಧಾರಣೆಯನ್ನು ಕೊಡಬೇಕು. ಇಲ್ಲದೆ ಇದ್ದರೆ ರೈತ ಸರ್ಕಾರಕ್ಕೆ ಧಾನ್ಯವನ್ನು ಕೊಡಬೇಕಾಗಿಲ್ಲ. ಅವರು ಬೆಳೆದಂತಹ ಧಾನ್ಯವನ್ನು ಕಂಟ್ರೋಲ್ ಮಾಡಿ ನಿಮ್ಮ ಮನೆಗಳಿಗೆ ಹಂಚಿಕೊಳ್ಳುವುದಕ್ಕೆ ಈ ರೀತಿ ಮಾಡುತ್ತಿದ್ದೀರಾ ? ಲೆವಿ ಪದ್ಧತಿಯ ಮುಖಾಂತರ ರೈತರಿಂದ ಸರ್ಕಾರ ವಸೂಲು ಮಾಡುವುದು ಯಾವುದೇ ಧಾನ್ಯ ಇರಲಿ ಅದಕ್ಕೆ ಪೇಟೆ ಧಾರಣೆಯನ್ನು ಕೊಡುವುದು ಧರ್ಮ ಮತ್ತು ಸರ್ಕಾರದ ಕರ್ತವ್ಯ. ಪೇಟೆ ಧಾರಣೆಯನ್ನು ರೈತನ ಧಾನ್ಯಕ್ಕೆ ಕೊಡದೇ ಹೋದರೆ ರೈತ ನಿಮಗೆ ಧಾನ್ಯವನ್ನು ಕೊಡಬೇಕಾಗಿಲ್ಲ, ಎಂದು ನನ್ನ ಅಭಿಪ್ರಾಯ. ಒತ್ತಾಯ ಮಾಡಿ ಬಲಾತ್ಕಾರವಾಗಿ ರೈತರಿಂದ ಧಾನ್ಯವನ್ನು ವಸೂಲು ಮಾಡುವುದಕ್ಕೆ ಯಾವ ಹಕ್ಕೂ ಸರ್ಕಾರಕ್ಕೆ ಇಲ್ಲ ಎಂದು ನಾನು ಹೇಳಬೇಕಾಗಿದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಶ್ರೀಮಾನ್ ಕೃಷ್ಣನ್ ಅವರು ಕಮ್ಯುನಿಸ್ಟ್ ಪಕ್ಷದವರು. ಅವರು ಈ ಮಾತಿಗೆ ಒಪ್ಪುತ್ತಾರೆಯೇ !

ಶ್ರೀ ಎಸ್. ಶಿವಪ್ಪ.—ಪೇಟೆಯಲ್ಲಿ, ಸಿಟಿಯಲ್ಲಿ ಜನಗಳಿಗಾಗಲೀ, ಕಾರ್ಮಿಕರಿಗಾಗಲೀ ಸುಲಭ ದರದಲ್ಲಿ ಮಾರಬೇಕಾದರೆ ಸರ್ಕಾರ ಸಬ್ಸಿಡಿ ಕೊಡಬೇಕು. ಈ ಪದ್ಧತಿ ಮದ್ರಾಸ್‌ನಲ್ಲಿ ಇದೆ. ಮದ್ರಾಸು, ಕೊಯಮತ್ತೂರು ಮುಂತಾದ ಕಡೆಗಳಲ್ಲಿ ಸ್ಟ್ಯಾಟ್ಯೂಟರಿ ರೇಷನಿಂಗ್ ಪದ್ಧತಿ ಇರುವ ಕಡೆ ಮದ್ರಾಸ್ ಸರ್ಕಾರದವರು ಸಬ್ಸಿಡಿ ಕೊಡುತ್ತಿದ್ದಾರೆ. ಅದಕ್ಕೆ ಶ್ರೀಮಾನ್ ಕೃಷ್ಣನ್ ಅವರು ಬೇಡ ಎಂದು ಹೇಳುತ್ತಾರೆಯೇ ? ಅದಕ್ಕೆ ಅವರ ಕಡೆ ಏತಕ್ಕೆ ಕೈ ತೋರಿಸುತ್ತೀರಿ ? ಮದ್ರಾಸ್ ಸರ್ಕಾರದವರು ಮಾಡುವ ಕೆಲಸವನ್ನು ನಮ್ಮ ಸರ್ಕಾರದವರು ಏತಕ್ಕೆ ಮಾಡಬಾರದು? ಅದಕ್ಕೋಸ್ಕರವಾಗಿ ಸರ್ಕಾರದವರು ರೈತರಿಂದ ಲೆವಿ ಮುಖಾಂತರ ವಸೂಲು ಮಾಡುವ ಧಾನ್ಯಕ್ಕೆ ಸರಿಯಾದಂತಹ ಪೇಟೆ ಧಾರಣೆಯನ್ನು ಕೊಡಬೇಕೆಂದು ನಾನು ಆಗ್ರಹ ಪೂರ್ವಕವಾಗಿ ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ರೈತರಿಗೆ ಅನ್ಯಾಯ ಮಾಡುವುದನ್ನು ನಿಲ್ಲಿಸಬೇಕು, ಎಂದು ನಾನು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಹೇಳುತ್ತೇನೆ.

(ಶ್ರೀ ಎಸ್. ಶಿವಪ್ಪ)

ಕೈಗಾರಿಕೆಯ ವಿಚಾರದಲ್ಲಿ ಹೇಳಬೇಕಾದರೆ ಈ ಸರ್ಕಾರದಲ್ಲಿ ಏನಾದರೂ ಕೈಗಾರಿಕಾ ನೀತಿ ಇದೆಯೇ? ಒಂದು ಕಡೆ ಹೇಳುತ್ತಾರೆ ಡೆಮಾಕ್ರಟಿಕ್ ಸೋಷಿಯಾಲಿಜಮ್ ನಮ್ಮ ಗುರಿ ಎಂದು ಬಹಳ ದೊಡ್ಡದಾಗಿ ಹೇಳಿದ್ದಾರೆ. ಇವೊತ್ತು ನಿಮ್ಮ ಸರ್ಕಾರ ನಡೆಸುತ್ತಾ ಇರತಕ್ಕ ನೀತಿಯೇನು! ನಿಮ್ಮ ಕೈಗಾರಿಕಾ ನೀತಿಯೇನು! ನಮ್ಮ ದೇಶದ ಮುಖ್ಯ ಮಂತ್ರಿಗಳು ಪಕ್ಕದ ರಾಜ್ಯಕ್ಕೆ ಹೋಗಿ, ಅಲ್ಲಿನ ಕೈಗಾರಿಕೋದ್ಯಮಿಗಳನ್ನು ನಮ್ಮ ರಾಜ್ಯಕ್ಕೆ ಬನ್ನಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಎಂದು ಅವರನ್ನು ಆಹ್ವಾನಿಸುತ್ತಿದ್ದಾರೆ. ಇದು ಡೆಮಾಕ್ರಟಿಕ್ ಸೋಷಿಯಾಲಿಜಮ್. ಇದು ಸರ್ಕಾರದ ನೀತಿ. ನಿಜವಾಗಿಯೂ ಇದು ನಾಚಿಗೇಡಿನ ಪ್ರಸಂಗ. ಒಬ್ಬರು ಸರ್ಕಾರದ ಮುಖ್ಯ ಮಂತ್ರಿಗಳು ಪಕ್ಕದ ರಾಜ್ಯದ ಬಂಡವಾಳ ಷಾಹಿಗಳನ್ನು ಆಹ್ವಾನಿಸಿ ನೀವು ನಮ್ಮ ದೇಶಕ್ಕೆ ಬಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕು ಎಂದು ಹೇಳತಕ್ಕ ನೀತಿ ಸಮಾಜವಾದಕ್ಕೆ, ಪ್ರಜಾಪ್ರಭುತ್ವಕ್ಕೆ ಎಷ್ಟೊಂದು ದೂರ ಇದೆ ಎಂಬುದನ್ನು ಯೋಚನೆ ಮಾಡಬೇಕು. ಕೈಗಾರಿಕೆಯಲ್ಲಿ ನಮ್ಮ ದೇಶ ಇಡೀ ಭಾರತಕ್ಕೇ ಮಾದರಿ ಆಗಿತ್ತು. ಡಾ ಸರ್. ಎಂ. ವಿಶ್ವೇಶ್ವರಯ್ಯನವರು ಈ ದೇಶದಲ್ಲಿ ಪ್ರಥಮವಾಗಿ ಎಲ್ಲಾ ಕೈಗಾರಿಕೆಗಳನ್ನೂ ಸರ್ಕಾರದವರೇ ಸ್ಥಾಪನೆ ಮಾಡುವಂತೆ ಮಾಡಿ ತೋರಿಸತಕ್ಕಂಥ ಒಂದು ಮಾದರಿ ದೇಶ ಮೈಸೂರು ಆಗಿತ್ತು.

4-30 P.M.

ಇಂತಹ ಮಾದರಿಯಾದ ಮೈಸೂರು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ಸರ್ಕಾರದವರು ಬಂಡವಾಳಷಾಹಿಗಳ ಹತ್ತಿರ ಹೋಗಿ ನಮ್ಮ ರಾಜ್ಯಕ್ಕೆ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಎಂದು ಅಂಗಲಾಚಿ ಬೇಡಿಕೊಳ್ಳುತ್ತಿದ್ದಾರೆ. ಇದು ಸರ್ಕಾರದ ನೀತಿಗೆ ಸರಿಯಾದುದು ಅಲ್ಲ. ಸರ್ಕಾರದ ಹತ್ತಿರ ಬಹಳಷ್ಟು ಹಣ ಇದೆ. ಬಂಡವಾಳಷಾಹಿಗಳ ಹತ್ತಿರ ಇರುವ ಹಣಕ್ಕಿಂತಲೂ ಹೆಚ್ಚು ಹಣ ಸರ್ಕಾರದ ಹತ್ತಿರ ಇದೆ. ನಮ್ಮ ರಾಜ್ಯದಲ್ಲಿ ಅಪಾರವಾದ ಖನಿಜ ಸಂಪತ್ತು ಇದೆ. ಹೇರಳವಾದ ಅರಣ್ಯ ಸಂಪತ್ತು ಇದೆ. ಸರ್ಕಾರದವರೇ ಮನಸ್ಸು ಮಾಡಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಾದರೆ ಹಣ ಕುಣಿಯುತ್ತಾ ಬರುತ್ತದೆ. ಹಣ ಭೂಮಿಯಿಂದ ಬರುತ್ತದೆಯೇ ವಿನಃ ಆಕಾಶದಿಂದ ಬರುವುದಿಲ್ಲ. ದೇಶದ ಜನತೆಯ ಸೇವೆಯನ್ನು ನೀವು ಮಾಡಬೇಕೆಂದಿದ್ದರೆ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಅಮೇರಿಕಾ ಮತ್ತು ಜಪಾನ್ ದೇಶಗಳು ಸಹ ಕೈಗಾರಿಕೆಗಳನ್ನು ತಾವೇ ಸ್ಥಾಪನೆ ಮಾಡಿಕೊಂಡರೇ ವಿನಃ ಬೇರೆಯವರ ಸಹಾಯವನ್ನು ತೆಗೆದುಕೊಳ್ಳಲಿಲ್ಲ. ಅವರಿಗೇನು ಹಣ ಆಕಾಶದಿಂದ ಬೀಳಲಿಲ್ಲ. ಜಪಾನ್ ದೇಶವೆಲ್ಲಾ ಸುಟ್ಟು ಹೋದರೂ ಸಹ ಅವರು ಕೇವಲ 20 ವರ್ಷಗಳ ಅವಧಿಯಲ್ಲಿ ಕೈಗಾರಿಕೆಯಲ್ಲಿ ಇಡೀ ಪ್ರಪಂಚಕ್ಕೇ ಮುಂದೆ ಇದ್ದಾರೆ. ಆದರೆ ನೀವು ಸ್ವಾತಂತ್ರ್ಯ ಬಂದು 22 ವರ್ಷಗಳಾದರೂ ಸಹ ಕೈಗಾರಿಕೆಯಲ್ಲಿ ಏನನ್ನೂ ಸಾಧಿಸಿಲ್ಲ. ಮೈಸೂರಿನ ಮಟ್ಟದಲ್ಲಿಯೇ ಆಗಲಿ, ದೆಹಲಿಯ ಮಟ್ಟದಲ್ಲಿಯೇ ಆಗಲೀ ನೀವುಗಳು ಬಂಡವಾಳಷಾಹಿಗಳ ಗುಲಾಮರಾಗಿದ್ದೀರಿ. ಬಿರ್ಲಾ, ಟಾಟಾ ಅವರುಗಳ ಗುಲಾಮರಾಗಿದ್ದೀರಿ. ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ ಕಳೆದ 50 ವರ್ಷಗಳಿಂದಲೂ ಸಹ ಸಣ್ಣ ಕಾರುಗಳನ್ನು ತಯಾರು ಮಾಡುವುದಕ್ಕೆ ನಿಮಗೆ ಸಾಧ್ಯವಾಗಿಲ್ಲ. ಇವತ್ತಿನವರೆಗೂ ಸಹ ಬಂಡವಾಳಷಾಹಿಗಳ ಹಿಂಬಾಲಕರಾಗಿ ಅವರ ಗುಲಾಮರಾಗಿ ಇದ್ದುಕೊಂಡು ಕೈಗಾರಿಕೆಗಳನ್ನು ಹೆಚ್ಚು ಹೆಚ್ಚು ಸ್ಥಾಪನೆ ಮಾಡುವುದಕ್ಕೆ ನಿಮಗೆ ಸಾಧ್ಯವಾಗಿಲ್ಲ. ಇನ್ನು ಮುಂದೆಯಾದರೂ ಸಹ ಬಂಡವಾಳಷಾಹಿಗಳನ್ನು ನಂಬಿಕೊಳ್ಳದೆ ಸರ್ಕಾರದವರೇ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಇವತ್ತಿನದಿವಸ ಜನರಿಗೆ ಕೆಲಸವಿಲ್ಲದೆ, ಅವರು ಕಳ್ಳನೋಟುಗಳನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದಾರೆ. ಈ ವಿಚಾರವನ್ನು ನಾವು ದಿನನಿತ್ಯ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಈ ರೀತಿ ಕಳ್ಳನೋಟುಗಳನ್ನು ತಯಾರು ಮಾಡುವವರಿಗೆ ಬಂಡವಾಳಷಾಹಿಗಳ ಬೆಂಬಲವಿದೆ. ಇವತ್ತು ಕೆಲವರನ್ನು ಹಿಡಿಯುತ್ತೀರಿ, ನಾಳೆ ಬಿಟ್ಟು ಬಿಡುತ್ತೀರಿ. ಇವತ್ತು ಕಳ್ಳನೋಟನ್ನು ತಯಾರು ಮಾಡುವುದಕ್ಕಿಂತ ದೊಡ್ಡ ಅಪರಾಧ ಬೇರೆ ಯಾವುದೂ ಇಲ್ಲ. ಕಳ್ಳನೋಟನ್ನು ತಯಾರು ಮಾಡುವುದೆಂದರೆ ಬೇರೆ ಒಂದು ಸರ್ಕಾರವನ್ನೇ ರಚನೆ ಮಾಡಿದಂತೆ; ಪ್ರತಿ ಸರ್ಕಾರ ಇದ್ದಂತೆ. ಈ ರೀತಿ ತಯಾರು ಮಾಡುವವರನ್ನು ಹಿಡಿಯುವುದಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಅವರಲ್ಲಿ ಬೇಕಾದಷ್ಟು ಹಣ ಇದೆ. ಇಂತಹವರಿಗೆ ನೀವು ಪ್ರೋತ್ಸಾಹ ಕೊಡುವುದಾದರೆ ಸಮಾಜವಾದವನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವುದನ್ನು ಸರ್ಕಾರಕ್ಕೆ ಹೇಳುತ್ತೇನೆ.

ಇನ್ನು ಪ್ರವಾಸೋದ್ಯಮದ ಬಗ್ಗೆ ಹೇಳುವುದಾದರೆ, ಮೈಸೂರು ದೇಶದಂತಹ ಸುಂದರ ದೇಶ ಪ್ರಪಂಚದಲ್ಲಿಯೇ ಎಲ್ಲೂ ಇಲ್ಲ. ಯಾವ ಮೂಲೆಯಲ್ಲಿಯೂ ಇಲ್ಲ. ಅಷ್ಟೊಂದು ಸುಂದರವಾದಂಥ ಸ್ಥಳಗಳು ನಮ್ಮ ರಾಜ್ಯದಲ್ಲಿವೆ. ನಾನು ಮೊನ್ನೆ ಬಹಮಾನಗೆ ಹೋದಾಗ ತಿಳಿದುಬಂತು, ಅದು ಒಂದು ಸಣ್ಣ ದ್ವೀಪ. ಅಲ್ಲಿಯ ಜನಸಂಖ್ಯೆ ಕೇವಲ ಒಂದು ಲಕ್ಷದ 67 ಸಾವಿರ ಮಾತ್ರ. ಆ ಒಂದು ಸಣ್ಣ ದ್ವೀಪದ ಆದಾಯ 2—3 ಕೋಟಿ ರೂಪಾಯಿಗಳೆಂದು ತಿಳಿದುಬಂತು. ಇಷ್ಟು ಹಣದಲ್ಲಿ ಸೇಕಡ 90 ಭಾಗ ಪ್ರವಾಸೋದ್ಯಮದ ಮೂಲಕ ಬರುತ್ತದೆಂದು ತಿಳಿಯಿತು. ಅಂದರೆ ಅಲ್ಲಿಯ ರಸ್ತೆಗಳು ಬಹಳ ಚೆನ್ನಾಗಿವೆ. ಒಳ್ಳೆಯ ಹೊಟೆಲ್‌ಗಳಿವೆ. ಉದ್ಯಾನವನಗಳಿವೆ ಒಂದು ಸಾರಿ ಬಂದವರು ಮತ್ತೊಂದು ಸಾರಿ ಬರಬೇಕು ಎನ್ನುವ ರೀತಿಯಲ್ಲಿ ಅವರು ಆ ದ್ವೀಪವನ್ನು ಸುಧಾರಿಸಿದ್ದಾರೆ. ಅದೇ ನಮ್ಮ ರಾಜ್ಯದಲ್ಲಿರುವ ಹಳೇಬೀಡು, ಬೇಲೂರು, ಶ್ರವಣಬೆಳಗೊಳ ಮುಂತಾದ ಸ್ಥಳಗಳನ್ನು ತೆಗೆದುಕೊಂಡರೆ ಅಲ್ಲಿಗೆ ಹೋದವರಿಗೆ ಕುಡಿಯುವುದಕ್ಕೆ ಸರಿಯಾಗಿ ನೀರು ಸಿಗುತ್ತಿಲ್ಲ. ಸರಿಯಾದ ಕಕ್ಕಸ್ಸಿನ ವ್ಯವಸ್ಥೆ ಇಲ್ಲ. ಇಂತಹ ಪ್ರದೇಶಗಳು ಬೇರೆ ದೇಶಗಳಲ್ಲಿ ಇದ್ದರೆ ಅವರು ಒಂದೊಂದು ಕ್ಷೇತ್ರದಿಂದ 100 ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದರು. ಈ ಸರ್ಕಾರದವರು ಈ ಸ್ಥಳಗಳ ಸುಧಾರಣೆಗಾಗಿ ಏನು ಮಾಡಿದ್ದಾರೆಂದು ಕೇಳುತ್ತೇನೆ. ನಾನು ಮೊನ್ನೆ ಶ್ರೀ ವಿ. ಕೆ. ಆರ್. ವಿ. ರಾವ್ ಅವರಿಗೆ ಹೇಳಿದೆ. ನಮ್ಮ ರಾಜ್ಯದಲ್ಲಿರುವ ಹಳೇಬಿಡು ಬೇಲೂರು ಶ್ರವಣಬೆಳಗೊಳ, ಜೋಗ್‌ಫಾಲ್ಸ್, ಹಂಪೆ ಮುಂತಾದ ಸ್ಥಗಳಲ್ಲಿ ಒಳ್ಳೆಯ ಹೊಟೆಲ್‌ಗಳನ್ನು ಕಟ್ಟಿಸಿ, ಪ್ರತಿಯೊಂದು ಅನುಕೂಲಗಳನ್ನು ಏರ್ಪಡಿಸಿಕೊಡಿ, ಹೊರದೇಶದವರು ಸಂತೋಷದಿಂದ ಲಕ್ಷಾಂತರ ಡಾಲರ್‌ಗಳನ್ನು ಖರ್ಚು ಮಾಡಿಕೊಂಡು ಇವುಗಳನ್ನು ನೋಡುವುದಕ್ಕೆ ಬರುತ್ತಾರೆಂದು. ಪ್ರವಾಸೋದ್ಯಮಕ್ಕಾಗಿ ಸರ್ಕಾರದವರು ಸ್ವಲ್ಪ ಹಣವನ್ನು ಖರ್ಚು ಮಾಡಿದ್ದೇ ಆದರೆ ಈ ಒಂದು ಬಾಬಿನಿಂದ ಪ್ರತಿವರ್ಷ 20 ಕೋಟಿ ರೂಪಾಯಿಗಳನ್ನಾದರೂ ಸಹ ಸಂಪಾದನೆ ಮಾಡಬಹುದೆಂದು ಹೇಳುತ್ತೇನೆ. ಇದನ್ನು ತುರ್ತಾಗಿ ಮಾಡಿ ಮುಗಿಸಬೇಕು, ನಾವು ಕೇಳಿದಾಗಲೆಲ್ಲಾ ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳಿಕೊಂಡು ಹೋದರೆ ಯಾವುದನ್ನೂ ನಿಮಗೆ ಮಾಡುವುದಕ್ಕಾಗುವುದಿಲ್ಲ.

ಇನ್ನು ನೀರಿನ ವಿವಾದದ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಕೃಷ್ಣಾನದಿ ಜಲ ವಿವಾದವನ್ನು ಟ್ರಿಬ್ಯುನಲ್‌ಗೆ ಒಪ್ಪಿಸಬೇಕೆಂದು ಭಾರತ ಸರ್ಕಾರದವರು ತೀರ್ಮಾನಿಸಿದ್ದಾರೆಂದು ರಾಜ್ಯಪಾಲರು ಹೇಳಿದ್ದಾರೆ. ಕಾವೇರಿ ನೀರಿನ ಬಗ್ಗೆ ವಿವಾದದ ಚರ್ಚೆ ನಡೆಯುತ್ತಿದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಎಲ್ಲಾ ಶಾಸಕರನ್ನು ಕರೆದು ವಿಚಾರವಿನಿಮಯ ಮಾಡಿದರು. ನಾನಾದರೂ ಸಹ ಸರ್ಕಾರಕ್ಕೆ ಕೆಲವು ಎಚ್ಚರಿಕೆಯ ಮಾತುಗಳನ್ನು ಹೇಳಬೇಕಾಗಿದೆ. ಕೃಷ್ಣ ನದಿ ವಿವಾದವಾಗಲೀ, ಕಾವೇರಿ ನದಿ ವಿವಾದವಾಗಲೀ ನಮ್ಮ ಅಕ್ಕಪಕ್ಕದ ರಾಜ್ಯಗಳು ಏನು ಒಂದು ನೀತಿಯನ್ನು ಅನುಸರಿಸುತ್ತಿವೆಯೋ ಅದೇ ರೀತಿ ನಮ್ಮ ರಾಜ್ಯದವರು ಸಹ ಅನುಸರಿಸಬೇಕೆಂದು. ಕಾನೂನನ್ನು ಮುರಿದು ಆಂಧ್ರದವರು, ಮಹಾರಾಷ್ಟ್ರದವರು ಮತ್ತು ಮದ್ರಾಸ್‌ನವರು ಯೋಜನೆಗಳನ್ನು ಕಟ್ಟುತ್ತಿದ್ದಾರೆ. ಹಾರಂಗಿ ಕಂಬದಕಡ ಯೋಜನೆಗಳ ಬಗ್ಗೆ ಮದ್ರಾಸ್ ಸರ್ಕಾರದವರು 1924ನೇ ಅಗ್ರಿಮೆಂಟನ್ನು ವಿರೋಧಿಸುತ್ತಿದ್ದಾರೆ. ಇವತ್ತಿನದಿವಸ ಮದ್ರಾಸ್ ಸರ್ಕಾರದವರು 1924ನೇ ಅಗ್ರಿಮೆಂಟನ್ನು ಮುರಿದು ಅನೇಕ ಯೋಜನೆಗಳನ್ನು ಕಟ್ಟಿ ಮುಗಿಸಿದ್ದಾರೆ. ಅದರಂತೆ ನಮ್ಮ ಸರ್ಕಾರದವರು ಸಹ ಧೈರ್ಯ ಮಾಡಿ ಯೋಜನೆಗಳನ್ನು ಮೊದಲು ಕಟ್ಟಿ ಮುಗಿಸಬೇಕು ಮತ್ತು ವಿವಾದಕ್ಕೂ ತಯಾರಾಗಬೇಕು. ಈ ಎರಡು ಕೆಲಸಗಳನ್ನು ಸಹ ಮಾಡುವುದಾದರೆ ಮಾತ್ರ ದೇಶದ ಜನರಿಗೆ ನೀರಿನ ಉಪಯೋಗವನ್ನು ಒದಗಿಸಿದಂತಾಗುತ್ತದೆ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ಕೇವಲ ಚರ್ಚೆ ಮಾಡಿಕೊಂಡು ಕುಳಿತುಕೊಳ್ಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕಳೆದ 22 ವರ್ಷಗಳಲ್ಲಿ ಈ ಸರ್ಕಾರದವರು ಒಂದು ಪ್ರಾಜೆಕ್ಟನ್ನೂ ಸಹ ಕಟ್ಟಿ ಮುಗಿಸಿಲ್ಲ. ಎಲ್ಲಾ ಪ್ರಾಜೆಕ್ಟ್‌ಗಳನ್ನು ಸಹ ಅರ್ಧ ಅರ್ಧ ಮಾಡಿ ನಿಲ್ಲಿಸಿದ್ದೀರಿ. ಕೆಲವು ಪ್ರಾಜೆಕ್ಟ್‌ಗಳನ್ನಾದರೂ ಸಹ ಪೂರ್ತಿ ಮಾಡಿದರೆ ಜನರಿಗೆ ನೀರಿನ ಸೌಕರ್ಯ ಸಿಗುತ್ತದೆ. ಇನ್ನು ಮುಂದಾದರೂ ಸಹ ಕೇವಲ ವಾದ ಮಾಡಿಕೊಂಡು ಕೂಡದೆ ಕೆಲಸವನ್ನು ಮಾಡಿ ಮುಗಿಸಬೇಕೆಂದು ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

ಇನ್ನು ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟು ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟಿನವರು ನಮಗೆಲ್ಲಾ ಒಂದು ಚಿಕ್ಕ ಡೈರಿ ಕೊಟ್ಟಿದ್ದಾರೆ. ಇದರಲ್ಲಿ ಎಲ್ಲ ಇನ್‌ಫರ್‌ಮೇಷನ್ ಸರಿಯಾಗಿ ಕೊಟ್ಟಿದೆ ಎಂದು ಹೇಳುತ್ತಾರೆ. ಇದರೊಳಗೆ ಎಲ್ಲ ಮಂತ್ರಿಗಳ ಹೆಸರನ್ನೂ ಹಾಕಿದ್ದಾರೆ ಮತ್ತು ಅವರ ಖಾತೆಗಳೂ ಇವೆ. ಆದರೆ ಇದರಲ್ಲಿ ಒಬ್ಬರು

(ಶ್ರೀ ಎಸ್. ಶಿವಪ್ಪ)

ಮಂತ್ರಿಗಳ ಎಂದರೆ ಶ್ರೀ ಬಿ ಎಂ ಪಾಟೀಲರವರ ಹೆಸರೇ ಇಲ್ಲ. ಹೀಗಾದರೆ ಇದು ಕರೆಕ್ಟ್ ಇನ್‌ಫರ್‌ಮೇಷನ್ ಕೊಟ್ಟ ಹಾಗಾಯಿತೇ ? ಜನವರಿಯಲ್ಲಿ ಎಂದರೆ 1-1-1963 ರಲ್ಲಿ ಪ್ರಕಟ ಮಾಡಿರುವುದರಲ್ಲಿ ಬಿ ಎಂ ಪಾಟೀಲ್ ಎನ್ನುವವರ ಹೆಸರೇ ಇಲ್ಲ. ನೀವು ಕೊಡತಕ್ಕ ಇನ್‌ಫರ್ ಮೇಷನ್ ಎಷ್ಟು ಚೆನ್ನಾಗಿದೆ ಎನ್ನುವುದಕ್ಕಾಗಿ ಇಲ್ಲಿ ಹೇಳಬೇಕಾಯಿತು. ಇನ್ನು ಇದರಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಪುಟ್ಟಸ್ವಾಮಿಯವರಲ್ಲದ್ದ ಮುನಿಸಿಪಾಲಟಿಯನ್ನು ಹೇಳದೇ ಕೇಳದೇ ಕಿತ್ತು ಹಾಕಿದ್ದರೂ ಇದರಲ್ಲಿ ಇನ್ನೂ ಮುನಿಸಿಪಲ್ ಖಾತೆ ಮಂತ್ರಿಗಳು ಎಂದು ಇದೆ.

ಶ್ರೀ ಎಂ. ರಾಜಶೇಖರಮೂರ್ತಿ (ಕೈಗಾರಿಕಾ ಹಾಗೂ ವಾರ್ತಾ ಶಾಖೆಗಳ ಮಂತ್ರಿಗಳು).— ಇದನ್ನು ಪ್ರಿಂಟು ಮಾಡುವುದು ಸಾಮಾನ್ಯವಾಗಿ ಡಿಸೆಂಬರು ಎರಡನೇ ಅಥವಾ ಮೂರನೇ ವಾರದಲ್ಲಿ. ಆಗ ಯಾರ್‍ಯಾರು ಮಂತ್ರಿಗಳಾಗಿದ್ದರೋ ಅವರನ್ನು ಮಾತ್ರ ಇದರಲ್ಲಿ ಸೇರಿಸಲಾಗಿದೆ.

ಶ್ರೀ ಎಸ್. ಶಿವಪ್ಪ.—ಇದನ್ನು ನಾನೂ ಒಪ್ಪುತ್ತೇನೆ. ಆದರೆ ನಮಗೆ ಕೊಡುವುದಕ್ಕೆ ಮುನ್ನಾ ಇದನ್ನು ಸರಿಯಾಗಿ ತಿದ್ದಿ ಹೊಡೆದು ಪ್ರಕಟ ಮಾಡಬಹುದಾಗಿತ್ತು. ಇದರಲ್ಲಿ ನಿಮ್ಮ ಇಲಾಖೆಯ ಎಫಿಷಿಯನ್ಸಿ ಎಷ್ಟು ಮಟ್ಟಿಗೆ ಇದೆ ಎನ್ನುವುದನ್ನು ತೋರಿಸಲು ಇಲ್ಲಿ ಹೇಳುತ್ತಿದ್ದೇನೆ. ನೀವು ಕೊಡುವ ವಿಚಾರಗಳನ್ನು ಸರಿಯಾಗಿ ಅಳತೆ ಮಾಡಿ ಕೊಡುತ್ತಿಲ್ಲ ಎನ್ನುವುದಕ್ಕಾಗಿ ಇಲ್ಲಿ ಹೇಳಬೇಕಾಗಿ ಬಂದಿದೆ.

ಇನ್ನೊಂದು ರೋಡು ಟ್ರಾನ್ಸ್‌ಪೋರ್ಟು ಇಲಾಖೆ ಬಗ್ಗೆ ಅದರ ಇನ್‌ಫರ್‌ಮೇಷನ್ ಕೊಡಲು ಅವರೂ ಒಂದು ಡೈರಿಯನ್ನು ಕೊಟ್ಟಿದ್ದಾರೆ. ಇವರಲ್ಲಿ ಒಂದು ಬೋರ್ಡು ಎಂದು ಮಾಡಿದ್ದಾರೆ. ಇದರಲ್ಲಿ ಅಫಿಷಿಯಲ್ ಮೆಂಬರುಗಳು ಹಾಗೂ ನಾನ್ ಅಫಿಷಿಯಲ್ ಮೆಂಬರು ಗಳ ಒಂದು ಪಟ್ಟಿ ಕೊಟ್ಟಿದ್ದಾರೆ. ಈ ನಾನ್ ಅಫಿಷಿಯಲ್ ಮೆಂಬರುಗಳ ಪಟ್ಟಿ ಕೆಳಗಡೆ ಶ್ರೀ ಕೆ. ಲಕ್ಕಪ್ಪ, ಮಿನಿಸ್ಟರ್ ಫಾರ್, ಪಿ ಡಬ್ಲ್ಯು ಡಿ ಎಂದು ತೋರಿಸಿದ್ದಾರೆ. Can a Minister be a non-official Member ? Is he an official or a non-official ? I want you to define this. Minister is in Government always in an official capacity. ಇದೊಂದು ಸಣ್ಣ ವಿಚಾರ ಇರಬಹುದು. ನಾನ್ ಅಫಿಷಿಯಲ್ ಕೆಪ್ಯಾಸಿಟಿಯಲ್ಲಿ ಮಂತ್ರಿಗಳೂ ಇರಬಹುದು ಎಂದು ಅವರ ಮಂತ್ರಿತನ ಉಳಿಸಲು ಮಾಡಿದ್ದಾರೋ ಏನೋ ? ಇದೊಂದು ಕಾರಣಕ್ಕಾಗಿ ನ್ಯಾಯವಾಗಿ ಇವರು ರಾಜೀನಾಮೆ ಕೊಡಬೇಕಾಗಿತ್ತು. ಹೀಗೆ ಸಣ್ಣ ವಿಚಾರಗಳಾದರೂ ಪರವಾಗಿಲ್ಲ ಎಂದು ಇಲ್ಲಿ ಒಂದೆರಡು ಉದಾಹರಣೆಗಳನ್ನು ಹೇಳಬೇಕಾಗಿ ಬಂತು. ಮತ್ತು ಈಗ ಸರಕಾರ ಹೋಗತಕ್ಕ ದಾರಿ ಸರಿಯಾಗಿಲ್ಲ. ಇಂದು ರಾಜ್ಯದ ಖಜಾನೆ ಖಾಲಿಯಾಗಿ ಹೋಗಿದೆ. ನಾಲ್ಕನೆ ಯೋಜನೆಗೆ ದುಡ್ಡು ಬೇಕು ಎಂದರೆ ಎಲ್ಲಿಂದ ಬರಬೇಕು ? ಯೋಜನೆ ಬಗ್ಗೆ ಇನ್ನೂ ಸರಿಯಾಗಿ ಯಾವುದನ್ನೂ ಹೇಳದೆ ತಲೆ ಮರಿಸಿಕೊಳ್ಳುತ್ತಿದ್ದಾರೆ. ಇದರಿಂದ ನಾವು ನಾಲ್ಕನೇ ಯೋಜನೆಯಿಂದ ಏನು ಫಲವನ್ನು ಅಪೇಕ್ಷೆ ಮಾಡುತ್ತಿದ್ದೇವೋ ಅದನ್ನು ಸರಿಯಾಗಿ ಲೆಕ್ಕಾಚಾರ ಮಾಡಿದರೆ ಆಯಾ ವರ್ಷದಲ್ಲಿ ಮಾಡುವ ಕೆಲಸಗಳಿಗೇ ದುಡ್ಡು ಸಾಲುತ್ತಿಲ್ಲ. ಇದು ಇಡೀ ರಾಷ್ಟ್ರಕ್ಕೇನೇ ಅವಹೇಳನವಾದಂತಹ ಒಂದು ಪ್ರಸಂಗವಾಗಿದೆ. ಇದರಿಂದ ನಮ್ಮ ರಾಷ್ಟ್ರದ ಗೌರವ ಹಾಗೂ ಪ್ರತಿಷ್ಠೆಗಳನ್ನು ಉಳಿಸಿಕೊಂಡಂತೆ ಆಗುವುದಿಲ್ಲ. ಮಹಾತ್ಮಾ ಗಾಂಧಿ ಯವರು ಹಿಂದೆ ಏನು ಮಾತುಗಳನ್ನು ಹೇಳುತ್ತಿದ್ದರೋ ಅದಕ್ಕೆ ವ್ಯತಿರಿಕವಾಗಿ ಹೋಗುತ್ತಿದ್ದೀರಿ. ಇದರಿಂದ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಮುಂದಕ್ಕೆ ಬರುವುದಿಲ್ಲ. ಇದಕ್ಕಾಗಿ ನೀವೆಲ್ಲ ರಾಜೀನಾಮೆ ಕೊಡಿ ಎಂದು ಹೇಳುವ ಮಾತನ್ನು ನಾನೂ ಕೂಡ ಒಪ್ಪುತ್ತೇನೆ. ಮಹಾತ್ಮಾ ಗಾಂಧಿಯವರು ಹೇಳಿದಂತೆ ನಿಮ್ಮ ಆತ್ಮ ಶೋಧನೆ ಮಾಡಿಕೊಂಡು ಸತ್ಯ ಶೋಧನೆ ಮಾಡಿನೋಡಿ. 1942 ನೇ ಇಸವಿಯಿಂದ 1962 ನೇ ಇಸವಿಯವರೆಗೆ ಎಷ್ಟು ಕೆಲಸಗಳನ್ನು ಮಾಡಿದ್ದೀರಿ ಎನ್ನುವುದನ್ನು ತನಿಖೆ ಮಾಡಿ ನೋಡಿ ನಿಮ್ಮ ಆಸ್ತಿಪಾಸ್ತಿಗಳನ್ನು ಎಷ್ಟು ಹೆಚ್ಚುಮಾಡಿಕೊಂಡು ಧನಿಕರಾಗಿದ್ದೀರಿ ಎನ್ನುವುದಕ್ಕೆ ನಿಮ್ಮ ನಿಮ್ಮಲ್ಲೇ ಆತ್ಮ ಶೋಧನೆ ಮಾಡಿಕೊಂಡು ಸತ್ಯ ಶೋಧನೆ ಮಾಡಿದರೆ ಮಹಾತ್ಮಾ ಗಾಂಧಿಯವರ ಶತಮಾನೋತ್ಸವದ ಇಂದಿನ ಸನ್ನಿವೇಶದಲ್ಲಿ ಅವರಿಗೂ ಒಂದು ತೃಪ್ತಿಯುಂಟುಮಾಡಿದ ಹಾಗಾಗುತ್ತದೆ. ಮಾನ್ಯ ಮಹಾತ್ಮ ಗಾಂಧಿಯವರು ಹೇಳಿದಂತೆ 1948 ನೇ ಇಸವಿಯಲ್ಲೇ ಕಾಂಗ್ರೆಸ್ಸನ್ನು ವಿಸರ್ಜನೆ ಮಾಡಿದ್ದರೆ ಅವರ ಆತ್ಮಕ್ಕೂ ತೃಪ್ತಿ ಯಾಗುತ್ತಿತ್ತು. ಸುಮಾರು ಇಪ್ಪತ್ತೆರಡು ವರ್ಷಗಳಿಂದಲೂ ನೀವು ಮಾಡಿರುವ ಕೆಲಸಗಳೆಲ್ಲಾ ಜನಕ್ಕೆ ತಿಳಿದಿವೆ. ಪ್ರಜಾಪ್ರಭುತ್ವವನ್ನು ಮುಂದಕ್ಕೆ ತರುತ್ತೇವೆ ಎಂದು ರಾಷ್ಟ್ರದ ಬಾವುಟವನ್ನು ಹಾಗೂ ನಮ್ಮ ರಾಜ್ಯದ ಬಾವುಟವನ್ನು ಒಂದೇ ರೀತಿ ಇಟ್ಟುಕೊಂಡು ಕಾಂಗ್ರೆಸ್ ಪಕ್ಷದ ಹಣ

ಹಾಗೂ ಆಡಳಿತದ ಹಣ ಇವೆರಡಕ್ಕೂ ಯಾವ ಭೇದ ಬಾವವೂ ಇಲ್ಲದಂತೆ ನೀವು ಕೆಲಸಗಳನ್ನು ಮಾಡುತ್ತ ಬಂದಿದ್ದೀರಿ. ಇದರಿಂದ ಪ್ರಜಾಪ್ರಭುತ್ವವನ್ನು ಅವಮಾನಮಾಡಿದಂತಾಗುತ್ತದೆ. ಪ್ರಜಾಪ್ರಭುತ್ವ ಸುಮ್ಮನೆ ತೋರಿಕೆಗಾಗಿ ಮಾತ್ರ ಇದೆ. ಪ್ರಜಾಪ್ರಭುತ್ವವನ್ನು ಇಂದಿನ ಸನ್ನಿವೇಶದಲ್ಲಿ ನೀವು ಆಚರಣೆಗೆ ತರಲು ಸಾಧ್ಯವಿಲ್ಲ. ನೀವೇನೋ ತಿಳಿದಿರಬಹುದು ನೀವು ಮಾಡುವ ಕೆಲಸಗಳೆಲ್ಲಾ ಸರಿಯಾಗಿವೆ ಎಂದು. ಇಂದಿನ ಯುವಕ ಜನಾಂಗವು ನೀವು ಮಾಡುವ ಕೆಲಸಗಳನ್ನೆಲ್ಲಾ ಚೆನ್ನಾಗಿ ನೋಡುತ್ತಾ ಬರುತ್ತಿದೆ. ಇವು ಒಂದಲ್ಲ ಒಂದು ದಿನ ರೊಚ್ಚಿಗೆದ್ದು ನಿಮ್ಮ ಪ್ರಜಾಪ್ರಭುತ್ವ ಅದಕ್ಕೆ ಆಹುತಿಯಾಗಬೇಕಾಗುತ್ತದೆ. ಇದಕ್ಕಾಗಿ ನಾನು ಇಲ್ಲಿ ಒಂದು ಎಚ್ಚರಿಕೆ ಮಾತು ಹೇಳುತ್ತಿದ್ದೇನೆ. ಕಾಂಗ್ರೆಸ್ಸಿನವರದು ಸ್ವಲ್ಪ ದಪ್ಪ ಚರ್ಮದ ತಲೆ. ಅವರಿಗೆ ನಾವು ಏನು ಹೇಳಿದರೂ ಕೇಳಿಸುವುದಿಲ್ಲ. ಮಾನ್ಯ ರಾಜ್ಯಪಾಲರೇ ಅವರ ಭಾಷಣದಲ್ಲಿ ಹೇಳಿದಂತೆ ಇವೆಲ್ಲಾ ಸ್ವಲ್ಪ ಡೆಲಿಕೇಟ್ ಆದ ವಿಚಾರಗಳು. ಆದುದರಿಂದ ಇಂದು ದೇಶದಲ್ಲೆಲ್ಲಾ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ದೇಶದ ಜನತೆಗೆ ಕಲ್ಯಾಣವಾಗಬೇಕಾದರೆ ಆಡಳಿತ ಪಕ್ಷದವರು ಜಾಗೃತರಾಗಿ ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಬೇಕು ಎಂದು ಹೇಳುತ್ತೇನೆ.

Business of the House

MR. SPEAKER.—Before calling upon another Member to speak, I want to bring one or two matters to the notice of the House. Hon. Members might have received Bulletin No. 11. It is printed and circulated to all the members. I do not know whether all the members have received it and whether it has come to their notice. Probably the Bulletin has been sent to the address given by the Members. Let me read it :

> "The Speaker in consultation with the leaders of the Parties has allotted four days for the discussion on the Motion of Thanks to the Governor's Address."

That means, this discussion will be over on Monday.

> "The House will sit from 12-00 Noon to 6-00 P.M. on Mondays, Tuesdays, Wednesdays, Thursdays and Fridays and there will be no sitting on Saturdays."

I have consulted all the leading Members in this matter. Of course, the proposal is before you and this House is supreme in taking a decision.

A tentative decision has been taken and according to it, the House will sit only on Mondays, Tuesdays, Wednesdays, Thursdays and Fridays. Saturday will be completely a holiday ; not a half holiday or anything of the sort. That is one change.

The other change is, we shall be sitting from 12 Noon to 6 P.M.—for six hours without a break.

SRI M. S. KRISHNAN.—I would like to suggest that there should be some recess to enable members to go out and talk instead of each member going and coming as he likes.

MR. SPEAKER.—It is left to hon. members and I am not insisting. In Lok Sabha they meet between 11 and 6 with one hour break for

(Mr. Speaker)

lunch. It is for the members to consider it. Now there is a tentative decision that the House may meet between 12 Noon and 6 p.m. These changes may be taken note of.

Sri A. P. APPANNA (Deputy Minister for Industries).—Sir, let the Whips on both sides meet and make unanimous suggestion.

Mr. SPEAKER.—If they are ready to take that responsibility, I shall be happy. I have nothing to say in the matter; let them manage. But let not the Chair be embarrassed by requests for extension of time.

Sri B. P. KADAM (Karwar).—Sir, I have listened very carefully to the Address delivered by the Governor. Of course it is a constitutional obligation imposed upon him. At the outset, I must pay my compliments to the Governor for the manner in which he delivered the Address. He was successful in reading the volume of 44 pages. We are happy to have a Governor who has a good health and who can with considerable ease read such a big volume of 44 pages. I wish that this Governor is continued for a very long time so that we may have the benefit of listening such Addresses even if it may run to 50 or 55 pages.

Sir, Sri D. M. Siddaiah who proposed the Motion of Thanks to the Governor tried to scan the entire Address. But, what is there in that Address Sir? Having a new team of Ministers, we expected dynamic changes in the old policies but we are sorely disappointed. The paragraphs and the manner in which they are grouped, shows that they have repeated the same burden of song of last year and there is absolutely no change. It must be said that it is only a repetition of the governmental notes collected together. It is neither the review nor enunciation of any new policy. Sir, I am compelled to say in a most distressing manner that this Address is lifeless. The Mover of the Motion also played the same old record and the same tune but the only difference was that he spoke in Kannada. Except that, there is nothing new. I could suggest to him that he could have collected the statistics from any book or approached any Secretary of any department and collected these statistics from him and put forth them here. There is no semblance of originality.

Sir, there seems to be the only one burden of song on the part of the members to accuse the Government of India that this State is given only a step-motherly treatment. So many members to gain popularity speak in this trend. Sir, is this infurtherence of national integrity or national disintegration?

5-00 p.m.

Some members have stated that Madras is getting fine treatment; Punjab is getting fine treatment; Andhra is getting fine treatment; but not Mysore. There are certain things where everybody should have

some restraint. The hon'ble Whip of the Congress Party should know that this cry was there long before Chavan went to the Centre. The pepole wearing Suddha Khaddar should also know what is inside Khadi. If they cannot put their weight on the Government of India and get the grievances redressed, the weakness lies here and it is no use hurling accuses against the Centre or anybody. The cause of national integration can best be served by being humble rather than by narrating grievances in an offensive manner.

About the spreading of Hindi in the State, we must remember that Hindi is the only language which we have adopted as the National language. It is an acknowledged fact that if not today at lesat in the long run we should have one national language which shall be an integrating force. Our Constitution says that Hindi will be the national language. Of course, there has been some hue and cry. I do not want this language to be imposed right now; but it should come about in the long run. I expected from the Governor some steps to be taken for the development of Hindi. But that is woefully lacking.

The Governor has repeated the good old song about the Boundary Commission. Everybody knows that the Mahajan Report is based upon influence and other considerations, and it is absolutely absurd, devoid of any principle, totally inconsistent. The Governor should have been firm.

MR. SPEAKER.—I think the rules prohibit talking of a person in a defamatory manner. Hon ble Member can criticise his report but he should not use a language which will be defamatory. Sri Mahajan is not alive and is not here to defend himself. Please avoid personal references.

SRI B. P. KADAM.—I am not referring to it again. Let me state that I referred only to the report. If I have said something, I shall substantiate it. This report is not based on any principle. It is absurd; it is totally inconsistent. The Commission was given certain principles to consider, namely, the language and the wishes of the people. He has given a go-bye to both. So far as Kannada areas that are to come to Mysore are concerned, he has strictly adhered to the principle; but so far as Marathi areas are concerned, he has given a cool go bye to the principle. In regard to areas from Kasargod, he has stated that wishes of the people should prevail. But so far as Karwar and Belgaum are concerned, where local bodies have supported merger and where Assembly elections have been won in support of merger, he says public opinion does not exist. Nothing can be farther from truth. In a democracy what is necessary is, wishes of the people must be respected. Therefore, the Governor would have done better if he had condemned the report and stated that the entire border issue must be solved on democratic lines respecting the wishes of the people.

MR. SPEAKER.—The hon'ble member will please note that a resolution was passed by the House accepting the report and requesting the Government of India to implement it. So, whatever the Hon. Member is stating is inconsistent with it. That, possibly he cannot do.

Sri B. P. KADAM.—I have opposed the resolution then and I am opposing it now. I have a right to criticise and my right of criticism cannot be taken away.

Mr. SPEAKER.—After all the rules are framed by the House. It is my duty to enforce them. When it says that discussion cannot be inconsistent with the resolution passed by the House, unless it is for setting it aside, the Hon. Member should follow that rule.

Sri B. P. KADAM.—It might have been passed; but I am opposing it. That passing cannot bind me not to oppose or criticise it. It will not be violating the law.

The Governor ought to have been bold enough to say that the entire border issue must be solved on certain set principles based on the wishes of the people so that justice could be done. That is how all the issues must be looked into and not in this rough-shod manner. People will not take for granted, if it were to be implemented. We expected something from the Governor regarding the levy programme. There is absolutely nothing new in what he has stated. He says that wherever there is scarcity or famine, rules have been framed. We know all these things. What is required is, people who are cultivating less then 3 acres must be exempted from the levy. That is existing in a highly deficit area like Kerala. About the declaration, by the rayots, I must say that it is another hardship cast on the poor illiterate agriculturists. The declaration forms prescribed are so clumsy; they do not reach the people in time. Therefore only persuasive approach should be there and not coercive approach. Any approach to coerce or penalise the people will not fulfil the purpose of procurement but it will adversely affect the procurement. Personally I am always against levy procurement. Last year the procurement from my Karwar taluk was maximum considering the procurement in the coastal Taluks of the District and there have been very few cases. Earlier in 1967 I approached the Government stating that there should not be any prosecution. But Government did not heed. The local officers were harsh and we had to request for transfer of some officers. Inspite of vigorous procurement, little levy was realised. Therefore, I am of the opinion that our peasants are very good and want to help themselves and help others. That is why they have to be persuaded and if that is done they will not only give more to the country but will grow more for the benefit of the country.

Therefore I would further suggest that the entire control must go. There is a lot of underground traffic. We cannot know how people in the border areas are getting corn for being transported to Goa. The entire machinery of the officialdom, the Supply Department people and the police people are helping, abetting, guiding and conniving at this illegal traffic and if we ask these officers, they tell us that these people get rice supply from helicopters. When I tell them that we cannot even hear the sound of helicopters, they keep quiet. Lot of illicit traffic is going on towards the Kerala, Goa and other States and it is not for the

benefit of the areas concerned but for the benefit of the black-marketeers. Therefore, what is necessary is that the entire control system must go. But will it go and if it goes what will happen to the Congress Party. which is benefited by this blackmarketing ? That is a problem. There fore, the entire policy must be reviewed.

The Governor has said that he is very anxious to pursue the policy of land reforms. The hon'ble Member Sri Siddiah also played the same tune. The history of land reforms is very old. When a foreign correspondent long ago in 1929 asked Mahathma Gandhi how he would solve the land problem, Mahathma Gandhi said that the land must go to the tiller. Thereafter the Congress Party has consistently passed resolutions to the effect that the tiller of the soil must be the master, the owner and that the intermediary must vanish. Then we were in Bombay and there was the Bombay Tenancy and Agricultural Lands Act. It was to some extent progressive and it had put down 1st of August 1956 as the Tillers' Day. Rent was fixed in terms of land assessment; the ceiling area was fixed and compensation was low enough. After the Reorganisation, the Tenancy Act was shelved by this State Government. There was one Jatti Committee. Then another Bill was passed here and it was in cold storage for a long number of years and it came into force in 1965. But what is there ? The Government of India and also the Planning Commission suggested 19 amendments to the Land Reforms Act which the Governor is hailing and which the hon'ble Member Sri Siddaiah was also hailing in a louder voice. All that has come before the House on so many occassions. Has this Government accepted a single amendmant ? Emphatically no. The Government of India suggested that there should be a ceiling on the holding. They also suggested that what has been bestowed as a benefit regarding payment of rent in the Bombay Area cannot be done away with by such a statute by the Government of Mysore.

SRI D. M. SIDDIAH.—Did the hon'ble Member hear me when I spoke on land reforms ? Probably he was not attentive.

SRI B. P. KADAM.—Till 1963 in Bombay the rent was fixed in terms of the yield. Then it was reduced to one-sixth of the of the yield ; but the people felt that the revenue officers who invariably come from the exploiter class fix the yield almost double or three times and if the rent is fixed in terms of yield, it is bound to adversely affect the tenants. That is why the Government of Bombay then said that this method is bad and then the rent must be fixed in terms of assessment. Therefore I suggest that this question must be seriously looked into by the Government of Mysore and while doing so, every care must be taken to see that the tenant is made firmly secure and the intermediary be wiped out with or without payment of the compensation so that the tenant with a sense of security will grow not only for himself but grow twice or thrice and serve the country better. In this respect the observation of the hon'ble member Sri Siddiah is quit consistent. He asked, "What the people have got by all these land reforms laws, and replied by saying nothing

(SRI B. P. KADAM)

but economic dependence. I fully support him and I request him to pursue this matter at all levels so that land reforms may come as a boon and not as a curse as it is today.

†ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಸಭಾಪತಿಯವರೇ, ಈ ರಾಜ್ಯ ಸರಕಾರದವರು ಕಳೆದ ವರ್ಷದಲ್ಲಿ ಸಾಧಿಸಿದ ಪ್ರಗತಿಯ ಬಗ್ಗೆ ಮತ್ತು ಈ ವರ್ಷ ನಮ್ಮ ಮುಂದಿರುವ ಸಮಸ್ಯೆಗಳನ್ನು ವಿವರವಾಗಿ ಅಂಕಿ ಅಂಶಗಳ ಸಹಿತ ಈ ಸಭೆಯ ಮುಂದೆ ರಾಜ್ಯಪಾಲರು ಇಟ್ಟಿದ್ದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮ್ಮ ಭಾಷಣದಲ್ಲಿ ರಾಜ್ಯಪಾಲರು ಅಥವಾ ಅವರ ಮೂಲಕ ಸರಕಾರದವರು ಇತ್ತೀಚೆಗೆ ಹೊರಬಿದ್ದ ಪೇ ಕಮಿಷನ್ ರಿಪೋರ್ಟ್ ಸಂಬಂಧದಲ್ಲಿ ಈ ಸಭೆಯ ಅಭಿಪ್ರಾಯ ಕೇಳಿ ಒಂದು ಒಳ್ಳೆಯ ಹೆಜ್ಜೆಯನ್ನು ಇಟ್ಟಿದ್ದಾರೆ. ಪೇ ಕಮಿಷನ್ ವರದಿಯ ವಿಷಯ ಬಹಳ ದೊಡ್ಡದಿದ್ದು ಆ ವಿಷಯದಲ್ಲಿ ಸಭಾಸದರ ಅಭಿಪ್ರಾಯ ತಿಳಿದು ಅದರಲ್ಲಿಯೂ ವಿರೋಧ ಪಕ್ಷದ ಸದಸ್ಯರ ಅಭಿಪ್ರಾಯ ತಿಳಿದು ಒಂದು ನಿರ್ಣಯಕ್ಕೆ ಬರಬೇಕೆಂಬ ಅಭಿಪ್ರಾಯವಿದೆ. ಇದರಿಂದ ಈ ಸಭೆಯ ಸದಸ್ಯರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟ ಹಾಗಾಗಿದೆ ಮತ್ತು ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡು ಯೋಗ್ಯ ನಿರ್ಣಯಕ್ಕೆ ಬರಬೇಕೆಂದು ಸರಕಾರ ಹೆಜ್ಜೆ ಇಟ್ಟಿದೆ. ಅದರ ಸಲುವಾಗಿ ಸರಕಾರವನ್ನು ಅಭಿನಂದಿಸುತ್ತೇನೆ. ಮೊದಲನೆಯದಾಗಿ ಈ ಸರಕಾರ ಅಸ್ತಿತ್ವಕ್ಕೆ ಬಂದಮೇಲೆ ಈ ಸಭೆಯ ಸದಸ್ಯರ ಅಭಿಪ್ರಾಯ ಕೇಳಬೇಕು, ಅದರಲ್ಲೂ ಯಾವುದೇ ಮಹತ್ವದ ಪ್ರಶ್ನೆ ಇದ್ದಾಗ ವಿರೋಧಿ ಸದಸ್ಯರ, ಎದುರು ಪಕ್ಷದ ಮುಖಂಡರ ಮತ್ತು ಸದಸ್ಯರ ಅಭಿಪ್ರಾಯ ತೆಗೆದುಕೊಳ್ಳಬೇಕು ಎಂಬ ಪರಿಪಾಠ ಮೇಲೆ ಮೇಲೆ ಮಂತ್ರಿಮಂಡಲ ಹಾಕಿಕೊಂಡಿರುವುದು ಸುಸ್ವಾಗತ.

ಇದರಿಂದ ಎದುರು ಪಕ್ಷಗಳ ಸದಸ್ಯರಿಗೆ ಒಂದು ಬೆಲೆಯನ್ನು ಕೊಟ್ಟಂತೆ, ಅವರನ್ನು ವಿಶ್ವಾಸದಲ್ಲಿ ತೆಗೆದುಕೊಂಡಂತೆ ಅಷ್ಟೇ ಅಲ್ಲ ಸಭೆಯ ವಾತಾವರಣವನ್ನೂ ಸಹಿತ ತಿಳಿ ಮಾಡಿದಂತೆ ಆಗಿದೆ. ಪ್ರಜಾಪ್ರಭುತ್ವದಲ್ಲಿ ಪಕ್ಷಗಳು ಮತ್ತು ಪ್ರತಿಪಕ್ಷಗಳು, ಎದುರು ಪಕ್ಷಗಳು ಇರತಕ್ಕದ್ದೇ. ಎದುರು ಪಕ್ಷಗಳನ್ನು ಅಥವಾ ಮುಖಂಡರನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಅವರ ಅಭಿಪ್ರಾಯಕ್ಕೆ ಬೆಲೆಯನ್ನು ಕೊಡುವುದರಿಂದ ಪ್ರಜಾಪ್ರಭುತ್ವದ ಈ ರಾಜ್ಯಾಂಗ ಅನ್ನುವಂತಹದು ಸುಲಭವಾಗಿ, ಸರಳವಾಗಿ ಮತ್ತು ಸುಸೂತ್ರವಾಗಿ ನಡೆಯುತ್ತದೆ ಎನ್ನುವಂತಹ ಏನೊಂದು ಅಭಿಪ್ರಾಯ ಇದೆ ಆ ವಿಧವಾದ ಹೆಜ್ಜೆ ಸರ್ಕಾರ ಹಿಡಿದಿದೆ, ಇದು ಒಂದು ಒಳ್ಳೆಯ ಹೆಜ್ಜೆ. ಈ ಪ್ರಕಾರ ಈ ಒಂದು ನೀತಿಯನ್ನು ಮುಂದುವರಿಸಿದ್ದೇ ಆದರೆ ಬಹಳ ಕಲ್ಯಾಣವನ್ನು ಮಾಡುತ್ತದೆ. ಒಳ್ಳೆಯ ವಾತಾವರಣ ಸಹಿತ ಸಭೆಯಲ್ಲಿ ಮೂಡುತ್ತದೆ ಮತ್ತು ಸಭಾಧ್ಯಕ್ಷರ ಕೆಲಸವನ್ನೂ ಸಹಿತ ಹಗುರ ಮಾಡುತ್ತದೆ ಎಂದು ತಿಳಿಸುತ್ತೇನೆ. ಹೋದ ಅಧಿವೇಶನದಲ್ಲಿ ಅನೇಕ ಸಮಸ್ಯೆಗಳು ಬಂದಾಗ್ಗೆ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರಾದ ಶ್ರೀಮಾನ್ ಪುಟ್ಟಸ್ವಾಮಿಯವರು ಮತ್ತು ಮುಖ್ಯಮಂತ್ರಿಗಳೂ ಸಹಿತ ಅನೇಕ ಮಹತ್ವದ ವಿಷಯದಲ್ಲಿ ಎದುರು ಪಕ್ಷದ ಮುಖಂಡರು ಶ್ರೀಮಾನ್ ಸಿದ್ದವೀರಪ್ಪನವರು ಮತ್ತು ಇತರ ಸದಸ್ಯರ ಅಭಿಪ್ರಾಯಗಳನ್ನು ತೆಗೆದುಕೊಂಡು ಸಭೆಯ ವಾತಾವರಣವನ್ನು ತಿಳಿ ಮಾಡಿದ್ದಾರೆ. ಇವತ್ತಿನದಿವಸ ಮೈಸೂರು ರಾಜ್ಯದ ಸಂಬಂಧಿ ಹೊರಗಿನ ಅಭಿಪ್ರಾಯವನ್ನು ಕೇಳಿದರೆ ಮೈಸೂರು ರಾಜ್ಯದಲ್ಲಿ ಭದ್ರವಾದ ಸರ್ಕಾರ ಉಂಟು, ಮೈಸೂರಿನಲ್ಲಿ ಆಡಳಿತ, ಯಾವತ್ತೂ ವ್ಯವಸ್ಥೆಗಳು ಇವೆ, ಅದನ್ನು ಉತ್ತಮವಾದ ಸರ್ಕಾರಗಳಿಗೂ ಕೂಡ ಹೋಲಿಸಬಹುದು ಎಂದು ಹೊರಗಿನವರು ಅಭಿಪ್ರಾಯಪಡುತ್ತಾರೆ. ಆ ಅಭಿಪ್ರಾಯಪಡಲಿಕ್ಕೆ ಇವತ್ತಿನದಿವಸ ಸರ್ಕಾರವನ್ನು ನಡೆಸತಕ್ಕ ಮಂತ್ರಿಗಳು ಅಷ್ಟೇ ಭಾಗಿದಾರರು ಅಂತ ತಿಳಿದಿಲ್ಲ, ಅಷ್ಟೇಮಟ್ಟಿಗೆ ವಿರೋಧಪಕ್ಷದ ನಾಯಕರೂ ಸಹಿತ ಅದಕ್ಕೆ ಭಾಗಿದಾರರು, ಅದರ ಶ್ರೇಯಸ್ಸಿಗೆ ಪಾತ್ರರು ಎಂದು ನಾನು ತಿಳಿದುಕೊಂಡಿದ್ದೇನೆ. ಈ ತರಹದ ತಿಳಿವಳಿಕೆ ಬರುವುದರಿಂದ ಅನೇಕ ತಪ್ಪು ತಿಳಿವಳಿಕೆಗಳು ಮಾಯವಾಗುತ್ತವೆ, ಈ ಸತ್ ಸಂಪ್ರದಾಯವನ್ನು ಮಂತ್ರಿಮಂಡಲದವರು ಮುಂದುವರಿಸಿಕೊಂಡು ಹೋಗುತ್ತಾರೆ ಎಂದು ನಾನು ಆಶೆ ಮಾಡುತ್ತೇನೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅಭಾವ ಪರಿಸ್ಥಿತಿ ಬಗ್ಗೆ, ಸರ್ಕಾರದವರು ಆ ವಿಷಯದಲ್ಲಿ ಕೈಕೊಂಡಂತಹ ಕಾರ್ಯಕ್ರಮದ ಬಗ್ಗೆ ವಿಶದವಾಗಿ ವಿವರವನ್ನು ಕೊಟ್ಟಿದ್ದಾರೆ. ರಾಜ್ಯದ ಆರ್ಥಿಕಪರಿಸ್ಥಿತಿ, ಮತ್ತು ಅಭಾವ ಪರಿಸ್ಥಿತಿಯಿಂದಾಗಿ ಅದು ಎಷ್ಟೇ ದಾರುಣ ಪರಿಸ್ಥಿತಿಯಲ್ಲಿದ್ದರೂ ಸಹಿತ ಸರ್ಕಾರ ದಿಟ್ಟವಾದ ಹೆಜ್ಜೆಯನ್ನು ತೆಗೆದುಕೊಂಡು 7 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಖರ್ಚುಮಾಡಿ ಪರಿಹಾರ ಕಾರ್ಯಗಳನ್ನು ಕೈಕೊಂಡದ್ದು ಬಹಳ ಅಭಿನಂದನೀಯವಾದ

ವಿಷಯ. ಮತ್ತು ಕೇಂದ್ರಸರ್ಕಾರದವರೂ ಸಹಿತ ಸಾಕಾದಷ್ಟು ಸಹಾಯ ಮಾಡಿದ್ದು ಕೂಡ ಅಭಿನಂದನೀಯವಾದದ್ದು ಎಂದು ನಾನು ತಿಳಿಯುತ್ತೇನೆ. ಅಭಾವ ಪರಿಸ್ಥಿತಿಯಲ್ಲಿದ್ದಂತಹ ತಾಲ್ಲೂಕುಗಳಲ್ಲಿ ನಮ್ಮ ಮಂತ್ರಿಮಂಡಲದ ಅನೇಕ ಯುವಕ ಮಂತ್ರಿಗಳು ತಮ್ಮ ತಮ್ಮ ಜಿಲ್ಲೆಗಳಲ್ಲಿ ತಿರುಗಾಡಿ, ಸಂಚಾರ ಮಾಡಿ ಸ್ಥಾನಿಕ ಪರಿಸ್ಥಿತಿಗಳನ್ನು ತಿಳಿದುಕೊಂಡು ಅಧಿಕಾರಿಗಳ ಕೂಡ ಸಮಾಲೋಚನೆ ಮಾಡಿ ಅಲ್ಲಲ್ಲಿಯೇ ನಿರ್ಣಯಗಳನ್ನು ತೆಗೆದುಕೊಂಡು ಜನರಿಗೆ ಪರಿಹಾರವನ್ನು ದೊರಕಿಸಿದ್ದನ್ನು ನೋಡಿದರೆ ಈ ವಿಷಯದಲ್ಲಿ ಸಕಾರದವರನ್ನು ನಾವು ಶಹಬಾಸ್ ಅಂಥ ಅನ್ನಲಿಕ್ಕೇ ಬೇಕು, ಅವರಿಗೆ ಶಹಬಾಶಗಿರಿ ಕೊಡಲಿಕ್ಕೇ ಬೇಕು. ಸಾಕಾದಷ್ಟು ಕೆಲಸ ಆಗಿದೆ, ಗರ್ಭಿಣಿ ಸ್ತ್ರೀಯರು, ಬಡಬಗ್ಗರು ಇಂಥವರಿಗೆ ಪರಿಹಾರವನ್ನು ದೊರಕಿಸಿಕೊಟ್ಟಿದ್ದಾರೆ. ಸರ್ಕಾರದವರು ಸಾಕಾದಷ್ಟು ಶ್ರಮವನ್ನು ವಹಿಸಿದ್ದಾರೆ ಮತ್ತು ಸಾಕಾದಷ್ಟು ಕೆಲಸವನ್ನು ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ಸಭೆಯ ಮುಂದೆ ವಿಲೇಜ್ ಪಂಚಾಯ್ತಿ ಮತ್ತು ತಾಲ್ಲೂಕುಬೋರ್ಡು ಬಿಲ್‌ನ್ನು ತಿದ್ದುಪಡಿ ಮಾಡುವಂತಹ ಒಂದು ಬಿಲ್ಲು ಬರುತ್ತದೆ ಎಂದು ಕಾಣಿಸಿದ್ದಾರೆ. ಯಾವ ಪ್ರಕಾರ ತಿದ್ದುಪಡಿ ಮಾಡಬೇಕೆಂದು ಇಚ್ಛೆ ಮಾಡಿದ್ದಾರೋ ಆ ಸಂಬಂಧ ಈ ಸಭೆಯ ಸದಸ್ಯರಿಗೆ ಇನ್ನೂ ಯಾವುದೂ ತಿಳಿದಿಲ್ಲ. ಬಹುಶಃ, ಶ್ರೀಮಾನ್ ಸಿದ್ದಯ್ಯನವರು ತಮ್ಮ ಭಾಷಣದಲ್ಲಿ ಹೇಳಿದರು ಪ್ರಜೆಗಳಿಂದ ಆರಿಸಲ್ಪಟ್ಟಂಥ ಒಬ್ಬ ಮನುಷ್ಯ ಜಿಲ್ಲೆಯ ಆಡಳಿತವನ್ನು ನಡೆಸುವಂತಹವರು ಜಿಲ್ಲಾಪರಿಷತ್ತಿನಲ್ಲಿ ಸಭಾಧ್ಯಕ್ಷರಾಗಿಲ್ಲದೇ ಇದ್ದರೆ ಅದು ಪಂಚಾಯ್ತಿ ರಾಜ್ಯಭಾರವೇ ಅಲ್ಲ ಅನ್ನುವಂತಹ ಮಾತನ್ನು ಹೇಳಿದರು. ಸಂಪೂರ್ಣವಾಗಿ ಅವರ ಅಭಿಪ್ರಾಯಕ್ಕೆ ನಾನು ಬೆಂಬಲವನ್ನು ನೀಡುತ್ತೇನೆ. ಆದರೆ ಈ ಮಧ್ಯೆ ಇರುವಂತಹ ಪಂಚಾಯ್ತಿ ಮತ್ತು ತಾಲ್ಲೂಕುಬೋರ್ಡು ಬಿಲ್ಲಿನಲ್ಲಿ ಯಾವ ಪ್ರಕಾರದ ತಿದ್ದುಪಡಿಮಾಡಬಹುದು ಎನ್ನುವಂತಹದು ನನಗೆ ತಿಳಿಯದಾಗಿದೆ. ಇದರಲ್ಲಿ ತಿದ್ದುಪಡಿ ಮಾಡಲಿಕ್ಕೆ ಹೋದರೆ ಸರಿಹೋಗಲಾರದು ಎಂದು ಅನಿಸುತ್ತದೆ. ಪಂಚಾಯ್ತಿ ರಾಜ್ಯದ ವಿಷಯದಲ್ಲಿ ಹಿಂದಿನ ಸರ್ಕಾರದವರ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕಮಾಡಿದ್ದರು. ಆ ಕಮಿಟಿಯವರು ಈ ರಾಜ್ಯ ಅಷ್ಟೆ ಅಲ್ಲ ಹೊರಗಿನ ರಾಜ್ಯಗಳಲ್ಲೂ ಸಹ ಬೇಕಾದಷ್ಟು ಸಂಚಾರಮಾಡಿ ವಿಷಯ ಸಂಗ್ರಹಣೆ ಮಾಡಿ ಒಂದು ವರದಿಯನ್ನು ಕೊಟ್ಟಮೇಲೆ ಆ ವಿಷಯ ಈ ಸಭೆಯ ಮುಂದೆ ಬಂದು ಚರ್ಚೆಯಾಗಿ ಸೆಲೆಕ್ಟ್ ಕಮಿಟಿಗೆ ಹೋಗಿತ್ತು. ಆ ಸೆಲೆಕ್ಟ್ ಕಮಿಟಿಯ ರಿಪೋರ್ಟ್ ಬಂದಮೇಲೆ ಅದು ಈ ಸಭೆಯ ಮುಂದೆ ಬರಲಿಲ್ಲ ಎಂದರೆ ಬಹಳ ವಿಷಾದಪಡುವಂತಹ ವಿಷಯ. ಜನತೆ ಆ ಬಗ್ಗೆ ಅನ್ನುತ್ತಾರೆ, ಮಂತ್ರಿಮಂಡಲದ ಸದಸ್ಯರು ತಮ್ಮ ಕೈಯೊಳಗೆ ಇರುವಂತಹ ಅಧಿಕಾರವನ್ನು ಸಣ್ಣಪುಟ್ಟ ಕೆಲಸಗಳ ಸಂಬಂಧ ಸಹಿತ ಚಲಾಯಿಸುತ್ತಾಇದ್ದಾರೆ ಮತ್ತು ಅದನ್ನು ಹಸ್ತಾಂತರ ಮಾಡಲಿಕ್ಕೆ ಹಿಂದು ಮುಂದು ನೋಡುತ್ತಾಇದ್ದಾರೆ. ಆದ್ದರಿಂದಲೇ ಆ ಬಿಲ್ಲು ಈ ಸಭೆಯ ಮುಂದೆ ಬರಲಿಲ್ಲ ಎಂದು. ಮಂತ್ರಿಗಳೇ ಇರಲಿ ಅಥವಾ ರಾಜ್ಯ ಮಟ್ಟದಲ್ಲಿರುವಂತಹ ಅಧಿಕಾರಿಗಳೇ ಇರಲಿ ವಿಕೇಂದ್ರೀಕರಣ ತಮ್ಮ ಮಟ್ಟದವರಿಗೆ ಮಾತ್ರ —ಡೀ ಸೆಂಟ್ರಲೈಸೇಷನ್ ಅಪ್ ಟು ದೆಮ್‌ಸೆಲ್ವ್ಸ್ ಅಂಡ್ ನಾಟ್ ಡೌನ್‌ವರ್ಡ್ಸ್— ಈ ಪ್ರಕಾರ ಒಂದು ಧ್ಯೇಯ ಅಥವಾ ನಡವಳಿಕೆಗಳನ್ನು ಇಟ್ಟುಕೊಂಡಿದ್ದಾರೆ. ವಿಕೇಂದ್ರೀಕರಣ ಮಾಡುವಂತಹದು ಅವರಿಗೆ ಬೇಕಿಲ್ಲ, ಸಣ್ಣಪುಟ್ಟ ಕೆಲಸಗಳನ್ನೂ ಸಹ ತಾವೇ ಮಾಡಲಿಕ್ಕೆ ಅಪೇಕ್ಷೆಪಡುತ್ತಾರೆ. ಆದ್ದರಿಂದಲೇ ಆ ಸೆಲೆಕ್ಟ್ ಕಮಿಟಿ ರಿಪೋರ್ಟು ನೆನೆಗುದಿಗೆ ಬಿದ್ದಿದೆ. ಆ ರಿಪೋರ್ಟು ಈ ಸಭೆಗೆ ಬರದೇ ಇರುವುದು ಈ ಸಭೆಗೆ ಅವಮಾನ ಎಂದು ತಿಳಿಯಬೇಕು. ಅದು ಏಕೆ ಬರಬಾರದು? ಅದರಲ್ಲಿ ಅನೇಕ ಹೊಸ ವಿಷಯಗಳು ಉಂಟು. ಇವತ್ತಿನದಿವಸ ತಾಲ್ಲೂಕು ಬೋರ್ಡು ಮತ್ತು ವಿಲೇಜ್‌ಪಂಚಾಯ್ತಿ ಆಕ್ಟಿನಲ್ಲಿ ಇರದಂತಹ ಅನೇಕ ಹೊಸ ವಿಷಯಗಳು ಅದರಲ್ಲಿ ಅಳವಡವಾಗಿವೆ. ಅಂತಹ ಒಂದು ರಿಪೋರ್ಟ್‌ನ್ನು ಈ ಸಭೆಯ ಮುಂದೆ ಇಡದೇ ಈಗಿದ್ದಂತಹ ಒಂದು ತಾಲ್ಲೂಕು ಬೋರ್ಡು ಮತ್ತು ವಿಲೇಜ್‌ಪಂಚಾಯ್ತಿ ಆಕ್ಟಿನಲ್ಲಿ ತಿದ್ದುಪಡಿಮಾಡುವುದು ಯೋಗ್ಯವಾದುದಲ್ಲ. ಆದ್ದರಿಂದ ಇವತ್ತಿನ ದಿವಸ ಸರ್ಕಾರದ ಮೇಲೆ ನಾನು ಒತ್ತಾಯಪಡಿಸುವುದೇನೆಂದರೆ ಆ ಸೆಲೆಕ್ಟ್ ಕಮಿಟಿ ರಿಪೋರ್ಟನ್ನು ಈ ಸಭೆಯ ಮುಂದೆ ಇಡಬೇಕು. ಈಗ ತಾಲ್ಲೂಕು ಬೋರ್ಡು ವಿಲೇಜ್‌ಪಂಚಾಯ್ತಿ ಚುನಾವಣೆಗಳನ್ನು ನಡೆಸುವಂತಹ ಪ್ರಸಂಗ ಬಂದಿದ್ದರೂ ಕೂಡ ಇವತ್ತಿನದಿವಸ ಇರತಕ್ಕ ಆಕ್ಟಿನಲ್ಲಿ ತಿದ್ದುಪಡಿ ಮಾಡಿದರೆ ಯಾವ ಪರಿಣಾಮವೂ ಆಗುವುದಿಲ್ಲ ಮತ್ತು ಯಾವ ಯೋಗ್ಯವಾದ ಪರಿಸ್ಥಿತಿಯೂ ಕೂಡ ಉತ್ಪಾದನೆಯಾಗುವುದಿಲ್ಲ ಎಂಬ ಸ್ಪಷ್ಟವಾದ ಅಭಿಪ್ರಾಯವನ್ನು ಹೇಳುತ್ತೇನೆ.

ಸ್ವಾಮಿ, ಇವತ್ತಿನ ದಿವಸ ನಮ್ಮ ಹಳ್ಳಿಗಳಲ್ಲಿ ಜನಸಂಖ್ಯೆ ಮೊದಲು ಇದ್ದುದ್ದರ ಎರಡು ಮೂರು ಪಟ್ಟು ಆಗಿದೆ. ಇವತ್ತು ಹಳ್ಳಿಗಳಲ್ಲಿ ಇದ್ದವರು ತಮ್ಮ ಮನೆಗಳ ವಿಸ್ತೀರ್ಣವನ್ನು ಹೆಚ್ಚಿಸಿ,

(ಶ್ರೀ ಎಂ. ಆರ್. ಪಾಟೀಲ್)

ಕೊಳ್ಳುವ ಸಲುವಾಗಿ ಅಕ್ಕಪಕ್ಕದ ಪ್ರದೇಶವನ್ನು ಅಕ್ರಮಣ ಮಾಡಿಕೊಂಡು ಚಕ್ಕಡಿಗಳು ರಸ್ತೆಯಲ್ಲಿ ಹೋಗುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಪ್ರತಿಯೊಂದು ಮನೆಯವರೂ ಅತಿಕ್ರಮಣ ಮಾಡಿ ಜನ ಅಡ್ಡಾಡಲಿಕ್ಕೆ ಬರದಂತಹ ಪರಿಸ್ಥಿತಿ ಆಗಿದೆ. ಜಿಲ್ಲಾ ಪರಿಷತ್ತಿನ ಆಕ್ಟ್‌ನಲ್ಲಿ ಗ್ರಾಮ ಬಡಾವಣೆ ಮಾಡಲಿಕ್ಕೆ ಸಾಕಾದಷ್ಟು ಹಣವನ್ನು ಒದಗಿಸಿಕೊಡುವುದು ಮತ್ತು ಅದರ ಸಲುವಾಗಿ ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸೂಕ್ತವಾದಂತಹ ನಿಯಮಗಳು ಇವೆ. ಇವತ್ತಿನ ದಿವಸ ಗ್ರಾಮಗಳಲ್ಲಿ ಇರತಕ್ಕ ಮನೆಗಳ ಒಂದು ಸರ್ವೆ ಆಗದೆ ಇದ್ದುದ್ದರಿಂದ ಎಷ್ಟು ಅತಿಕ್ರಮಣ ಮಾಡಿದ್ದಾರೆ ಎಂದು ಹೇಳುವುದಕ್ಕೆ ಆಧಾರ ಇಲ್ಲದೇ ಇದ್ದುದ್ದರಿಂದ ವಿಲೇಜ್‌ಪಂಚಾಯ್ತಿ ಚೇರ್ಮನ್‌ರು ಮತ್ತು ಅತಿಕ್ರಮಣ ಮಾಡುವಂತಹ ಮನೆಯ ಮಾಲೀಕರ ನಡುವೆ ವಾಜ್ಯವಾಗಿ ಕುಳಿತಿದೆ. ಆದ್ದರಿಂದ ನಾನು ಸರ್ಕಾರದವರಿಗೆ ಒತ್ತಾಯಪಡಿಸುವುದೇನೆಂದರೆ ಈ ಸೆಲೆಕ್ಟ್ ಕಮಿಟಿ ರಿಪೋರ್ಟ್ ಎಂದೇ ಆಗಲಿ ಈ ಸಭೆಯ ಮುಂದೆ ಬರಬೇಕು ಮತ್ತು ವಿಲೇಜ್ ಸರ್ವೆ ಅನ್ನುವಂತಹದನ್ನು ಕೈಕೊಳ್ಳಬೇಕು. ಗ್ರಾಮಬಡಾವಣೆ ಸಲುವಾಗಿ ಯೋಗ್ಯವಾದ ಕಾರ್ಯಕ್ರಮವನ್ನು ತೆಗೆದುಕೊಂಡು ಒಂದು ಸೂಕ್ತವಾದ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಈ ಪ್ರಕಾರ ಮಾಡುವುದರಿಂದ ಹಳ್ಳಿಗಳ ಉದ್ಧಾರವಾಗುತ್ತದೆಯೇ ಹೊರತು ಕಾನೂನನ್ನು ದುರಸ್ತುಮಾಡುವುದರಿಂದ ಈ ಸಮಸ್ಸೆ ಬಗೆಹರಿಯುವುದಿಲ್ಲ ಎಂದು ನಾನು ಒತ್ತಾಯ ಪಡಿಸಿ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

5-30 P.M.

† ಶ್ರೀ ಟಿ. ಆರ್. ಶ್ಯಾಮಣ್ಣ (ಬೆಂಗಳೂರು-ಕೋಟೆ).—ಮಾನ್ಯ ಸಭಾಪತಿಗಳೇ. ಪ್ರಪಥಮವಾಗಿ ನಮ್ಮ ಬೆಂಗಳೂರು ನಗರದ ನಾಗರೀಕರನ್ನು ಇಲ್ಲಿಯವರೆಗೂ ಕಾಡುತ್ತಿದ್ದ ಅನೇಕ ಸಮಸ್ಯೆಗಳಲ್ಲಿ ಒಂದಾಗಿದ್ದ ನೀರಿನ ಸಮಸ್ಸೆಯನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಆಸಕ್ತಿ ವಹಿಸಿ ಅದನ್ನು ಬಗೆ ಹರಿಸುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಅದಕ್ಕೆ ಇನ್ನೂ ಮುಖ್ಯ ಕಾರಣ ಕರ್ತರಾದವರು ಎಂದರೆ ನಮ್ಮ ಎಸ್ಟಿಮೇಟ್ ಕಮಿಟಿಯ ಮಾನ್ಯ ಸದಸ್ಯರುಗಳು ; ಹಾಗೂ ಅದರ ಮಾನ್ಯ ಅಧ್ಯಕ್ಷರು. ಈ ಎಲ್ಲ ಮಹನೀಯರುಗಳಿಗೂ ಪ್ರಪ್ರಥಮವಾಗಿ ನಾನು ನಮ್ಮ ಬೆಂಗಳೂರು ನಗರದ ನಾಗರೀಕರ ಪರವಾಗಿ ಅವರ ಕೃತಜ್ಞತೆಗಳನ್ನು ಅರ್ಪಿಸತಕ್ಕ ಒಂದು ಸುಯೋಗ ನನಗೆ ದೊರೆತುದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ. ಆ ನಾಗರೀಕರಿಗೆ ಈ ಒಂದು ನ್ಯಾಯವನ್ನು ದೊರಕಿಸಿಕೊಡತಕ್ಕ ಮಾರ್ಗದಲ್ಲಿ ನಮ್ಮ ಎಸ್ಟಿಮೇಟ್ ಕಮಿಟಿಯ ಅಧ್ಯಕ್ಷರೂ ಹಾಗೂ ಅದರ ಎಲ್ಲಾ ಸದಸ್ಯರುಗಳೂ ತೆಗೆದುಕೊಂಡ ಆ ಸಮಿತಿಯವರ ಒಂದು ತೀರ್ಮಾನವೇನಿತ್ತು ಅದೇ ಬಹಳ ಮುಖ್ಯವಾದದ್ದು. ಅದರಲ್ಲಿ ಅನೇಕ ವಿಚಾರಗಳು ಅಡಗಿವೆ. ಆದ್ದರಿಂದ ಆ ವರದಿಯನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಒಂದು ಅವಕಾಶವನ್ನು ಒದಗಿಸಿಕೊಂಡಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗೂ ನಾನು ಈಗಾಗಲೇ ಅವರಲ್ಲಿ ಇವರ ಬಗ್ಗೆ ಒಂದು ಬರಹ ಮೂಲಕ ಅರಿಕೆಯನ್ನೂ ಸಹಾ ಮಂಡಿಸಿದ್ದೇನೆ. ಈ ದಿವಸ ನಮ್ಮ ಬೆಂಗಳೂರು ನಾಗರೀಕರಿಗೆ ಎಷ್ಟು ಸೌಲಭ್ಯ ದೊರಕಬೇಕೋ ಅಷ್ಟನ್ನು ಒದಗಿಸುತ್ತಿಲ್ಲ. ಹಾಗೆ ಅವರಿಗೆ ನ್ಯಾಯವಾಗಿ ದೊರೆಯಬೇಕಾಗಿದ್ದ ಸೌಲಭ್ಯಗಳನ್ನು ಕೊಡದೆ ಇದ್ದ ಕಾರಣ ನಗರ ಕಾರ್ಪೊರೇಷನ್ನಿನವರು ಕಳೆದ ಮೂರು ವರ್ಷಗಳಿಂದ ವರ್ಷಂ ಪ್ರತಿ 45 ಲಕ್ಷ ರೂಪಾಯಿಗಳ ಲಾಭವನ್ನು ಅಕ್ರಮದಿಂದ ಗಳಿಸಿದ್ದಾರೆ. ಈ ವಿಚಾರ ಆ ಎಸ್ಟಿಮೇಟ್ ಕಮಿಟಿಯವರ ವರದಿಯಿಂದ ವ್ಯಕ್ತವಾಗುತ್ತದೆ. ಅಷ್ಟೇ ಅಲ್ಲದೆ ಆ ವರದಿಯಲ್ಲಿ ಈ ದಿವಸ ಅಲ್ಲಿ ವಿಧಿಸಿರತಕ್ಕ ಬಡ್ಡಿಯ ದರವನ್ನು ಶೇಕಡ ಆರರಿಂದ ಶೇಕಡ. ನಾಲ್ಕೂವರೆಗೆ ಇಳಿಸಿದರೆ ಹಾಲಿ ವಿಧಿಸಿರೆತಕ್ಕ ನೀರಿನ ಬಳಕೆ ದರ ಏನಿದೆ ಅದನ್ನು ಇನ್ನೂ ಕಡಮೆ ಮಾಡುವುದಕ್ಕೆ ಅವಕಾಶವಿದೆ, ಸಾಧ್ಯವಿದೆ ಎಂಬುದಾಗಿ ಆ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದಲ್ಲದೇ ಈ ದಿವಸ ಬೆಂಗಳೂರು ನಗರಕ್ಕೆ ಸರಬರಾಯಿ ಆಗುತ್ತಿರುವ ನೀರಿನ ಪ್ರಮಾಣದಲ್ಲಿ ಪ್ರತಿ ದಿನವೂ ಸುಮಾರು ಜನರು ಬಳಸತಕ್ಕ ನೀರಿನ ಪ್ರಮಾಣ ಏನಿದೆ ಅದರಲ್ಲಿ ಶೇಕಡ 28 ರಷ್ಟು ನೀರು ವ್ಯರ್ಥವಾಗುತ್ತಿದೆ. ಆದನ್ನು ನಗರ ಆಡಳಿತದವರು ಗಮನಿಸಿಲ್ಲ ಈ ಈ ದಿವಸ ಬೆಂಗಳೂರು ನಾಗರೀಕರಿಗೆ ಏನೊಂದು ಸೌಲಭ್ಯ ದೊರೆತಿದೆಯೋ ಅದು ಕೇವಲ ಲೆಕ್ಕದಲ್ಲಿ ಗಮನಕ್ಕೆ ತಗೆದುಕೊಳ್ಳದೆ ಕೈಬಿಟ್ಟಿದ್ದ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡಿದ್ದರಿಂದ ಅಷ್ಟು ಅನುಕೂಲ ದೊರೆತಿದೆ. ಅದರ ಜೊತೆಗೆ ನಾನು ಈ ಹಿಂದೆ ಹೇಳಿದ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ ನಾಗರೀಕರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳು ದೊರೆಯುತ್ತವೆಂಬುದರಲ್ಲಿ ಯಾವ

ಸಂಶಯವೂ ಇಲ್ಲ. ಇದರಲ್ಲಿ ಆಡಳಿತ ಮಂಡಲಿಯವರು ಮಾಡಿರತಕ್ಕ ಇನ್ನೊಂದು ದೊಡ್ಡ ಲೋಪವೆಂದರೆ ಜನರ ಮೇಲೆ ಈ ಅಕ್ರಮವಾದ ಒಂದು ತೆರಿಗೆಯನ್ನು ರಿಟ್ರಾಸ್ಪೆಕ್ಟೀವಾಗಿ 1969ಕ್ಕೆ ಜಾಸ್ತಿ ಮಾಡಿದ್ದಾರೆ. ತೆರಿಗೆಯನ್ನು ರಿಟ್ರಾಸ್ಪೆಕ್ಟೀವಾಗಿ ಹಾಕಿದಂತೆ ಜನರಿಗೆ ಸಿಕ್ಕತಕ್ಕ ಸೌಲಭ್ಯಗಳನ್ನು ಮಾತ್ರ ಅವರು ರಿಟ್ರಾಸ್ಪೆಕ್ಟೀವಾಗಿ ಕೊಡುತ್ತಿಲ್ಲ. ಈ ಎಲ್ಲ ಕಾರಣಗಳಿಂದ ಚರ್ಚೆ ಬಹಳ ಅಗತ್ಯ. ಇದರ ಸಂಬಂಧದಲ್ಲೇ ನಾನು ಅನೇಕ ತಿದ್ದುಪಡಿಗಳನ್ನು ಸಭೆಯ ಮುಂದೆ ಇಟ್ಟಿದ್ದೇನೆ. ನಮ್ಮ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದವರು ನಮ್ಮ ಸರ್ಕಾರದವರ ಬಗ್ಗೆ ಒಂದು ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದ್ದಾರೆಂದು ಹೇಳಿದರು. ಆದರೆ ಅದೇ ಮಲತಾಯಿ ಧೋರಣೆಯನ್ನು ನಮ್ಮ ಸರ್ಕಾರದವರು ನಮ್ಮ ನಗರ ನಾಗರೀಕರ ಬಗ್ಗೆ ತಾಳಿದ್ದಾರೆಂದರೆ ಅದೇನೂ ತಪ್ಪಲ್ಲ. ಬೆಂಗಳೂರು ಹೊಸ ರಾಜ್ಯದ ರಾಜ್ಯಧಾನಿಯಾದ ಮೇಲೆ ಇಲ್ಲಿ ಅನೇಕ ಸಮಸ್ಯೆಗಳು ಉದ್ಭವವಾದವು. ಇಲ್ಲಿನ ನೀರಿನ ಸಮಸ್ಯೆ, ತೆರಿಗೆ ಸಮಸ್ಯೆ ಇವೆಲ್ಲಾ ಈ ಇಂಟಿಗ್ರೇಷನ್ ಆದ ನಂತರ ಉದ್ಭವವಾದವುಗಳು. ಇದಕ್ಕೆ ಮೊದಲು ಬೆಂಗಳೂರಿನ ಪ್ರಜಾ ಸಂಖ್ಯೆ ಏಳು—ಎಂಟು ಲಕ್ಷ ಮಾತ್ರ ಇತ್ತು. ಆಗ ಇದರ ವಿಸ್ತೀರ್ಣವೆಲ್ಲಾ 20 ಚದರ ಮೈಲಿಗೆ ಹೆಚ್ಚಿಗೆ ಇರಲಿಲ್ಲ. ಈ ದಿವಸ ಇದರ ಜನ ಸಂಖ್ಯೆ 16—17 ಲಕ್ಷಕ್ಕೇರಿದೆ. ಇದರ ವಿಸ್ತೀರ್ಣ 46 ಚದರ ಮೈಲಿಗೇರಿದೆ. ರಾಜ್ಯಗಳ ನಿರ್ಮಾಣವಾದಾಗ ಹೊಸದಾಗಿ ಯಾವ ಯಾವ ರಾಜ್ಯಕ್ಕೆ ಹೊಸ ರಾಜಧಾನಿಗಳನ್ನು ನಿರ್ಮಿಸಲಾಯಿತೋ ಅಂಥ ಎಲ್ಲಾ ಸಂದರ್ಭಗಳಲ್ಲೂ ಕೇಂದ್ರದವರು ಅಧಿಕ ಸಹಾಯವನ್ನು ನೀಡಿದ್ದರೂ ನಮ್ಮ ರಾಜಧಾನಿಯ ಬಗ್ಗೆ ಅಂಥ ಯಾವ ಒಂದು ಸಹಾಯವನ್ನೂ ಅವರು ನಿಡಲಿಲ್ಲ. ಅವರು ನಮ್ಮ ನಗರದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತೋರಿಸದಿದ್ದರೆ ಹೋಗಲಿ ಆದರೆ ಅವರು ನಗರ ನಾಗರೀಕರ ಹಕ್ಕುಭಾಧ್ಯತೆಗಳನ್ನು ಕಸಿದುಕೊಳ್ಳುವುದಕ್ಕೆ ಪ್ರಾರಂಭಮಾಡಿದ್ದಾರೆ. ಎಲ್ಲಾ ಮುನಿಸಿಪಾಲಿಟಿಗಳಿಗೂ ಮತ್ತು ಲೋಕಲ್‌ಬೋರ್ಡ್ ಸಂಸ್ಥೆಗಳಿಗೆ ಸರ್ಕಾರದವರು ಕೇವಲ ಶೇ: 50 ರಷ್ಟು ಡಿ. ಎ. ಕೊಡುತ್ತಿದ್ದರೂ ಸರ್ಕಾರಿಯ ಆಜ್ಞೆಯಲ್ಲಿ ಆ ಐವತ್ತು ಪರ್ಸೆಂಟ್ ಡಿ. ಎ. ನಗರ ಕಾರ್ಪೊರೇಷನ್ನಿಗೆ ಅನ್ವಯಿಸುವುದಿಲ್ಲ ಎಂಬುದಾಗಿ ಆಜ್ಞೆ ಹೊರಡಿಸಿದ್ದಾರೆ. ಅದೇ ರೀತಿ ಮೋಟಾರ್ ವಾಹನಗಳಿಂದ ಸರ್ಕಾರಕ್ಕೆ ನಗರ ಸರಹದ್ದಿನಿಂದ ವರ್ಷಂ ಪ್ರತಿ ನಾಲ್ಕೂವರೆ ಲಕ್ಷ ರೂಪಾಯಿಗಳು ಆದಾಯ ಬರುತ್ತಿದ್ದರೂ ಅವರು ಕಾರ್ಪೊರೇಷನ್ನಿಗೆ ಕೊಡುತ್ತಿರುವುದು 1957 ರಿಂದಲೂ ಕೇವಲ 2 ಲಕ್ಷ ಮಾತ್ರ. ಆದರೆ ಕಾರ್ಪೊರೇಷನ್ನಿನವರು ಅವರ ಸರಹದ್ದಿನಲ್ಲಿರತಕ್ಕ ರಸ್ತೆರಿಪೇರಿಗಾಗಿ ವರ್ಷಂ ಪ್ರತಿ ಇಲ್ಲಿ 25-26 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಇತ್ತೀಚೆಗೆ ಸರ್ಕಾರದವರು ಕೆಲವು ಬೆಂಗಳೂರು ನಗರದ ಅಕ್ಕ ಪಕ್ಕದಲ್ಲಿದ್ದ ಕೆಲವು ಹಳ್ಳಿಗಳನ್ನು ಇದಕ್ಕೆ ಸೇರಿಸಿದರು. ಆ ಹಳ್ಳಿಗಳಿಗೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಕಾರ್ಪೊರೇಷನ್ ಒದಗಿಸಬೇಕಾಯಿತು. ಆದರೆ ಅದರ ಬಗ್ಗೆ ಸರ್ಕಾರದವರು ಏನನ್ನೂ ಕೊಡಲಿಲ್ಲ. ಇದಕ್ಕಾಗಿ ಕಾರ್ಪೊರೇಷನ್ನಿಗೆ ಲಕ್ಷಾಂತರ ರೂಪಾಯಿಗಳು ಖರ್ಚಾಯಿತು. 34 ಗ್ರಾಮಗಳನ್ನು ಇದಕ್ಕೆ ಸೇರಿಸಿದರು. ಅದಕ್ಕೆ ತಕ್ಕ ವೆಚ್ಚವನ್ನು ಮಾತ್ರ ಕೊಡಲಿಲ್ಲ. ಹೀಗೆಲ್ಲಾ ಅಲಕ್ಷ್ಯಮನೋಭಾವದಿಂದ ಸರ್ಕಾರದವರು ವರ್ತಿಸುತ್ತಿದ್ದಾರೆ. ಅಷ್ಟೇ ಅಲ್ಲದೆ ನಗರಸರಹದ್ದಿನಲ್ಲಿರತಕ್ಕ ಅನೇಕ ಮುಜ್ರಾಯಿ ಮತ್ತು ಧರ್ಮ ಸಂಸ್ಥೆಗಳಿಗೆ ಇಲ್ಲಿಯವರೆಗೂ ಯಾವ ತೆರಿಗೆಯೂ ಇರಲಿಲ್ಲ. ಈಗ ಅವುಗಳಿಗೆಲ್ಲಾ ತೆರಿಗೆ ಹಾಕಿದ್ದಾರೆ. ಅದನ್ನೂ ರಿಟ್ರಾಸ್ಪೆಕ್ಟೀವಾಗಿ ಹಾಕಿ ಅವುಗಳಿಗೆ ಒಂದೊಂದಕ್ಕೂ 15 ಸಾವಿರ 20 ಸಾವಿರ, 25 ಸಾವಿರ ಹೀಗೆ ಅರಿಯರ್ಸ್ ಬಿಲ್ಲುಗಳನ್ನು ತೆರಿಗೆ ಬಗ್ಗೆ ಕಳುಹಿಸುತ್ತಿದ್ದಾರೆ. ಇದು ಬಹಳ ಶೋಚನೀಯ. ಬೆಂಗಳೂರಿನ ಸಾರಿಗೆ ವ್ಯವಸ್ಥೆ ಏನೇನೂ ಚೆನ್ನಾಗಿಲ್ಲ. ಜನರು ಎಲ್ಲಿ ನೋಡಲಿ ಗಂಟೆಗಳಗಟ್ಟಲೆ ಕ್ಯೂನಲ್ಲಿ ನಿಂತಿರಬೇಕಾಗುತ್ತಿದೆ. ಇಷ್ಟು ಬಲವಾಗಿ ವ್ಯವಹಾರ ನಡೆಯುತ್ತಿದ್ದಾಗ್ಗೂ ಆ ಬಿ.ಟಿ.ಎಸ್. ಸಾರಿಗೆ ಸಂಸ್ಥೆಗೆ ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಈ ತೊಂದರೆಯನ್ನು ಆದಷ್ಟು ಬೇಗ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆ ಕೃಷ್ಣರಾಜ ಮಾರ್ಕೆಟ್ಟಿನ ಬಳಿ ಒಂದು ಸಬ್‌ವೇ ಮಾಡುತ್ತೇವೆಂದು ಹೇಳಿ ಒಂದು ವರ್ಷವಾಯಿತು. ಅಲ್ಲಿ ಸುತ್ತಮುತ್ತಲೂ ಇರತಕ್ಕ ವರ್ತಕರಿಗೆ ವ್ಯಾಪಾರ ಇದರಿಂದ ಕಷ್ಟವಾಗಿದೆ. ಅವರು ಬಹಳ ನಷ್ಟದಲ್ಲಿ ಕಷ್ಟಕ್ಕೀಡಾಗಿದ್ದಾರೆ. ಆದರೆ ಅಲ್ಲಿನ್ನೂ ಆ ಕೆಲಸ ಷುರುವಾಗಿಲ್ಲ. ಅದನ್ನು ಬೇಗ ಕಾರ್ಯರೂಪಕ್ಕೆ ತರಬೇಕು. ಅಲ್ಲಿ ಒಂದು ಪ್ಲಾನ್ ತೆಗೆದುಕೊಳ್ಳಬೇಕಾದರೆ, ಒಂದು ಖಾತಾ ಟ್ರಾನ್ಸ್‌ಫರ್ ತೆಗೆದುಕೊಳ್ಳಬೇಕಾದರೆ ಮತ್ತು ಒಂದು ಲೈಸೆನ್ಸ್ ಪಡೆಯ ಬೇಕಾದರೆ, ಲಂಚ ಕೊಟ್ಟರೆ ಮಾತ್ರ ಕೆಲಸವಾಗುತ್ತದೆ. ಇಲ್ಲದಿದ್ದರೆ ಅವನ ಗೋಳು ಅಷ್ಟಿಷ್ಟಲ್ಲ. ಈಗ ಕಾರ್ಪೊರೇಷನ್ನಿನಲ್ಲಿ ಪ್ರತಿಯೊಂದಕ್ಕೂ ಲಂಚವನ್ನು ತೆಗೆದುಕೊಳ್ಳುತ್ತಾ ಇರುವುದರಿಂದ ಬೆಂಗಳೂರಿನ ನಾಗರೀಕರಿಗೆ ಕಿರುಕುಳ ಜಾಸ್ತಿಯಾಗುತ್ತಾ ಇವೆ. ಆದ್ದರಿಂದ ಈಗ ನಾಗರೀಕರಿಗೆ ಕಿರುಕುಳ ಕೊಡುವ ಕಾರ್ಪೊರೇಷನ್ ಹಾಗೂ ಸರ್ಕಾರದ ನೀತಿ ಖಂಡನೀಯವಾದುದು.

5-30 P.M.

Mr. SPEAKER.—Please conclude. It is time.

Sri T. R. SHAMANNA.—I have already dealt with five amendments. I will read from the sixth amendment for the information of the members :

(vi) Government has failed to check malpractices in some of the private managed Schools and the collection of abnormal and unauthorised fees, donations, etc., by the managements.

(vii) Government has failed to take steps to replace the fused street lights particularly in extensions and undeveloped areas.

(viii) Government has failed to provide in fair price Depots, good quality rationed articles at fair rates.

(ix) Government has failed to take suitable steps to check mal-administration in many co-operative Societies and the group politics particularly in the Bangalore City.

(x) Government has caused heavy National loss by its wavering policies in the matter of education.

(xi) Government has failed to give 50 per cent D.A. contribution to Bangalore City Corporation as given to all the other local bodies.

(xii) Government has not given the legitimate share of Motor Vehicle Tax to the Bangalore City Municipal Corporation.

(xiii) Government has failed to provide water mains to revenue pockets and other undeveloped areas like Thyagarajanagar, Dasarahalli, Ashokanagar, etc.

(xiv) Government has failed to provide employment to young men in State including technically qualified men.

(xv) Government has failed to locate all subordinate Civil and Criminal courts in one place though there has been a demand in this behalf for the list 40 years.

(xvi) Failure of the Government to grant with-held portion of the enhanced dearness allowance to the State Non-Gazetted officers.

(xvii) Government has failed to satisfactorily settle the problems of Revenue sites in Bangalore City purchased by poor and middle class people for bona fide house building purposes without undue heavy burden.

(xviii) Government has failed to free people of Bangalore City from the mosquito nuisance.

ಈಗಾಗಲೇ ನಾನು ನಾಗರೀಕರಿಗೆ ಸಂಬಂಧಪಟ್ಟ ಹಾಗೆ ಅನೇಕ ಕಿರುಕುಳಗಳನ್ನು ಕಾರ್ಪೊರೇಷನ್ ಅವರು ಕೊಡುತ್ತಿರುವುದನ್ನು ವಿವರಿಸಿದ್ದೇನೆ. ಇನ್ನೂ ಕೆಲವಿವೆ. ಅವನ್ನೆಲ್ಲಾ ಪಟ್ಟಿ ಮಾಡಿದರೆ ಇನ್ನೂ ದೊಡ್ಡದಾಗುತ್ತದೆ, ಆದ್ದರಿಂದ ಬೆಂಗಳೂರು ನಗರವನ್ನು ಯಾವುದೋ ಒಂದು ರಾಜ್ಯ

ವೆಂದು ತಿಳಿದುಕೊಳ್ಳದೆ ಇದನ್ನು ರಾಜಧಾನಿ ಎಂದು ತಿಳಿದು ಅದರ ಬಗ್ಗೆ ಸಾಕಷ್ಟು ಆಸಕ್ತಿಯನ್ನು ವಹಿಸಿ ಬೆಂಗಳೂರಿನ ನಾಗರೀಕರಿಗೆ ಒಂದು ನೆಮ್ಮದಿಯನ್ನು ಒದಗಿಸಿಕೊಡಬೇಕೆಂದು ಸರ್ಕಾರದವರಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಆದರೆ ಸರ್ಕಾರದವರು ಬರೀ ನಾಗರೀಕರ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಬದಲಾಗಿ, ಈಗಾಗಲೇ ಹಾಕಿರುವ ತೆರಿಗೆಗಳನ್ನು ಸರಿಯಾದ ರೀತಿಯಲ್ಲಿ ವಸೂಲು ಮಾಡಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಒಟ್ಟಿನಲ್ಲಿ ನಾಗರೀಕರಿಗೆ ಹೆಚ್ಚಿಗೆ ತೆರಿಗೆ ಹಾಕಿ ಕಿರುಕುಳ ಕೊಡುವುದು ಸರ್ಕಾರದ ಪಾಲಿಸಿಯಲ್ಲ. ಆದ್ದರಿಂದ ಸರ್ಕಾರದವರು ನಾನು ಕೊಟ್ಟಿರುವ ತಿದ್ದುಪಡಿಗಳನ್ನೂ, ಹೇಳಿರುವ ವಿಚಾರಗಳನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಜಾಗ್ರತೆಯಾಗಿ ಅವುಗಳ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ನೀರಿನ ಬಗ್ಗೆ ಕೊಟ್ಟಿರುವ ರಿಯಾಯಿತಿಯನ್ನು ರೆಟ್ರಾಸ್ಪೆಕ್ಟೀವ್ ಆಗಿ ಬೆನಿಫಿಟ್ ಕೊಡಬೇಕೆಂದು ಹೇಳಿ, ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಪಂಚಗಾವಿ (ಅರಭಾವಿ).—ಅಧ್ಯಕ್ಷರೇ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಮತ್ತು ಈಗ ತಂದಿರುವ ವಂದನಾಪೂರ್ವಕವಾದ ನಿರ್ಣಯಕ್ಕೆ ನಾನು ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ರಾಜ್ಯಪಾಲರು ಮಾಡಿದ ಭಾಷಣದಲ್ಲಿ ಈಗ ರಾಜ್ಯಪ್ರಗತಿ ಹೇಗೆ ನಡೆದಿದೆ, ಮತ್ತು ನಾವು ಮುಂದೆ ಯಾವ ದಾರಿಯಲ್ಲಿ ನಡೆಯಬೇಕು ಎಂಬ ಬಗ್ಗೆ ಅವರ ಅಭಿಪ್ರಾಯಗಳನ್ನು ಇಟ್ಟಿದ್ದಾರೆ.

ಮೊಟ್ಟಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ತಾಲ್ಲೂಕು ಬೋರ್ಡ್ ಚುನಾವಣೆಗಳು ಬಹಳ ಶಾಂತರೀತಿಯಲ್ಲಿ ನಡೆದಿವೆ. ಆ ಬಗ್ಗೆ ಬಹಳ ಕೆಲಸವಾಗಿದೆ. ನಮ್ಮಲ್ಲಿ ಪಂಚಾಯತಿ ರಾಜ್ಯ ಸಂಸ್ಥೆಗಳು ಇನ್ನೂ ಉತ್ತಮ ರೀತಿಯಲ್ಲಿ ನಡೆಯಬೇಕೆಂದು ವ್ಯಕ್ತಪಡಿಸಿದ್ದಾರೆ. ನಮ್ಮ ರಾಜ್ಯದಲ್ಲಿ ತಾಲ್ಲೂಕು ಬೋರ್ಡ್‌ಗಳಲ್ಲಿ ಬಹಳ ಚೆನ್ನಾಗಿ ಕೆಲಸಗಳು ನಡೆದಿವೆ. ಆದರೆ ತಾಲ್ಲೂಕ್ ಬೋರ್ಡುಗಳು ರಚನೆಯಾದಂತೆ ಜಿಲ್ಲಾ ಪರಿಷತ್ತು ಇನ್ನೂ ಆಗಿಲ್ಲವೆಂದು ಕೆಲವರು ಸ್ವಲ್ಪ ವಿಷಾದ ವ್ಯಕ್ತಪಡಿಸುತ್ತಿದ್ದಾರೆ. ನಾವೇನೋ ಪ್ರಜಾಪ್ರಭುತ್ವ ಎಲ್ಲಾ ಹಂತದಲ್ಲಿಯೂ ಸರಿಯಾಗಿ ನಡೆಯಬೇಕೆಂದು ವ್ಯಕ್ತಪಡಿಸುತ್ತಿದ್ದೇವೆ. ಪ್ರಜಾಪ್ರಭುತ್ವ ಸರಿಯಾದ ಮಟ್ಟದಲ್ಲಿ ಆಚರಣೆಗೆ ತರುವ ವಿಷಯದಲ್ಲಿ ಜನತೆಗೆ ತಕ್ಕ ತಿಳುವಳಿಕೆ ಕೊಡಬೇಕೆಂದು ನಾನು ಹೇಳಬಯಸುತ್ತೇನೆ. ಮೊನ್ನೆ ತಾಲ್ಲೂಕು ಬೋರ್ಡುಗಳ ಚುನಾವಣೆಗಳು ಅನೇಕ ಕಡೆಗಳಲ್ಲಿ ಯಶಸ್ವಿಯಾಗಿ ನಡೆದರೂ ಕೂಡ ಅದರಲ್ಲಿ ಆದಂಥ ಖರ್ಚುವೆಚ್ಚ ಬಹಳ ಜಾಸ್ತಿಯಾಗಿದೆ. ಮೊಟ್ಟಮೊದಲನೆಯದಾಗಿ ಆ ಸಂದರ್ಭದಲ್ಲಿ ಆದಂಥ ಕುಡಿತ ಮತ್ತು ಇತರ ದಾಂಧಲೆಗಳು ಸರ್ಕಾರದ ಲಕ್ಷ್ಯಕ್ಕೆ ಸಾಕಷ್ಟು ಬಂದಿವೆಯೋ ಏನೋ ಗೊತ್ತಿಲ್ಲ. ಈ ಚುನಾವಣೆಯಲ್ಲಿ ಬಹಳಮಟ್ಟಿಗೆ ಹಣ ದುಂದು ವೆಚ್ಚವಾಗಿದೆ. ಇದು ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಲಕ್ಷಣವಲ್ಲ, ಒಬ್ಬೊಬ್ಬ ಸದಸ್ಯರು ಅನೇಕ ಕಡೆ 30 ಸಾವಿರ ರೂಪಾಯಿಗಳವರೆಗೂ ಖರ್ಚು ಮಾಡಿದ್ದೂ ಉಂಟು. ಕೆಲವರು 200—300 ರೂಪಾಯಿನಲ್ಲಿಯೇ ಆರಿಸಿ ಬಂದವರೂ ಇದ್ದಾರೆ. ತಾಲ್ಲೂಕು ಬೋರ್ಡ್ ಚುನಾವಣೆಗೆ 20-30 ಸಾವಿರ ಖರ್ಚು ಮಾಡಿರುವುದನ್ನು ನೋಡಿದರೆ ಮುಂದೆ ನಾವು ಎಲ್ಲಿ ಮುಟ್ಟುತ್ತೇವೆಂಬುದನ್ನು ಪರಿಶೀಲಿಸಬೇಕಾಗಿದೆ. ಪಾನನಿರೋಧ ರದ್ದುಮಾಡಿದ ಮೇಲೆ ಕುಡಿತದ ಓಟ ನೋಡಿದರೆ, ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ನಾವು ಎಲ್ಲಿಗೆ ಹೋಗಿ ಮುಟ್ಟುತ್ತೇವೋ ಎಂಬ ವಿಚಾರ ಗೊತ್ತಾಗದಂತಾಗಿದೆ. ಮುಂದೆ ಎಲ್ಲೆಲ್ಲಿ ಹಣದ ಪ್ರಭಾವ ಜಾಸ್ತಿ ಇರುತ್ತದೆಯೋ ಅಂಥ ಕಡೆಗಳಲ್ಲಿ ಲೋಕಲ್ ಟಾಡಿ ಕಂಟ್ರಾಕ್ಟರುಗಳ ಪ್ರಭಾವ ಜಾಸ್ತಿಯಾಗಿ ಬೆಳೆದು ಅಧಿಕಾರವನ್ನು ಅವರೇ ಉಳಿಸಿಕೊಂಡಿರುವಂತಾಗಿದೆ. ಇದರಿಂದ ಸರ್ಕಾರವನ್ನೇ ಅವರ ವಶಕ್ಕೆ ಕಟ್ಟಿಕೊಂಡಿದ್ದಾರೆಂಬ ಮಾತನ್ನು ನಾವು ಈಗ ತಿಳಿದು ವಿಚಾರ ಮಾಡಬೇಕಾಗುತ್ತದೆ ಅಲ್ಲದೆ ಈಗಿನ ಪ್ರಜಾಪ್ರಭುತ್ವ ಮುಂದೆ ಎಲ್ಲಿ ಹೋಗಿ ಮುಟ್ಟುತ್ತದೋ ಎಂಬ ವಿಚಾರವನ್ನು ನಾವು ಈಗಲೇ ಪರಿಶೀಲನೆ ಮಾಡಬೇಕಾಗುತ್ತದೆ. ಅದರ ಜೊತೆಗೆ ಈಗ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಎಲ್ಲಾ ಕಡೆಯೂ ವ್ಯವಸ್ಥಿತವಾಗಿ ಸ್ಥಾನಿಕಸಂಸ್ಥೆಗಳ ಕೆಲಸ ನಡೆಯಬೇಕು ಎನ್ನುವ ವಿಚಾರ ಮಾಡುತ್ತಿದ್ದಾರೆ. ತಾಲ್ಲೂಕು ಬೋರ್ಡ್‌ಗಳಿಗೆ ಅಧಿಕಾರ ಕೊಡುತ್ತಿದ್ದಾರೆ. ಅದರ ಜೊತೆಗೆ ಅನೇಕ ಸಿಬ್ಬಂದಿಯನ್ನೂ ಕೊಡುತ್ತಿದ್ದಾರೆ. ಆದರೆ ನಾವು ಅಂದಾಜು ಮಾಡಿದಷ್ಟು ಅದರ ಕೆಲಸ ನಡೆಯುತ್ತಾ ಇಲ್ಲ. ಎನ್.ಇ.ಎಸ್. ಸಂಸ್ಥೆಗಳನ್ನು ರದ್ದುಮಾಡಿ ಎಂಬುದಾಗಿ ಹೇಳಬೇಕಾಗಿದೆ. ಕೇಂದ್ರದಲ್ಲಿ ಈ ಖಾತೆಗೆ ಸಂಬಂಧವಾಗಿ ಯಾರು ಮಂತ್ರಿಗಳು ಇದ್ದಾರೋ ಅವರು ಅದನ್ನೇ ಉಳಿಸಿಕೊಳ್ಳಬೇಕೆನ್ನುತ್ತಿದ್ದಾರೆ. ಎಲ್ಲಿ ಉತ್ತಮ ರೀತಿಯಲ್ಲಿ ಕೆಲಸಗಳು ಆಗುತ್ತವೆಯೋ ಅವಕ್ಕೆ ಧ್ವನಿಗೂಡಿಸುವುದು ನಮ್ಮ ಚಾಳಿ. ಇಲ್ಲಿನ ಎಕ್ಸ್‌ಟೆನ್‌ಷನ್ ಆಫೀಸರುಗಳಿಗೆ, ಇಂಡಸ್ಟ್ರಿಯಲ್ ಎಕ್ಸ್‌ಟರ್‌ಷನ್ ಆಫೀಸರುಗಳಿಗೆ, ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ ಆಫೀಸರು

(ಶ್ರೀ ಎ. ಆರ್. ಪಂಚಗಾವಿ)

ಗಳಿಗೆ ಇನ್ನೂ ಕೆಲವು ಅಧಿಕಾರಿಗಳಿಗೆ ಎನ್.ಇ.ಎಸ್.ನಲ್ಲಿ ಏನೇನೂ ಕೆಲಸ ಇರುವುದಿಲ್ಲ. ಎಜುಕೇಷನ್ ಡಿಪಾರ್ಟ್‌ಮೆಂಟಿನವರು, ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿನವರು, ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿನವರು ಅವರವರ ಕೆಲಸ ಮಾಡುತ್ತಾರೆ. ಆದರೆ ಎಕ್ಸ್‌ಟೆನ್‌ಷನ್ ಆಫೀಸರುಗಳ ಖಾತೆ ನಾನು ಸ್ವತಃ ನೋಡಿರುವ ಹಾಗೆ ಅವು ನ್ಯಾಯವಾಗಿ ಕೆಲಸಮಾಡುವುದಿಲ್ಲ. ಅಲ್ಲಿ ಸರಿಯಾಗಿ ಕೆಲಸವೂ ಆಗುವುದಿಲ್ಲ. ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರುಗಳಿಗೆ ಇಂಡಸ್ಟ್ರಿ ಬಗ್ಗೆ ಏನೂ ಗೊತ್ತಿರುವುದಿಲ್ಲ. ಅನೇಕ ಸಲ ಇಂಥಾದ್ದು ಮಾಡಬೇಕೆಂದು ಹೇಳಿದರೆ ನಮ್ಮಿಂದ ತಪ್ಪಿಸಿಕೊಂಡು ಹೋಗುವುದು ಮಾಡುತ್ತಾರೆ. ಯಾವುದೇ ಕೆಲಸ ಅವರಿಂದ ಆಗುವುದಿಲ್ಲ. ಹೀಗಾಗಿ ನಮ್ಮ ರಾಜ್ಯಕ್ಕೆ ಹಣಕಾಸಿನ ತೊಂದರೆ, ಅನಾವಶ್ಯಕವಾದ ಹೆಚ್ಚು ಸಿಬ್ಬಂದಿ ತೊಂದರೆ ಎಂದೂ ತಪ್ಪುವುದಿಲ್ಲ. ಇದಲ್ಲದೇ ಈ ತರಹ ತೊಂದರೆಗಳೇ ಇತ್ತೀಚೆಗೆ ಜಾಸ್ತಿಯಾಗುತ್ತಾ ಇವೆ.

ಇನ್ನು ತುಕೋಳ್ ಕಮಿಷನ್ನಿನ ವರದಿ ಪ್ರಕಾರ 16 ಕೋಟಿ ರೂಪಾಯಿಗಳನ್ನು ಸರ್ಕಾರದವರು ಪ್ರತಿವರ್ಷವೂ ಖರ್ಚುಮಾಡಬೇಕು. ಇದನ್ನು ಸರಾಸರಿಯಾಗಿ ಲೆಕ್ಕ ಹಾಕಿ ನೋಡಿದರೆ, ಯಾವ್ಯಾವ ಸಿಬ್ಬಂದಿಯನ್ನು ಖೋತಾ ಮಾಡಬೇಕು, ಯಾವ್ಯಾವ ತರಹ ಅವ್ಯವಸ್ಥೆ ನಡೆದಿದೆಯೋ ಅವನ್ನು ಸರಿಮಾಡಬೇಕು. ಇಲ್ಲದಿದ್ದರೆ ನಾವು ತಪ್ಪಿ ನಡೆದಂದಾಗುತ್ತದೆಂದು ನಾನು ಹೇಳ ಬಯಸುತ್ತೇನೆ.

ಇದರ ಜೊತೆಗೆ ಸ್ಥಾನಿಕ ಸಂಸ್ಥೆಗಳ ವಿಚಾರದಲ್ಲಿ ಹೇಳಬೇಕಾಗಿದೆ. ನಮ್ಮ ಎಲ್ಲಾ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಎಂದು ಇಟ್ಟುಕೊಂಡಿದ್ದಾರೆ. ಮಹಾರಾಷ್ಟ್ರ ರಾಜ್ಯದ ಕೆಲವು ಕಡೆ ಎಲ್ಲಿ ಒಳ್ಳೆಯ ಜನರು ಇಂಥ ಸಂಸ್ಥೆಗಳಲ್ಲಿದ್ದಾರೋ, ಅಲ್ಲಿ ಈ ಜಿಲ್ಲಾ ಪರಿಷತ್ತುಗಳು ಚೆನ್ನಾಗಿ ನಡೆಯುತ್ತವೆ. ಎಲ್ಲಿ ಜನರು ಸರಿಯಾಗಿಲ್ಲವೋ, ಅಲ್ಲಿ ಇವು ಸರಿಯಾಗಿ ನಡೆಯದೆ ವಿಫಲವಾಗಿವೆ.

ಇನ್ನೊಂದು ಮಾತು, ನಾವು ಅಧಿಕಾರ ಕೊಡುವಾಗ ಅದಷ್ಟು ಸಂಶಯ ದೃಷ್ಟಿಯಿಂದ ಕೊಡುತ್ತಾ ಹೋಗುತ್ತೇವೆ. ತಾಲೂಕು ಮಟ್ಟದಲ್ಲಿ ತಾಲೂಕು ಬೋರ್ಡಿಗೆ ಪ್ರಾಥಮಿಕ ಶಿಕ್ಷಣ ಕೊಡಲು ಏಕೆ ಹಿಂದು ಮುಂದು ನೋಡುವುದು ಎಂದು ಕೇಳಬೇಕಾಗಿದೆ. ಜಿಲ್ಲಾ ಸ್ಕೂಲು ಬೋರ್ಡು ಇದ್ದರೆ, ಒಳ್ಳೇಯದೆಂದು ಹೇಳುತ್ತಾರೆ. ಈಗ ಬೆಳಗಾಂ ವಿಭಾಗದಲ್ಲಿ ಮತ್ತು ಅನೇಕ ಇತರ ಕಡೆಗಳಲ್ಲಿದ್ದ ಸ್ಕೂಲು ಬೋರ್ಡುಗಳನ್ನು ನೋಡಿದರೆ, ಎಲ್ಲವೂ ಒಳ್ಳೇಯ ರೀತಿಯಲ್ಲಿ ನಡೆಯುತ್ತಾ ಇಲ್ಲ. ಸ್ಕೂಲು ಬೋರ್ಡುಗಳನ್ನು ತಮಗೆ ಬೇಕಾದ ರೀತಿ ನಾಮಿನೇಟ್ ಮಾಡಿದ್ದಾರೆ, ಮತ್ತು ಇದರಿಂದ ಅಲ್ಲಿ ಲಂಚಗುಳಿತನ, ಅವ್ಯವಹಾರ ನಡೆಯುತ್ತಾ ಇದೆ. ಹಳೆಯ ಮೈಸೂರಿನಲ್ಲಿ ಸ್ಕೂಲು ಬೋರ್ಡುಗಳಿಲ್ಲ. ಅಲ್ಲಿಯೂ ಆಡಳಿತ ಚೆನ್ನಾಗಿ ನಡೆಯುತ್ತಿದೆ. ಮತ್ತು ಸ್ಕೂಲ್ ಬೋರ್ಡು ಏಕೆ ಬೇಕು ! . ಸ್ಕೂಲ್ ಬೋರ್ಡು ಮಾಡುವುದಾದರೆ, ಅವರಿಗೆ ಪೂರ್ಣ ಅಧಿಕಾರ ಕೊಡಬೇಕು, ಇಲ್ಲದಿದ್ದರೆ, ಖಾತೆಯ ಮುಖಾಂತರ ನಡೆಸಬೇಕು. ನಾಮಿನೇಟ್ ಮಾಡಿ ಸ್ಕೂಲು ಬೋರ್ಡು ಇಟ್ಟುಕೊಂಡರೆ ಸರಿಯಾಗುವುದಿಲ್ಲ. ಆದ್ದರಿಂದ ಆ ದೋಷ ಬರದ ಹಾಗೆ ಮಾಡಿಕೊಂಡು ಹೋಗಬೇಕಾಗುತ್ತದೆ.

ಇನ್ನು ಬರಗಾಲದ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಸರ್ಕಾರದವರು ಇದನ್ನು ಒಳ್ಳೇಯ ಸಾಮರ್ಥ್ಯ ರೀತಿಯಿಂದ ಎದುರಿಸಿ ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಗೂ ಸಾಕಷ್ಟು ಕಾಮಗಾರಿಗಳನ್ನು ಕೊಟ್ಟು ಜನರಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಟ್ಟಿದೆ. ಆದರೆ ಕಳೆದ ಒಂದು ತಿಂಗಳಿಂದ ಅನೇಕ ಕೆಲಸ ಕಾರ್ಯಗಳನ್ನು ಬಂದು ಮಾಡಿದ್ದಾರೆ. ಇದರಿಂದ ಕೆಲವು ಕಡೆ ಕೆರೆಗಳ ಕೆಲಸ ಅರ್ಧದಲ್ಲೇ ನಿಂತು ಹೋಗಿ ನೀರು ಬಂದರೆ, ಅದರಿಂದ ಮಾಡಿದ ಕೆಲಸವೂ ನಿಷ್ಪ್ರಯೋಜನವಾಗುವುದು. ಆದ್ದರಿಂದ ಮಾಡಿದ ಕೆಲಸಗಳನ್ನು ಒಂದು ಉಪಯೋಗ ಮಟ್ಟಕ್ಕೆ ತರುವುದು ಒಳ್ಳೆಯದು. ಇಂಥ ಕೆಲಸಗಳನ್ನು ಬರಗಾಲ ಭೀತಿಗೆ ಮಾತ್ರ ಮಾಡಿದರೆ ಸಾಲದು, ನಾವು ಖಾಯಂ ಆಗಿ ಇವುಗಳನ್ನುಮಾಡಿ ಜನರಿಗೆ ಉಪಯೋಗವಾಗುವ ಹಾಗೆ ಮಾಡಿದರೆ ಬಹಳ ಒಳ್ಳೆಯದು ಎಂದು ಹೇಳುತ್ತೇನೆ. ಬೆಳಗಾಂ ಜಿಲ್ಲೆಯ ವಿಷಯ ಹೇಳುವುದಾದರೆ, ಘಟಪ್ರಭಾ ಬಲದಂಡೆಯ ಯೋಜನೆಯನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಬಿಡಲಾಗಿದೆ ಎಂದು ಕಂಡು ಬರುತ್ತದೆ. ಹಿಡಕಲ್‌ಡ್ಯಾಮ್ 1973ರಲ್ಲಿ ಪೂರ್ತಿಯಾಗುವ ಸಂಭವ ಇದೆ. ಘಟಪ್ರಭಾ ಯೋಜನೆಯು ಈಗಿಂದಲೇ ಪ್ರಾರಂಭವಾಗದಿದ್ದರೆ, ಮುಂದೆ ಮೂರು ಲಕ್ಷ ಎಕರೆ ಭೂಮಿಯನ್ನು ಸರಿಯಾಗಿ ಉಪಯೋಗ ಮಾಡಲಾಗದೆ, ಬರಗಾಲ ಬರಬಹುದು. ಮುಂದಿನ ಜನರು ಇದಕ್ಕೆ ಶಾಪವನ್ನು ಹಾಕಬಹುದು. ಇದನ್ನು ಇನ್ನು ಹತ್ತು ವರ್ಷ ಮುಂದುವರಿಸಿಕೊಂಡು ಹೋಗುವು

ದೆಂದರೆ ಅದು ದುರ್ದೈವದ ಸಂಗತಿ. ಈ ಕೆಲಸ ಹಿಡಕಲ್ ಯೋಜನೆ ಪೂರ್ತಿಯಾಗುವುದರೊಳಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಿದರೆ, ಜನರಿಗೆ ಬಹಳ ಉಪಯೋಗವಾಗುತ್ತದೆ. ಮತ್ತು ಅಲ್ಲಿಯ ಮೂರು ಲಕ್ಷ ಎಕರೆಯನ್ನು ಸರಿಯಾಗಿ ವ್ಯವಸಾಯಕ್ಕೆ ಉಪಯೋಗಿಸಿಕೊಂಡು ಬರುವಂತಹ ಬರಗಾಲವನ್ನು ತಪ್ಪಿಸಬಹುದು. ಅದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವ ರೀತಿಯ ಉಲ್ಲೇಖನವೂ ಇಲ್ಲ. ಅದಲ್ಲದೆ, ಇದು 100 ವರ್ಷಕ್ಕಿಂತಲೂ ಹಿಂದಿನದು. ಹಿಂದಿನ ಕಾಲದಿಂದಲೂ ಅದನ್ನು ಪೂರ್ಣ ಮಾಡುತ್ತೇವೆಂದು ಭರವಸೆಯನ್ನು ಕೊಡುತ್ತಿದ್ದಾರೆ. ಈಗ ಮೈಸೂರು ರಾಜ್ಯವಾಗಿಯೂ ಕೂಡಾ 11—12 ವರ್ಷಗಳಾದರೂ ಆ ಯೋಜನೆ ಅಲ್ಲೇ ಉಳಿಯಿತು. ಆದ್ದರಿಂದ ಸರ್ಕಾರ ಇದರ ಬಗ್ಗೆ ಸೂಕ್ತ ಗಮನ ಕೊಟ್ಟು ಆದಷ್ಟು ಜಾಗ್ರತೆಯಾಗಿ ಇದನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಭೂಸುಧಾರಣೆಯ ಬಗ್ಗೆ ಹೇಳುವುದಾದರೆ, ಮೈಸೂರು ರಾಜ್ಯದಲ್ಲಿ ಭೂಸುಧಾರಣೆ ಇಲ್ಲವೇ ಎನ್ನುವ ಮಟ್ಟಕ್ಕೆ ಬಂದಿದೆ. ನಮ್ಮ ಟೆನೆನ್ಸೀ ಆಕ್ಟ್ ನಿರುಪಯೋಗವಾಗಿ ಹೋಗಿದೆ. ಇವತ್ತು ಅನೇಕ ರೀತಿಯ ಭೂಸುಧಾರಣೆ ನಡೆಯದೆ ನಿಂತುಹೋಗಿದೆ. ರೈತರಿಗೆ ಜಮೀನು ಸಿಗಲಿಲ್ಲ. ಉಳಿದವರಿಗೂ ಜಮೀನು ಸಿಗುತ್ತಾ ಇಲ್ಲ. ಬಡ ರೈತರು ಇನ್ನೂ ಹೆಚ್ಚುಹೆಚ್ಚು ಗೇಣಿ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಈ ಆಕ್ಟನ್ನು ಕೋರ್ಟಿನಲ್ಲಿ ಅನೇಕ ರೀತಿಯಲ್ಲಿ ಅರ್ಥಮಾಡಿಕೊಂಡು, ಹೆಚ್ಚುಹೆಚ್ಚು ಗೇಣಿಯನ್ನು ಕೊಡುವ ಹಾಗೆ ಆಗಿದೆ. ಮುಂಬಯಿ ರಾಜ್ಯದಲ್ಲಿ ನಿಶ್ಚಿತ ಗೇಣಿ ಇತ್ತು. ಅದು ಹೋಗಿ ಈಗ ಎಷ್ಟು ಫಸಲು ಬರುತ್ತದೆ, ಅದರ ಮೇಲೆ ಕೊಡಬೇಕೆಂದಾಗಿದೆ. 50 ರೂಪಾಯಿ ಕೊಡುವವನಿಗೆ ಈ ಕ್ರಮದ ಪ್ರಕಾರ 1000 ರೂಪಾಯಿ ಕೊಡುವ ಪರಿಸ್ಥಿತಿ ಬಂದಿದೆ. ಇದರಿಂದ ಅವರು ಸಾಗುವಳಿ ಮಾಡದೆ, ಮಾಲೀಕರಿಗೆ ಬಿಟ್ಟುಕೊಡುವ ಪರಿಸ್ಥಿತಿ ಬರಬಹುದು. ಈ ಭೂಸುಧಾರಣೆಗೆ ತಿದ್ದುಪಡಿ ಮಾಡದೆ ಹೋದರೆ, ರೈತರಿಗೆ ಪ್ರೋತ್ಸಾಹ ಕೊಟ್ಟ ಹಾಗೆ ಆಗುವುದಿಲ್ಲ. ಆದ್ದರಿಂದ ಅದನ್ನು ಕಂದಾಯ ಮಂತ್ರಿಯವರು ಈ ವಿಚಾರದಲ್ಲಿ ಸಾಕಷ್ಟು ಅನುಭವವುಳ್ಳವರಾಗಿದ್ದಾರೆ, ಅವರು ಇದಕ್ಕೆ ಒಂದು ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ನಾಲ್ಕನೇ ಯೋಜನೆಯಲ್ಲಿ ನಮಗೆ ಹಣದ ಕೊರತೆ ಸಾಕಷ್ಟು ಆಗಬಹುದೆಂದು ಕಂಡುಬರುತ್ತದೆ. ಧಾರಣೆಗಳು ಒಂದು ಕಡೆ ಏರುತ್ತಾ ಇವೆ. ಇದಕ್ಕೆ ಸರಿಯಾಗಿ ನಾವು ನಮ್ಮ ಯೋಜನೆಗೆ ಕಂದಾಯದ ಮೂಲಕ ಸರಿದೂಗಿಸಿಕೊಳ್ಳಬೇಕಾಗಿದೆ. ಇದರಿಂದ ನಾವು ಎಷ್ಟು ತೊಂದರೆಗೆ ಒಳಗಾಗಬಹುದೆಂಬುದನ್ನು ವಿಚಾರಿಸಬೇಕು. ಏಕೆಂದರೆ ನಾಳೆ ಟಾಕೋಳ್ ಆಯೋಗದ ರಿಪೋರ್ಟ್ ಏನು ಮಾಡಿದ್ದಾರೆ, ಅದನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ನಮಗೆ ಎಷ್ಟೋ ಹಣವಾಗಬೇಕು; ಇದನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳಬೇಕು. ಆದರೆ ಇದರ ಬಗ್ಗೆ ರಾಜ್ಯಪಾಲರು ಭಾಷಣದಲ್ಲಿ ಹೆಚ್ಚಿನ ವಿವರ ಕೊಟ್ಟಿಲ್ಲ ಏಕೆಂದು ಗೊತ್ತಾಗಿಲ್ಲ.

6-00 P.M.

ಯೋಜನೆಯ ಬಗ್ಗೆ ಮಾನ್ಯ ರಾಜ್ಯಪಾಲರು ಕೆಲವೊಂದು ಮಾತುಗಳನ್ನು ಹೇಳಿದ್ದಾರೆ. ಇದಕ್ಕೆ ಸರ್ಕಾರದವರು ಹೊಸದಾಗಿ ತೆರಿಗೆಯನ್ನು ಹಾಕುವುದರ ಮೂಲಕವೋ ಅಥವಾ ಇನ್ನು ಯಾವುದಾದರೂ ಮುಖಾಂತರವೋ ಹಣವನ್ನು ಒದಗಿಸಿಕೊಳ್ಳಬೇಕಾಗುತ್ತದೆ. ಮತ್ತು ಯಾವುದೇ ರೀತಿಯಲ್ಲಾದರೂ ಕೇವಲ ಕೇಂದ್ರ ಸರ್ಕಾರಕ್ಕೆ ಕೈವೊಡ್ಡಬೇಕು.

ನಮ್ಮ ರಾಜ್ಯದಲ್ಲಿ ಸಾಕಷ್ಟು ಆಹಾರಧಾನ್ಯವನ್ನು ಬೆಳೆಯುತ್ತಿದ್ದಾರೆ. ಅದರಲ್ಲಿಯೂ ನಮ್ಮಲ್ಲಿ ಹೊಸತಳಿ ಬಂದಾಗಿನಿಂದ ಉತ್ತಮ ರೀತಿಯಲ್ಲಿ ರೈತರು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ರೈತರಿಗೆ ಉತ್ತೇಜನ ಸಿಕ್ಕಬೇಕಾದರೆ ಅವರು ಬೆಳೆದಂತಹ ಧಾನ್ಯಕ್ಕೆ ಸರಿಯಾದ ಬೆಲೆ ಸಿಕ್ಕುವಂತಾಗಬೇಕು. ಘಟಪ್ರಭಾ ಯೋಜನೆಯ ಕೆಳಗೆ ಮತ್ತು ಇನ್ನು ಉಳಿದ ಕಡೆಗಳಲ್ಲಿ ಮುಸುಕಿನ ಜೋಳವನ್ನು ಸಾಕಷ್ಟು ಬೆಳೆಯುತ್ತಿದ್ದಾರೆ. ಮತ್ತು ಮಿಶ್ರ ತಳಿ ಜೋಳವನ್ನು ಸಾಕಷ್ಟು ಬೆಳೆಯುತ್ತಿದ್ದಾರೆ. ಮೈಸೂರು ಕಡೆಯಲ್ಲೂ ಸಹ ಮಿಶ್ರ ತಳಿ ಗೋವಿನ ಜೋಳವನ್ನು ಸಾಕಷ್ಟು ಬೆಳೆಯುತ್ತಿದ್ದಾರೆ. ಆದರೆ ದುರ್ದೈವ ವಶಾತ್ ರೈತರಿಗೆ ಅವರು ಬೆಳೆದಂತಹ ಮಾಲಿಗೆ, ಧಾನ್ಯಕ್ಕೆ ಸಾಕಷ್ಟು ಧಾರಣೆ ಸಿಕ್ಕುತ್ತಾ ಇಲ್ಲ. ಒಂದು ಕ್ವಿಂಟಾಲಿಗೆ 55 ರೂಪಾಯಿಗಳು ಇದ್ದದ್ದು 50 ರೂಪಾಯಿಗಳಿಗೆ ಇಳಿದಿದೆ. ಇದರಿಂದ ರೈತರಿಗೆ ಸರಿಯಾದಂತಹ ಪ್ರೋತ್ಸಾಹ ಸಿಕ್ಕುತ್ತಾ ಇಲ್ಲ. ಮುಸುಕಿನ ಜೋಳದ ಬೆಳೆಯನ್ನು ಮಾಡಬೇಕೋ ಬೇಡವೋ ಎನ್ನುವ ಸಮಸ್ಯೆ ರೈತರಿಗೆ ಬಂದಿದೆ. ಹೈಬ್ರಿಡ್ ಜೋಳವನ್ನು ಎಲ್ಲಾ ಕಡೆಗಳಲ್ಲಿಯೂ ರೈತರು ಸಾಕಷ್ಟು ಬೆಳೆಯುತ್ತಿದ್ದಾರೆ. ಆದರೆ ಆ ಜೋಳಕ್ಕೆ ಸರಿಯಾದಂತಹ ಧಾರಣೆಗಳು ಸಿಕ್ಕುತ್ತವೆಯೋ ಇಲ್ಲವೋ ಎನ್ನುವ ಪರಿಸ್ಥಿತಿ ಬಂದಿದೆ.

(ಶ್ರೀ ಎ. ಆರ್. ಪಂಚಗಾವಿ)

ಮುಸುಕಿನ ಜೋಳವನ್ನು ಕೆಲವು ಜನ ತಿನ್ನಬಹುದು. ಹೈಬ್ರಿಡ್ ಜೋಳವನ್ನು ಸಾಕಷ್ಟು ಜನ ತಿನ್ನುತ್ತಾ ಇಲ್ಲ. ಎಲ್ಲಾ ಕಡೆಗೂ ಇದು ಸರಿಯಾದ ಆಹಾರ ಎನ್ನುವ ಮಾತನ್ನು ಜನ ಒಪ್ಪಿಕೊಂಡಿಲ್ಲ. ಮಂಗಳೂರು ಮತ್ತು ಹಳೆಯ ಮೈಸೂರು ಪ್ರದೇಶಗಳಲ್ಲಿ ಜೋಳವನ್ನು ತಿನ್ನುವುದು ಕಡಿಮೆ. ಧಾರವಾಡ ಜಿಲ್ಲೆಯಲ್ಲಿಯೂ ಮುಸುಕಿನ ಜೋಳವನ್ನು ತಿನ್ನುವ ಜನ ಬಹಳ ಕಡಿಮೆ. ಆದ್ದರಿಂದ ಈ ಹೋಳಕ್ಕೆ ಸರಿಯಾದ ಧಾರಣೆ ಸಿಕ್ಕುತ್ತಾ ಇಲ್ಲ. ಇದನ್ನು ಹೊರಗಡೆ ಕಳುಹಿಸ ಬೇಕಾಗುತ್ತದೆ ಹಿಂದೆ ಅಹಮದಾಬಾದಿನಲ್ಲಿ ಹೊರಗಡೆಯಿಂದ ಮುಸುಕಿನ ಜೋಳವನ್ನು ತರಿಸುತ್ತಿದ್ದರು. ಅದಕ್ಕಾಗಿ ಈ ವರ್ಷ ಕೇಂದ್ರ ಸರ್ಕಾರದವರು ಮುಸುಕಿನ ಜೋಳವನ್ನು ಹೊರಗಡೆಯಿಂದ ತರಿಸುವುದಕ್ಕೆ ನಿರ್ಭಂಧವನ್ನು ಹಾಕಿ ನಮ್ಮ ದೇಶದಲ್ಲಿಯೇ ಸಾಕಷ್ಟು ಮುಸುಕಿನ ಜೋಳ ಸಿಕ್ಕುತ್ತಾ ಇರುವಾಗ ಹೊರಗಡೆಯಿಂದ ಅದನ್ನು ತರಿಸಬೇಡಿ ಎಂದು ಮಾಡಿದ್ದಾರೆ. ಹೀಗೆಯೇ ಬೆಲೆಗಳು ಇಳಿಯುತ್ತಾ ಹೋದರೆ ಹೊಸತಳಿಯ ಮುಸುಕಿನ ಜೋಳ ಹೈಬ್ರಿಡ್ ಜೋಳ ಏನಿದೆ ಅದನ್ನು ಬೆಳೆಯುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ವಿಚಾರ ಮಾಡಿ ಮೈಸೂರು ರಾಜ್ಯಕ್ಕೆ ಒಂದು ಸ್ಟಾರ್ಚ್ ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ ಒಳ್ಳೆಯದಾಗುತ್ತದೆ. ಅದುದರಿಂದ ಕೈಗಾರಿಕೆಯನ್ನೂ ಬೆಳೆಸಿದಂತಾಗುತ್ತದೆ. ಇದನ್ನು ಸರ್ಕಾರದವರು ವಿಚಾರ ಮಾಡಬೇಕು ಎಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The House will now rise to meet at 12 NOON tommorrow.

The House adjourned at five Minutes past Six of the Clock to meet again at Twelve of the Clock on Thursday, the 16th January 1969.

Karnataka State Archives,
(Departmental Library)
Accession No. 4857
ದಿನಾಂಕ Date

WD 11779—GPB—600—10-2-1969

MYSORE LEGISLATIVE ASSEMBLY

Thursday, 16th January 1969

The House met in the Assembly Chamber, Vidhana Soudha at Twelve of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Kankumbi-Chorla Road

9. SRI N. B. SIRDESAI (Khanapur).—

Will the Minister for Public Works be pleased to state :—

(*a*) the total amount spent on Kankumbi-Chorla Road work in Khanapur Taluk in 1967 and 1968 ;

(*b*) whether the road work is commensurate with the amount spent ?

SRI K. LAKKAPPA (Minister for Public Works).—

(*a*)

Year	Amount
1966-67	Rs. 22,981
1967 68	Rs. 5,284

(*b*) Yes.

SRI N. B. SIRDESAI.—May I know whether the work was entrusted to the P.W.D. contractor or it was executed by the departmental hands?

SRI K. LAKKAPPA.—Formerly it was only a rural communication road. When the previous Minister for Public Works happened to visit the spot and when he felt that there is necessity to take over the road to the Public Works Department he gave instructions to the concerned Executive Engineer and asked him to take it over and do the work. Accordingly the work is going on.

SRI N. B. SIRDESAI.—May I know the nature and extent of the work turned out in 1966-67 and 1967-68 ?

SRI K. LAKKAPPA.—They are printed in the answers and the hon. Member can look into them.

SRI N. B. SIRDESAI.—May I know when the work will be over ?

SRI K. LAKKAPPA.—It is a long bit of road of about 11 milles. We have taken over several roads in the State to the Public Works Department the total extent being nearly 8 to 9 thousand miles. All these 9,000 miles, we cannot do in a year or two. On a phased programme we are going to finish the work.

MR. SPEAKER.—Question 15. Hon. Member Sri R. Nagan Gouda is absent. Next question No. 23 by Sri T. K. Gangi Reddi.

Old Age Pension

23. SRI T. K. GANGI REI

B004857_MAR_1969_030

Will the Minister for Fi ... outh Welfare be pleased to state :—

(*a*) the number of perso ... n during 1968-69 in the State ;

(*b*) the number of pers ... in each Taluk of Kolar District ;

(*c*) the number of appl ... sting to grant this pension ?

SRI RAMAKRISHNA HEGDE (Minister for Finance, Planning and Youth Welfare).—

(*a*) 3,284 persons are getting old age pension.

(*b*) the number of persions as noted below are getting old age pension in each Taluk of Kolar District.

1.	Bagepalli	...	22
2.	Bangarpet	...	19
3.	Chikkaballapur	...	33
4.	Chinthamani	...	36
5.	Gowribidanur	...	43
6.	Gudibanda	...	6
7.	Kolar	...	16
8.	Malur	...	12
9.	Mulabagal	...	10
10.	Sidlaghatta	...	3
11.	Srinivasapura	...	9

(*c*) 4,584 applications have been received till 30-10-1968. Out of them, 266 applications have been received from Kolar District.

ಶ್ರೀ ಟಿ. ಕೆ. ಗಂಗಿರೆಡ್ಡಿ.—ಕೋಲಾರ ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕಿನಿಂದ ವೃದ್ಧಾಪ್ಯ ವೇತನಕ್ಕಾಗಿ ಬಂದ ಅರ್ಜಿಗಳು ಎಷ್ಟು ?

† ಶ್ರೀ ರಾಮಕೃಷ್ಣ ಹೆಗಡೆ.—ಒಟ್ಟು ಬಂದಿರುವುದು 266.

Sri M. S. KRISHNAN.—What is the basis and what are the criteria for granting old age pension ?

Sri RAMAKRISHNA HEGDE.—If the hon. Member wants I can lay a copy of the Order on the table of this House for his information. This scheme came into existence nearly three years ago.

Mr. SPEAKER.—A copy of the Order may be placed on the Table*.

Sri B. B. SAYANAK.—May I know how much amount is given to an old man as pension ?

Sri RAMAKRISHNA HEGDE.—Rs. 15 per month.

ಶ್ರೀ ಪಿ. ವೆಂಕಟಗಿರಿಯಪ್ಪ.—ಈಗ ಕಾಂಗ್ರೆಸ್‌ನಲ್ಲಿ ಇಲ್ಲದೇ ಇರುವವರು ಮೊದಲು ಕಾಂಗ್ರೆಸ್‌ನಲ್ಲಿ ಬಹಳವಾಗಿ ದುಡಿದು ದೇಶಸೇವೆ ಮಾಡಿದ್ದ ಒಬ್ಬ ಮಹನೀಯರಿಗೆ ನಾವೆಲ್ಲಾ ಹೋಗಿ ಪೊಲಿಟಿಕಲ್ ಸಫರರ್ಸ್ ಪೆನ್‌ಷನ್ ಕೊಡಬೇಕೆಂದು ಹೇಳಿ ಮಂಜೂರು ಮಾಡಿಸಿದ್ದನ್ನು ಅವರ ಪೈಕಿ ಯಾರೋ ಒಬ್ಬರಿಗೆ ಸಂಬಳ ಬರುತ್ತದೆ ಎಂಬ ಸುಳ್ಳು ಕಾರಣದ ಮೇಲೆ ಅವರಿಗೆ ಕೊಡುತ್ತಾ ಇದ್ದ ಪೆನ್‌ಷೆನ್‌ನ್ನು ನಿಲ್ಲಿಸಿರುವುದು ಸರ್ಕಾರದವರಿಗೆ ಗೊತ್ತಿದೆಯೇ ? ಮತ್ತು ಅದನ್ನು ಅವರಿಗೆ ಕೊಡುವುದಕ್ಕೆ ಸರ್ಕಾರದವರು ಮನಸ್ಸು ಮಾಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಓಲ್ಡ್ ಏಜ್ ಪೆನ್‌ಷನ್ ಮತ್ತು ಪೊಲಿಟಿಕಲ್ ಸಫರರ್ಸ್ ಪೆನ್‌ಷನ್‌ನ್ನು ಕನ್‌ಫ್ಯೂಸ್ ಮಾಡಿಕೊಂಡಿದ್ದಾರೆ.

ಶ್ರೀ ಇ. ನಾರಾಯಣಗೌಡ.—ಇಷ್ಟೇ ದಿವಸದಲ್ಲಿ ಈ ರೆಕಾರ್ಡುಗಳನ್ನು ಇತ್ಯರ್ಥ ಮಾಡಬೇಕೆಂದು ತಾಲ್ಲೂಕು ಅಧಿಕಾರಿಗಳಿಗೆ ಸೂಚನೆ ಕಳುಹಿಸಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ತಾಲ್ಲೂಕು ಅಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಬಹಳ ಸ್ಪಷ್ಟವಾಗಿ ಇಂತಹ ವಿಚಾರ ಬಂದಾಗ ಪ್ರಪ್ರಥಮ ಪ್ರಾಶಸ್ತ್ಯ ಕೊಟ್ಟು ತೀವ್ರವಾಗಿ ವಿಲೆವಾರಿ ಮಾಡಬೇಕೆಂದು ನಿರ್ದೇಶನ ಕೊಟ್ಟಿದ್ದೇವೆ.

ಶ್ರೀಮತಿ ಕೆ ಎಸ್. ನಾಗರತ್ನಮ್ಮ.—ಅನೇಕ ಜನಗಳಿಂದ ಅರ್ಜಿಗಳು ಬಂದು ಅವರಿಗೆ ಈ ಪೆನ್‌ಷನ್ ವಿತರಣೆಯಾಗದೆ ಅವರು ಸತ್ತುಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಂತಹ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ಈಗ ಕೊಟ್ಟಿರುವ ಅಂಕಿಸಂಖ್ಯೆ ಮೇಲೆ ಬಹಳಷ್ಟು ಅರ್ಜಿಗಳು ಬಾಕಿ ಉಳಿದಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—4,584 ರಲ್ಲಿ ಎಷ್ಟು ವಿಲೇವಾರಿಯಾಗಿದೆ ? ಅದರಲ್ಲಿ ಸ್ತ್ರೀಯರಿಗೆ ಎಷ್ಟು ಜನಕ್ಕೆ ಸಿಕ್ಕುತ್ತಾ ಇದೆ ?

ಶ್ರೀ ರಾಮಕೃಷ್ಣ ಹೆಗಡೆ.—ಸ್ತ್ರೀಯರಿಗೆ ಎಷ್ಟು ಅಂತ ಪ್ರತ್ಯೇಕವಾಗಿ ಸಮಾಚಾರ ಬೇಕಾದರೆ ತರಿಸಿಕೊಡುತ್ತೇನೆ. ಒಟ್ಟು 4584 ರಲ್ಲಿ 3284 ಈಗಾಗಲೇ ಮಂಜೂರಾಗಿದೆ, 740 ಅರ್ಜಿಗಳು ರಿಜೆಕ್ಟ್ ಆಗಿವೆ, ಬಾಕಿದು ಇತ್ಯರ್ಥವಾಗಬೇಕಾಗಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—740ಅರ್ಜಿಗಳು ರಿಜೆಕ್ಟ್ ಆಗಿವೆ ಎಂದು ಹೇಳಿದಿರಿ, ಯಾವ ಕಾರಣದ ಮೇಲೆ ರಿಜೆಕ್ಟ್ ಆಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಬೇರೆ ಬೇರೆ ಕಾರಣದ ಮೇಲೆ ರಿಜೆಕ್ಟ್ ಆಗಿದೆ. ವಯಸ್ಸು ಆಗಿರಬೇಕು. ಅದು ಆಗಿರದೇ ಇರಬಹುದು, ಡಿಪೆಂಡೆಂಟ್ಸ್ ಇದ್ದಿರಬಹುದು, ಈ ರೀತಿ ಇನ್ನೂ ಇತರ ಕಾರಣಗಳು ಇರುತ್ತವೆ.

---

*Copy placed in the Mysore Legislature Library.

†Indicates that the remarks or speeches have not been revised by the member concerned.

ಶ್ರೀ ಎಸ್. ಎಂ. ಗುರೆಡ್ಡಿ.—ಗ್ರಾಮೀಣ ಪ್ರದೇಶದ ಜನರು ಈ ಓಲ್ಡ್ ಏಜ್ ಪೆನ್‌ಷನ್ ಉಪಯೋಗ ಪಡೆಯುತ್ತಿಲ್ಲ, ಇದಕ್ಕೆ ಮುಖ್ಯಕಾರಣ ಅಲ್ಲಿ ವಿಲೇವಾರಿ ಮಾಡುವಂತಹ ತಹಸೀಲ್ದಾರರು ಮತ್ತು ಡೆಪ್ಯೂಟಿ ಕಮೀಷನರು ನಿಗಾ ವಹಿಸುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಈಗ ಕೊಟ್ಟಿರತಕ್ಕ ಅಂಕಿ ಅಂಶದ ಪ್ರಕಾರ ಕೇವಲ ಪಟ್ಟಣವಾಸಿಗಳೇ ಇದರ ಲಾಭಪಡೆಯುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಪಟ್ಟಣದಲ್ಲಿ ವಾಸಿಸುವವರು ಈ ಉಪಯೋಗ ಪಡೆದುಕೊಂಡಿರುವುದು ಹೆಚ್ಚು ಅದು ನಿಜ. ಆದರೆ ಎಲ್ಲರೂ ಪಟ್ಟಣದಲ್ಲಿ ವಾಸಿಸುವವರು ಎಂದು ಹೇಳುವುದು ಸರಿಯಿಲ್ಲ. ಹಿಂದೆ ಒಂದು ಸಲ ಇಂತಹದ್ದೆ ಪ್ರಶ್ನೆ ಬಂದಾಗ ಹೇಳಿದೆ, ಸರ್ಕಾರದ ವತಿಯಿಂದ ಪಬ್ಲಿಸಿಟಿ ಎಷ್ಟು ಕೊಡಬೇಕೋ ಅಷ್ಟು ಕೊಡುತ್ತೇವೆ. ತಹಸೀಲ್ದಾರರು ಮತ್ತು ರೆವಿನ್ಯೂ ಅಧಿಕಾರಿಗಳು ಇದರ ಬಗ್ಗೆ ಸಾಕಾದಷ್ಟು ಪಬ್ಲಿಸಿಟಿ ಕೊಡಬೇಕೆಂದು ಹೇಳಿದ್ದೇವೆ. ಅದಕ್ಕಿಂತ ಹೆಚ್ಚಾಗಿ ಅಧಿಕಾರೇತರರು ಪಬ್ಲಿಸಿ ಕೊಟ್ಟು ಅರ್ಜಿಗಳನ್ನು ಕಳುಹಿಸಿಕೊಟ್ಟ ಪಕ್ಷದಲ್ಲಿ ಆದರಿಂದ ಹೆಚ್ಚು ಪ್ರಯೋಜನವಾಗುತ್ತದೆ.

Sri J. P. SARWESH.—Is it not a fact that in Gulbarga District many people have applied for such old age pension but unfortunately many have not received it. Will you kindly consider the applications which are still pending ?

Sri RAMAKRISHNA HEGDE.—Sir, the very way the question is put by the hon. member shows that it is only a presumption. Total number of applications received from Gulbarga District is 128, out of which 101 have been sanctioned. Two have been rejected and 25 applications are still pending.

ಶ್ರೀ ಎಸ್. ಎಸ್. ಅರಕೇರಿ.—ಈ ಪೆನ್‌ಷನ್ ಪಡೆಯುವುದಕ್ಕೆ ಏನೇನು ಅರ್ಹತೆಗಳಿರಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ಅದರ ಬಗ್ಗೆ ಒಂದು ಸರ್ಕಾರಿ ಆಜ್ಞೆಯನ್ನೇ ಟೇಬಲ್ ಮೇಲೆ ಇಡುವುದಾಗಿ ಹೇಳಿದ್ದೇನೆ. ಅದರಲ್ಲ ವಿವರಗಳೆಲ್ಲಾ ಇದೆ.

Kaveri Emporium at New Delhi

30. Sri S. S. ARAKERI (Balloli).—

Will the Minister for Industries, Information and Publicity be pleased to state :—

(*a*) the total number of employees working in Kaveri Emporium in New Delhi (the number of ladies and gents may be given separately) ;

(*b*) whether any Kannada knowing employee is working in the said Kaveri Emporium, if not, the reasons for the same ;

(*c*) the total turn over of the sales at Kaveri Emporium since the last three years ?

Sri A. P. APPANNA (Deputy Minister for Industries).—

(*a*) (8).
Ladies–2.
Men–6.

(*b*) Yes.

(c)	Years.	Sales.
1	1965-66	2,98,961
2	1966-67	3,01,671
3	1967-68	4,28,651

ಶ್ರೀ ಎಸ್. ಎಸ್. ಅರಕೇರಿ.—ಇಲ್ಲಿ ಉತ್ತರದಲ್ಲಿ ದೆಹಲಿಯಲ್ಲಿರತಕ್ಕ ಕಾವೇರಿ ಎಂಪೋರಿಯಂನಲ್ಲಿ ಕನ್ನಡ ತಿಳಿದವರಿದ್ದಾರೆಂದು ಹೇಳಲಾಗಿದೆ. ಆದರೆ ನಾನು ಮೊನ್ನೆ ಆಗಸ್ಟಿನಲ್ಲಿ ಅಲ್ಲಿಗೆ ಹೋಗಿದ್ದಾಗ ಅಲ್ಲಿ ಕನ್ನಡ ಮಾತನಾಡತಕ್ಕವರು ಒಬ್ಬರೂ ಇರಲಿಲ್ಲವಲ್ಲ? ಅವರನ್ನು ಅಲ್ಲಿ ಯಾವಾಗ ನೇಮಕ ಮಾಡಿಕೊಳ್ಳಲಾಯಿತು ?

† ಶ್ರೀ ಎ. ಪಿ. ಅಪ್ಪಣ್ಣ.—ಆ 8 ಜನರಲ್ಲಿ ಕನ್ನಡ ಮಾತನಾಡತಕ್ಕವರು ಒಬ್ಬರು ಇದ್ದಾರೆ. ತಾವು ಬಹುಶಃ ಅವರೊಡನೆ ಕನ್ನಡದಲ್ಲಿ ಮಾತನಾಡಲಿಲ್ಲ ಎಂದು ಕಾಣುತ್ತದೆ.

ಶ್ರೀ ಎಸ್. ಎಸ್. ಅರಕೇರಿ.—ಆ ದೆಹಲಿಯಲ್ಲಿ ಅನೇಕ ರಾಜ್ಯಗಳವರು—ಗುಜರಾತಿನವರು ಹಾಗೂ ಮದ್ರಾಸಿನವರು—ಅಲ್ಲಿ ತಮ್ಮ ತಮ್ಮ ಎಂಪೋರಿಯಂಗಳಿಗೆ ತಮ್ಮ ರಾಜ್ಯದ ಹೆಸರನ್ನು ಇಟ್ಟುಕೊಂಡಿರುವಾಗ ನಮ್ಮ ಎಂಪೋರಿಯಂ ಒಂದನ್ನು ಮಾತ್ರ ಯಾರದೋ ಒತ್ತಾಯಕ್ಕೆ ಮಣಿದು ಕಾವೇರಿ ಎಂಪೋರಿಯಂ ಎಂದು ಇಟ್ಟಿರುವುದನ್ನು ಬದಲಾಯಿಸಿ, ಅದಕ್ಕೆ ಮೈಸೂರು ಅಥವಾ ಕರ್ಣಾಟಕ ಎಂಪೋರಿಯಂ ಎಂದು ಹೆಸರಿಡುತ್ತೀರಾ ?

ಶ್ರೀ ಎ. ಪಿ. ಅಪ್ಪಣ್ಣ.—ಕಾವೇರಿ ಮೈಸೂರನ್ನು ಉದ್ಧಾರ ಮಾಡತಕ್ಕ ಮಾತೆ. ಆದ್ದರಿಂದ ಅದನ್ನು ಬದಲಾಯಿಸುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕಳೆದ 3 ವರ್ಷಗಳಿಂದ ಒಟ್ಟು ಎಷ್ಟು ಲಾಭ ಬಂದಿದೆ ?

ಶ್ರೀ ಎ. ಪಿ. ಅಪ್ಪಣ್ಣ.—ಖಚಿತವಾದ ಅಂಕಿಯನ್ನು ತಿಳಿಸುವುದಕ್ಕಾಗದಿದ್ದರೂ ಸಾಕಷ್ಟು ಲಾಭದಲ್ಲಿ ಕೆಲಸ ಮಾಡುತ್ತಿದೆ ಎಂದು ಧಾರಾಳವಾಗಿ ಹೇಳಬಹುದು.

Loans of Failed Wells

58. Sri K. SANGANA GOWDA (Lingsugur).—

Will the Minister for Revenue be pleased to state :—

(a) whether the G.O. No. RDF 44 TSW 63, dated 25th March 1964 of Revenue Department, Government of Mysore, is in force ;

(b) whether the concessions metioned in the said G.O. are given to the borrowers of loan in case of failed wells in Raichur district ;

(c) whether there is any proposal to investigate such cases of failed wells and give benefit of the said G.O. to the farmers in Raichur district ?

A.—Sri H. V. KOUJALGI (Minister for Revenue).—

(a) Yes.
(b) Yes.
(c) Yes.

ಶ್ರೀ ಕೆ. ಸಂಗನಗೌಡ.—ಆಜ್ಞೆ ಜಾರಿಯಲ್ಲಿದೆ ಎಂದು ಹೇಳಿದ್ದಾರೆ. ಆದರೆ ಇದರಿಂದ ನಮ್ಮ ರಾಯಚೂರಿನ ಜಿಲ್ಲೆಯವರಿಗೆಷ್ಟು ಅನುಕೂಲ ದೊರೆತಿದೆ ?

ಶ್ರೀ ಎಚ್. ವಿ. ಕೌಜಲಗಿ.—ಅಲ್ಲಿಂದ ಒಟ್ಟು 8 ಕೇಸುಗಳು ಶಿಫಾರಸ್ಸಾಗಿ ಬಂದಿದ್ದವು. ಅವುಗಳಿಗೆ ಎಲ್ಲಕ್ಕೂ ಅನುಕೂಲವಾಡಿದೆ.

ಶ್ರೀ ಕೆ. ಸಂಗನಗೌಡ.—ನನಗೆ ತಿಳಿದಿರುವಂತೆ ಲಿಂಗಸೂಗುರು ತಾಲ್ಲೂಕಿನಲ್ಲಿ ಅಲ್ಲಿಯ ಜನರು ಕೊಡತಕ್ಕ ಅಪ್ಲಿಕೇಷನ್ ಅವಧಿ ನಿಧಾನವಾಗಿದೆ ಎಂದು ಅಲ್ಲಿ 8—10 ಅಪ್ಲಿಕೇಷನ್‌ಗಳನ್ನು ಸರ್ಕಾರದವರು ತಳ್ಳಿಹಾಕಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಅಂಥ ಪ್ರತ್ಯೇಕ ನಿದರ್ಶನಗಳಿದ್ದಲ್ಲಿ ನನ್ನ ಗಮನಕ್ಕೆ ತಂದರೆ ಅದನ್ನು ಪರಿಶೀಲನೆ ಮಾಡಲಾಗುತ್ತದೆ.

Sri V. N. PATIL.—May I know whether Government would issue direction to all the Deputy Commissioners and Tahsildars to strictly implement the G.O.?

Sri H. V. KOUJALGI.—It is strictly enforced but it is for the parties to approach the authorities concerned.

ಶ್ರೀ ಇ. ಪುಂಡಲೀಕಪ್ಪ.—ರಾಯಚೂರು ಜಿಲ್ಲೆಯ ಕೆಲವು ಬಾವಿಗಳಲ್ಲಿ ನೀರು ಬಿದ್ದಿಲ್ಲವೆನ್ನುವ ಬಗ್ಗೆ ಈಗಾಗಲೇ ಎಷ್ಟು ಅರ್ಜಿಗಳು ಬಂದಿವೆ ?

ಶ್ರೀ ಎಚ್. ವಿ. ಕೌಜಲಗಿ.—8 ಅರ್ಜಿಗಳು ಬಂದಿವೆ.

Construction of Varuna Channel to K. R. Sagar

60. Sri N. A. CHANNEGOWDA (Pandavapura).—

Will the Chief Minister be pleased to state :—

(*a*) whether they have appointed a Committee to consider the availability of water to the right bank high level (Varuna) Channel proposed to be constructed to Krishnarajasagar and other matters;

(i) if so, when it was appointed ;
(ii) if its report is received, when it was submitted ;
(iii) who are the members of the Committee;

(*b*) the Number of members of that Committee who have toured in Visweshwaraiah Channel area affected by the proposed Channel;

(*c*) whether a special Officer was appointed to provide statistics to this Committee ;

(*d*) whether the Chief Engineer for Major Irrigation (South) has tourned in Visweswaraiah channel area to get the opinion of the people of that area, who would suffer from the proposed Varuna Channel and submitted a report;

(*e*) whether the report of the above Committee and that of the Chief Engineer would be placed on the Table of the House ;

(*f*) Out of the members of above Committee, the number and names of persons who have been given extension of service ?

Sri VEERENDRA PATIL (Chief Minister).—

(*a*) Yes.

(i) on 4th November 1967.
(ii) Received on 9th October 1968.

(iii) the following are the members of the Committee

1 Chief Engineer, Irrigation (South) Bangalore.
2 Chief Engineer, Investigation of Hydro-electric and Irrigation projects, Bangalore.
3 Chief Engineer, Irrigation (North), Dharwar.
4 Chief Engineer (General), P. W. D., Bangalore.
5 Under Secretary, Public Works Department, Bangalore.
6 Sri R. L. Raju, Retired Chief Engineer.

(*b*) Yes, they have toured.
(*c*) Yes.
(*d*) Yes.
(*e*) No.
(*f*) No one was given extension of service.

ಶ್ರೀ ಎನ್. ಎ. ಚನ್ನೇಗೌಡ.—ಸಮಿತಿಯ ವರದಿಯನ್ನು ಸರ್ಕಾರದವರು ಪರಿಶೀಲಿಸಿ ಏನಾದರೂ ತೀರ್ಮಾನವನ್ನು ಕೈಗೊಂಡಿದ್ದಾರೆಯೇ ?

† ಶ್ರೀ ವೀರೇಂದ್ರ ಪಾಟೀಲ್.—ಇನ್ನೂ ತೀರ್ಮಾನವನ್ನು ಕೈಗೊಂಡಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಸಮಿಯ ಮತ್ತು ಮುಖ್ಯ ಇಂಜನಿಯರ್, ನೀರಾವರಿ (ದಕ್ಷಿಣ ವಿಭಾಗ)—ಈ ಎರಡು ವರದಿಗಳನ್ನು ಸಭೆಯಮುಂದೆ ಇಡುವುದಕ್ಕೆ ಅಗುವುದಿಲ್ಲವೆಂದು ಉತ್ತರದಲ್ಲಿ ಹೇಳಿದೆ. ಇದರಲ್ಲಿರತಕ್ಕ ಅಂತಕವೇನು ?

ಶ್ರೀ ವೀರೇಂದ್ರ ಪಾಟೀಲ್.—ಎಕ್ಸ್‌ಪರ್ಟ್ ಕಮಿಟಿಯಿಂದ ವರದಿ ಬಂದಿದೆ. ಅದನ್ನು ಪರಿಶೀಲನೆಮಾಡುತ್ತಿದ್ದೇವೆ. ಅದರ ಬಗ್ಗೆ ಇನ್ನೂ ಯಾವುದೂ ನಿರ್ಧಾರ ಮಾಡಿಲ್ಲ. ಅಂತಿಮ ನಿರ್ಣಯವನ್ನೂ ಸಹ ತೆಗೆದುಕೊಂಡಿಲ್ಲ. ಇಂತಹ ಒಂದು ಸನ್ನಿವೇಶದಲ್ಲಿ ಆ ವರದಿಯನ್ನು ಈ ಸಭೆಯಮುಂದೆ ಇಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಆ ಸಮಿತಿಯ 6 ಜನರೂ ಪ್ರವಾಸವನ್ನು ಕೈಗೊಂಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲಾ ಜನರೂ ಹೋಗಿಲ್ಲ. ಆದರೆ ನನ್ನ ಮುಂದೆ ಇರುವ ವರದಿಯ ಪ್ರಕಾರ ಆ ಕಮಿಟಿಯವರು ಕೆ.ಆರ್.ಎಸ್.ನಲ್ಲಿ ಸೇರಿದ್ದರು. ಆದರೆ ಉತ್ತರದಲ್ಲಿ (a) (iii) (5) ರಲ್ಲಿ ಒಂದು ಪ್ರಿಂಟಿಂಗ್ ಮಿಸ್ಟೇಕ್ ಆಗಿದೆ. ಜಾಯಿಂಟ್ ಸೆಕ್ರೆಟರಿ, ಪಿ.ಡಬ್ಲ್ಯು.ಡಿ. ಬೆಂಗಳೂರು, ಬದಲು ಅಂಡರ್ ಸೆಕ್ರೆಟರಿ, ಪಿ.ಡಬ್ಲ್ಯು.ಡಿ. ಬೆಂಗಳೂರು, ಎಂದು ಅಚ್ಚಾಗಿದೆ. ಯಾರ್‍ಯಾರು ಕಮಿಟಿ ಸದಸ್ಯರು ಎಂಬುವರಲ್ಲಿ ಆ ರೀತಿ ಬದಲಾವಣೆಮಾಡಿಕೊಳ್ಳಬೇಕು. ಅವರೂ ಸಹ ಅವರ ರ್‍ಯಾಂಕೇ.

ಶ್ರೀ ಎಸ್. ಬಂಗಾರಪ್ಪ.—ಈ ವರುಣಾ ನಾಲೆಗೆ ನೀರು ಎಷ್ಟು ಸಿಗುತ್ತದೆಂಬ ಬಗ್ಗೆ ಏನಾದರೂ ವರದಿ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಕೆ.ಆರ್.ಎಸ್. ನಲ್ಲಿ ಸಿಗಬಹುದು ಎಂದು ಹೇಳಿದ್ದಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ವರುಣ ನಾಲೆಯನ್ನು ತೆಗೆಯುವುದರಿಂದ ಮಂಡ್ಯಾ ಜಿಲ್ಲೆಯ ರೈತರಿಂದ ಏನಾದರೂ ತೊಂದರೆಯಾಗುತ್ತದೆಂದು ವರದಿ ಬಂದಿದೆಯೇ ? ಒಂದು ತಾಂತ್ರಿಕ ವರದಿಯನ್ನು ಅದರ ಫೀಜಿಬಿಲಿಟಿ ಬಗ್ಗೆ ಕೊಡಲು ಯಾವುದಾದರೂ ಒಂದು ಕಮಿಟಿಯನ್ನು ನೇಮಕ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ವರುಣ ನಾಲೆ ಮಾಡುವುದರಿಂದ ಅಡ್ಡಿ ಅತಂಕವಾಗುತ್ತದೆ, ನಮಗೆ ಸಾಕಷ್ಟು ನೀರು ಬರುವುದಿಲ್ಲ, ಬಹಳಮಟ್ಟಿಗೆ ಹಾನಿಯಾಗುತ್ತದೆಂದು ದೂರು ಬಂದಮೇಲೆ ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕಮಾಡಿ ತಾಂತ್ರಿಕ ವರದಿ ಬಂದಮೇಲೆ ವಿಚಾರಮಾಡೋಣವೆಂದು ತೀರ್ಮಾನಮಾಡಲಾಯಿತು. ಅದೇ ಪ್ರಕಾರ ಒಂದು ಕಮಿಟಿಯನ್ನು ಸರ್ಕಾರದವರು ನೇಮಕ ಮಾಡಿದರು. ಅವರಿಂದ ಈಗಾಗಲೇ ವರದಿ ಬಂದಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವರುಣಾ ನಾಲೆಯಿಂದ ತೊಂದರೆಯಾಗಿರುವ ಪ್ರದೇಶ ಮದ್ದೂರಿನ ಕಡೆಯ ಭಾಗ ವಿಶ್ವೇಶ್ವರಯ್ಯ ಕೆನಾಲ್ ಕಡೆಗೆ ಮತ್ತು ಮಳವಳ್ಳಿ ಕಡೆಗೆ ಇರತಕ್ಕ ಪ್ರದೇಶಗಳಲ್ಲಿ ಕಮಿಟಿ ಪ್ರವಾಸಮಾಡಿ ಅಲ್ಲಿನ ಜನರ ಅಭಿಪ್ರಾಯವನ್ನು ಸಂಗ್ರಹಿಸಿದ್ದಾರೆ. ಅಂದ ಮೇಲೆ ಅವರ ಅಭಿಪ್ರಾಯವೇನು? ಅಲ್ಲಿನ ಜನಗಳ ತೊಂದರೆ ಬಗ್ಗೆ ಕಮಿಟಿಯವರು ಏನು ವರದಿಮಾಡಿದ್ದಾರೆ?

ಶ್ರೀ ವೀರೇಂದ್ರ ಪಾಟೀಲ್.—ಈ ವರಣಾ ನಾಲೆಯಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದಹಾಗೆ ವಿಶ್ವೇಶ್ವರಯ್ಯ ಕೆನಾಲ್ ಟೆಯಿಲ್ ಎಂಡ್‌ನಲ್ಲಿ ಇರುವ ಪ್ರದೇಶಗಳಿಗೆ ಸಾಕಷ್ಟು ನೀರು ಬಾರದೇ ಇರುವುದಕ್ಕೆ ಅನೇಕ ಕಾರಣಗಳಿವೆ. ಮಾನ್ಯ ಸದಸ್ಯರು ನಮ್ಮಲ್ಲಿ ಸಾಕಷ್ಟು ನೀರು ಬರುವುದಿಲ್ಲವೆಂದು ಹೇಳಿದರೆ, ಅದಕ್ಕೆ ಪ್ರತ್ಯೇಕವಾದ ಕಾರಣಗಳಿವೆ.

ಅಧ್ಯಕ್ಷರು.—ಪ್ರಶ್ನೆ ನಂ. 63 ಮಾನ್ಯ ಸದಸ್ಯರು ಗೈರು ಹಾಜರು ಈಗ ಪ್ರಶ್ನೆ ನಂ. 75.

Forest Lands in Mysore District

75. SRI M. BASAVARAJU (K. R. Nagar).—

Will the Minister of State for Forests be pleased to state :—

(*a*) the number of acres that are under Forest in Mysore District from the last 20 years (Talukwise figures may be furnished);

(*b*) whether there has been depletion of Forest areas, and if so, whether it has not been the main reason for the irregular and insufficient rainfall in the district;

(*c*) the measures taken by Government to prevent disforestation in the District;

(*d*) the measures that the Government propose to take to increase the acreage of forests and forest wealth of the State?

SRI ALUR HANUMANTHAPPA (Minister of State for Forests).—

(*a*)

	Name of Taluk	*Forest area in acres.*
1	Mysore	2,998-38
2	T. Narsipur	454-40
3	Heggadadevanakote	1,77,686-31
4	Hunsur	18,689-83
5	Periyapatua	35,746-82
6	K. R. Nagar	809-00
7	Kollegal	4,65,239-27
8	Chamarajanagar	62,796-80
9	Yelandur	21,760-C0
10	Nanjangud	9,132-80
11	Gundlupet	1,34,521-60
	Total	9,29,835-24

(*b*) Only a small area has been released and it would not perceptibly affect the rainfall in the district.

(*c*) This does not arise in view of reply to clause (*b*).

(*d*) Certain areas have been ordered to be released from the Revenue department to the Forest Department for afforestation purposes. Plantations such as Teak, Fast growing species and Forest Consolidation Schemes are taken up to increase the forest wealth.

ಶ್ರೀ ಎಂ. ಬಸವರಾಜು.—ಕಳೆದ 20 ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ಅರಣ್ಯವನ್ನು ಬೆಳೆಸಲಾಗಿರುವ ಪ್ರದೇಶದ ವಿಸ್ತೀರ್ಣ 9,29,835 ಎಕರೆ ಎಂದು ಹೇಳಿದ್ದೀರಿ, ನಮಗೆ ಸ್ವಾತಂತ್ರ್ಯ ಬಂದಮೇಲೆ ಲಕ್ಷಾಂತರ ಎಕರೆ ಕಾಡನ್ನು ಕಡಿದು ನಾಶ ಮಾಡಿದ್ದಾರೆ. ಆದ್ದರಿಂದ ಮಳೆ ಸರಿಯಾಗಿ ಆಗುತ್ತಿಲ್ಲ ಎಂದು ತಜ್ಞರು ಅಭಿಪ್ರಾಯಪಡುತ್ತಿದ್ದಾರೆ. ಆದಕಾರಣ 1947ನೇ ಇಸವಿಯಿಂದ ಈಚೆಗೆ ಎಷ್ಟು ಎಕರೆ ಪ್ರದೇಶದಲ್ಲಿ ಕಾಡನ್ನು ಬೆಳೆಸಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

†ಶ್ರೀ ಅಲೂರು ಹನುಮಂತಪ್ಪ.-ಈಗಾಗಲೇ ನಾನು ಹೇಳಿದ್ದೇನೆ, 9,29,835 ಎಕರೆಗಳಲ್ಲಿ ಕಾಡನ್ನು ಬೆಳೆಸಿದೆ ಎಂದು. ಕಾಡನ್ನು ಕಡಿದ ಪ್ರದೇಶದಲ್ಲಿ ಹೊಸದಾಗಿ ಕಾಡನ್ನು ಬೆಳೆಸಿದೆ. ಅದರ ಜೊತೆಗೆ ರೆವಿನ್ಯೂ ಇಲಾಖೆಯಿಂದ 50 ಸಾವಿರ ಎಕರೆ ಜಮೀನನ್ನು ತೆಗೆದುಕೊಂಡು ಅದರಲ್ಲಿ ಅಫಾರೆಸ್ಟೇಷನ್ ಮಾಡುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 1,34,521 ಎಕರೆ ಪ್ರದೇಶದಲ್ಲಿ ಅರಣ್ಯ ಬೆಳೆಸಿದೆ ಎಂದು ಹೇಳಿದ್ದೀರಿ, ಇದೇನು ಈ ವರ್ಷ ತಯಾರು ಮಾಡಿದ ಅಂಕಿ ಅಂಶಗಳೋ ಅಥವಾ ಬೇರೆ ಅಂಕಿ ಅಂಶಗಳೋ ಹೇಗೆ ?

ಶ್ರೀ ಅಲೂರು ಹನುಮಂತಪ್ಪ.—ಈಗ ಕೊಟ್ಟಿರತಕ್ಕ ವರದಿ ಸರಿಯಾದ ವರದಿ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಅರಣ್ಯ ಸಂಪತ್ತನ್ನು ಹೆಚ್ಚಿಸುವುದಕ್ಕಾಗಿ ತೇಗದಂತಹ ಬೆಳೆಯನ್ನು ಮತ್ತು ಜಾಗ್ರತೆ ಬೆಳೆಯುವ ಜಾತಿಯ ಗಿಡಗಳನ್ನು ಬೆಳೆಯುವುದನ್ನು ಮತ್ತು ಅರಣ್ಯವನ್ನು ಒಟ್ಟುಗೂಡಿಸುವ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಹಾಗೆ ಉದಾಹರಣೆಗೆ ಹೇಳುವುದಾದರೆ ಸಾವಿರಾರು ಎಕರೆ ಪ್ರದೇಶಗಳಲ್ಲಿ ಗಿಡಗಳನ್ನು ಹಾಕಿದ್ದಾರೆ. ಅದಕ್ಕೆ ಲಕ್ಷಾಂತರ ರೂಪಾಯಿಗಳು ಖರ್ಚಾಗಿವೆ. ಮತ್ತು ಆ ಗಿಡಗಳೂ ಹೊರಟುಹೋಗಿವೆ. ಕಾಡನ್ನು ಕಡಿದು ಹಾಕಿರುವುದರಿಂದ ಮಳೆಯೂ ಕಡಿಮೆಯಾಗಿದೆ. ಆದ್ದರಿಂದ ಅರಣ್ಯ ಇಲಾಖೆಗೆ ಸೇರಿದ ಖಾಲಿ ಇರುವ ಹಾಗೂ ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಬಡವರಿಗೆ ಮಂಜೂರು ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಅಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಶಿವಮೊಗ್ಗ ಜಿಲ್ಲೆಯ ವಿವರಗಳನ್ನು ಕೊಡುತ್ತಿದ್ದಾರೆ. ಎಲ್ಲಿ ಅವಶ್ಯಕವಾಗಿ ವ್ಯವಸಾಯಕ್ಕೆ ಜಮೀನು ಬೇಕಾಗುತ್ತದೆಯೋ ಅಂಥಾ ಕಡೆ ಬಡವರಿಗೆ ಮತ್ತು ವ್ಯವಸಾಯಗಾರರಿಗೆ ಜಮೀನನ್ನು ಕೊಡಲಾಗುತ್ತಿದೆ.

ಶ್ರೀ ಬಿ. ಎಂ. ಇದಿನಬ್ಬ.—ಸರ್ಕಾರದವರು ಕಾಡನ್ನು ಬೆಳೆಸುವುದಕ್ಕೆ ಆಸಕ್ತಿಯನ್ನು ವಹಿಸಿದ ಹಾಗೆ ಕಾಡನ್ನು ನಾಶ ಮಾಡತಕ್ಕಂಥ ಕಾಳಸಂತೆಕೋರರನ್ನು ಶಿಕ್ಷಿಸುವುದಕ್ಕೆ ಸರ್ಕಾರದವರು ಒಂದು ವಿಶೇಷವಾದ ಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಅಲೂರು ಹನುಮಂತಪ್ಪ.—ಎಲ್ಲೆಲ್ಲಿ ಕೆಲವು ದುಷ್ಟ ಶಕ್ತಿಗಳು ಕಾಡನ್ನು ನಾಶ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೋ ಅಂಥಾ ಕಡೆ ಸ್ಕ್ವಾಡುಗಳಿಂದ ಆ ದುಷ್ಟ ಶಕ್ತಿಗಳನ್ನು ಹಿಡಿದು ಶಿಕ್ಷೆ ಮಾಡತಕ್ಕ ಅವಕಾಶ ಇದೆ. ಆದ್ದರಿಂದ ಆ ಬಗ್ಗೆ ಎಲ್ಲಿಂದ ನೇರವಾಗಿ ಸರ್ಕಾರಕ್ಕೆ ವರದಿ ಬರುತ್ತದೆಯೋ ಅಂಥಾದ್ದನ್ನು ಇನ್‌ವೆಸ್ಟಿಗೇಷನ್ ಮಾಡಿ ತಕ್ಕ ಬಂದೋಬಸ್ತು ಮಾಡುತ್ತೇವೆ.

Famine Relief Works in Mandya District

80. Sri M. K. BOMME GOWDA (K. R. Pet).—

Will the Minister for Revenue be pleased to state :—

(*a*) the total amount spent for famine relief works in Mandya District and K. R. Pet Taluk in particular during the recent drought situation in the State ;

(*b*) the total Amount allotted to each taluk in Mandya District for these works ?

Sri H. V. KOUJALGI (Minister for Revenue).—

(*a*) An amount of Rs. 17,03,476-77 has been spent in Mandya District up to 30th November 1968, out of which an amount of Rs. 2,35,451-25 has been spent in K. R. Pet Taluk.

(*b*).—

	Name of Taluk	Amount allotted as on 30-11-1968
1.	B.D.O.' Mandya	2,15,000-00
2.	B.D.O.' Maddur	3,06,000-00
3.	B.D.O.' Malavalli	2,10,000-00
4.	B.D.O.' K. R. Pet	2,50,000-00
5.	B.D.O.' Nagamangala	5,25,000-00
6.	B.D.O.' Pandavapura	1,44,000-00
7.	B.D.O.' Srirangapatna	1,30,000-00
8.	E.E., Mandya Dn.	1,00,000-00
9.	R.F.Os' Mandya and Nagamangala ...	20,000-00
	Total ...	19,00,000-00

ಶ್ರೀ ಎಂ. ಕೆ. ಬೊಮ್ಮೇಗೌಡ.—ಮಂಡ್ಯ ಜಿಲ್ಲೆಗೆ ಫ್ಯಾಮಿನ್ ರಿಲೀಫ್ ಕಾಮಗಾರಿಗಳಿಗಾಗಿ 19 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಇದರಲ್ಲಿ ಮಂಡ್ಯಜಿಲ್ಲೆಯಲ್ಲಿ ಬಹಳವಾಗಿ ಫಾಮಿನ್ ಏರತಕ್ಕ ಕೃಷ್ಣರಾಜಪೇಟೆಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ಮತ್ತು ನಾಗಮಂಗಲ ತಾಲ್ಲೂಕಿಗೆ 5,25, 000 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಬಾಕಿ ಕಡೆ ಇನ್ನೂ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಕಾರಣವೇನು ?

† ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಹೇಳುವ ಹಾಗೆ ಆಗಿಲ್ಲ. ಅಲ್ಲಿಯ ಪರಿಸ್ಥಿತಿಯನ್ನು ನೋಡಿಕೊಂಡು ಸ್ಥಾನಿಕ ಸದಸ್ಯರುಗಳು ಎಷ್ಟೆಷ್ಟು ಖರ್ಚು ಮಾಡಬೇಕೆಂದು ಕೇಳಿದ್ದಾರೆಯೋ ಆ ಪ್ರಕಾರ ಕೆಲಸಗಳನ್ನು ಕೈಗೊಂಡಿದೆ. ನಾಗಮಂಗಲ ತೀರ ಫ್ಯಾಮಿನ್ ಏರಿಯಾ ಆಗಿದ್ದುದರಿಂದ ಅಲ್ಲಿಗೆ ಹೆಚ್ಚು ಖರ್ಚು ಮಾಡಲಾಗಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಎಕ್ಸ್‌ಪರ್ಟ್ ಕಮಿಟಿಯವರು ವಿಶ್ವೇಶ್ವರಯ್ಯ ನಾಲಾ ಏರಿಯಾದಲ್ಲಿ ವಿಷಯವನ್ನು ಸಂಗ್ರಹಿಸಲು ಹೋದಾಗ ಅಲ್ಲಿನ ಸಾರ್ವಜನಿಕರು ಮತ್ತು ಮುಖಂಡರು ವಿರೋಧವನ್ನು ವ್ಯಕ್ತಪಡಿಸಿರುವುದನ್ನು ಸರ್ಕಾರದವರು ಮನಗಂಡಿದ್ದಾರೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ.

ಶ್ರೀ ಎಂ. ಮಂಚೇಗೌಡ.—ಈ ಸಮಿತಿಗೆ ಮೇಜರ್ ಇರಿಗೇಶನ್ ಚೀಫ್ ಇಂಜಿನಿಯರ್ ಚೇರ್‌ಮೇನ್ ಎಂದು ಹೇಳುತ್ತಾರೆ, ಅದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ, ಅವರು ಕನ್ವೀನರ್ ಆಫ್ ದಿ ಕಮಿಟಿ.

ಶ್ರೀ ಎಂ. ಬಸವರಾಜು.—ಮೈಸೂರು ತಾಲ್ಲೂಕಿನ ಜನರ ಹಿತದೃಷ್ಟಿಯಿಂದ ಈ ನಾಲೆಯನ್ನು ನಿರ್ಮಿಸುವುದರಿಂದ ತೊಂದರೆಗೊಳಗಾಗತಕ್ಕ ಜನರಿಗೆ ತೊಂದರೆಯಾಗದ ಹಾಗೆ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು—ಯಾವ ನದಿಗೂ ಎರಡು ದಂಡೆಗಳಿರುತ್ತವೆ. ವಿಶ್ವೇಶ್ವರಯ್ಯ ನಾಲೆ ಎಡದಂಡೆಯಲ್ಲಿದೆ. ಬಲದಂಡೆಯಲ್ಲಿ ಹೆಚ್ಚಿಗೆ ನೀರಾವರಿಗೆ ಅನುಕೂಲವಿಲ್ಲ. ಎಕ್ಸ್‌ಪರ್ಟ್ ಕಮಿಟಿ ರಿಪೋರ್ಟು ಬಂದಾಗ ವರುಣಾ ನಾಲೆಗೆ 75 ಪರ್ಸೆಂಟ್ ಡಿಪೆಂಡೆಬಿಲಿಟಿ ನೀರು ಇದೆ ಎಂದು ಹೇಳಿದ್ದಾರೆ, ನಾವು ಲೆಕ್ಕ ಹಾಕಿರುವಂತೆ, ಕಬಿನಿ ಪ್ರೊಜೆಕ್ಟ್ ಕಟ್ಟಿದ ಮೇಲೆ, ಕೆ.ಆರ್.ಎಸ್. ನಿಂದ ಕಬಿನಿಗೆ ರಿಲೀಸ್ ಮಾಡಿ ಬಲದಂಡೆಗೆ ಅನುಕೂಲ ಮಾಡಬೇಕೆಂದು ಇದನ್ನು ಪ್ರಾರಂಭ ಮಾಡಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ವರುಣಾ ನಾಲೆ ತೆಗೆದರೆ, ವಿಶ್ವೇಶ್ವರಯ್ಯ ನಾಲೆಯ ಕೆಳಗಿರ ತಕ್ಕಂತಹವರ ಪ್ರಿಸ್ಕ್ರಿಪ್ಟಿವ್ ರೈಟ್ಸಿಗೆ ಧಕ್ಕೆ ಬರುವುದಿಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಬರುವುದಿಲ್ಲವೆಂದು ಖಂಡಿತವಾಗಿ ಹೇಳಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಶ್ವೇಶ್ವರಯ್ಯ ನಾಲೆಯಲ್ಲಿ ಜನರಿಗೆ ಕೆಲವು ಕಡೆ ನೀರು ಬಾರದಿರುವುದಕ್ಕೆ ಬೇರೆ ಕಾರಣಗಳಿವೆ ಎಂದು ಹೇಳಿದ್ದೀರಿ. ಆ ಬೇರೆ ಕಾರಣಗಳು ಏನು ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಬೇರೆ ಕಾರಣಗಳೆಂದರೆ, ಅನ್‌ಆತೋರೈಸ್ಡ್ ಕಲ್ಟಿವೇಶನ್ ಸಾಕಷ್ಟು ಪ್ರಮಾಣದಲ್ಲಿ ಆಗುತ್ತಾ ಇದೆ. ನೀರನ್ನು ಮೇಲ್ಗಡೆ ಸರಿಯಾಗಿ ಉಪಯೋಗ ಮಾಡದೆ, ವೇಸ್ಟೇಜ್ ಹೆಚ್ಚಾಗುತ್ತದೆ, ಮತ್ತು ಇವಾಪರೇಶನಿಂದ ಲಾಸ್ ಆಗುತ್ತದೆ. ಕೆಪೇಸಿಟಿ ಇದರಿಂದ ಕಡಿಮೆಯಾಗಿದೆ. ಇವನ್ನೆಲ್ಲಾ ರೆಸ್ಟೋರ್ ಮಾಡಿದರೆ ಕಷ್ಟವಾಗುವುದಿಲ್ಲ.

ಶ್ರೀ ಎಂ. ಪುಂಚೇಗೌಡ.—ಯಾವ ಚೀಫ್ ಇಂಜಿನಿಯರ್ ವರುಣಾ ನಾಲೆ ತೋಡುವುದರಿಂದ ತೊಂದರೆಯಾಗುವುದಿಲ್ಲವೆಂದು ಹೇಳಿದ್ದಾರೋ, ಅದೇ ಚೀಫ್ ಇಂಜಿನಿಯರನ್ನು ಸೇರಿಸಿ ಸಮಿತಿ ಮಾಡಿ ರಿಪೋರ್ಟು ಪಡೆಯುವುದರಿಂದ ನಿಷ್ಪಕ್ಷಪಾತವಾದ ಅಭಿಪ್ರಾಯ ಸಿಗುವುದಿಲ್ಲವೆಂದು ಊಹಿಸಬಹುದೇ?

ಶ್ರೀ ವೀರೇಂದ್ರ ಪಾಟೀಲ್.—ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಇದರಲ್ಲಿ ಚೀಫ್ ಇಂಜಿನಿಯರ್ ಒಬ್ಬರೇ ಅಲ್ಲ. ಇದರಲ್ಲಿ ಚೀಫ್ ಇಂಜಿನಿಯರ್ ಇನ್‌ವೆಸ್ಟಿಗೇಶನ್, ಚೀಫ್ ಇಂಜಿನಿಯರ್ ಇರಿಗೇಶನ್ ಚೀಫ್ ಇಂಜಿನಿಯರ್ ಜನರಲ್ ರಿಟೈರ್ಡ್ ಚೀಫ್ ಇಂಜಿನಿಯರ್ ಆರ್. ಎಲ್. ರಾಜು ಮತ್ತು ಜಾಯಿಂಟ್ ಸೆಕ್ರೆಟರಿ ಇದ್ದಾರೆ. ಇದರಲ್ಲಿ ಯಾರಿಗೂ ಸಂಬಂಧವಿಲ್ಲ. ಅವರೆಲ್ಲಾ ಯುನ್ಯಾನಿಮಸ್ ರಿಪೋರ್ಟು ಕೊಟ್ಟಿದ್ದಾರೆ. ತಾಂತ್ರಿಕ ರಿಪೋರ್ಟು ಮೇಲೆ ಕಾಮೆಂಟ್ಸ್ ಮಾಡುವುದು ಕಷ್ಟ.

ಶ್ರೀ ಎಸ್. ಶಿವಪ್ಪ.—ಈಗ ಕೆ.ಆರ್. ಸಾಗರದಲ್ಲಿ 5 ವರ್ಷದಲ್ಲಿ ಮೂರು ವರ್ಷವಾದರೂ ಕೂಡ ಕೆರೆಯಲ್ಲಿ ನೀರಿಲ್ಲದೆ ತೊಂದರೆಯಾಗಿದೆ. ಈಗ ಮೂರನೇ ಚಾನಲ್ ತೆಗೆದು, ಕ್ರಾಪ್ ಪ್ಯಾಟರ್ನ್ ಮಾಡಿ, ಈಗಿರತಕ್ಕ ಕಬ್ಬು, ಬತ್ತದ ಬೆಳೆಗೆ ಸರ್ಕಾರದವರು ಹಾನಿಮಾಡಬೇಕೆಂಬ ಉದ್ದೇಶವೇ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ. ಅದಕ್ಕೆ ಪ್ರಯಾರಿಟಿ ಕೊಟ್ಟು ಧಕ್ಕೆ ಬರದಂತೆ ನೀರು ಕೊಡಬೇಕೆಂದು ಮಾಡಿಕೊಂಡಿದ್ದಾರೆ. 75 ಪರ್ಸೆಂಟ್ ಡಿಪೆಂಡೇಬಿಲಿಟಿ ಮೇಲೆ ವರುಣಾ ನಾಲೆಗೆ ಬೇಕಾದಷ್ಟು ನೀರು ಇದೆ. ಇದು ತಾಂತ್ರಿಕ ವರದಿಯಲ್ಲಿ ಸ್ಪಷ್ಟವಾಗಿದೆ.

1–30 P.M.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೃಷ್ಣರಾಜಪೇಟೆಗೆ ಕಡಿಮೆ ಹಣವನ್ನು ಖರ್ಚು ಮಾಡಿರಬೇಕಾದರೆ ಅಲ್ಲಿ ನಾನ್-ಕಾಂಗ್ರೆಸ್ ಎಂ.ಎಲ್.ಎ. ಇದ್ದಾರೆ ಎಂಬ ಭಾವನೆಯಿಂದಲೇ?

ಶ್ರೀ ಎಚ್. ವಿ. ಕೌಜಲಗಿ.—ಹಾಗೇನಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಒಟ್ಟು 19 ಲಕ್ಷ ರೂಪಾಯಿಗಳಲ್ಲಿ ಇತ್ತೀಚೆಗೆ ನಡೆದ ತಾಲ್ಲೂಕ್ ಬೋರ್ಡ್ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ಸಿನ ಸಲುವಾಗಿ ಎಷ್ಟು ಹಣ ಖರ್ಚಾಯಿತು?

ಶ್ರೀ ಎಚ್. ವಿ. ಕೌಜಲಗಿ.—ವಿವರಗಳನ್ನು ಇಲ್ಲಿ ಈಗ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಸದಸ್ಯರು ತಾಲ್ಲೂಕ್ ಬೋರ್ಡ್ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್‌ಗಾಗಿ ಎಷ್ಟು ಹಣ ಖರ್ಚಾಯಿತು ಎಂದು ಅನ್‌ಚಾರಿಟಬಲ್ ಆಗಿ ಒಂದು ಪ್ರಶ್ನೆಯನ್ನು ಕೇಳಿದರು. ಈ ಹಣವನ್ನು ತಾಲ್ಲೂಕ್ ಬೋರ್ಡ್ ಚುನಾವಣೆಯ ಸಲುವಾಗಿ ಖರ್ಚು ಮಾಡಲಿಲ್ಲ. ಎಲ್ಲೆಲ್ಲಿ ಬರಗಾಲ ಇದೆಯೋ ಅದನ್ನು ನೋಡಿಕೊಂಡು ಹಣ ಖರ್ಚು ಮಾಡಲು ತಾಲ್ಲೂಕ್ ಮಟ್ಟದಲ್ಲಿ ಒಂದೊಂದು ಕಮಿಟಿಯನ್ನು ಮಾಡಿ, ಆ ಕಮಿಟಿಯವರ ತೀರ್ಮಾನದ ಪ್ರಕಾರ ಹಣವನ್ನು ಬರಗಾಲದ ಪ್ರಯುಕ್ತ ಖರ್ಚು ಮಾಡಲಾಗಿದೆಯೇ ಹೊರತು ತಾಲ್ಲೂಕ್ ಬೋರ್ಡ್ ಚುನಾವಣೆಯ ಸಲುವಾಗಿ ಖರ್ಚು ಮಾಡಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಸಂಬಂಧಪಟ್ಟ ಮಂತ್ರಿಗಳು ಈಗಾಗಲೇ ಉತ್ತರ ಕೊಟ್ಟಿದ್ದರೂ ಸಹ ಮಾನ್ಯ ಮುಖ್ಯ ಮಂತ್ರಿಗಳು ಮತ್ತೆ ಉತ್ತರ ಕೊಡಬಹುದೆ?

ಅಧ್ಯಕ್ಷರು.—ಮುಖ್ಯ ಮಂತ್ರಿಗಳಿಗೆ ಮತ್ತೆ ಉತ್ತರ ಕೊಡಲು ಅಧಿಕಾರವಿದೆ.

ಶ್ರೀ ಎಚ್. ವಿ. ಕೌಜಲಗಿ.—ನನಗೆ ಪ್ರಶ್ನೆಯ ಮೊದಲನೆಯ ಭಾಗ ಕೇಳಿಸಿತು ಕೊನೇ ಭಾಗ ಮಾತ್ರ ಕೇಳಿಸಲಿಲ್ಲ. ಅದಕ್ಕಾಗಿ ವಿಷಾದಿಸುತ್ತೇನೆ.

Bridge across Krishna River

140. Sri SADASHIVAPPA PATIL (Deodurg).—

Will the Minister for Public Works be pleased to state :—

(*a*) whether Government have accorded sanction for the construction of a bridge across the Krishna river between Deodurg and Shahpur ;

(*b*) if so, when the construction work will be taken up ?

Sri K. LAKKAPPA (Minister for Public Works).—

(*a*) Yes.

(*b*) As early as possible.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಸೇತುವೆಯನ್ನು ನಿರ್ಮಿಸುವ ಬಗ್ಗೆ ಸರ್ಕಾರದ ಮಂಜೂರಾತಿ ಯಾವಾಗ ಆಯಿತು ಎಂಬುದನ್ನು ಹೇಳುತ್ತೀರಾ ?

† ಶ್ರೀ ಕೆ. ಲಕ್ಕಪ್ಪ.—30-5-1968ರಲ್ಲಿ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಯಿತು. ಜೂನ್ 1968ರಲ್ಲಿ ಟೆಕ್ನಿಕಲ್ ಸ್ಯಾಂಕ್ಷನ್ ಆಯಿತು. ಈಗ ಟೆಂಡರ್ ಕರೆಯಲಾಗಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—(ಅ)ಗೆ ಉತ್ತರವಾಗಿ ಸಾಧ್ಯವಾದಷ್ಟು ಬೇಗನೆ ಎಂದು ಹೇಳಿದ್ದೀರಿ, 1968ನೇ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಈ ಸೇತುವೆ ಕಟ್ಟುವ ಬಗ್ಗೆ ಅಡಿಗಲ್ಲನ್ನು ಹಾಕಿದರು. 1967-68 ಮತ್ತು 1968-69ನೇ ಸಾಲುಗಳಲ್ಲಿ ಈ ಬಗ್ಗೆ ಇಟ್ಟಿದ್ದ 10 ಲಕ್ಷ ರೂಪಾಯಿಗಳನ್ನು ಇನ್ನೂ ಖರ್ಚು ಮಾಡಿಲ್ಲ. ಇದಕ್ಕೆ ಸರ್ಕಾರವೇ ಕಾರಣವೋ ಅಥವಾ ಸ್ಥಳೀಯ ಪ್ರತಿನಿಧಿಗಳು ಕಾರಣರೋ ?

ಶ್ರೀ ಕೆ. ಲಕ್ಕಪ್ಪ.—ಟೆಂಡರ್ ಕರೆಯುವುದರಲ್ಲಿ ಸ್ವಲ್ಪ ವಿಳಂಬವಾಯಿತು. ಈಗ ಟೆಂಡರ್ ಕರೆದು ಅಪ್ರೂವ್ ಮಾಡುವ ಸ್ಟೇಜಿನಲ್ಲಿದೆ. ಅಪ್ರೂವ್ ಆದ ತಕ್ಷಣ ಈ ಸಾಲಿನ 5 ಲಕ್ಷ ರೂಪಾಯಿಗಳನ್ನು ಸಹ ಒಳವಡಿಸಿಕೊಂಡು ತ್ವರಿತವಾಗಿ ಖರ್ಚು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ಈ ಕೆಲಸದ ಎಸ್ಟಿಮೇಟ್ ಕಾಸ್ಟ್ ಎಷ್ಟು ಮತ್ತು ಎಷ್ಟು ವರ್ಷಗಳಲ್ಲಿ ಈ ಕೆಲಸ ಮುಗಿಸಬೇಕೆಂದಿದ್ದೀರಿ ?

ಶ್ರೀ ಕೆ. ಲಕ್ಕಪ್ಪ.—ಒಟ್ಟು ಎಸ್ಟಿಮೇಟ್ ಕಾಸ್ಟ್ ಸೆಂಟ್ರಲ್ ರೋಡ್ ಫಂಡ್ ಪ್ರಕಾರ 27 ಲಕ್ಷ ರೂಪಾಯಿಗಳೆಂದು ಅಂದಾಜಾಗಿತ್ತು. ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಮಾಡುವ ಕಾಲಕ್ಕೆ 27 ಲಕ್ಷ

ರೂಪಾಯಿಗಳಿಂದ 29.86 ಲಕ್ಷ ರೂಪಾಯಿಗಳಿಗೇರಿತು. ಈ ಹೆಚ್ಚಿನ ಎರಡು ಲಕ್ಷ ರೂಪಾಯಿಗಳನ್ನು ಸ್ಟೇಟ್ ಫಂಡ್‌ನಿಂದ ತೆಗೆದುಕೊಂಡು ಕೆಲಸ ಮಾಡಿಸಬೇಕೆಂದು ಅಂದಾಜಿದೆ.

Sri C. K. RAJAIAH SHETTY.—The Hon'ble Chief Minister was pleased to state that it is better to defer big buildings and bridges in the interest of irrigation projects. In view of that, is it not necessary to defer this project?

Sri VEERENDRA PATIL (Chief Minister).—These are the works sanctioned by the Government of India under the Central Road Fund Allocation. Whatever we are spending on the construction of thes bridges we are going to get from the Government of India.

Prohibition in the State

166 Smt. WINNIFRED F. FERNANDES (Coondapur).—

Will the Minister for Finance, Planning and Youth Welfare be pleased to state.—

(*a*) whether there is any rethinking in the matter of reintroducing prohibition in the State, which has recently been scrapped after due and careful consideration in view of the resolution adopted at the A. I. C. C. Session at Goa;

(*b*) if so, whether any decision has been taken in this behalf?

Sri RAMAKRISHNA HEGDE (Minister for Finance, Planning and Youth Welfare).—

(*a*) and (*b*) The matter will be examined at the appropriate time.

ಶ್ರೀ ಬಿ. ಭಾಸ್ಕರಶೆಟ್ಟಿ.—ಗೋವಾದಲ್ಲಿ ನಡೆದ ಎ ಐ ಸಿ ಸಿ ನಿರ್ಣಯದಂತೆ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಇದ್ದಾರೆಂದು ತಿಳಿಯುತ್ತದೆ. ಇದರಂತೆ ನಮ್ಮ ರಾಜ್ಯದಲ್ಲಿ ಇದನ್ನು ಯಾವಾಗ ಜಾರಿಗೆ ತರುತ್ತೀರಿ ?

† ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರ ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಇಷ್ಟು ವರ್ಷಗಳೊಳಗಾಗಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ನಿರ್ಣಯ ಮಾಡಲಾಗಿದೆ ಎಂದರೆ ಈ ನಿರ್ಣಯದಂತೆ ನಮ್ಮ ರಾಜ್ಯದಲ್ಲಿ ಯಾವಾಗ ಜಾರಿಗೆ ತರುತ್ತೀರಿ?

ಶ್ರೀ ರಾಮಕೃಷ್ಣ ಹೆಗಡೆ.—ಈ ನಿರ್ಣಯದ ಪ್ರಕಾರ ಸುಮಾರು ಏಳು ವರ್ಷಗಳಲ್ಲಿ ಎಂದರೆ 1968 ನೇ ಅಕ್ಟೋಬರು ತಿಂಗಳಿಂದ ಏಳು ವರ್ಷಗಳೊಳಗೆ ಜಾರಿಗೆ ತರಬೇಕೆಂದು ಶಿಫಾರಸನ್ನು ಕಳುಹಿಸಿದ್ದಾರೆ. ಹೀಗೆ ಏಳು ವರ್ಷಗಳಷ್ಟು ಕಾಲಾವಕಾಶ ಇರುವುದರಿಂದ ಇದರ ಬಗ್ಗೆ ಸರಿಯಾಗಿ ವಿಚಾರ ಮಾಡಿ ನಿರ್ಣಯ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಹೆಚ್. ಸಿದ್ದವೀರಪ್ಪ.—ಎ. ಐ. ಸಿ. ಸಿ. ನಿರ್ಣಯ ಈ ಸಭೆಯನ್ನು ಪ್ರತಿಬಂಧಿಸುತ್ತದೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಈ ಸಭೆಯನ್ನು ಎ. ಐ. ಸಿ. ಸಿ ನಿರ್ಣಯವು ಪ್ರತಿಬಂಧಿಸಲು ಸಾಧ್ಯವಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಮಾನ್ಯ ಹಣಕಾಸಿನ ಮಂತ್ರಿಗಳು ಈ ಗಾಂಧಿ ಶತಾಬ್ದಿ ನಡೆಸುತ್ತಿರುವ ಈ ಕಾಲದಲ್ಲಿ ಪಾನ ನಿರೋಧವನ್ನು ಪೂರ್ಣವಾಗಿ ಜಾರಿಗೆ ಕೊಡಬೇಕು. ಇದನ್ನು ಮತ್ತೆ ಪರಿಶೀಲನೆ ಮಾಡುತ್ತಾರೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಷಯದಲ್ಲಿ ನಾವು ಒಂದು ರಾಷ್ಟ್ರೀಯ ಕಾರ್ಯಕ್ರಮ ಹಾಕಿಕೊಳ್ಳುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಎಲ್ಲೆಲ್ಲಿ ಕಾಂಗ್ರೆಸ್ಸಿನ ಅಧಿಕಾರವಿದೆಯೋ ಅಲ್ಲೆಲ್ಲಾ ಇದನ್ನು ಜಾರಿಗೆ ತರುವುದು ಕಷ್ಟವೇನಿಲ್ಲ. ಆದರೆ ಮುಂದಿನ ಚುನಾವಣೆಗಳ ಅನಂತರ ರಾಜಕೀಯದಲ್ಲಿ ಎಲ್ಲೆಲ್ಲಿ ಬದಲಾವಣೆಯಾಗುತ್ತದೆ ಎನ್ನುವುದನ್ನು ಈಗಿನಿಂದಲೇ ಹೇಳುವಂತಿಲ್ಲ. ಇದಕ್ಕಾಗಿ ನಾನು ಒಂದು ಸೂಚನೆಯನ್ನು ಈಚೆಗೆ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಭೆಯಲ್ಲಿ ಸೂಚನೆ ಮಾಡಿದೆ. ದೇಶದಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳವರ ಒಂದು ಸಭೆಯನ್ನು ಕರೆದು ಈ ವಿಚಾರವನ್ನು ಚರ್ಚೆ ಮಾಡಿ ಒಂದು ಒಮ್ಮತವಾದ ತೀರ್ಮಾನಕ್ಕೆ ಬರುವುದು ಒಳ್ಳೆಯದು ಎಂದು ಸೂಚನೆ ಮಾಡಿದ್ದೇನೆ. ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯವರು ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ನಮಗೆ ಗೊತ್ತಿಲ್ಲ. ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಎಲ್ಲ ದೇಶಗಳ ಪಂಚವಾರ್ಷಿಕ ಯೋಜನೆಗಳನ್ನೂ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಲು ಅವರ ಅಪ್ರೂವಲ್ ಆಗಬೇಕು. ಇದಾದ ಮೇಲೆ ಯಾವುದು ಇರಬೇಕು ಎನ್ನುವುದರ ಬಗ್ಗೆ ನಿರ್ಧಾರ ಮಾಡಲಾಗುತ್ತದೆ. ಈ ವಿಷಯದ ಬಗ್ಗೆ ಚರ್ಚೆ ಮಾಡಲು ಇನ್ನೂ ಸ್ವಲ್ಪ ಕಾಲಾವಕಾಶ ಇದೆ.

Sri M. S. KRISHNAN.—Supplementary to (*a*) and (*b*): Is seven years an appropriate time?

Sri RAMAKRISHNA HEGDE.—Appropriate time is appropriate time; it cannot be anything else. I submitted to the House that I have made a suggestion to the Government of India in a recent meeting of the Central Prohibition Advisory Committee and that committee has also accepted the suggestion. May be, such a non-party conference might be held some time and it is only after that we can come to a decision.

ಶ್ರೀ ಎಸ್. ಎಂ. ಗುರೆಡ್ಡಿ.—ಇದು ಒಂದು ರಾಷ್ಟ್ರೀಯ ಪ್ರಶ್ನೆಯಾದುದರಿಂದ ಇದನ್ನು ರಾಷ್ಟ್ರ ಮಂಡಳಿಯು ವಿಚಾರ ಮಾಡುವಂಥಾದ್ದು ಸೂಕ್ತವಾದುದು ಸರಿಯೆ? ಆದರೆ ಈ ರಾಜ್ಯದಲ್ಲಿ ವಿವಿಧ ಪಕ್ಷಗಳ ಮೀಟಿಂಗ್‌ನ್ನು ಕರೆದು ಅವರ ಅಭಿಪ್ರಾಯವನ್ನೂ ತೆಗೆದುಕೊಂಡು ಈ ಗಾಂಧಿ ಶತಾಬ್ದಿ ಉತ್ಸವದಲ್ಲಿ ಏನಾದರೂ ಒಂದು ಅಭಿಪ್ರಾಯಕ್ಕೆ ಬರುವುದು ಸೂಕ್ತವಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—ರಾಜ್ಯ ಮಟ್ಟದಲ್ಲಿ ಮೀಟಿಂಗ್‌ನ್ನು ಕರೆಯಬೇಕು ಎಂಬುದಕ್ಕೆ ನನ್ನ ಆಕ್ಷೇಪ ಇಲ್ಲ. ಆದರೆ ಬೇರೆ ಬೇರೆ ರಾಜಕೀಯ ಪಕ್ಷಗಳ ಧುರೀಣರುಗಳು ರಾಷ್ಟ್ರ ಮಟ್ಟದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳುವವರೆಗೂ ರಾಜ್ಯಮಟ್ಟದಲ್ಲಿ ಯಾವುದೇ ರಾಜಕೀಯ ಪಕ್ಷ ಕೊನೆಯ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಆದುದರಿಂದ ಮೊದಲು ರಾಷ್ಟ್ರ ಮಟ್ಟದಲ್ಲಿ ಮೀಟಿಂಗ್ ಆಗಬೇಕು, ಆಮೇಲೆ ರಾಜ್ಯಮಟ್ಟದಲ್ಲಿ ಮೀಟಿಂಗ್ ಆಗಬೇಕು.

Sri H. M. CHANNABASAPPA.—At the time when prohibition was scrapped, what were the main reasons that impelled the Government to take that decision? Has that situation changed?

Sri RAMAKRISHNA HEGDE.—Actually that situation has not changed. But the A. I. C. C. has passed a resolution and that has to be given due consideration.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪಾನನಿರೋಧ ಮೈಸೂರು ರಾಜ್ಯದಲ್ಲಿದ್ದಾಗ ಮಾನ್ಯ ಹಣಕಾಸಿನ ಸಚಿವರು ಬಹಳ ವಿರೋಧವನ್ನು ಸೂಚಿಸಿ ಅದನ್ನು ತೆಗೆದುಬಿಡಿ ಎಂದು ಹೇಳಿದವರು ಮತ್ತೆ ಇದನ್ನು ಜಾರಿಗೆ ತಂದಂಥ ಸಂದರ್ಭದಲ್ಲಿ ಅವರು ರಾಜೀನಾಮೆ ಕೊಡುತ್ತಾರೆಯೋ ಏನು ಎನ್ನುವುದನ್ನು ತಿಳಿಸಬೇಕು.

(ನಗು) (ಉತ್ತರವಿಲ್ಲ).

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಗೋವಾ ಅಧಿವೇಶನದಲ್ಲಿ 7 ವರ್ಷದಲ್ಲಿ ದೇಶದಲ್ಲಿ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಅದರಲ್ಲಿ ತೀರ್ಮಾನ ಮಾಡಿದ್ದಾರೆ. ನಮ್ಮ ಸರ್ಕಾರದವರು ಸದರಿ ವಿಷಯವನ್ನು ಸೂಕ್ತ ಸಮಯದಲ್ಲಿ ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಸೂಕ್ತ ಸಮಯ ಎಂದರೆ 7 ವರ್ಷ ಎನ್ನತಕ್ಕಂಥಾದ್ದು ಮೈಸೂರು ರಾಜ್ಯ ಸರ್ಕಾರದವರು ಒಪ್ಪಿದ್ದಾರೆಯೇ? ಸಮಯ ಎಷ್ಟಾದರೂ ತೆಗೆದುಕೊಳ್ಳಿ ಇದಕ್ಕೆ ರಾಜ್ಯಸರ್ಕಾರದವರು ಒಪ್ಪಿದ್ದಾರೆಯೇ?

ಶ್ರೀ ರಾಮಕೃಷ್ಣ ಹೆಗಡೆ.—ಗೋವಾ ಅಧಿವೇಶನದಲ್ಲಿ ಆದಂಥ ನಿರ್ಣಯ ಒಂದು ಪಕ್ಷದ ನಿರ್ಣಯ. ಆ ಪಕ್ಷದ ನಿರ್ಣಯವನ್ನು ಈ ಸಮಯದಲ್ಲಿ ಸಮರ್ಥಿಸುವುದಕ್ಕೆ ಸಾಧ್ಯವಿಲ್ಲ. ಗೌರ್ನಮೆಂಟ್ ಆಫ್ ಇಂಡಿಯಾದವರು ಯಾವ ನಿರ್ಣಯವನ್ನೂ ಕೊಟ್ಟಿಲ್ಲ. ಇದನ್ನು ಸೂಕ್ತ ಸಮಯದಲ್ಲಿ ಪರಿಶೀಲಿಸಲಾಗುವುದು ಎನ್ನತಕ್ಕದ್ದರ ಅರ್ಥ ಏನೆಂದರೆ ಎಲ್ಲಾ ಸಾಧಕಬಾಧಕಗಳನ್ನು ನೋಡಿ ರಾಷ್ಟ್ರ ಮಟ್ಟದಲ್ಲಿ ಒಂದು ಪಾಲಿಸಿಯನ್ನು ತೆಗೆದುಕೊಳ್ಳುವಂಥಾದ್ದು ಇದ್ದರೆ ಅದಕ್ಕೆ ಅನುಸರಿಸಿಕೊಂಡು ನಾವು ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆ.

Sri M. RAMAPPA.—What is the reaction of the Central Government to the scrapping of prohibition by the State Governments ? Has the State Government received any circular from the Central Government in this behalf ?

Sri RAMAKRISHNA HEGDE.—No. The Central Government's attitude is very clear. The Central Government has agreed to give 50 per sent subsidy to compensate the loss likely to result on account of the introduction of prohibition in wet States. There is no directive or circular to the effect that the State Government must introduce prohibition.

Central Government Employees Strike

184. Sri M. S. KRISHNAN (Malleswaram).—

Will the Chief Minister be pleased to state :—

(*a*) the number of Central Government employees arrested in Mysore State in connection with the September 19th Token Strike ;

(*b*) the number of them arrested prior to the strike and those after the strike ;

(*c*) the number of persons against whom cases have been filed and under what provision of law ;

(*d*) whether any circulars/instructions/advice has been received by the State Government from the Central Government to review the cases and withdraw them ;

(*e*) the action the Government has taken to withdraw the cases against the Central Government Employees ?

Sri VEERENDRA PATIL (Chief Minister).—

(*a*) 138 employees.

(*b*) Nine persons were arrested bofore the strike and the remaining 129 persons were arrested during and after the strike.

(*c*) 410 persons under section 4 of the Essential Services Maintenance Ordinance.

15 persons under section 5 of the Essential Services Maintenance Ordinance.

1 person under sections 5 and 7 of the Ordinance.

(SRI VEERENDRA PATIL)

1 person under sections 4 and 5 of the Essential Services Maintenance Ordinance.

32 persons under section 3, Clause (4) (a) read with section 4 of the Ordinance.

(*d*) It would not be in public interest to disclose this information.

(*e*) No such action has been taken.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, (ಈ) ಭಾಗಕ್ಕೆ ಉತ್ತರವಾಗಿ ಸಾರ್ವಜನಿಕ ಹಿತ ದೃಷ್ಟಿಯಿಂದ ಹೇಳುವುದಕ್ಕಾಗುವುದಿಲ್ಲ ಎಂದು ತಿಳಿಸಿದ್ದಾರೆ. ಈಗಾಗಲೇ ಈ ತರಹ ಸಲಹೆ ಕೊಟ್ಟಿದ್ದಾರೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಕೇಸುಗಳನ್ನು ವಾಪಸು ತೆಗೆದುಕೊಳ್ಳುವ ವಿಚಾರದಲ್ಲಿ ಲೀನಿಯೆಂಟ್ ಆಗಿ ಇರಬೇಕು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹೀಗಿದ್ದಾಗ ಸಾರ್ವಜನಿಕ ಹಿತದೃಷ್ಟಿಯಿಂದ ಹೇಳುವುದಕ್ಕಾಗುವುದಿಲ್ಲ ಎಂದರೆ ಅರ್ಥವೇನು, ಸ್ವಾಮಿ?

Mr. SPEAKER.—I disallow that question. When the Government claims that it cannot be disclosed in public interest, that is the last word and no further supplementaries can be put.

Sri M. NAGAPPA.—I rise to a point of order.

Mr. SPEAKER.—Not now. The Hon'ble Member may raise it after the question hour.

Sri AZEEZ SAIT.—We are the Government and there can be no hide and seek from us. This is the peoples' government.

Sri M. S. KRISHNAN.—He must satisfy me how it is in public interest that the information cannot be disclosed. He cannot simply say that it is in public interest not to disclose the information. I cannot be shut out that way from getting the answer.

Mr. SPEAKER.—Government has a right to claim that in public interest the information cannot be given. Then the Speaker has no power to compel Government to answer. I disallow the supplementary. The Hon'ble member can put another supplementary.

Sri M. S. KRISHNAN.—Are you aware that there is a decision of the Cabinet Sub-Committee recently published in the Press that prosecutions launched against striking employees have to be withdrawn and their absence has to be condoned and they must be taken back to work? Are you prepared to withdraw the cases launched against 410 and odd Central Government employees?

† Sri VEERENDRA PATIL.—I am not aware of any such decision by the Central Government Cabinet Sub-Committee.

Sri M. S. KRISHNAN.—You are expected to be aware of it. Even if you are not aware of it, are you prepared to withdraw these cases against the Central Government employees in Mysore State in view of the fact that the strike itself was not widespread and did not result in violence here and also in view of the fact that the general policy of the Government is to treat them very leniently?

Sri VEERENDRA PATIL.—So far as my Government is concerned, I can say that we are not thinking of withdrawing these cases. We are of the opinion that the law should take its own course.

private parties, the private parties being Manvi Brothers, Sri K. H. Patil and the persons who have now gone on hunger strike and also one Mr. Reddy.

2-00 P.M.

Sir, it is reported that this is a dispute between private parties. Some years back, on a private land, some houses were constructed by those who have now gone on hunger strike. There was a passage by the side of Sri Manvi's residence. But the Cotton Processing Co-operative Society blocked this passage some years back. So a dispute arose in the month of July 1968. Mr. Wali, the In-charge Administrator passed an order permitting Sri Manvi to construct a compound wall on the lands. Later Mr. Joshi, Administrator, issued a stay order. It was pending at this stage for some time. Later on, after verifying the fact, the In-charge Administrator (the Municipal Commissioner) vacated the stay order. By then, the Manvis had completed the construction of the compound wall. The passage was 14 feet wide and was being used by the hunger strikers till November. Now, one Mr. Bhooma Reddi has filed a suit in the Munsiff Magistrate's Court, Gadag and obtained a stay order from the court. The passage belongs to Mr. Reddi. Therefore, the hunger strikers requested the Municipality to make that 14 feet wide passage open to their movement. At present the matter is *sub-judice*. As per Rule 52 of the Rules of Procedure and Conduct of Business in the Mysore Legislative Assembly, the right to move an adjournment motion is subject to the following restrictions among others, namely :—

1. It should be a definite matter of urgent public importance ;
2. It should be a specific matter of recent occurrence ;
3. The motion shall not deal with any matter which is under adjudication by a court of law having jurisdiction in any part of India.

From the above it will be seen that none of the factors necessary for moving this adjournment motion exists.

SRI K. H. PATIL.—Since the Hon'ble Minister has brought in my name, it may give an impression to the House that because Sri K. H. Patil is interested he might have brought this adjournment motion. I therefore challenge him to prove whether K. H. Patil has directly or indirectly anything to do with this road at all? The Hon'ble Minister might have learnt from the Public Works Minister who has personally visited the spot. I have no property at all within 5 miles from this place. What the Hon'ble Minister has stated is contrary to the facts and is far from truth. Not only that, but the Hon'ble Minister went to the length of saying that the matter is *sub judice*. The matter in dispute is quite different from the matter I have raised and perhaps the Hon'ble Minister has not understood it. Here, the

Municipal officers wanted to persuade Sri Bhooma Reddy to give that right of passage. In fact, he promised to give that for 15 to 20 days. Later on, these people wanted to use it permanently. That is why he went to the Municipality and got a stay order. I would request the Hon'ble Minister Sri B. M. Patil who has just entered the Ministry to understand the problem properly. If my hon'ble Friend has got the guts, I challenge him to prove that I am personally interested. If he cannot prove, let him withdraw the words that he has used which give an impression as if K. H. Patil has got a dispute. I have no dispute. My dispute is with the Council of Ministers for running the administration in a false and illegal manner and in a manner which does not befit democracy.

Sri K. H. SRINIVAS (Sagar).—I rise to a point of order, Sir. The hon'ble Member Sri K. H. Patil has used the expression 'guts' with reference to the Hon'ble Minister. I do not think it befits the decorum of the House. I think such an expression should not be allowed.

Mr. SPEAKER.—'Guts' means courage and I do not think there is anything wrong about it. The hon'ble Member has, however, used the word 'false which is objectionable, because it attributes motive.

Sri K. H. PATIL.—The report which he read is absolutely far from truth.

Mr. SPEAKER.—I have very carefully heard the hon'ble Member Sri K. H. Patil on his adjournment motion and I also heard the Hon'ble Minister Sri B. M. Patil as regards the points involved. The point is whether a hunger strike can be a fit matter to form the basis of an adjournment motion. According to Sri K. H. Patil hunger strike is resorted to in support of civil rights. The other point is whether any dispute regarding rights between private individuals can also be a basis for an adjournment motion. On both these points I am sorry I cannot agree with the opinion expressed by the hon'ble Member Sri K. H. Patil. In this connection, my predecessor, the late Sri Baliga, has given a ruling on 24th March 1964 on this point. It is as follows :—

> "Hunger strike is not a ground for giving notice of any adjournment motion or any other motion. Simply because a person is on hunger strike it does not mean that it becomes important so far as the business of the House is concerned.'

The hon'ble Member will realise that if the hunger strike is made a basis for an adjournment motion, it would not be possible for the Hon'ble House to transact any business at all. Hunger strikes have become so frequent nowadays that probably this House won't have any time to discuss normal business at all.

As regards the civil rights involved in this matter, the jurisdiction to decide civil rights is that of the courts of law and this Hon'ble House has no means to go into legal rights, record evidence and decide such matters. The matter falls within the jurisdiction of civil courts

(MR. SPEAKER)

and the judiciary and not of the legislature. We may carry on any amount of discussion here but Sri K. H. Patil will realise that still we are not going to decide whether a person who is putting a wall across a road is entitled to do it or not. That cannot be decided in this House.

Thus I hold that this is not a subject which can constitute the basis for an adjournment motion. I therefore withhold my consent under Rule 50 of the Rules of Procedure and Conduct of Business in the Assembly. If the hon'ble member Sri K. H. Patil has got anything to say, he can raise the matter in the course of the debate on the Governor's Address.

Notice of privilege Motion *re*: News item in a Newspaper.

SRI M. NAGAPPA.—I have sent notice of a privilege motion regarding a news item published in the Deccan Herald dated 16th January 1969 in colum 1 of page 7.

MR. SPEAKER.—I have gone through the notice. The point raised by the hon'ble member is correct. The concerned reporter has tendered apology to me. In view of that, the matter may be dropped.

SRI M. NAGAPPA.—Yes.

Seating Arangement for members in the House.

SRI D. B. KALMANKAR.—Under Rule 312 I have given notice of a motion to be raised here.

SRI M. NAGAPPA.—I have also given notice of a motion under rule 312 regarding some of the members crossing the floor and sitting on that side and how those seats have been allotted to them. That is a matter for consideration by the House.

MR. SPEAKER.—I shall look into that matter. I shall invite the hon'ble member to my chamber and discuss it with him also.

SRI M. NAGAPPA.—I wanted to raise it on the floor of the House because it would not come as a point of order.

MR. SPEAKER.—I shall go through the records and hear the member tomorrow.

MOTION OF THANKS TO THE GOVERNORS' ADDRESS.

(Debate continued)

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಮಂಡಿಸಿರುವ ವಂದನಾ ನಿರ್ಣಯವನ್ನು ವಿರೋಧ ಮಾಡಿ ಕೆಲವಾರು ಮಾತುಗಳನ್ನು ಹೇಳುವುದಕ್ಕೆ

ನಿಂತಿದ್ದೇನೆ. ರಾಜ್ಯಪಾಲರ ಭಾಷಣವಾದರೂ ಕೂಡ ಒಂದು ವರದಿ ಇದ್ದಂತೆ ಇದೆ. ಇವರು ಕೇವಲ ಫಿಗರ್ ಹೆಡ್ ಇದ್ದ ಹಾಗೆ ಇದ್ದಾರೆ ಎನ್ನುವುದು ಅವರ ಭಾಷಣವನ್ನು ಓದಿದಮೇಲೆ ತಕ್ಷಣ ಅರ್ಥವಾಗುತ್ತದೆ. ಮಾನ್ಯ ರಾಜ್ಯಪಾಲರು ಪ್ರಾಮುಖ್ಯವಾದ ಅಂಶಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಸಾಮಾನ್ಯವಾದ ಸಂಗತಿಗಳನ್ನು ಮಾತ್ರ ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಇದು ಒಂದು ಸಾಮಾನ್ಯವಾದ ವರದಿ ಇದ್ದ ಹಾಗೆ ಇದೆ. ಕಾವೇರಿ ಮತ್ತು ಕೃಷ್ಣಾ ನದಿ ನೀರಿನ ಬಗ್ಗೆ ಕೆಲವಾರು ಗಹನವಾದ ಸಂಗತಿಗಳನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸುತ್ತಾರೆಂದು ನಾನು ನಿರೀಕ್ಷೆಯಲ್ಲಿದ್ದೆ. ಈ ಬಗ್ಗೆ ಸರ್ಕಾರದ ನೀತಿ ಏನೆಂಬುದನ್ನು ರಾಜ್ಯಪಾಲರು ತಿಳಿಸಿಲ್ಲ.

ಅವರ ಭಾಷಣ ನೋಡಿದಮೇಲೆ ನಮಗೆ ತುಂಬಾ ನಿರಾಶೆಯಾಯಿತು. ಇವೊತ್ತು ನದಿ ನೀರಿನ ಬಗ್ಗೆ ಹೇಳುವುದಾದರೆ ಇದರ ವಿಚಾರ ಭಾರಿ ಪ್ರಕೋಪಕ್ಕೆ ತಿರುಗಿದೆ. ಮದ್ರಾಸು ರಾಜ್ಯವನ್ನು ನೋಡುವುದಾದರೆ, ಕಾವೇರಿ ಜಲಾಶಯದ ಭೂಮಿಯಲ್ಲಿ ಭವಾನಿ, ಅಮರಾವತಿ, ಪುಲ್ಲಂಬಾಡಿ, ಶಾಲಿಯೋತೋಪ್ಪು ಇತ್ಯಾದಿ ಕಡೆಗಳಲ್ಲಿ ಈಗಾಗಲೇ, ಇನ್ ಗ್ರಾಸ್ ವಯಲೇಷನ್ ಆಫ್ 1924 ಅಗ್ರಿಮೆಂಟ್ ಅಣೆಕಟ್ಟುಗಳನ್ನು ಕಟ್ಟಿ ಮುಗಿಸಿದ್ದಾರೆ. ಇವರಿಗೆ ತಾಂತ್ರಿಕ ಒಪ್ಪಿಗೆ ಕೊಡತಕ್ಕ ಕಾಲದಲ್ಲಿ ಕೇಂದ್ರ ಸರಕಾರದವರ ದೃಷ್ಟಿಯಲ್ಲಿ ಮೈಸೂರು ರಾಜ್ಯದಲ್ಲಿ ಒಂದು ಸರಕಾರ ಇದೆ ಎನ್ನುವ ದೃಷ್ಟಿಯೇ ಇಲ್ಲ. ತಾಂತ್ರಿಕ ಒಪ್ಪಿಗೆ ನೀಡಿ, ಟೆಕ್ನಿಕಲ್ ಕ್ಲಿಯರೆನ್ಸ್ ಹಾಗೂ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟನಂತರ ಇದರ ಬಗ್ಗೆ ಮೈಸೂರು ಸರಕಾರಕ್ಕೆ ಒಂದು ಆರ್ಡರು ಕಾಪಿಯನ್ನು ಫಾರ್ಮಲ್ ಆಗಿ ಕೊಡುವಂತೆ ಕಳುಹಿಸಿಕೊಡುತ್ತಿದ್ದಾರೆ. ಜೊತೆಗೆ ಇಂದು ಮದ್ರಾಸ್ ಸರಕಾರದವರು ಹೊಗೆನಕಲ್ ಇರಿಗೇಷನ್-ಕಮ್-ಪವರ್ ಪ್ರಾಜೆಕ್ಟನ್ನು ಆತುರಾತುರವಾಗಿ ಮಾಡಬೇಕೆಂದು ತರಾತುರಿಯಿಂದ ಇದ್ದಾರೆ ಎನ್ನುವುದು ನಮಗೆ ತಿಳಿದುಬಂದಿದೆ. ಈಗ ನಮ್ಮ ಮೈಸೂರಿನಲ್ಲಿ ನೋಡಿದರೆ ಕಪಿನಿ ಯೋಜನೆ ಪ್ರಾರಂಭ ಮಾಡಿ ಸುಮಾರು ಒಂಬತ್ತು ವರ್ಷಗಳಾದರೂ ಇದಕ್ಕೆ ಕೇಂದ್ರ ಸರಕಾರದವರು ತಾಂತ್ರಿಕ ಅನುಮತಿ ಕೊಟ್ಟಿಲ್ಲ. ಇದನ್ನು ನೋಡಿದರೆ ಕೇಂದ್ರ ಸರಕಾರದವರು ನಮ್ಮ ಮೈಸೂರು ಸರಕಾರದ ಬಗ್ಗೆ ಒಂದು ರೀತಿಯಾದ ಮಲತಾಯಿಯ ಧೋರಣೆ ಅನುಸರಿಸುತ್ತಿರುವುದು ಕಾಣಬರುತ್ತಿದೆ. ಕೇಂದ್ರದವರು ನಮ್ಮ ರಾಜ್ಯದ ಹಿತವನ್ನು ನಿರ್ಲಕ್ಷಿಸಿ ಮದ್ರಾಸಿನೊಡನೆ ಸೇರಿ ವೈರಿಗಳಂತೆ ಸಂಚು ನಡೆಸುತ್ತಿದ್ದಾರೆ. ಕೇಂದ್ರದವರನ್ನೂ ಮದ್ರಾಸಿನವರೊಡನೆ ಪಾರ್ಟಿ ಮಾಡಿ ಕೋರ್ಟಿಗೆ ಹೋಗುವ ಕಾಲವನ್ನು ರಾಜ್ಯ ಸರಕಾರ ಆಲೋಚಿಸಲಿ ಎಂದು ನಿರೀಕ್ಷಿಸುತ್ತೇನೆ. ರಾಜ್ಯ ಸರಕಾರದವರು ಕೇಂದ್ರಕ್ಕೆ ಒಂದು ಅಲ್ಟಿಮೇಟಂ ಕೊಡಬೇಕು. ಅದು ಏನೆಂದರೆ 1924 ರಲ್ಲಿ ಆದ ಅಗ್ರಿಮೆಂಟು ಪ್ರಕಾರ ಆಗಿರುವ ರೂಲ್ಸ್ ಆಫ್ ರೆಗ್ಯುಲೇಷನ್ ಏನಿದೆಯೋ ಅದನ್ನು ಇನ್ನು ಮೂರು ತಿಂಗಳೊಳಗಾಗಿ ಕೇಂದ್ರದವರು ಬದಲಾವಣೆ ಮಾಡಬೇಕು. ಮೂರು ತಿಂಗಳಲ್ಲಿ ಹಾಗೇನಾದರೂ ಬದಲಾವಣೆ ಮಾಡದೇ ಹೋದರೆ ಈ 1924 ರ ಅಗ್ರಿಮೆಂಟು ಅದರ ನೈಜವಾದ ಶಕ್ತಿಯನ್ನು ಕಳೆದುಕೊಳ್ಳುತ್ತದೆ ಮತ್ತು ಇನ್ನು ಮುಂದೆ ನಾವು ಇದಕ್ಕೆ ಬದ್ಧರಲ್ಲ. ಈ ಅಗ್ರಿಮೆಂಟು ಸತ್ತಿದೆ ಎಂದು ಭಾವಿಸುತ್ತೇವೆಂದು ತಿಳಿಸಬೇಕು.

ಎರಡನೆಯದಾಗಿ, ಅವರನ್ನು ಟೆಕ್ನಿಕಲ್ ಕ್ಲಿಯರೆನ್ಸ್‌ಗಾಗಿ ಕೇಳುವುದೂ ಅಪ್ರಕೃತ ಮತ್ತು ಅವರಿಂದ ಪರ್ಮಿಷನ್ ತೆಗೆದುಕೊಳ್ಳುವುದು ಅಪಕೃತ. ಇವೊತ್ತು ನಮ್ಮ ನೆರೆಯ ರಾಜ್ಯವಾದ ಮದ್ರಾಸು ರಾಜ್ಯದಲ್ಲಿ ಕೇಂದ್ರ ಸರಕಾರ ಸಹಾಯ ಮಾಡುವಂತೆ ನಮ್ಮ ಸರಕಾರದ ಬಗ್ಗೆ ಸಹಾಯ ಮಾಡಲು ಅವರಲ್ಲಿ ಒಂದು ನೈತಿಕ ಮಟ್ಟ ಇಲ್ಲದೇ ಇರುವುದರಿಂದ ಅವರಲ್ಲಿ ಯಾವ ವ್ಯವಹಾರ ಮಾಡುವುದೂ ಇನ್ನು ಮುಂದೆ ಸರಿಯಲ್ಲ. ಬೇರೆ ರಾಜ್ಯಗಳೊಡನೆ ಸೇರಿ ಉದ್ದೇಶಪೂರ್ವಕವಾಗಿ ನಮಗೆ ತೊಂದರೆ ಕೊಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮೈಸೂರು ರಾಜ್ಯದವರು ನೀರಾವರಿ ಯೋಜನೆಗಳ ಬಗ್ಗೆ ಕೇಂದ್ರದವರೊಂದಿಗೆ ವ್ಯವಹಾರ ಮಾಡುವುದನ್ನು ಬಿಡುವುದು ಒಳ್ಳೆಯದು ಎನ್ನುವ ಒಂದು ಸೂಚನೆಯನ್ನು ಕೊಡುತ್ತೇನೆ. ಆದುದರಿಂದ ಇಂದು ಇರುವ ಭಾರಿ ನೀರಾವರಿ ಯೋಜನೆಗಳನ್ನು ರಾಜ್ಯದ ಹಿತರಕ್ಷಣೆಯ ದೃಷ್ಟಿಯಿಂದ ರಾಜ್ಯ ಸರಕಾರದವರೇ ಪೂರ್ತಿಯಾಗಿ ಕೈಗೊಳ್ಳಬೇಕೆಂದು ನಾನು ಇಲ್ಲಿ ಸೂಚನೆ ಮಾಡಬಯಸುತ್ತೇನೆ, ಮತ್ತು ಕೇಂದ್ರದವರು ನಮ್ಮ ಹಿತರಕ್ಷಣೆ ಮಾಡುವಂತೆ ಕಾಣುವುದಿಲ್ಲ. ಕೃಷ್ಣಾ ನದಿ ನೀರನ್ನು ಅರ್‌ಬಿಟ್ರೇಷನ್‌ಗೇನೋ ಒಪ್ಪಿಸಲು ತೀರ್ಮಾನಿಸಿದ್ದಾಗಿದೆ. ಆದರೆ ಅರ್ಬಿಟ್ರೇಷನ್‌ನಲ್ಲಿ ನಮಗೆ ಜಯ ದೊರೆಯುತ್ತದೆ ಎನ್ನುವ ನಂಬಿಕೆ ನನಗಿಲ್ಲ. ಏತಕ್ಕೆಂದರೆ ನಾವು ನಮ್ಮ ಕೇಸನ್ನು ಸರಿಯಾಗಿ ಬಿಲ್ಡ್ ಮಾಡಿಲ್ಲ. ನನ್ನ ಅನುಭವದಲ್ಲಿ ಹೇಳುವುದಾದರೆ ಅಡ್ವೋಕೇಟು ಜನರಲ್‌ರವರು ನೀರಾವರಿ ಕಾನೂನು ವಿಷಯಗಳನ್ನು ಸರಿಯಾಗಿ ತಿಳಿದಿರುವಂತೆ ಕಾಣುವುದಿಲ್ಲ. ಅದೇ ರೀತಿ ಪರಿಸ್ಥಿತಿಯ ಒತ್ತಡದಿಂದಾಗಿ

(ಶ್ರೀ ಎಚ್. ಎನ್. ನಂಜೇಗೌಡ)

ಎಂಜನೀಯರುಗಳು ಮೀಡಿಯೋಕರ್ಸ್ ಆಗಿದ್ದಾರೆ. ಇವರುಗಳನ್ನು ನಂಬಿ ಕುಳಿತರೆ ಕೇಸ್ ಹಾಳಾಗುವುದು ಖಚಿತ. ಆದುದರಿಂದ ನಮ್ಮ ರಾಜ್ಯ ಸರ್ಕಾರದವರು ಅವರನ್ನು ನಂಬಿ ಸುಮ್ಮನೆ ಕೂತರೆ ಕೃಷ್ಣಾ ಆಗಲಿ, ಕಾವೇರಿ ಬೇಸನ್‌ನಲ್ಲಿ ಆಗಲಿ ನಮಗೆ ಬರಬೇಕಾದ ಭಾಗದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ನನ್ನ ಅಭಿಪ್ರಾಯ. ಅದಕ್ಕಾಗಿ to guide, lead and advise the Government ಈ ವಿಷಯದಲ್ಲಿ ಒಂದು ಸಲಹೆಯನ್ನು ಕೊಡುತ್ತೇನೆ. ಇದು 6-7 ವರ್ಷದ ಹಿಂದೆ ಮಾಡಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸುತ್ತದೆ. ಅದು ಏನೆಂದರೆ ನಾವು ಒಂದು State Board of Irrigation and Power Development ಅನ್ನು ಸ್ಥಾಪನೆ ಮಾಡಬೇಕು. ಕೇಂದ್ರ ಸರ್ಕಾರದಲ್ಲಿ ಸೆಂಟ್ರಲ್ ವಾಟರ್ ಇರ್ರಿಗೇಷನ್ ಬೋರ್ಡ್‌ನ ಮಾದರಿಯಂತೆ ಇಲ್ಲಿ ಒಂದು ಬೋರ್ಡನ್ನು ರಚಿಸಬೇಕು. ಈಗ ಮೇಜರ್ ಇರ್ರಿಗೇಷನ್‌ನ್ನು ಮುಖ್ಯಮಂತ್ರಿಗಳು ನೋಡಿಕೊಳ್ಳುತ್ತಿದ್ದಾರೆ. ಅವರಿಗೆ ತಲೆ ತುಂಬಾ ಕೆಲಸ. ಅವರು ಮಂತ್ರಿ ಮಂಡಲವನ್ನು ಬಿಗಿಮಾಡಿಕೊಳ್ಳಬೇಕು, ಅನೇಕ ಕಾನ್‌ಫರೆನ್ಸ್‌ಗಳಿಗೆ ಹೋಗಬೇಕು, ಬೇರೆ ಕಾತುರವಾದಂಥ ಕೆಲಸಗಳು ಇರುವುದರಿಂದ ಈ ಜಂಜಾಟ ಮಧ್ಯದಲ್ಲಿ ನದಿ ನೀರಿನ ಸಮಸ್ಯೆಯನ್ನು ಬಗೆಹರಿಸಿ ಎಂದು ಹೇಳಿದರೆ ಅದು ಸಾಧ್ಯವಿಲ್ಲ. ಬೇರೆ ಮಂತ್ರಿಗಳಿಗೆ ಅದಕ್ಕೆ ಸಂಬಂಧಪಟ್ಟ ಕಾನ್‌ಫರೆನ್ಸ್ ಮೀಟಿಂಗ್‌ನಲ್ಲಿ ಭಾಗವಹಿಸುವುದಕ್ಕೆ ಬೇಕಾದಂಥ ತಿಳುವಳಿಕೆ ಇಲ್ಲ. ನಮ್ಮ ಕೇಸುಗಳನ್ನು ಸ್ಪಾನ್ಸರ್ ಮಾಡುವುದಕ್ಕೂ ಸಾಧ್ಯವಿಲ್ಲ. ಆದ್ದರಿಂದ ಸ್ಟೇಟ್ ಬೋರ್ಡ್ ಆಫ್ ಇರ್ರಿಗೇಷನ್ ಅಂಡ್ ಪವರ್ ಡೆವಲಪ್‌ಮೆಂಟ್ ಎನ್ನುವುದನ್ನು ಮಾಡಿದರೆ ಅವರು ಸರ್ಕಾರದವರಿಗೆ ಸರಿಯಾದ ಅಂಕಿ ಅಂಶಗಳು ಏನು ಇದೆ ಅದನ್ನು ಕೊಟ್ಟು ಮೀಟಿಂಗ್‌ನಲ್ಲಿ ಬ್ರೀಫ್ ಮಾಡಲು ಸಾಧ್ಯವಾಗುತ್ತದೆ. ಇದು ಕ್ಲಿಷ್ಟವಾದ ಕೆಲಸ. ಸ್ಟೇಟ್ ಬೋರ್ಡ್ ಆಫ್ ಇರ್ರಿಗೇಷನ್ ಅಂಡ್ ಪವರ್ ಡೆವಲಪ್‌ಮೆಂಟ್ ಎನ್ನುವ ಬೋರ್ಡ್ ಮಾಡಿದ್ದೇ ಆದರೆ ಆ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟು ಆರ್ಬಿಟ್ರೇಷನ್‌ಗೆ ಹೋಗುವಾಗ ಬ್ರೀಫ್ ಮಾಡಿ ನಮ್ಮ ಕೇಸುಗಳನ್ನು ಸರಿಯಾಗಿ ಮಂಡಿಸುವಂತೆ ಮಾಡುತ್ತಾರೆ. ಅಡ್ವೊಕೇಟ್ ಜನರಲ್ ಅಂತಹವರನ್ನು ನಮ್ಮ ಕೇಸನ್ನು ಪ್ರತಿಪಾದಿಸಲು ಇಟ್ಟುಕೊಂಡರೆ ನಮ್ಮ ಕೃಷ್ಣಾನದಿ ನೀರು, ಕಾವೇರಿ ನದಿನೀರು ಇವುಗಳಲ್ಲಿ ನಮ್ಮ ಕೇಸು ಹಾಳಾಗಿ ನಮ್ಮ ಹಿತಕ್ಕೆ ಧಕ್ಕೆ ಬರುವುದು ಖಂಡಿತ.

ಇನ್ನು ಹೊಗೆನ್‌ಕಲ್ ಡ್ಯಾಮ್ ಕಟ್ಟುವುದಕ್ಕೆ ಮದ್ರಾಸ್ ಸರ್ಕಾರದವರು ಬಂದಿದ್ದಾರೆ. ನಮ್ಮ ಕೇಸನ್ನು ಸರಿಯಾಗಿ ಭದ್ರಪಡಿಸದೇ ಹೋದರೆ ಅದೂ ಹಾಳಾಗುತ್ತದೆ. ನಾವು ನಮ್ಮ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸೆಂಟ್ರಲ್ ಗೌರ್ನಮೆಂಟಿನಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಬೇಕು ಎಂದು ಕಾದು ಕುಳಿತರೆ ಅದು ಬರುವ ಹಾಗೆ ಇಲ್ಲ, ಅದು ನಿಷ್ಪ್ರಯೋಜಕ. ಆದುದರಿಂದ ನಾವೇ ಈ ಟೆಕ್ನಿಕಲ್ ಕ್ಲಿಯರೆನ್ಸ್‌ಗೆ ಕಾಯುವ ಪದ್ಧತಿಯನ್ನು ಬಿಟ್ಟು ಬಿಟ್ಟು ಕೆಲಸ ಕಾರ್ಯಗಳನ್ನು ತೀವ್ರವಾಗಿ ಕೈಗೊಳ್ಳಬೇಕೆಂದು ಹೇಳಲು ಇಷ್ಟಪಡುತ್ತೇನೆ.

ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಅದು ಅಸೆಟ್ಸ್ ಅಂಡ್ ಲಯಬಿಲಿಟೀಸ್ Statement ವಿಚಾರ. ಇದರ ಬಗ್ಗೆ ಹೊಸ ಮುಖ್ಯಮಂತ್ರಿಗಳು ಮಾಡುತ್ತಾ ಇರುವ ಕೆಲಸಗಳನ್ನು ನೋಡಿದರೆ Child's Play ಇದ್ದ ಹಾಗೆ ಇದೆ. ವಾಸ್ತವಿಕವಾಗಿ ಅವರು ಮಾಡುವ ಕೆಲಸ ಹೇಗಿದೆ ಎಂದರೆ ಅವರ ಭಾಷಣ ಅಚ್ಚು ಆಗಿ ಒಂದು ಹೆಸರು ಬಂದರೆ ಸಾಕು ಎಂದು ಊಹಿಸಿದ ಹಾಗೆ ಕಾಣುತ್ತದೆ. ಹಿಂದೆ ಇದ್ದ ಮುಖ್ಯಮಂತ್ರಿಗಳು ಅಸೆಟ್ಸ್ ಅಂಡ್ ಲಯಬಿಲಿಟೀಸ್ ವಿಚಾರವಾಗಿ ರಾಜಕೀಯ ಮುಖಂಡರುಗಳಿಗೆ ಒಂದು ಪತ್ರ ಬರೆದಿದ್ದಾರೆ. ಈ ಸಮಯದಲ್ಲಿ ನಾನು ಕೇಳಬೇಕಾಗಿದೆ. What is the legal sanction he has behind in addressing these letters to members? ಲಂಚ ನಿರ್ಮೂಲ ಶಾಖೆಯಲ್ಲಿ ಲಂಚ ತೆಗೆದುಕೊಳ್ಳುವ ಹಾಗೆ ಕಳ್ಳನೇ ಆಗಿರತಕ್ಕಂಥವನು ಕಳ್ಳ ಕಳ್ಳ ಎಂದು ಕೂಗಿಕೊಂಡು ಹೋಗಿರತಕ್ಕಂಥ ಪರಿಸ್ಥಿತಿ ಈವೊತ್ತು ನಾವು ಕಾಣುತ್ತಾ ಇದ್ದೇವೆ. ಅಂದಿನ ಮುಖ್ಯ ಮಂತ್ರಿಗಳ ಮೇಲೆ 24 ಛಾರ್ಜುಗಳನ್ನು ಕಾಂಗ್ರೆಸ್‌ನವರೇ ಆದಂಥ ಶಾಸನಸಭಾ ಸದಸ್ಯರುಗಳೇ ಕಳುಹಿಸಿದ್ದು ಅದು ಎನ್‌ಕ್ವೈರಿ ಆಯಿತೋ, ಏನು ಆಯಿತು ಎಂದು ಗೊತ್ತಿಲ್ಲ. ಅವರ ಮೇಲೆಯೇ ದೂರು ಇರುವಾಗ, ಅವರು ಈ ವಿಷಯದಲ್ಲಿ ಬೇರೆಯವರನ್ನು ಕೇಳುವುದೆಂದರೆ ಇದು ನಾಚಿಕೆಗೇಡುತನದ ವಿಷಯ ಎಂದು ಹೇಳುತ್ತೇನೆ.

Mr. SPEAKER.— Members may please avoid defamatory statements. Nothing is lost by expressing their views in a dignified manner.

ಶ್ರೀ ಹೆಚ್. ಎನ್. ನಂಜೇಗೌಡ.—ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇವರ ಮೇಲೆ ಅಂದು ಮಾಡಿದಂತಹ 24 ಅಪಾದನೆಗಳಲ್ಲಿ ಶರಾವತಿಯಲ್ಲಿ ತಾರಾಪುರ ಕಂಪನಿಗೆ ಕೊಟ್ಟಂತಹ ಕಂಟ್ರಾಕ್ಟ್ ವ್ಯವಹಾರದ ಬಗ್ಗೆಯೂ ಒಂದು ಅಪಾದನೆಯಿದೆ. ಬಹುಶಃ ಆ ತಾರಾಪುರ ಮಾಡಿರಬಹುದಾದ ಒಟ್ಟು ಕೆಲಸ ಕೇವಲ ನಾಲ್ಕು ಕೋಟಿ ರೂಪಾಯಿಗಳಷ್ಟು ಆಗಬಹುದು. ಇದರಲ್ಲಿ ಏನು ವ್ಯವಹಾರ ನಡೆದಿದೆ ಎನ್ನುವ ವಿವರಕ್ಕೆ ಈಗ ನಾನು ಹೋಗುವುದಿಲ್ಲ, ಒಟ್ಟಿನಲ್ಲಿ ಈ ವ್ಯವಹಾರ ಅರ್ಬಿಟ್ರೇಷನ್‌ಗೆ ಹೋಯಿತು. ಇನ್ನೂ ಅರಿಬಿಟ್ರೇಷನ್ ನಡೆಯುತ್ತಾ ಇದೆ. ಈ ಹಿಂದೆ 57 ಲಕ್ಷ ರೂಪಾಯಿಗಳನ್ನು ಕೊಟ್ಟದ್ದಾಗಿದೆ. ಈಗ ಸರ್ಕಾರದವರು ಇನ್ನೂ 30 ಲಕ್ಷ ಕೊಡುತ್ತೇವೆಂದರು. ಆ ಕಂಟ್ರಾಕ್ಟರು ರಾಜಿಗೆ ಒಪ್ಪಿಲ್ಲ. ನಾಲ್ಕು ಕೋಟಿ ವ್ಯವಹಾರದಲ್ಲೇ ಇಷ್ಟೊಂದು ಅವ್ಯವಹಾರದ ಮೇಲೆ ಅವ್ಯವಹಾರ ನಡೆದಿರಬೇಕಾದರೆ, ಹಾಗೂ ಈ ಬಗ್ಗೆ ನಿಮ್ಮ ಮೇಲೆ ಅಪಾದನೆಯಿರಬೇಕಾದರೆ ನೀವು ಮತ್ತೊಬ್ಬ ವಿಚಾರಣೆ ನಡೆಸುವುದಾಗಲಿ ಕೇಳುವುದಾಗಲಿ ಹೇಗೆ ಸಾಧ್ಯ ?

ಇನ್ನು ಮಂಗಳೂರು ಫರ್ಟಿಲೈಸರ್ ಫ್ಯಾಕ್ಟರಿಗೆ ನೀರು ಸಪ್ಲೈ ಮಾಡುವ ಕಂಟ್ರಾಕ್ಟ್ ವ್ಯವಹಾರ. ಮಂಗಳೂರಿನಲ್ಲಿ ಒಂದು ಫರ್ಟಿಲೈಸರ್ ಫ್ಯಾಕ್ಟರಿಗೆ ನೀರು ಸಪ್ಲೈ ಮಾಡುವ ಟೆಂಡರ್ ಕೊಡುವ ವಿಷಯದಲ್ಲಿ ಪಿ.ಡಬ್ಲ್ಯು.ಡಿ. ಕೋಡ್ ರೂಲ್ಸ್ ಮೀರಿ ಟೆಂಡರ್ ಕೊಟ್ಟರಿ. ಇದಕ್ಕೆ ಯಾವ ಆತುರ ಇತ್ತು ? ಕೂಸು ಹುಟ್ಟುವ ಮುನ್ನವೇ ಕುಲಾವಿ ಹೊಲಿಸಿದರು ಎನ್ನುವಂತೆ ಇಲ್ಲಿ ಪಿ.ಡಬ್ಲ್ಯು.ಡಿ. ಕೋಡ್ ರೂಲ್ಸಿಗೆ ವಿರೋಧವಾಗಿ ಇಪ್ಪತ್ತು ಲಕ್ಷ ರೂಪಾಯಿಗಳಷ್ಟು ಹಣವನ್ನು ಅಡ್ವಾನ್ಸ್ ಆಗಿ ಕೊಟ್ಟದ್ದಾರೆ. This is gross violation to the code of P.W.D. Rules. ಇದ ಬಗ್ಗೆ ನಾನು 1968ರಲ್ಲಿ ಪ್ರೊಸೀಡಿಂಗ್ಸ್‌ನಲ್ಲಿ ಸರಕಾರದವರು ಹೇಳಿರುವುದನ್ನೇ ಇಲ್ಲಿ ಓದಬಯಸುತ್ತೇನೆ. ಇದು ಭಾಷಣಕ್ಕೆ ಉತ್ತರವಾಗಿ ಪಿ.ಡಬ್ಲ್ಯು.ಡಿ. ಮಂತ್ರಿಗಳು ಹೇಳಿದುದು: ಅದು ಹೀಗಿದೆ.—

> " 1968 ಡಿಸೆಂಬರು ತಿಂಗಳ ಒಳಗಾಗಿ ವಾಟರು ಸಪ್ಲೈ ಕೊಡಬೇಕು ಇದು ಅಗತ್ಯ ಎಂದು ಒಂದು ಮಾತನ್ನು ಹೇಳಿವರು ....ಡಿಸೆಂಬರು 1968ರ ತಿಂಗಳ ಕೊನೆಯ ಒಳಗಾಗಿ ಈ ಕೆಲಸವಾಗುವುದಿಲ್ಲ ಎಂದು ಕೇಂದ್ರ ಸರಕಾರಕ್ಕೆ ಹೇಳಿದೆವು. ಆದರೆ ಅಷ್ಟರೊಳಗಾಗಿ ಈ ಕೆಲಸವಾಗದೆ ಇದ್ದರೆ ಮಂಗಳೂರು ಫರ್ಟಿಲೈಸರು ಫ್ಯಾಕ್ಟರಿ ಕಾರ್ಯರೂಪಕ್ಕೆ ಬರುವುದಿಲ್ಲ ಎಂದು ...."

ಬಹು ಮುಖ್ಯವಾದ ಅಂಶವೆಂದರೆ ಇದರಲ್ಲಿ ಇಲ್ಲಿ ಫ್ಯಾಕ್ಟರಿ ಆಗಬೇಕೋ ಇಲ್ಲವೋ. ಅದೇ ತೀರ್ಮಾನವಾಗಲಿಲ್ಲ. ಫ್ಯಾಕ್ಟರಿಗೆ ಲೈಸನ್ಸ್ ಕೊಡುವುದರ ಬಗ್ಗೆ ಯಾವ ತೀರ್ಮಾನವೂ ಆಗಲಿಲ್ಲ. ವಾಟರು ಸಪ್ಲೈಗಾಗಿ ಸುಮಾರು 182 ಲಕ್ಷ ಎಂದು ಒಂದು ಅಂದಾಜಾಗಿತ್ತು ಎಂದು ಹೇಳುತ್ತಾರೆ. ಇದರಲ್ಲಿ ಏನಾಗಿದೆ ಎಂದರೆ ಮದುವೆ ಮಾಡಬೇಕು ಎಂದೇನೋ ಇದ್ದಾರೆ. ಆದರೆ ಮದುವೆಗೆ ಗಂಡೇ ಪತ್ತೆ ಇಲ್ಲ. ಹೀಗಾದರೆ ಮದುವೆ ಹೇಗೆತಾನೇ ಆಗುತ್ತೆ ? ನಾನು ಕೇಳಿದ ಒಂದು ಪ್ರಶ್ನೆಗೆ ಲೈಸನ್ಸ್ ಕ್ಯಾನ್ಸಲ್ ಮಾಡುವ ವಿಷಯದಲ್ಲಿ ಕೇಂದ್ರದವರು ನೋಟೀಸ್ ಕೊಟ್ಟಿದ್ದಾರೆಯೇ ಎಂದರೆ "ಎಸ್" ಎಂದು ಉತ್ತರಿಸಿದಿರಿ. ಫ್ಯಾಕ್ಟರಿ ಮಂಗಳೂರಿನಲ್ಲಿ ಆಗಬೇಕೋ ಬೇಡವೋ ಎಂಬ ವಿಷಯ ತೀರ್ಮಾನವಾಗದಿರುವಾಗ ಆತುರವಾಗಿ ಟೆಂಡರ್ ಏಕೆ ಕೊಟ್ಟರಿ ? ನಾವು ಇಲ್ಲಿ ಬಹಳ ಗುರುತರವಾದ ಅಪಾದನೆಗಳನ್ನು ಮಾಡಿದ್ದರೂ ಇದನ್ನು ಬರೀ ಮಕ್ಕಳಾಟದಂತೆ ಅವರ ಭಾಷಣದಲ್ಲಿ ಹೇಳುತ್ತಿದ್ದಾರೆ. ನಾನು ಹಿಂದೆ ಇಲ್ಲಿ ಪಬ್ಲಿಕ್ ಎನ್‌ಕ್ವೈರೀಸ್ ಬಿಲ್ ಎಂದು ಒಂದು ಬಿಲ್ಲನ್ನು ತಂದು ಅದನ್ನು ಒಪ್ಪಬೇಕೆಂದು ಹೇಳಿದಾಗ ಅದು ಸಾಧ್ಯವಿಲ್ಲ ಎಂದು ನನಗೇ ಒಂದು ಎಂಡಾರ್ಸ್‌ಮೆಂಟು ಕೊಟ್ಟರು. ಇಂತಹ ಒಂದು ಕಾನೂನಿನ ಬಲ ಹಾಗೂ ಧೈರ್ಯವಿಲ್ಲದೆ ಇದ್ದರೆ ನಾವು ಹೇಗೆ ತಾನೇ ಅಪಾದನೆಗಳನ್ನು ಮಾಡಲು ಸಾಧ್ಯ ಕಾನೂನಿನ ಬಲವನ್ನು ನಮಗೆ ಕೊಟ್ಟರೆ ನಿಮಗೆ ಎಲ್ಲೆಲ್ಲಿ ನಷ್ಟವಾಗಿದೆ ಏನೇನು ದುರುಪಯೋಗಗಳಾಗಿವೆ ಎಲ್ಲೆಲ್ಲಿ ದುರ್ವ್ಯವಹಾರಗಳಾಗಿವೆ ಎನ್ನುವುದನ್ನು ತಾವು ತೋರಿಸುವುದಕ್ಕೆ ಬದ್ಧರಾಗಿರುತ್ತೇವೆ. ಸುಮ್ಮನೆ ಮಕ್ಕಳ ಆಟದಂತೆ ಇಲ್ಲಿ ಹೇಳುತ್ತಾ ಹೋದರೆ ಇದರಿಂದೇನು ಅನುಕೂಲವಾಗುತ್ತದೆ ? ಇದಕ್ಕಾಗಿಯೇ ನಾನು ಪಬ್ಲಿಕ್ ಎನ್‌ಕ್ವೈರಿ ಬಿಲ್‌ನ್ನು ಇಲ್ಲಿ ತಂದು ಅದನ್ನು ಪಾಸು ಮಾಡಬೇಕೆಂದು ಹೇಳಿ ಒತ್ತಾಯ ಮಾಡಿದರೂ ಅದನ್ನು ಮಾಡಲಿಲ್ಲ. ಮಾನ್ಯ ಪಾಟೀಲ ಪುಟ್ಟಪ್ಪನವರ ಒಂದು ಕಟ್ಟಡವನ್ನು ಹಾಗೂ ಅವರ ಪ್ರೆಸ್ಸು ಇತ್ಯಾದಿಗಳನ್ನು ಕೊಂಡುಕೊಳ್ಳುವುದಕ್ಕೆ ಸರಕಾರ ಪ್ರಯತ್ನ ಮಾಡಿದಾಗ ಮೊದಲು ಇದು ಐವತ್ತು ಸಾವಿರ ರೂಪಾಯಿಗಳಷ್ಟು ಬೆಲೆ ಬರುವುದಿಲ್ಲ ಎಂದು ತಿಳಿದಿತ್ತು. ಇದರ ಪ್ರೆಸ್ಸು ಹಾಗೂ ಕಟ್ಟಡ ಇತ್ಯಾದಿಗಳೆಲ್ಲಾ ಸಿಂಡಿಕೇಟು ಬ್ಯಾಂಕಿಗೆ ಮಾರ್ಟ್‌ಗೇಜು ಆಗಿ ಅವರೇ ಸೀಲು ಮಾಡಿ ಲಾಕ್ ಮಾಡಿಕೊಂಡಿದ್ದಾರೆ ಮತ್ತು ಇದು ಹರಾಜಾಗುವ ಸನ್ನಿವೇಶದಲ್ಲಿ ಇದೆ. ಇದೇ ಪ್ರಕಾರ ಬ್ಯಾಂಕಿನವರು ತಕ್ಕ ಕಾರ್ಯಕ್ರಮಗಳನ್ನೂ ಕೈಗೊಳ್ಳುತ್ತಿದ್ದಾರೆ. ಆದರೆ ಈಗ ಇದರಲ್ಲಿ ಟ್ರಾನ್ಸ್‌ಪೋರ್ಟ್

(ಶ್ರೀ ಹೆಚ್. ಎನ್. ನಂಜೇಗೌಡ)

ಮಂತ್ರಿಗಳಾದ ಶ್ರೀಮಾನ್ ಮಹಮ್ಮದ್ ಅಲಿಯವರು ಕೈಹಾಕಿ ಇದರಲ್ಲಿರುವ ಪ್ರೆಸ್ಸು ಇತ್ಯಾದಿಗಳನ್ನು ಖರೀದಿ ಮಾಡಬೇಕೆಂದು ರೋಡು ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಮೂಲಕ ಪ್ರಯತ್ನ ನಡೆಸುತ್ತಿದ್ದಾರೆ. ಇದು ಸುಮಾರು 50 ಸಾವಿರಕ್ಕೆ ಮೇಲೆ ಬೆಲೆ ಬಾರದೇ ಇದ್ದರೂ ಇದರ ಬಗ್ಗೆ ಪುನಃ ಪರಿಶೀಲನೆ ಮಾಡಿ ಕೊಂಡುಕೊಳ್ಳಬೇಕೆಂದು ಇದ್ದಾರೆ. ತಜ್ಞರು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದರೂ ಕೂಡ ಶ್ರೀ ಮಹಮದ್ ಅಲಿಯವರು ಏಕೆ ಸ್ಪೆಷಲ್ ಆರ್ಡರ್ ಮಾಡಿದರು ಎಂಬುದನ್ನು ತಿಳಿಸಬೇಕು. ಮೂರು ಲಕ್ಷ ಚಿಲ್ಲರೆ ಯಾರ ಅಪ್ಪನ ದುಡ್ಡು? ಅದು ರಾಜ್ಯದ ಬೊಕ್ಕಸಕ್ಕೆ ಸೇರಿದ್ದು. ಹೀಗೆ ಖರ್ಚುಮಾಡುವುದನ್ನು ಯಾರೂ ಹೇಳುವವರು, ಕೇಳುವವರು ಇಲ್ಲವೇ? ರಾಜ್ಯದ ಬಡ ಜನರು ತೊಂದರೆಯಲ್ಲಿರುವಾಗ ಅವರಿಂದ ತೆರಿಗೆ ಮುಂತಾದ ರೂಪದಲ್ಲಿ ವಸೂಲು ಮಾಡಿರುವ ಹಣವನ್ನು ಬೇಕಾಬಿಟ್ಟಿ ಖರ್ಚುಮಾಡುವುದು ಸರಿಯಲ್ಲ. ಇದನ್ನು ಎಂ.ಎಸ್.ಆರ್.ಟಿ.ಸಿ.ಯವರು ಕೊಂಡರೆ ಅದಕ್ಕೆ ಶ್ರೀ ಮಹಮದಾಲಿಯವರು ಸಂಪೂರ್ಣವಾಗಿ ಜವಾಬ್ದಾರರು. ಫೈಲು ನೋಡಿದರೆ, ಎಂ.ಎಸ್.ಆರ್.ಟಿ.ಸಿ.ಯಲ್ಲಿ ನಡೆದಿರುವುದನ್ನು ನೋಡಿದರೆ ಸತ್ಯ ಸಂಗತಿ ಗೊತ್ತಾಗುತ್ತದೆ. ಮಾನ್ಯ ಹಣಕಾಸಿನ ಮಂತ್ರಿಗಳು, ಛೇರ್ಮನ್ನರು, ಎಕ್ಸ್‌ಪರ್ಟ್ ಮುಂತಾದವರು ಕೊಟ್ಟಿರುವ ಒಪೀನಿಯನ್ ನೋಡಬೇಕು, ಹೀಗೆಲ್ಲಾ ಟ್ರ್ಯಾನ್‌ಸ್ಯಾಕ್‌ಷನ್ ನಡೆದರೆ ಬಹಳ ತೊಂದರೆಯಾಗುತ್ತದೆ. ಸಂಭಂಧಪಟ್ಟ file ಅನ್ನು ತರಿಸಿ ನೋಡಿ.

2-30 P.M.

ಇನ್ನು ರಿಲೀಫ್ ಗ್ರಾಂಟ್ಸ್ ವಿಚಾರ. ನವೆಂಬರ್ 30ನೆಯ ತಾರೀಖು ನಮ್ಮ ಜಿಲ್ಲೆಯ ಎಲ್ಲಾ ತಾಲ್ಲೂಕ ಹೆಡ್ ಕ್ವಾರ್ಟರುಗಳಿಗೂ ಟೆಲಿಗ್ರಾಂ ಕೊಟ್ಟರು. ಒಂದು ರಿಲೀಫ್ ಕಮಿಟಿ ಮಾಡಿ ಮಜೂರಾತಿ ಕೊಟ್ಟ ಮೇಲೆ ಎಸ್ಟಿಮೇಟ್ ಮಾಡಿ ಕಳಿಸಿದರೆ ಡಿ.ಸಿ. ಸ್ಯಾಂಕ್‌ಷನ್ ಮಾಡುವುದು ಇರುವ ಪದ್ಧತಿ. ಆದರೆ ಸ್ಯಾಂಕ್‌ಷನ್ ಆಗುವುದು ಎಂದು ಕೆಲವು ಕಡೆ ಕೆಲಸ ಪ್ರಾರಂಭಿಸಿರುತ್ತಾರೆ, ಹೀಗೆ ನಮ್ಮ ತಾಲ್ಲೂಕಿನಲ್ಲಿ ಒಂದು ಲಕ್ಷ 80 ಸಾವಿರ ರೂಪಾಯಿಗಳ ಕೆಲಸವಾಗಿದೆ. ಅದರೆ ಸುಮಾರು ಒಂದು ಲಕ್ಷ 20 ಸಾವಿರ ರೂಪಾಯಿ ಕೆಲಸ ಮಂಜೂರಾಗಿಲ್ಲ, ಎಸ್ಟಿಮೇಟ್ ಆಗುವುದು ನಿಧಾನ. ಕೆಲಸ ಮಾಡುತ್ತಿದ್ದಾರೆ, ಬಿಲ್ಲು ಕೊಡಬೇಕು. ನವೆಂಬರ್ 28ಕ್ಕೆ ಕೆಲಸ ಮುಗಿಯಿತು, 30ನೆಯ ತಾರೀಖು ಟೆಲಿಗ್ರಾಂ ಬಂತು, ಅದು ಬಂದಮೇಲೆ ಡಿ.ಸಿ. ಮಂಜೂರು ಮಾಡುವುದಿಲ್ಲ. ಇದು ಅವಾಸ್ತವಿಕ. ಜೂಜಾಡುವುದು ಅಧರ್ಮ. ಆದರಲ್ಲೂ ಹೆಂಡತಿಯನ್ನು ಪಣವಾಗಿ ಒಡ್ಡಿ ಜೂಜಾಡುವುದು ಅಧರ್ಮದಲ್ಲಿ ಅಧರ್ಮ. ಹೀಗೆ ರಿಲೀಫ್ ವರ್ಕ್ಸ್ ನಿಲ್ಲಿಸಿರುವುದು ಅಧರ್ಮ. ಬಿಲ್ಲು ಕೊಡುವ ಧರ್ಮದ ಕೆಲಸವನ್ನಾದರೂ ಮಾಡಿ ಬಾಳುವೆ ನಡೆಸಿ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†SRI M. Y. GHORPADE (Sandur).—Mr. Speaker Sir, by and large, the Governor's address might be fairly described as a catalogue of Departmental performances and programmes. One cannot help wishing that there should have been greater and more precise enunciation of policies and strategy on important matters in the Governor's address. One can only hope that the Hon'ble Ministers in the reply will try to put more teeth into the policies pointed out therein.

Sir, the Address begins by mentioning of the Panchayat Raj and takes justifiable satisfaction on the successful and peaceful conduct of Panchayat elections. I wish to add here that more elections are not sufficient. The sooner the Government takes the major step to set up the three-tier system of Panchayat Raj, which we have talked of so often on the basis of Kondajji Bassppa Report, the better it is. Mention is also made about the Land Revenue being given to Panchayats. It is my view that what is important is not merely handing over the Land Revenue but the manner in which it is handed over to the Panchayat Raj bodies. I am of the view that if it is

handed over on the basis of collection, the minor Panchayats may get more than what they require. Most of them will not be able to sustain the minimum establishment. Therefore I have always urged on this occasion that the land revenue should be used firstly to ensure the minimum establishment to serve the Panchayat Raj bodies and then thereafter, the remainder should be distributed on per capita basis. The criteria for the distribution of State grants to Panchayat Institutions should be the same as those under Central loans to States. The Central Government grants are given to the States not only on the basis of collection but also on the basis of population.

Mention is also made about the implementation of Land Reforms. I have been urging almost every year that land records should be kept in each Panchayat so that the poor cultivator will be benefited. I do not know why such a simple thing has not been done. They will maintain the secracy of the land records. It is an unfortunate thing that some of the provisions of the Land reforms have not been implemented. The question of fixing of fair rent has not been properly implemented because there are oral leases. The Government should be careful in tackling this problem of oral leases and see how best it could be solved, otherwise there will be no salvation for the poor. The Government want to print the bound Receipt Pattas which are in the nature of pass books containing the relevant information of the holding and also any encumbrances on the land. I think it is a progressive idea. This system has already been successful in Madras. This should be done immediately.

It has also been mentioned that the question of abolition of several other inams in the State is engaging the attention of the Government. I do not understand the great delay in implementing the programme. This inam system is coming in the way of cultivator to get loans from the Co-operatives. The Government has not clearly stated what is the difficulty in getting the inams abolished and if there is no difficulty at what time the process is completed. I urge upon the Government to take drastic measures to ensure the recovery of Co-operative loans. The Government say that they are going to take positive steps to recover these loans. But so far effective steps have not been taken. Effective steps should be taken to recover the loan amount and the funds may be made available for agricultural development. As a matter of fact, in this field, it is not the paucity of funds but our institutional incapacity to use these funds that are placed by the Banks. Therefore, I would urge upon the Government to come out with a clear programme to use these funds. One of the reasons why Japan has progressed agriculturally is, the word 'default' is not known to the people there. Whatever they borrow they repay. But this is not happening in our country and there has to be a break through in this matter and I wish the Government to see their way in this respect.

So far as planning is concerned, I think by now it is fairly well-known that the resources inside are not more than 250 crores; assuming that we get 225 crores from the Centre, we cannot talk of a plan of

(Sri M. Y. Ghorpade)

the order of 400 to 450 crores. Therefore in order to maintain the tempo we have to think of a plan within our resources. My view in this regard is that we should think of terms of having a core plan for Mysore State wherein atleast essential activities of each department could be safeguarded within that core plan for which we have resources available. If fortunately more resources become available then nothing prevants from spending on other things. But if we proceed with the more assumption of getting resources from the Centre, then certain essential activities may not have any money at all. Further, it is also not known Sir, when the quantum of Central assistance will be made known. The quantum of assistance would enable us to determine the size of the Mysore State Plan and also the plans of various other States. It is well-known that the repayment of loan and interest by our State during the Fourth Five year plan is of the order of 200 crores and therefore one has to be realistic and one cannot expect much of the contribution from our internal reosurces. Our Finance Minister has been urging upon the Central Government to reduce the burden of loans by spreading the period of repayment over a long period. But the Centre argues that if the period of repayment of loans by the States to the Centre is spread over a long period, the Centre would have no resources left to give financial assistance to the States. I think that this sort of argument is based on the assumption that what is available only is to be distributed by the Centre to the States and this fixed quantum cannot be changed. It has to be re-examined. There is no reason why the Centre should incur an expenditure up to 8,000 and States only up to 6,000. There is also no reason why a bigger expenditure should not take place in the States and why it should not be 7,000 and 7,000 by the Centre and the States instead of 8,000 and 6,000 that is fixed now. I feel Sir, that unless something of this order is done we will not be able to maintain the level of our planning—even at a reasonable level. I wish to suggest, on this occasion, that irrigation and power which are essential activities of developmental planning should receive due consideration. When I speak of a specific type of plan for the State, I mean that it should not only be a plan of more expenditure but also should indicate how the moneys could be recovered from the beneficiaries within a particular period. The interest rate may not be high, and the period of repayment could be long. It should be the strategy of the plan to make the beneficiary pay part of the amount spent on them. Otherwise whatever we spend automatically gets bogged-down. Sir, the Planning Commission has pointed out that there has been a loss of 75 crores of rupees on irrigation projects. It cannot be said to be a loss. After all, the money spent on irrigation project and power results in the increase of national income.

In the Governor's Address it has been stated that even for completing the existing irrigation projects the money required is 200 crores

approximately. As against that money to be spent in the year 1969-70 is only 10 crores. In other words, at this rate it will take 20 years to complete the irrigation projects which are on hand. Obviously Sir, this quantum of expenditure was no fault of the Government or the Finance, Minister. But it is a clear indication that unless we are able to spend at least about 40 crores of rupees a year we will not be able to make any significant progress in irrigation.

Similarly we have power. But we are not distributing power as rapidly as we should. It has been stated in the Governor's Address that as custodians of abundant power, it becomes our duty to help others in need of electricity. But I say, as custodian of power, it is our primary duty to help people in our own State first. Therefore, I would say that one requires at least 20 crores per annum for power. If you take 40 crores for irrigation and 20 crores for power that itself come to 60 crores of rupees of expenditure during the fourth five year plan period. Therefore, I feel that this matter should be dicussed at the highest level and even at the Zonal level. I feel that Southern States should try to arrive at certain understanding as to the rate at which power should be made available. I feel all the States in the Southern Zone should be alive to this fact and take a decision in a concerted manner to fix a rate at which this power should be supplied. I will go to the extent of saying that if it is difficult to arrive at an agreed rate, then the Centre could be given power to raise taxes on behalf of the State Governments. So far as major irrigation projects are concerned I have no hesitation to say this. Then as far as power is concerned I feel much more could be done if we spend 20 crores per annum. At least this much has to be spent in order to complete the electrification in next few years.

I am surprised that no mention is made in the Governor's Address about the underground water resources. It is my view that underground water resources would enable the percentage to go even up to 35 per cent. Therefore I feel that top priority should be given for progressive utilisation of underground water resources.

Now Sir, I would like to say a word about the Pay Commission. The Pay Commission has made all types of recommendations and it is very difficult to relate the recommendations to the terms of reference. It is a very general admixture of recommendations. Hardly anything has been left out. They have said for instance regarding Octroi (para 272):

> "if octroi is abolished a portion of the sales-tax collected within the limits of the local bodies might be made over to them."

In other words, they do not envisage any raising of octroi - to make up for loss of resources. I think it is very difficult for the Government to accept that recommendation. Government has not yet indicated its mind and I wonder whether they would like to take into consideration

(SRI M. Y. GHORPADE)

the KESKAR Committee recommendation which envisages a municipal surcharge on sales tax to make up for loss of revenue through octroi. However, it can be straightaway said that the idea of increasing property tax to make up for octroi is completely not feasible though it has been mentioned by some people.

The Pay Commission has also said in paragraph 275 that the principles governing the payment of grant-in-aid to the Bangalore Corporation for certain purposes may be liberalised. I would like to draw the attention of the Hon'ble Member Sri Shamanna to this sentence. I think Sri Shamanna should concentrate on this sentence and see what he can make of it. In that paragraph, the Tukol Commission has said that 25 per cent of the D.A., 50 per cent of the expenditure on widening of roads and a reasonable portion of health cess should be given to the Bangalore Corporation. That is what Sri Shamanna and other Members of the Bangalore City should try and see that instead of going on repeating or playing the out-played gramophone record of reducing the water rates in Bangalore, in spite of the Government having made substantial concessions for the benefit of the citizens of Bangalore. Since Sri Shamanna has made certain remarks yesterday on this, I feel that I should briefly try to answer at least some of them.

SRI H. SIDDAVEERAPPA.—He has only complimented you!

SRI M. Y. GHORPADE.—I would also compliment him for the trouble he has taken to argue this point. However, he has also made certain remarks which I should like to reply to. I am sure that Sri Shamanna agrees that nobody has said that free allowance recommended is insufficient. I would say in this context that this expression *free allowance* though it is customary to use it, is a misnomer, because it is really not free. After all the tax-payers in Bangalore pay for it through the property tax. Sri Shamanna always talks about the property tax having been raised. I expect him to know that the property tax was never raised as such. As a matter of fact, what happened was that four different items of tax were consolidated into property tax, but the incidence of taxation was never raised. The general tax, water tax, sanitary cess and lighting tax which were 5, 6, 2 and 2 respectively—all these were merged and called property tax, at 15 per cent. It was really a merger of four different taxes.

SRI T. R. SHAMANNA.—Health cess and education cess has been increased from 7 lakhs to 21 lakhs.

SRI M. Y. GHORPADE.—That is a different matter. That is because the property tax is 15 per cent and health cess is calculated on that. But property tax as such did not go up.

Now this flat rate of 25,000 litres which Government has announced —I hope it is realised that it corrects a very serious anomaly that was existing previously. The anomaly was that there was no flat rate—the

man with a higher rental value used to pay less than the man with lower rental would pay for the same quantity of water. For example, for a consumption of 30,000 litres, a man with rental value of Rs. 1,000 or less used to pay Rs. 5·20, whereas for the same quantity of water, a man with rental value above Rs. 5,000 used to pay Rs. 1·80. Therefore, this anomaly has been corrected. And so far as the excess water rates are concerned, I must point out here that the first two slabs are below the average cost of water. If you calculate—and it has been said in the report very clearly that the average cost of water works out to something like 33 paise per 1,000 litres. The cost of non-domestic charges works out to 50 paise per thousand litres, it has been possible to work out the cost for domestic consumption at 22 paise per thousand litres and therefore the slabs of 25,000 and 30,000 litres are really well below the average cost of water. Sri Shamanna should know that this is well below what he himself had recommended as Chairman of the Standing Committee on Taxation of the Corporation in 1962 and which was approved by the Corporation in 1963.

Sri M. S. KRISHNAN.—He was a Congressman at that time.

Sri M. Y. GHORPADE.—But it is good to know these things correctly.

At that time, what was recommended by the Corporation and this committee was a minimum free allowance of 13,000 litres and the excess water consumption slabs were 30, 36 and 44 as against 25, 30 and 40 as now recommended. This I said only to keep the record straight.

He has also mentioned that Government should have taken into account so many other things and allow for 28 per cent wastage. My only submission is, if we had tried to base the cost of water not on present conditions but on future possibilities, then the much-needed relief to the people of Bangalore could not have been given at all. And therefore, when people try to say that so many other things that could happen in the future should have been taken into account in fixing the rate, one gets the impression that perhaps they may be interested in keeping the issue alive rather than settling it to the satisfaction of the people of the City. This is my defence. It is always open to the Members to argue on so many points which are likely to arise in the future.

So far as retrospective effect is concerned, I would make it clear that the Estimate Committee did not consider it part of its function or duty to make any recommendations on that point because it thought that the date from which the report should come into force is purely an administrative decision which should be left to the Government and that the Estimates Committee's job was merely to calculate the water rate on a proper scientific basis and try to take decisions on behalf of the Government. That is why the Estimates Committee has not made any recommendation on that point.

(SRI M. Y. GHORPADE)

So much for water. I will take only five minutes to refer to certain other aspects of the recommendations of the Tukol Commission. I would like to say that this Tukol Commission has made many recommendations which are not strictly related to the terms of reference. For instance, there is a chapter on Community Development organization and Panchayathi Raj in this Report. Now the Commission has made all sorts of recommendations such as designation and duties of different Officers, whether elections to Panchayath bodies should be direct or indirect and who should write confidential reports. I feel that these recommendations are really very vague and not relevant to the central terms of reference to the Tukol Commission. They have also made several sundry recommendations regarding finances. On a cursory reading of some paragraphs relating to the finacial implications, I feel that the recommendations are not strictly based on principles of sound finance. Therefore, it is very difficult for Members either on this side or the other side of the House to discuss this Report in a fruitful manner unless the Government itself comes up with tentative proposals as to what they proposed to do. Then I think the discussion on the Commission's Report will be more fruitful than at this stage - because of the very nature of the Commission's Report.

3-00 P.M.

My time is up. But still I would like to lay special emphasis on drinking water wells in villages. In the Governor's Address, it has been stated that 3,288 villages including hamlets are without wells in our State. I feel, Sir, that the Government should take a categorical decision and announce to the House that all these 3,288 villages will be provided with drinking water wells before the completion of 1969, which happens to be Gandhi Centenary Year. This will be within the financial capacity of the Government because, after all, it will not cost more than Rs. 50 lakhs to a crore at the most, even taking that each well costs Rs. 2 to 3 thousand. When we could spend Rs. 7 crores for famine relief, a sum of Rs. 50 lakhs or one crore could be provided for providing drinking water wells to all these villages so that by the end of 1969 there will not to be a single village without a drinking water well. This is within the capacity of the Government and they should make a categorical statement to that effect because that will be a very symbolic gesture and it will create the right atmosphere for the people of the State to celebrate Gandhi Centenary Year in a proper fashion.

Then lastly, regarding Social Welfare, Scheduled Castes and Scheduled Tribes and other weaker sections of population, I think, what has been stated in the Address is very vague. The Address states, "Several schemes for their economic improvement including employment oppportunities under Government and other Government sponsored agencies are under active consideration." I would like

to know what those schemes are. I think there is a general feeling not only in our State but in many other States that for these Scheduled Castes, Scheduled Tribes and the weaker sections of population, not much is being done in sufficient seriousness for their social and economic uplift. We are in the beginning of the year 1969 which has a special significance and Government should come forward with comprehensive and detailed schemes and explain to this House what exactly they mean by saying that several schemes for their economic improvement are "under active consideration." It is a matter which should be given top priority by all Members of this House. I have Special interest in such detailed and comprehensive programmes for improving the conditions of these Scheduled Castes, Scheduled Tribes and other weaker sections so that everybody could participate with enthusiasm in the Gandhi Centenary Year.

One or two minor points which I would like to mention is with regard to counterfeit currency in circulation. It is a very alarming thing not only to Government but to the people at large, although it is mentioned that the Police have succeeded in unearthing the sources of counterfeit currency in circulation. It was the impression of the people that only the Reserve Bank of India had the right to create money. But money is being created by other sources also. This is a very serious matter and the Government has rightly emphasised that we should all co-operate with the Government in seeing that such a thing does not raise its head.

Regarding the airport, I want to say a word. If an airport is being planned at Hassan and Bijapur, I have no grudge. Since I happen to come from Bellary I am tempted to point out to the authorities that there is at least that much of justification for Bellary, especially because of the historical importance of Hampi and Thungabhadra Project.

Now regarding the Cauvery Project, it is stated that work on thefirst stage of the scheme for the supply of Cauvery water to Bangalore City has commenced. It is encouraging that the Government has stated that the first stage of this Project has commenced. We all know that Rs. 4 crores have been spent and another Rs. 18 crores have to be spent in order to complete this Project. Now that this is not part of our Plan, we want to know from the Minister wherefrom they will find money for completing it. It will be good if the Government could indicate very clearly what efforts are being made to get this extra sum of Rs. 18 crores necessary to complete the first stage of Cauvery Project, which is an absolute must for the existence of Bangalore; because as it is the per capita availability is 9 gallons. Even after the Project is completed, the additional supply will be 30 million gallons. So the per capita domestic consumption will not go up to 14 gallons as compared to 30 to 40 gallons in other States. Therefore, I suggest that immediate discussion should begin with the Central Government and other inter national agencies to determine the finances for the early completion of this Cauvery Project.

Thank you, Sir.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ವಿಧಾನಮಂಡಲದಲ್ಲಿ ರಾಜ್ಯಪಾಲರು ನೀಡಿರತಕ್ಕ ಭಾಷಣದ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಈ ಮಾನ್ಯ ಸಭೆಯ ಸದಸ್ಯರನೇಕರು ಈ ಕಡೆ ಕೂತಿರುವವರು ಮತ್ತು ಆ ಕಡೆ ಕೂತಿರುವವರು ಸೇರಿ ಈ ರಾಜ್ಯಪಾಲರ ಭಾಷಣ ಅನೇಕ ಇಲಾಖೆಗಳ ಅಂಕಿಅಂಶಗಳ ವರದಿ ಇದ್ದಹಾಗೆ ಇದೆ ಎನ್ನುವ ಮಾತನ್ನು ಹಾಗೂ ಇದೊಂದು ಬರಡು ಭಾಷಣ ಎನ್ನುವ ಮಾತನ್ನು ಹೇಳಿದ್ದಾರೆ. ಹಲವಾರು ನಾಮಗಳನ್ನು ಈ ಭಾಷಣ ಈಗಾಗಲೇ ಪಡೆದುಕೊಂಡಿದೆ. ನಾನೂ ಕೂಡ ಈ ಭಾಷಣದ ಬಗ್ಗೆ ಒಂದು ಹೆಸರನ್ನು ಇಡಬಲ್ಲೆ, ಅದು ಸಾಧ್ಯವಿದೆ, ಇಷ್ಟರವರೆಗೆ ಈ ಕಾಂಗ್ರೆಸ್ ಸರ್ಕಾರ ಈ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಭಾರಿ ಭಾರಿ ಯೋಜನೆಗಳನ್ನು ಸಮಾಜವಾದದ ಹೆಸರಿನಲ್ಲಿ ನಾವು ತರುತ್ತೇವೆನ್ನುವ ಮಾತನ್ನು ಹೇಳಿ ಜನತೆಗೂ, ಇಡೀ ದೇಶಕ್ಕೂ, ಒಂದು ಆಶ್ವಾಸನೆ ಕೊಡುತ್ತಾ ಬಂದರು. ಆದರೆ ರಾಜ್ಯದ ಜನತೆಯಲ್ಲಿ ತೃಪ್ತಿ, ವಿಶ್ವಾಸವನ್ನುಂಟು ಮಾಡುವಂಥಾದ್ದು ಏನೂ ಕಾಣಲಿಲ್ಲ. ನಾವು ಈ ರಾಜ್ಯದಲ್ಲಿ ಸದಸ್ಯರಾಗಿ ಇಲ್ಲಿಗೆ ಸುಮಾರು ಎರಡು ವರ್ಷಗಳು ಆದುವು. ನಮ್ಮ ಹಿಂದೆ ಇದ್ದಂಥ ಈ ಸದನದ ಸದಸ್ಯರಾಗಿಹೋಗಿರುವ ಅನೇಕ ಜನರು ನಿಜವಾಗಿ ಈ ಕಾಂಗ್ರೆಸ್ ಸರ್ಕಾರ ಈ ದೇಶದಲ್ಲಿ ಸಮಾಜವಾದೀ ಸಮಾಜವನ್ನು ಕಟ್ಟಿ ಮಹಾತ್ಮ ಗಾಂಧಿಯವರು ಜನಗಳಿಗೆ ಕಾಂಗ್ರೆಸ್ ಮುಖಾಂತರ ಏನು ವಚನಕೊಟ್ಟಿದ್ದರೋ ಅದನ್ನು ಈ ಸರ್ಕಾರದವರು ಕಾರ್ಯರೂಪಕ್ಕೆ ತರುತ್ತಾರೆಂಬ ಆಶೆಯಿಂದ ಇದ್ದರು. ನಾನು ಈ ಸಾರಿಯೂ ರಾಜ್ಯಪಾಲರ ಭಾಷಣವನ್ನು ಸಂಪೂರ್ಣವಾಗಿ ಓದಿದ್ದೇನೆ.

[MR. CHAIRMAN (SRI B. P. KADAM) in the Chair]

ಇದರಲ್ಲಿ ಮೀನುಗಾರಿಕೆಗೆ ನಾವು ಏನು ಮಾಡಿದ್ದೇವೆ, ವ್ಯವಸಾಯಕ್ಕೆ ನಾವು ಏನು ಮಾಡಿದ್ದೇವೆ; ನೀರು ಕುಡಿಯುವ ಬಾವಿಗಳ ಬಗ್ಗೆ ಏನು ಮಾಡಿದ್ದೇವೆ, ತಾಲೂಕು ಬೋರ್ಡುಗಳ ವಿಚಾರ ಏನು ಮಾಡಿದ್ದೇವೆಂಬುದನ್ನೆಲ್ಲಾ ಬರೆದಿದ್ದಾರೆ. ನಮಗೆಲ್ಲರಿಗೂ ಗೊತ್ತಿದೆ, ನಮ್ಮ ದೇಶದಲ್ಲಿರತಕ್ಕ ಬಹು ದೊಡ್ಡ ವರ್ಗ ವ್ಯಥೆಯನ್ನು ಪಡುತ್ತಿದೆಯೆಂದು. 22 ವರ್ಷಗಳ ಮೊದಲು ಬ್ರಿಟಿಷರು ಇದ್ದ ಕಾಲದಲ್ಲಿ ಬಡವರಿಗೆ ಅವರು ತೊಂದರೆ ಕೊಡುತ್ತಿದ್ದ ಕಾಲದಲ್ಲಿ ಕಾಂಗ್ರೆಸ್ ಪಕ್ಷದವರು ಬಡವರಿಗೆ ಸಮಾಧಾನ ಮಾಡುತ್ತಿದ್ದರು. ಆದರೆ ಈವೊತ್ತಿನ ದಿವಸ, ಸ್ವಾತಂತ್ರ್ಯದ ನಂತರ, ಆ ಬಡ ವರ್ಗದ ಜನರು ಇಂದು ಅದೇ ಸ್ಥಿತಿಯಲ್ಲಿದ್ದಾರೆ. ನನ್ನ ಕ್ಷೇತ್ರದಲ್ಲಿ ಹಾಗೂ ಇನ್ನೂ ಅನೇಕ ಕಡೆ ನೋಡಿದ್ದೇನೆ, ಬಡವರು ಜಮೀನು ಇಲ್ಲದೆ, ಸಾಗುವಳಿ ಮಾಡಲು ಜಮೀನು ಇಲ್ಲದೆ ತೊಂದರೆಪಡುತ್ತಿದ್ದಾರೆ. ಇಂಥವರು ಲಕ್ಷೋಪಲಕ್ಷ ಜನರು ನಮ್ಮ ರಾಜ್ಯದಲ್ಲಿದ್ದಾರೆ. ಯಾವ ಕ್ಷೇತ್ರಕ್ಕೆ ಹೋದರೂ, ಮಾನ್ಯ ರಾಮಕೃಷ್ಣ ಹೆಗಡೆಯವರ ಕ್ಷೇತ್ರಕ್ಕೆ ಹೋದರೂ, ಜನ ಜಮೀನು ಬೇಕು, ಸರ್ಕಾರಕ್ಕೆ ಜಮೀನು ಕೊಡಿ ಎಂದು ಕೇಳುತ್ತಿದ್ದಾರೆ. ಇದಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ವಾತಂತ್ರ್ಯ ಬಂದಲಾಗಾಯಿತು ಅರ್ಜಿಗಳನ್ನು ಕೊಡುತ್ತಿದ್ದಾರೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಲಕ್ಷೋಪಲಕ್ಷ ಎಕರೆ ಸಾಗುವಳಿಗೆ ಯೋಗ್ಯವಾದ ಜಮೀನು ಸಿಗುತ್ತದೆ. ಇವನ್ನೆಲ್ಲಾ ಬಡವರಿಗೆ ಹಂಚಲು ಸರ್ಕಾರಕ್ಕೆ ಏನು ಕೊರತೆ ಇದೆ ? ಇದರಿಂದ ನಮ್ಮ ಆಹಾರದ ಕೊರತೆ ಏನಿದೆ, ಅದನ್ನು ಹೋಗಲಾಡಿಸಿ ನಾವು ಸ್ವಾವಲಂಬಿಗಳಾಗಬಹುದು. ಇಂದು ಸಾವಿರಾರು ಅರ್ಜಿಗಳು ಈ ಕಾಂಗ್ರೆಸ್ಸಿಗರ ಆಡಳಿತದಲ್ಲಿ ಹಾಗೆ ವಿಲೆವಾರಿಯಾಗದೆ ಧೂಳು ತಿನ್ನುತ್ತಾ ಬಿದ್ದಿವೆ. ಬಡವರಿಗೆ ಜಮೀನು ಕೊಡುವಂತೆ ಒಂದು ಕಾನೂನು ಮಾಡಿ ಎಂದರೆ ಅದು ಮಾಡದೆ, ಅಧಿಕಾರಿಗಳೂ ಪ್ರೋತ್ಸಾಹ ಮಾಡದೆ, ಇವತ್ತು ಅರ್ಜಿಗಳು ಹಾಗೇ ಬಿದ್ದಿವೆ, ಜಮೀನುಗಳು ಬಂಡವಾಳಶಾಹಿ ವರ್ಗದವರಲ್ಲಿ ಇವೆ. ಈ ವಿಚಾರವಾಗಿ ಭಾಷಣದಲ್ಲಿ ಒಂದು ಮಾತೂ ಕೂಡ ಆಡಲಿಲ್ಲ. ಇವತ್ತು ಸರ್ಕಾರದವರು ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಿದ್ದೇವೆ, ಬಾಕ್ರಾನಂಗಾಲ್ ಕಟ್ಟಿದ್ದೇವೆ, ಕೃಷ್ಣಾ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ, ಗೊಬ್ಬರದ ಕಾರ್ಖಾನೆಯನ್ನು ಮಂಗಳೂರಲ್ಲಿ ಮಾಡುತ್ತಿದ್ದೇವೆ ಎಂದು ಎಲ್ಲಾ ಹೇಳುತ್ತಿದ್ದಾರೆ. ಆದರೆ ಮಾನ್ಯ ಶ್ರೀನಿಜಲಿಂಗಪ್ಪನವರ ಮೇಲೆ ಕೊಟ್ಟ ಆಪಾದನೆಗಳು ಇನ್ನೂ ಇತ್ಯರ್ಥವಾಗದೆ ಉಳಿದಿವೆ. ಬಡವರಿಗೆ ಸಹಾಯ ಮಾಡಲು ಈ ಕಾಂಗ್ರೆಸ್ ಸರ್ಕಾರಕ್ಕೆ ಇಚ್ಛೆ ಇದ್ದಿದ್ದರೆ ಮತ್ತು ಆ ಕೆಲಸ ಮಾಡಿದ್ದರೆ, ಈ ಭಾಷಣದಲ್ಲಿ ಅದು ಒಂದು ಬೆಳಕನ್ನು ಕಾಣುತ್ತಿತ್ತು ಮತ್ತು ಅದಕ್ಕೆ ಶಹಬಾಸ್‌ಗಿರಿಯನ್ನು ಕೊಡುತ್ತಿದ್ದೆ. ನಾವು ಇನ್ನೊಂದು ಭಾಷಣದಲ್ಲಿ ಅದನ್ನು ನೋಡಬೇಕಾದರೆ, ಇನ್ನೊಂದು ವರ್ಷ ನಾವು ಕಾಯಬೇಕಾಗಿದೆ. ಇವತ್ತು ಬಡವರ ವರ್ಗ, ಬುದ್ಧಿಯಿಲ್ಲದವರೆಂಬುದನ್ನು ತಿಳಿಯಬಾರದು. ದೇಶದಲ್ಲೆಲ್ಲಾ ಈಗ ನಕ್ಸಲ್‌ಬಾರಿ ಘಟನೆಗಳು ನಡೆಯುತ್ತಿವೆ. ದೇಶದಲ್ಲಿ ಏನಾದರೂ ಖೂನಿನಡೆದರೆ, ಅದನ್ನು ಖಂಡನೆ ಮಾಡಬಹುದು. ಆದರೆ, ಬಡವರಿಗೆ ಹೊಟ್ಟೆಗಿಲ್ಲದವರಿಗೆ, ಅನ್ನ ಕೊಡಿ, ಬೇಸಾಯ

ಕೆಲಸ ಮಾಡಲು ಜಮೀನು ಕೊಡಿ ಎಂದು ಕೇಳಿದಾಗ, ಅದನ್ನು ಕೊಡದೆ ಸರ್ಕಾರದವರು ವಂಚನೆಯನ್ನು ಮಾಡುತ್ತಿದ್ದಾರೆ. ಎಲ್ಲಿಯವರೆಗೆ ಈ ಬಡವರನ್ನು ಸರ್ಕಾರದವರು ಉದ್ಧಾರ ಮಾಡುವುದಿಲ್ಲವೋ, ಅಲ್ಲಿಯವರೆಗೆ ಅವರ ಈ ಪಾಪ ಇದ್ದೇ ಇರುತ್ತದೆ. ಇದೊಂದು ಜೀವ ಇಲ್ಲದಿರತಕ್ಕ ಭಾಷಣವಾಗಿದೆ. ಒಂದು ಕಡೆ ಬಡವರು ದೇಶದಲ್ಲಿ ನರಳುತ್ತಾ ಇರುವಾಗ ನಾವು ಇದನ್ನು ಏನು ಮಾಡಬೇಕು ? ಇವತ್ತು ಆ ಬಡವರ ಕೊಲೆಯನ್ನು ಮುಚ್ಚಿಟ್ಟು ನಾನು ಇದಕ್ಕೆ ಶಹಾಬಾಸ್‌ಗಿರಿಯನ್ನು ಕೊಡಬೇಕಾಗಿದೆ. ಅದನ್ನು ನಾನು ಮಾಡಲಾರೆ.

ಇನ್ನು ಜಮೀನು ಹಂಚಿಕೆಯ ವಿಚಾರದಲ್ಲಿ ತಹಸಿಲ್ದಾರರವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಈಗ ಸರ್ಕಾರದವರು ಒಂದು ಕಾನೂನು ಮಾಡಬೇಕು. ಆಯಾ ಗ್ರಾಮದಲ್ಲಿರತಕ್ಕ ಜಮೀನನ್ನು ಅಲ್ಲಿಯ ಬಡವರು ಯಾರ್ಯಾರು ಇದ್ದಾರೆ, ಅವರ ಜಾತಿ, ಮತ ಭೇಧ ಯಾವುದನ್ನೂ ನೋಡದೆ ಹಂಚಬೇಕು. ಈ ರೆವೆನ್ಯೂ ಇಲಾಖೆಗೆ ಮಾತ್ರ ಹಂಚಿಕೆ ಮಾಡತಕ್ಕ ಅಧಿಕಾರವನ್ನು ಕೊಡಬಾರದು ಅದನ್ನು ಕಿತ್ತುಕೊಳ್ಳಬೇಕು. ಈ ಅಧಿಕಾರವನ್ನು ಅಲ್ಲಿರತಕ್ಕ ಜನತೆಯ ಪ್ರತಿನಿಧಿಗಳಿಗೆ ಕೊಡಬೇಕು.

ಜಮೀನನ್ನು ಹಂಚಿಕೆಮಾಡಲೇಬೇಕು. ಅದಕ್ಕೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಬೇಕಾಗಿಲ್ಲ ಬೇರೆ ಯಾವ ಕಾನೂನು ಬೇಕಾಗಿಲ್ಲ. ಬಡವರು ಕೊಟ್ಟಂತಹ ಅರ್ಜಿಗಳನ್ನು ಅದಷ್ಟು ಜಾಗ್ರತೆ ಪರಿಶೀಲನೆ ಮಾಡಿ ಅವರಿಗೆ ಜಮೀನು ಹಂಚಿಕೆ ಮಾಡಬೇಕು. ಎಂದು ಒಂದು ಸಲಹಾ ರೂಪವಾಗಿ ನಾನು ಈ ಸದನದ ಗಮನಕ್ಕೆತರುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಬಿಜಾಪುರದ ಹಗರಣ. ನಮ್ಮ ರಾಜ್ಯದ ಆಡಳಿತವನ್ನು ಶ್ರೀಮಾನ್ ವೀರೇಂದ್ರ ಪಾಟೀಲರು ಅವರ ಗುರುಗಳಾದ ಶ್ರೀಮಾನ್ ನಿಜಲಿಂಗಪ್ಪನವರಿಂದ ವಹಿಸಿಕೊಂಡ ಮೇಲೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಆಗಬೇಕು ಎನ್ನತಕ್ಕಂಥಾದ್ದು ಶ್ರೀಮಾನ್ ವೀರೇಂದ್ರ ಪಾಟೀಲರ ಇಚ್ಛೆ ಆಗಿದೆ. ಬಿಜಾಪುರ ಜಿಲ್ಲೆಯಲ್ಲಿ ಆಲಮಟ್ಟಿಯ ಹತ್ತಿರ ಕೃಷ್ಣಾ ಮೇಲ್ದಂಡೆ ಯೋಜನೆಗೆ ಡ್ಯಾಮ್ ಕಟ್ಟಲು ಒಂದೂವರೆ ಕೋಟಿ ರೂಪಾಯಿಗಳು ಖರ್ಚಾಗಿದೆ. ಈ ಅಣೆಕಟ್ಟು ಕಟ್ಟುವುದಕ್ಕೆ ಸಂಬಂಧಪಟ್ಟ ಹಾಗೆ ಒಂದು ಎಕ್ಸ್‌ಪರ್ಟ್ ಕಮಿಟಿ ಇದೆ. ಮತ್ತು ಇನ್ನೂ ಬೇರೆ ಬೇರೆ ದೊಡ್ಡವರು ಇದ್ದಾರೆ. ಆ ಅಣೆಕಟ್ಟಿಗೆ 1½ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ ಮೇಲೆ ಕೆಳಗಡೆ ಸರಿಯಾದ ಮಣ್ಣು ಸಿಕ್ಕಲಿಲ್ಲ ಎಂದು ಅದನ್ನು ಡಿಲೇಮಾಡಿದರು. ನಾರಾಯಣಪುರದ ಅಣೆಕಟ್ಟನ್ನು ಅರ್ಜೆಂಟಾಗಿ ತೆಗೆದುಕೊಳ್ಳಬೇಕಾಗಿತ್ತು ಅದಕ್ಕೋಸ್ಕರ ತಜ್ಞರ ಸಮಿತಿಯು ರಿಪೋರ್ಟ್ ಬರಲಿಲ್ಲ ಎಂದು ಆಲಮಟ್ಟಿ ಡ್ಯಾಮನ್ನು ಕಟ್ಟುವುದನ್ನು ಡಿಲೇ ಮಾಡಿ ನಾರಾಯಣಪುರ ಡ್ಯಾಮನ್ನೂ ಕೂಡಲೇ ಕಟ್ಟುವುದಕ್ಕೆ ಪ್ರಾರಂಭಮಾಡಿದರು. ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ಸ್ವಕ್ಷೇತ್ರಕ್ಕೆ ಬಹಳ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಆಲಮಟ್ಟಿ ಅಣೆಕಟ್ಟು ಕಟ್ಟುವುದನ್ನು ತಡಮಾಡಿ ನಾರಾಯಣಪುರ ಅಣೆಕಟ್ಟಿನ ಕೆಲಸವನ್ನು ಕೂಡಲೇ ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಬೇಕಾದಷ್ಟು ಹಣವನ್ನು ಖರ್ಚುಮಾಡಿದ್ದಾರೆ. ಮತ್ತೊಂದು ಕಡೆ ಆಲಮಟ್ಟಿ ಅಣೆಕಟ್ಟಿನಲ್ಲಿ ಕೃಷ್ಣಾ ನದಿಗೆ ಇಂಜಿನಿಯರು ಒಂದು ಕಾಸ್‌ವೇ ಕಟ್ಟಿದ್ದಾರೆ. ಆ ಕಡೆ ದಂಡೆಯಿಂದ ಈ ಕಡೆ ದಂಡೆಗೆ ಸಾಮಾನುಗಳನ್ನು ಸಾಗಿಸುವುದಕ್ಕೆ 60–70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಬರೀಕಲ್ಲುಗಳನ್ನು ಹಾಕಿ ಕಾಸ್‌ವೇ ಕಟ್ಟಿದ್ದಾರೆ. ನದಿಯಲ್ಲಿ ಹೆಚ್ಚು ಪ್ರವಾಹ ಬಂದರೆ ಆ ಕಾಸ್‌ವೇ ಕೊಚ್ಚಿ ಹೋಗುತ್ತದೆ. ಇಂಥಾ ಒಂದು ಕಾಸ್‌ವೇಯನ್ನು ಅಲ್ಲಿ 60–70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿದ್ದಾರೆ ಮತ್ತೊಂದು ಕಾಸ್‌ವೇಯನ್ನು ಕಟ್ಟುವುದಕ್ಕೆ ಒಂದು ಲಕ್ಷ 75 ಸಾವಿರ ರೂಪಾಯಿಗಳ ಟೆಂಡರನ್ನು ಕರೆದಿದ್ದಾರೆ. ನಾರಾಯಣಪುರ ಮತ್ತು ಆಲಮಟ್ಟಿ ಅಣೆಕಟ್ಟುಗಳಿಗೆ ಸಾಕಾದಷ್ಟು ಸಾಮಾನುಗಳನ್ನು ನಾವೇ ತಯಾರು ಮಾಡಬಹುದಾಗಿತ್ತು. ಅದಕ್ಕಾಗಿ ಬೇರೆ ಒಂದು ವರ್ಕ್‌ಷಾಪ್ ಮಾಡಿದ್ದಾರೆ. ಆ ವರ್ಕ್‌ಷಾಪಿನಲ್ಲಿ ಸಾಮಾನುಗಳನ್ನು ತಯಾರು ಮಾಡಬಹುದಾಗಿತ್ತು ಆದರೆ ಅವರು ಆರೀತಿ ಮಾಡಲಿಲ್ಲ. 160 ರೂಪಾಯಿಗಳ ಬೆಲೆ ಬಾಳತಕ್ಕ ಟ್ರಾನ್ಸ್‌ಮಿಷನ್ ಟವರ್ಸ್‌ಗಳನ್ನು 210–215 ರೂಪಾಯಿಗಳಿಗೆ ಬೇರೆಕಡೆ ಖರೀದಿಮಾಡಿದ್ದಾರೆ. ಅವುಗಳನ್ನು ಖರೀದಿಮಾಡುವಾಗ ಇಂಜಿನಿಯರುಗಳು ಸಾಮೀಲಾಗಿ ಸರ್ಕಾರದ ಖಜಾನೆಯ ಲೋಪಕ್ಕೆ ಕಾರಣರಾಗಿದ್ದಾರೆ ಆಲಮಟ್ಟಿ ನಾರಾಯಣಪುರ ಅಣೆಕಟ್ಟುಗಳ ಸಂಬಂಧದಲ್ಲಿ ಬೇಕಾದಷ್ಟು ಹೇಳುವುದು ಇದೆ. ಆದರೆ ಈಗ ಅದನ್ನು ಹೇಳುವುದಕ್ಕೆ ಕಾಲಾವಕಾಶವಿಲ್ಲ.

ಈಗ ದೇಶದಲ್ಲಿ ಲಂಚದ ಹಾವಳಿ ಜಾಸ್ತಿಯಾಗಿದೆ. ಇದರ ಬಗ್ಗೆ ರಾಜ್ಯಪಾಲರು ಏನೂ ಹೇಳಲಿಲ್ಲ. ಲಾ ಅಂಡ್ ಆರ್ಡರ್ ಬಹಳ ಚೆನ್ನಾಗಿದೆ ಎಂದು ಹೇಳಿದ್ದಾರೆ ಬಡವರು ಗೋಳಾಡುತ್ತಿದ್ದಾರೆ. ಲಂಚ ಇದೆ ಎನ್ನುವ ವಿಷಯವನ್ನು ಪ್ರತಿಯೊಬ್ಬರೂ ಒಪ್ಪಿಕೊಂಡಿದ್ದಾರೆ. ನಾನು ಹಿಂದೆ ಲಂಚವನ್ನು ನಿಲ್ಲಿಸುವುದಕ್ಕೆ ಒಂದು ಸಲಹೆಯನ್ನು ಮಾಡಿದ್ದೇನೆ. ಅದಕ್ಕೆ ಕೆಲವು ಕಾಂಗ್ರೆಸ್

(ಶ್ರೀ ಎಸ್. ಬಂಗಾರಪ್ಪ)

ಸದಸ್ಯರೂ ಕೂಡ ಬೆಂಬಲವನ್ನು ಕೊಟ್ಟಿದ್ದಾರೆ. ಆದ್ದರಿಂದ ಇದರಬಗ್ಗೆ ವಿಚಾರ ಮಾಡಬೇಕೆಂದು ನಾನು ಹೇಳಿದ್ದೇನೆ ಈಗ ಲಂಚಗೂಳಿತನವನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಆಂಟಿಕರಪ್ಷನ್ ಇಲಾಖೆ, ಸ್ಟೇಟ್ ವಿಜಿಲೆನ್ಸ್ ಕಮಿಷನ್ ಇನ್‌ವೆಸ್ಟಿಗೇಷನ್ ಸೆಲ್ ಇವುಗಳನ್ನು ಮಾಡಿದ್ದಾರೆ. ಆದರೂ ಸಹ ಲಂಚನಿಂತಿದೆ, ಲಂಚವನ್ನು ತಿನ್ನುವುದಿಲ್ಲ ಎನ್ನುವ ಗ್ಯಾರೆಂಟಿಯನ್ನು ಯಾರೂ ಕೊಡುವುದಕ್ಕಾಗುವುದಿಲ್ಲ. ಆಂಟಿಕರಪ್ಷನ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಅಧಿಕಾರಿಗಳು ಯಾರು ಎಂದರೆ ರೆಗ್ಯುಲರ್ ಪೋಲೀಸ್‌ನಲ್ಲಿದ್ದವರು. ಅವರನ್ನು ಈ ಇಲಾಖೆಗೆ ವರ್ಗ ಮಾಡಿದ್ದಾರೆ. ಲಂಚ ತಿನ್ನುವ ಪೋಲೀಸ್ ಇಲಾಖೆಯವರನ್ನು ಸ್ಟೇಟ್ ವಿಜಿಲೆನ್ಸ್ ಕಮಿಷನ್ನಿಗೆ ಹಾಕಿದ್ದಾರೆ. ದೇಶದಲ್ಲಿ ಲಂಚ ಹೇಗೆ ನಿಲ್ಲುತ್ತದೆ ?

Sri K. H. RANGANATH (Mudigere).—No Ministers are taking care to note down points. Some of them are looking into the files. At the cost of public money we are doing some work here. They have to do work with all seriousness.

Mr. CHAIRMAN.—Two or three ministers are there.

ಶ್ರೀ ಎಸ್. ಬಂಗಾರಪ್ಪ.—ಮಂತ್ರಿಗಳು ಏನು ಮಾಡುತ್ತಾರೆ ಎಂದು ನಾನು ಕೂಡ ಅದನ್ನೇ ಯೋಚನೆ ಮಾಡುತ್ತಿದ್ದೆ. ಮಂತ್ರಿಗಳು ಗುಸು ಗುಸು ಮಾತನಾಡಬಾರದು. ಸದಸ್ಯರು ಸಲಹೆಗಳನ್ನು ಕೊಡುತ್ತಿರುವಾಗ ಈ ಸದನದ ಕಡೆಗೆ ಗಮನಕೊಟ್ಟು ನಾವು ಹೇಳತಕ್ಕ ಸಲಹೆಗಳನ್ನು ಬರೆದುಕೊಂಡು ಅವುಗಳನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶವನ್ನು ಪಡೆದುಕೊಳ್ಳಬೇಕು.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಏನು ಮಾತನಾಡಿದರೋ ಅದನ್ನು ಬೇಕಾದರೆ ನಾನು ರಿಪೀಟ್ ಮಾಡುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಒಬ್ಬರು ಕ್ಯಾಬಿನೆಟ್ ಮಂತ್ರಿಗಳು ಇದ್ದಾರೆ. 3 ಮಂದಿ ಸ್ಟೇಟ್ ಮಿನಿಷ್ಟರುಗಳು ಇದ್ದಾರೆ.

Mr. CHAIRMAN.—I have to repeat the same thing. There are some Ministers present. The Hon'ble member may continue.

ಶ್ರೀ ಎಸ್. ಬಂಗಾರಪ್ಪ.—ನಾನು ಲಂಚದ ಬಗ್ಗೆ ಮಾತನಾಡುತ್ತಿದ್ದೆ. ಕೇವಲ ಮೂರು ದಿವಸಗಳಲ್ಲಿ ಮೈಸೂರು ರಾಜ್ಯದಲ್ಲಿ ಲಂಚವನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆ. ಅದಕ್ಕೆ ನನ್ನ ಒಂದು ಸಲಹೆ ಇದೆ. ಈ ಪ್ರಜಾರಾಜ್ಯದಲ್ಲಿ ಪ್ರಜೆಗಳೇ ಎಲ್ಲರಿಗಿಂತ ದೊಡ್ಡವರು ಎಂದು ಎಲ್ಲರೂ ಮನಗಂಡಿದ್ದಾರೆ. ಈಗ ಸರ್ಕಾರದವರು ಲಂಚವನ್ನು ನಿರ್ಮೂಲ ಮಾಡಲು ಕೆಲವು ಇಲಾಖೆಗಳನ್ನು ನಿರ್ಮಾಣ ಮಾಡಿದ್ದಾರೆ. ಆದರೆ ಆ ಇಲಾಖೆಗಳಿಂದ ಸಾಧ್ಯವಾಗುವುದಿಲ್ಲ. ಈ ಲಂಚ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಪ್ರಜಾರಾಜ್ಯವೆನಿಸಿಕೊಳ್ಳುವುದಿಲ್ಲ. ಆದ್ದರಿಂದ ಲಂಚ ಕೇಳುವವರನ್ನು ಮತ್ತು ತೆಗೆದುಕೊಳ್ಳುವವರನ್ನು ಹಿಡಿಯುವುದಕ್ಕೆ ಸರ್ಕಾರದ ಅಧಿಕಾರಿಗಳ ಬದಲು ಪ್ರಜೆಗಳನ್ನೇ ನೇಮಕಮಾಡಿ ಅವರಿಗೇ ಅಧಿಕಾರ ಕೊಡಬೇಕೆಂದು ನನ್ನ ಸಲಹೆ. ಇದಕ್ಕಾಗಿ ಒಂದು ಸಮಿತಿ ನೇಮಕ ಮಾಡೋಣ. ಆ ಸಮಿತಿಯವರ ವರದಿಯನ್ನು ಪಡೆದು ಅದರಂತೆ ನಡೆಯೋಣ. ಇಲ್ಲದಿದ್ದರೆ ಈ ಲಂಚವೆನ್ನುವುದು ಇದೇ ರೀತಿ ನಡೆದುಕೊಂಡು ಹೋಗುತ್ತಿರುತ್ತದೆ.

ಇನ್ನು ಕೊನೆಯದಾಗಿ ಆಡಳಿತ ಭಾಷೆಯ ಬಗ್ಗೆ ಹೇಳುವುದಾದರೆ, ಮಾನ್ಯ ಸದಸ್ಯರಾದ ಶ್ರೀ ಹಂಪಿ ಶಿವಣ್ಣನವರು ಹೇಳಿದರು. ಕನ್ನಡದಲ್ಲಿ ಆಡಳಿತ ನಡೆಸುವುದಕ್ಕೆ ಬರದಿರುವವರು ನಮ್ಮ ರಾಜ್ಯದಲ್ಲಿ ಮಂತ್ರಿಗಳಾಗಿದ್ದಾರೆಂದು.

3-30 P.M.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಕನ್ನಡ ಬಾರದಿರುವವರು ಮೂರು ಜನ ಮಂತ್ರಿಗಳಾಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಎಲ್ಲಾ ಭಾಗಗಳಲ್ಲಿಯೂ ಕನ್ನಡವನ್ನೇ ಆಡಳಿತ ಭಾಷೆಯನ್ನಾಗಿ ಮಾಡಿ ಜನ ಗೆ ಪ್ರತಿಯೊಂದು ವಿಚಾರವೂ ತಿಳಿಯುವಂತೆ ಏರ್ಪಾಡಾಗಬೇಕು. ಈಗ ತಾಲ್ಲೂಕ್ ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲಾಗಿದೆಯೆಂದು ರಾಜ್ಯಪಾಲರು ತಮ್ಮ

ಭಾಷಣದಲ್ಲಿ ತಿಳಿಸಿದ್ದಾರೆ. ಯಾರಾದರು ಹಳ್ಳಿಯ ರೈತರು ತಾಲ್ಲೂಕ್ ಕಛೇರಿಗೆ ಅರ್ಜಿ ಕೊಡಲು ಹೋದರೆ ಅಲ್ಲಿಯ ಅಧಿಕಾರಿಗಳು ಇಂಗ್ಲೀಷ್‌ನಲ್ಲಿ ಮಾತನಾಡಿಕೊಳ್ಳುತ್ತಿರುತ್ತಾರೆ. ಅರ್ಜಿ ಕೊಡಲು ಹೋದ ರೈತರು ತಮ್ಮ ಅರ್ಜಿಯ ಬಗ್ಗೆ ಮಾತನಾಡುತ್ತಿದ್ದಾರೆಂದು ತಿಳಿದುಕೊಳ್ಳುತ್ತಾರೆ. ಆದರೆ ಆ ಅಧಿಕಾರಿಗಳು ಲಂಚವನ್ನು ಯಾವ ರೀತಿ ಹಂಚಿಕೊಳ್ಳಬೇಕೆಂದು ಮಾತನಾಡಿಕೊಳ್ಳುತ್ತಿರುತ್ತಾರೆ. ಆದ್ದರಿಂದ ಕನ್ನಡದಲ್ಲಿ ಸರಿಯಾಗಿ ವ್ಯವಹಾರವನ್ನು ಮಾಡದ ಅಧಿಕಾರಿಗಳ ಬಗ್ಗೆ ಸರ್ಕಾರದವರು ಉಗ್ರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ತಾವು ಮಹಾರಾಷ್ಟ್ರ ಏಕೀಕರಣ ಸಮಿತಿಯವರು. ತಾವು ಮಹಾಜನ್ ವರದಿಗೆ ವಿರೋಧವಾಗಿದ್ದೀರಿ. ಅಂದಮೇಲೆ ತಾವು ಆ ಪೀಠದಲ್ಲಿ ಕುಳಿತುಕೊಳ್ಳಬಹುದೇ ಎಂದು ಕೇಳುತ್ತೇನೆ.

Mr. CHAIRMAN.—It is totally irrelevant; I do not require any preaching from any side. I call upon the next member Sri Sanikop.

(Both Sri Bangarappa and Sri Sanikop were simultaneously addressing)

Let Sri Bangarappa kindly resume his seat. I will explain the position. When it was already 10 minutes I told the hon'ble Member that he might take 3 minutes more. Then he said he would take 5 minutes. Still I kept quiet. Then he took another 10 minutes and when I called upon him to conclude he requested me for one minute more but I gave him two minutes. I have been so lenient; what else can I do? Let the hon'ble member understand my position.

(Still both the hon'ble Members were speaking simultaneously)

Sri AZEEZ SAIT (Narasimharaja).—Sir, rightly or wrongly instead of 10 minutes the hon'ble Member Sri Bangarappa has taken 22 minutes. Please allow him a minute or two to conclude his speech and avoid all this confusion.

Mr. CHAIRMAN.—The hon'ble Member Sri Bangarappa will conclude his speech in a minute.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನನ್ನ ಭಾಷಣವನ್ನು ಮುಂದುವರಿಸುತ್ತಾ ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಇನ್ನು ಮುಂದೆ ಆಡಳಿತಪಕ್ಷದವರು ಕನ್ನಡದಲ್ಲಿಯೇ ತಮ್ಮ ಭಾಷಣವನ್ನು ಮಾಡಬೇಕು. ಇದರಿಂದ ಸಾಮಾನ್ಯ ಜನತೆಗೆ ಎಲ್ಲಾ ವಿಷಯಗಳನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಗವರ್ನರರು ಇಲ್ಲಿ ಮಾಡಿರುವ ಭಾಷಣಕ್ಕಾಗಿ ನಾನು ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಅಜೀಜ್ ಸೇಟ್.—ಅವರು ಓದುತ್ತಿದ್ದಾರೆ.

Mr. CHAIRMAN.—He is not reading. He is only referring to his Notes.

Sri AZEEZ SAIT.—He is reading.

Mr. CHAIRMAN.—Let the hon'ble member use more sober language and not violent language. Let us watch the Hon'ble member, see whether he his reading or speaking and then come to a decision.

ಶ್ರೀ ಬಿ. ಎಂ. ಸಾಣಿಕೊಪ್ಪ.—ನಾನು ಓದುತ್ತಿಲ್ಲ. ಬರೀ ಪಾಯಿಂಟುಗಳನ್ನು........

Sri AZEEZ SAIT.—Allow me to go there and sit and watch.

ಶ್ರೀ ಬಿ. ಎಂ. ಸಾಣಿಕೊಪ್ಪ.—ನಾನು ಓದುತ್ತಿಲ್ಲ.

Mr. CHAIRMAN.—The hon'ble member is at liberty to do so.

Sri D. B. KALMANKAR.—On a point of order, The hon'ble Member is reading..

Mr. CHAIRMAN.—No, he is only referring to his Notes.

ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು)—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಈ ಸಭೆಯಲ್ಲಿ ಮಾಡಿರುವ ಭಾಷಣ ಬಹಳ ಸ್ವಾಗತಾರ್ಹವಾದುದು ಮತ್ತು ಇದಕ್ಕಾಗಿ ವಂದನಾ ಪೂರ್ವಕವಾದ ನಿರ್ಣಯವನ್ನು ತಂದಿರುವುದನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ಗವರ್ನರ್‌ರವರು ತಮ್ಮ ಭಾಷಣದಲ್ಲಿ ಪಂಚಾಯಿತಿಗಳ ಸಂಖ್ಯೆ ಹಿಂದೆ ಇದ್ದುದಕ್ಕಿಂತಲೂ ಇಂದು ಹೆಚ್ಚಾಗುತ್ತಾ ಬರುತ್ತಿದೆ ಮತ್ತು ಇದರಿಂದ ಹಳ್ಳಿಗಳಲ್ಲಿ ಪ್ರಜಾ ಪ್ರಭುತ್ವ ನಿಜವಾಗಿಯೂ ಬೆಳೆಯುತ್ತಿದೆ. ಇದಕ್ಕೆ ತಕ್ಕಹಾಗೆ ಆಡಳಿತದಲ್ಲಿ ಇನ್ನೂ ಸುಧಾರಣೆ ಅಗಿಲ್ಲ ಎಂದು ಹೇಳಬಹುದು. ನಿಜವಾಗಿಯೂ ಕೆಲವು ಕಡೆಗಳಲ್ಲಿ ಉತ್ತಮವಾದ ಇಂಗ್ಲಿಷು ಬಲ್ಲ ಸೆಕ್ರೆಟರಿಗಳು ಅಕೌಂಟೆಂಟರುಗಳು ಇಲ್ಲ. ಆದುದರಿಂದ ಇಂಗ್ಲಿಷು ಬಲ್ಲ ಸೆಕ್ರೆಟರಿಗಳು ಹಾಗೂ ಅಕೌಂಟೆಂಟರುಗಳನ್ನು ಇಂತಹ ಪಂಚಾಯಿತಿಗಳಲ್ಲಿ ನೇಮಕ ಮಾಡಿದರೆ ಅವು ಇನ್ನೂ ಉತ್ತಮವಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ.

ಇನ್ನು ಭೂ ಕಂದಾಯದ ಬಗ್ಗೆ ಹೇಳುತ್ತಾ ಇದರಿಂದ ಬರುವ ಬಹು ಭಾಗ ಹಣವನ್ನೆಲ್ಲಾ ಆಯಾ ಪಂಚಾಯಿತಿಗಳಿಗೆ ಹಾಗೂ ತಾಲ್ಲೂಕು ಬೋರ್ಡುಗಳಿಗೇ ಕೊಡಬೇಕೆಂದು ಹೇಳಿರುವುದು ಒಂದು ಮಹತ್ವದ ಅಂಶ ಎಂದು ನಾನು ತಿಳಿಯುತ್ತೇನೆ. ಆದರೆ ಇದರಿಂದ ಬರುವ ದುಡ್ಡು ಸದ್ವಿನಿಯೋಗವಾಗುವಂತೆ ಸರಕಾರ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಕರ್ಣಾಟಕ ಮತ್ತು ಮಹಾರಾಷ್ಟ್ರದ ಗಡಿ ಸಮಸ್ಯೆ ಇದೆ. ಇದು ಸುಮಾರು ಕಳೆದ ಹತ್ತು ವರ್ಷಗಳಿಂದಲೂ ತೀರ್ಮಾನವಾಗದೇ ಹಾಗೇ ಉಳಿದಿದೆ. ಕೇಂದ್ರ ಸರಕಾರ 25-10-1966ರಲ್ಲಿ ಮಹಾಜನ ಕಮಿಷನ್ ನೇಮಕ ಮಾಡಿದರು ಮತ್ತು ಆ ಕಮಿಷನ್ನಿನವರು 4-10-1967ರಲ್ಲಿ ಅವರ ವರದಿಯನ್ನು ಕಳುಹಿಸಿದರು. ಇದರ ಬಗ್ಗೆ ನಮ್ಮ ವಿಧಾನ ಮಂಡಲದ ಈ ಸಭೆಯಲ್ಲಿ 1967ನೇ ಡಿಸೆಂಬರಿನಲ್ಲಿ ಮಹಾಜನ ಕಮಿಷನ್ನಿನ ತೀರ್ಪನ್ನು ಕೇಂದ್ರ ಸರಕಾರದವರು ಕೂಡಲೇ ಜಾರಿಗೆ ತರಬೇಕೆಂದು ಅವರಲ್ಲಿ ಒತ್ತಾಯ ತರುವ ಸಲುವಾಗಿ ಒಂದು ನಿರ್ಣಯವೂ ಕೂಡ ಸರ್ವಾನುಮತದಿಂದ ಪಾಸು ಮಾಡಿದೆವು. ಈ ವಿಷಯದಲ್ಲಿ ಗವರ್ನರ್‌ರವರು ಅವರ ಭಾಷಣದಲ್ಲಿ ಹೇಳಿರುವುದು ಸ್ವಾಗತಾರ್ಹವೂ ಮತ್ತು ಉತ್ತಮವೂ ಆದುದು ಎಂದು ನಾನು ಇಲ್ಲಿ ಹೇಳುತ್ತೇನೆ. ಇದರ ಬಗ್ಗೆ ನಾನು ಹೇಳುವುದು ಇಷ್ಟೆ. ಮಹಜನ್‌ರವರ ರಿಪೋರ್ಟನ್ನು ಕೇಂದ್ರ ಸರಕಾರದವರು ತೀವ್ರವಾಗಿ ಒಪ್ಪುವಂತೆ ಮಾಡಬೇಕು ಮಾಡದೇ ಇದ್ದರೆ ಜನತೆಗೆ ಅನ್ಯಾಯ ಮಾಡಿದಂತಾಗುತ್ತದೆ. ಕೇಂದ್ರ ಸರಕಾರದವರು ತೀವ್ರವಾಗಿ ಈ ವರದಿಯನ್ನು ತಡಮಾಡದೆ ಒಪ್ಪಬೇಕು. ಕೇಂದ್ರ ಸರಕಾರದ ಮೇಲೆ ತೀವ್ರವಾಗಿ ಒತ್ತಾಯ ಮಾಡಲು ಸೂಕ್ತವಾದ ಕಾರ್ಯಕ್ರಮಗಳನ್ನು ನಮ್ಮ ಸರಕಾರದವರು ಕೈಗೊಳ್ಳಬೇಕು ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಇನ್ನು ಆಡಳಿತದ ಮಟ್ಟದಲ್ಲಿ ಕನ್ನಡವು ಆಡಳಿತದ ಭಾಷೆಯಾಗಿ ಮಾಡಬೇಕೆಂದು ಮಾಡಿರುವುದು ನಿಜವಾಗಿಯೂ ಸೂಕ್ತವಾದದು. ಕರ್ಣಾಟಕ ರಾಜ್ಯದಲ್ಲಿ ಪ್ರಾಂತ ಮಟ್ಟದಲ್ಲಿ ಕನ್ನಡ ಆಡಳಿತ ಭಾಷೆ ಆಗಲು ತೀವ್ರ ಕ್ರಮ ಕೈಗೊಳ್ಳಬೇಕು, ಅಲ್ಲದೆ ನಮ್ಮ ರಾಜ್ಯಕ್ಕೆ 'ಕರ್ಣಾಟಕ' ಎನ್ನುವ ನಾಮಕರಣ ಬೇಗನೆ ಆಗಬೇಕು. ಕರ್ಣಾಟಕ ಎನ್ನುವ ನಾಮಕರಣವಾಗಬೇಕು ಎಂದು ಜನತೆಯೆಲ್ಲರೂ ಕೇಳಿಕೊಳ್ಳುತ್ತಿದ್ದಾರೆ ಮತ್ತು ಇದರಂತೆ ಒಂದು ಠರಾವು ಕೂಡ ಮಾಡಿದ್ದಾರೆ. ಮೈಸೂರು ಎನ್ನುವುದಕ್ಕೆ ಬದಲಾಗಿ 'ಕರ್ಣಾಟಕ' ಎಂದು ನಾಮಕರಣ ಮಾಡುವುದು ಎಲ್ಲ ರೀತಿಯಿಂದಲೂ ಸೂಕ್ತವಾಗಿದೆ. ಈಚೆಗೆ ಪೊಂಗಲ್ ದಿನದಿಂದ ನಮ್ಮ ನೆರೆ ರಾಜ್ಯವಾದ ಮದ್ರಾಸಿನವರು ತಮ್ಮ ರಾಜ್ಯಕ್ಕೆ ಇನ್ನು ಮುಂದೆ 'ತಮಿಳು ನಾಡು' ಎಂದು ಕೇಂದ್ರ ಸರಕಾರದ ಸಮ್ಮತಿಯಿಂದ ನಾಮಕರಣ ಮಾಡಿದ್ದಾರೆ ಇದೇ ರೀತಿ ನಮ್ಮ ಮೈಸೂರು ರಾಜ್ಯದವರೂ 'ಕರ್ಣಾಟಕ' ಎಂದು ನಾಮಕರಣ ಮಾಡಲು ಒಮ್ಮತದಿಂದ ನಿರ್ಣಯ ಮಾಡಿರುವಂತೆ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಸರಕಾರ ಈ ದಿಸೆಯಲ್ಲಿ ಅವಶ್ಯವಾದ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ.

ಅಭಾವ ಪರಿಸ್ಥಿತಿಯ ಸಲುವಾಗಿ ಸಾಕಷ್ಟು ಅಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಆದರೆ ಇನ್ನೂ ಅಗತ್ಯವಾದ ಕಾರ್ಯಕ್ರಮಗಳು ಎಷ್ಟು ಆಗಬೇಕೋ ಅಷ್ಟು ಆಗಿಲ್ಲ. ಅನೇಕ ಕೆಲಸಗಳು ರಸ್ತೆಗಳ ಬಾವಿಗಳ ಹಾಗೂ ಇನ್ನಿತರ ಕೆಲಸಗಳು ಆಗದೆ ಅರ್ಧದಲ್ಲೇ ನಿಂತು ಹೋಗಿವೆ ನಿಜವಾಗಿಯೂ ಜನರ ದುಡ್ಡು ಸರಕಾರಕ್ಕೆ ಬಂದಿರುವುದು ಅಪವ್ಯಯವಾಗಬಾರದು. ಆದುದರಿಂದ ಇನ್ನೂ ಉಳಿದಿರುವ ಎಲ್ಲಾ ಕೆಲಸಗಳನ್ನೂ ಸರಕಾರ ತೀವ್ರವಾಗಿ ಮಾಡಿ ಮುಗಿಸಬೇಕು. ಈಗೇನೂ ಮುಂಗಾರು ಮಳೆಯಿಂದಾಗಿ ಬೆಳೆಯಾಗಿ ಜನತೆಗೆ ಒಂದು ಇಷ್ಟು ಕಾಳು ಸಿಗುತ್ತದೆ, ಆದರೆ ನಿಜವಾಗಿಯೂ ನೋಡಿದರೆ ಎಷ್ಟು ಪ್ರಮಾಣದಲ್ಲಿ ಕಾಳು ಬೇಕೋ ಅಷ್ಟು ಪ್ರಮಾಣದಲ್ಲಿ ಕಾಳು ದೊರಕುತ್ತಿಲ್ಲ. ಮುಂಗಾರು ಮಳೆಯಿಂದಾಗಿ ಕೆಲವು ಕಡೆ ಅಷ್ಟು ಇಷ್ಟು ಬೆಳೆಯಾದವು. ಹಿಂಗಾರು ಮಳೆ ಸರಿಯಾಗಿ ಬಾರದೆ ಹಿಂಗಾರು ಪೀಕು ಸರಿಯಾಗಿ ಬರಲಿಲ್ಲ. ಆದರಲ್ಲೂ ನಮ್ಮ ಬೆಳಗಾಂವ್ ಭಾಗಗಳಾದ ಗೋಕಾಕ, ಬೈಲಹೊಂಗಲದ ವಣ್ಣೂರ್ ಇತ್ಯಾದಿ ಭಾಗಗಳಲ್ಲಿ ಸುಮಾರು ಐವತ್ತು ಹಳ್ಳಿಗಳಿಗಿಂತಲೂ ಮೇಲ್ಪಟ್ಟು ಇರುವ ಕಡೆಗಳಲ್ಲಿ ಇನ್ನೂ ಬೆಳೆಯಾಗದ ಬರಗಾಲದ ಪರಿಸ್ಥಿತಿಯಲ್ಲಿವೆ. ಇಲ್ಲಿ ಬೆಳೆ ಇಲ್ಲ ಎಂದು ಅವಶ್ಯಕವಾದ ಕೆಲಸಗಳನ್ನು ಜನರ ಅನುಕೂಲಕ್ಕಾಗಿ ಕೈ ಕೊಳ್ಳುವುದು ಅವಶ್ಯವಿದೆ ಇಂತಹ ಕೆಲಸಗಳನ್ನು ಕೈಗೊಂಡು ಜನತೆಗೆ ಸರಿಯಾದ ಪರಿಹಾರವಾಗುವ ರೀತಿಯಲ್ಲಿ ಈ ಬರಗಾಲದ ಕೆಲಸಗಳನ್ನು ಕೈಗೊಳ್ಳಬೇಕು. ಈ ಹಿಂದೆ ನಾವು ಈ ಅಸೆಂಬ್ಲಿಗೆ ಬಂದ ಕಾಲದಲ್ಲಿ ಸರಕಾರದವರು ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳಷ್ಟು ಬರಗಾಲದ ಪರಿಸ್ಥಿತಿಗಳಿಗಾಗಿ ಖರ್ಚು ಮಾಡಬೇಕೆಂದು ಒಂದು ಅಂದಾಜು ಮಾಡಿ ಆ ಪ್ರಕಾರ ಒಂದು ಠರಾವು ಕೂಡ ಮಾಡಬೇಕೆಂದು ಮಾಡಿದುದು ನೆನಪಿನಲ್ಲಿರಬಹುದು. ಬರಗಾಲದ ಪರಿಹಾರದ ಕೆಲಸಗಳನ್ನು ಮಾಡುವುದರ ಜೊತೆಗೆ ರೈತರಿಗೆ ಒಳ್ಳೆಯ ಬೀಜ ಹಾಗೂ ಗೊಬ್ಬರಗಳನ್ನು ಕೊಟ್ಟು ಸಹಾಯ ಮಾಡಿದರೆ ನಿಜವಾಗಿಯೂ ರೈತ ಹೆಚ್ಚು ಬೆಳೆ ಬೆಳೆಯಲು ಅವಕಾಶವಾಗುತ್ತದೆ.

ಎರಡನೇದು ಆಗ್ರೊ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಎಂದು ಈಚೆಗೆ ಮಾಡಿದ್ದಾರೆ. ಇದರ ಮೂಲಕ ಅಗ್ರಿಕಲ್ಚರಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಲು ಪ್ರಯತ್ನ ಮಾಡುತ್ತಿದ್ದಾರೆ. ಟ್ರಾಕ್ಟರುಗಳು ಹಾಗೂ ಪಂಪುಸೆಟ್ಟುಗಳು ಹಾಗೂ ಇನ್ನಿತರ ಸಾಮಾನುಗಳನ್ನು ರೈತರಿಗೆ ಸುಲಭ ಬೆಲೆಯಲ್ಲಿ ಒದಗಿಸಿಕೊಟ್ಟರೆ ಇದರಿಂದ ರೈತಾಪಿ ಜನ ಹೆಚ್ಚು ಬೆಳೆ ಬೆಳೆಯಲು ಅನುಕೂಲವಾಗುತ್ತದೆ ಮತ್ತು ಅಭಾವದ ಕಷ್ಟವೂ ನಿವಾರಣೆಯಾಗುತ್ತದೆ ಮತ್ತು ಇವರಿಗೆ ಸಹಕಾರ ಸೊಸೈಟಿಗಳ ಮೂಲಕ ಸಾಲಗಳು ಸರಿಯಾದ ರೀತಿಯಲ್ಲಿ ದೊರೆಯುವಂತೆ ಯೋಚನೆ ಮಾಡಬೇಕಾದುದು ಅವಶ್ಯಕ. ರೈತರಿಗೆ ಬೇಕಾದ ಟ್ರಾಕ್ಟರುಗಳು, ಪಂಪು ಸೆಟ್ಟುಗಳು ಹಾಗೂ ಅವಶ್ಯಕವಾಗಿ ಇದಕ್ಕೆ ಬೇಕಾದ ಆಯಿಲ್ ಇಂಜನ್‌ಗಳು ಇತ್ಯಾದಿ ಸಾಮಗ್ರಿಗಳನ್ನು ರೈತರಿಗೆ ಸಕಾಲದಲ್ಲಿ ಸುಲಭದರದಲ್ಲಿ ಮಹಾರಾಷ್ಟ್ರ ಸರಕಾರದವರು ಈಚೆಗೆ ಒದಗಿಸಿ ಕೊಡುತ್ತಿದ್ದಾರೆ. ಇದೇ ರೀತಿ ನಮ್ಮ ರಾಜ್ಯದಲ್ಲಿರುವ ರೈತರಿಗೂ ಇವೆಲ್ಲಾ ಸಾಮಗ್ರಿಗಳೂ ದೊರೆಯುವಂತೆ ಮಾಡಲು ಅವಶ್ಯಕವಾದ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಅರಣ್ಯಾಭಿವೃದ್ಧಿ ವಿಚಾರದಲ್ಲಿ ಹೇಳುವುದಾದರೆ ರಬ್ಬರ್ ಸಾಗುವಳಿಗೆ ಕೆಲವು ಸಲಹೆಗಳನ್ನು ಹೇಳಿದ್ದಾರೆ. ಈಗ ಇರುವ ತೋಟಗಳ ಜೊತೆಗೆ ಇನ್ನೂ ಹೆಚ್ಚಿನ ವಿಸ್ತೀರ್ಣದಲ್ಲಿ 3 ಸಾವಿರ ಎಕರೆಗೂ ಮೇಲ್ಪಟ್ಟು ಬೆಳೆಯಬೇಕು ಎನ್ನುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಖಾನಾಪೂರ ತಾಲ್ಲೂಕು ಭಾಗದಲ್ಲಿ ಹೆಚ್ಚಿಗೆ ರಬ್ಬರ್ ತೋಟಗಳನ್ನು ಬೆಳಸಲಿಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ಸಲಹೆ ಮಾಡುತ್ತೇನೆ.

ಇನ್ನು ಆಹಾರ ಧಾನ್ಯದ ಪೂರೈಕೆ ಬಗ್ಗೆ ಹೇಳುವುದಾದರೆ ನಮ್ಮ ಭಾಗದಲ್ಲಿ ನೀರಾವರಿ ಬಹಳ ಕಡಿಮೆ ಇದೆ. ಅಲ್ಲಿ ಗೋವಿನ ಜೋಳ ಸಾಕಷ್ಟು ಸಿಕುತ್ತದೆ. ಗೋವಿನ ಜೋಳವನ್ನು 3–4 ಲಕ್ಷ ಟನ್‌ಗಳವರೆಗೆ ಒಂದು ಅಂದಾಜು ಮಾಡಬಹುದು. ನೀವು ಬೆಂಗಳೂರು ಕೋಲಾರ ಇವರಿಗೆ ಅಕ್ಕಿ ಕೊಡಬೇಕಾದ್ದರಿಂದ ನಿಮಗೆ ಭತ್ತ ಬೇಕು. ಅದಕ್ಕಾಗಿ ನೀವು ಲೆವಿಯನ್ನು ಸಂಗ್ರಹ ಮಾಡಬೇಕಾದ್ದು ಅವಶ್ಯಕತೆ ಇದೆ. ಜನರು ಲೆವಿಯನ್ನು ಕೊಡುವುದಕ್ಕೆ ಹಿಂದು ಮುಂದು ನೋಡುತ್ತಿದ್ದಾರೆ. $1 - 1\frac{1}{2}$ ಕೋಟಿ ರೂಪಾಯಿ ಹೆಚ್ಚು ಖರ್ಚಾದರೂ ಪರವಾಗಿಲ್ಲ ಸರ್ಕಾರದವರು ಈ ಲೆವಿ ಪದ್ಧತಿಯನ್ನು ತೆಗೆದು ಬಜಾರದಲ್ಲಿ ಧಾನ್ಯವನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಳಗಾಂ ತಾಲ್ಲೂಕಿನ ಕಿತ್ತೂರು ಭಾಗ ಮತ್ತು ಖಾನಾಪುರದ ಕೆಲವು ಗ್ರಾಮಗಳಲ್ಲಿ ಬರಗಾಲ ಇದೆ ಅಲ್ಲಿ ಅರ್ಧದಷ್ಟು ಮುಕ್ಕಾಲು ಭಾಗದಷ್ಟು ಬರಗಾಲ ಇದೆ. ಅಲ್ಲಿ ಆಣೆವಾರಿಯಂತೆ ವಸೂಲ್ಮಾಡಬೇಕು ಎಂದು ಮಾಡಿದ್ದಾರೆ. ಸರ್ಕಾರದವರು ಅಲ್ಲಿಯ ಕಡೆಗೆ ಒಂದು ಹೆಚ್ಚಿನ ಗಮನ ಕೊಟ್ಟು 4 ಆಣೆ 6 ಆಣೆ ಬೆಳೆ ಇದ್ದಂಥ ಕಡೆ ನಿಜವಾಗಿ ಶಾಶ್ವತವಾದ

(ಶ್ರೀ ಬಿ. ಎಂ. ಸಾಣಿಕೊಪ್ಪ)

ಬರಗಾಲ ಇದ್ದ ಭಾಗದಲ್ಲಿ ಈ ಲೆವಿಯನ್ನು ಪೂರ್ಣವಾಗಿ ಮಾಫಿ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಇದರಲ್ಲಿ ಒಂದು ಅನ್ಯಾಯವಾಗಿದೆ ಏನೆಂದರೆ ಈ ಲೆವಿಯನ್ನು ಕಲೆಕ್ಟ್ ಮಾಡುವ ಬಗ್ಗೆ 1 ಎಕರೆಯಿಂದ 5 ಎಕರೆಯವರೆಗೆ 1 ಕ್ವಿಂಟಾಲ್ ಭತ್ತ ಕೊಡಬೇಕು, 5 ಎಕರೆಯಿಂದ 10 ಎಕರೆ ಇರುವವರಿಗೆ 2 ಕ್ವಿಂಟಾಲ್ ಭತ್ತ ಕೊಡಬೇಕು, 11 ಎಕರೆಯಿಂದ ಎಷ್ಟು ಇದ್ದರೂ 3 ಕ್ವಿಂಟಾಲ್ ಬತ್ತ ಕೊಡಬೇಕು ಎಂದು ಒಂದು ಅಂದಾಜು ಮಾಡಿದ್ದಾರೆ. ಒಬ್ಬ ರೈತನಿಗೆ ತನ್ನ ಜಮೀನಿನಲ್ಲಿ 20 ಕ್ವಿಂಟಾಲ್ ಭತ್ತ ಕೂಡ ಬೆಳೆದಿರುವುದಿಲ್ಲ, ಅವನಿಗೆ 50 ಕ್ವಿಂಟಾಲ್ ಭತ್ತ ಕೊಡಬೇಕು ಎಂದು ಮಾಡಿದ್ದಾರೆ. ಲೆವಿ ಕೊಡದಿದ್ದರೆ ಅವನಿಗೆ ನೋಟೀಸ್ ಕೊಡುತ್ತಾರೆ. ಉತ್ತರ ಕೊಡದಿದ್ದರೆ ಅವನಮೇಲೆ ಕೇಸು ಹಾಕುತ್ತಾರೆ. ಹೀಗೆಲ್ಲಾ ಹಿಂಸೆ ಕೊಡುತ್ತಾರೆ. ಇದನ್ನೆಲ್ಲಾ ವಿಚಾರಣೆ ಮಾಡಿ ಎಲ್ಲಿ ನಿಜವಾಗಿ ತೊಂದರೆ ಇದೆ ಅಲ್ಲಿ ನೋಡಿ ಅತನು ತನ್ನ ಹತ್ತಿರ ಹೆಚ್ಚಾಗಿ ಬೆಳೆದಿದ್ದರೆ ಅತನ ಮನೆಯವರಿಗೆ ಮತ್ತು ಅತನ ಆಳುಗಳಿಗೆ ಎಷ್ಟು ಬೇಕು ಎನ್ನುವುದನ್ನು ನೋಡಿ ಹೆಚ್ಚು ಇದ್ದರೆ ತೆಗೆದುಕೊಳ್ಳಿ. ಇದನ್ನು ಯೋಗ್ಯರೀತಿಯಿಂದ ಮಾಡಬೇಕು. ಈಗ ಇರತಕ್ಕಂಥ ಲೆವಿ ಸಿಸ್ಟಂನಲ್ಲಿ ತಪ್ಪು ಇದೆ, ಜನರ ಮೇಲೆ ದಬ್ಬಾಳಿಕೆ ಆಗಬಾರದು. ಆಹಾರ ಮಂತ್ರಿಗಳು ಆಹಾರಧಾನ್ಯಗಳನ್ನು ಸುಲಭ ದರದಲ್ಲಿ ಸಿಗುವಂತೆ ಮಾಡಲಿ. ಧಾರಣಿಗಳೇನು ಅಷ್ಟು ಹೆಚ್ಚಿಲ್ಲ. ಪೋಲೀಸಿನವರ ಲಂಚದಿಂದಲೋ ಅಥವಾ ಗಡಿ ಸಾಗಾಣಿಕೆಯಿಂದಲೋ ಅಲ್ಲಲ್ಲಿ ಆಹಾರ ಧಾನ್ಯಗಳ ದರ ಹೆಚ್ಚಾಗಿದೆಯೇ ವಿನಃ ಮತ್ತೇನೂ ಇಲ್ಲ. ಆದುದರಿಂದ ಗಡಿಯಲ್ಲಿ ಆಹಾರಧಾನ್ಯ ಸಾಗಾಣಿಕೆ ಆಗುವುದನ್ನು ತಡೆಗಟ್ಟಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

[MR. DEPUTY SPEAKER in the Chair]

ಇನ್ನು ಪ್ರಾಥಮಿಕ ಶಾಲಾ ಕಟ್ಟಡದ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ 133 ಹೊಸ ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡಿದೆ ಎಂದು. ನಿಜವಾಗಿಯೂ ನಮಗೆ ಸ್ವಾತಂತ್ರ್ಯ ಸಿಕ್ಕಿ 20 ವರ್ಷಗಳಾದರೂ ಕೂಡ ನಮ್ಮ ಮಕ್ಕಳಿಗೆ ಕೂಡಲಿಕ್ಕೆ ಸ್ಥಳವಿಲ್ಲ ಎಂದು ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ. ಆದುದರಿಂದ ಪ್ರಾಥಮಿಕ ಶಾಲಾ ಮಕ್ಕಳಿಗೆ ಕೂಡ ಕೂತುಕೊಳ್ಳುವುದಕ್ಕೆ ಬೇಕಾಗುವಂಥ ಶಾಲಾ ಕಟ್ಟಡಗಳನ್ನು ಹೆಚ್ಚು ಸಂಖ್ಯೆಯಲ್ಲಿ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಭಾರಿ ಪ್ರಮಾಣದ, ಮಧ್ಯಮ ಪ್ರಮಾಣದ ಹಾಗೂ ಚಿಕ್ಕ ಪ್ರಮಾಣದ ನೀರಾವರಿ ಯೋಜನೆಗಳ ವಿಷಯವಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ನಾನು ಇದರ ಬಗ್ಗೆ ಹೇಳುವುದಾದರೆ ಯಾವುದು ಅವಶ್ಯಕವಾಗಿ ಇರುತ್ತದೋ ಅಂಥ ಯೋಜನೆಗಳನ್ನೂ ಪೂರೈಕೆ ಮಾಡಿ ಮತ್ತು ಅರ್ಧದಲ್ಲಿರುವಂಥ ಕೆಲಸಗಳನ್ನು ಕೂಡ ಪೂರೈಕೆ ಮಾಡಿ ಅದಲ್ಲದೆ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳನ್ನೂ ತೀವ್ರಗತಿಯಲ್ಲಿ ಕಾರ್ಯಗತ ಮಾಡಬೇಕು. ಘಟಪ್ರಭಾ ಬಲದಂಡೆ ಯೋಜನೆಯನ್ನು ತೆಗೆದುಕೊಂಡು ಕಾರ್ಯಗತ ಮಾಡಿದರೆ 2 ಲಕ್ಷ ಎಕರೆ ಜಮೀನು ಸಾಗು ಆಗುತ್ತದೆ ಮತ್ತು ಮಲಪ್ರಭಾ ಎಡದಂಡೆ ಯೋಜನೆಯನ್ನು ಆರಂಭ ಮಾಡಿದರೆ ಸುಮಾರು 1 ಲಕ್ಷ ಎಕರೆ ಸಾಗು ಆಗುತ್ತದೆ. ಆ ಭಾಗದಲ್ಲಿ ಲಿಫ್ಟ್ ಇರ್ರಿಗೇಷನ್ ಮಾಡುವುದರಿಂದ ಲಕ್ಷಾಂತರ ಎಕರೆಗೆ ನೀರಾವರಿ ಆಗುತ್ತದೆ. ಇದರಿಂದ 1-2 ವರ್ಷದಲ್ಲಿ ಸರ್ಕಾರಕ್ಕೆ ಉಪಯೋಗವಾಗುತ್ತದೆ. ಇನ್ನು ವಿದ್ಯುಚ್ಛಕ್ತಿ ವಿಷಯದ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸಾಕಾದಷ್ಟು ವಿದ್ಯುತ್ ಇದೆ. 8 ಲಕ್ಷ ಕಿಲೋವಾಟ್‌ಗಳಷ್ಟು ವಿದ್ಯುತ್ ಇದೆ ಎಂದು ಹೇಳುತ್ತಾರೆ. ನಮ್ಮ ಜನರು ಐ. ಪಿ. ಸೆಟ್ಸ್ ಬೇಕು ಎಂದು ಬೇಡಿದರೆ ಹಣವಿಲ್ಲವೆಂದು ಹೇಳುತ್ತಾರೆ. ಆದರೆ ಸಿಂಡಿಕೇಟ್ ಬ್ಯಾಂಕಿನವರು ನೀವು ಒಂದು ವರ್ಷದಲ್ಲಿ ಎಷ್ಟು ವಿದ್ಯುತ್ ಕೊಡುತ್ತೀರೋ ಅಷ್ಟು ಐ. ಪಿ. ಸೆಟ್ಸ್‌ಗಳನ್ನು ನಾವು ಕೊಡುತ್ತೇವೆ ಎಂದು ಹೇಳುತ್ತಾರೆ. ಈ ವರ್ಷ ನಮ್ಮ ಬೆಳಗಾಂ ಜಿಲ್ಲೆಗೆ 1,500 ಪಂಪುಸೆಟ್ಟುಗಳನ್ನು ಒದಗಿಸಲು ಒಂದು ಅಂದಾಜು ಮಾಡಿದ್ದಾರೆ. ಸಿಂಡಿಕೇಟ್ ಬ್ಯಾಂಕಿನವರು 4,000 ಐ. ಪಿ. ಸೆಟ್ಟುಗಳು ಬೇಕಾದರೂ ನಾವು ಒದಗಿಸುತ್ತೇವೆ ಎಂದು ಹೇಳುತ್ತಾರೆ. ಇನ್ನೂ ಈ ದೇಶದಲ್ಲಿ ಸಹಕಾರಿ ಅಭಿವೃದ್ಧಿ ಆಗಿಲ್ಲ. ಇನ್ನೂ ತಾಂತ್ರಿಕ ಅಡಚಣೆ, ವಿದ್ಯುತ್ ಅಡಚಣೆ ಇದೆ. ತೀವ್ರಗತಿಯಲ್ಲಿ ಕೆಲಸ ಮಾಡಿದರೆ ಈವೊತ್ತು 20 ಸಾವಿರ ಪಂಪುಸೆಟ್ಟುಗಳನ್ನು ಬೇಕಾದರೂ ಪೂರೈಸಬಹುದು. ನಮ್ಮ ಜಿಲ್ಲೆಗೆ ಸರ್ಕಾರದ ಒಂದು ಅಂದಾಜಿನ ಪ್ರಕಾರ ಈ ವರ್ಷ 250 ಪಂಪುಸೆಟ್ಟು ಕೂಡ ಪೂರೈಸಿಲ್ಲ. ಇದನ್ನು ಮಾರ್ಚಿ ತಿಂಗಳಿನವರಗೆ ಆದರೂ ಪೂರೈಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಯೋಜನೆಯನ್ನು ಮುಂದಿನ ವರ್ಷಕ್ಕೆ ಮುಂದೂಡಿದರೆ ನಮ್ಮ

ಯೋಜನೆಗಳು ಅಷ್ಟು ಯಶಸ್ವಿಯಾಗುವುದಿಲ್ಲ. ಆದುದರಿಂದ ಸರ್ಕಾರದವರು ಇದನ್ನು ತೀವ್ರ ಗತಿಯಲ್ಲಿ ಮಾಡಿ ಜನರಿಗೆ ಒಂದು ಲಾಭ ದೊರಕುವಂತೆ ಮಾಡಿಕೊಡಬೇಕು. ದೇಶದಲ್ಲಿ ಯಾವ ಯೋಜನೆಗಳನ್ನು ಕೈಗೊಳ್ಳುತ್ತಾರೋ ಆ ಕೆಲಸಗಳನ್ನು ಪೂರೈಸುವಂತೆ ಮಾಡಬೇಕು ಎಂದು ಸಲಹೆ ಮಾಡಿ ನನಗೆ ಎರಡು ಮಾತುಗಳನ್ನು ಆಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ, ಈ ಸಭೆಯ ಎರಡೂ ಕಡೆಯ ಸ್ನೇಹಿತರು ರಾಜ್ಯಪಾಲರ ಭಾಷಣವನ್ನು ಸೊಗಸಾಗಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆದರೆ, ಶ್ರೀಮಾನ್ ಘೋರ್ಪಡೆಯವರು ನಮ್ಮ ವಿರೋಧ ಪಕ್ಷದವರು ಯಾವರೀತಿ ಮಾತನಾಡುತ್ತಾರೋ ಅದೇ ಧಾಟಿಯಲ್ಲಿ ಮಾತನಾಡಿದರು ಎಂದು ನನಗೆ ಅನಿಸುತ್ತದೆ. ಇನ್ನು ಮುಂದಾದರೂ ಒಂದು ನೀತಿ ನಿರೂಪಣೆಗಳ ಧೋರಣೆಗಳನ್ನು ಒಳಗೊಂಡಂಥ ಒಂದು ವರದಿಯನ್ನು ಈ ಸಭೆಗೆ ಒಪ್ಪಿಸುವಂಥ ಧ್ಯೇಯ ಸರ್ಕಾರ ಮಾಡಬೇಕು ಎಂದು ನಾನು ಅಭಿಪ್ರಾಯ ಪಡುತ್ತೇನೆ. ನಮ್ಮ ದೇಶದಲ್ಲಿ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕಾಂಗ್ರೆಸ್ ಪಕ್ಷದ ಸರ್ಕಾರಗಳೂ ಇವೆ, ಕಾಂಗ್ರೆಸ್ಸೇತರರ ಸರ್ಕಾರಗಳೂ ಇವೆ. ಕಾಂಗ್ರೆಸ್ಸೇತರ ಸರ್ಕಾರಗಳ ರಾಜ್ಯಪಾಲರ ಭಾಷಣವನ್ನು ತೆಗೆದುಕೊಂಡರೆ ಅಲ್ಲಿಯ ಧೋರಣೆಗಳು, ನೀತಿ ನಿರೂಪಣೆಗಳನ್ನು ಮಾಡಿರುವುದು ಕಂಡುಬರುತ್ತದೆ. ಎಲ್ಲಿ ಕಾಂಗ್ರೆಸ್ ಆಡಳಿತ ಇದೆಯೋ ಅಲ್ಲಿ ನೀತಿ ನಿರೂಪಣೆ, ಧ್ಯೇಯೋಧೋರಣೆಗಳ ನಿರೂಪಣೆ ಇಲ್ಲವೆಂದು ಹೇಳುತ್ತೇನೆ. ರಾಜ್ಯಪಾಲರ ಭಾಷಣವನ್ನು ವಿಮರ್ಶೆ ಮಾಡುವುದಕ್ಕಾಗಲಿ, ಟೀಕೆ ಮಾಡುವುದಕ್ಕಾಗಲಿ ಮುಖ್ಯವಾಗಿ ಬೇಕಾಗಿರುವುದು, ಒಂದು ನೀತಿ, ಒಂದು ಧ್ಯೇಯ, ಒಂದು ರೂಪು ಇರಬೇಕಾದುದು ಅಗತ್ಯ ಎಂದು ನನ್ನ ಅಭಿಪ್ರಾಯ. ಮುಖ್ಯವಾಗಿ ನಮ್ಮ ರಾಜ್ಯ ಯಾವ ದಿಸೆಯಲ್ಲಿ ಹೋಗುತ್ತಿದೆ, ಯಾವ ದಾರಿಯಲ್ಲಿ ಹೋಗುತ್ತದೆ, ಸರಿಯಾಗಿ ಹೋಗುತ್ತದೆಯೋ ಇಲ್ಲವೇ ಎನ್ನುವುದನ್ನು ತಿಳಿದುಕೊಳ್ಳಬೇಕಾದ್ದು ಅವಶ್ಯಕ. ಅಷ್ಟೇ ಅಲ್ಲ ನಮ್ಮ ಆರ್ಥಿಕ ಸ್ಥಿತಿ, ಆಡಳಿತದ ಬಲ ಕುಗ್ಗುತ್ತಾ ಇದೆಯೇ, ಜನರಿಗೆ ಉತ್ತಮ ಆಡಳಿತ ಸಿಕ್ಕುತ್ತದೆಯೇ, ಇಲ್ಲವೇ ಇದನ್ನೆಲ್ಲಾ ವಿಮರ್ಶೆ ಮಾಡಲು ನೀತಿ ಮತ್ತು ಧೋರಣೆ, ನಿರೂಪಣೆಗಳು ಇರಬೇಕಾದ್ದು ಅವಶ್ಯಕ. ಅದಲ್ಲದೆ ಈ ರೀತಿ ಬರೀ ಅಂಕಿಅಂಶಗಳನ್ನು ಕೊಟ್ಟರೆ ಸಾಧ್ಯವಿಲ್ಲ. ಇದನ್ನು ಇನ್ನು ಮುಂದಾದರೂ ಅವರು ಅರಿತುಕೊಳ್ಳಲಿ ಎಂದು ಮಾತ್ರ ಹೇಳಿ ರಾಜ್ಯಪಾಲರ ಭಾಷಣದಲ್ಲಿರುವ ಕೆಲವು ಅಂಶಗಳನ್ನು ಮಾತ್ರ ತಮ್ಮ ಮುಂದೆ ಇಡಲಿಕ್ಕೆ ಬಯಸುತ್ತೇನೆ.

4-00 P. M.

ಮೊದಲನೆಯದಾಗಿ ಇವೊತ್ತಿನ ದಿವಸ ಈ ಸರ್ಕಾರ ಹೇಳುವಂಥ ಧೋರಣೆ ಏನೆಂದರೆ, ಅವರು ಒಪ್ಪಿಕೊಂಡಿರುವ ಗುರಿ ಏನೆಂದರೆ, ನಮ್ಮ ದೇಶದಲ್ಲಿ ಸಮತಾವಾದ ಸಮಾಜವನ್ನು ಕಟ್ಟುತ್ತೇವೆ ಎನ್ನುವುದು. ನಮ್ಮ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಸಮತವಾದ ಸಮಾಜವನ್ನು ಕಟ್ಟುವುದಕ್ಕೆ ಎಷ್ಟು ದೂರ ಕೆಲಸ ಮಾಡಿದ್ದಾರೆ ಅದಕ್ಕೆ ಯಾವ ಯಾವ ಅನುಕೂಲಗಳನ್ನು ಕಲ್ಪಿಸಿದ್ದಾರೆ, ಅವರು ಹೋಗತಕ್ಕ ದಾರಿ ಸರಿಯಾಗಿದೆಯೇ ಎಂದು ನೋಡಬೇಕಾಗುತ್ತದೆ. ಸಮತಾವಾದ ಸಮಾಜವನ್ನು ಕಟ್ಟುವುದಕ್ಕೆ ಇವರು ಹೋಗುವ ಮಾರ್ಗ ಅನುಕೂಲವಾಗಿದೆ ಎಂದರೆ ಒಪ್ಪಿಕೊಳ್ಳಬಹುದು. ಆದರೆ ಇವರು ಹೆಚ್ಚು ಹೆಚ್ಚಾಗಿ ಶ್ರೀಮಂತರಿಗೆ, ಬಂಡವಾಳಗಾರರಿಗೆ ಬೆಂಬಲ ಕೊಡುತ್ತಿರುವುದರಿಂದ ಖಂಡಿತವಾಗಿಯೂ ಸಮತಾವಾದದ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಎರಡು ಮೂರು ಅಂಶಗಳನ್ನು ತಮ್ಮ ಮುಂದೆ ಇಡುವುದಕ್ಕೆ ಇಚ್ಛೆ ಪಡುತ್ತೇನೆ.

ಆಹಾರದ ವಿಚಾರದಲ್ಲಿ ಎಲ್ಲರಿಗೂ ಗೊತ್ತಿರುವ ವಿಷಯವೇನೆಂದರೆ ಆಹಾರ ಧಾನ್ಯಗಳ ಬೆಲೆಗಳು ದಿನೇ ದಿನೇ ಗಗನಕ್ಕೆ ಏರುತ್ತಿವೆ. ಆಹಾರದ ನೀತಿಯ ಬಗ್ಗೆ ರಾಜ್ಯಪಾಲರು ಏನೂ ಹೇಳಿಲ್ಲ. ಆಹಾರ ಧಾನ್ಯಗಳ ಬೆಲೆ ಏಕೆ ಜಾಸ್ತಿಯಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಸ್ಪೂಟ್ನಿಕ್ ಆದರೂ ಮೇಲೆ ಹೋದಮೇಲೆ ಕೆಳಕ್ಕೆ ಬರುತ್ತದೆ, ಆದರೆ ಆಹಾರ ಧಾನ್ಯಗಳ ಬೆಲೆ ಕೆಳಗೆ ಬರುವ ಪರಿಸ್ಥಿತಿ ಕಾಣುತ್ತಿಲ್ಲ. ಒಂದು ಕೆ. ಜಿ. ಸಕ್ಕರೆ ಬೆಲೆ ನಾಲ್ಕು ರೂಪಾಯಿ ಇದೆ, ಅಕ್ಕಿ ಒಂದು ಕೆ. ಜಿ. ಗೆ 1-80, 2 ರೂಪಾಯಿ, ಎರಡೂವರೆ ರೂಪಾಯಿ ಹೀಗೆ ಇದೆ. ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಬೆಲೆ ಏರಿಕೆಯನ್ನು ತಡೆಗಟ್ಟುವ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ರಾಜ್ಯಪಾಲರು ಏನಾದರೂ ಹೇಳಿದ್ದಾರೆಯೇ ಎಂದರೆ ಏನೂ ಇಲ್ಲ. ಸಕ್ಕರೆ ಕಾರ್ಖಾನೆ ಬಗ್ಗೆ ಹೇಳುವುದಕ್ಕೆ ಹೋದರೆ ಹಾಸ್ಯಾಸ್ಪದವಾಗಿದೆ. ಅನೇಕ ಸಕ್ಕರೆ ಕಾರ್ಖಾನೆಗಳಲ್ಲಿ ದುಡ್ಡನ್ನು ತಿಂದು ಹಾಕಿ ಅವು ಮುಚ್ಚಿ ಹೋಗುವ ಪರಿಸ್ಥಿತಿ ಬಂದಿದೆ.

(ಶ್ರೀ ಎಂ. ಎಸ್. ಕೃಷ್ಣನ್)

ಗೌರಿಬಿದನೂರು ಸಕ್ಕರೆ ಕಾರ್ಖಾನೆ ವಿಷಯ ತಮಗೆಲ್ಲ ಗೊತ್ತಿರುವುದೇ ಆಗಿದೆ. ಮಂಡ್ಯ ಕಾರ್ಖಾನೆಯಲ್ಲಿ ಬಿಕ್ಕಟ್ಟು ಬಂದಿವೆ. ಕಬ್ಬು ಬೆಳೆಯುವ ಮತ್ತು ಸಕ್ಕರೆ ತಯಾರಾಗುವ ಜಾಗದಲ್ಲಿಯೇ ಸಕ್ಕರೆ ಸಿಕ್ಕುವುದಿಲ್ಲ. ಇದಕ್ಕೆ ಕಾರಣವೇನು ? ಬೆಲೆ ಏರಿಕೆಗೆ ಕಾರಣವೇನು ! ಇದರ ಮೂಲವನ್ನು ಕಂಡು ಹಿಡಿದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ? ನಾವೆಲ್ಲ ನೋಡುತ್ತಿರುವ ಹಾಗೆ ಆಹಾರ ಧಾನ್ಯಗಳನ್ನು ಈಗ ಕೊಂಡುಕೊಳ್ಳುತ್ತಿರುವವರು ವ್ಯಾಪಾರಸ್ಥರು. ಅವರು ಅದಕ್ಕೆ ಬೇಕಾದ ಹಣವನ್ನು ಬ್ಯಾಂಕುಗಳಿಂದ ಅಡ್ವಾನ್ಸಾಗಿ ಪಡೆದು ಪದಾರ್ಥಗಳನ್ನು ಕಡಮೆ ಬೆಲೆಗೆ ಕೊಂಡು ಜಾಸ್ತಿ ಬೆಲೆಗೆ ಮಾರುತ್ತಿದ್ದಾರೆ. ಬ್ಯಾಂಕುಗಳು ಅಡ್ವಾನ್ಸ್ ಕೊಡುವುದನ್ನು ತಪ್ಪಿಸಬೇಕು. ಹೀಗೆ ಮಾಡಲು ಸರ್ಕಾರಕ್ಕೆ ಶಕ್ತಿ ಇದೆಯೇ ? ಇದನ್ನು ಮಾಡಬೇಕಾದರೆ ರಾಷ್ಟ್ರೀಕರಣ ಮಾಡಬೇಕಾಗುತ್ತದೆ. ಅದರ ಬಗ್ಗೆ ಯಾರೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಮೂಲಭೂತವಾಗಿ ಆಹಾರ ಧಾನ್ಯಗಳ ಬೆಲೆಗಳು ಕಡಮೆ ಆಗಬೇಕಾದರೆ ಬ್ಯಾಂಕುಗಳ ರಾಷ್ಟ್ರೀಕರಣವಾಗಬೇಕು, ಆಹಾರ ಧಾನ್ಯಗಳ ಕೊಳ್ಳುವಿಕೆಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು. ಇಲ್ಲದೆ ಇದ್ದರೆ ಒಂದು ಕಡೆ ರೈತನಿಗೂ ಅನುಕೂಲವಿಲ್ಲ, ಇನ್ನೊಂದು ಕಡೆ ಸಾಮಾನ್ಯ ಜನಗಳಿಗೆ, ಬಳಕೆದಾರರಿಗೂ ತೊಂದರೆ. ರೈತನಿಗೇನೋ ಪ್ರೊಕ್ಯೂರ್‌ಮೆಂಟ್ ಬೆಲೆ ಸ್ವಲ್ಪಮಟ್ಟಿಗೆ ಜಾಸ್ತಿ ಕೊಡಲಾಗಿದೆ ಎಂದು ಹೇಳುತ್ತಾರೆ. ನಾಲ್ಕೈದು ರೂಪಾಯಿ ಜಾಸ್ತಿ ಮಾಡಿದ್ದರೂ ಅವರಿಗೆ ಎಷ್ಟು ಬರಬಹುದೋ ಅಷ್ಟು ಬರುತ್ತಿಲ್ಲ. ಸರ್ಕಾರದವರೇ ಪೂರ್ತಿಯಾಗಿ ಪ್ರೊಕ್ಯೂರ್ ಮಾಡಿ ನ್ಯಾಯವಾದ ಬೆಲೆಗೆ ಮಾರಿದರೆ ಆವಾಗ ಯಾವ ಬೆಲೆಗೆ ಈಗ ಹೊರಗಡೆ ಮಾರಾಟವಾಗುತ್ತಿದೆಯೋ ಅದನ್ನು ಕಡಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹಿಂದೆ ಆಹಾರ ಮಂತ್ರಿಗಳಾದ ಮಾನ್ಯ ಜತ್ತಿಯವರು, ಸ್ವಲ್ಪ ಮಾತ್ರ ನಾವು ಪ್ರೊಕ್ಯೂರ್ ಮಾಡಿ ಮಿಕ್ಕದ್ದನ್ನು ಹಾಗೆಯೇ ಬಿಡುತ್ತೇವೆ ಎಂದು ಹೇಳಿದ್ದರು. ಇದರಿಂದ ಬ್ಲಾಕ್ ಮಾರ್ಕೆಟ್ಟಿನಲ್ಲಿ ಹೆಚ್ಚು ಬೆಲೆಗೆ ಅನುಕೂಲ ಮಾಡಿಕೊಳ್ಳುವವರಿಗೆ ಸರ್ಕಾರ ಷಾಮೀಲು ಆಗುತ್ತಿದೆ ಎಂದು ಹೇಳಬಹುದು. ಮೂಲಭೂತವಾದ ಆಹಾರ ಧಾನ್ಯಗಳ ವಹಿವಾಟನ್ನು ಸರ್ಕಾರವೇ ವಹಿಸಿಕೊಂಡು, ನ್ಯಾಯ ಬೆಲೆಯನ್ನು ರೈತನಿಗೆ ಕೊಡಬೇಕು ಮತ್ತು ನ್ಯಾಯ ಬೆಲೆಗೆ ಬಳಕೆದಾರನಿಗೆ ಮಾರಾಟ ಮಾಡಬೇಕು ಎನ್ನುವುದು ನನ್ನ ಸೂಚನೆ. ಇದನ್ನು ಮಾಡಬೇಕಾದರೆ ಬ್ಯಾಂಕುಗಳ ರಾಷ್ಟ್ರೀಕರಣ ಮಾಡಬೇಕು.

> "Although the food situation In the State is not satisfactory in all respects, at present, there is no cause for alarm or anxiety."

ಎಂದು ರಾಜ್ಯಪಾಲರು ಹೇಳಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಹೇಳುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಇನ್ನೂ ಆಹಾರ ಧಾನ್ಯಗಳ ಬೆಲೆಗಳು ಜಾಸ್ತಿಯಾಗುತ್ತವೆ, ಕಡಮೆಯಾಗುವ ಪರಿಸ್ಥಿತಿ ಇಲ್ಲ ಎನ್ನುವುದು ಸ್ಪಷ್ಟವಾದ ಅಭಿಪ್ರಾಯ. ಬೆಲೆಗಳನ್ನು ಕಡಮೆ ಮಾಡುವುದಕ್ಕೆ ಮೂಲಭೂತವಾದ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ತಯಾರಾಗಿರಬೇಕು.

ರಾಜ್ಯಪಾಲರು ಭೂಸುಧಾರಣೆಗಳ ಬಗ್ಗೆ ಸ್ವಲ್ಪಮಟ್ಟಿಗೆ ಮಾತನಾಡಿದ್ದಾರೆ. ನನ್ನ ಮಿತ್ರರಾದ ಬಂಗಾರಪ್ಪನವರು ಹೇಳಿದ್ದನ್ನು ನಾನು ಪೂರ್ತಿಯಾಗಿ ಒಪ್ಪಿಕೊಳ್ಳುತ್ತೇನೆ. ಭೂಸುಧಾರಣೆ ಮಾಡಿದರೆ ಮಾತ್ರ ಈ ದಿನ ನಮ್ಮ ದೇಶದಲ್ಲಿ ಆಹಾರ ಪರಿಸ್ಥಿತಿ ಉತ್ತಮಗೊಳ್ಳುವುದಕ್ಕೆ ಸಾಧ್ಯ. ಯಾರು ಬೆಳೆಯುತ್ತಾರೆ ಅವರಲ್ಲಿ ಹೆಚ್ಚು ಕ್ರಿಯಾಶೀಲ ಶಕ್ತಿ ಉಂಟು ಮಾಡಿದರೆ ಆಗ ಹೆಚ್ಚು ಬೆಳೆಯುವುದಕ್ಕೆ ಸಾಧ್ಯ. ಯಾರಿಗೆ ಭೂಮಿ ಇಲ್ಲವೋ ಅವರಿಗೆ ಭೂಮಿ ಕೊಡಬೇಕು. ನಮ್ಮ ದೇಶದಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಶ್ರೀಮಂತ ರೈತರು ಹೆಚ್ಚು ಹೆಚ್ಚು ಶ್ರೀಮಂತರಾಗುತ್ತಿದ್ದಾರೆ. ಮೊರಾರ್ಜಿ ದೇಸಾಯಿ ಅವರು ಬ್ಯಾಂಕುಗಳ ಮೇಲೆ ಸಾಮಾಜಿಕ ನಿಯಂತ್ರಣ ತಂದರು. ಅದು ಬಂದನಂತರ ನಮ್ಮ ರಾಜ್ಯದಲ್ಲಿ ಬ್ಯಾಂಕುಗಳು ಹೆಚ್ಚು ಹೆಚ್ಚು ಹಣವನ್ನು ಶ್ರೀಮಂತ ರೈತರಿಗೆ ಕೊಡುತ್ತಿದೆ. ಅವರು ಇದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ಬಡವರು ಇನ್ನೂ ಬಡವರಾಗುತ್ತಿದ್ದಾರೆ. ಅವರು ತಮ್ಮ ಜಮೀನುಗಳನ್ನು ಮಾರಿಕೊಂಡು ನಗರಗಳಿಗೆ ಬರತಕ್ಕ ಪರಿಸ್ಥಿತಿ ಬಂದಿದೆ. ರೈತರ ಪರಿಸ್ಥಿತಿ ತೀಕ್ಷ್ಣವಾಗುತ್ತಿದೆ. ಮೊನ್ನೆ ಮೈಸೂರಿನಲ್ಲಿ ಕೇಂದ್ರದ ಮಂತ್ರಿಗಳಾದ ಶ್ರೀಮಾನ್ ಗುರುಪಾದಸ್ವಾಮಿ ಅವರು ಮಾತನಾಡುತ್ತ ಶ್ರೀಮಂತ ರೈತರಿಗೆ ಮತ್ತು ಭೂಮಾಲೀಕರಿಗೆ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಸರ್ಕಾರದವರು ಶ್ರೀಮಂತ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಹೋಗಬಾರದು, ಯಾರಿಗೆ ಭೂಮಿ ಇಲ್ಲ ಅವರಿಗೆ ಭೂಮಿ

ಯನ್ನು ಕೊಡಬೇಕು. ಇಂಥ ದಿಟ್ಟತನದ ಧೋರಣೆಯನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿಲ್ಲ.

ಭೂಸುಧಾರಣೆ ಮಸೂದೆ ಬರೀ ಪುಸ್ತಕದಲ್ಲಿದೆ. ಅದು ಕಾರ್ಯಗತವಾಗಿಲ್ಲ. ಈಗ ಇರುವ ಕಾನೂನು ಕೂಡ ಸಮರ್ಪಕವಾಗಿಲ್ಲ. ಬೊಂಬಾಯಿ ಕರ್ಣಾಟಕದಲ್ಲಿ ಭೂಸುಧಾರಣೆ ಒಂದು ರೀತಿಯಾಗಿತ್ತು. ನಮ್ಮ ಭೂಸುಧಾರಣಾ ಕಾನೂನು ಸಮರ್ಪಕವಾಗಿಲ್ಲ, ಅದನ್ನು ಕೂಡ ಜಾರಿಗೆ ತಂದಿಲ್ಲ. ಇದರ ಬಗ್ಗೆ ರಾಜ್ಯಪಾಲರು ಒಂದು ಸೂಚನೆಯನ್ನು ಕೊಟ್ಟು ಪಂಚಾಯಿತಿಗಳಿಗೆ ಭೂಸುಧಾರಣೆ ಜಾರಿಗೆ ತರುವುದಕ್ಕೆ ಅವಕಾಶ ಕೊಡಬೇಕು, ಇದನ್ನು ಯೋಚನೆ ಮಾಡಬೇಕು ಎಂದು ಹೇಳಿದ್ದಾರೆ. ಎಲ್ಲಿಂದ ಈ ಯೋಚನೆ ಬಂತು, ಯಾರು ಯೋಚನೆ ಮಾಡಿದರು ? ಇದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಪಂಚಾಯಿತಿಗಳು ಈ ದಿವಸ ಡೆಲಿಬರೇಟಿವ್ ಬಾಡಿ, ಎಕ್ಸಿಕ್ಯೂಟಿವ್ ಬಾಡಿ ಅಲ್ಲ. ಅವರಿಗೆ ಈ ಕೆಲಸವನ್ನು ವಹಿಸುವುದು ಹೇಗೆ ಎನ್ನುವುದೇ ಪ್ರಶ್ನೆ. ಈಗ ಪಂಚಾಯಿತಿಗಳಲ್ಲಿ ಯಾರಿದ್ದಾರೆ, ಪಂಚಾಯಿತಿಗಳ ಆಡಳಿತ ನಡೆಸುವವರು ಯಾರು ಎಂದರೆ ನನಗೆ ತಿಳಿದಮಟ್ಟಿಗೆ ಬಹುಭಾಗದಲ್ಲಿ ಭೂಮಾಲೀಕರೇ ಇದ್ದಾರೆ. ಯಾರಿಗೆ ಭೂಮಿ ಇಲ್ಲ, ಯಾರು ಕೃಷಿ ಕಾರ್ಮಿಕರು ಅಂಥವರಿಗೆ ಎಷ್ಟು ಪಂಚಾಯಿತಿಗಳಲ್ಲಿ ಜಾಗವಿವೆ, ಎಷ್ಟು ಪಂಚಾಯಿತಿಗಳಲ್ಲಿ ಅವರು ಚೇರ್‌ಮನ್, ವೈಸ್ ಚೇರ್ಮನ್ ಆಗಿದ್ದಾರೆ ! ನನಗೆ ತಿಳಿದಮಟ್ಟಿಗೆ ಸಾಮಾನ್ಯ ಜನಗಳಿಗೆ ಅಲ್ಲಿ ಜಾಗವಿಲ್ಲ. ಶ್ರೀಮಂತರು, ದೊಡ್ಡ ದೊಡ್ಡ ಭೂಮಾಲೀಕರು ಮಾತ್ರ ಪಂಚಾಯಿತಿ ಮೆಂಬರುಗಳಾಗಿದ್ದಾರೆ. ಅವರಿಂದ ಭೂಸುಧಾರಣೆ ಜಾರಿಗೆ ಬರಬೇಕು ಎಂದರೆ ರೈತರಿಗೆ ಅನುಕೂಲವಾಗುತ್ತದೆಯೋ ಎಂದು ಯೋಚನೆ ಮಾಡಬೇಕು. ರೈತರಿಗೆ ಏನೂ ಅನುಕೂಲವಾಗುವುದಿಲ್ಲ ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ವಿವೇಚನೆ ಇಲ್ಲದ ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಹೇಳುವುದಕ್ಕೆ ಬೆಂಬಲ ಕೊಡುವ ರೀತಿಯಲ್ಲಿ ಸರ್ಕಾರದ ಡಿಪಾರ್ಟ್‌ಮೆಂಟ್ ಆಫ್ ಕಮ್ಯೂನಿಟಿ ಡೆವಲಪ್‌ಮೆಂಟಿನವರು ಒಂದು ಸ್ಟಡಿ ಟೀಮನ್ನು ಕಳಿಸಿದ್ದು ಅವರು ಸ್ಪಷ್ಟವಾಗಿ ಏನು ಹೇಳಿದ್ದಾರೆ ಎಂದರೆ :

> "The Study team considers it unnecessary to organise the tenants into formal articulate groups through legislative action. It is however, of the view that in many areas Panchayat Raj bodies today are dominated by landed interests, money lenders and higher castes. These bodies could not be expected to safeguard the interests of the rural tenantry comprising mainly the weaker sections of the community. Before the Panchayat Raj Institutions were entrusted with even advisory functions in the matter of implementation of land reforms effective and adequate representation of the weaker sections of the community on these bodies had to be ensured."

ಇದು ಬಹಳ ಉತ್ತಮವಾದ ಸಲಹೆ ಎಂಬ ಅಭಿಪ್ರಾಯವಿದೆ. ವೀಕರ್ ಸೆಕ್ಷನ್ ಕೇಳಿ ಒಂದು ಸರಿಯಾದ ಕ್ರಮ ತೆಗೆದುಕೊಳ್ಳುವುದನ್ನು ಯೋಚನೆ ಮಾಡಬೇಕು. ಕೇಂದ್ರ ಸರಕಾರದ ಸ್ಟಡಿ ಟೀಂ ಇದನ್ನು ಹೇಳಿದೆ.

ಮೂರನೆಯದಾಗಿ ಕೈಗಾರಿಕೆಗಳ ಬಗ್ಗೆ ಎರಡು ಮಾತು ಹೇಳಬೇಕಾಗಿದೆ. ರಾಜ್ಯಪಾಲರು ಹೇಳಿರುವುದನ್ನು ನೋಡಿದರೆ ಎಲ್ಲಾ ಕೈಗಾರಿಕೆಗಳೂ ಉತ್ತಮವಾಗಿ ನಡೆಯುತ್ತಿರುವಂತೆ ತಿಳಿದುಬರುತ್ತದೆ. ಅವುಗಳ ಕೆಲಸ ತೃಪ್ತಿಕರವಾಗಿದೆ ಎಂದು ತಿಳಿಸಿದ್ದಾರೆ, ತೃಪ್ತಿಕರವಾಗಿದೆ ಎಂಬ ಪದ ಸುಮಾರು 18 ಸಲ ಹೇಳಲಾಗಿದೆ. ಆದರೆ ಅದು ನಿಜಾಂಶವಲ್ಲ. ಕೈಗಾರಿಕೆಗಳು ಇಂದು ಸಮರ್ಪಕವಾಗಿ ನಡೆಯುತ್ತಿವೆಯೋ ಎಂಬುದನ್ನು ವಿಮರ್ಶೆ ಮಾಡಬೇಕಾಗಿದೆ. ಸರಕಾರದವರೇನೋ ಒಂದು ಸಮಿತಿಯನ್ನು ಮಾಡಿದ್ದಾರೆ. ಅದರಲ್ಲಿ ಉನ್ನತರಾದ ಅಧಿಕಾರಿಗಳು ಕೆಲವರಿದ್ದಾರೆ. ಕೈಗಾರಿಕೆಗಳು ಜಾಸ್ತಿಯಾಗಿಲ್ಲ ಎಂದು ಹೆಚ್ಚಿಗೆ ಪ್ರಾರಂಭವಾಗುವಂತೆ ಪ್ರಯತ್ನಪಟ್ಟಿದ್ದಾರೆ. ಶ್ರೀ ವೀರೇಂದ್ರ ಪಾಟೀಲರೂ ಮತ್ತು ಶ್ರೀ ನಿಜಲಿಂಗಪ್ಪನವರೂ ದೇಶದಲ್ಲೆಲ್ಲಾ ಸಂಚಾರ ಮಾಡಿ ಬಂದು ಹೊರಗಿನವರು ಬಂದು ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವಂತೆ ಕೇಳಿಕೊಂಡಿದ್ದಾರೆ. ಮುಂದೆ ನಮ್ಮಲ್ಲಿ ಕೈಗಾರಿಕೆಗಳು ಹೆಚ್ಚುವುವು ಎಂದು ಹೇಳುತ್ತಿದ್ದಾರೆ.

(ಶ್ರೀ ಎಂ. ಎಸ್. ಕೃಷ್ಣನ್)

ಆದರೆ ಸರಕಾರಿ ಕೈಗಾರಿಕೆಗಳು ಹೇಗೆ ನಮ್ಮಲ್ಲಿ ನಡೆಯುತ್ತಿವೆಯೆಂಬುದನ್ನು ಮೊದಲು ನೋಡಬೇಕಾಗಿದೆ. ರೆಂಕೋ ಕೈಗಾರಿಕೆಯ ಬಗ್ಗೆ ವರದಿ ಬಂದಿದೆ, ಅದು ಪ್ರತಿ ವರ್ಷವೂ ನಷ್ಟದಲ್ಲಿ ಕೆಲಸ ಮಾಡುತ್ತಿದೆ. ಅದಕ್ಕೆ ಹೊಣೆ ಯಾರು ಎಂಬುದನ್ನು ಕಂಡು ಹಿಡಿಯಬೇಕು. ಹಾಗೆ ಮಾಡಿ ಅದನ್ನು ಉತ್ತಮಪಡಿಸದೆ ಬಿರ್ಲಾರವರಿಗೆ ಅದನ್ನು ಮಾರಬೇಕೆಂದಿದ್ದಾರೆ. ಹಿಂದೆ ಈ ವಿಚಾರ ಪ್ರಸ್ತಾಪ ಮಾಡಿದಾಗ ಶ್ರೀ ರಾಜಶೇಖರ ಮೂರ್ತಿಯವರು ಉತ್ತರ ಕೊಡಲಿಲ್ಲ. ಎನ್ ಜಿ ಇ ಎಫ್ ನಲ್ಲೂ ಕೋಟಿ ಗಟ್ಟಲೆ ನಷ್ಟವಾಗುತ್ತಿದೆ. ಎಂ ಎಸ್ ಕೆ ಮಿಲ್ಲಿನಲ್ಲೂ ಎಷ್ಟೋ ಲಕ್ಷ ನಷ್ಟವಾಗಿದೆ. ರಾಜಾ ಮಿಲ್ಲು ಮತ್ತು ಮಿನರ್ವ ಮಿಲ್ಲುಗಳಲ್ಲಿ ಸರಕಾರ ಲಕ್ಷಗಟ್ಟಲೆ ಬಂಡವಾಳ ಹಾಕಿರುವಾಗ ಅವು ಹೇಗೆ ನಡೆಯುತ್ತಿವೆಯೆಂದು ಪರಿಶೀಲನೆ ಮಾಡುತ್ತಿಲ್ಲ. ಟೆಕ್ಸ್‌ಟೈಲ್ಸ್‌ನಲ್ಲೂ, ಗೋರಿಬಿದನೂರು ಸಕ್ಕರೆ ಕಾರ್ಖಾನೆ ಮುಂತಾದ ಎಲ್ಲಾ ಕಡೆಯೂ ನಷ್ಟವಾಗುತ್ತಿದೆ. ಯಾವುದು ಸರಿಯಾಗಿ ನಡೆಯುತ್ತಿಲ್ಲ. ಸರಕಾರ ಕೊಡುವ ಭರವಸೆಯನ್ನು ಕಾರ್ಯಗತ ಮಾಡಬೇಕು. ಪಬ್ಲಿಕ್ ಸೆಕ್ಟಾರ್ ಆಗಲಿ ಅಥವಾ ಪ್ರೈವೇಟ್ ಸೆಕ್ಟಾರಾಗಲಿ, ಯಾವುದೇ ಆದರೂ ಸರಕಾರ ತನ್ನ ಭಾಗದ ಕರ್ತವ್ಯವನ್ನು ಮಾಡಲೇಬೇಕು. ಮೈಸೂರು ಫ್ರೂಟ್ ಪ್ರಾಡಕ್ಟ್ ಕೈಗಾರಿಕೆ ಸ್ಥಾಪಿಸಲು ಒಬ್ಬರು ಮುಂದೆ ಬಂದಾಗ ಅವರಿಗೆ ಲೈಸೆನ್ಸ್ ವಗೈರೆ ಸೌಲಭ್ಯ ಕೊಡುವುದಾಗಿ ಹೇಳಿ ಅವರು ಅದಕ್ಕೆ ಬೇಕಾದ್ದನ್ನು ಕೊಂಡಮೇಲೆ ಅವರಿಗೆ ಲೈಸೆನ್ಸ್ ಕೊಟ್ಟಿಲ್ಲ. ಲಿಕ್ಕರ್ ಮುಂತಾದ್ದು ತಯಾರಿಸಲು ಲೈಸೆನ್ಸ್ ಕೊಡುವುದಾಗಿ ಮುಂದೆ ಹೇಳಿದ್ದರು. ಇದರಿಂದ ನಂಬಿಕೆಗೆ ಅರ್ಹರು ಎಂದು ಸರಕಾರವನ್ನು ನಂಬುವುದು ಹೇಗೆ? ಲಕ್ಷಾಂತರ ರೂಪಾಯಿಗಳನ್ನು ಕಾಂಗ್ರೆಸ್ ಚುನಾವಣೆ ಫಂಡಿಗೆ ಪಡೆದು ಕೈಗಾರಿಕೆ ಸ್ಥಾಪಿಸಲು ಮೈಸೂರಿಗೆ ಬಂದವರಿಗೆ ಲೈಸೆನ್ಸ್ ಕೊಟ್ಟಿಲ್ಲ. ಕಿರ್ಲೋಸ್ಕರ್ ಕಂಪೆನಿ ವಿಚಾರದಲ್ಲೂ ಕೂಡ ಇದೇ ರೀತಿ ಮಾಡಿದ್ದಾರೆ. ಎನ್ ಜಿ ಇ ಎಫ್ ನಲ್ಲೂ ಲಾಭ ಇಲ್ಲ. ಇರುವ ಕೈಗಾರಿಕೆಗಳನ್ನು ಬಲಪಡಿಸುವುದಕ್ಕೆ ಮೊದಲು ಸರಕಾರ ಗಮನ ಕೊಡಬೇಕು. ಎರಡನೆಯದಾಗಿ ಆಶೋತ್ತರ ಕೊಟ್ಟಿರುವುದನ್ನು ಕಾರ್ಯಗತ ಮಾಡಬೇಕು. ಅಮೇರಿಕಾ, ವೆಸ್ಟ್ ಜರ್ಮನಿ ಕಡೆ ನೋಡುವರೇ ಹೊರತು ಸಮತಾವಾದದ ಮಾತನಾಡುವವರು ನಮ್ಮ ದೇಶದಲ್ಲೇ ಇರುವವರು ಕೈಗಾರಿಕೆ ಸ್ಥಾಪಿಸಲು ಸಿದ್ಧವಾಗಿರುವಾಗ ಅವರಿಗೆ ಅವಕಾಶ ಸಾಕಷ್ಟು ಕೊಡುತ್ತಿಲ್ಲ. ಬಿರ್ಲಾರವರನ್ನು ಕೇಳುವುದೇಕೆ? ನೀವು ನಿಜವಾಗಿಯೂ ಕೂಡ ಸಮತಾವಾದ ನೀತಿಯನ್ನು ಅನುಷ್ಠಾನಕ್ಕೆ ಸರಿಯಾಗಿ ತರುತ್ತಿಲ್ಲ. ಇದರಿಂದ ಮುಗ್ಗಟ್ಟು ಹೆಚ್ಚಾಗುತ್ತಿದೆ.

ಇನ್ನು ಕಾರ್ಮಿಕರ ವಿಷಯ. ಇದರ ಬಗ್ಗೆ ಸರಿಯಾದ ನೀತಿಯನ್ನನುಸರಿಸುತ್ತಿಲ್ಲ. ಈ ಸಂಬಂಧದಲ್ಲಿ ಎರಡು ವಿಚಾರಗಳನ್ನು ಗಮನಕ್ಕೆ ತರಬೇಕಾಗಿದೆ. ವೇಜ್ ಬೋರ್ಡಿನ ತೀರ್ಮಾನವನ್ನು ಸರಕಾರ ಜಾರಿಗೆ ತರುತ್ತಿಲ್ಲ. ಅದನ್ನು ಜಾರಿಗೆ ತರದವರಮೇಲೇಕೆ ಕ್ರಮ ತೆಗೆದುಕೊಂಡಿಲ್ಲ? ಎಷ್ಟು ಕಡೆ ವೇಜ್ ಬೋರ್ಡಿನ ಸಿಫಾರಸು ಜಾರಿಗೆ ಬಂದಿದೆ? ಅದನ್ನು ಜಾರಿಗೆ ಕೊಡದಿದ್ದರೆ ಮುಗ್ಗಟ್ಟು ಜಾಸ್ತಿಯಾಗುತ್ತದೆ. ಕೆಲಸಗಾರರಿಗೆ ಮಾಲೀಕರಿಂದ ತೊಂದರೆಯಾಗುತ್ತಿದೆ. 15 ದಿವಸಗಳವರೆಗೆ ಕೆಲವು ಕೈಗಾರಿಕೆಗಳು ಕೆಲಸಮಾಡದೆ ಮುಚ್ಚಲ್ಪಟ್ಟಿವೆ. ಶ್ರೀ ಪುಟ್ಟಸ್ವಾಮಿಯವರಿಗೆ ಕಾರ್ಮಿಕರ ಬಗ್ಗೆ ಸರಿಯಾದ ಅಭಿಪ್ರಾಯವೇ ಇಲ್ಲ, ಕಾರ್ಮಿಕರಿಗೆ ನ್ಯಾಯ ದೊರಕಿಸಬೇಕೆಂಬ ಅಭಿಪ್ರಾಯ ಅವರಿಗಿಲ್ಲ. ಅವರಿಗೆ ಬೇಡದಿರುವ ಪೋರ್ಟ್‌ಫೋಲಿಯೋ ಕೊಟ್ಟಿದ್ದಾರೆ. ಹಿಂದೆ ಶ್ರೀ ದೇವರಾಜ ಅರಸಿನವರಿಗೂ ಹೀಗೆಯೇ ಆಗಿತ್ತು, ಈ ಇಲಾಖೆ ಅವರಿಗೆ ತಲೆನೋವಾಗಿತ್ತು. ಮುಖ್ಯವಾಗಿ ಕಾರ್ಮಿಕರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ನೌಕರರು 8—10 ದಿವಸಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಅಲ್ಲಿ 20 ಜನರನ್ನು ಕೆಲಸದಿಂದ ತೆಗೆದಿದ್ದಾರೆ. ಕೆಲಸಗಾರರದೇನೂ ತಪ್ಪಿಲ್ಲ, ಮಾಲೀಕರ ತಪ್ಪಿದೆ. ಶ್ರೀ ಪುಟ್ಟಸ್ವಾಮಿಯವರಿಗೆ ಇದನ್ನು ಹೇಳಿದರೆ ಅವರು ಒಪ್ಪುವುದಿಲ್ಲ. ಕಾಂಗ್ರೆಸ್ ಚುನಾವಣಾ ಫಂಡಿಗೆ ಪ್ರೆಸ್‌ನವರು ಹಣ ಕೊಡುವುದರಿಂದ ಕೆಲಸಗಾರರಿಗೆ ನ್ಯಾಯ ದೊರಕಲು ಯಾರೂ ಆಸಕ್ತಿವಹಿಸುತ್ತಿಲ್ಲ. ಪರಿಹಾರ ಕೊಡುವುದಕ್ಕೆ 3 ವರ್ಷ ತೆಗೆದುಕೊಳ್ಳುತ್ತಾರೆ. ಸರ್ಟಿಫಿಕೇಟನ್ನು ಲೇಬರ್ ಕಮಿಷನರಿಂದ ತಂದರೆ, ಕೋರ್ಟಿಗೆ ಹೋದರೆ ಪರಿಹಾರ ದೊರೆಯುವುದು. ಶ್ರೀ ಎಂ. ಎಸ್. ರಾಮಯ್ಯನವರು ಬಹಳ ದೊಡ್ಡ ಜನ. ಅವರು ಕಾಂಗ್ರೆಸ್ಸಿನ ಎಲೆಕ್ಷನ್ ಫಂಡಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಪರಿಸ್ಥಿತಿ ಹೀಗಿರುವುದರಿಂದ ಕಾರ್ಮಿಕರ ಬಗ್ಗೆ ಸರಿಯಾದ ಗಮನವಿಲ್ಲ, ಇಂಥ ವಿಚಿತ್ರ ಪರಿಸ್ಥಿತಿ ಇದೆ. ಇದರಿಂದ ಬಿಕ್ಕಟ್ಟು ಜಾಸ್ತಿಯಾಗುತ್ತಿದೆ.

ಶ್ರೀಮಾನ್ ಘೋರ್ಪಡೆಯವರು ಬೆಂಗಳೂರು ನೀರಿನ ಸಮಸ್ಯೆ ಬಗ್ಗೆ ಹೇಳಿದ್ದಾರೆ, ನೀರಿನ ದರ ಕಡಮೆಯಾದದ್ದು ಬೆಂಗಳೂರಿನ ಜನರಿಗೆ ಸಂತೋಷವಾಯಿತು. ಇದು ಜನರ ಒತ್ತಾಯ

ದಿಂದ ಆಯಿತು ಎಂಬುದು ಮೊದಲನೆಯ ವಿಷಯ. ನೀರಿನ ದರ ಕಡಿಮೆ ಮಾಡಿದ್ದೇವೆ ಎಂದು ಹೇಳುವುದು ಸರಿಯಲ್ಲ, ಇದಕ್ಕಿಂತ ಕಡಿಮೆ ಮಾಡಬೇಕೆಂಬ ದೃಷ್ಟಿಯಿಂದ ನಾನು ಹೇಳುತ್ತಾ ಇಲ್ಲ, ನನ್ನ ಅಭಿಪ್ರಾಯ ಇಷ್ಟೆ: ಇದನ್ನು ಶಾಸ್ತ್ರೀಯವಾಗಿ ಲೆಕ್ಕಾಚಾರ ಹಾಕಿ ಅದರ ಆಧಾರದ ಮೇಲೆ ಮಾಡಿದ್ದರೆ ಇನ್ನೂ ಕಡಿಮೆಯಾಗುವ ಪರಿಸ್ಥಿತಿ ಇದೆ. ಆ ರೀತಿ ಏಕೆ ಶಾಸ್ತ್ರೀಯವಾಗಿ ಮಾಡಬಾರದು ಎಂಬುದು ನನ್ನ ಪ್ರಶ್ನೆ. ಎಸ್ಟಿಮೇಟ್ಸ್ ಕಮಿಟಿಯಲ್ಲಿ ಇದು ಸರ್ವಾನುಮತದಿಂದ ಆಗಲಿ ಎಂಬ ದೃಷ್ಟಿಯಿಂದ ಈಗ ಸಲಹೆ ಮಾಡಿರುವದರಕ್ಕೆ ಒಪ್ಪಿಕೊಂಡದ್ದು ಆಯಿತು. ಇನ್ನೂ ಕೂಡ ರಿಟ್ರಾಸ್ಪೆಕ್ಟೀವ್ ಆಗಿ 1963 ರಿಂದ ಜಾರಿಗೆ ಕೊಡಬೇಕೇ 1965 ರಿಂದ ಜಾರಿಗೆ ಕೊಡಬೇಕೇ ಎನ್ನುವ ಅಂಶ ತೀರ್ಮಾನವಾಗಬೇಕಾಗಿದೆ, ಇದಕ್ಕಾಗಿ ಒಂದು ತಜ್ಞರ ಸಮಿತಿಯನ್ನು ಮಾಡಿದ್ದೇ ಆದರೆ ಯಾವ ರೀತಿ ಮಾಡಬೇಕೆಂಬ ಸಲಹೆಯನ್ನು ಕೊಡಲಿಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತೇನೆ. ಅಂತೂ ನೀರಿನ ದರ ಕಡಿಮೆಯಾದದ್ದು ಒಳ್ಳೆಯದಾಯಿತು, ಇದನ್ನು ಸರ್ಕಾರದವರು ಒಪ್ಪಿಕೊಂಡದಕ್ಕೆ ಅವರು ಶ್ಲಾಘನೀಯರು ಎಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಸ್. ಗೌಡ (ದೇವನಹಳ್ಳಿ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣವನ್ನು ಸ್ವಾಗತ ಮಾಡುತ್ತಾ, ಅವರ ಭಾಷಣಕ್ಕಾಗಿ ವಂದಿಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸರ್ಕಾರದ ಕೆಲವು ಧ್ಯೇಯ ಮತ್ತು ಉದ್ದೇಶಗಳನ್ನು ಮತ್ತು ಸರ್ಕಾರದ ನಾನಾ ಇಲಾಖೆಗಳಲ್ಲಿ ಮಾಡಿರತಕ್ಕ ಅನೇಕ ಸಾಧನೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ಸನ್ನಿವೇಶದಲ್ಲಿ ನಾನಾದರೂ ಹೇಳಬಯಸುತ್ತೇನೆ/ಸರ್ಕಾರ ಮತ್ತು ಮಂತ್ರಿಮಂಡಲ ಈ ಕ್ಲಿಷ್ಟ ಸಮಯದಲ್ಲಿ ದೇಶದಲ್ಲಿರತಕ್ಕಂಥ ಅಭಾವ ಪರಿಸ್ಥಿಯ ಕಾಲದಲ್ಲಿ ಜನರ ಕಷ್ಟವನ್ನು ಸಾಧ್ಯವಾದಮಟ್ಟಿಗೂ ನಿವಾರಣೆ ಮಾಡಲು ಹೆಚ್ಚಿನ ರೀತಿಯಲ್ಲಿ ಶ್ರಮಿಸಿ ಜನತೆಗೆ ಸಹಾಯ ಮಾಡಿದೆ. ಆದರೆ ನಡೆದಿರತಕ್ಕ ಪರಿಹಾರ ಕಾರ್ಯಗಳ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಟೀಕೆಗಳನ್ನು ಮಾಡಿದ್ದಾರೆ. ಮತ್ತು ಇದೇ ಸಂದರ್ಭದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆಗೆ ಕಾಂಗ್ರೆಸ್ ಸರ್ಕಾರ ತನ್ನ ಕೇವಲ ಓಟಿಗಾಗಿ ಈ ಪರಿಹಾರ ಕಾರ್ಯಕ್ರಮಗಳನ್ನು ಮಾಡಿದ್ದಾರೆ ಮತ್ತು ಹಣವನ್ನು ವೆಚ್ಚ ಮಾಡಿದ್ದಾರೆ ಎಂದು ಹೇಳಿ ಈ ಎರಡನ್ನೂ ಸೇರಿಸಿ ವಿರೋಧ ಪಕ್ಷದ ಅನೇಕ ಮಾನ್ಯ ಸ್ನೇಹಿತರು ಟೀಕೆ ಮಾಡಿದ್ದಾರೆ. ಈ ಸನ್ನಿವೇಶದಲ್ಲಿ ನಾನಾದರೂ ಹೇಳಬಯಸುತ್ತೇನೆ ಈ ಅಭಾವ ಪರಿಸ್ಥಿತಿಯಲ್ಲಿ ತಾಲ್ಲೂಕು ಬೋರ್ಡು ಮಂಡಲಿ ಚುನಾವಣೆಗಳು ನಡೆಯುವುದು ಬೇಡ. ಈ ಚುನಾವಣೆಗಳನ್ನು ಕೆಲವಾರು ತಿಂಗಳು ಮುಂದಕ್ಕೆ ಹಾಕಿದರೆ ಉತ್ತಮವಾಗುತ್ತದೆ; ಜನತೆಯ ಕಷ್ಟ ದೃಷ್ಟಿಯಿಂದ ಎಂದು ವಾದ ಮಾಡಿದವರು ಆಡಳಿತ ಪಕ್ಷದ ಸದಸ್ಯರಾದ ನಾವು. ವಿರೋಧ ಪಕ್ಷದವರು ಯಾವ ರೀತಿಯಲ್ಲೇ ಆಗಲಿ ಬಹಳ ದಿನದಿಂದ ನಡೆಯದೇ ಇರತಕ್ಕ ಈ ಈ ಚುನಾವಣೆಗಳು ಏನೇ ಕಾರಣ ಮುಂದಕ್ಕೆ ಹಾಕಬಾರದು ಎಂದು ಹೇಳಿದರು. ಅಭಾವ ಪರಿಸ್ಥಿತಿ ಒಂದು ಕಡೆ. ಇದಕ್ಕೆ ಎಷ್ಟರಮಟ್ಟಿನ ಕೆಲಸವನ್ನು ಸರ್ಕಾರ ಮಾಡಲಿಕ್ಕೆ ಸಾಧ್ಯವಿದೆಯೋ ಅದನ್ನು ಮಾಡಲೇಬೇಕು. ಇದೇ ಸಂದರ್ಭದಲ್ಲಿ ತಾಲ್ಲೂಕು ಬೋರ್ಡು ಮಂಡಲಿಗಳ ಚುನಾವಣೆಗಳು ಬಂದವು ಮತ್ತು ಮುಗಿದೂ ಹೋದವು, ಇದು ಒಂದಕ್ಕೊಂದಕ್ಕೆ ಸಂಬಂಧವನ್ನು ಸೇರಿಸಿ ಕೇವಲ ಆಳುವ ಪಕ್ಷ ಮತ್ತು ಸರ್ಕಾರ ತನ್ನ ಸ್ವಾರ್ಥ ಸಾಧನೆಗಾಗಿ ಹಣವನ್ನು ಖರ್ಚು ಮಾಡಿದ್ದಾರೆ ಅಥವಾ ಚುನಾವಣೆ ನಡೆಸಿದ್ದಾರೆ ಎಂದು ಹೇಳತಕ್ಕ ಮಾತು ಒಪ್ಪತಕ್ಕ ಮಾತಲ್ಲ.

ರಾಜ್ಯಪಾಲರು ಮೈಸೂರು, ಮಹಾರಾಷ್ಟ್ರ ಮತ್ತು ಕೇರಳ ಗಡಿ ಪ್ರಸ್ತಾಪವನ್ನೂ ಸಹ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸಭೆ ಒಕ್ಕೊರಲಿನಿಂದ ಈ ಮಾತನ್ನು ಅನುಮೋದಿಸುತ್ತದೆ ಎಂದು ನಾನಾದರೂ ನಂಬಿದ್ದೇನೆ. ಅಸೆಂಬ್ಲಿಯಲ್ಲಿ ಸರ್ವಾನುಮತದಿಂದ ಈ ವಿಷಯದಲ್ಲಿ ತೀರ್ಮಾನವನ್ನು ಕೈಕೊಂಡು ಕೇಂದ್ರ ಸರ್ಕಾರವನ್ನು ಒತ್ತಾಯಮಾಡಿ ದಿವಂಗತ ಮಹಾಜನ್‌ರವರು ಕೊಟ್ಟಿರತಕ್ಕ ವರದಿಯನ್ನು ಒಂದು ತೀರ್ಪು ಅಂತ ಹೇಳಿ ಪರಿಗಣಿಸಿ ಜಾರಿಗೆ ತರಬೇಕು. ಈ ಹಿಂದೆ ಈ ಸಭೆ ನಿರ್ಣಯ ಮಾಡಿತ್ತು, ಮತ್ತು ಇದೇ ವಿಷಯವನ್ನು ಇಂದು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಲಾಗಿದೆ. ಇಂತಹ ಪ್ರಸ್ತಾಪನೆಗಳು ನೂರಾರು ಆಗಬಹುದು, ಇದನ್ನು ಈ ದೇಶದಲ್ಲಿರತಕ್ಕ ನಮ್ಮ ಕೇಂದ್ರ ಸರ್ಕಾರ ಸ್ವಲ್ಪ ತೀವ್ರ ಮನೋಭಾವದಿಂದ ಪರಿಗಣಿಸಬೇಕು. ನಾವು ಪ್ರಜಾಪ್ರಭುತ್ವ ರೀತಿಯ ಒಂದು ಸರ್ಕಾರವನ್ನು ಹೊಂದಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಜನತೆಯ ಮಾತಿಗೆ ಬೆಲೆ ಬರಬೇಕು. ಅದರಲ್ಲೂ ಇಂತಹ ಶಾಸನ ಸಭೆಗಳಲ್ಲಿ ಆಗತಕ್ಕ ಸರ್ವಾನುಮತದ ನಿರ್ಣಯ ಸಾಮಾನ್ಯ ನಿರ್ಣಯವಲ್ಲ. ಇಡೀ ಭಾರತ ದೇಶದ ಐಕ್ಯತೆಯನ್ನು ಒಗ್ಗಟ್ಟನ್ನು ಕಾಪಾಡಿಕೊಂಡು ಹೋಗುವುದು ಕೇಂದ್ರ ಸರ್ಕಾರದ ಜವಾಬ್ದಾರಿ. ಈ ಗಡೀ ಸಮಸ್ಯೆಗಳನ್ನು ಇವತ್ತಿನ

(ಶ್ರೀ ಡಿ. ಎಸ್. ಗೌಡ)

ಮಟ್ಟಿಗೆ ನಿವಾರಣೆ ಮಾಡಬೇಕಾದ್ದು ಅವರ ಕರ್ತವ್ಯ. ಇಂತಹ ಸನ್ನಿವೇಶದಲ್ಲಿ ಆ ಮಹಾಜನ್ ಸಮಿತಿಯ ವರದಿಯನ್ನು ಮೂಲೆಗೆ ಒತ್ತಿ ಅದನ್ನು ಯಾವ ರೀತಿಯಲ್ಲೂ ಜಾರಿಗೆ ತರದೇ ಇರತಕ್ಕ ವಿಷಯ ನಿಜವಾಗಿಯೂ ನಹ ದೇಶದ ಅಭಿವೃದ್ಧಿ ಕೆಲಸಗಳಿಗೆ ಮುಖ್ಯವಾಗಿ ದೇಶದ ಐಕ್ಯತೆಗೆ ಪುಷ್ಟಿ ಕೊಡತಕ್ಕ ನೀತಿ ಅಲ್ಲ. ಇದನ್ನು ಕೇಂದ್ರ ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಿ ಮಹಾಜನ್ ಸಮಿತಿ ವರದಿಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಗಡಿ ವಿವಾದದ ಬಗ್ಗೆ ಈಗ ಉದ್ಭವವಾಗಿರತಕ್ಕ ಸಮಸ್ಯೆಗೆ ಒಂದು ಶಾಶ್ವತವಾದ ಮಾರ್ಗವನ್ನು ಕಂಡುಹಿಡಿಯಬೇಕೆಂದು ನಾನಾದರೂ ಸೂಚಿಸಬಯಸುತ್ತೇನೆ.

ಕನ್ನಡ ನಾಡಿನಲ್ಲಿಂತ್ಕ 2 ಕೋಟಿ ಜನರ ಮಾತೃಭಾಷೆ ಕನ್ನಡ ಏನಿದೆ ಅದು ತಳಮಟ್ಟದಿಂದ ಹಿಡಿದು, ಮೇಲಿನ ಮಟ್ಟದವರೆಗೂ ಆಡಳಿತ ಭಾಷೆಯಾಗಬೇಕು. ಸುಲಲಿತವಾಗಿ ದಕ್ಷತೆಯಿಂದ ವ್ಯವಹಾರ ನಡೆಸಲು ಇರತಕ್ಕ ಭಾಷೆ ಎಂದರೆ ಮಾತೃ ಭಾಷೆ, ಈ ವಿಷಯದಲ್ಲಿ ಸರ್ಕಾರ ಏನೊಂದು ತೀರ್ಮಾನವನ್ನು ಕೈಕೊಂಡಿದೆ ಅದು ಬರೀ ತೀರ್ಮಾನವಾಗಿ ಉಳಿಯದೇ ಜನತೆಗೆ ನಿಲುಕುವಂತಾಗಲಿ ಎಂದು ನಾನು ಹಾರೈಸುತ್ತೇನೆ.

ವ್ಯವಸಾಯ ಕ್ಷೇತ್ರದಲ್ಲಿ ಸರ್ಕಾರ ಸಾಕಾದಷ್ಟು ಪ್ರಗತಿಯನ್ನು ಸಾಧಿಸಿದೆ. ಆದರೂ ಸಹ 7-8 ವರ್ಷಗಳು ಮಳೆಯ ಅಭಾವದಿಂದಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲಿಕ್ಕೆ ಸಾಧ್ಯವಾಗಿಲ್ಲ. ನಮ್ಮಲ್ಲಿ ಅನೇಕ ನ್ಯೂನತೆಗಳು ಬೆಳೆದು ಬಂದಿವೆ. ಅದರ ಜೊತೆಗೆ ಮಳೆಯ ಅಭಾವದಿಂದಾಗಿ ರೈತನ ಆರ್ಥಿಕ ಪ್ರಗತಿ ಹಾಗೂ ವ್ಯವಸಾಯದ ಆಹಾರದ ಉತ್ಪಾದನೆಯ ಪ್ರಗತಿ ಬಹಳವಾಗಿ ಹಿಂದುಳಿದಿದೆ. ಇದನ್ನು ಸಮಾಜ ಮತ್ತು ಹಳ್ಳಿಗಾಡಿನ ರೈತ ಧೈರ್ಯದಿಂದ ಎದುರಿಸಬೇಕಾಗಿದೆ. ಈ ಬಗ್ಗೆ ಸರ್ಕಾರದವರು ಅಭಾವ ಪರಿಸ್ಥಿತಿಯನ್ನೆದುರಿಸತಕ್ಕ ಒಂದು ಶಾಶ್ವತವಾದ ಯೋಜನೆಯನ್ನು ಇಟ್ಟುಕೊಳ್ಳಬೇಕು. ಮಳೆಬಾರದಿದ್ದರೇನು ಮಾಡಬೇಕು ! ಆದರೆ ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಮಾತ್ರ ಕೆಲವು ನದಿಗಳು ಹರಿಯುತ್ತಿವೆ. ಅಂಥ ಕಡೆಗಳಲ್ಲಿ ಅಲ್ಲಿ ಮಳೆ ಬಾರದಿದ್ದರೂ ಆ ನದಿಗಳಲ್ಲಿ ಹರಿಯತಕ್ಕ ನೀರಿನ ಸಹಾಯದಿಂದ ಅವರು ಅಲ್ಲಿ ವ್ಯವಸಾಯವನ್ನು ಮಾಡಬಹುದು. ರಾಜ್ಯದ ಇನ್ನು ಕೆಲವು ಭಾಗಗಳಲ್ಲಿ ಎಲ್ಲಿ ಇಂಥಾ ನದೀ ಬಯಲುಗಳಿಲ್ಲವೋ ನಮ್ಮ ಮೈಸೂರು ರಾಜ್ಯದಲ್ಲಿ, ಅಲ್ಲಿನ ಅಭಾವ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸರ್ಕಾರದವರು ಒಂದು ಶಾಶ್ವತವಾದ ಯೋಜನೆಯನ್ನು ಕಡ್ಡಾಯವಾಗಿ ಮಾಡಲೇಬೇಕು. ನಾವು ನಮ್ಮ ದೇಶಾಭಿವೃದ್ಧಿಗಾಗಿ ಈ ದಿವಸ ನಾನಾ ರೂಪದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಆದರೆ ದೇಶದಲ್ಲಿರತಕ್ಕ ಅಭಾವ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸರ್ಕಾರದವರು ಕೈಗೊಂಡಿರತಕ್ಕ ನಾನಾ ಯೋಜನೆಗಳಲ್ಲಿ ಹೆಚ್ಚಿನ ಒಂದು ಪ್ರಾಮುಖ್ಯತೆಯನ್ನು ಭೂಗರ್ಭದಲ್ಲಿರತಕ್ಕ ನೀರನ್ನು ಬಳಸಿ ತನ್ಮೂಲಕ ಒಂದು ಯೋಜನೆಯನ್ನು ರೂಪಿಸಿ ಅದರಿಂದ ದೇಶದ ರೈತರಿಗೆ ಹೆಚ್ಚಿನ ಉಪಯೋಗವಾಗುವಂತೆ ನಮ್ಮ ಸರ್ಕಾರದವರು ಇನ್ನೂ ಹೆಚ್ಚಿನ ಧಿಟ್ಟತನದಿಂದ ಹಾಗೂ ತ್ವರಿತವಾಗಿ ಈ ಮಾರ್ಗದಲ್ಲಿ ಹೆಜ್ಜೆ ಇಡಬೇಕೆಂದು ಸೂಚಿಸಬಯಸುತ್ತೇನೆ.

4-30 P. M.

ಸರ್ಕಾರದವರು ಯಾವುದೇ ಒಂದು ಉಪಕಾರವನ್ನು ದೇಶದ ಜನತೆಗೆ ಒದಗಿಸಬೇಕಾಗಿದ್ದರೂ ಅದಕ್ಕಾಗಿ ಒಂದು ನಿರ್ದಿಷ್ಟವಾದ ನೀತಿ ತತ್ವ ಒಂದು ಆದೇಶ ಹಾಗೂ ಗುರಿಗಳನ್ನಿಟ್ಟುಕೊಂಡು ಕೆಲಸ ಮಾಡುತ್ತಾರೆ. ಅದು ಬಹಳ ಶ್ಲಾಘನೀಯ. ಆದರೆ ನಮ್ಮಲ್ಲಿರತಕ್ಕ ಸಹಕಾರ ತತ್ವಗಳ ಗುರಿ ಶ್ಲಾಘನೀಯವಾಗಿದ್ದರೂ ಕೆಲವು ಚೆನ್ನಾಗಿ ಕೆಲಸಮಾಡುತ್ತಿವೆ; ಇನ್ನು ಕೆಲವು ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಅದರಿಂದ ರೈತರಿಗೆ ಎಷ್ಟು ಅನುಕೂಲತೆ ದೊರೆಯಬೇಕಾಗಿತ್ತೋ ಅದು ದೊರೆಯದಂತಾಗಿದೆ. ಅದಕ್ಕೆ ಕಾರಣಗಳು ಅನೇಕ ಇರಬಹುದು. ಹಣದ ಹಂಚಿಕೆಯಲ್ಲಿ ನ್ಯೂನತೆ ಇರಬಹುದು ; ಆದರೆ ನಾವು ಇವುಗಳ ಮೂಲಕ ಎಷ್ಟು ಜನಪ್ರಗತಿಯನ್ನು ಸಾಧಿಸಬಹುದಾಗಿತ್ತೋ ಅಷ್ಟನ್ನು ಸಾಧಿಸಿದ್ದೇವೆಯೇ ಎಂಬುದನ್ನು ಆಲೋಚಿಸಬೇಕು. ಆದರೆ ಆ ಗುರಿಯನ್ನು ನಾವೀದಿವಸ ಸಾಧಿಸಿದ್ದೇವೆಯೇ ಎಂಬುದನ್ನು ನೋಡಬೇಕು. ಸಹಕಾರ ಸಂಘಗಳಲ್ಲಿ ಅಧಿಕಾರಿಗಳೂ ಇದ್ದಾರೆ. ಸಾರ್ವಜನಿಕರೂ ಇದ್ದಾರೆ. ಆದರೆ ಒಂದು ನೂರು ಸಹಕಾರಸಂಘಗಳಲ್ಲಿ ಸರಾಸರಿ ಎಷ್ಟು ಸಂಘಗಳು ಡಿಫಾಲ್ಟರಾಗಿವೆ, ಎಷ್ಟು ಸಂಸ್ಥೆಗಳು ಸರಿಯಾಗಿ ಕೆಲಸಮಾಡುತ್ತಿವೆ ಎಷ್ಟು ಸಂಸ್ಥೆಗಳಲ್ಲಿ ಯಾವ ಲೋಪದೋಷಗಳೂ ಇರುವುದಿಲ್ಲ ಎಂದು ಗೊತ್ತಾಗುತ್ತದೆ ಎಂಬುದರ ಬಗ್ಗೆ ಅಂಕೀಅಂಶಗಳನ್ನು ಶೇಖರಿಸಿ ನೋಡುವುದಾದರೆ ಕೆಲವು ಸಂಸ್ಥೆಗಳಲ್ಲಿ ಹಣ ದುರುಪಯೋಗ

ವಾಗಿದೆ. ಅಂಥಾ ಹಣದ ದುರುಪಯೋಗಕ್ಕೆ ಕಾರಣಕರ್ತರಾದವರು ಅವರು ಯಾರೇ ಆಗಿರಲಿ, ಯಾವ ಪಕ್ಷಕ್ಕೇ ಸೇರಿದವರಾಗಿರಲಿ ಅವರು ಅಧಿಕಾರಿಯೇ ಆಗಿರಲಿ ಅಥವಾ ಆ ವ್ಯಕ್ತಿ ಎಷ್ಟೇ ದೊಡ್ಡ ವ್ಯಕ್ತಿಯಾಗಿರಲಿ ಅಂಥವರನ್ನು ಧಿಟ್ಟತನದಿಂದ ದಂಡಿಸತಕ್ಕ ಒಂದು ಕಡ್ಡಾಯ ನೀತಿಯನ್ನು ಅನುಸರಿಸಿ ಪೋಲಾಗತಕ್ಕ ಸಾರ್ವಜನಿಕರ ಹಣವನ್ನು ತಡೆಗಟ್ಟಬೇಕು. ಆದರೆ ನಾವು ಆ ದುರುಪಯೋಗ ಮಾಡಿದ ವ್ಯಕ್ತಿಯನ್ನು ಜೈಲಿಗೆ ಕಳುಹಿಸುತ್ತೇವೆಂದು ಹೇಳಿದರೂ ಆ ದುರುಪಯೋಗವಾದ ಹಣ ಮತ್ತೆ ಹಿಂದಕ್ಕೆ ಬರುವುದಿಲ್ಲ. ಆದುದರಿಂದ ಹೀಗೆ ದೇಶಾಭಿವೃದ್ಧಿ ಸಾಧಿಸತಕ್ಕ ಕಾರ್ಯದಲ್ಲಿ ಎಲ್ಲೆಲ್ಲಿ ಏನೇನು ಲೋಪದೋಷಗಳಿವೆ ಎಂಬುದನ್ನು ಬಹಳ ಜಾಗರೂಕತೆಯಿಂದ ಎಚ್ಚೆತ್ತುಕೊಂಡು ಅವುಗಳನ್ನು ನಿವಾರಣೆ ಮಾಡುವುದಕ್ಕೆ ತ್ವರಿತವಾದ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು.

ನಮಗೆ ನೀರಾವರಿ ಯೋಜನೆಗಳ ವಿಚಾರದಲ್ಲೂ ಕೂಡ ಅನೇಕ ಲೋಪ ದೋಷಗಳು ಇರುವುದಾಗಿ ಕಂಡುಬರುತ್ತದೆ. ನಾವು ಇಲ್ಲಿ ಕುಳಿತು ನಿರ್ಣಯಗಳನ್ನು ಮಾಡಿ ಕಳುಹಿಸಬಹುದು. ಆದರೆ ಅದಕ್ಕೆ ಕೇಂದ್ರ ಸರ್ಕಾರದವರು ಯಾವ ಬೆಲೆಯನ್ನೂ ಕೊಡುತ್ತಿಲ್ಲ. ಆದ್ದರಿಂದ ಅಂಥ ನಿರ್ಣಯಗಳಿಂದೇನೂ ನಮ್ಮ ಜನತೆಗೆ ಉಪಯೋಗವಾಗಲಾರದು. ಈ ದಿವಸ ಯಾವ ರಾಜ್ಯದವರಾಗಲಿ ಕೇಂದ್ರಕ್ಕೆ ನಾವು ಅದನ್ನು ಮಾಡುತ್ತೇವೆ ಇದನ್ನು ಮಾಡುತ್ತೇವೆ ನಮಗೆ ಅವಕಾಶ ಕೊಡಿ ಎಂದರೆ ಅವರು ಕೊಡುವುದಿಲ್ಲ. ಆದರೆ ಈ ದಿವಸ ಆ ಕೇಂದ್ರಸರ್ಕಾರದಲ್ಲಿ ಯಾವ ರಾಜ್ಯದ ಮಂತ್ರಿಗಳು ಬಹಳ ಪ್ರಬಲರಾಗಿದ್ದಾರೋ ಅಂಥವರು ಮಾತ್ರ ಅವರ ಒಂದು ಪ್ರಭಾವದಿಂದ ಅವರಿಗೆ ಸೇರಿದ ರಾಜ್ಯಗಳಲ್ಲಿ ಯಾವ ಅನುಕೂಲಗಳು ಬೇಕಾದರೂ ಬಹಳ ಸುಲಭವಾಗಿ ಆಗುತ್ತಿವೆ. ಆದರೆ ನಮ್ಮ ರಾಜ್ಯಕ್ಕೆ ಅಂಥ ಒಂದು ಅನುಕೂಲವಿಲ್ಲ. ಅದಕ್ಕಾಗಿ ಅವರು ನಮ್ಮ ರಾಜ್ಯವನ್ನು ಕಡೆಗಣ್ಣಿನಿಂದ ಕಾಣುತ್ತಿದ್ದಾರೆ. ಆದುದರಿಂದಲೇ ಆ ನಮ್ಮ ಕಾವೇರಿ ನದಿಯ ಬಗ್ಗೆ ಹಾಗೂ ಕೃಷ್ಣಾ ನದಿಯ ಅಣೆಕಟ್ಟೆಗಳ ವಿಚಾರದಲ್ಲಿ ನಮಗೇನು ಹಿತವೋ ಅದು ನಡೆಯುತ್ತಿಲ್ಲ. ನಾವು ನೀರಾವರಿ ಕಾಮಗಾರಿಗಳ ವಿಚಾರದಲ್ಲಿ ಏನು ಮಾಡಬೇಕಾಗಿದ್ದರೂ ಆ ಕೇಂದ್ರದವರನ್ನು ಕಾಯಬೇಕಾಗಿದೆ. ಆದರೆ ಇನ್ನು ಮುಂದೆ ಈ ಪದ್ಧತಿಯನ್ನು ನಾವು ಬದಲಾವಣೆ ಮಾಡಬೇಕಾಗುತ್ತದೆ. ನಾವು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಧಿಟ್ಟತನದಲ್ಲಿ ನಮಗೆ ಯಾವ ಯಾವ ನದಿಯ ನೀರಿನಲ್ಲಿ ಎಷ್ಟೆಷ್ಟು ಹಕ್ಕಿರುತ್ತದೆಯೋ ಆ ಹಕ್ಕಿಗೆ ಅನುಗುಣವಾಗಿ ಅಷ್ಟು ನೀರನ್ನು ಬಳಸಲು, ಇನ್ನು ಮುಂದಕ್ಕೆ ನಾವು ಈ ವಿಚಾರದಲ್ಲಿ ಆ ಕೇಂದ್ರದವರನ್ನು ಕೇಳುವುದನ್ನು ಬಿಟ್ಟು ನಾವು ಕೆಲಸಮಾಡಬೇಕು. ಹಾಗೆ ಮಾಡದಿದ್ದರೆ ನಿಜವಾಗಿಯೂ ನಮ್ಮ ದೇಶಕ್ಕೆ ಅನುಕೂಲವಾಗುವುದಿಲ್ಲ.

ಇನ್ನು ಪಂಚವಾರ್ಷಿಕ ಯೋಜನೆಗಳನ್ನು ಕುರಿತು ಎರಡು ಮಾತನ್ನು ಹೇಳಬೇಕಾಗಿದೆ. ನಾವು ಈವರೆಗೆ ಮೂರು ಯೋಜನೆಗಳನ್ನು ಮುಗಿಸಿ ಈಗ ನಾಲ್ಕನೇ ಯೋಜನೆಗೆ ಕಾಲಿಡುತ್ತಿದ್ದೇವೆ. ಈ ಯೋಜನೆಗಳಿಂದ ನಾವು ದೇಶದಲ್ಲಿ ಇಂದು ಸಾಕಷ್ಟು ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗಿದೆ. ಆದರೆ ನಾವು ಅಂಕಿಅಂಶಗಳನ್ನು ಇಟ್ಟುಕೊಂಡು ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಧಿಸಬೇಕಾಗಿದ್ದ ಪ್ರಗತಿಯನ್ನು ಈ ಯೋಜನೆಗಳ ಮೂಲಕ ಸಾಧಿಸುವುದಕ್ಕೆ ಸಾಧ್ಯವಾಗಿದೆಯೇ ಹಾಗೆ ಸಾಧನೆ ಮಾಡಿದ್ದೇವೆಯೇ ಎಂಬುದನ್ನು ಪರಿಶೀಲಿಸಿ ನಾವು ಎಲ್ಲಿಯವರೆಗೆ ಗುರಿಯನ್ನು ಮುಟ್ಟಲು ಸಾಧ್ಯವಾಗಿದೆ ಎಂಬುದನ್ನು ನೋಡಿದರೆ ನಾವು ನಿರೀಕ್ಷಿಸಿದ್ದ ಮಟ್ಟವನ್ನು ನಾವಿನ್ನೂ ಮುಟ್ಟಲು ಸಾಧ್ಯವಾಗಿಲ್ಲ ಎನ್ನುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಸಮಾಜದವರೂ ಮತ್ತು ನಾವು ಇಬ್ಬರೂ ಸೇರಿರಬಹುದು. ಆದರೂ ನಾವು ಧಿಟ್ಟತನದಿಂದ ಗುರಿಯನ್ನು ಮುಟ್ಟಲೇಬೇಕು. ನಮ್ಮ ರಾಷ್ಟ್ರದಲ್ಲಿ ಕಳೆದ 15 ವರ್ಷಗಳಿಂದಲೂ ತಲೆದೋರಿರತಕ್ಕ ಈ ಒಂದು ಎಕನಾಮಿಕ್ ಇಂಬ್ಯಾಲೆನ್ಸ್ ಏನಿದೆ ಅದನ್ನು ಒಂದು ಧಿಟ್ಟತನದಿಂದ ತೊಡೆದುಹಾಕುವುದಕ್ಕೆ ಪ್ರಯತ್ನಮಾಡಿ ನಾವು ಆ ಗುರಿಯನ್ನು ಸಾಧಿಸಲೇಬೇಕು. ಆದರೆ ಈ ವಿಚಾರದಲ್ಲಿ ನಮ್ಮ ಕೇಂದ್ರಸರ್ಕಾರದವರು ಮತ್ತು ನಮ್ಮ ಸರ್ಕಾರದವರು ಹಾಗೂ ವಿತ್ತೀಯ ಆಯೋಗದವರೂ ಒಟ್ಟಿಗೆ ಕಲೆತು ಇದನ್ನು ಸರಿಪಡಿಸಬೇಕು. ದೇಶದಲ್ಲಿ ಈ ದಿವಸ ತೆರಿಗೆಯನ್ನು ನಾನಾ ರೂಪದಲ್ಲಿ ವಸೂಲ್ಮಾಡಲಾಗುತ್ತಿದೆ. ಅದು ಯಾವ ತೆರಿಗೆಯೇ ಆಗಿರಲಿ ಅದರಿಂದ ಐಶ್ವರ್ಯವಂತರೂ ಮತ್ತು ಬಂಡವಾಳಗಾರರೂ ಮುಕ್ತರಾಗಿ ಕಡೆಗೆ ಅದಕ್ಕೆ ತುತ್ತಾಗತಕ್ಕವರು ಬಡ ಕನ್‌ಸ್ಯೂಮರ್‌ಗಳು. ಆದ್ದರಿಂದ ಮೊದಲು ಅವರಲ್ಲಿರತಕ್ಕ ಆರ್ಥಿಕ ಅಸಮಾನತೆ ಹೋಗಬೇಕು. ಏನೇ ಆಗಲಿ ದೇಶದಲ್ಲಿರತಕ್ಕ ಸರ್ವಜನತೆಯ ಅಭಿವೃದ್ಧಿಯನ್ನೂ ಸಾಧಿಸುವಂತ ಒಂದು ಯೋಜನೆಯನ್ನು ರೂಪಿಸಬೇಕಾಗಿದೆ.

ಇನ್ನು ದೇಶದ ಆಡಳಿತದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಆ ಕೇಂದ್ರ ಸರ್ಕಾರದವರು ಯಾವ ಒಂದು ಗುರಿಯನ್ನೆ ಇಟ್ಟು ಕೆಲಸಮಾಡಲಿ, ನಾವು ಇಲ್ಲಿ ನಮ್ಮ ರಾಜ್ಯದಲ್ಲಿ ರೆವಿನ್ಯೂ, ಪೋಲೀಸ್, ವಿದ್ಯಾಭ್ಯಾಸ ಹೀಗೇ ಪ್ರತಿಯೊಂದು ಇಲಾಖೆಯ ಮುಖ್ಯಾಧಿಕಾರಿಗಳೂ ಎಷ್ಟರಮಟ್ಟಿಗೆ ದಕ್ಷತೆಯಿಂದ ಕೆಲಸ ಮಾಡಿದರೆ ಸರ್ಕಾರ ಅಷ್ಟು ತನ್ನ ಕಾರ್ಯಗಳನ್ನು

(ಶ್ರೀ ಡಿ. ಎಸ್. ಗೌಡ)

ಪ್ರಗತಿಮಾರ್ಗದಲ್ಲಿ ಸಾಗಿಸಿದಂತಾಗುತ್ತದೆ. ಅದರಿಂದ ಜನತೆಗೂ ಬಹಳ ಅನುಕೂಲ ದೊರೆಯುತ್ತದೆ. ದೇಶದಲ್ಲಿ ಜನತೆ ಏನು ನಾನಾರೂಪದಲ್ಲಿ ಕಷ್ಟಪಡುತ್ತಿದೆಯೋ ಅದನ್ನು ಯಾವ ಸರ್ಕಾರ ಬರಲಿ ಆ ಕಷ್ಟವನ್ನೆಲ್ಲಾ ಒಂದು ವರ್ಷದಲ್ಲಾಗಲೀ ಅಥವಾ ಒಂದು ದಿನದಲ್ಲಾಗಲೀ ತೊಡೆದುಹಾಕುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಸರ್ಕಾರದ ಮೂಲಕ ಜನತೆಗೆ ಏನಾದರೂ ಅನುಕೂಲವಾಗುವುದಿದ್ದರೆ ಅದನ್ನು ಅವರು ಸರ್ಕಾರಕ್ಕೆ ಅರ್ಜಿಯ ರೂಪದಲ್ಲಿ ಇಟ್ಟಿರುತ್ತಾರೆ. ಆದ್ದರಿಂದ ಆ ಅರ್ಜಿ ವಿಲೇವಾರಿಯನ್ನು ಬೇಗ ಮಾಡಿದರೆ ಆ ಜನತೆಗೆ ಅಷ್ಟೇ ಉಪಕಾರ ಮಾಡಿದಂತಾಯಿತು. ಆದ್ದರಿಂದ ಆಡಳಿತದಲ್ಲಿ ಕಾಗದ ಪತ್ರಗಳ ವಿಲೇವಾರಿ ಬಹಳ ತ್ವರಿತದಿಂದ ಸಾಗಬೇಕು ಎಂದು ಹೇಳುತ್ತೇನೆ. ಇದಕ್ಕೆ ಸರ್ಕಾರ ಹೆಚ್ಚಿನ ಗಮನ ವಹಿಸಬೇಕು. ಏಕೆಂದರೆ ಇಂದು ಲಂಚಕೋರ ಅಧಿಕಾರಿಗಳು ಕೆಳದರ್ಜೆಯಿಂದ ಹಿಡಿದು ಡೆಪ್ಯುಟಿ ಕಮಿಷನರ್ ಮತ್ತು ಐ.ಎ.ಎಸ್. ಅಫೀಸರ್‌ವರೆಗೂ ಇದ್ದಾರೆ. ರಾಜ್ಯಸರ್ಕಾರವೇ ಆಗಲೀ ಕೇಂದ್ರ ಸರ್ಕಾರವೇ ಆಗಲೀ, ಶಾಸನಸಭಾ ಸದಸ್ಯರೇ ಆಗಲೀ, ಸಾರ್ವಜನಿಕರೇ ಆಗಲೀ ಅಂತಹವರ ಬಗ್ಗೆ ಏನಾದರೂ ಲಂಚದ ವಿಷಯ ಸಾಕ್ಷಾತ್ತಾಗಿ ಕಣ್ಣಿಗೆ ಬಿದ್ದರೂ ಕೂಡ ಅಂತಹ ಅಧಿಕಾರಿಗಳನ್ನು ತಕ್ಷಣ ಸಸ್‌ಪೆಂಡ್ ಮಾಡಿ ಅವರ ಮೇಲೆ ತಕ್ಕ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕು. ಅಂತಹ ವ್ಯವಸ್ಥೆ ಸರ್ಕಾರದಲ್ಲಿ ಇದೆಯೋ ಇಲ್ಲವೋ ಅದು ತಿಳಿಯದೇ ಇರುವ ವಿಷಯ. ಈ ರೀತಿ ಇದ್ದ ಪಕ್ಷದಲ್ಲಿ ಇಂದು ಅಧಿಕಾರಿಗಳಾಗಿ, ವಿದ್ಯಾವಂತರಾಗಿ, ಪ್ರೊಬೇಷನರುಗಳಾಗಿ, ಐ.ಎ.ಎಸ್ ಆಫೀಸರುಗಳಾಗಿ ರಾಜ್ಯದ ನಾನಾ ಹುದ್ದೆಗಳಲ್ಲಿ ಕೆಲಸಮಾಡುತ್ತಾ ಇದ್ದು, ಅವರು ಏನೂ ತಿಳಿಯದೆ ಇರತಕ್ಕಂಥ ಸಾಮಾನ್ಯ ಜನತೆಗೆ ಮೋಸಮಾಡಿ, ಲಂಚರುಷುವತ್ತಿನಿಂದ, ಅದಕ್ಷತೆಯಿಂದ, ಆಡಳಿತವನ್ನು ನಡೆಸುವುದು, ಜನತೆಯಿಂದ ಹಾಗೂ ಸಾರ್ವಜನಿಕರಿಂದ ಹಣ ಪಡೆದು ಅಂತಹ ಅಧಿಕಾರಿಗಳ ಬಗ್ಗೆ ಏನಾದರೂ ಲೋಪದೋಷಗಳು ಕಂಡುಬಂದರೆ ಸರ್ಕಾರ ತೀವ್ರ ಕ್ರಮವನ್ನು ಕೈಗೊಳ್ಳಬೇಕು. ಹೆಚ್ಚಿನ ರೀತಿಯಲ್ಲಿ ಜನರಿಗೆ ದಕ್ಷತೆ ಹಾಗೂ ಉತ್ತಮ ಆಡಳಿತ ಸಿಗಬೇಕು. ಪ್ರಚಾರ ಮತ್ತು ವಾರ್ತಾ ಇಲಾಖೆಯ ವಿಚಾರವಾಗಿ ಹೇಳಬೇಕಾದರೆ ಸರ್ಕಾರ ಏನು ಕೆಲಸವನ್ನು ಮಾಡುತ್ತಿದೆ ಏನು ಯೋಜನೆಗಳನ್ನು ಸರ್ಕಾರದವರು ಮಾಡುತ್ತಿದ್ದಾರೆ ಏನು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ ಎನ್ನುವುದು ಜನತೆಗೆ ಮುಟ್ಟುವಂತೆ ಈ ಪ್ರಚಾರ ಮತ್ತು ವಾರ್ತಾ ಇಲಾಖೆ ಮಾಡಬೇಕು. ಈ ದೇಶದಲ್ಲಿ ಸರ್ಕಾರದ ಪ್ರಗತಿ, ಸರ್ಕಾರದ ಯೋಜನೆಗಳು ಮತ್ತು ಪ್ರಜಾಪ್ರಭುತ್ವದ ಬೆಳವಣಿಗೆ, ಸರ್ಕಾರ ಮತ್ತು ಜನತೆ ಇವುಗಳ ಮಧ್ಯೆ ಇರತಕ್ಕ ಸಂಪರ್ಕಸಾಧನ ನಮ್ಮ ವರ್ತಮಾನ ಪತ್ರಿಕೆಗಳು, ಇಂದು ಆ ಪತ್ರಿಕೆಗಳು ಏನೊಂದು ಕಾರ್ಯಕ್ರಮವನ್ನು ಅಥವಾ ಒಂದು ಪಾತ್ರವನ್ನು ಈ ಪ್ರಜಾಪ್ರಭುತ್ವ ಮತ್ತು ಸಮಾಜದ ಬೆಳವಣಿಗೆಯಲ್ಲಿ ನಿರ್ವಹಿಸುತ್ತಾರೋ ಅದು ಇನ್ನೂ ಹೆಚ್ಚಿನ ರೀತಿಯಲ್ಲಿ ನಿರ್ವಹಿಸಬೇಕು. ಸರ್ಕಾರ ಇದಕ್ಕೆ ಬೇಕಾದಷ್ಟು ಸಹಾಯ ನೀಡಿ ಇಂದಿನ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪತ್ರಿಕೆಗಳ ಗುಣಮಟ್ಟ ಮತ್ತು ಪತ್ರಿಕೆಗಳ ಈ ಒಂದು ಸಾಧನೆಯನ್ನು ಜಗತ್ತಿನಲ್ಲಿ ಬೆಳಸಬೇಕು. ಇದರಿಂದ ಪ್ರಜಾಪ್ರಭುತ್ವದ ಬೆಳವಣಿಗೆಗೆ ಸಹಾಯಕವಾಗುತ್ತದೆ. ವಾರ್ತಾ ಮತ್ತು ಪ್ರಚಾರ ಇಲಾಖೆ ಈ ಸಣ್ಣ ಪತ್ರಿಕೆಗಳಿಗೆ ಹೆಚ್ಚಿನ ಸಹಾಯ ನೀಡಿ ಇಂದು ದೇಶದ ನಾನಾ ರೀತಿಯ ಯೋಜನೆಗಳ ಪ್ರಗತಿ ಯಾವ ಮಟ್ಟದಲ್ಲಿ ಆಗುತ್ತಿದೆ ಎನ್ನುವುದು ಜನರಿಗೆ ಅರಿವಾಗುವ ರೀತಿಯಲ್ಲಿ ಅವು ಹೆಚ್ಚಿನ ಪಾತ್ರವನ್ನು ವಹಿಸಲಿ ಎಂದು ಹೇಳಿ ನನ್ನ ಮಾತನು ಮುಗಿಸುತ್ತೇನೆ.

† ಶ್ರೀ ಬೋಳ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಗಳೇ, ಮಾನ್ಯ ರಾಜ್ಯಪಾಲರು ಸರ್ಕಾರದ ಧೋರಣೆ ಬಗ್ಗೆ ಮತ್ತು ಸರ್ಕಾರದವರು ಮುಂದಿನ ವರ್ಷದಲ್ಲಿ ಮಾಡತಕ್ಕ ಕಾರ್ಯಕ್ರಮದ ಬಗ್ಗೆ ದೀರ್ಘವಾದ ಭಾಷಣವನ್ನು ಮಾಡಿದ್ದಾರೆ. ಆದರೆ ಅವರ ಭಾಷಣದಲ್ಲಿ ನಮ್ಮ ರಾಜ್ಯದ ಗಾಂಭೀರ್ಯ ಸಮಸ್ಯೆಗಳ ಬಗ್ಗೆ ಉಲ್ಲೇಖವಿದ್ದರೂ ಕೂಡ ಆ ಸಮಸ್ಯೆಗಳ ಬಗ್ಗೆ ಸರ್ಕಾರದ ಸರಿಯಾದ ಧೋರಣೆ ಏನು ಮತ್ತು ಆ ಸಮಸ್ಯೆಗಳ ಪರಿಹಾರದ ಬಗ್ಗೆ ಸರ್ಕಾರದ ಕ್ರಮವೇನು ಎಂಬುದನ್ನು ಕುರಿತು ಅವರು ಸರಿಯಾದ ವಿವರಣೆಯನ್ನು ಕೊಟ್ಟಿಲ್ಲ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಈಗ ಆಹಾರೋತ್ಪತ್ತಿ ಸಮಸ್ಯೆ ಬಂದಿದೆ. ನಮಗೆ ಸ್ವರಾಜ್ಯ ಬಂದು 21-22 ವರ್ಷಗಳನ್ನು ಕಳೆದರೂ ಕೂಡ ನಮ್ಮ ಜೀವನಕ್ಕೆ ಅಗತ್ಯವಾದ ಆಹಾರ ಸಮಸ್ಯೆಯನ್ನು ಇನ್ನೂ ಪರಿಹಾರ ಮಾಡಲಿಲ್ಲ. ಆಹಾರಕ್ಕೋಸ್ಕರ ನಮ್ಮ ರಾಜ್ಯ ಸರ್ಕಾರ ಮತ್ತು ಈ ದೇಶದ ಸರ್ಕಾರ ನಮ್ಮ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿಯೂ ಕೂಡ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಹೋಗಬೇಕಾಗಿದೆ. ನಿಜವಾಗಿ ಈ ಆಹಾರ ಸಮಸ್ಯೆಯನ್ನು ಪರಿಹಾರಮಾಡಬೇಕಾದರೆ ಸರ್ಕಾರ ಮುಖ್ಯವಾಗಿ ರೈತರ ವಿಶ್ವಾಸವನ್ನು ಪಡೆಯಬೇಕು. ರೈತರ ವಿಶ್ವಾಸವನ್ನು ಪಡೆಯದೆ, ಈ ಸಮಸ್ಯೆ

ಯನ್ನು ನೀಗಲು ಸರ್ಕಾರ ಎಷ್ಟು ಹಣವನ್ನು ಖರ್ಚುಮಾಡಲಿ, ಎಷ್ಟು ಪಂಚವಾರ್ಷಿಕ ಯೋಜನೆಗಳನ್ನು ಮಾಡಲಿ, ಅದು ಸಾಧ್ಯವಿಲ್ಲ. ನಮ್ಮ ರಾಜ್ಯದ ವಿಷಯವನ್ನು ಮಾತನಾಡಬೇಕಾದರೆ, ನಮ್ಮ ರೈತರ ವಿಶ್ವಾಸವನ್ನು ಪಡೆಯಬೇಕಾದರೆ, ಸಾಮಾನ್ಯ ರೈತರ ದೃಷ್ಟಿಯಿಂದ ನೋಡಿದರೆ, ಈಗ ಇಲ್ಲಿ ಇರುವಂಥ ಲೆವಿ ಕಾನೂನಿನಿಂದ ನಮ್ಮ ಜನರು ವಿರೋಧವಾಗಿದ್ದಾರೆ. ಜನರು ದಂಗೆ ಏಳುವ ಸ್ಥಿತಿಯಲ್ಲಿದ್ದಾರೆ. ರೈತರ ಮೂಲಭೂತ ಹಕ್ಕನ್ನು ಮಾನ್ಯ ಮಾಡದೆ ದಬ್ಬಾಳಿಕೆಯಿಂದ ರೈತರಿಂದ ಲೆವಿ ವಸೂಲುಮಾಡುವುದು ನಿಜವಾಗಿ ಅನ್ಯಾಯ ಮತ್ತು ಅಕ್ರಮ, ಅದು ರಾಷ್ಟ್ರ ವಿರೋಧಕ್ಕೆ ಎಡೆಕೊಟ್ಟಂತೆ ಆಗುತ್ತದೆ. ರೈತರಲ್ಲಿ ಈ ಪಕ್ಷದಲ್ಲಿರುವವರು ಒಂದು ಒಮ್ಮತ ಅಭಿಪ್ರಾಯವನ್ನು ಈಗಾಗಲೇ ಕೊಟ್ಟಿದ್ದಾರೆ. ಆದರೆ ಸರ್ಕಾರದವರೂ ಕೂಡ ಕೆಲವು ಆಹಾರಧಾನ್ಯಗಳ ಬಗ್ಗೆ ಅಂದರೆ, ರಾಗಿ ಮತ್ತು ಬತ್ತದ ಮೇಲೆ ಲೆವಿ ಕಾನೂನನ್ನು ತೆಗೆದುಹಾಕಿದ್ದಾರೆ. ಉಳಿದ ಆಹಾರಧಾನ್ಯಗಳ ಮೇಲೆ ಆ ಲೆವಿ ಕಾನೂನನ್ನು ಮುಂದುವರಿಸಿದ್ದಾರೆ. ಇದರಲ್ಲಿ ಅನೇಕ ಲೋಪದೋಷಗಳಿವೆ. ಅದರಲ್ಲಿ ಮುಖ್ಯವಾಗಿ ಸರ್ಕಾರದವರು ಕೊಡತಕ್ಕಂಥ ಈ ಧಾನ್ಯದ ಕ್ರಯದಿಂದ ರೈತರಿಗೆ ಬಹಳ ನಷ್ಟವಾಗಿದೆ. ಸರ್ಕಾರದವರು ಕೊಡತಕ್ಕ ಧಾನ್ಯದ ಕ್ರಯ ಮಾರ್ಕೆಟ್ ಧಾರಣೆಗೆ ಅರ್ಧ ಇದೆ. ಅದಕ್ಕಾಗಿ ರೈತರು ಪದಾರ್ಥಗಳನ್ನು ಮಾರಿದರೆ, ಸರ್ಕಾರದವರು ಬಲಾತ್ಕಾರದಿಂದ ಹಾಗೂ ಒತ್ತಾಯದಿಂದ ಸಿಬ್ಬಂದಿ ಮೂಲಕ ಬರತಕ್ಕ ಲೆವಿ ಕ್ರಯದ ಎರಡು ಪಾಲು ಮಾತ್ರ ಕೊಡುತ್ತಾರೆ. ಇದು ಯಾವ ನ್ಯಾಯವೆಂದು ನಾನು ಸರ್ಕಾರದವರನ್ನು ಕೇಳುತ್ತೇನೆ. ರೈತ ತಾನು ಬೇಕಾದಷ್ಟು ಹಣವನ್ನು ಭೂಮಿಗೆ ಹಾಕಿ ಬೇಕಾದಷ್ಟು ಶ್ರಮಪಟ್ಟು ಬೆಳೆಸಿದ ಬೆಳೆಯನ್ನು ಸರ್ಕಾರದವರು ಅರ್ಧ ಕ್ರಯದಲ್ಲಿ ತೆಗೆದುಕೊಳ್ಳುವುದಕ್ಕೆ ಕಾನೂನು ಪ್ರಕಾರ ಅಥವಾ ಒತ್ತಾಯದ ಪ್ರಕಾರ ಯಾವ ಹಕ್ಕು ಇದೆಯೆಂದು ನಾನು ಕೇಳುತ್ತೇನೆ. ಇದೇ ವಿಷಯವನ್ನು ಅನೇಕ ಹೈಕೋರ್ಟುಗಳಲ್ಲಿ ಚಾಲೆಂಜ್ ಮಾಡಿದ್ದಾರೆ; ಮತ್ತು ಹೈಕೋರ್ಟಿನವರೂ ಕೂಡ ಅದಕ್ಕೆ ಸರಿಯಾದ ತೀರ್ಪನ್ನೂ ಸಹ ಕೊಟ್ಟಿದ್ದಾರೆ. ಮದ್ರಾಸ್ ಹೈಕೋರ್ಟಿನಲ್ಲಿ ಈ ಲೆವಿ ಕಾನೂನು ಸಂಬಂಧವಾಗಿ 2–3ಸಾರಿ ತೀರ್ಪು ಬಂದಿದೆ. ಇತ್ತಕಡೆ ಬಂದಂಥ ತೀರ್ಪಿನ ಪ್ರಕಾರ ಅಲ್ಲಿಯ ಹೈಕೋರ್ಟ್ ರೈತರಿಂದ ಲೆವಿ ಕಾನೂನು ಮುಖಾಂತರ ಪಡೆದಂಥ ಬತ್ತವನ್ನು ಹಿಂದಕ್ಕೆ ಕೊಡಬೇಕೆಂದು ಹುಕುಂ ಮಾಡಿದೆ. ಬತ್ತ ಕೊಡುವುದಕ್ಕೆ ಫ್ರೀ ವಸೂಲಿ ಇಲ್ಲದಿದ್ದರೆ, ಆ ಬತ್ತದ ಬೆಲೆಯನ್ನು ಮಾರ್ಕೆಟ್ ದರದಲ್ಲಿ ಕೊಡುವಂಥ ಹುಕುಂ ಕೊಡುವ ಸರ್ಕಾರ ಕಾನೂನು ವಿಮರ್ಶೆಮಾಡಬೇಕು, ಅಂದರೆ, ಕಾನೂನಿಗೆ ಅಮರ್ಯಾದೆ ಕೊಟ್ಟು, ಕಾನೂನು ಉಲ್ಲಂಘನೆ ಮಾಡುವವರಿಗೆ ಶಿಕ್ಷೆ ಕೊಡಬೇಕು. ಇದು ಸರ್ಕಾರದ ಮುಖ್ಯ ಕರ್ತವ್ಯ. ಹೀಗಿರುವಾಗ ಹೈಕೋರ್ಟ್ ಕೊಟ್ಟಿರುವ ತೀರ್ಪಿಗೆ ವಿರೋಧವಾಗಿ ಹೋಗಿ ಅದನ್ನು ಈ ರೀತಿ ಮುರಿದುಹಾಕಿದರೆ ರೈತರಿಗೆ ಇಂತಹ ಸರ್ಕಾರದ ಮೇಲೆ ಯಾವರೀತಿ ವಿಶ್ವಾಸವಿರಹುದು. ರೈತರು ಕೃಷಿ ಉತ್ಪತ್ತಿ ಅಭಿವೃದ್ಧಿಯಲ್ಲಿ ಎಷ್ಟರಮಟ್ಟಿಗೆ ಕೆಲಸಮಾಡಿಯಾರು, ಸರ್ಕಾರಕ್ಕೆ ಎಷ್ಟರಮಟ್ಟಿಗೆ ರೈತರು ಸಹಕಾರಿಯಾಗಬಹುದು, ಮತ್ತು ಸರ್ಕಾರ ರೈತರಿಗೆ ಎಷ್ಟರಮಟ್ಟಿಗೆ ಸಹಾಯಮಾಡಬಹುದೆಂಬುದನ್ನು ನಾವು ಊಹಿಸುತ್ತೇವೆ.

ಇನ್ನು ನಮ್ಮ ಜಿಲ್ಲೆಯ ವಿಷಯ. ನಮ್ಮಲ್ಲಿ ಆಹಾರೋತ್ಪತ್ತಿಗೆ ಬಹಳ ತೊಂದರೆ ಬಂದಿದೆ. ಮೈಸೂರು ಭೂ ಮಸೂದೆ ವಿಷಯವಾಗಿ ಹೇಳುವುದಾದರೆ, ಇದು ಈಗ ಬರಬಾರದು ಅಥವಾ ಅದರಲ್ಲಿ ಯಾರು ಉಳುಮೆ ಮಾಡಿಕೊಂಡಿದ್ದಾರೋ ಅವರಿಗೆ ನ್ಯಾಯ ಆಗಬಾರದೆಂದು ನಮ್ಮ ಜಿಲ್ಲೆಯ ಅಭಿಪ್ರಾಯವಲ್ಲ. ಆದರೆ ಸರ್ಕಾರದವರು ಯಾವ ಕಾನೂನನ್ನು ತಂದರೂ, ಮುಖ್ಯವಾಗಿ ಆಹಾರೋತ್ಪತ್ತಿಯನ್ನು ಹೆಚ್ಚಿಸುವ ಉದ್ದೇಶ ಇರಬೇಕು. ಯಾರು ಕೃಷಿಯಲ್ಲಿ ತೊಡಗಿದ್ದಾರೋ, ಯಾರು ಅನೇಕ ವರ್ಷಗಳಿಂದ ಲ್ಯಾಂಡ್‌ಲಾರ್ಡ್ ಆಗಿರುತ್ತಾರೋ ಅಂತಹವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕು. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ನಮ್ಮ ಜಿಲ್ಲೆಯ ಎಲ್ಲಾ ಶಾಸಕರೂ ಕೂಡ ಒಗ್ಗಟ್ಟಾಗಿ ಮಾನ್ಯ ನಿಜಲಿಂಗಪ್ಪನವರಿಗೆ ಮತ್ತು ಮಾನ್ಯ ವೀರೇಂದ್ರ ಪಾಟೀಲರಿಗೆ ಕೂಡ, ನಮ್ಮ ಸಮಸ್ಯೆಯ ಬಗ್ಗೆ ಹೇಳಿದ್ದೇವೆ. ಭೂಮಸೂದೆಯನ್ನು ತರುವಾಗ ಎಲ್ಲಾ ವಿಶಿಷ್ಟ ಅಭಿಪ್ರಾಯಗಳನ್ನು ತಿಳಿದುಕೊಂಡು ಮಾಡಲಿಲ್ಲ. ನಮ್ಮ ಜಿಲ್ಲೆಯಲ್ಲಿ ಅಳಿಯ ಕಟ್ಟು ಇದೆ. ಅದರಲ್ಲಿ 1949ನೇ ಇಸವಿಯ ವರೆಗೆ ಅಳಿಯ ಸಂತಾನದಲ್ಲಿ ಪಾಲು ಇರಲಿಲ್ಲ. ಅಲ್ಲಿ ಕುಟುಂಬದಲ್ಲಿ ಯಜಮಾನನ ಅಶನಾರ್ಥಿಯಾಗಿರುವುದಲ್ಲದೆ, ಯಾರಿಗೂ ಪಾಲು ಕೇಳುವ ಹಕ್ಕಿರಲಿಲ್ಲ. 1949ನೇ ಇಸವಿಯಿಂದ ಪ್ರತಿಯೊಬ್ಬನಿಗೂ ಅಳಿಯಸಂತಾನದ ಪ್ರಕಾರ ಪಾಲು ಕೇಳುವ ಹಕ್ಕು ಬಂತು. ಅದರ ನಂತರ ಕುಟುಂಬದಲ್ಲಿ ಕಿರಿಯ ಸದಸ್ಯನೂ ಕೂಡ ಕೋರ್ಟಿನ ಮುಖಾಂತರ ತನ್ನ ಪಾಲನ್ನು ಪಡೆದಿದ್ದಾನೆ. ಆದರೆ ಈ ಮಧ್ಯದಲ್ಲಿ ಭೂಮಸೂದೆ ಕಾನೂನನ್ನು ಎಲ್ಲ ವರ್ಗದವರಿಗೂ ಅನುಕೂಲ ದೊರಕಿಸಿಕೊಡಬೇಕೆಂದು ಜಾರಿಗೆ ತಂದಿದ್ದಾರೆ. ಆದರೆ ಆ ಕಾನೂನಿನ ಸಫಲತೆಯನ್ನು ನಾವು ಪಡೆಯಲಿಲ್ಲ. ಅದರ ಬದಲು ಆ ಕಾನೂನಿಂದಾಗಿ ಎಲ್ಲಾ ವರ್ಗದವರಿಗೂ ತೊಂದರೆಯಾಗಿದೆ ಮತ್ತು ಕೋರ್ಟಿನಲ್ಲೂ ಕೂಡ ಯಾವ ಕೇಸಾಗಲೀ, ತೀರ್ಮಾನವಾಗದ ರೀತಿಯಲ್ಲಿ ಒಂದು ಕ್ಯಾಯಾಸ್

(ಶ್ರೀ ಬೋಳ ರಘುರಾಮ ಶೆಟ್ಟಿ)

ಪರಿಸ್ಥಿತಿ ಉಂಟಾಗಿದೆ. ಅದರಲ್ಲಿ ಸ್ಮಾಲ್ ಹೋಲ್ಡರ್ಸ್ ಆಗಬೇಕಾದರೆ ವಾರ್ಷಿಕ ಉತ್ಪತ್ತಿ 1,200 ರೂಪಾಯಿ ಇಟ್ಟಿದ್ದಾರೆ. ನಮ್ಮಲ್ಲಿ ತಿಳಿದ ಹಾಗೆ ಈ ಕಾಲದಲ್ಲಿ ಒಬ್ಬ ಬೇಡುವವನಿಗೂ ಕೂಡ ವಾರ್ಷಿಕ ಉತ್ಪತ್ತಿ ಒಂದು ಸಾವಿರದ ಇನ್ನೂರು ರೂಪಾಯಿಯಾಗಿರುತ್ತದೆ. ಇದರ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಯಾರೂ ಸ್ಮಾಲ್ ಹೋಲ್ಡರ್ಸ್ ಆಗುವುದಿಲ್ಲ. ಅನಂತರ ಫೇರ್ ರೆಂಟ್‌ಗೆ ಬರುವಾಗ ಪ್ರಿನ್ಸಿಪಾಲ್ ಕ್ರಾಪ್ ಆಧಾರದ ಮೇಲೆ ಫೇರ್ ರೆಂಟ್ ನಿರ್ಣಯ ಮಾಡಬೇಕೆಂದು ಉಂಟು. ಈ ಅಧಿಕಾರ ತಾಹಸೀಲ್ದಾರರಿಗೆ ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯ 8 ತಾಲ್ಲೂಕುಗಳಲ್ಲಿ ಬೇರೆ ಬೇರೆ ರೀತಿಯ 8 ನಮೂನೆಯ ಬೆಳೆಯ ಉತ್ಪತ್ತಿ ಇದೆ. ಪ್ರಿನ್ಸಿಪಾಲ್ ಡೆಫಿನಿಶನಿನಲ್ಲಿ ಕೆಲವು ಕಡೆಗಳಲ್ಲಿ ನಮ್ಮಲ್ಲಿರುವಂತಹ ತೆಂಗಿನ ಬೆಳೆಯನ್ನು ಸೇರಿಸಿಲ್ಲ; ಅಡಿಕೆಯ ಬೆಳೆಯನ್ನು ಸೇರಿಸಿಲ್ಲ. ಇದರಿಂದಾಗಿ ಒಂದು ಕೋರ್ಟಿಗೆ ಎರಡು ಮೂರು ನಮೂನೆಯ ಕೇಸಿನ ಸ್ಥಳವಿದ್ದರೆ, ಎರಡು ಮೂರು ನಮೂನೆಯ ಜಡ್ಜ್‌ಮೆಂಟ್ ಕೊಡುವ ಸಂದರ್ಭ ಬರುತ್ತದೆ. ರಿಸಮ್‌ಶನ್ ಕೇಸಿನಲ್ಲಿ ಎರಡು ಸ್ಟ್ಯಾಂಡರ್ಡ್ ಎಕರೆ ಬಿಡಬೇಕೆಂದು ಇರುತ್ತದೆ. ನಮ್ಮ ಜಿಲ್ಲೆಯಲ್ಲಿ ಇದರಿಂದ ಯಾರಿಗೂ ನ್ಯಾಯ ಸಿಗುವುದಿಲ್ಲ. ಇದು ಬರೇ ಕಾಗದದಲ್ಲಿ ಬರೆದಿರಬೇಕಾಗುತ್ತದೆ. ಅದಲ್ಲದೆ ಭೂಮಸೂದೆಯಲ್ಲಿ ರಿಸಂಶನ್ ಮಾಡಬೇಕಾದರೆ, ಅವರ ಮುಖ್ಯವಾದ ಉತ್ಪತ್ತಿ ಮೇಲೆ ರಿಸಂಶನ್ ಮಾಡಬೇಕು. ಸ್ಥಳದ ಉತ್ಪತ್ತಿ ಜಾಸ್ತಿ ಇರಬಹುದು ಎಂದು ರೂಲ್ಸ್ ಇರುವುದರಿಂದ ಅಲ್ಲಿ ರಿಸಂಶನ್ ಮಾಡುವಾಗ ಸಾಧಾರಣ 100 ರಲ್ಲಿ 90 ಮಂದಿಯುದ್ದು ರಿಸಂಶನ್ ಮಾಡುವುದಕ್ಕಾಗುವುದಿಲ್ಲ. ಈ ರೀತಿಯಿಂದ ಈ ಮಸೂದೆಯು ನಮ್ಮ ಜಿಲ್ಲೆಯ ಮಟ್ಟಿಗೆ ರಷ್ಯದ ಮಾದರಿಯು, ಚೈನಾದ ಮಾದರಿಯ ಶಾಸನವಾಗಿದೆ. ಈ ವಿಚಾರವಾಗಿ ನಮ್ಮ ಜಿಲ್ಲೆಯ ಎಲ್ಲಾ ಪಕ್ಷದವರೂ ಎಲ್ಲಾ ಶಾಸಕರೂ ಸೇರಿ ಸರ್ಕಾರಕ್ಕೆ ಒಂದು ಮನವಿಯನ್ನು ಒಪ್ಪಿಸಿದ್ದಾರೆ. ಇದರಲ್ಲಿ ಟೆನೆನ್ಸಿ ಕ್ಲಾಸಿನ ಪ್ರತಿನಿಧಿಗಳೂ ಸೇರಿದ್ದಾರೆ. ಆದ್ದರಿಂದ ಇದಕ್ಕೆ ಒಂದು ತಿದ್ದುಪಡಿಯನ್ನು ಮಾಡುವುದು ಅತಿ ಅಗತ್ಯವೆಂದು ನಾನು ಈ ಮೊದಲೂ ಹೇಳಿದ್ದೇನೆ, ಈಗಲೂ ಹೇಳುತ್ತೇನೆ.

ಇನ್ನು ಕೃಷಿ ಉತ್ಪತ್ತಿ ಜಾಸ್ತಿಯಾಗಬೇಕಾದರೆ, ಸಹಕಾರ ಸಂಘಗಳ ಬೆಳವಣಿಗೆ ಅಗತ್ಯ. ಹಳ್ಳಿಯು ಉದ್ಧಾರವಾಗಬೇಕಾದರೆ, ಸಹಕಾರ ಸಂಘಗಳು, ಪಂಚಾಯತಿಗಳು ಎಲ್ಲಾ ಒಳ್ಳೆಯ ರೀತಿಯಲ್ಲಿ ನಡೆಯಬೇಕು. ಇವತ್ತು ಸಹಕಾರ ಸಂಘಗಳು ಅನೇಕ ಸಂಖ್ಯೆಯಲ್ಲಿದ್ದರೂ ಸಹ ಕಾರ್ಯದಕ್ಷತೆ ಅಲ್ಲಿ ಹೆಚ್ಚಾಗಲಿಲ್ಲ; ಮತ್ತು ಅಲ್ಲಿರುವಂತಹ ಲಂಚನಿರ್ಮೂಲವಾಗಲಿಲ್ಲ. ಆದ್ದರಿಂದ ಈ ರೀತಿ ಎಲ್ಲಿಯಾದರೂ ಲಂಚಕೋರತನ ನಡೆದರೆ, ಅಲ್ಲಿ ಕೆಲವರ ಮೇಲಾದರೂ ತಕ್ಷಣ ಕ್ರಮ ತೆಗೆದುಕೊಂಡರೆ, ಇದರ ಭಯದಿಂದ ಬೇರೆ ಸಂಸ್ಥೆಗಳಾದರೂ ಸರಿಯಾಗಿ ನಡೆಯಬಹುದು. ಅಲ್ಲಿ ಎಲ್ಲಾ ಒಳ್ಳೆಯ ರೀತಿಯಲ್ಲಿ ಆಡಿಟ್ ಆಗಬೇಕು. ಅಲ್ಲಿ ಏನಾದರೂ ಇಂಥ ಲಂಚಗುಳಿತನ ಪ್ರಕರಣಗಳು, ಲೋಪ ದೋಷದ ಪ್ರಕರಣಗಳು ಬಂದರೆ ಅದನ್ನು ಕೂಡಲೇ ವಿಚಾರಣೆ ಮಾಡಬೇಕು. ಅದೇ ರೀತಿ ನಮ್ಮ ಮಂಗಳೂರಲ್ಲಿ ಗೊಬ್ಬರದ ಕಾರ್ಖಾನೆ, ಪಣಂಬೂರು ಬಂದರು, ಮಂಗಳೂರು ರೈಲ್ವೇ, ಈ ಕೆಲಸಗಳನ್ನು ಕೇಂದ್ರ ಸರ್ಕಾರದವರು ಅಷ್ಟು ತ್ವರಿತವಾಗಿ ಮಾಡಲು ಗಮನ ಕೊಡುತ್ತಾ ಇಲ್ಲ. ಇದಕ್ಕಾಗಿ ನಮ್ಮ ಸರ್ಕಾರದವರು ಕೂಡ ಬಹಳ ಆಸಕ್ತಿಯಲ್ಲಿದ್ದಾರೆ. ನಮ್ಮ ಸರ್ಕಾರದವರು ಇನ್ನೂ ಆಸಕ್ತಿ ವಹಿಸಿ, ಕೇಂದ್ರ ಸರ್ಕಾರದವರಲ್ಲಿ ಇದನ್ನು ಬೇಗನೇ ಮಾಡುವಂತೆ ಒತ್ತಾಯ ತರಬೇಕೆಂದು ಹೇಳಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಸಂಗನಗೌಡ (ಲಿಂಗಸುಗೂರ್).—ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರು ಈ ಸಭೆಯ ಮಾನ್ಯ ಸದಸ್ಯರನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸುವ ನಿರ್ಣಯವನ್ನು ಸಮರ್ಥಿಸುತ್ತಾ ಈ ಪ್ರಸಂಗದಲ್ಲಿ ಕೆಲವೊಂದು ವಿಷಯಗಳನ್ನು ಮಾನ್ಯ ಸದಸ್ಯರ ಮತ್ತು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ರಾಜ್ಯಪಾಲರು ನಾನಾ ವಿಷಯಗಳನ್ನು ಈ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ವಿವರಿಸುತ್ತಾ ಹೋದ ವರ್ಷ ನಮ್ಮ ಸರ್ಕಾರದವರು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದಂತಹ ಸಾಧನೆಗಳನ್ನು ಈ ಸಭೆಯ ಗಮನಕ್ಕೆ ತಂದರಷ್ಟೇ ಅಲ್ಲದೆ, ಈ ವರ್ಷ ಪ್ರಾರಂಭವಾಗಲಿರುವ, ಮತ್ತು ರಾಜ್ಯಸರ್ಕಾರದವರು ಕೈಗೊಳ್ಳಲಿರುವ ಕೆಲವು ವಿಷಯಗಳ ಬಗ್ಗೆ ಸಹಾ ಸೂಕ್ಷ್ಮವಾದ ರೀತಿಯಲ್ಲಿ ಈ ಸಭೆಯ ಗಮನವನ್ನು ಸೆಳೆದಿದ್ದಾರೆ.

5-00 P. M.

ಆದ್ದರಿಂದ ನಾವು ಅವರಿಗೆ ಕೃತಜ್ಞತೆಯನ್ನು ಸಲ್ಲಿಸತಕ್ಕದ್ದು ಸೂಕ್ತ ಎಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಅವರು ತಮ್ಮ ಭಾಷಣವನ್ನು ಪ್ರಾರಂಭ ಮಾಡುವ ಕಾಲಕ್ಕೆ

ಹೋದ ವರ್ಷ ಅವರು ಈ ಸಭೆಯನ್ನುದ್ದೇಶಿಸಿ ಮಾತನಾಡಿದ ಮತ್ತು ಈ ವರ್ಷ ಮಾತನಾಡುವ ಅವಧಿಯೊಳಗೆ ನಡೆದಂತಹ ಘಟನೆಗಳನ್ನು ಹೇಳಿದ್ದಾರೆ. ತಾಲ್ಲೂಕು ಬೋರ್ಡು ಮತ್ತು ಪಂಚಾಯಿತಿಗಳ ಚುನಾವಣೆಯ ಬಗ್ಗೆ ಮಾನ್ಯ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಈ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಅಧಿಕಾರ ವಿಕೇಂದ್ರೀಕರಣವಾಗಿ ಪಂಚಾಯಿತಿ ರಾಜ್ಯಸ್ಥಾಪನೆ ಆಗಬೇಕಾದರೆ ಕೇವಲ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳು ಅಸ್ತಿತ್ವಕ್ಕೆ ಬಂದರೆ ಅಷ್ಟೇ ಸಾಲದು. ಜಿಲ್ಲಾ ಪರಿಷತ್ತು ಕೂಡ ಅಸ್ತಿತ್ವಕ್ಕೆ ಬರಬೇಕು. ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ನಿಜವಾದ ಪಂಚಾಯಿತಿ ರಾಜ್ಯವನ್ನು ಸ್ಥಾಪನೆ ಮಾಡುವುದು ಸರ್ಕಾರದ ಮುಖ್ಯ ಕರ್ತವ್ಯ ಎಂದು ನಾನು ಹೇಳುತ್ತೇನೆ. ಸಣ್ಣ ಸಣ್ಣ ವಿಷಯಕ್ಕೆ ಹಳ್ಳಿಗಳಿಂದ ರಾಜಧಾನಿಗೆ ಓಡಿಬರುವಂತಹ ಒಂದು ಪದ್ಧತಿಯನ್ನು ತಪ್ಪಿಸುವುದು ನಮ್ಮ ಸರ್ಕಾರದ ಕರ್ತವ್ಯ. ಸಣ್ಣ ಸಣ್ಣ ಕೆಲಸಗಳನ್ನು ಮಾಡಿಸುವುದಕ್ಕೆ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಅಧಿಕಾರ ಇಲ್ಲದೇ ಇರುವುದರಿಂದ ಅವರು ರಾಜಧಾನಿಯ ಕಡೆ ನೋಡುವ ಪರಿಸ್ಥಿತಿಯನ್ನು ತಪ್ಪಿಸಬೇಕು. ಇದು ಬಹಳ ಮುಖ್ಯವಾದ ಕೆಲಸ. ತಾಲ್ಲೂಕು ಬೋರ್ಡುಗಳಿಗೆ ಈಗ ಇರುವ ಅಧಿಕಾರಕ್ಕಿಂತಲೂ ಹೆಚ್ಚಿನ ಅಧಿಕಾರವನ್ನು ಕೊಟ್ಟು ಮತ್ತು ಜಿಲ್ಲಾ ಪರಿಷತ್ತುಗಳನ್ನು ರಚನೆ ಮಾಡಿ ಚುನಾಯಿತ ಸದಸ್ಯರನ್ನೂ ಮತ್ತು ಚುನಾಯಿತ ಅಧ್ಯಕ್ಷರನ್ನೂ ಮಾಡುವಂಥಾದ್ದನ್ನು ತೀವ್ರವಾಗಿ ಜಾರಿಗೆ ತರಬೇಕು. ಅದನ್ನು ಬೇಗ ತರುತ್ತೀರೆಂದು ನಾನು ಆಶೆ ಮಾಡುತ್ತೇನೆ.

ನಮ್ಮ ರಾಜ್ಯದಲ್ಲಿ ಹೆಚ್ಚು ಜನ ಹಳ್ಳಿಗಾಡುಗಳಲ್ಲಿ ವಾಸ ಮಾಡುತ್ತಿದ್ದಾರೆ. ಅದರಲ್ಲಿಯೂ ನಮ್ಮ ರಾಜ್ಯದಲ್ಲಿ 100ಕ್ಕೆ 80 ರಷ್ಟು ಜನ ಬೇಸಾಯದಿಂದ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ ಹೆಚ್ಚು ಜನ ಬೇಸಾಯವನ್ನೇ ತಮ್ಮ ಉದ್ಯಮವನ್ನಾಗಿ ಅವಲಂಬಿಸಿಕೊಂಡಿದ್ದಾರೆ. ಆದ್ದರಿಂದ ಈ ಕ್ಷೇತ್ರದ ಅಭಿವೃದ್ಧಿಯೇ ನಮ್ಮ ರಾಜ್ಯದ ಅಭಿವೃದ್ಧಿ. ಈ ಕ್ಷೇತ್ರದಲ್ಲಿ ಎಷ್ಟು ರೀತಿಯಾಗಿ, ಎಷ್ಟು ತೀವ್ರಗತಿಯಿಂದ ಕ್ರಾಂತಿಕಾರಕವಾದ ಬದಲಾವಣೆಗಳನ್ನು ತರುತ್ತಾರೆಯೋ ಅಷ್ಟೂ ರಾಜ್ಯದ ಜನತೆಗೆ ಕ್ಷೇಮ ಎಂದು ನಾನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಸರ್ಕಾರ ಇದುವರೆಗೆ ಅನೇಕ ರೀತಿಯಿಂದ ವ್ಯವಸಾಯ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಿದೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ (Agro Industries Corporation) ಮೂಲಕ, ಷೆಡ್ಯೂಲ್ ಬ್ಯಾಂಕುಗಳ ಮೂಲಕ ಹಣವನ್ನು ಒದಗಿಸಿ ಟ್ರ್ಯಾಕ್ಟರುಗಳನ್ನು, ಪಂಪುಸೆಟ್ಟುಗಳನ್ನು, ಇನ್ನೂ ಮುಂತಾದ ಸಲಕರಣೆಗಳನ್ನು ರೈತರಿಗೆ ಒದಗಿಸಿ ಕೊಟ್ಟಿದ್ದಾರೆ. ಇದರ ಜೊತೆಗೆ ಫರ್ಟಿಲೈಜರ್ಸ್, ಬೀಜ ಇತ್ಯಾದಿ ಸಲಕರಣೆಗಳನ್ನೂ ರೈತರಿಗೆ ಒದಗಿಸಿದ್ದಾರೆ. ಅನೇಕ ಬ್ಯಾಂಕುಗಳ ಮೂಲಕ ಸುಲಭ ಬಡ್ಡಿ ದರದಲ್ಲಿ ಸಾಲಗಳನ್ನು ರೈತರಿಗೆ ಪೂರೈಸಿದ್ದಾರೆ. ಇದು ಸೂಕ್ತ ಕೆಲಸ. ಆದರೂ ಸಹ ಯಾವ ರೀತಿಯಲ್ಲಿ, ಯಾವ ವೇಗದಲ್ಲಿ ಸರ್ಕಾರ ಈ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕಾಗಿತ್ತೋ ಆ ರೀತಿಯಲ್ಲಿ ಕ್ರಮವನ್ನು ಕೈಗೊಂಡು ಕೆಲಸಗಳು ನಡೆಯಲಿಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಹೆಚ್ಚು ಸರ್ಕಾರದ ದೃಷ್ಟಿ ಯಾವ ಭಾಗ ಅಭಿವೃದ್ಧಿ ಆಗಿದೆಯೋ ಅದೇ ಭಾಗದ ಅಭಿವೃದ್ಧಿಯನ್ನು ಮಾಡುವ ಕಡೆಗೆ ಇದೆಯೇ ವಿನಾ ಅನಭಿವೃದ್ಧಿ ಕ್ಷೇತ್ರದ ಬಗ್ಗೆ ಸರ್ಕಾರ ಅಲಕ್ಷ ತಾಳಿದೆಯೆಂದು ನಾನು ವಿಷಾದದಿಂದ ಹೇಳಬಯಸುತ್ತೇನೆ. ಈಗ ಉದಾಹರಣೆಗೆ ಹೇಳಬೇಕಾದರೆ ಕೃಷ್ಣ ಮೇಲ್ದಂಡೆಯ ಯೋಜನೆ ಮತ್ತು ತುಂಗಭದ್ರ ಜಲಾಶಯ ವಿಚಾರವನ್ನು ಹೇಳುವುದಾದರೆ ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರಾ ಯೋಜನೆಯನ್ನು ಕೈಗೊಳ್ಳುವ ಕಾಲಕ್ಕೆ ಸರಿಯಾದ ರೀತಿಯಲ್ಲಿ ಪರಿಷ್ಕಾರ ಮಾಡಲಾಗಿಲ್ಲ. ತಜ್ಞರ ಅಭಿಪ್ರಾಯದ ಪ್ರಕಾರ ತುಂಗಭದ್ರಾ ಜಲಾಶಯವನ್ನು ನಿರ್ಮಾಣ ಮಾಡುವ ಕಾಲಕ್ಕೆ ರಾಯಚೂರು ಜಿಲ್ಲೆಯ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಇನ್ನೂ ಹೆಚ್ಚು ಜಮೀನಿಗೆ ನೀರು ಸರಬರಾಜು ಮಾಡುವಂತೆ ಅಣೆಕಟ್ಟನ್ನು ಕಟ್ಟಬಹುದಾಗಿತ್ತು. ಅಲ್ಲಿ ಈ ದೆಶೆಯಲ್ಲಿ ಕೆಲಸ ನಡೆದಿಲ್ಲ. ಇವೊತ್ತೂ ಸಹ ತುಂಗಭದ್ರಾ ಪ್ರಾಜೆಕ್ಟಿನಿಂದ ರಾಯಚೂರು ಜಿಲ್ಲೆಗೆ–ವ್ಯವಸಾಯದ ಜಮೀನುಗಳಿಗೆ ಇನ್ನೂ ಹೆಚ್ಚು ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆ. ಆದರಿಂದ ಆ ಕೆಲಸವನ್ನು ಮಾಡಿ ರಾಯಚೂರು ಜಿಲ್ಲೆಯ ಜಮೀನುಗಳಿಗೆ ನೀರನ್ನು ಒದಗಿಸುವುದಕ್ಕೆ ಸರ್ಕಾರ ಪ್ರಯತ್ನವನ್ನು ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾಗಿರತಕ್ಕ ವೀರೇಂದ್ರ ಪಾಟೀಲರಿಗೆ ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ಅವರು ಪಬ್ಲಿಕ್ ವರ್ಕ್ಸ್ ಮಂತ್ರಿಗಳಾಗಿದ್ದಾಗ ಇದ್ದಷ್ಟು ಅಭಿರುಚಿ ಈಗ ಇಲ್ಲ. ಈಗ ಅವರಿಗೆ ಆದರ ಅಭಿರುಚಿ ಕಡಿಮೆಯಾಗಿದೆ. ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ಪೂರೈಸುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಅಷ್ಟು ಗಮನ ಕೊಡುತ್ತಿಲ್ಲ.

ರಾಜ್ಯಪಾಲರು ಭಾಷಣ ಮಾಡುವಾಗ ಒಂದು ವಿಷಯವನ್ನು ಹೇಳಿದ್ದಾರೆ. ಕೃಷ್ಣಾ ನೀರಿನ ವಿವಾದವನ್ನು ಕೇಂದ್ರ ಸರ್ಕಾರದವರು ಪಂಚಾಯಿತಿಗೆ ಒಪ್ಪಿಸಲು ನಿರ್ಧಾರ ಮಾಡಿದ್ದಾರೆ ಎಂದು

(ಶ್ರೀ ಕೆ. ಸಂಗನಗೌಡ)

ಗೊತ್ತಾಗಿದೆ. ಇದು ಬಹಳ ಸಂತೋಷ. ನಾವು ಇಷ್ಟಕ್ಕೇ ತೃಪ್ತಿ ಪಟ್ಟರೆ ಸಾಲದು. ಕೃಷ್ಣಾ ಮೇಲ್ದಂಡೆಯ ಯೋಜನೆ ಸುಮಾರು 50-60 ವರ್ಷಗಳಿಗೆ ಮೇಲ್ಪಟ್ಟು ಇರತಕ್ಕ ಯೋಜನೆ. ಅದನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು.

ಹೈದರಾಬಾದ ಸರ್ಕಾರದಲ್ಲೇ ಕಮಲದಿನ್ನಿ ಯೋಜನೆಯನ್ನು ಕೈಗೊಳ್ಳುವುದಕ್ಕೆ ನಿರ್ಧಾರವನ್ನು ಕೈಗೊಂಡಿದ್ದರು. ಆದರೆ ನಮಗೆ ಸ್ವಾತಂತ್ರ್ಯ ಬಂದು 22 ವರ್ಷಗಳಾದರೂ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಒಂದಲ್ಲ ಒಂದು ತೊಂದರೆಯಿಂದ ಇದನ್ನು ಮುಂದೂಡುತ್ತಿದ್ದಾರೆ. ಮೂರನೆಯ ಪಂಚವಾರ್ಷಿಕಯೋಜನೆಯಲ್ಲೇ ಇದನ್ನು ಕೈಗೊಳ್ಳಬೇಕಾಗಿತ್ತು. ನಮ್ಮ ಸರ್ಕಾರ ಅದಕ್ಕೆ ಲಕ್ಷ ಕೊಡಲಿಲ್ಲ. ಬಿಜಾಪುರ ರಾಯಚೂರು ಗುಲ್ಬರ್ಗ ಜಿಲ್ಲೆಗಳ ದೃಷ್ಟಿಯಿಂದ ಕೃಷ್ಣಾ ಮೇಲ್ದಂಡೆಯ ಯೋಜನೆ ಈ ಜಿಲ್ಲೆಗಳ ಜೀವನಾಡಿ ಎಂದು ಹೇಳಬೇಕಾಗಿದೆ. ಇದನ್ನು ಎಷ್ಟು ತೀವ್ರವಾಗಿ ಕೈಗೊಂಡರೆ ಅಷ್ಟು ತೀವ್ರವಾಗಿ ಆ ಭಾಗದ ಜನಗಳಿಗೆ ಬಹಳ ಉಪಕಾರ ಮಾಡಿದಂತಾಗುತ್ತದೆ ಇಲ್ಲದೇ ಹೋದರೆ ಆ ಜನರನ್ನು ಅಲಕ್ಷ ಮಾಡಿದಂತಾಗುತ್ತದೆ. ಈ ಯೋಜನೆಗೆ ಎಷ್ಟು ಹಣವನ್ನು ಒದಗಿಸಬೇಕೋ ಅಷ್ಟು ಹಣವನ್ನು ಒದಗಿಸಿ ಇದನ್ನು ಕಾರ್ಯಗತ ಮಾಡುವ ದಿಶೆಯಲ್ಲಿ ಇದುವರೆಗೂ ಸಾಕಷ್ಟು ಕೆಲಸ ನಡೆದಿಲ್ಲ. ಅದು ಪೂರ್ಣವಾಗಿ ಕೆಲಸ ನಡೆಯುವ ಪರಿಸ್ಥಿತಿಯಲ್ಲಿ ಇಲ್ಲ. ನಾರಾಯಣಪೂರ್ ಭಾಗದ ಅನೇಕ ಕೆಲಸಗಳಿಗಾಗಿ ಟೆಂಡರ್ ಕರೆದು ಅವು ಸರ್ಕಾರದ ಪರಿಶೀಲನೆಯಲ್ಲಿವೆ ಎಂದು ಗೊತ್ತಾಗಿದೆ. ಅವುಗಳನ್ನು ಸರ್ಕಾರ ಅಕ್ಸೆಪ್ಟ್ ಮಾಡಿ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ವರ್ಕ್ ಆರ್ಡರ್ ಕೊಡುವುದಕ್ಕೆ ವಿಳಂಬ ಮಾಡುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ. ಇದು ಒಳ್ಳೆಯ ಅಭಿಪ್ರಾಯವಲ್ಲ. ಆ ಕೆಲಸಗಳಿಗೆ ಟೆಂಡರನ್ನು ಕರೆದು ಅವುಗಳನ್ನು ಅಕ್ಸೆಪ್ಟ್ ಮಾಡಿ ಆ ಕೆಲಸಗಳನ್ನು ಪ್ರಾರಂಭ ಮಾಡಿದರೆ ಆ ಭಾಗದ ರೈತರಿಗೆ ಅವರ ಬೇಡಿಕೆಗಳು ಪೂರೈಸಿ ಅವರಿಗೆ ಸರ್ಕಾರದ ಬಗ್ಗೆ ವಿಶ್ವಾಸ ಹೆಚ್ಚುತ್ತದೆ. ಅವರಿಗೆ ಅತೃಪ್ತಿ ಕಡಿಮೆಯಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಇನ್ನೊಂದು ವಿಷಯವೇನೆಂದರೆ ಈಗ ಕಂಟ್ರಾಕ್ಟರುಗಳು ಸಲ್ಲಿಸಿರತಕ್ಕ ಟೆಂಡರುಗಳು ಏನಿವೆ ಅವುಗಳು ಬಹಳ ಒಳ್ಳೆಯ ಟೆಂಡರುಗಳು. ಅವುಗಳನ್ನು ಒಪ್ಪಿಕೊಂಡರೆ ಸರ್ಕಾರಕ್ಕೆ ಸುಮಾರು 25-30 ಲಕ್ಷ ರೂಪಾಯಿಗಳು ಉಳಿತಾಯವಾಗುತ್ತದೆ. ಆರ್ಥಿಕ ದೃಷ್ಟಿಯಿಂದ ಅದರಿಂದ ನಮ್ಮ ಸರ್ಕಾರಕ್ಕೆ ದೊಡ್ಡ ಲಾಭ ಇದೆ ಎಂದು ಹೇಳಬಹುದು. ಮತ್ತು ಸರ್ಕಾರ ಈ ವಿಷಯದಲ್ಲಿ ವಿಳಂಬ ಮಾಡುತ್ತಾ ಹೋದರೆ ಅವರಿಂದ ಅಸಂತೋಷವಲ್ಲ, ಅತೃಪ್ತಿ ಉಂಟಾಗಿ ಜನಗಳಲ್ಲಿ ತಪ್ಪು ಕಲ್ಪನೆ ಉಂಟಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಪ್ರತಿಯೊಂದು ಕೆಲಸಕ್ಕೂ ಸರ್ಕಾರ ಎಲ್ಲಿಂದ ಹಣವನ್ನು ತರಬೇಕು ಎಂದು ಪ್ರಶ್ನೆ ಬರಬಹುದು. ರಿಸೋರ್ಸ್ ಬಗ್ಗೆಯೂ ಮಾನ್ಯ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ವಿಚಾರ ಮಾಡಿದ್ದಾರೆ. ಕೃಷ್ಣಾ ಮೇಲ್ದಂಡೆಯ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಪಿ. ಡಬ್ಲ್ಯು ಡಿವಿಜನ್‌ಗಳು ಎಷ್ಟು ಇವೆಯೋ ಅವುಗಳಿಗೆ ಖರ್ಚು ಮಾಡತಕ್ಕ ಬಗ್ಗೆ ಒಂದು ಸೀಲಿಂಗ್ ಲಿಮಿಟ್ ಹಾಕಬೇಕು. ಪ್ರತಿಯೊಂದು ಡಿವಿಜನ್ನಿಗೂ 30-40 ಲಕ್ಷಕ್ಕಿಂತ ಹೆಚ್ಚು ಖರ್ಚು ಮಾಡಬಾರದು ಎಂದು ಅವುಗಳಿಗೆ ಸೀಲಿಂಗ್ ಲಿಮಿಟ್ ಹಾಕಬೇಕು. ಆದರಿಂದ ಸರ್ಕಾರಕ್ಕೆ 4-5 ಕೋಟಿ ರೂಪಾಯಿಗಳು ಉಳಿತಾಯವಾಗಬಹುದು. ಅದನ್ನು ಕೃಷ್ಣಾ ಮೇಲ್ದಂಡೆಯ ಯೋಜನೆಗೆ ಉಪಯೋಗಿಸಬಹುದು. ಈ ರೀತಿ 5 ಅಥವ 10 ವರ್ಷಗಳು ಮಾತ್ರ ಮಾಡಬೇಕೆಂದು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಎರಡನೆಯ ವಿಚಾರವೆಂದರೆ ಗುಲ್ಬರ್ಗ, ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಎರಡು ಮೂರು ಡಿವಿಜನ್‌ಗಳಿವೆ. ಒಂದೊಂದು ಜಿಲ್ಲೆಯಲ್ಲಿ ಕೇವಲ ಒಂದೊಂದು ಡಿವಿಜನ್ ಮಾತ್ರ ಇಟ್ಟು ಉಳಿದ ಡಿವಿಜನ್‌ಗಳನ್ನು ಕೃಷ್ಣ ಮೇಲ್ದಂಡೆ ಯೋಜನೆಯ ಪ್ರದೇಶಕ್ಕೆ ವರ್ಗ ಮಾಡಬೇಕು. ಈ ರೀತಿ ಮಾಡಿದರೆ ಸರ್ಕಾರಕ್ಕೆ ಹಣ ಉಳಿಯುವುದಲ್ಲದೆ ಈ ಯೋಜನೆಯ ಕೆಲಸವೂ ಸಹ ಜಾಗ್ರತೆಯಾಗುತ್ತದೆ. ಇದರ ಜೊತೆಗೆ ಕೃಷ್ಣಾ ವ್ಯಾಲಿ ಕಾರ್ಪೊರೇಷನ್ ಎಂದು ಒಂದು ಮಂಡಲಿ ರಚನೆ ಮಾಡಬೇಕು. ಈ ಕಾರ್ಪೊರೇಷನ್ ಮೂಲಕ ಹಣವನ್ನು ಸಾರ್ವಜನಿಕರಿಂದ ಸಾಲವಾಗಿ ಪಡೆದು ಜಾಗ್ರತೆ ಈ ಯೋಜನೆಯನ್ನು ಮುಗಿಸಬೇಕು. ಇಲ್ಲದಿದ್ದರೆ ಈ ಯೋಜನೆ ಜಾಗ್ರತೆ ಮುಗಿಯದೆ ಕೇವಲ ಕಾಗದದ ಮೇಲೆಯೇ ಉಳಿಯುತ್ತದೆಂದು ಹೇಳುತ್ತೇನೆ. ಈ ಬಗ್ಗೆ ನನ್ನ ಇನ್ನೊಂದು ಸಲಹೆಯೆಂದರೆ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಯಾವ ಯಾವ ಜಮೀನುಗಳಿಗೆ ನೀರಿನ ಅನುಕೂಲವಾಗುತ್ತದೋ, ಆ ಭಾಗದ ಜನರಿಂದ ಎಕರೆಗೆ ಒಂದು ರೂಪಾಯಿನಂತೆ ಸುಮಾರು 5-10 ವರ್ಷಗಳವರೆಗೆ ಹೆಚ್ಚಿನ ಕಂದಾಯವನ್ನು ವಸೂಲಿ ಮಾಡಬೇಕು.

[Mr. SPEAKER in the Chair]

ಇನ್ನು ನಮ್ಮ ರಾಜ್ಯದಲ್ಲಿಯೂ ಲಾಟರಿ ಪದ್ಧತಿಯನ್ನು ಜಾಗ್ರತೆ ಜಾರಿಗೆ ತರಬೇಕು. ಹಿಂದೆ ಈ ಮನೆಯಲ್ಲಿ ಒಂದೆರಡು ಸಲ ಈ ಪ್ರಶ್ನೆ ಬಂದಾಗ ಸರ್ಕಾರದವರು ವಿಚಾರ ಮಾಡುತ್ತಿದ್ದೇವೆಂದು ಹೇಳಿದ್ದರು. ಈ ಲಾಟರಿ ಯೋಜನೆಯನ್ನು ಜಾಗ್ರತೆ ಜಾರಿಗೆ ತಂದರೆ ಸರ್ಕಾರಕ್ಕೆ ಹೆಚ್ಚು ಹಣ ಸಿಗಬಹುದೆಂದು ಹೇಳಬಯಸುತ್ತೇನೆ.

ಇನ್ನು ಸಣ್ಣ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಬಗ್ಗೆ ಸರ್ಕಾರದವರು ನಾಲ್ಕನೆಯ ಯೋಜನೆಯಲ್ಲಿ ಒದಗಿಸಿರುವ ಹಣ ಬಹಳ ಕಡಿಮೆ ಇದೆ. ಇನ್ನು ಮುಂದೆ ಸರ್ಕಾರದವರು ಒಂದೊಂದು ಜಿಲ್ಲೆಯಲ್ಲಿ ಸರ್ವಸಾಧಾರಣವಾಗಿ 3–4 ಸಣ್ಣ ಮತ್ತು ಮಧ್ಯಮ ಪ್ರಮಾಣದ ಯೋಜನೆಗಳನ್ನು ಪ್ರತಿವರ್ಷ ಕಡ್ಡಾಯವಾಗಿ ತೆಗೆದುಕೊಂಡು ಮುಗಿಸಿದರೆ ಆಯಾ ಭಾಗದ ಜನರ ಬೇಡಿಕೆಯನ್ನು ಪೂರೈಸಿದಂತಾಗುತ್ತದೆ. ಈಗ ಈ ಬಾಬಿಗೆ ಒದಗಿಸಿರುವ ಹಣ ಬಹಳ ಕಡಿಮೆ ಎಂದು ಹೇಳಬಹುದು. ಆದ್ದರಿಂದ ಇದನ್ನು ಪುನಃ ಪರಿಶೀಲಿಸಿ ಹೆಚ್ಚು ಹಣವನ್ನು ಈ ಬಾಬಿಗೆ ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಗಣಿಗಳ ಮತ್ತು ಕಾರ್ಮಿಕರ ವಿಷಯದ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ನಾನು ವಿಶೇಷವಾಗಿ ಹಟ್ಟಿ ಚಿನ್ನದ ಗಣಿಯ ಕಾರ್ಮಿಕರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇದು ಒಂದು ನಮ್ಮ ರಾಜ್ಯದ ಹೆಮ್ಮೆಯ ಗಣಿಯಾಗಿದೆ. ಮೂರು ಸಾವಿರಕ್ಕೂ ಹೆಚ್ಚು ಜನರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಕೆಲಸಗಾರರಿಗೆ ಅನೇಕ ರೀತಿಯ ತೊಂದರೆಗಳಿವೆ. ಈ ಗಣಿಯಲ್ಲಿ ಸ್ಥಳದ ಜನರಿಗೆ ಹೆಚ್ಚು ನೌಕರಿ ಸಿಗದೆ ಹೊರಗಿನವರಿಗೆ ಮಾತ್ರ ಹೆಚ್ಚಿನ ನೌಕರಿ ಸಿಗುತ್ತಿದೆ. ಮತ್ತು 10—15 ವರ್ಷಗಳಿಂದ ಕೆಲಸ ಮಾಡುತ್ತಿರುವವರಿಗೆ ಇನ್ನೂ promotion (ಬಡ್ತಿ) ಸಿಕ್ಕಿಲ್ಲ. ಸುಮಾರು 2 ಸಾವಿರ ಜನರು ಗಣಿಯ ಒಳಗೆ ಕೆಲಸ ಮಾಡುತ್ತಾರೆ. ಗಣಿಯೊಳಗೆ ಕೆಲಸ ಮಾಡುವವರಿಗೆ ಯಾವಾಗಲೂ ತೊಂದರೆ ಇರುತ್ತದೆ. ಆದ್ದರಿಂದ ಇಂತಹವರಿಗೆ ಕಡ್ಡಾಯವಾಗಿ ಎಂಪ್ಲಾಯೀಸ್ ಸ್ಟೇಟ್ ಇನ್ಶೂರೆನ್ಸ್ ಸ್ಕೀಮನ್ನು ಜಾರಿಗೆ ತರಬೇಕು.

ಇನ್ನು ನಮ್ಮ ಸರ್ಕಾರದವರು ಪ್ರತಿವರ್ಷ ಶಿಕ್ಷಣಕ್ಕಾಗಿ ಸುಮಾರು 36 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದಾರೆ. ಆದರೂ ಕೂಡ ಹಟ್ಟಿಗಣಿ ಪ್ರದೇಶದಲ್ಲಿ ಒಂದು ಹೈಸ್ಕೂಲನ್ನು ಇನ್ನೂ ಪ್ರಾರಂಭ ಮಾಡಲಿಲ್ಲ. ಹಿಂದಿನ ಮುಖ್ಯ ಮಂತ್ರಿಗಳು 1967ರಲ್ಲಿ ಅಲ್ಲಿಗೆ ಬಂದಿದ್ದಾಗ್ಯೆ ಒಂದು ಹೈಸ್ಕೂಲನ್ನು ಪ್ರಾರಂಭ ಮಾಡುವುದಕ್ಕೆ ಏರ್ಪಾಡು ಮಾಡುವುದಾಗಿ ವಚನ ಕೊಟ್ಟಿದ್ದರು. ಆದರೆ ಸರ್ಕಾರ ಇನ್ನೂ ಆ ವಚನವನ್ನು ಪೂರೈಸಿಲ್ಲ. ಹಟ್ಟಿಚಿನ್ನದ ಗಣಿ ಪ್ರದೇಶ ಕಾಸ್ಮೊಪಾಲಿಟನ್ ಸಿಟಿಯಂತೆ ಅಭಿವೃದ್ಧಿಹೊಂದುತ್ತಿದೆ. ಅಲ್ಲಿರುವ ಆಸ್ಪತ್ರೆ ಸಹ ಅಲ್ಲಿಯ ಕಾರ್ಮಿಕರ ಬೇಡಿಕೆಗಳನ್ನು ಪೂರೈಸುತ್ತಿಲ್ಲ. ಅಲ್ಲಿ ಎರಡು ಸಾವಿರ ಮಹಿಳಾ ಕಾರ್ಮಿಕರಿದ್ದಾರೆ. ಆದ್ದರಿಂದ ಆ ಭಾಗಕ್ಕೆ ಒಬ್ಬ ಮಹಿಳಾ ಡಾಕ್ಟರನ್ನು ನೇಮಕ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಮಾನ್ಯ ಅಧ್ಯಕ್ಷರು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri D. B. KALMANKAR (Aland).—Mr. Speaker, Sir, while opposing the motion of thanks, I want to make some observations. It has been said that the elections to the Taluk Boards were conducted in a very orderly and peaceful manner, but my experience in my taluk has been otherwise. I found that the whole Government machinery was subverted and the whole authority was utilized by the party in power and I can say without contradiction that all corrupt practices were used in the recent Taluk Board elections with the result that the very important canon of democracy that people should have freedom to vote for the persons of their choice, was not made available to them and consequently the opposition suffered reverses. When I see this thing on the one hand and the actions of the Naxalites on the other, I feel that the party in power had not been sincere to democratic conventions. I think they have misused their power; they have misused funds and even drought relief works were utilized for the purpose of winning elections. This is

(SRI D. B. KALMANKAR)

not the last election in democracy. We have to fight many more elections. But the way in which things were conducted and the way in which Deputy Commissioners and others were instructed to see that Congress candidates win the elections go to show that the party in power is going on totalitarian lines and they have no regard for democratic values of life. That is the great danger that we are faced with. I could have understood if they had won the elections by fair and peaceful means, but the fact that so many writ petitions have been filed goes to show that all was not well and if the party in power take pride that they have won the Taluk Boards elections it is vain glory and it is not correct.

Then I would refer to the scarcity conditions that are still prevailing in 3 districts of Hyderabad Karnatak. Due to *Chikka* disease rabi crops have failed and there are no hopes of saving the crops. The ryots are, therefore, in great anxiety. I would, therefore, request Government to continue the scarcity works in those 3 districts. I would also request Government to give up levy procurement of jowar and also to suspend collection of takkavi loans and land revenue because the condition in those 3 districts is very bad and the ryots are in great difficulty.

Then I would speak on co-operation. It is also admitted in the Governor's Address that out of Rs. 25 crores spent on co-operation very little is spent on the needs of the vulnerable sections of society, about Rs. One crore or so. I think the very concept of co-operation is suffering. The co-operative movement is mainly meant to help those who cannot help themselves, the small land owners, the small consumers and those who cannot afford to run their own business. It is they who are meant to be benefited by co-operation. But, today, we find that such vulnerable sections of the society are neglected and it is only those who do not need the help from the co-operative societies are benefited. Regarding this, the other day, even the Hon'ble Minister of State for Food said that the co-operative movement is suffering and there is lot of corruption and it is not doing good to the society. But, the Deputy Minister for Co-operation Sri B. L. Gowda said that it is doing good work. I agree with the Hon'ble Minister for Food Sri Shetty that it is not doing any good work. We find, everywhere, that it has become a grazing ground for the politicians, particularly the people from the Party in power.

No mention has been made in the Governor's Address about the Upper Krishna Project. As a matter of fact, the Government is well aware that irrespective of political considerations, all the Members of the Legislative Assembly from these three districts of Hyderabad-Karnatak had submitted a memorandum at the time of the last Budget Session, that at least Rs. 20 crores must be earmarked for the Upper Krishna Project. As it is well known, Gulbarga, Bijapur, Bidar and Raichur

are such districts where famine overtakes every three years. There is no other major project to cater to the needs of these districts, to bring up the economic standard of the people and to bring up the industrial and other developments in that region. It is the only project, which, if undertaken and completed, will help in changing the whole structure and the economic conditions of the people of that area. Moreover, we are told that it is going to be executed in two stages and it involves more than Rs. 150 crores. But, if only a meagre amount of one crore of rupees per year is being given for that Project, then, I think, it will take a century to complete it. If the Government is very serious about it, as the Chief Minister has been repeatedly saying when he visits Gulbarga that they will see that the Upper Krishna Project is completed early, I would request the Government that in all earnestness it must be given top priority in view of the backwardness of the districts. Then only, I think, there is some justice in his statement.

No mention has been made in the Address regarding the demand for a University for Hyderabad-Karnatak. The Hon'ble Chief Minister, very recently had said at Gulbarga that he would see that one University for Hyderabad-Karnatak area is established. I request the Government to consider this aspect to see that the educational standards are improved and more educational opportunities are given to that region to which they are entitled.

Regarding Irrigation Schemes, major, medium and minor, I really fail to understand how the Government has been spending money uneconomically on the various schemes. Out of Rs. 318 crores that were earmarked to be spent in the last three Five Year Plans, I find that only Rs. 95 crores are spent on this. So many projects are taken up, but none of them have been productive, as a result of which only 11 lakhs of acres have been irrigated. I should say that it is due to lack of proper priorities being given to different projects. Money to the tune of Rs. 95 crores that has been spent on these projects, which are yet to be completed, is going to waste. But, the money that is being spent on minor irrigation, which will give immediate results is meagre. That shows that there is lack of proper planning and proper utilisation of funds. Very few projects could have been taken up and completed, so that different parts of the State could have been benefited. Instead of that, there has been concentration in some parts to the detriment of some other parts. Those areas which are famine sticken and backward could have been given priority and works could have been taken up accordingly. In this respect, I should say there is failure on the part of the Government.

In Gulbarga Division, the M.S.R.T.C Bus Depot is working in a miserable manner. There are so many accidents and in one of the accidents I was also caught about one and half months back. When I made enquiries, I was told that no tools are provided, no spares are provided and there are no Mechanics and Helpers, and nobody is there to shoulder the responsibility. There is no supervision by the Divisional

(SRI D. B. KALMANKAR)

Controller. I have been repeatedly writing about these things, but to no result. The safety of the passengers is in great danger, and if such state of affairs continue, how could such undertakings of the Government receive co-operation from the public? There is every likelihood that people will criticise against such undertakings. This also requires to be improved.

With regard to land reforms, it is said that about 5 lakhs of acres have been given so far to tenants. If 'land to the tiller' is a principle, which we have to accept in order that our production is increased and social justice is done to tenants and to those who are entitled to lands, the intermediaries should be abolished. I therefore request the Government to bring in some more radical reforms so that the land may be utilised by those who really need it.

With these observations, I thank the Chair.

† ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು 2).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಮಾಡಿದ ಭಾಷಣವನ್ನು ಸ್ವಾಗತಿಸುತ್ತಾ, ಮಾನ್ಯ ಸದಸ್ಯರಾದ ಶ್ರೀ ಡಿ. ಎಂ. ಸಿದ್ದಯ್ಯನವರು ಇಲ್ಲಿ ತಂದಿರುವ ಪ್ರಸ್ತಾವವನ್ನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಇಲ್ಲಿ ಹೇಳಲು ಇಚ್ಛೆ ಪಡುತ್ತೇನೆ.

ರಾಜ್ಯಪಾಲರ ಭಾಷಣ ಅನೇಕ ವಿಷಯಗಳಲ್ಲಿ ಬಹಳ ಪ್ರಾಮುಖ್ಯವಾದ ವಿಚಾರಗಳನ್ನು ಉಲ್ಲೇಖ ಮಾಡಿದೆ. ಇದರಲ್ಲಿ ಬಹಳ ಮುಖ್ಯವಾದ ಮಹಾಜನ್ ಆಯೋಗದ ಬಗ್ಗೆ ಬಹಳ ಸ್ಪಷ್ಟವಾದ ಹಾಗೂ ಖಡಾ ಖಂಡಿತವಾದ ವಿಚಾರಗಳನ್ನು ಉಲ್ಲೇಖ ಮಾಡಿದ್ದಾರೆ. ಅವರು ಮಾಡಿರ ತಕ್ಕದ್ದು ಎಂದರೆ ಮಹಾರಾಷ್ಟ್ರ ಮತ್ತು ಕರ್ನಾಟಕ ಹಾಗೂ ಕೇರಳ ಮತ್ತು ಕರ್ನಾಟಕದ ಗಡಿ ಸಮಸ್ಯೆಗಳು ಬಹಳ ಮುಖ್ಯವಾದವು ಎಂದು ಮತ್ತು ಯಾವ ರೀತಿಯಾಗಿ ನಮ್ಮ ಮಹಾರಾಷ್ಟ್ರದ ಮುಖಂಡರುಗಳು ಒತ್ತಡಕ್ಕೆ ಸಿಕ್ಕಿ ಒಂದು ರೀತಿಯಾದ ಏಕ ಸದಸ್ಯರ ಆಯೋಗ ಮಾಡಬೇಕು ಎಂದು ಪದೇ ಪದೇ ಹೇಳಿ ಕೇಂದ್ರದ ಮೇಲೆ ಒತ್ತಾಯ ತಂದು ಮಹಾರಾಷ್ಟ್ರದ ಮುಖಂಡರುಗಳ ಮಾತಿಗೆ ಮಣಿದು ಕೇಂದ್ರದವರು ಈ ರೀತಿಯಾದ ಏಕ ಸದಸ್ಯ ಆಯೋಗವನ್ನು ಮಾಡಿದರು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈಗ ಈ ಆಯೋಗದವರು ಸರಕಾರಕ್ಕೆ ತಮ್ಮ ವರದಿಯನ್ನು ಕೊಟ್ಟಿದ್ದರೂ ಇದರ ಮೇಲೆ ಇನ್ನೂ ಯಾವ ತೀರ್ಮಾನವೂ ಆಗಿಲ್ಲ.

ಏಕಸದಸ್ಯ ಆಯೋಗದವರು ವರದಿಯನ್ನು ಪ್ರಕಟಮಾಡಿದರು. ಯಾವ ಮಹಾರಾಷ್ಟ್ರ ಮುಖಂಡರು ಈ ಏಕ ಸದಸ್ಯ ಆಯೋಗ ಆಗಬೇಕು ಎಂದು ಒತ್ತಾಯ ಮಾಡಿದರೋ ಅವರೇ ಈ ದಿನ ತಿರಸ್ಕಾರ ರೀತಿಯಲ್ಲಿ ವರ್ತಿಸಿದ್ದಾರೆ ಎಂದರೆ ಇದು ಆಶ್ಚರ್ಯವಾದ ವಿಷಯವಾಗಿದೆ. ಮಹರ್ಷಿ ವಿಶ್ವಾಮಿತ್ರನು ತಪಸ್ಸಿನಲ್ಲಿರುವಾಗ ಮೇನಕೆಯು ಬಂದು ನಾನಾ ರೀತಿಯ ವಯ್ಯಾರದಿಂದ ಗೆಜ್ಜೆ ಕುಣಿತದಿಂದ ಅವನ ತಪಸ್ಸನ್ನು ಹಾಳು ಮಾಡಿದಳು. ಕಡೆಗೆ ಮೇನಕೆ ವಿಶ್ವಾಮಿತ್ರ ಮಿಲನ ಆಗಿ ಈ ಒಂದು ಮಗು ಜನನವಾಗುತ್ತದೆ. ಆಗ ಮೇನಕೆ ಆ ಮಗುವನ್ನು ವಿಶ್ವಾಮಿತ್ರನಿಗೆ ತೋರಿಸಿದಾಗ ಅದು ನನಗೆ ಗೊತ್ತಿಲ್ಲ, ಅದು ನನ್ನದಲ್ಲ ಎಂದು ಹೇಳುತ್ತಾನೆ. ಅದೇ ರೀತಿ ಮಹಾರಾಷ್ಟ್ರ ಮುಖಂಡರು ಏಕಸದಸ್ಯ ಆಯೋಗ ಆಗಬೇಕು ಎಂದು ಹೇಳಿದ ಮೇಲೆ ಈ ಆಯೋಗವು ರಚನೆಯಾಯಿತು. ಈ ಆಯೋಗವು ತನ್ನ ಅಂತಿಮ ವರದಿಯನ್ನು ಸಲ್ಲಿಸಿದ ಮೇಲೆ ಅದು ನಮಗೆ ಬೇಡ ಎಂದು ಹೇಳಿದ್ದಾರೆ. ನಮ್ಮ ರಾಜ್ಯಪಾಲರ ಭಾಷಣದಲ್ಲೂ ಮತ್ತು ನಮ್ಮ ಸರ್ಕಾರದವರೂ ಕೂಡ ಈ ಮಹಾಜನ್ ಆಯೋಗದ ಶಿಫಾರಸ್ಸುಗಳನ್ನು ಐತೀರ್ಪೆಂದು ಪರಿಗಣಿಸಬೇಕು ಎನ್ನುವುದನ್ನು ಹೇಳಿದ್ದಾರೆ. ಇದು ಮೆಚ್ಚತಕ್ಕ ವಿಷಯ. ಕೇರಳದ ಗಡಿಯ ಕಾಸರಗೋಡಿನ ವಿಷಯ ಹೇಳುವುದಾದರೆ, ಅಲ್ಲಿ 2 ಲಕ್ಷಕ್ಕೂ ಮೀರಿದ ಕನ್ನಡಿಗರು ಅವರು ನಮ್ಮ ಬಂಧುಗಳಾಗಬೇಕು ಎಂದು ಕಣ್ಣೀರು ಸುರಿಸುತ್ತಿದ್ದಾರೆ, ಇಡೀ ದೇಶದಲ್ಲಿ ಭಾಷಾವಾರು ಪ್ರಾಂತ ರಚನೆಯಾಗಬೇಕು ಎಂದು ಒತ್ತಾಯ ಬಂದ ಮೇಲೆ ಆಂಧ್ರ ಪ್ರದೇಶವನ್ನು ಆಂಧ್ರ ಎಂತಲೂ, ಕೇರಳ ಪ್ರದೇಶವನ್ನು ಕೇರಳ ಎಂತಲೂ, ಮಹಾರಾಷ್ಟ್ರವನ್ನು ಮಹಾರಾಷ್ಟ್ರ ಎಂತಲೂ ಕರೆದಿದ್ದಾರೆ

ಮತ್ತು ಮದ್ರಾಸ್‌ನ್ನು ಪೊಂಗಲ್ ದಿವಸಂದು ತಮಿಳ್‌ನಾಡು ಎಂದು ಹೆಸರು ಇಟ್ಟಿದ್ದಾರೆ, ಆದರೆ ಕನ್ನಡದೇಶದವರಾದ ನಾವು ಇನ್ನೂ ಕರ್ನಾಟಕ ಎನ್ನುವ ಹೆಸರು ನಮ್ಮ ಮುಂದೆ ಬರಲಿಲ್ಲ. ಅದು ಆಗಬೇಕು. ಈಗ ಕನ್ನಡವನ್ನು ತಾಲ್ಲೂಕು ಮಟ್ಟದಲ್ಲಿ ಆಡಳಿತ ಭಾಷೆಯಾಗಿ ಮಾಡಿದ್ದಾರೆ, ಇದು ಜಿಲ್ಲಾಮಟ್ಟದಲ್ಲೂ ಕೂಡ ಆಡಳಿತ ಭಾಷೆ ಆಗಬೇಕು. ಕನ್ನಡ ದೇಶದಲ್ಲಿರುವ 2 ಕೋಟಿಗೂ ಮಿಕ್ಕಿದ ಜನರು ಮಾತನಾಡುವಂಥ ಸರಳ ಭಾಷೆಯಾದ ಕನ್ನಡ ಭಾಷೆ ಯಾವುದು ಉಂಟು ಅದು ಎಲ್ಲಾ ಮಟ್ಟದಲ್ಲೂ ಆಡಳಿತ ಭಾಷೆಯಾಗಬೇಕು. ಸುತ್ತೋಲೆ ಮುಂತಾದುವನ್ನು ಕನ್ನಡದಲ್ಲಿ ಮಾಡಿದರೆ ರೈತನಿಗೆ ಅರ್ಥವಾಗುತ್ತದೆ. ಆದುದರಿಂದ ಮುಂದಿನ ವರ್ಷದೊಳಗಾದರೂ ಆದಷ್ಟು ಬೇಗ ಕನ್ನಡ ಆಡಳಿತ ಭಾಷೆಯಾಗಬೇಕು. ಇದನ್ನು ರಾಜ್ಯಪಾಲರೂ ಕೂಡ ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

5-30 P.M.

ಇನ್ನು ಗಾಂಧಿ ಶತಾಬ್ದಿಯನ್ನು ನಾವು ಈ ವರ್ಷದಲ್ಲಿ ಆಚರಿಸುತ್ತಿದ್ದೇವೆ. ಮಾನ್ಯ ಶ್ರೀ ಸಿದ್ದಯ್ಯನವರು ಇದರ ವಿಷಯವಾಗಿ ಚೆನ್ನಾಗಿ ಹೇಳಿದ್ದಾರೆ, ಗಾಂಧೀಜಿಯವರ ತತ್ವಗಳು ಏನು ಇವೆ ಅವನ್ನು ಪರಿಪಾಲನೆ ಮಾಡುವುದರಲ್ಲಿ ಈ ಪ್ರಜಾಪ್ರಭುತ್ವ ಹಿಂದೆ ಬಿದ್ದಿದೆ ಎಂದು. ಹೀಗಿದ್ದರೆ ನಿಜವಾಗಿಯೂ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ. ಆದುದರಿಂದ ಗಾಂಧೀಜಿಯವರ ತತ್ವಗಳನ್ನು ಪರಿಪಾಲನೆ ಮಾಡುವ ಕಾಲ ಬಂದಿದೆ. ಅದನ್ನು ಮಾಡಬೇಕು ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈಗ್ಲೂ ಸಹ ಹರಿಜನೋದ್ಧಾರಕ್ಕೆ ಬಹಳ ಮಟ್ಟಿಗೆ ಲಕ್ಷ್ಯ ಕೊಡಬೇಕು. ಇವೊತ್ತಿನ ದಿವಸ ಹರಿಜನರಿಗೆ ಕಿರುಕುಳ ಆಗುವಂಥಾದ್ದನ್ನು ಕೇಳುತ್ತಿದ್ದೇವೆ. ಹಿಂದು ಮುಸ್ಲಿಂ ಐಕಮತ್ಯ ದೇಶದಲ್ಲಿ ಬಹಳ ಮಹತ್ವದ್ದು. ಕಳೆದ ಐದು ವರ್ಷಗಳಿಂದಲೂ ದೇಶದಲ್ಲಿ ನಾನಾ ಭಾಗಗಳಲ್ಲಿ ಘರ್ಷಣೆಗಳು ಉಂಟಾಗಿ ಒಂದು ನೈತಿಕ ಮಟ್ಟ ಇಳಿದು ಹೋಗಿದೆ. ಪಾನನಿರೋಧ ವಿಚಾರದಲ್ಲೂ ಕೂಡ ಮಹಾತ್ಮ ಗಾಂಧೀಜಿಯವರ ತತ್ವ ಏನು ಇದೆ ಅದನ್ನು ಈ ಪ್ರಜಾಪ್ರಭುತ್ವದಲ್ಲಿ ಆಚರಿಸಬೇಕು ಎಂದು ಹೇಳುತ್ತೇನೆ.

ಇನ್ನು ತಾಲ್ಲೂಕು ಬೋರ್ಡ್ ವಿಚಾರವಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ತಾಲ್ಲೂಕು ಬೋರ್ಡ್ ಚುನಾವಣೆಗಳು ಮುಗಿದು ಹೋಯಿತು. ತಾಲ್ಲೂಕು ಬೋರ್ಡ್ ಚುನಾವಣೆಯಲ್ಲಿ ಯಾವ ಪಕ್ಷದವರು ಬಂದಿದ್ದಾರೋ ಅವರು 20—30 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಬಂದಿದ್ದಾರೆ. ಇದು ಬರೀ ಶ್ರೀಮಂತರ ಚುನಾವಣೆ ಆಗಿದೆ. ಆದುದರಿಂದ ನಾನು ಹೇಳುವುದೇನೆಂದರೆ ದೇಶದಲ್ಲಿ 100ಕ್ಕೆ 90 ಭಾಗ ಇರತಕ್ಕಂಥ ರೈತ ವರ್ಗದ ಜನ ಕೂಲಿ ವರ್ಗದ ಜನ ಏನು ಇದ್ದಾರೆ ಅವರು ತಾಲ್ಲೂಕು ಬೋರ್ಡಿಗೆ, ಪಂಚಾಯಿತಿಗೆ ಅಥವಾ ವಿಧಾನಸಭೆಗೆ ಆರಿಸಿ ಬರುವುದು ಅವಶ್ಯಕ ಇದೆ, ಇನ್ನು ಮುಂದೆ ಯಾವುದೇ ಭಾಗಕ್ಕೆ ಟಿಕೆಟ್ ಕೊಡುವಾಗ 50ರಷ್ಟನ್ನಾದರೂ ರೈತ ವರ್ಗಕ್ಕೆ ಕೂಲಿಗಾರರ ವರ್ಗಕ್ಕೆ ಕೊಡಬೇಕು, ಈ ರೀತಿ ಮಾಡಿ ಶ್ರೀಮಂತರು 20-30 ಸಾವಿರ ರೂಪಾಯಿಯನ್ನು ಖರ್ಚು ಮಾಡಿ ಚುನಾವಣೆಯಲ್ಲಿ ಬರುವುದನ್ನು ತಪ್ಪಿಸಿದರೆ ಮಾತ್ರ ಆಗ ಈ ಪ್ರಜಾಪ್ರಭುತ್ವ ಉಳಿಯುತ್ತದೆ.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಆಹಾರ ಅಭಾವ ಪರಿಸ್ಥಿತಿ ಬಗ್ಗೆ ಹೇಳಿದ್ದಾರೆ. ಇದರ ವಿಷಯವಾಗಿ ನಾನು ಇವೊತ್ತು ಹೇಳುವುದಾದರೆ ರೈತರಿಗೆ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡಿ. ಗಡಿಯಲ್ಲಿರುವ ಪೋಲೀಸಿನವರು ಕಳ್ಳ ಸಾಗಾಣಿಕೆಯಲ್ಲಿ ಯಾವ ರೀತಿ ಕೆಲಸ ಮಾಡಿದ್ದಾರೆ ಎಂದು ವರ್ಣಿಸಲಿಕ್ಕೆ ಸಾಧ್ಯವಿಲ್ಲ. ಪೋಲೀಸಿನವರು ಮಾಡುವಂಥ ಭ್ರಷ್ಟಾಚಾರವನ್ನು ನೋಡಿದರೆ ಆದು ಈ ಪ್ರಜಾಪ್ರಭುತ್ವಕ್ಕೆ ಸರಿಹೋಗುವುದಿಲ್ಲ. ಆದುದರಿಂದ ಈ ವಲಯ ಪದ್ಧತಿಯನ್ನು ತೆಗೆದುಹಾಕಬೇಕಾಗುತ್ತದೆ. ಕೇರಳದಲ್ಲಿ ಒಂದು ಕೆ.ಜಿ. ಅಕ್ಕಿಗೆ 3 ರೂಪಾಯಿ ಕೊಟ್ಟು ತಿಂದರೆ ಅದರಲ್ಲಿ ತಪ್ಪೇನೂ ಇಲ್ಲ. ನಾವು ಒಂದು ರೂಪಾಯಿನಂತೆ ಕೊಂಡು, ಅವರು 3 ರೂಪಾಯಿನಂತೆ ಕೊಂಡು ತಿಂದರೆ ಪ್ರಪಂಚದ ದೃಷ್ಟಿಯಲ್ಲಿ ಅದು ತಪ್ಪಾಗುತ್ತದೆ. ಆದುದರಿಂದ ಎಲ್ಲರಿಗೂ ಒಂದೇ ರೀತಿಯಲ್ಲಿ ಆಹಾರ ದೊರೆಯುವಂತೆ ಮಾಡಬೇಕು ಎಂದು ನಾನು ಸೂಚಿಸುತ್ತೇನೆ.

ಇನ್ನು ಲೆವಿ ವಿಷಯ ಬಗ್ಗೆ ಹೇಳುವುದಾದರೆ ಬೆಲೆಯನ್ನು ಕ್ವಿಂಟಾಲಿಗೆ 5 ರೂಪಾಯಿ ಜಾಸ್ತಿ ಮಾಡಿದ್ದಾರೆ. ಲೆವಿ ಇರಬೇಕೋ ಬೇಡವೋ ಗೊತ್ತಿಲ್ಲ. ಆದರೆ ಕೆ.ಜಿ.ಎಫ್.—ಬೆಂಗಳೂರು, ಮಂಗಳೂರು ಇಂತಹ ಕಡೆಗಳಿಗೆ ಅಕ್ಕಿ ಒದಗಿಸಬೇಕಾದರೆ ಲೆವಿ ಪದ್ಧತಿ ತೆಗೆದರೆ, ಅಕ್ಕಿ ಒದಗಿಸುವುದಕ್ಕಾಗುವುದಿಲ್ಲ. ರೈತರೇ ಲೆವಿ ಕೊಡಬೇಕು ಎನ್ನತಕ್ಕಂಥಾ ಪದ್ಧತಿ ತಪ್ಪಬೇಕು. ಮಾರ್ಕೆಟ್‌ನಲ್ಲಿರುವಂಥ ರೇಟಿಗಿಂತ ಕಡಿಮೆ ದರದಲ್ಲಿ ಅಕ್ಕಿ ಸಿಕ್ಕುವಂತಾಗಬೇಕು. ಕ್ವಿಂಟಾಲ್‌ಗೆ 5 ರೂಪಾಯಿ

(ಶ್ರೀ ಬಿ. ಎಂ. ಇದಿನಬ್ಬ)

ಜಾಸ್ತಿ ಮಾಡಿದ್ದಾರೆ, ಇನ್ನೂ 5 ರೂಪಾಯಿ ಜಾಸ್ತಿ ಮಾಡಿದರೆ ಲೆವಿ ಸುಲಭವಾಗಿ ಕೊಡುತ್ತಾರೆಂದು ಹೇಳಬೇಕಾಗಿದೆ.

ಇನ್ನು ಸಹಕಾರ ಸಂಘಗಳ ವಿಷಯ. ಸಹಕಾರ ಸಂಘಗಳಿಗೆ ಕೊಟ್ಟ ಸಾಲ ವಾಪಸ್ಸು ಬರುವುದಿಲ್ಲ ಎಂದು ಹೇಳತಕ್ಕಂಥ ದೂರುಗಳನ್ನು ಬಹಳವಾಗಿ ಕೇಳುತ್ತಿದ್ದೇನೆ. ಸಹಕಾರ ಸಂಘಗಳು ಯಶಸ್ವಿಯಾಗಿ ಕೆಲಸ ಮಾಡಬೇಕಾದರೆ, ಕೊಟ್ಟ ಸಾಲಗಳು ಮರುಪಾವತಿಯಾಗಬೇಕು. ಹಾಗಾದರೆ ಸಹಕಾರ ಸಂಘಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಆಸ್ಪದವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಯುವಜನ ಕಲ್ಯಾಣದ ವಿಷಯದ ಬಗ್ಗೆ ಹೇಳುವುದಾದರೆ, ಯುವಜನ ಕಲ್ಯಾಣ ಆಗುವಂಥಾದ್ದು ಶ್ರೇಷ್ಠ. ನಮ್ಮ ಆಡಳಿತ ಯಂತ್ರ ಯುವಜನರ ಕೈಗೆ ಸಿಕ್ಕಿ ಇನ್ನೂ ಒಳ್ಳೆಯದಾಗಬೇಕು. ರೈತನು ಯಾವುದಾದರೂ ಕೆಲಸಕ್ಕೆ ಜಿಲ್ಲಾ ಕಲೆಕ್ಟರ್ ಆಫೀಸಿಗೆ 4–5 ಸಾರಿ ಸುತ್ತಿದರೂ, ಕೆಲಸ ಆಗುವುದಿಲ್ಲ. ಇದು ಸರಿಯಲ್ಲ. ರೈತನಿಗೆ ಬೇಕಾದಂಥ ಸವಲತ್ತುಗಳು ಅವನ ಮನೆ ಬಾಗಿಲಿಗೆ ಮುಟ್ಟುವಂತಾಗಬೇಕು ಎಂದು ಆರ್ಥಿಕ ಮಂತ್ರಿಗಳೇ ಹೇಳಿದ್ದಾರೆ. ನಾನು ಹೇಳುವುದಾದರೆ ರೈತನಿಗೆ ನಾವು ಏನು ಕೊಡುತ್ತೇವೋ, ಎಂದರೆ, ಹಸುಗಳಾಗಲಿ, ಕೋಳಿಯಾಗಲೀ ಹಣವಾಗಲಿ, ಸಾಲವಾಗಲಿ ಅವೆಲ್ಲವೂ ರೈತನ ಮನೆಯ ಬಾಗಿಲಿಗೆ ಮುಟ್ಟುವಂತೆ ಮಾಡಿದರೆ ಮಾತ್ರ ಅವನಿಗೆ ಒಳ್ಳೆಯದಾಗುತ್ತದೆ. ಈ ರೀತಿ ಆಡಳಿತದಲ್ಲಿ ದಕ್ಷತೆ ಹೆಚ್ಚಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಭೂ ಮಸೂದೆ ವಿಷಯವಾಗಿ ಹೇಳುವುದಾದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಉಳಿದ ಜಿಲ್ಲೆಗಳ ಹಾಗಲ್ಲ, ನಮ್ಮ ಜಿಲ್ಲೆಯ ಪ್ರಕೃತಿಯ ವೈಶಿಷ್ಟ್ಯವೇ ಬೇರೆ. ಆದುದರಿಂದ ಸರ್ಕಾರದವರು ನಮ್ಮ ಜಿಲ್ಲೆಗೆ ಒಂದು ಹೆಚ್ಚಿನ ಗಮನ ಕೊಟ್ಟು ಒಕ್ಕಲುತನಕ್ಕೆ ಅನುಕೂಲವಾಗುವಂತೆ ಮಾಡಬೇಕು ಎಂದು ನಾನು ಸೂಚಿಸ ಬಯಸುತ್ತೇನೆ.

ಮೀನುಗಾರಿಕೆ ವಿಚಾರದಲ್ಲಿ ಸಹ ರಾಜ್ಯಪಾಲರು ಬಹಳ ಒಳ್ಳೆಯ ರೀತಿಯಲ್ಲಿ ಹೇಳಿದ್ದಾರೆ. ಕರಾವಳಿಯಲ್ಲಿ, ಸಮುದ್ರದ ಬದಿಯಲ್ಲಿರುವ ನಾವು ಈ ವಿಷಯದಲ್ಲಿ ಒಂದು ಮಾತನ್ನು ಹೇಳಿದರೆ ಹೆಚ್ಚಲ್ಲ. ಈ ಸಲ 115 ಯಂತ್ರಚಾಲಿತ ದೋಣಿಗಳನ್ನು ಹೆಚ್ಚಾಗಿ ಕೊಡಬೇಕು ಎಂದು ಹೇಳಿದ್ದಾರೆ. ಇದು ಬಹಳ ಕಡಿಮೆ ಆಯಿತು. ಮೈಸೂರು ಸಂಸ್ಥಾನಕ್ಕೆ, ಮೀನು ಬಂಗಾರವನ್ನು ತಂದು ಕೊಡಬಲ್ಲವು. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಬಂಗಾರ ಸಿಕ್ಕುತ್ತಿದ್ದರೆ, 150 ಮೈಲಿ ಉದ್ದದ ಸಮುದ್ರ ತೀರದಲ್ಲಿ ಬಂಗಾರ ಸಿಕ್ಕುತ್ತದೆ ಎಂದು ಮೀನುಗಾರಿಕೆಯ ಮಂತ್ರಿಗಳೇ ಹೇಳಿದ್ದಾರೆ. ಆದುದರಿಂದ ಹೆಚ್ಚು ಹೆಚ್ಚು ಯಂತ್ರಚಾಲಿತ ದೋಣಿಗಳನ್ನು ಮೀನ ಹಿಡಿಯುವ ಜನರಿಗೆ ಕೊಟ್ಟು ಅವರು ಆಳ ಸಮುದ್ರಕ್ಕೆ ಹೋಗಿ ಬಂಗಾರದಂಥ ಮೀನನ್ನು ತಂದು ತಿನ್ನುವವರಿಗೆ ಒದಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದರಿಂದ ಆ ಜನರ ಆರ್ಥಿಕ ಪರಿಸ್ಥಿತಿಯನ್ನೂ ಒಳ್ಳೆಯ ರೀತಿಯಲ್ಲಿ ಮಾಡುವುದಕ್ಕೆ ಸಹಾಯವಾಗುತ್ತದೆ. ಇದರಿಂದ ನಮ್ಮ ಸರ್ಕಾರದವರಿಗೂ ಲಾಭವಾಗುತ್ತದೆ. ಅದಕ್ಕಾಗಿ ದೋಣಿಗಳನ್ನು ಜಾಸ್ತಿ ಕೊಡತಕ್ಕ ಪರಿಸ್ಥಿತಿ ಬಂದರೆ ಒಳ್ಳೆಯದು ಎಂದು ಅಪೇಕ್ಷೆ ಪಡುತ್ತೇನೆ.

ವಿದ್ಯುಚ್ಛಕ್ತಿ ವಿಷಯ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಂಪ್‌ಸೆಟ್‌ಗಳನ್ನು ಕೊಟ್ಟಿದ್ದರೂ ಅನೇಕರಿಗೆ ವಿದ್ಯುತ್ ಸಿಕ್ಕಿಲ್ಲ. ನಮ್ಮಲ್ಲಿ ಭಾರಿ ನೀರಾವರಿ ಯೋಜನೆಗಳನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಸಣ್ಣ ಸಣ್ಣ ನೀರಾವರಿ ಯೋಜನೆಯನ್ನು ಮಾಡಬೇಕು, ಪಂಪ್‌ಸೆಟ್‌ಗಳನ್ನು ಕೊಡಬೇಕು. ನದಿಗಳು ಇದ್ದಲ್ಲಿ ಪಂಪ್‌ಸೆಟ್‌ಗಳನ್ನು ಹಾಕಿ ನೀರಾವರಿ ಮಾಡಿದರೆ ಎಷ್ಟೋ ಬತ್ತವನ್ನು ಬೆಳೆಯುವುದಕ್ಕೆ ಸಾಧ್ಯವಿದೆ. ವಿದ್ಯುತ್ತನ್ನು ಸರಿಯಾಗಿ ಕೊಡದೆ ಇರುವುದರಿಂದ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಿಕ್ಕುತ್ತಿಲ್ಲ. ಇದಕ್ಕೆ ಕಾರಣ ಉಪಕರಣಗಳಿಲ್ಲ, ಕಂಬಗಳಿಲ್ಲ, ತಂತಿಗಳಿಲ್ಲ, ಬಂದಾಗ ಕೊಡುತ್ತೇವೆಂದು ಹೇಳುತ್ತಾರೆ. ಅದು ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಆಹಾರ ಉತ್ಪಾದನೆಯನ್ನು ಜಾಸ್ತಿ ಮಾಡಬೇಕೆಂದು ಹೇಳತಕ್ಕ ಸರ್ಕಾರ ಮಿಂಚಿನ ವೇಗದಲ್ಲಿ ವಿದ್ಯುತ್ತನ್ನು ಕೂಡ ರೈತರಿಗೆ ಕೊಟ್ಟರೆ ಸರಿಯಾಗುತ್ತದೆ. ನನ್ನ ಕ್ಷೇತ್ರದಲ್ಲಿ ಕೊಣಾಗಿ, ನೇರಳಕಟ್ಟೆ ಈ ರೀತಿಯಾಗಿ ಇರುವ ಹಳ್ಳಿಗಳಲ್ಲಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಬೇಕೆಂದು ಅನೇಕ ಜನ ಬರೆದುಕೊಂಡಿದ್ದರೂ ಇನ್ನೂ ವಿದ್ಯುತ್ ಸಿಕ್ಕಿಲ್ಲ. ನಮ್ಮ ಜಿಲ್ಲೆಯಲ್ಲಿ ಆಹಾರದ ಉತ್ಪಾದನೆಯನ್ನು ಜಾಸ್ತಿ ಮಾಡಲು ಪಂಪ್‌ಸೆಟ್‌ಗಳನ್ನು ಕೊಟ್ಟಿದ್ದೇವೆ, ನೀರಾವರಿ ಯೋಜನೆಗಳನ್ನು ಮಾಡಿಕೊಟ್ಟಿದ್ದೇವೆ ಎಂದು ಹೇಳಬಹುದು. ಆದರೆ ಅದಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳಿಲ್ಲ, ಅದು ಸಿಕ್ಕದೆ ತಡವಾಗಿದೆ.

ಆದ್ದರಿಂದ ವಿದ್ಯುತ್ತನ್ನು ಆದಷ್ಟು ಬೇಗ ಕೊಡಬೇಕು, ಅದಕ್ಕೆ ಬೇಕಾದ ಉಪಕರಣಗಳಿಲ್ಲದೆ ಇದ್ದರೆ ಉಪಕರಣಗಳನ್ನು ಒದಗಿಸಿ ವಿದ್ಯುತ್ತನ್ನು ಕೊಟ್ಟರೆ ಆಹಾರದ ಉತ್ಪತ್ತಿ ಒಳ್ಳೆಯ ರೀತಿಯಲ್ಲಿ ಆಗಲಿಕ್ಕೆ ಸಾಧ್ಯವಾಗುತ್ತದೆ.

ಇನ್ನೂ ಅನೇಕ ವಿಚಾರಗಳಲ್ಲಿ ರಾಜ್ಯಪಾಲರು ಕೊಟ್ಟಿರತಕ್ಕ ಭಾಷಣ ಬಹಳ ಅರ್ಥ ಗರ್ಭಿತವಾಗಿದೆ, ಬಹಳ ಕಡೆ ಸಿದ್ಧಾಂತವಾಗಿ ಹೇಳಿದ್ದಾರೆ. ಮಹಾಜನ್ ಕಮಿಷನ್ ವಿಚಾರದಲ್ಲಿ ಕನ್ನಡ ರಾಜ್ಯಭಾಷೆ ಆಗತಕ್ಕ ವಿಚಾರದಲ್ಲಿ, ಗಾಂಧಿ ಶತಾಬ್ದಿ ಕಾಲದಲ್ಲಿ ಈ ರಾಜ್ಯದವರು ಮತ್ತು ಈ ಸರ್ಕಾರ ಯಾವ ರೀತಿಯಲ್ಲಿ ಹೋಗಬೇಕು ಎನ್ನುವ ನೀತಿಯನ್ನು ಬಹಳ ಸ್ಪಷ್ಟವಾಗಿ ಚೆನ್ನಾಗಿ ಹೇಳಿದ್ದಾರೆ. ಅವರ ಈ ಭಾಷಣಕ್ಕೆ ನಾನು ನನ್ನ ಸ್ವಾಗತವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Next Mr. Jayaprakash Narayan has to speak but the Hon'ble Member is absent. Then, Mr. P. B. Nandihali.

†Sri P. B. NANDIHALI (Uchagaon).—Mr. Hon'ble Speakar Sir, I wish to express a few remarks on the Address of the Governor, which is a dry report and nothing but a propaganda of the Congress Government.

Sir, in the beginning of the address itself the Governor has agreed honestly that the most important event of the Congress Party Government is the elections to the Taluk Board. He has agreed that the election is the only business before this Government and the Ruling Party. It is a well-known fact and my experience in my own taluka in Belgaum is that the Ruling Party has actually murdered democracy during elections. They are only after these elections with the intention of making profit in the political game. They divide the constituencies in Belgaum, only for the convenience of the Ruling Party. The Marathi voters are scattered in minorities in the Kannada constituencies so that they may win the elections. In this way they have looted the democratic rights of the people in my constituency. This is unjust, undemocratic which is a shame to them. After the elections to the Taluk Development Boards they began to quarrel among themselves like thieves quarreling for the share of the property or the amount they have looted. Ultimately democracy succeeded and in the Taluk Development Board there, the Marata President came into power.

Secondly the Governor referred to the boundary disputes between the States of Maharashtra and Mysore. He has stated that the Mahajan Commission's Report should be treated as an award. I am very sorry to note this, because when this Commission was appointed it was clearly stated that this Commission is appointed to make recommendations. It is not at all an award. This Commission's report we have repeatedly stated is one sided, prejudicial, and without any principle and so we have repeatedly rejected it. It is not at all democratic to have one man Commission to solve the problem of lakhs of people. But the appointment of this Commission is based on dictatorship. There is Congress party ruling in Mysore State, there is Congress party ruling in Maharashtra State and there is Congress party ruling at the Centre, but they have no principle or solution to solve this kind of problem. Sir, hisis a failure on the part of the Congress party and it means that the

(SRI P. B. NANDIHALI)

Government is not going by democratic ways. Therefore, I once again request—having tomorrow's picture before me, the picture of 17th January which is a Martyrs' day in all the border areas and which would be celebrated and again the Marathi people would be taking oath remembering the pledge of the martyrs—that the Marati parts must be merged in the Maharashtra State only. It is their birth right, they do not claim any Kannadiga or any Kannada village, but at the same time if at all you want democracy to survive the Congress Government and the Congress party must find some democratic principle and solution to solve this problem.

Thirdly Sir, about the Gandhi Centenary year, I am of opinion that most of the Congress leaders have no right to participate in these celebrations in the name of Gandhiji. If at all they want to celebrate, at least the Ministers should leave their palace-like bungalows and stay at least for one year in cottages and small places. They must know what is simplicity. They must live in the midst of *dongalis*, Then only they will come to know the difficulties of *dongalis*. Otherwise, they cannot understand. So, I earnestly appeal to the leaders and all the Members of the Assembly including myself should adopt simple ways of life and avoid scandalous waste of money on useless ceremonies. In Belgaum, only a cement pillar is there, though lakhs of rupees have been supposed to have been spent on it. A social worker-not from the opposition party, but he is *pucca* Congressman, a *sarvodayavadi* who has sacrificed his life previously for the country, such a person by name *Ramakrishna Prabhu* came forward and gave notice to the Deputy Commissioner that if the names of Sri Nijalingappa and Sri Morarji are not wiped out, tar is going to be smeared on those names on 30th January. He has declared satyagraha on 30th January as a *sarvodaya karya krama*. He has requested that the name of Gandhiji should be carved on that pillar and not these names. This is definitely shameful to any person if we consider it seriously, having a picture of *Mahatma-Gandhi* before us.

Fourthly, about land reforms; before the attainment of freedom, the Congress Party had declared its policy that the tiller will be the owner of the land. What has the Government done in these 20 years? Is tiller the owner today? Land Reforms Act has dragged all the tillers and cultivators and all the tenants into the threshold of the court and police-stations. They are harassed beyond measure. Thousands of peasants are coming to the court. It is sheer waste of energy and waste of time. Peasants who have sacrificed for centuries for the uplift of the nation by supplying food to the millions, they are now facing so many difficulties. The Government has not solved any problem and so this Government has no right to speak in the name of the farmers. Today the farmer is obliged to stand before the police and before clerks in offices. On the contrary when a black-marketeer, goes to an office he is respected. But this person, who is working day and night for the

progress of the country, is not even given a seat when he goes to an office. I request all the Ministers and the leaders to see that the common people are respected. Such a man has no food, and no clothing. Today he is lying, crying and dying on the roads and fields !

Mr. SPEAKER.—The hon. member's time is over.

Sri P. B. NANDIHALI.—I will finish in one or two minutes, Sir.

So, the Government has not taken into consideration any of these problems—the problem of unemployment or the problem of poverty. As a result of the policy followed by this Government today, the rich has become richer and the poor, poorer, This inquality must be stopped immediately. Otherwise, the same Government, same party, *viz.*, the Congress party which has thrown off the yoke of the British, the same Congress party is sowing the seeds of revolution which cannot be avoided. So I earnestly request the Government to do the needful.

About food supplies, Sir. I have to say that in my taluka, namely Belgaum and Khanapur taluka also, it is a well-known fact that in 1967-68 crops failed for want of rains. The former Food Minister Mr. Jatti told me on the floor of this very House that levy will not be compulsory. While collecting levy, it was promised on the floor of the House that due consideration will be shown in cases of hardship. The officers also promised. But I am sorry to bring to the notice of this House that there are so many levy cases in my taluka and so many farmers are dragged to the court. On the 13th January, all the social workers and represen. tatives of the people, as they had no alternative, they obsetved hunger strike in Belgaaum and the Deputy Commissioner told them that he had already recommended that the cases should be withdrawn. Now the Government has rejected that proposal. I request the Chief Minister once again and I request the Food Minister once again to withdraw the cases and do justice to the peasants in my taluka.

About education, Government has......

Mr. SPEAKER.—Time is over.

Sri P. B. NANDIHALI.—With these words, I thank the Chair for having permitted me to speak and I close.

Mr. SPEAKER.—The first speaker tomorrow will be Mr. Veerappa Gowda.

The House will now rise and meet tomorrow at 12 Noon.

The Hour adjourned at Six of the Clock to meet again at Tweevl of the Clock on Friday 17th January 1969.

WD 11824—GPB—600—3-2-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday 17th January 1969

The House met in the Assembly Chambers, Vidhana Soudha, Bangalore at Twelve of the Clock.

MR. SPEAKER (Sri S. D. KOTHAVALE) in the Chair.

STARRED QUESTIONS

(to which oral answers were given)

Repairs to Rest House at Kankumbi Village

10. Sri N. B. SIRDESAI (Khanapur).—

Will the Minister for Public Works be pleased to state :—

(*a*) the amount spent by the P. W. D. for repairs of Rest House, newly purchased at Khankumbi village in Khanapur Taluk;

(*b*) whether the repairs work commensurate with the amount spent has been carried out;

(*c*) the amount spent for the repairs work of Jamboti-Kankumbi Road in Khanapur Taluk in 1967 and 1968?

Sri K. LAKKAPPA (Minister for Public Works).—

(*a*) Rs. 14,302.

(*b*) Yes.

(*c*) Rs. 3,901 during 1966-67 and Rs. 14,302 in 1967-68.

Sri N. B. SIRDESAI.—May I know, Sir, at what cost the building was purchased and what is the amount spent towards repair work and who is the contractor that carried out the work ?

†Sri K. LAKKAPPA.—The building formerly belonged to Government of India and it was purchased by our Government at a nominal cost of Rs. 4,500. After taking it over to the Public Works Department, we wanted to effect some improvements and two estimates were prepared, one for Rs. 11,900 and another Rs. 9,350, in all Rs. 21,250. Out of this amount, we have already spent Rs. 14,302. Immediate repairs have been attended to and only the compound work, well work and minor repairs will have to be done and they will be done shortly.

---

†Indicates that the remarks or speeches have not been revised by the member concerned.

Sri N. B. SIRDESAI.—May I know the amount sanctioned for repairs work of Jamboti-Kankumbi Road in 1967-68 ?

Sri K. LAKKAPPA.—It is mentioned in the answer. For the entire length of this road the estimated cost would be about 13.40 lakhs rupees. We have taken up a particular length to the Public Works Department and getting it repaired. We are not able to spend the entire amount in one or two years and therefor we will do it on a phased programme.

ಅಧ್ಯಕ್ಷರು.–ಪ್ರಶ್ನೆ 25 ಮತ್ತು 28. ಮಾನ್ಯಸದಸ್ಯರು ಸಭೆಯಲ್ಲಿ ಹಾಜರಿಲ್ಲ. ಪ್ರಶ್ನೆ 37.

Construction of Bridge near Jaldurg Island

37. Sri K. SANGAN GOWDA (Lingsugur).—

Will the Minister for Public Works be pleased to state :—

(*a*) whether any survey has been conducted in connection with the construction of a bridge across the branch of river Krishna near Jaldurg Island to connect the said Island with the rest of Lingsugur Taluk;

(*b*) if so, the estimated cost of the same;

(*c*) when the work of the said bridge is expected to be commenced ?

Sri K. LAKKAPPA (Minister for Public Works).—

(*a*) No.

(*b*) and (*c*) Does not arise in view of reply to clause (*a*) above.

ಶ್ರೀ ಕೆ. ಸಂಗನಗೌಡ.—1917 ರಿಂದ ನಾವು ಆ ಜಲದುರ್ಗ ಐಲೆಂಡಿಗೆ ಒಂದು ಸೇತುವೆ ಯಾಗಬೇಕೆಂದು ಒತ್ತಾಯ ಮಾಡುತ್ತಿದ್ದರೂ ಅದಕ್ಕೆ ಸರ್ಕಾರದವರು ಗಮನಕೊಡುತ್ತಿಲ್ಲ. ಆ ದ್ವೀಪದಲ್ಲಿ ಸುಮಾರು ಎರಡುಸಾವಿರ ಜನಸಂಖ್ಯೆ ಇದೆ. ಅಲ್ಲಿ ಐದು ಹಳ್ಳಿಗಳಿವೆ. ಅಲ್ಲಿ ಹತ್ತು ಸಾವಿರ ಎಕರೆ ಫಲವತ್ತಾದ ಭೂಮಿ ಇದೆ. ಅಲ್ಲಿ ನೂರಾರು ಕ್ರೈಮುಗಳು ನಡೆಯುತ್ತಿವೆ. ಅವುಗಳು ಒಂದೂ ಡಿಟೆಕ್ಟ್ ಆಗುತ್ತಿಲ್ಲ. ಇಷ್ಟೆಲ್ಲಾ ಅನಾನುಕೂಲ ಇರುವುದರಿಂದ ಅಲ್ಲಿಗೆ ಒಂದು ಸೇತುವೆ ಹಾಕುವುದಕ್ಕೆ ಈಗಲಾದರೂ ಪ್ರಯತ್ನಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಅಲ್ಲಿಗೆ ಒಂದು ಸಬ್‌ಮರ್ಜ್ ಬ್ರಿಡ್ಜನ್ನು ಹಾಕಲು 4 ಲಕ್ಷ ರೂಪಾಯಿ ಖರ್ಚಾಗುತ್ತದೆ. ಅಲ್ಲಿ 5 ಹಳ್ಳಿಗಳು ಮಾತ್ರ ಇವೆಯೆಂದು ಹೇಳುತ್ತಿದ್ದಾರೆ. ಹಣದ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ. ಹಣದ ಪರಿಸ್ಥಿತಿ ಉತ್ತಮಗೊಂಡಾಗ ಅಲ್ಲಿಗೂ ಅನುಕೂಲ ಮಾಡೋಣ.

ಶ್ರೀ ಎಸ್. ಎಂ. ಗುರೆಡ್ಡಿ.—ಅಲ್ಲಿಗೆ ಸೇತುವೆ ಹಾಕುವುದಕ್ಕೆ ಸಾಧ್ಯವಿಲ್ಲದಪಕ್ಷಕ್ಕೆ ಆ ಹಳ್ಳಿಗಳನ್ನೇ ಬೇರೆ ಕಡೆಗೆ ವರ್ಗಾಯಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಅಲ್ಲಿ ಅವರು ನೂರಾರು ವರ್ಷಗಳಿಂದ ಇದ್ದುಕೊಂಡು ಅಲ್ಲಿ ಆಸ್ತಿ ಪಾಸ್ತಿಗಳನ್ನು ಮಾಡಿದ್ದಾರೆ. ಅವರನ್ನು ಬೇರೆ ಕಡೆಗೆ ಅಷ್ಟು ಸುಲಭವಾಗಿ ವರ್ಗಾಯಿಸುವುದಕ್ಕಾಗುವುದಿಲ್ಲ. ಹಣದ ಅನುಕೂಲತೆ ನೋಡಿಕೊಂಡು ಅವರಿಗೂ ಅನುಕೂಲಮಾಡೋಣ.

ಶ್ರೀ ಎಂ. ನಾಗಪ್ಪ.—ಸರಕಾರದವರಿಗೆ 4 ಲಕ್ಷ ರೂಪಾಯಿಗಳು ಹೆಚ್ಚೋ ಅಥವಾ ಅಲ್ಲಿ ಇರತಕ್ಕ 5 ಹಳ್ಳಿಯ ಜನರ ಯೋಗಕ್ಷೇಮ ಹೆಚ್ಚೋ ? ಅಲ್ಲದೆ ಅಲ್ಲಿಗೆ ಸೇತುವೆ ಕಟ್ಟಲು ಅಂದಾಜು ತಯಾರಾಗಿಲ್ಲ ಎಂದು ಹೇಳುತ್ತಿರುವಾಗ ತಾವು ಅಲ್ಲಿಗೆ 4 ಲಕ್ಷ ರೂಪಾಯಿಗಳು ಬೇಕೆಂದು ಹೇಗೆ ಹೇಳುತ್ತೀರಿ ? ಈ ಎರಡರಲ್ಲಿ ಯಾವುದು ನಿಜ ?

ಶ್ರೀ ಕೆ. ಲಕ್ಕಪ್ಪ.—ಅಲ್ಲಿರತಕ್ಕವರಿಗೆ ಆಗತಕ್ಕ ಅನಾನುಕೂಲವನ್ನು ಪರಿಹಾರಮಾಡತಕ್ಕದ್ದು ಸರ್ಕಾರದವರ ಕರ್ತವ್ಯ. ಹಣದ ಅನುಕೂಲತೆ ನೋಡಿಕೊಂಡು ಕೆಲಸಮಾಡೋಣ.

ಶ್ರೀ ಎಂ. ನಾಗಪ್ಪ.—ಈ ಕಾಮಗಾರಿಗಾಗಿ ಅಂದಾಜು ಮಾಡಿದ್ದೀರಾ ಅಂದರೆ ಅದಕ್ಕೆ ಇಲ್ಲವೆಂದು ಹೇಳಿದ್ದೀರಿ. ಈಗ ತಾವು ಹೇಳುತ್ತೀರಿ 4 ಲಕ್ಷ ರೂಪಾಯಿಗಳು ಖರ್ಚಾಗುತ್ತದೆಂದು. ಇದರಲ್ಲಿ ಯಾವುದು ಸತ್ಯ ?

ಶ್ರೀ ಕೆ. ಲಕ್ಕಪ್ಪ.—ಅದನ್ನು ಸರಿಯಾಗಿ ಅಂದಾಜು ಮಾಡಿಲ್ಲ. ಕಣ್ಣು ಅಂದಾಜಿನ ಮೇಲೆ ಇಷ್ಟಾಗುತ್ತದೆಂದು ಅದರ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಅದನ್ನು ಇಲ್ಲಿ ಹೇಳಿದೆ.

Sri RAJA PID NAIK.—Is it not a fact that the village of Jaladurga, being an island, is cut off from the rest of the taluk and also Sholapur taluk for nearly 7 to 8 months during the floods and if so, what action the Government propose to take ?

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಅಕ್ಷರಶಃ ಒಪ್ಪುತ್ತೇನೆ. ಬಹಳ ವರ್ಷಗಳಿಂದ ಹಾಗೆಯೇ ಬಂದಿದ್ದಾರೆ. ಇನ್ನೂ ಸ್ವಲ್ಪ ವರ್ಷಗಳ ಕಾಲ ಅವರು ಕಾಯಬೇಕಾಗುತ್ತದೆ.

ಶ್ರೀ ಎಂ. ನಾಗಪ್ಪ.—ಅಂದಾಜು ಇನ್ನೆಷ್ಟು ವರ್ಷಗಳು ಕಾಯಬೇಕು ?

ಶ್ರೀ ಕೆ. ಲಕ್ಕಪ್ಪ.—ಈಗಲೇ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಶರಣಗೌಡ ಇನಾಂದಾರ್.—ಸ್ವಲ್ಪ ದಿವಸಗಳ ಕೆಳಗೆ ಕೊಯಿನಾ ಪ್ರಾಜೆಕ್ಟ್ ಒಡೆಯುತ್ತದೆಂದು ಹೇಳಿದಾಗ ಮೇಲಿಂದಮೇಲೆ ರಾಜ್ಯಸರ್ಕಾರ ವಿಚಾರಮಾಡುತ್ತಿದ್ದರು. ನವಂಬರ್ ತಿಂಗಳೊಳಗೆ ಡಿವಿಜನಲ್ ಕಮಿಷನರ್ ಬಂದಾಗ ಸುಮಾರು 2 ಸಾವಿರ ಜನರು ಕೊಯಿನಾ ಪ್ರಾಜೆಕ್ಟ್ ಒಡೆದುಹೋಗಿ ಕೊಚ್ಚಿಕೊಂಡು ಹೋಗುವ ಪರಿಸ್ಥಿತಿ ಇದೆಯೆಂದು ಯಾರಾದರೂ ಈ ಸರ್ಕಾರದ ಗಮನಕ್ಕೆ ತಂದಿದ್ದಾರೆಯೇ ?

ಶ್ರೀ ಕೆ. ಲಕ್ಕಪ್ಪ.—ಕೊಯಿನಾ ಪ್ರಾಜೆಕ್ಟ್ ಒಡೆಯುವ ಭಯವಿಲ್ಲ, ಈಗಿರುವ ಪ್ರಶ್ನೆ ಷಿಫ್ಟ್ ಮಾಡುವ ಪ್ರಶ್ನೆ ಆದ್ದರಿಂದ ಬ್ರಿಡ್ಜ್ ಹಾಕುವ ಪ್ರಶ್ನೆ ಬರವುದಿಲ್ಲ.

ಶ್ರೀ ವಿ. ಎನ್. ಪಾಟೀಲ್.—ಷಿಫ್ಟ್‌ಮಾಡಿದರೆ ಸರ್ಕಾರದವರು ಅದಕ್ಕೆದುಡ್ಡು ಕೊಡುತ್ತಾರೋ ಇಲ್ಲವೋ ?

ಶ್ರೀ ಕೆ. ಲಕ್ಕಪ್ಪ.—ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಮುಂದೆ ಇದರಿಂದ ಅಪಾಯವಾಗುವ ಪರಿಸ್ಥಿತಿ ಅಷ್ಟಾಗಿ ಇಲ್ಲ ಎಂದು ವರದಿ ಅದರ ಬಗ್ಗೆ ಬಂದಿದೆ ಆದ್ದರಿಂದ ಅಪಾಯ ಬರುವ ಪರಿಸ್ಥಿತಿ ಕಾಣಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕೊಯಿನಾ ಅಣೆಕಟ್ಟು ಒಡೆದುಹೋಗುತ್ತದೆಂಬ ಭೀತಿ ಇರುವುದರಿಂದ ಒಂದುವೇಳೆ ಸಂಪರ್ಕ ಒದಗಿಸಿದರೂ ಅದು ಕೊಚ್ಚಿಕೊಂಡು ಹೋಗುತ್ತದೆ. ಆಗ ರಾಜ್ಯ ಸರ್ಕಾರಕ್ಕೆ ನಷ್ಟವಾಗುತ್ತದೆ ಅದಕ್ಕಾಗಿ ಟ್ರಾನ್ಸ್‌ಪೋರ್ಟ್ ಅನುಕೂಲ ಮಾಡಿಕೊಡುವುದಕ್ಕೆ ನೀವು ತಯಾರಾಗಿಲ್ಲವೆಂದು ಹೇಳಿದ್ದು ನಿಜವೇ ?

ಶ್ರೀ ಕೆ. ಲಕ್ಕಪ್ಪ.—ಅದು ಕೊಚ್ಚಿಕೊಂಡು ಹೋಗುವ ಪರಿಸ್ಥಿತಿ ನಮಗೆ ಎದ್ದು ಕಾಣುತ್ತಾ ಇಲ್ಲ. ಹಣಕಾಸಿನ ಪರಿಸ್ಥಿತಿ ಉತ್ತಮವಾದಾಗ, ಇದನ್ನು ಯೋಚನೆ ಮಾಡಬೇಕಾಗುತ್ತದೆ.

Non-posting of Doctors at M.I.S.L. Hospital, Bhadravathi

48. Sri ABDUL KHUDDUS ANWAR (Bhadravathi).—

Will the Minister for Health be pleased to State :—

(a) whether it is a fact that doctors are not posted to M. I. S. L. Hospital in Bhadravathi although vacancies are there since last 5 years ;

(SRI ABDUL KHUDDUS ANWAR)

(b) whether it is a fact that X-Ray Plant in the above Hospital is idle for want of a Doctor since last 4 years ;

(c) whether it is due to the shortage of doctors ;

(d) whether it is a fact that some local qualified doctors had applied for the post but the Director of Health Services turned down their request ?

Sri G. BASAVANNAPPA (Deputy Minister for Health).—

(a) No.

(b) No.

(c) Does not arise in view of the answer to (b).

(d) No.

Sri ABDUL KHUDDUS ANWAR.—The hon'ble Deputy Minister for Health has seen during his visit that the x-ray plant is not working. Here in the answer it is said as "no" . Is it due to the ignorance of the doctors that the plant is not working ?

† Sri G. BASAVANNAPPA.—I have inspected the hospital and seen that the X-ray plant is functioning well. The officer in charge of the hospital is looking after the X-ray plant and very recently a doctor who is experienced in the handling of the machine and who is a retired person is appointed with the concurrence of the Government.

Sri ABDUL KHUDDUS ANWAR.—In your recent visit you saw there was shortage of lady doctors. Here, in reply it is stated not so. Will the Government consider to post a doctor now ?

Sri G. BASAVANNAPPA.—There are two posts of lady doctors sanctioned and these poste are filled up. There are lady doctors working now.

Sri ABUDUL KHUDDUS ANWAR.—One doctor is working and the other doctor was retired two years back.

Sri G. BASAVANNAPPA.—There are two lady doctors working.

Sri ABDUL KHUDDUS ANWAR.—No, there is only one doctor working.

Sri B. BASAVANNAPPA.—I will get it verified.

Mr. SPEAKER.—The complaint of the hon'ble member is that there is only one doctor. He may find out whether the information furnished by the Government is correct.

Next question.

Promotion of Agricultural Assistants

50. Sri B. P. KADAM (Karwar).—

Will the Minister for Agriculture be plased to state :—

(a) the total number of Agricultural Assistants who have been promoted as Field Assistants according to the seniority list of 1958 finalised in the year 1966 ;

(b) whether the benefits of difference of pay (including increments since 1-1-1957) have been granted to some of them ;

(c) if so, to how many ?

Sri B. RACHAIAH (Minister for Agriculture).—

(a) 65 [Agricultural Assistants of Grade III (Fieldmen) are promoted as Field Aasistants from the provisional list].

(b) Yes.

(c) 53.

Sri D. B. KALMANKAR.—May I know why the benefit of difference of pay was not granted to the remaining 12 persons ?

Sri B. RACHAIAH.—Some of the Field Assistants wanted to retain old scales of Bombay Government and they did not want to opt to the new pay scales. That is why these benefits could not be extended to them.

Destruction of Crops by Sub-Inspector of Police, Indi

55. Sri S. S. ARAKERI (Balloli).—

Will the Chief Minister be pleased to state :—

(a) whether the Government is aware that the Sub-Inspector of Police, Indi town of Indi Taluk has destroyed the standing crops of Jowar and Wheat belonging to one Sri Shankarappa (Harijan) of Baragudi village during last week of Januaray, 1968 ;

(b) the name of truck and jeep with their register numbers used in destroying the said crops ;

(c) whether the said Sub-Inspector was aware of the injunction order issued by the Munsiff Court of Indi in favour of Shankarappa (Harijan) of Baragudi ;

(d) if so, is it not amounting to contempt of Court and what action has been taken by the Government against the Sub-Inspector of Police ;

(SRI S. S. ARAKERI)

(*e*) whether the Government is 'aware of the fact that the Sub-Inspector of Police who threatened to arrest Shri Malakappa Harijan of Lachayan of Indi Taluk and looted 22 bags of Jowar, six bags of Kushubi from the land of said survey number 59 of Malakappa (Harijan) during last week of February, 1968 ?

Sri VEERENDRA PATIL (Chief Minister).—

(*a*) No.

(*b*) Does not ariase.

(*c*) **No.**

(*d*) Does not arise.

(*e*) No.

ಶ್ರೀ ಎಸ್. ಎಸ್. ಅರಕೇರಿ.—ತಾವು ಉತ್ತರದಲ್ಲಿ ಅ, ಆ, ಇ, ಈ, ಉ ಎಲ್ಲದಕ್ಕೂ ಇಲ್ಲ, ಗೊತ್ತಿಲ್ಲ, ಉದ್ಭವವಾಗುವುದಿಲ್ಲದೆಂದು ಉತ್ತರ ಕೊಟ್ಟಿದ್ದೀರಿ. (ಇ) ಯಲ್ಲಿ ಬಾರಾಗುಡಿಯ ಶಂಕರಪ್ಪನವರ ಪರವಾಗಿ ಇಂಡಿಯ ಮುನ್ಸೀಫ್ ನ್ಯಾಯಾಲಾಯದವರು ತಡೆಯಾಜ್ಞೆಯನ್ನು ನೀಡಿದ್ದುದು ಸದರಿ ಸಬ್-ಇನ್‌ಸ್ಪೆಕ್ಟರಿಗೆ ಗೊತ್ತಿದೆಯೇ ಎಂದು ಹೇಳಿದ್ದಕ್ಕೂ, ಇಲ್ಲವೆಂದು ಹೇಳಿದ್ದೀರಿ. ಈ ವಿಚಾರವಾಗಿ ಆಗಿನ ಗೃಹಮಂತ್ರಿಯವರಾದ ಆರ್ ಎಂ ಪಾಟೀಲ್ ಇರುವಾಗ ಒಂದು ಅರ್ಜಿ ಕೊಟ್ಟಿದ್ದೆ, ಅದು ಏನಾಯಿತು ಸ್ವಾಮಿ ? ಅದರ ಪರಿಣಾಮವಾಗಿ ಸಬ್ ಇನ್‌ಸ್ಪೆಕ್ಟರನ್ನು ಮಾರ್ಚ ತಿಂಗಳಲ್ಲಿ ಬೇರೆ ಕಡೆಗೆ ವರ್ಗ ಮಾಡಿದ್ದೂ ಸರ್ಕಾರಕ್ಕೆ ಗೊತ್ತಿಲ್ಲವೇ ಸ್ವಾಮಿ ?

†ಶ್ರೀ ವೀರೇಂದ್ರ ಪಾಟೀಲ್.—ಸಬ್ ಇನ್‌ಸ್ಪೆಕ್ಟರಿಗೆ ವರ್ಗವಾಗಿದೆ. ಇದರ ಸಲುವಾಗಿ ವರ್ಗವಾಗಿದೆ ಎಂದು ಹೇಳುವುದು ಕಷ್ಟ.

ಶ್ರೀ ಎಸ್ ಎಸ್ ಅರಕೇರಿ.—ಹರಿಜನರಾದ ಶ್ರೀ ಮಾಲಕಪ್ಪನವರನ್ನು ಪೋಲೀಸು ಸಬ್ ಇನ್‌ಸ್ಪೆಕ್ಟರು ಬಂಧಿಸುವುದಾಗಿ ಹೆದರಿಸಿ 22 ಚೀಲ ಜೋಳ, 6 ಚೀಲ ಕುಸುಬಿಯನ್ನೂ ಲೂಟಿ ಮಾಡಿ ಬೇರೆಯವರಿಗೆ ಕೊಡಿಸಿದ್ದಾರೆ. ಅದರ ಬಗ್ಗೆ ಅರ್ಜಿಯನ್ನು ಹಿಂದೆ ಇದ್ದ ಗೃಹ ಮಂತ್ರಿಯವರಿಗೆ ಕೊಟ್ಟಿದ್ದೆ, ಅದು ಎಲ್ಲಿಗೆ ಹೋಯಿತು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಒಂದು ಮಾತು ತಿಳಿದುಕೊಳ್ಳಬೇಕು. ಇದು ಟೆನೆಂಟ್ ಮತ್ತು ಲ್ಯಾಂಡ್ ಲಾರ್ಡ್ ಜಗಳ. ಈ ಮಾಲಕಪ್ಪ ಎಂಬುವರು ಸಬ್ ಇನ್ ಸ್ಪೆಕ್ಟರು ಲೂಟಿ ಮಾಡಿದ್ದಾರೆಂದು ಹೇಳಿಲ್ಲ. ಯಾರೋ ಲೂಟಿ ಮಾಡಿದ್ದಾರೆ ಎಂದು 1—3—68ಕ್ಕೆ ಎಸ್. ಪಿ. ಬಿಜಾಪುರ್, ಇವರಿಗೆ ಅರ್ಜಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಪೀರಪ್ಪ ಎಂಬುವರು ಲೂಟಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ರಿಕಾರ್ಡ್‌ನಲ್ಲಿ ಪೀರಪ್ಪ ಎಂದರೆ ಟೆನೆಂಟ್ ಇದ್ದಾರೆ. ಇವೆಲ್ಲಾ ಸಿವಿಲ್ ನೇಚರಿನವು. ಇದಕ್ಕೆ ಕೋರ್ಟಿನಲ್ಲಿ ಹೋಗಿ ತಕರಾರು ಹಾಕಿಕೊಂಡಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಸ್ವಾಮಿ ಈ ಅರ್ಜಿಯಲ್ಲಿ ನಮೂದಾಗಿರತಕ್ಕ ಆಪಾದನೆಗಳು ಬಹಳ ಗುರುತರವಾದುವುಗಳು. ಆ ಜಮೀನಿನಲ್ಲಿರತಕ್ಕ ಸ್ಟ್ಯಾಂಡಿಂಗ್ ಕ್ರಾಪ್ಸ್ ನಾಶಮಾಡಿದ್ದು ಒಬ್ಬ ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಎಂದು ಆಪಾದನೆಯಾಗಿದೆ. ಆದ್ದರಿಂದ ಅವರ ಮೇಲೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದಕ್ಕೆ ಒಂದು ಖಚಿತವಾದ ಉತ್ತರವನ್ನು ಕೊಡಿ.

ಶ್ರೀ ವೀರೇಂದ್ರ ಪಾಟೀಲ್.— ಅದನ್ನು ನಾನು ಹೇಳಿದ್ದೇನೆ, 1-3-68 ರಲ್ಲಿ ಮಾಲಕಪ್ಪ ಎನ್ನುವವರು ಬಿಜಾಪುರದ ಎಸ್. ಪಿ. ಯವರಿಗೆ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಆ ಅರ್ಜಿಯಲ್ಲಿ ಏನು ತಿಳಿಸಿದ್ದಾರೆ ಎಂದರೆ ಪೀರಪ್ಪ ಎನ್ನುವವರು ನನ್ನ ಭೂಮಿಯಲ್ಲಿ ಬಂದು ಲೂಟಿಮಾಡಿದ್ದಾರೆ ಎಂದು. ಅದು ಮಾಲಕಪ್ಪ ಮತ್ತು ಪೀರಪ್ಪನಿಗೆ ಜಗಳ ನಡೆದಿದೆ. ಅದು ಟೆನೆನ್ಸಿ ಬಗ್ಗೆ ಜಗಳ ನಡೆದಿದೆ. ನಾನು ಟೆನೆಂಟ್ ಎಂದು ಪೀರಪ್ಪ ಹೇಳುತ್ತಾನೆ, ನಾನು ಟೆನೆಂಟ್ ಎಂದು ಮಾಲಕಪ್ಪ ಹೇಳುತ್ತಾನೆ. ತಳಾಟಿ ರೆಕಾರ್ಡಿನಲ್ಲಿ ಪೀರಪ್ಪ ಟೆನೆಂಟ್ ಇದ್ದಾನೆ ಎಂದು ಬರೆದಿದೆ.

Pecrappa's name is there as a tenant in the Survey Book. The petition dose not contain any allegation in respect of the Sub-Inspector of having looted the property of Malakappa Harjan of Lachayan. ಇದು ಟೆನೆನ್ಸಿ ಕೇಸು ಎಂದು ಗೊತ್ತಾದಮೇಲೆ ಇದರಲ್ಲಿ ಹಸ್ತಕ್ಷೇಪ ಮಾಡುವುದಕ್ಕಾಗುವುದಿಲ್ಲ, ಅದನ್ನು ಕೋರ್ಟಿನಲ್ಲಿ ನಿಕಾಲಿ ಮಾಡಿಕೊಳ್ಳಬೇಕು ಎಂದು ಪೋಲೀಸ್ ಅಧಿಕಾರಿಗಳು ಹೇಳಿದ್ದಾರೆ. ನನ್ನ ಮುಂದೆ ಇರತಕ್ಕ ಇನ್‌ಫರ್‌ಮೇಷನ್ ಇದು.

Sri J. P. SARWESH.—The allegations made by the hon'ble Member are very serious and he has clearly made them against the Sub-Inspector. He has clearly alleged that the Sub-Inspector has instigated and participated in the destruction of the standing crop. Will the Hon'ble Chief Minister kindly institute an enquiry against the conduct of the Sub-Inspector ?

Sri VEERENDRA PATIL.—As I said, I received this report from the concerned officers. They have made it clear in their report that there was no such allegation made by Mr. Malakappa or anybody else against the Sub-Inspector. Now if the hon'ble Member says that they are making this allegation against the Sub-Inspector, I do not know what allegations we can take cognisance of.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಸ್ವಾಮಿ ಈ ರಾಜ್ಯದಲ್ಲಿ ಹರಿಜನ ಗಿರಿಜನರನ್ನು ಈ ರೀತಿ ಎಕ್ಸ್‌ಪ್ಲಾಯ್ಟ್ ಮಾಡತಕ್ಕದ್ದು ಸರ್ವೇ ಸಾಮಾನ್ಯ ಆಗಿದೆ. ಕೊಲೆಗಳು ಆಗುತ್ತಿವೆ. ಆದರೂ ಸಹ ಸರ್ಕಾರದವರು ಇದಕ್ಕೆ ಗಮನ ಕೊಡದೆ, ಅವರಿಗೆ ರಕ್ಷಣೆ ಕೊಡದೆ ಇದ್ದಾರೆ. ಇನ್ನು ಮುಂದಾದರೂ ಹರಿಜನರಿಗೆ ಪೂರ್ಣ ರಕ್ಷಣೆ ಕೊಟ್ಟು ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ಈ ರಾಜ್ಯದಲ್ಲಿ ಹರಿಜನರಿಗೆ ರಕ್ಷಣೆ ಇಲ್ಲ, ಕೊಲೆಗಳಾಗುತ್ತಿವೆ ಎನ್ನುವುದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಶಿವಮೊಗ್ಗದಲ್ಲಿ ಒಬ್ಬರನ್ನು ಕೊಲೆ ಮಾಡಿದ್ದಾರೆ. ಆ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಕೊಲೆ ಆಗುವುದು ನಮ್ಮ ರಾಜ್ಯದಲ್ಲಿ ಈ ವರ್ಷ ಅನೇಕ ಕೊಲೆಗಳು ಆಗಿವೆ, ಕೊಲೆಗಳನ್ನು ಮಾಡುವಾಗ ಯಾವ ಜಾತಿ, ಹೆಸರು, ಕುಲ, ಗೋತ್ರ ಯಾವುದೂ ನೋಡಿ ಮಾಡುವುದಿಲ್ಲ. ಹಳ್ಳಿಗಳಲ್ಲಿ ಪಾರ್ಟಿಗಳು ಇರುತ್ತವೆ. ಆದ್ದರಿಂದ ಕೊಲೆಗಳು ಆಗುತ್ತವೆ. ಆದರೆ ಜಾತಿಯ ಆಧಾರದ ಮೇಲೆ ಕೊಲೆಗಳಾಗುತ್ತವೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಹಳ್ಳಿಗಳಲ್ಲಿ ಜಗಳಗಳು ಆದಾಗ ಕೊಲೆಗಳು ಆಗುತ್ತವೆ. ಇದರಿಂದ ಲಿಂಗಾಯಿತನಾಗಲೀ, ಒಕ್ಕಲಿಗನಾಗಲೀ, ಬ್ರಾಹ್ಮಣನಾಗಲಿ, ಅಥವಾ ಹರಿಜನನಾಗಲಿ ಸಾಯಬಹುದು. ಮಾನ್ಯ ಸದಸ್ಯರು ಕೊಲೆಗಳಾಗುವುದನ್ನು ಜಾತಿವಾರು ಸಂಗ್ರಹಣೆ ಮಾಡಬೇಕೆಂದು ಅಪೇಕ್ಷಿಸುವುದಾದರೆ ಇನ್ನು ಮುಂದೆ ಅದನ್ನು ಸಂಗ್ರಹಿಸಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಈಗ ಅದಕ್ಕೆ ಒಂದು ಕಲರ್ ಕೊಡುವುದು ಸರಿಯಲ್ಲ. ಯಾರು ಯಾವುದೇ ಜಾತಿಯವರಿರಲಿ ಶೋಷಣೆಯ ಪ್ರಶ್ನೆ ಬಂದಾಗ, ಹಕ್ಕು ಬಾಧ್ಯತೆಗಳ ಪ್ರಶ್ನೆ ಬಂದಾಗ ಈ ಪ್ರಶ್ನೆಗಳು ಸಿವಿಲ್ ಕೋರ್ಟಿನಲ್ಲಿ ನಿರ್ಣಯವಾಗುತ್ತವೆ. ಜಾತೀಯ ಆಧಾರದ ಮೇಲೆ ಕಾನೂನು ಕಾಯಿದೆಯನ್ನು ಬದಿಗೊತ್ತಿ ನಾವು ಅವರಿಗೆ ಪ್ರೊಟೆಕ್ಷನ್ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಕೋರ್ಟಿನ ತಡೆಯಾಜ್ಞೆಯಾಗಿದ್ದರೂ ಸಹ ಆ ತಡೆಯಾಜ್ಞೆಯನ್ನು ಮೀರಿ ಪೋಲೀಸ್ ಸಬ್-ಇನ್‌ಸ್ಪೆಕ್ಟರ್ ಅವರು ಶ್ರೀ ಶಂಕರಪ್ಪನವರಿಗೆ ಸೇರಿದ ಫಸಲನ್ನು ನಾಶ ಮಾಡಿದ್ದಾರೆ. ಆದ್ದರಿಂದ ಈ ಪೋಲೀಸ್ ಸಬ್-ಇನ್‌ಸ್ಪೆಕ್ಟರ್ ವರ್ತನೆ ಬಗ್ಗೆ ತನಿಖೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನೇ ನಾನು ಹೇಳುತ್ತಿದ್ದೇನೆ, ಏನೆಂದರೆ ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಅವರು ಲೂಟಿ ಮಾಡಿದರು ಎಂಬ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ವೀರಪ್ಪ ಎನ್ನುವವರು ಲೂಟಿ ಮಾಡಿದ್ದಾರೆಂದು ಇಲ್ಲಿ ಹೇಳಿದ್ದಾರೆ. ರೆಕಾರ್ಡ್ಸ್ ಆಫ್ ರೈಟ್ ಪ್ರಕಾರ ಯಾರಿಗೆ ಅನ್ಯಾಯವಾಗಿದೆಯೋ ಅವರು ಕೋರ್ಟಿನಲ್ಲಿ ಕೇಸ್ ಹಾಕಿರುವುದರಿಂದ, ಈಗ ಕೋರ್ಟ್ ಮುಂದೆ ಕೇಸ್ ಇರುವುದರಿಂದ ನಾನೇನು ಆಕ್ಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

Mr. SPEAKER.—Question No. 61. The hon'ble Member is not present. Next question No. 79.

Water supply from extended Uttara Nala in Kikkeri Hobli

79. **Sri M. K. BOMME GOWDA** (K. R. Pet).—

Will the Minister of State for Minor Irrigation be pleased to state :—

when Government intend to supply water from the extended Uttara Nala in Kikkeri Hobli, K. R. Pet Taluk ?

Sri D. PARAMESWARAPAA (Deputy Minister for Minor Irrigation and Electricity) [On be half of SRI A. J. DODDAMETI (Minister of State for Minor Irrigation)].—

As early as possible.

ಶ್ರೀ ಎಂ. ಕೆ. ಬೊಮ್ಮೇಗೌಡ.—ಉತ್ತರದಲ್ಲಿ ಸಾಧ್ಯವಾದಷ್ಟು ಬೇಗನೆ ಎಂದು ಹೇಳಿದ್ದೀರಿ, ಈ ಯೋಜನೆ ಯಾವಾಗ ಮಂಜೂರಾಯಿತು, ಯಾವಾಗ ಕಟ್ಟಿ ಮುಗಿಸಲಾಯಿತು ಮತ್ತು ಕಂಟ್ರಾಕ್ಟ್ ಕೊಟ್ಟಿದ್ದು ಯಾವಾಗ ಎಂಬ ವಿವರಗಳನ್ನು ತಿಳಿಸುತ್ತೀರಾ ?

†**Sri D. PARAMESWARAPPA.**—The work was sanctioned in 1963 ; it was commenced on 5-3-64 and completed on 20-5-67.

ಶ್ರೀ ಎಂ. ಕೆ. ಬೊಮ್ಮೇಗೌಡ.—ನೀರನ್ನು ಈ ನಾಲೆಯಲ್ಲಿ ಇನ್ನೂ ಬಿಡದಿರುವುದಕ್ಕೆ ಕಾರಣವೇನು ?

Sri D. PARAMESWARAPPA.—This channel had to be extended by one mile. Moreover there were certain difficulties experienced. For instance, hard rock was met with and there were often slips of the soil in deep cutting. So, there was delay. But according to the latest information, water has been allowed up to 4/63 mile on 12th December 1968.

ಶ್ರೀ ಎಂ. ಕೆ. ಬೊಮ್ಮೇಗೌಡ.—ಹಾರ್ಡ್ ರಾಕ್ ಸಿಕ್ಕಿದ್ದರಿಂದ ಕೆಲಸ ನಿಧಾನವಾಯಿತೆಂದು ಹೇಳಿದಿರಿ. ಈ ಬಗ್ಗೆ ಒಂದು ಬೇರೆ ಎಸ್ಟಿಮೇಟನ್ನು 8 ಸಾವಿರ ರೂಪಾಯಿಗಳಿಗೆ ತಯಾರು ಮಾಡಿ ಸರ್ಕಾರಕ್ಕೆ ಕಳಿಸಿದಮೇಲೆ, ಸರ್ಕಾರದವರು ಆ ಎಸ್ಟಿಮೇಟನ್ನು ಒಂದೂವರೆ ವರ್ಷದವರೆಗೆ ಮಂಜೂರು ಮಾಡಲಿಲ್ಲ. ಈ ವಿಚಾರ ತಮಗೆ ಗೊತ್ತಿಲ್ಲವೆ ?

Sri D. PARAMESWARAPPA.—It is not correct.

ಅಧ್ಯಕ್ಷರು.—ಪ್ರಶ್ನೆ 85 ಮತ್ತು 273 ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಬಹುದು.

Hemavathi Project

85. Sri M. K. BOMME GOWDA (K. R. Pet).—

Will the Chief Minister be pleased to state :—

(a) the number of years within which Government intend to complete the construction of Hemavathi Project at Gorur in Hassan District ;

(b) whether Government have taken any measures to complete the Project by about 1974 ?

Sri VEERENDRA PATIL (Chief Minister).—

(a) As early as possible depending upon the availability of funds.

(b) *Vide* reply to (a).

Hemavathi Project

273. Sri H. D. DEVEGOWDA (Holenarasipur).—

Will the Chief Minister be pleased to state :—

(a) whether the technical clearance is secured by the State Government from the Central Water and Power Commission for Hemavathi Project ;

(b) whether any objection was received from the Government of Madras in this behalf ;

(c) whether any meeting between the Chief Ministers and P.W.D. Ministers of both the States were held at Delhi in the month of August 1968 ;

(d) if so, the outcome of these meetings ;

(e) whether Government would proceed with the work even without the technical clearance and complete the same as per the target date ?

Sri VEERENDRA PATIL (Chief Minister).—

(a) Not yet.

(b) Not by State Government.

(c) Yes.

(d) It was generally agreed to accord clearance to the project early.

(e) Work is already taken up. Completion depends on availability of adequate finances.

ಶ್ರೀ ಎಂ. ಕೆ. ಬೊಮ್ಮೆಗೌಡ.—ಈ ಯೋಜನೆಗೆ ಸೆಂಟ್ರಲ್ ಗವರ್ನಮೆಂಟಿನಿಂದ ದುಡ್ಡು ಬರುವ ಹಾಗಿಲ್ಲ. ಆದರೆ ಇದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಸ್ಯಾಂಕ್ಷನ್ ಪಡೆಯಲು ಏನು ವ್ಯವಸ್ಥೆ ಮಾಡಿದ್ದೀರಿ ಮತ್ತು ಈ ಕೆಲಸ ಯಾವಾಗ ಪೂರ್ತಿ ಮಾಡುತ್ತೀರಿ ?

†ಶ್ರೀ ವೀರೇಂದ್ರ ಪಾಟೀಲ್.—ಇದನ್ನು ಪ್ಲಾನಿನಲ್ಲಿ ಹಾಕಿಕೊಂಡಿದ್ದರೂ ಇದಕ್ಕೆ ಸೆಂಟ್ರಲ್ ಗವರ್ನಮೆಂಟಿನವರ ಟೆಕ್ನಿಕಲ್ ಕ್ಲಿಯರೆನ್ಸ್ ಇನ್ನೂ ಬಂದಿಲ್ಲ ಎಂದು ಇದರ ಬಗ್ಗೆ ಮೊನ್ನೆ ನಾನು ಅನೇಕ ಮಾನ್ಯ ಸದಸ್ಯರುಗಳು ಕಾವೇರಿ ಬೇಸಿನ್‌ನಲ್ಲಿರುವ ಅನೇಕ ಮಾನ್ಯ ಸದಸ್ಯರುಗಳು ಹಾಗೂ ವಿರೋಧ ಪಕ್ಷದ ನಾಯಕರು ಇವರೊಡನೆ ಪೂರ್ತಿಯಾಗಿ ಚರ್ಚೆ ಮಾಡಿದ್ದೇನೆ ಮತ್ತು ನಮ್ಮ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ಅವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ಹೇಗಾದರೂ ನಾವು ಈ ಕೆಲಸವನ್ನು ನಿಲ್ಲಿಸುವುದಿಲ್ಲ. ಇದನ್ನು ಮುಂದುವರಿಸುತ್ತೇವೆ.

ಶ್ರೀ ಎಂ. ಕೆ. ಬೊಮ್ಮೆಗೌಡ.—1974 ರಲ್ಲಿ ನಾವು ಪುನಃ ಮದ್ರಾಸಿನೊಂದಿಗೆ ಹೊಸ ಅಗ್ರಿಮೆಂಟು ಮಾಡಿಕೊಳ್ಳಬೇಕಾಗಿದೆ. ಇದನ್ನು ಮಾಡಿಕೊಳ್ಳುವುದಕ್ಕೆ ಮುಂಚೆ ಈಗ ಇರುವಂತೆ ಎಲ್ಲ ನೀರನ್ನು ಪಯೋಗಿಸಿಕೊಳ್ಳಲು ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಇದರ ಕೆಲಸವನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ ಮತ್ತು ಡ್ಯಾಮ್‌ಗೆ ಸಂಬಂಧಪಟ್ಟ ಹಾಗೆ ಇದಕ್ಕೆ ಟೆಂಡರುಗಳನ್ನು ಕರೆದು ಅದರಂತೆ ಇಲ್ಲಿನ ಕೆಲಸಗಳು ಈಗಾಗಲೇ ನಡೆಯುತ್ತಿವೆ.

ಶ್ರೀ ಹೆಚ್. ಡಿ. ದೇವೇಗೌಡ.—ಕೇಂದ್ರದ ಪಿ.ಡಬ್ಲ್ಯು.ಡಿ. ಮಂತ್ರಿಗಳು ಹಾಗೂ ಮದ್ರಾಸು ರಾಜ್ಯದ ಮುಖ್ಯ ಮಂತ್ರಿಗಳೊಡನೆ ಇದರ ಬಗ್ಗೆ ಚರ್ಚೆ ನಡೆಸಿದಾಗ ಈ ಟೆಕ್ನಿಕಲ್ ಕ್ಲಿಯರೆನ್ಸನ್ನು ತಾತ್ವಿಕವಾಗಿ ಒಪ್ಪುತ್ತೇವೆ ಎಂದು ಹೇಳಿದರು ಎನ್ನುವುದರ ಬಗ್ಗೆ ಒಂದು ವರದಿಯನ್ನು ಪತ್ರಿಕೆಗಳಲ್ಲಿ ನೋಡಿದೆವು. ಹಾಗೆ ತಾತ್ವಿಕವಾಗಿ ಒಪ್ಪಿದ್ದರೆ ಆ ಒಪ್ಪಂದವನ್ನು ಕಾರ್ಯಗತ ಮಾಡಲು ಮೈಸೂರು ಸರಕಾರಕ್ಕೆ ಮದ್ರಾಸು ಸರಕಾರದಿಂದ ಏನಾದರೂ ಅಡಚಣೆಗಳು ಬಂದಿವೆಯೆ ? ಇಲ್ಲವೇ ಸೆಂಟ್ರಲ್ ಪಿ.ಡಬ್ಲ್ಯು.ಡಿ.ಯಿಂದ ಏನಾದರೂ ಅಡಚಣೆಗಳಾಗಿವೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋದಾಗ ಮದ್ರಾಸಿಗೆ ಸಂಬಂಧಪಟ್ಟ ಮಂತ್ರಿಗಳೂ ಬಂದಿದ್ದರು ಮತ್ತು ಎಲ್ಲ ಚರ್ಚೆಗಳೂ ಆದವು. ಆಗ ಸೆಂಟ್ರಲ್ ವಾಟರು ಪವರು ಬೋರ್ಡಿನ ಸದಸ್ಯರುಗಳೂ ಬಂದಿದ್ದರು. ಇದರ ಚರ್ಚೆ ಮಾನ್ಯ ಮಂತ್ರಿಗಳಾದ ಶ್ರೀ ಕೆ. ಎಲ್. ರಾವ್‌ರವರ ಛೇಂಬರ್‌ನಲ್ಲಿ ನಡೆದವು. ಅವರು ಆಗ ಎಲ್ಲ ವಿಚಾರಗಳನ್ನೂ ಕೇಳಿ ನಮಗೆ ಟೆಕ್ನಿಕಲ್ ಕ್ಲಿಯರೆನ್ಸ್‌ನ್ನು ಕೊಡಬೇಕೆಂದು ಒತ್ತಾಯ ಮಾಡಿದಾಗ ಅವರು ಕಳುಹಿಸುತ್ತೇವೆ ಎಂದು ಒಪ್ಪಿದ್ದರು. ನಾವು ಚರ್ಚೆ ಮಾಡಿ ಬಂದ ನಂತರ ಮದ್ರಾಸು ಸರಕಾರದವರು ಒಂದು ಡೀಟೇಲ್ಡ್ ನೋಟು ತಯಾರು ಮಾಡಿ ಇದನ್ನು ಕೇಂದ್ರಕ್ಕೆ ಕಳುಹಿಸಿದ್ದರು. ಇದನ್ನು ಒಪ್ಪುವುದಕ್ಕೆ ಮುಂಚೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡುವ ಹಾಗಿಲ್ಲ ಎಂದು ಹೇಳುತ್ತಾ ನಮ್ಮ ಕಡೆಗೆ ಅವರು ಕಳುಹಿಸಿರುವ ನೋಟನ್ನೂ ಕಳುಹಿಸಿದ್ದಾರೆ, ಇದನ್ನು ಒಪ್ಪುತ್ತೀರಾ ಇಲ್ಲವೇ ಎನ್ನುವುದನ್ನು ಚರ್ಚೆ ಮಾಡಿ ತಿಳಿಸಬೇಕೆಂದು ಕೇಂದ್ರದವರು ಹೇಳಿದ್ದಾರೆ. ನಾವು ಟೆಕ್ನಿಕಲ್ ಕ್ಲಿಯರೆನ್ಸ್‌ನ್ನು ಹೇಗಾದರೂ ಮಾಡಿಕೊಡಬೇಕೆಂದು ಕೇಳುತ್ತಲೇ ಇದ್ದೇವೆ, ಇದು ಒಂದು ರೀತಿಯಾಗಿ ಡೆಲಿಕೇಟ್ ಆಗಿದೆ. ಇದರ ವ್ಯವಹಾರವನ್ನು ಮಾಡಲು ಹೆಚ್ಚು ಪತ್ರ ವ್ಯವಹಾರ ಮಾಡುವುದಕ್ಕೆ ಆಗುತ್ತಿಲ್ಲ. ಮೇಲಿಂದ ಮೇಲೆ ಕೇಂದ್ರದವರ ಮೇಲೆ ಒತ್ತಾಯ ತರುತ್ತಲೇ ಇದ್ದೇವೆ. ಹಾಗೂ ಸೆಂಟ್ರಲ್ ವಾಟರು ಪವರು ಬೋರ್ಡಿನಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕೆಂದು ಕೇಳುತ್ತಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಟೆಕ್ನಿಕಲ್ ಕ್ಲಿಯರೆನ್ಸ್ ಬಾರದೇ ಇದ್ದರೂ ನಮ್ಮ ಸ್ಟೇಟ್ ರಿಸೋರ್ಸಸ್‌ನಲ್ಲಿಯೇ ಇದಕ್ಕೆ ಹಣ ಒದಗಿಸಿಕೊಂಡು ಪ್ರಾಜೆಕ್ಟನ್ನು ಮುಂದುವರಿಸುತ್ತೀರಾ, ಇಲ್ಲವೇ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಲು ಯಾವ ರೀತಿಯಾಗಿ ಒತ್ತಾಯ ತಂದು ಇದನ್ನು ಬೇಗನೆ ಕಾರ್ಯಗತ ಮಾಡಲು ಪ್ರಯತ್ನಿಸುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ನಾನು ಹೇಳಿದೆ, ಟೆಕ್ನಿಕಲ್ ಕ್ಲಿಯರೆನ್ಸ್ ಬರದೇ ಇದ್ದರೂ ಇಲ್ಲಿನ ಕೆಲಸಗಳು ಈಗಾಗಲೇ ಆರಂಭವಾಗಿದೆ, ಅವು ನಡೆಯುತ್ತಿವೆ. ಟೆಂಡರು ಪ್ರಕಾರ ಕೆಲಸಗಳನ್ನು ಕೊಡಲಾಗಿದೆ ಮತ್ತು ಎಲ್ಲ ಕೆಲಸಗಳು ಯೋಜನೆಯಂತೆಯೇ ಆಗುತ್ತವೆ. ಇದಕ್ಕೆ ಟೆಂಡರುಗಳನ್ನು ಕರೆವಾಗಿದೆ. ಎಲ್ಲ ಕೆಲಸಗಳೂ ಟೆಂಡರು ಪ್ರಕಾರ ಮಾಡುತ್ತಾರೆ. ಮಾನ್ಯ ಸದಸ್ಯರಿಗೂ ಗೊತ್ತಿರುವಂತೆ ಇಲ್ಲಿ ಈಗಾಗಲೇ ಕೆಲಸಗಳು ನಡೆಯುತ್ತಿವೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಸ್ವಾಮಿ, ಈ ಅಣೆಕಟ್ಟಿನ ಎತ್ತರವನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ. ಈ ಸಂದರ್ಭದಲ್ಲಿ ಈ ಯೋಜನೆಗೆ ಸಂಬಂಧಪಟ್ಟಂತೆ ಮುಖ್ಯ ಇಂಜನೀಯರೂ ಕೂಡ ಎಷ್ಟು ದುಡ್ಡು ಖರ್ಚಾದರೂ ಕೂಡ ಸರ್ಕಾರ ಮಾಡುತ್ತದೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಎಷ್ಟು ಹಣ ಖರ್ಚಾದರೂ ಈ ಯೋಜನೆಯನ್ನು ಮಾಡಲು ಸಿದ್ಧವಾಗಿದ್ದೇವೆ ಎಂದು ಹೇಳಿದ್ದಾರೆ. ಯಾವ ಕಾಲಕ್ಕೆ ಇದನ್ನು ಮಾಡುತ್ತಾರೆ ಎನ್ನುವ ಭರವಸೆ ಕೊಟ್ಟಂತೆ ಇಲ್ಲ. ಆದುದರಿಂದ ಈ ಅಣೆಕಟ್ಟಿನ ಎತ್ತರವನ್ನು ಕಡಿಮೆ ಮಾಡುವುದು ಸರ್ಕಾರದವರ ಯೋಜನೆಯಲ್ಲದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಅಣೆಕಟ್ಟಿನ ಎತ್ತರದ ಬಗ್ಗೆ ಹೇಳಿದ್ದಾರೆ. ನನ್ನ ಹತ್ತಿರ ಆ ಇನ್‌ಫರ್ಮೇಷನ್ ಇಲ್ಲ. ಮತ್ತೊಂದು ಪ್ರಶ್ನೆಯನ್ನು ಅದರ ಬಗ್ಗೆ ಕೇಳಿದರೆ ತರಿಸಿ ಕೊಡುತ್ತೇನೆ. ಹೇಮಾವತಿ ಪ್ರಾಜೆಕ್ಟ್ ಬಗ್ಗೆ ಫೌಂಡೇಷನ್ ಸ್ಟೋನ್ ಹಾಕುವ ಸಂದರ್ಭದಲ್ಲಿ ಈ ಕೆಲಸವನ್ನು ಎಷ್ಟು ಕಷ್ಟವಾದರೂ ನಡೆಸಬೇಕು, ಇದಕ್ಕೆ ಆದಷ್ಟು ಹೆಚ್ಚು ಹಣವನ್ನು ಒದಗಿಸಬೇಕು ಎನ್ನುವ ಭರವಸೆಯನ್ನು ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ನಾವು ಬಡ್ಜೆಟಿನಲ್ಲಿ ಒದಗಿಸಿದ್ದ ಹಣವನ್ನೆಲ್ಲಾ ಖರ್ಚು ಮಾಡಿದ್ದೇವೆ. ಇನ್ನೂ ಹೆಚ್ಚು ಹಣ ಒದಗಿಸುವ ವಿಚಾರ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಮುಖ್ಯ ಮಂತ್ರಿಗಳು ಡೆಲ್ಲಿಗೆ ಹೋದಾಗ ಶ್ರೀ ಕೆ. ಎಲ್. ರಾವ್ ಅವರು ಶೀಘ್ರದಲ್ಲೇ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡುತ್ತೇವೆ ಎನ್ನುವ ಭರವಸೆ ಕೊಟ್ಟು ಅವರು ಇಲ್ಲಿಗೆ ಬಂದಮೇಲೆ ಮದ್ರಾಸ್‌ನವರ ಡಿಟೇಲ್ಡ್ ಕಾಮೆಂಟ್ ಕಳುಹಿಸಿದರು ಎಂದು ಹೇಳಿದ್ದೀರಿ. ಅಂದಮೇಲೆ ಅವರು ಕೊಟ್ಟ ಭರವಸೆಯಿಂದ ಹಿಂದೆ ಹೋಗಿದ್ದಾರಲ್ಲಾ ? ಇದರಿಂದ ಶ್ರೀ ಕೆ. ಎಲ್. ರಾವ್ ಅವರು ಮದ್ರಾಸ್‌ನವರ ಪ್ರಭಾವಕ್ಕೆ ಒಳಗಾಗಿದ್ದಾರೆ ಎನ್ನತಕ್ಕಂಥ ಪ್ರತಿಭಟನೆಯನ್ನು ಸೂಚನೆ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಮದ್ರಾಸ್‌ನವರೂ ನಾವೂ ಒಪ್ಪುವ ಪ್ರಶ್ನೆಯಿಲ್ಲ. ಕೇಂದ್ರ ಸರ್ಕಾರದವರು ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕು. ಅಷ್ಟರಲ್ಲಿ ಮದ್ರಾಸ್‌ನವರು ಡೀಟೇಲ್ಡ್ ಕಾಮೆಂಟ್ ಕೊಟ್ಟಮೇಲೆ ಅದನ್ನು ನಮಗೆ ಕಳುಹಿಸಿ ಅದರ ಮೇಲೆ ನಾವು ಅಭಿಪ್ರಾಯ ವ್ಯಕ್ತ ಮಾಡಬೇಕು. ಅದರ ಮೇಲೆ ಚರ್ಚೆ ಮಾಡಬೇಕೆಂದು ಹೇಳಿದ್ದಾರೆ. ಆದರೆ ನಾವು ನಮ್ಮ ಅಭಿಪ್ರಾಯ ವ್ಯಕ್ತಪಡಿಸುವುದಕ್ಕಾಗುವುದಿಲ್ಲ, ಟೆಕ್ನಿಕಲ್ ಕ್ಲಿಯರೆನ್ಸನ್ನು ಆದಷ್ಟು ಬೇಗ ಕಳುಹಿಸಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ.

Sri H. M. CHANNABASAPPA.—Shall I take it that the Chief Minister of Mysore has not agreed to obtain technical clearance for Hemavathy project subject to the 1924-Agreement and the Rules of Regulations ?

Sri VEERENDRA PATIL.—We discussed there so many things and we made our point of view, or stand, clear to the representatives of the Madras Government and also the representatives of the C.W.P.C. and also the Union Minister and in the light of that, we said that they should accord technical clearance. We also said : "If you want to put any condition, it is for you to stipulate those conditions. When technical clearance is given by you, we shall consider whatever conditions you put and see whether those conditions are acceptable to us or not." We have not received the technical clearance and so, we do not know what are the conditions that they intend to put.

Sri B. P. GANGADHAR.—May I know the total estimate of this project and by what time this project will be completed.

Sri VEERENDRA PATIL.—The total estimates cost of this project is Rs. 16.30 crores. When this going to be completed will depend upon the availability of resources.

ಶ್ರೀ ಜಿ. ಬಿ. ಶಂಕರರಾವ್ (ಪಶುವೈದ್ಯ ಪಶುಸಂಗೋಪನ ಹೈನು ಮತ್ತು ಅಭಿವೃದ್ಧಿ ಶಾಖೆಗಳ ರಾಜ್ಯ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಈ ಚರ್ಚೆ ನಡೆದ ಕಾಲಕ್ಕೆ ಮಾನ್ಯ ವಿರೋಧ ಪಕ್ಷದ ಸದಸ್ಯರು ಯಾವ ರೀತಿ ನಡೆದುಕೊಂಡರು ಎನ್ನುವುದು ಸಭೆಗೆ ಗೊತ್ತಿದೆ, ನಾನು ಈ ಸಭೆಯ ಸದಸ್ಯನಾಗಿ ಸುಮಾರು 12 ವರ್ಷ ಆಯಿತು. ಸಭೆಗಾಗಲೀ, ಯಾವ ಮಾನ್ಯ ಸದಸ್ಯರಿಗಾಗಲಿ ಆ ರೀತಿ ಅಗೌರವ ಮಾಡಬೇಕೆನ್ನುವ ರೀತಿಯಲ್ಲಿ ಇದುವರೆಗೂ ನಡೆದುಕೊಂಡಿಲ್ಲ. ಕೆಲವು ಸದಸ್ಯರು ನನ್ನ ಜೊತೆಯಲ್ಲ 12 ವರ್ಷದಿಂದ ಇದ್ದವರು ಇವತ್ತೂ ಕೂಡ ಇಲ್ಲಿ ಇದ್ದಾರೆ. ನನ್ನನ್ನು ಈ ಸಭೆಯಲ್ಲಿ ನೋಡಿದ್ದಾರೆ. ಈ ಸಭೆಯ ವಾತಾವರಣ ಬಹಳ ವಿಕೋಪಕ್ಕೆ ಹೋದಾಗ ಮಾನ್ಯ ಸದಸ್ಯರಿಗೆಲ್ಲಾ ತಾವು ಎಚ್ಚರಿಕೆ ಕೊಟ್ಟಿದ್ದೀರಿ· ಸದಸ್ಯರು ಏನೇನೋ ಅಪಾದನೆ ಮಾಡುತ್ತಾ ಇದ್ದರು ಅದರ ಮೇಲೆ ಟೀಕೆ ನಡೆಯುತ್ತಾ ಇತ್ತು ಎಂದು ನನಗೆ ಭಾವನೆ ಆಯಿತು, ಆಮೇಲೆ ಶ್ರೀಮಾನ್ ಸಿದ್ಧವೀರಪ್ಪನವರು ಮಾತನಾಡುವುದಕ್ಕೆ ಹೊರಟರು, ಶ್ರೀಮಾನ್ ಗಂಗಾಧರ್ ಅವರ ವರ್ತನೆ ಅಧ್ಯಕ್ಷರು ಮತ್ತು ಮುಖ್ಯಮಂತ್ರಿಗಳ ಪರ ವಿಷಯದಲ್ಲಿ ಸರಿಯಾಗಿರಲಿಲ್ಲ. ಶ್ರೀಮಾನ್ ಸಿದ್ಧವೀರಪ್ಪನವರು ಶ್ರೀಮಾನ್ ಗಂಗಾಧರ ಅವರ ಪರವಾಗಿ ಸಮರ್ಥನೆಮಾಡುತ್ತಾ ಅವರು ವಕಾಲತ್ತು ವಹಿಸಿದ್ದಾರೋ ಅನ್ನುವ ರೀತಿಯಲ್ಲಿ ಹೇಳಿದರು ಎಂದು ನನಗೆ ಅನಿಸಿತು. ನಾನು ಹೇಳಿದ್ದು ಶ್ರೀಮಾನ್ ಸಿದ್ಧವೀರಪ್ಪನವರಿಗೆ ಅವಮಾನ ಮಾಡಬೇಕೆಂಬ ಉದ್ದೇಶದಿಂದ ಇರಲಿಲ್ಲ ಈ ಸಭೆಯಲ್ಲಿ ಅದಕ್ಕಿಂತ ಕಟುವಾಗಿ ಏನೇನೋ ನಡೆಯುತ್ತಾ ಇರುತ್ತದೆ ಅಂಥಾದ್ದರಲ್ಲಿ ಶ್ರೀಮಾನ್ ಸಿದ್ಧವೀಪ್ಪನವರು ಇದಕ್ಕಾಗಿ ಇಷ್ಟು ವಿಪರೀತವಾಗಿ ಹೋದದ್ದು ಆಶ್ಚರ್ಯವಾಯಿತು. ಅವರಿಗೆ ಅವಮಾನ ಮಾಡುವ ಉದ್ದೇಶವಾಗಲಿ ಅಥವಾ ಸಭೆಗೆ ಅಗೌರವ ಮಾಡುವ ಉದ್ದೇಶವಾಗಲಿ ಅಥವಾ ಸಭೆಯ ನಡವಳಿಕೆಗೆ ಪ್ರತಿಬಂಧಕ ಮಾಡುವ ಉದ್ದೇಶವಾಗಲಿ ನನಗೆ ಇರಲಿಲ್ಲ. ಆ ರೀತಿ ಭಾವಿಸಬಾರದು ಎಂದು ಹೇಳುತ್ತೇನೆ; ಅವರು ಹಿರಿಯ ಸದಸ್ಯರು. ಈ ಸಭೆಗೆ ನನಗಿಂತಲೂ ಅವರು ಬಹಳ ಹಿರಿಯರು ಹಾಗು ನನಗಿರುವ ಎರಡರಷ್ಟು ವಯಸ್ಸು ಅವರಿಗೆ ಆಗಿದೆ ನಾನು ಆ ರೀತಿ ಅಗೌರವ ಮಾಡಿದಂತೆ ಆಗಿದ್ದರೆ, ದಯಮಾಡಿ ಆ ರೀತಿ ತಪ್ಪು ತಿಳಿದು ಕೊಳ್ಳಕೂಡದು, ಅದಕ್ಕೆ ವಿಶಾದಪಡುತ್ತೇನೆ ಎಂದು ಹೇಳುತ್ತೇನೆ.

Sri K. H. PATIL.—Sir, I raise to a point of order. My point of order is whether a member of this House can accuse another member of the House saying that he is holding vakalat on behalf of the other member.

Mr. SPEAKER.—I have heard the Hon'ble Member Mr. Patil I reserve my ruling. I will give a ruling next day.

† ಶ್ರೀ ವಾಟಾಳ್ ನಾಗರಾಜ್.—ನಾನು ವಿಶಾದಪಡಬೇಕಾದ್ದು ಏನೂ ಇಲ್ಲ ಏನಾಯಿತು ಎಂದರೆ ಈ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಕೊಡುತ್ತಾ ಇದ್ದರು. ಆಗ ಮಾನ್ಯ ಸದಸ್ಯರಾದ ಗಂಗಾಧರ್‌ರವರು ಮತ್ತು ಸಿದ್ಧವೀರಪ್ಪನವರು ಎದ್ದು ಮಾತಿಗೆ ಮಾತು ನಡೆಯುತ್ತಾ ಇದ್ದಾಗ ಮಾನ್ಯ ರಾಜ್ಯ ಸಚಿವರಾದ ಶ್ರೀ ಜಿ. ಬಿ. ಶಂಕರರಾವ್‌ರವರು ಜವಾಬ್ದಾರಿ ಸ್ಥಾನದಲ್ಲಿದ್ದೇನೆ. ಎಂಬುದನ್ನೂ ಕೂಡ ಮರೆತು ಯಾವುದೋ ಒಂದು ಚಾವಡಿಯಲ್ಲಿ ಕುಳಿತುಕೊಂಡು ಮಾತನಾಡುವಂತೆ 'ಓಹೋಹೋ' ಎಂದು ಅಪಹಾಸ್ಯಮಾಡುವ ರೀತಿಯಲ್ಲಿ ಹೇಳಿದರು. ಅಂತಹ ಮಂತ್ರಿಗಳು ವೀರೇಂದ್ರ ಪಾಟೀಲ್‌ರವರ ಕ್ಯಾಬಿನೆಟ್‌ನಲ್ಲಿ ಇರಬಾರದು, ಅವರನ್ನು ಹೊರಗೆ ಹಾಕಿ ಎಂದು ಹೇಳಿದ್ದೆ. ಆ ರೀತಿ ಹೇಳಿದ್ದು ತಪ್ಪಾಗಿದ್ದರೆ ಅದಕ್ಕೆ ವಿಷಾದ ಪಡುತ್ತೇನೆ, ಅಷ್ಟೇ ಹೊರತು ಇನ್ನೇನೂ ವಿಶಾದವಿಲ್ಲ.

ಶ್ರೀ ಅಜೀಜ್‌ಸೇಟ್ (ನರಸಿಂಹರಾಜಪುರ).—ಚೀಫ್ ಮಿನಿಸ್ಟರ್‌ರವರು ನನ್ನ ಸ್ಟೇಟ್‌ಮೆಂಟ್ ಮೇಲೆ ಯಾರಾದರೂ ಏನಾದರೂ ಹೇಳುವುದು ಇದ್ದರೆ ಹೇಳಿ ಎಂದು ಹೇಳಿದರು. ಮಾನ್ಯ ಮಂತ್ರಿಗಳಾದ ಆರೋಗ್ಯ ಸಚಿವರಾದ ಶ್ರೀಮಾನ್ ವೈ. ರಾಮಕೃಷ್ಣ ಅವರು ಮಾಡಿರುವ ಎಷ್ಟೋ ಆರ್ಡರ್‌ಗಳನ್ನು ಈ ಡೈರೆಕ್ಟರ್ ಆಫ್ ಹೆಲ್ತ್‌ರವರು ತಿರಸ್ಕಾರ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ತಿಳಿದುಕೊಂಡರೆ ಅವರು ಎಂತಹ ಅಧಿಕಾರಿಗಳು ಎಂಬುದು ಗೊತ್ತಾಗುತ್ತದೆ.

Statement by Chief Minister *re*: Holding of Parliament Session in Bangalore

Mr. SPEAKER.—Next, Mr. Channabasappa.

†SRI H. M. CHANNABASAPPA (Periyapatna).—Mr. Speaker Sir, I am not on my legs to make any comments on what happened in the House. I am on my legs, with your permission, to seek information on a very important issue in which not only the people of Mysore but the people of South India and whole of India are interested and it is this.

Sir, you are aware that for some time back there has been a move that for various good reasons the Parliament session should be held atleast once in a year in South India. The Government of India also constituted a Committee of Parliament Members to assess the values of such a move and the members of the committee went round all the South Indian States to ascertain the views of the respective Governments and the people of respective States and assessed the values of that move. They also came to Mysore and I take it that they had elaborate discussions with important members of the Assembly and also they collected the public opinion in the matter. It is quite a long time since they went to Delhi after ascertaining the views of the people of Kerala Mysore, Andhra Pradesh and Madras. I do not want to go into the merits of the question. Suffice it to say that from all point of view, it is necessary that the Parliament session should be held once at least in one of the places in South India and it is needless to say that Bangalore is an ideally suited place for that purpose. For quite a long time, nothing is heard on that subject. We are anxious to know from the Government of Mysore what exactly is the action taken by them and the views expressed by them and what action they propose to take in order to see that that move materialised and a session of Parliament is held at once in South India particularly in Bangalore. I seek information through you Sir, from the Government of Mysore.

† SRI VEERENDRA PATIL.—Mr. Speaker, as stated just now by the Hon'ble Member Sri H. M. Channabasappa, it is a fact that there is a proposal before the Grovement of India to have one session of the Parliament somewhere in the South. In fact, I am told that this was a proposal made by almost all the leaders and important Members of Parliament. Almost all the Leaders are also in favour of holding one session of Parliament in the South. When we came to know that a committee was constituted consisting of Parliament Members to go into this question in greater detail and also visit the States of Mysore, Kerala, Madras and Andhra Pradesh, I had discussion with some of my friends and also I had a discussion with the leader of the Opposition. After I consulted all the concerned Members, I constituted a high level committee with the leader of the Opposition as a Member of that committee and one or two Members of this House also. I am very happy to say Sir, that the Members of this Committee are one in welcoming suc a move and we have decided to welcome this proposal of having session of Parliament in the South. The committee constituted by the Parliament came to Mysore State and we had detailed discussion with them. First they had discussion at the officers level and then they

(SRI VEERENDRA PATIL)

inspected Vidhana Soudha and so many other buildings and other places in order to satisfy themselves about the availability of accommodation for holding Parliament session here in Bangalore City and later on they had discussion with us also. During the course of the discussion I, on behalf of the Government and all the members of the Committee, assured the members of that committee that so far as this proposal is concerned we here in Mysore State wholeheartedly welcomed this suggestion and I said we are here to provide the necessary facilities for holding the session of Parliament in the South. Even today, I repeat the same thing that so far as this proposal is concerned, whether they want to hold it or not, it is for them to take a decision. But if they take a final decision, we are here and I want to assure the members of that committee and also through this House, the Government of India, that we are prepared to provide all necessay facilities to the Parliament or the Government of India, for holding a session of Parliament in the South.

More than the question of expenditure, we have to look at this matter from another angle. As I said just now, whether it is advisable, whether it is feasible, whether it is necessary to hold the Session of Parliament in the South, it is entirely for the Parliament and the Government of India to decide. I do not want to say anything What I say from here is that if they take a decision to hold a session of Parliament in the South, I am here on behalf of the people of Mysore State and on behalf of the Government to provide all necessary facilities to Parliament to hold their session in the South.

Sri H. M. CHANNABASAPPA.—It is one thing to welcome the holding of a session in the South. I am very happy that you agree when they take a decision, to hold the session in the south. I want to know whether the Government of Mysore has made a declaration that we are prepared to give all facilities to hold the session in Bangalore in Mysore State ?

Sri VEERENDRA PATIL.—I said that if they want to hold a session in the South, Bangalore is an ideal place which can provide all facilities and I have gone to the extent of saying that I do not think that any other State or City can offer so many facilities as Bangalore City, for a session of Parliament to be held in the South, I have made it quite clear to them. In fact, I wanted that they should take a decision as early as possible. I am quite confident that when they take a decision, that decision will go in favour of Mysore State and Bangalore City.

I only wanted to add one point. This is not a matter of expenditure only, but one of emotional integration. Because we find of late there is a climate and a tendency to think in terms of north and south. When there is a tendency to think in terms of north and South, it is necessary that in the interest of emotional integration of the country, to have a

session of the Parliament in the South. After all, it is my personal opinion which I am expressing. With this back-ground if they take a decision, then the question of expenditure should not come in the way. This is what I wanted to emphasise on this occasion. Whatever may be the expenditure we want to assure the Government of India and also the team of Parliament that we are here to provide all necessary facilities. It is for them to take a decision. When they take a decision to hold the session in Bangalore, we wholeheartedly welcome and we are here to provide all necessary facilities.

Sri H. SIDDAVEERAPPA (Harihara).—who will meet that expenditure ?

Sri VEERENDRA PATIL.—After all, this question of expenditure is a matter of detail. We can sit across the table and thrash it out and come to a conclusion. We need not go into this question at this stage.

Sri B. P. GANGADHAR (Tumkur).—Let it not be a strain on the State Exchequer.

Sri D. DEVARAJ URS (Hunsur).—The Chief Minister was pleased to say that because of emotional integration, there is a possibility of holding a session of Parliament in the South and preferably in Bangalore, and the question of finance or expenditure need not come in the way. I should like to know from him whether it is the Government's view or his personal view.

M. S. KRISHNAN (Melleswaram).—The Hon'ble Chief Minister was pleased to say that because of emotional integration this session should be held here. We are not aware as to what would be the expenditure in this respect. Though he said that this is a matter of detail, if the expenditure is such as would be a very big strain on the State of Mysore, then one has to straight away think whether it is worth while having emotional integration when we have to bear a financial burden that would accrue by virtue of a session of Parliament in Bangalore. We would like to know from you what would the probable expenditure before the question of emotional integration is raised.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಮುಖ್ಯಮಂತ್ರಿಗಳು ಏನು ಬೇಕಾದರೂ ಮಾಡಿ ಕೊಳ್ಳಲಿ. ಆದರೆ ಬೆಂಗಳೂರು ಜನಗಳ ಮೇಲೆ ಹೆಚ್ಚಿಗೆ ತಲೆನೋವು ತರುವುದು ಬೇಡ. ಬೆಂಗಳೂರು ಜನರಮೇಲೆ ಈಗಾಗಲೇ ಸಾಕಷ್ಟು ಭಾರ ಬಿದ್ದಿದೆ. ಇನ್ನೂ ಹೆಚ್ಚಿಗೆ ಭಾರ ಹಾಕುವುದು ಬೇಡ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ನಾನು ಖಚಿತವಾದ ಅಭಿಪ್ರಾಯವನ್ನು ಹೇಳು ತ್ತೇನೆ. ಖಂಡಿತವಾಗಿ ಇಲ್ಲಿ ಪಾರ್ಲಿಮೆಂಟ್ ಅಧಿವೇಶನ ಆಗಕೂಡದು. ಒಂದು ಕೋಳಿಮೊಟ್ಟೆ ಒಂದು ರೂಪಾಯಿ ಆಗುತ್ತದೆ (ನಗು) ಅದರ ಕಷ್ಟ ನನಗೆ ಗೊತ್ತಿದೆ. ಸುಮ್ಮನೆ ನಗುವುದು ಬೇಡ. ಅದಿಲ್ಲದೆ ನನಗೆ ಆಗುವುದಿಲ್ಲ. 10–20 ಕೋಟಿ ರೂಪಾಯಿಗಳು ಖರ್ಚುಮಾಡಬೇಕಾದರೆ, ಈ ವಿಷಯವಾಗಿ ಒಂದು ಮೀಟಿಂಗ್ ಕರೆದು ಒಬ್ಬರಿಗೊಬ್ಬರು ಚರ್ಚೆಮಾಡುವಾಗ ಖರ್ಚಿನಲ್ಲಿ ನಾವು ಅರ್ಧ, ನೀವು ಅರ್ಧ ಹಾಕಿಕೊಳ್ಳೋಣವೆಂಬ ತೀರ್ಮಾನವಾಗಬಹುದು. ಆಗ ಅವರ ಮಾತಿಗೇ ಬೆಲೆ ಕೊಡಬೇಕಾಗುತ್ತದೆ. ಆ ರೀತಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ನಾವು ತಯಾರಾಗಿಲ್ಲ. 2 ಲಕ್ಷ ರೂಪಾಯಿಗಳಲ್ಲಿ ಒಂದು ಕಟ್ಟೆ ಕಟ್ಟುವುದಕ್ಕೆ ದುಡ್ಡು ಕೊಡಿ

(ಶ್ರೀ ಎಸ್. ಚನ್ನಯ್ಯ)

ಅಂದರೆ ದುಡ್ಡು ಇಲ್ಲವೆಂದು ಹೇಳುತ್ತೀರಿ. ಯಾವ ಪಾರ್ಲಿಮೆಂಟ್ ಅಧಿವೇಶನವೂ ಇಲ್ಲಿ ಬೇಡ. ಅವರು ಅಲ್ಲಿಯೇ ಇರಲಿ, ನಾವು ಇಲ್ಲಿಯೇ ಇರೋಣ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ ಒಂದುವೇಳೆ ಅದಕ್ಕೇನಾದರೂ ನೀವು ಅವಕಾಶಕೊಟ್ಟರೆ ಈ ದೇಶವಲ್ಲಿ ಸುತ್ತಿ ಅದನ್ನು ಪ್ರತಿಭಟನೆ ಮಾಡುವುದಕ್ಕೆ ನಾವು ಏರ್ಪಾಡುಮಾಡುತ್ತೇವೆ.

Sri B. P. KADAM (Karwar).—It is quite necessary to have a session of Parliament in the South to serve the cause of national emotional integration. So far as the problem of cost of eggs going up consequent upon it, is concerned, we can have a poultry farm of the greatest magnitude right in the vicinity and that problem is solved in its entirety.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ತಾವು ಹೇಳಿದಿರಿ. ಕೆಲವು ವಿಚಾರಗಳಲ್ಲಿ ವಿರೋಧವಿದ್ದರೂ ಕೂಡ ಪಂಜಾಬು ವಿತರ್ಕೋಸ್ಕರ ಮುಂದುವರಿದಿದೆ ಅಂದರೆ ದೆಹಲಿ ಬಹಳ ಹತ್ತಿರವಿದೆಯೆಂದು. ಅಂದಮೇಲೆ ಅಲ್ಲಿನ ಮಂತ್ರಿಗಳೇ ಆಗಲೀ ಅಥವಾ ಮುಖ್ಯ ಅತಿಥಿಗಳು ಯಾರೇ ಆಗಲೀ ಇಲ್ಲಿಗೆ ಬರುವುದರಿಂದ ಮೈಸೂರಿನ ಭವಿಷ್ಯ ಚೆನ್ನಾಗಿ ಆಗುತ್ತದೆ. ಅವರ ಸಹಾಯವನ್ನು ತೆಗೆದುಕೊಂಡು ಪಾರ್ಲಿಮೆಂಟ್ ಅಧಿವೇಶನವನ್ನು ಇಲ್ಲಿ ನಡೆಸುವುದು ಒಳ್ಳೆಯದು. ಖರ್ಚನ್ನು ಅವರಿಂದಲೇ ವಹಿಸುವ ಹಾಗೆ ಮಾಡಿದರೂ ಒಳ್ಳೆಯದು. ಪಾರ್ಲಿಮೆಂಟ್ ಅಧಿವೇಶನದಿಂದ ನಮ್ಮ ದೇಶಕ್ಕೆ ಬಹಳ ಉಪಕರವಾಗುತ್ತದೆ. ಅದರಿಂದೇನೂ ಅಪಕಾರವಾಗುವುದಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಮಾನ್ಯ ಶ್ರೀ ಚನ್ನಬಸಪ್ಪನವರು ಈ ವಿಷಯವನ್ನು ಇಲ್ಲಿ ಪ್ರಸ್ತಾಪಮಾಡಿದ್ದು ಬಹಳ ಸೂಕ್ತವೆಂದು ನನಗೆ ಅನ್ನಿಸುತ್ತದೆ. ಈ ವಿಷಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇಷ್ಟು ತೋರಿಸಿದ್ದು ಬಹಳ ಒಳ್ಳೆಯದಾಗಿರುತ್ತದೆ. ನಮ್ಮ ದೇಶ ಬಹಳ ದೊಡ್ಡ ದೇಶವಾಗಿರುವುದರಿಂದ ಒಬ್ಬರಿಗೊಬ್ಬರಿಗೆ ಸಂದರ್ಶಿಸುವುದಕ್ಕೆ ವಿಚಾರ ವಿನಿಮಯ ಮಾಡುವುದಕ್ಕೆ ಪಾರ್ಲಿಮೆಂಟ್ ಅಧಿವೇಶನವನ್ನು ಇಲ್ಲಿ ಕರೆಯುವುದು ಸೂಕ್ತವಾಗಿದೆ. ಪಾರ್ಲಿಮೆಂಟ್ ಅಧಿವೇಶನ ಇಲ್ಲಿ ಕರೆಯುವಾಗ ಈ ಸರ್ಕಾರದವರು ಅವರಿಗೆ ಸಹಾಯ, ಸಹಾನುಭೂತಿ ಕೊಡಬೇಕು. ಆದರೆ ಒಂದು ಮಾತು. ಇದಕ್ಕೆ ಅಗತಕ್ಕ ಖರ್ಚಿನ ಬಗ್ಗೆ ನಾವು ವಿಚಾರಮಾಡಬೇಕಾಗಿದೆ. ಅದಕ್ಕೊಂದು ಬಡ್ಜೆಟ್ ಇಡಬೇಕಾಗುತ್ತದೆ. ಅದರ ಬಗ್ಗೆ ಒಂದು ಒಪ್ಪಂದ ಆಗಬೇಕಾಗುತ್ತದೆ. ಬಡಬೋರೇಗೌಡ ಕಷ್ಟಪಟ್ಟು ಸಂಪಾದಿಸಿದಂಥ ಹಾಗೂ ರೈತರ ಮೂಲಕ ಬಂದಂಥ ತೆರಿಗೆಯನ್ನು ಇದಕ್ಕಾಗಿ ಖರ್ಚುಮಾಡುವುದು ಸರಿಯಲ್ಲ. ಇದನ್ನು ಇಲ್ಲಿ ನಡೆಸುವುದಕ್ಕೆ ಕೇಂದ್ರಸರ್ಕಾರದವರನ್ನು ಹೆಚ್ಚಿಗೆ ಒತ್ತಾಯ ಪಡಿಸಿ ಕೇಂದ್ರಸರ್ಕಾರದ ಹಣದಲ್ಲಿ ಒಂದು ದೊಡ್ಡ ಕಟ್ಟಡವನ್ನು ಕಟ್ಟಿಸಬಹುದು. ಅದನ್ನು ಮಾಡಿಸಿ. ಕೇಂದ್ರಸರ್ಕಾರಕ್ಕೇನೂ ಬಡತನವಿಲ್ಲ. ಅವರ ಹಣದಿಂದಲೇ ನಮ್ಮ ದೇಶದಲ್ಲಿ ಕೆಲವು ಕಟ್ಟಡಗಳು ತಯಾರಾಗುತ್ತವೆ. ದೊಡ್ಡ ದೊಡ್ಡ ಹೋಟಲುಗಳು, ಕಟ್ಟಡಗಳು ಹೆಚ್ಚಿಗೆ ಬರುತ್ತವೆ. ಕೇಂದ್ರ ಸರ್ಕಾರದವರಿಂದ ಅದಕ್ಕೆ ಖರ್ಚು ಹಾಕಿಸಬಹುದು. ಈ ರೀತಿ ಅವರಿಂದ ಸಾಕಷ್ಟು ಹಣ ತರಿಸಿ, ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕು. ಆದರೆ ನಮ್ಮ ದೇಶದ ದುಡ್ಡು ಖರ್ಚಾಗಬಾರದು.

Sri D. DEVARAJ URS.—I wish to know whether there will be a regular discussion on this topic, so that we may also participate.

Mr. SPEAKER.—No. Just as I allowed hon. member for a minute, I am allowing others also only a minute. There will be no debate.

Sri D. DEVARAJ URS.—If there is a motion, there can be a debate.

Mr. SPEAKER.—There is no motion. Just as the member expressed himself for a minute, the others also should do likewise within a minute. Please remember that there is not going to be a discussion. Mr. Arakeri may please be brief.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಪಾರ್ಲಿಮೆಂಟ್ ಅಧಿವೇಶನ ಇಲ್ಲಿ ಆಗುವುದು ಉತ್ತಮವೆಂದು ಹೇಳಿದರು. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಈ ಪ್ರಶ್ನೆ ಸುಮಾರು 8 ವರ್ಷಗಳಿಂದಲೂ ಇದೆ. ಮುಖ್ಯವಾಗಿ ದಕ್ಷಿಣದಲ್ಲಿ ಪಾರ್ಲಿಮೆಂಟ್ ಸಂಸತ್ ನಡೆಯುವುದರಿಂದ ದಕ್ಷಿಣಕ್ಕೆ ಪ್ರಯೋಜನವಾಗುತ್ತದೆ. 1952ರಲ್ಲಿ ಮಾನ್ಯ ಶ್ರೀ ಅಂಬೇಡ್ಕರ್ ಅವರೇ ಹೇಳಿದ್ದಾರೆ. ದಕ್ಷಿಣದಲ್ಲಿ ಬೆಂಗಳೂರು ಬಹು ಮುಖ್ಯಸ್ಥಳ ಉತ್ತಮ ಹವಾ ಇದೆ. ಬೇಕಾದಷ್ಟು ಇವತ್ತು ಉತ್ತರದವರ ಪ್ರಭಾವ ಇದೆ. ಆದ್ದರಿಂದ ದಕ್ಷಿಣದವರಿಗೆ ಅವರ ಪ್ರಭಾವ ಬೀರುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕೆ ಅವಕಾಶವುಂಟಾಗುತ್ತದೆ ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಯಾದರೂ ಇಲ್ಲಿ 2–3 ಸಾವಿರ ಎಕರೆ ಪ್ರದೇಶವನ್ನು ಪಾರ್ಲಿಮೆಂಟ್ ಭವನವನ್ನು ಕಟ್ಟುವುದಕ್ಕೆ ಉಚಿತವಾಗಿ ಕೊಡಲಿ. ಅದರೆ ಪಾರ್ಲಿಮೆಂಟ್ ಸಂಸತ್ ಅಧಿವೇಶನ ಇಲ್ಲಿ ನಡೆಯಬೇಕೆಂದು ಹೇಳುವವರಲ್ಲಿ ನಾನು ಒಬ್ಬ. ಇದು ಇಲ್ಲಿ ನಡೆಯಬೇಕು.

Sri V. N. PATIL (Humnabad).—I wish to speak.......

Mr. SPEAKER.—Mr. V. N. Patil, must excuse me. Sri H. M. Channabasappa, being the member who originally moved the matter, will have one minute and Sri Aziz Sait, another minute to speak.

ಶ್ರೀ ಅಜೀಜ್ ಸೇಟ್.—ಪಾರ್ಲಿಮೆಂಟ್ ಅಧಿವೇಶನ ಬೆಂಗಳೂರಿನಲ್ಲಿ ಆಗಬೇಕೆಂದು ಹೇಳುವುದು ನನಗೆ ಅಷ್ಟು ಸೂಕ್ತವಾಗಿ ಕಂಡುಬರುತ್ತಾ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಕೆಲವು ಸದಸ್ಯರುಗಳನ್ನು ಕರೆಸಿಕೊಂಡು, ಅದರ ಮೇಲೆ ಚರ್ಚೆಮಾಡಿ ಯಾವುದಾದರೂ ಒಂದು ತೀರ್ಮಾನಕ್ಕೆ ಬರಬೇಕು. ವಿರೋಧಪಕ್ಷದವರಲ್ಲಿ ಇದರ ಬಗ್ಗೆ 4–5 ಅಭಿಪ್ರಾಯಗಳು ಈಗಾಗಲೇ ಬಂದಿವೆ. ಕೆಲವರು ಅದು ಆಗಬೇಕೆಂತಲೂ, ಇನ್ನು ಕೆಲವರು ಅದು ಬೇಡವೆಂತಲೂ ಹೇಳುತ್ತಿದ್ದಾರೆ. ಇದರಿಂದ ನನಗೆ ಬಹಳ ದುಃಖ ಪರಿಸ್ಥಿತಿ ಬಂದಿದೆ. ಸೌತ್‌ನಲ್ಲಿ ಬೆಂಗಳೂರಿನಲ್ಲಿ ಅದು ನಡೆಯುವುದರಿಂದ ಎಮೋಷನಲ್ ಇಂಟಿಗ್ರೇಷನ್ ಎಂದು ಏನು ಹೇಳುತ್ತಾರೆಯೋ ಅದು ಸರಿಯೆಂದು ಕಂಡು ಬರುತ್ತದೆ. ಆದರೆ ಅಧಿವೇಶನವನ್ನು ಹೇಗೆ ಮಾಡಬೇಕು, ಯಾವರೀತಿ ಅದಕ್ಕೆ ಖರ್ಚುಮಾಡಬೇಕು ಎಂಬುದರ ಬಗ್ಗೆ ಜಾಸ್ತಿ ಇಲ್ಲಿ ಚರ್ಚೆಮಾಡುವುದಕ್ಕೆ ಅವಕಾಶ ಕೊಡುವುದು ಸೂಕ್ತವಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಕೆಲವು ಸದಸ್ಯರನ್ನು ಕರೆಸಿ ಈ ವಿಷಯದ ಬಗ್ಗೆ ಚರ್ಚೆಮಾಡಿದರೆ ನಮ್ಮ ಸರ್ಕಾರಕ್ಕೂ ಮತ್ತು ಕೇಂದ್ರಸರ್ಕಾರಕ್ಕೂ ಗೌರವವುಂಟಾಗುತ್ತದೆ. ಇದರ ಬಗ್ಗೆ ಬಹಳವಾಗಿ ಯೋಚನೆಮಾಡಬೇಕು. ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಸ್ವಲ್ಪ ಹಣವನ್ನು ತೆಗೆದುಕೊಳ್ಳಬೇಕು. ಆದ್ದರಿಂದ ಚರ್ಚೆ ವಿಷಯ ಹೇಗೇ ಇರಲಿ, ಇದರ ಬಗ್ಗೆ ಯಾರ ಅಭಿಪ್ರಾಯವನ್ನೂ ತೆಗೆದುಕೊಳ್ಳಬಾರದು. ಈ ವಿಷಯವನ್ನು ಪೂರ್ತಿಯಾಗಿ ಮಾನ್ಯ ಮುಖ್ಯಮಂತ್ರಿಗಳಿಗೇ ಬಿಡಿ.

ಶ್ರೀ ಎಂ. ಎಸ್. ಕೃಷ್ಣನ್.—ಈ ಪ್ರಶ್ನೆಯ ಬಗ್ಗೆ ನಾನು ಮೊದಲೇ ಕ್ಲಾರಿಫಿಕೇಷನ್ ಕೇಳಿದೆ. ತಾವು ಒಬ್ಬೊಬ್ಬರಿಗೂ ಅವಕಾಶವನ್ನು ಕೊಡುತ್ತಿದ್ದೀರಿ. ಇಲ್ಲಿಯವರೆಗೂ ಎಲ್ಲರೂ ಹೇಳಿರುವುದನ್ನು ಕೇಳಿ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಅರಿಕೆಮಾಡಿಕೊಳ್ಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಮಾನ್ಯ ಶ್ರೀ ಶಿವಪ್ಪನವರನ್ನೂ ಮತ್ತು ಇತರರನ್ನೂ ಕರೆದು ಈ ವಿಚಾರವಾಗಿ ಮಾತನಾಡಿದಮೇಲೆ ಅವರೆಲ್ಲರೂ ಒಪ್ಪಿಕೊಂಡಿದ್ದಾರೆ ಎಂದು ಅದನ್ನು ಕೇಳಿ ನನಗೆ ಸಂತೋಷವಾಗಿದೆ. ಆದರೂ ವಿರೋಧಪಕ್ಷದ ಇನ್ನೂ ಹಲವಾರು ಪ್ರತಿನಿಧಿಗಳು ಇದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಇನ್ನೂ ಇತರ ವಿರೋಧಪಕ್ಷಗಳ ಪ್ರತಿನಿಧಿಗಳನ್ನು ಕರೆಸಿ, ಮತ್ತೊಂದುಸಾರಿ ಚರ್ಚೆಮಾಡಿ, ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ. ಆದ್ದರಿಂದ ಇವತ್ತೇ ಇದರ ಬಗ್ಗೆ ತೀರ್ಮಾನಮಾಡುವುದು ಸರಿಯಲ್ಲ.

Sri H. M. CHANNABASAPPA.—Mr. Speaker, Sir, I think it is premature and it is also unnecessary to go into the question of cost because it is the duty and function of the Central Government to meet the cost and expenditure of holding a session of the Parliament. If they prefer to hold a session of Parliament in the South for the purpose of creating a good climate in country and achieving emotional integration and various other good aspects of holding this session, it is needless to think that they will come and ask us to bear the cost of the expenditure.

(SRI H. M. CHANNABASAPPA)

For instance, Sir, it is within your knowledge and the knowledge of the Members of the House that Parliament is even held in Simla and the Government of India is meeting the cost and at no time has it asked the Government of Himachal Pradesh to meet the cost.

SRI H. SIDDAVEERAPPA.—After independence, nowhere the Session of the Parliament is held.

SRI H. M. CHANNABASAPPA.—It is premature to go into the question of cost of holding the Session of the Parliament. Another point raised by Sri Channaiah is that the cost of eggs will again go high.

3-00 P.M.

†ಶ್ರೀ ಎಸ್. ಶಿವಪ್ಪ.—ಈ ವಿಚಾರದಲ್ಲಿ ಕೇಂದ್ರದಲ್ಲಿ ಒಂದು ಕಮಿಟಿ ಮಾಡಿದ್ದಾರೆ. ಪಾರ್ಲಿಮೆಂಟ್ ಸೆಶನ್ಸ್ ದಕ್ಷಿಣದಲ್ಲೇ ಆಗಬೇಕು, ಬೆಂಗಳೂರಿನಲ್ಲಿ ಆಗಬೇಕೆಂಬುದು ಪಾರ್ಲಿಮೆಂಟ್ ನಲ್ಲಿರತಕ್ಕ ವಿರೋಧ ಪಕ್ಷದ ಸದಸ್ಯರಿಂದ ಪ್ರಾರಂಭವಾದುದು. ಅನೇಕ ವಿರೋಧ ಪಕ್ಷದ ಸದಸ್ಯರು ರಾಷ್ಟ್ರೀಯ ಒಕ್ಕೂಟತನ ಆಗಬೇಕಾದರೆ, ಒಂದು ಪಾರ್ಲಿಮೆಂಟ್ ಸೆಶನ್ ದಕ್ಷಿಣದಲ್ಲಿ ಮಾಡಬೇಕು, ಅದರಲ್ಲೂ ಬೆಂಗಳೂರಿನ ಹವ ಎಲ್ಲಾ ಚೆನ್ನಾಗಿರುವುದರಿಂದ ಒಳ್ಳೆಯದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಅಭಿಪ್ರಾಯ ಕೆಲವರಲ್ಲಿ ಇದೆ. ಹೊರಗಡೆ ಅಧಿವೇಶನ ನಡೆದರೆ ಖರ್ಚು ಹೆಚ್ಚಾಗುತ್ತದೆಂದೂ ಕೂಡ ಅಲ್ಲಿ ಚರ್ಚೆಯಾಗುತ್ತಿದೆ. ಇವತ್ತಿನ ದಿವಸ ಈ ಪಾರ್ಲಿಮೆಂಟ್ ಹೊರಗಡೆ ಆದರೆ, ಆ ನಗರಕ್ಕೆ ಒಂದು ಪ್ರಾಮುಖ್ಯತೆ ಬರುತ್ತದೆ. ಇದರಿಂದ ಅಲ್ಲಿ ಒಂದು ರೀತಿಯ ಬಾಧಕ ಕೂಡ ಇದೆ, ಅದೇ ರೀತಿಯಾಗಿ ಸಾಧಕವೂ ಇದೆ. ಸ್ವಲ್ಪ ಅನುಕೂಲವೂ ಇದೆ, ಸ್ವಲ್ಪ ಅನಾನುಕೂಲವೂ ಇದೆ. ಬೆಂಗಳೂರಿನಲ್ಲಿ ಒಂದು ಪಕ್ಷ ಆದರೆ, ಇಲ್ಲಿಗೆ ಒಂದು ರೀತಿಯ ಪ್ರಾಶಸ್ತ್ಯ ಕೂಡ ಬರುತ್ತದೆ, ಮತ್ತು ಒಂದು ಅಂತರರಾಷ್ಟ್ರೀಯ ಸ್ಟೇಟಸ್ ಕೂಡ ಬರುತ್ತದೆ. ಅದರಿಂದ ರೈಲ್ವೆ, ವಿಮಾನ, ಸಾರಿಗೆ ಸೌಕರ್ಯ, ಮತ್ತು ಕುಡಿಯುವ ನೀರಿನ ಸೌಕರ್ಯ ಎಲ್ಲಾ ಅವರೇ ಮಾಡುತ್ತಾರೆ. ಇದರಲ್ಲಿ ಏಕಾಭಿಪ್ರಾಯವಿಲ್ಲ. ಏನೇ ಆಗಲಿ, ಜನರಲ್ಲಿರತಕ್ಕ ಅಭಿಪ್ರಾಯವನ್ನು ಕ್ರೋಢೀಕರಿಸತಕ್ಕದ್ದು ನಮ್ಮ ಜವಾಬ್ದಾರಿ. ಕೆಲವರು ಬೇಡ ಎಂದು ಹೇಳುತ್ತಾರೆ, ಕೆಲವರು ಬೇಕು ಎಂದು ಹೇಳುತ್ತಾರೆ. ಆದರೆ, ಆಧುನಿಕ ಯುಗದ ಯುವಕರು ನಮಗೆ ಬೇಕು ಎಂದು ಹೇಳುತ್ತಾರೆ. ಇಡೀ ಸರ್ಕಾರ ಬೆಂಗಳೂರಿಗೆ ಬಂದರೆ ಎಷ್ಟೋ ರೂಪಾಯಿ ಖರ್ಚಾಗುತ್ತದೆ. ಆದರೆ ಸುಮಾರು 20 ಕೋಟಿ ರೂಪಾಯಿಯ ಅರಮನೆ ಇದೆ. ಅಲ್ಲಿ ಏನಾದರೂ ವ್ಯವಸ್ಥೆ ಮಾಡಬಹುದು. ಆದರೆ ಕಟ್ಟಡ ಕಟ್ಟಿದರೆ, ಸುಪ್ರೀಂ ಕೋರ್ಟು ಕೂಡ ಒಂದು ಅಧಿವೇಶನವನ್ನು ಇಲ್ಲಿ ನಡೆಸಬಹುದು. ನೀವು ಮಾಡುವುದಾದರೆ ಆದರಲ್ಲಿ ಬುದ್ಧಿವಂತಿಕೆ ಇದೆ. ಒಪ್ಪುತ್ತೇನೆ. ಅಲ್ಲಿಯೂ ಪಾರ್ಲಿಮೆಂಟ್ ಹೊರಗಡೆ ಹೋಗಬಾರದು ಎಂದು ವಿರೋಧ ಬರುತ್ತಾ ಇದೆ. ಇದು ಅಲ್ಲಿನ ವಿರೋಧ ಪಕ್ಷದವರಿಂದ ಪ್ರಾರಂಭವಾಗಿ ಈ ಮಟ್ಟಕ್ಕೆ ಬಂದಿದೆ. ಹೀಗೆ ಒಂದೇ ಸಾರಿ ಅದು ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ.

MR. SPEAKER.—Now it appears the Hon'ble Members are showing interest in this proposition. I think the purpose would be better served if a formal motion is moved in the House. It is better that this controversy is closed now.

SRI D. DEVARAJ URS.—I wanted to know from the Chief Minister whether it is his personal view or the Government's view.

MR. SPEAKER.—That can be known in other ways.

ಶ್ರೀ ಡಿ. ದೇವರಾಜ್ ಅರಸ್.—ಶ್ರೀ ಚನ್ನಬಸಪ್ಪನವರು ಏನು ವಿಚಾರ ತಂದಿದ್ದಾರೆ, ಅದರ ಮೇಲೆ ಎಲ್ಲರೂ ಅವರವರ ಅಭಿಪ್ರಾಯಗಳನ್ನು ಹೇಳಿಬಿಟ್ಟಿದ್ದಾರೆ. ಮುಖ್ಯಮಂತ್ರಿಯವರು ಕೆಲವು ಮಾತುಗಳನ್ನು ಆಡಿದ್ದಾರೆ. ಅದರ ಮೇಲೆ ಸರ್ಕಾರದ ಅಭಿಪ್ರಾಯ ಇಲ್ಲ ಎಂದರೆ, ಸದ್ಯಕ್ಕೆ

ಆ ವಿಚಾರ ಇಲ್ಲವೆಂದು ಆಗುತ್ತದೆ. ಸರ್ಕಾರದ ಅಭಿಪ್ರಾಯ ಹೇಳಿದರೆ ಆಮೇಲೆ ಏನು ನಾವು ಮಾಡಬೇಕೆಂದು ಬರುತ್ತದೆ.

Sri H. M. CHANNABASAPPA.—When I have asked the Chief Minister to give the Government view, he has given the Government's view. It is surprising to ask whether it is Government's view or his personal view.

Sri VEERENDRA PATIL.—I want to know what is that personal view and Government view ? I could not follow what the Hon'ble Member is asking.

Mr. SPEAKER.—His question is whether your idea of welcoming the holding of the session here is the view of the Government of Mysore.

Sri VEERENDRA PATIL.—If that is the question, I must say that if the Government of India and the Parliament take a decision to hold the session in this city. I welcome it and that is the decision of the Government.

(MR. DEPUTY SPEAKER in the Chair)

Mr. DEPUTY SPEAKER.—Now laying of Papers.

Papers laid on the Table

Sri H. V. KOUJALGI (Minister for Revenue) I lay :

(i) Notification No. RDF 51 TRM 65, dated 1st February 1968. Suspension of Land Revenue for the Revenue years 65–66, 66–67 and 67–68 in certain villages of Athani Taluk, Belgaum District, Haveri Taluk, Dharwar District, Muddebihal and Sindagi Taluks of Bijapur District and Chickmagalur Taluk of Chickmagalur District ;

(ii) Notification No. RDF 31 TRM 65–I–II–III–and IV dated 18th September 1968 ;

Suspension of Land Revenue in certain villages of Muddebihal Taluk of Bijapur District ;

(iii) Notification No. A2 RAT PR 75 C 1283/67–68, dated 4th April 1968 ;

Suspension of Land Revenue for the Revenue year 1967–68 in certain villages of Mandya and Maddur Taluks of Mandya District ;

(iv) Notification No. A2 RAT PR 139 C 8/67–68, dated 20th April 1968 ;

Suspension of Land Revenue for the Revenue year 1967–68 in certain villages of Malavalli Taluk, Mandya District ;

(SRI H. V. KOUJALGI)

(v) Notification No. A2 RAT PR 19-C934/68-69, dated 21st May 1968;
Suspension of Land Revenue for the Revenue year 67-68 in certain villages of Pandavapura Taluk, Mandya District;

(vi) Notification No. RDN 6 TRM 67-II, dated 9th December 1968;
Suspension of Land Revenue in certain villages of Indi Taluk, Bijapur District.

(vii) Notification No. RDF 23 TRM 65-III-V, dated 18th September 1968;
Suspension of Land Revenue in certain villages of Sindgi Taluk, Bijapur District;
Under Section 194 (2) of the Mysore Land Revenue Act, 1964.

MR. DEPUTY SPEAKER.—The Notifications are laid.

SRI B. M. PATIL (Minister of State for Municipal Administration).—I beg to lay:

Notification No. HMA I MLR 69, dated 7th January 1969 regarding amendment of Section 25 of the Act; Under Section 32 of the Mysore Cattle Trespass Act 1966.

MR. DEPUTY SPEAKER.—The Notification is laid.

Committee on Private Members' Bills and Resolutions—Seventh Report

MR. DEPUTY SPEAKER.—I present the Seventh Report of the Committee on Private Members' Bills and Resolutions.

SRI V. N. PATIL (Humnabad).—I move:

"That this Assembly agrees with the Seventh Report of the Committee on Private Members' Bills and Resolutions".

MR. DEPUTY SPEAKER.—The question is:

"That this Assembly agrees with the Seventh Report of the Committee on Private Members' Bills and Resolution".

The motion was adopted.

The report is adopted.

Motion of Thanks to the Governor's Address

(Debate continued).—

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಸ್ವಾಮಿ ಉಪಸಭಾಧ್ಯಕ್ಷರೆ, ರಾಜ್ಯಪಾಲರು ನೀಡಿರತಕ್ಕ ಭಾಷಣದ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಈ ಸಮಯದಲ್ಲಿ ಅಡಲು ನಾನು ಇಚ್ಛಿಸುತ್ತೇನೆ. ಈ ಭಾಷಣ ಹೇಗಿದೆ ಎಂದರೆ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ ಬಿಟ್ಟರೆ ಇದರಲ್ಲಿ ಇನ್ನೇನು ಇಲ್ಲ. ಇದರಲ್ಲಿ ಸರ್ಕಾರದ ನೀತಿ ಏನು, ಈ ವರ್ಷ ಮುಂದೆ ಯಾವ ವಿಷಯದಲ್ಲಿ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ ಎನ್ನತಕ್ಕ ವಿಚಾರದಲ್ಲಿ ಹೇಳಿಲ್ಲ. ಇದು ಸುಮಾರು 44 ಪುಟ ಇದೆ. ಇದು ಒಂದು ದೊಡ್ಡ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್ ಎಂದು ಹೇಳಿದರೆ ಏನೂ ಅತಿಶಯೋಕ್ತಿಯಾಗಲಾರದು. ಒಂದು ಅಂಶದ ಮಟ್ಟಿಗೆ ಮಾತ್ರ ರಾಜ್ಯಪಾಲರು ಬಹಳ ಮೆಚ್ಚುಗೆಯನ್ನು ಎತ್ತಿ ತೋರಿಸಿದ್ದಾರೆ. ಅದು ಯಾವುದು ಎಂದರೆ ಅದನ್ನು ಈ ರೀತಿ ಹೇಳಿದ್ದಾರೆ. ಕೆಲವು ಮಹತ್ವ ಪೂರ್ಣ ಘಟನೆಗಳ ವಿವರಣೆಯನ್ನು ಮಾನ್ಯ ಸದಸ್ಯರ ಮುಂದೆ ಇಡುವುದು, ಮಂಡಿಸುವುದು ಸೂಕ್ತವಾಗಿದೆ ತಾವೇ ತಿಳಿದಿರುವಂತೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ನಡೆದ ಚುನಾವಣೆಯೇ ಅತ್ಯಂತ ಮಹತ್ವಪೂರ್ಣ ಘಟನೆಯಾಗಿತ್ತು " ಎಂದು ಹೇಳಿದ್ದಾರೆ. ರಾಜ್ಯ ಪಾಲರ ಅಭಿಪ್ರಾಯದಲ್ಲಿ 1968 ನೇ ಇಸವಿಯಲ್ಲಿ ಅತ್ಯಂತ ಮಹತ್ವ ಪೂರ್ಣವಾದ ಘಟನೆ ನಡೆದದ್ದು ಯಾವುದು ಎಂದರೆ ತಾಲ್ಲೂಕು ಬೋರ್ಡುಗಳ ಚುನಾವಣೆ ಎನ್ನತಕ್ಕಂಥಾದ್ದು ಅದನ್ನು ಅವರು ಎತ್ತಿ ಹಿಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—9 ವರ್ಷಗಳಾದ ಮೇಲೆ ಈ ಚುನಾವಣೆ ನಡೆದಿದೆ. ಅದಕ್ಕೋಸ್ಕರ ರಾಜ್ಯಪಾಲರ ಭಾಷಣದಲ್ಲಿ ಅದಕ್ಕೆ ಮಹತ್ವ ಕೊಟ್ಟಿದೆ.

ಶ್ರೀ ಎಚ್. ಸಿದ್ದವೀರಪ್ಪ.—9 ವರ್ಷಗಳ ಮೇಲೆ ಈ ತಾಲ್ಲೂಕು ಬೋರ್ಡುಗಳ ಚುನಾವಣೆ ನಡೆದಿರುವುದನ್ನು ನೋಡಿದರೆ ಇದು ಅತ್ಯಂತ ಶೋಚನೀಯವಾದ ವಿಚಾರ ಮತ್ತು ಘಟನೆ. ಈ ತಾಲ್ಲೂಕು ಬೋರ್ಡುಗಳ ಚುನಾವಣೆಯಲ್ಲಿ ಏನು ನಡೆದಿದೆ ಅದು ತಪ್ಪು ಎಂದು ಹೇಳಿದರೆ ಮೈಸೂರು ರಾಜ್ಯದಲ್ಲಿರತಕ್ಕ ಜನತೆ ಈ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತಾರೆ ಎನ್ನತಕ್ಕದರಲ್ಲಿ ನನಗೆ ಯಾವ ಸಂಶಯವೂ ಇಲ್ಲ ಎನಿಸುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ನಾನು ತಾಲ್ಲೂಕು ಬೋರ್ಡುಗಳ ಚುನಾವಣೆಯಲ್ಲಿ ಯಾವ ಭಾಗವನ್ನು ವಹಿಸಲಿಲ್ಲ ಎಂದು. ನಿಜ ಅವರು ಭಾಗ ವಹಿಸಿಲ್ಲ ಆದರೆ ಅವರ ಮಾನ್ಯ ಸ್ನೇಹಿತರು, ಮಂತ್ರಿಗಳು, ಉಪಮಂತ್ರಿಗಳು ಮತ್ತು ಸ್ಟೇಟ್ ಮಂತ್ರಿಗಳು ಇವರೆಲ್ಲರಿಗೂ ಒಂದು ತಿಂಗಳು ದಿವಸ ಚುನಾವಣೆಯ ಕೆಲಸವನ್ನು ಬಿಟ್ಟರೆ ಬೇರೆ ಏನೇನು ಕೆಲಸವನ್ನೂ ಮಾಡಿಲ್ಲ ಎಂದು ನನಗೆ ಅನಿಸುತ್ತದೆ. ಈ ಚುನಾವಣೆಯಲ್ಲಿ ಇವರು ಎಷ್ಟು ಅನ್ಯಾಯವನ್ನು ಮಾಡಿದ್ದಾರೆ ಎಂದರೆ ಪ್ರಜಾಪ್ರಭುತ್ವದ ಮೂಲಕ್ಕೆ ಕೊಡಲಿಯನ್ನು ಹಾಕಿ ಪ್ರಜಾಪ್ರಭುತ್ವ ಮೈಸೂರು ರಾಜ್ಯದಲ್ಲಿ ಇಲ್ಲದ ಹಾಗೆ ಅದನ್ನು ನಿರ್ಮೂಲ ಮಾಡಿದ್ದಾರೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಕಾರಣ ಇಷ್ಟೆ ನನಗೆ ಅತ್ಯಂತ ವ್ಯಸನವಾಗುತ್ತದೆ. ಒಂದು ಕಡೆ ವಿನೋಬಾಜಿಯವರು ಜಯಪ್ರಕಾಶ್ ನಾರಾಯಣ್ ಅವರು ಏನು ಹೇಳುತ್ತಾರೆ, ಈ ದೇಶಕ್ಕೆ ಹೊಸದಾಗಿ ರಾಷ್ಟ್ರೀಯ ಯೋಜನೆ ಮಾಡತಕ್ಕ ವ್ಯಕ್ತಿಗಳು ಏನು ಹೇಳುತ್ತಾರೆ, ತಾಲ್ಲೂಕು ಬೋರ್ಡಿನಲ್ಲಿ, ಶಾಸನ ಸಭೆಯಲ್ಲಿ ಮತ್ತು ಪಾರ್ಲಿಮೆಂಟಿನಲ್ಲಿಯೂ ಸಹ ಪಾರ್ಟಿಲೆಸ್ ಸರ್ಕಾರ ಬರಬೇಕು, ಪಕ್ಷಾತೀತವಾದ ಸರ್ಕಾರ ಬರಬೇಕು ಎಂದು. ಆದರೆ ಈಗ ನಮ್ಮ ರಾಜ್ಯದಲ್ಲಿ ಈ ಚುನಾವಣೆ ನಡೆದಿರುವುದದನ್ನು ನೋಡಿದರೆ ಇದು ದೇಶದ ದುರ್ದೈವ ಅನಿಸುತ್ತದೆ. ಪಕ್ಷಾತೀತವಾದ ರಾಜ್ಯ ಸರ್ಕಾರಗಳು ಬರಬೇಕು ಎಂದು ಅವರು ಹೇಳಬೇಕಾಗಿದ್ದರೆ ಇಲ್ಲಿ ಇವರು ತಾಲ್ಲೂಕು ಬೋರ್ಡುಗಳಿಗೆ ಚುನಾವಣೆಗೆ ಕಾಂಗ್ರೆಸ್ ಪಾರ್ಟಿಯಿಂದ ಉಮೇದುವಾರರನ್ನು ನಿಲ್ಲಿಸಿ ಚುನಾವಣೆಯಲ್ಲಿ ಆರಿಸಿ ಬಂದಿದ್ದಾರೆ ಒಂದು ದೇಶದಲ್ಲೆಲ್ಲಾ ಎಲ್ಲಾ ತಾಲ್ಲೂಕುಗಳಲ್ಲಿಯೂ ಬಹುಭಾಗ ಅಭಾವ ಕ್ಕೊಳಗಾಗಿದೆ. ಅನಾವೃಷ್ಟಿ ಉಂಟಾಗಿದೆ. ಕೇಂದ್ರ ಸರ್ಕಾರದಿಂದ ಹಣವನ್ನು ಪಡೆದು ಅಭಾವ ಪರಿಹಾರ ಕಾರ್ಯಗಳನ್ನು ಮಾಡತಕ್ಕ ಕಾಲ. ಯಾವುದೋ ಮನೆಗೆ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ, ಅದರಲ್ಲಿ ನಾವು ಕೈ ಕಾಯಿಸಿಕೊಳ್ಳೋಣ ಎಂದು ಇವರು ಹೋಗಿದ್ದಾರೆ. ಜನಗಳಿಗೆ ಒಂದು ರೊಟ್ಟಿ ಕೊಟ್ಟರೆ ವೋಟು ಕೊಡತಕ್ಕಂಥ ಪರಿಸ್ಥಿತಿ ಇದೆ. ಇದಕ್ಕೆ ಏನು ಯೋಚನೆ ಮಾಡಬೇಕೋ ಅದನ್ನು ಮಾಡಿ ಕಾಂಗ್ರೆಸ್ ಪಕ್ಷದಿಂದ ಚುನಾವಣೆಗೆ ಉಮೇದುವಾರರನ್ನು ಹಾಕಿ ಚುನಾವಣೆಗಳನ್ನು ನಡೆಸಿದರು. ತಾವು ಕೆಂಪು ಬಿಲ್ಡಿಂಗ್‌ನಲ್ಲಿ ನೋಡಬೇಕು ಎಂದರೆ ಹೈಕೋರ್ಟಿನಲ್ಲಿ ನೋಡಬೇಕು ಈ ಬಗ್ಗೆ ಎಷ್ಟೊಂದು ರಿಟ್‌ಪಿಟಿಷನ್‌ಗಳು ಹೋಗಿವೆ ಎಂಬುದನ್ನು. ಇವರು ಚುನಾವಣೆಯನ್ನು ಮಾಡಿರತಕ್ಕ ರೀತಿ ಹೇಗಿದೆ ಎಂದರೆ ಕೌಂಟರ್‌ಫೈಲ್ ನೀಡಲಿಲ್ಲ. ಓಟು ನೀಡಿದ ಬಗ್ಗೆ ಮಸಿಯ ಗುರುತು ಮಾಡಲಿಲ್ಲ. ಇದರ ಮೇಲೆ ಕೆಲವು ಮಂತ್ರಿಗಳು ಪ್ರಚಾರ ಮಾಡಿದರು. ಅವರು ಮಾಡಿರುವುದನ್ನೆಲ್ಲಾ ಹೇಳಿದರೆ, ಅವರು ತಲೆ ತಗ್ಗಿಸಬೇಕು. ಇಂಥವರು ಜಾತಿ ವಾದವನ್ನು ಎತ್ತಿ

(ಶ್ರೀ ಎಚ್. ಸಿದ್ಧವೀರಪ್ಪ)

ಹಿಡಿದಿದ್ದಾರೆ. ಇವೊತ್ತಿನ ದಿವಸ ನಾನು ಹೇಳುತ್ತೇನೆ, 1972ನೇ ಇಸವಿಯಲ್ಲಿ ಮಹಾಚುನಾವಣೆ ನಡೆಯಬೇಕಾದರೆ ಇವರ ಚೆಂಡುಗಳೆಲ್ಲಾ ರುಂಡಾರುಂಡವಾಗುವಂಥ ಜಾತಿ ದ್ವೇಶವನ್ನು ತಂದೊಡ್ಡಿದ್ದಾರೆ. ನಾನು ನಮ್ಮ ಜಿಲ್ಲೆಯ ವಿಚಾರವನ್ನು ಹೇಳುತ್ತೇನೆ. ಮಾನ್ಯ ಉಪ ಮಂತ್ರಿಗಳಾದ ಶ್ರೀ ಬಿ. ಎಲ್. ಗೌಡರು ಚುನಾವಣೆಯಲ್ಲಿ ಪ್ರಚಾರ ಮಾಡಿದರು. ಆದರೆ ಒಬ್ಬ ಉಪಮಂತ್ರಿಗಳು ಪ್ರಚಾರ ಮಾಡಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಇದು ಬಹಳ ದುರ್ದೈವ ಎಂದು ನಾನು ಹೇಳಬೇಕಾಗಿದೆ. ಶ್ರೀಮಾನ್ ಹೋ. ಸಿ. ಬೋರಯ್ಯನವರು ಚುನಾವಣೆಯ ಪ್ರಚಾರಕ್ಕೆ ಹೋಗಬೇಕಾದರೆ ರಿಜರ್ವ್ ಪೋಲೀಸ್ ವ್ಯಾನನ್ನು ಜೊತೆಗೆ ತೆಗೆದುಕೊಂಡು ಹೋಗಿದ್ದಾರೆ. ಈ ವಿಚಾರದಲ್ಲಿ ನಾನು ಪತ್ರಿಕೆಗೂ ಹೇಳಿಕೆ ಕೊಟ್ಟಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೂ ಒಂದು ಕಾಗದವನ್ನು ಬರೆದಿದ್ದೇನೆ. ಶ್ರೀ ಹೋ. ಸಿ. ಬೋರಯ್ಯನವರು ಜನಗಳಿಂದ ವೋಟನ್ನು ಕೇಳುವಾಗ 'ನಾನು ನಿಮ್ಮ ಕಾಲನ್ನು ಹಿಡಿದುಕೊಳ್ಳುತ್ತೇನೆ, ನೀವು ನನ್ನ ಜಾತಿಯವರು ನನ್ನ ಮರ್ಯಾದೆ ಉಳಿಯಬೇಕಾದರೆ ನೀವು ಕಾಂಗ್ರೆಸ್ಸಿಗೆ ವೋಟು ಕೊಡಬೇಕು ಇಲ್ಲದಿದ್ದರೆ ನನ್ನ ಮರ್ಯಾದೆ ಉಳಿಯುವುದಿಲ್ಲ ಇದನ್ನು ಬೇಕಾದರೆ ಅಲ್ಲಿಗೆ ಹೋಗಿ ಯಾರಾದರೂ ಪರೀಕ್ಷೆ ಮಾಡಿರಿ. ಹಿಂದೆ ಮೈಸೂರು ರಾಜ್ಯದಲ್ಲಿ ಸರ್ ಮಿರ್ಜಾ ಸಾಹೇಬರು ದಿವಾನರಾಗಿದ್ದಾಗ ಚಿತ್ರದುರ್ಗ ಜಿಲ್ಲೆಯಲ್ಲಿರತಕ್ಕ ಕೊಳಹಾಳ್ ಎಂಬ ಗ್ರಾಮದಲ್ಲಿ ಕಾಂಗ್ರೆಸ್ ಚಳುವಳಿ ಆಯಿತು. ಆಗ ಅದನ್ನು ವಿಚಾರಣೆ ಮಾಡಲು ಮಹಾತ್ಮ ಗಾಂಧೀಜಿಯವರು ಮಹದೇವ್ ದೇಸಾಯ್ ಅವರನ್ನು ಅಲ್ಲಿಗೆ ಕಳುಹಿಸಿದ್ದರು. ಆ ಊರಿನಲ್ಲಿ ಶ್ರೀಮಾನ್ ಹೋ. ಸಿ. ಬೋರಯ್ಯನವರು ಚುನಾವಣಾ ಪ್ರಚಾರ ಮಾಡಿದ್ದಾರೆ. ಅವರು ಅಲ್ಲಿ ಜನಗಳನ್ನು ವೋಟು ಕೇಳುವುದಕ್ಕೆ ಹೋದಾಗ ಅಣ್ಣಯ್ಯ, ಅಪ್ಪಯ್ಯ ಎಂದು ಅವರ ಕಾಲನ್ನು ಹಿಡಿದುಕೊಂಡರು. ಇವರಂತೆ ಬಾಕಿಯವರು. ನಾನು ಒಬ್ಬನೇ ಅಲ್ಲ ನನ್ನ ಲಿಂಗ ಕೂಡ ನಿನ್ನ ಕಾಲನ್ನು ಹಿಡಿದುಕೊಂಡಿದೆ, ಆದ್ದರಿಂದ ನನಗೆ ವೋಟು ಕೊಡಿ ಎಂದು ಕೇಳಿದರು. ಇವರು, ನಾನು ನೋಡಿಕೊಳ್ಳುತ್ತೇನೆ ವಿರೋಧಿಗಳನ್ನ ಮಟ್ಟ ಹಾಕುತ್ತೇನೆ ಎಂದು ಹೇಳಿದರು. ರಾಜ್ಯ ಸರ್ಕಾರ ನನ್ನ ಕೈಯ್ಯಲ್ಲಿ ಇದೆಯೆಂದು ಹೇಳಿದ್ದಾರೆ. ಶ್ರೀಮಾನ್ ಹೋ. ಸಿ. ಬೋರಯ್ಯನವರ ಶಕ್ತಿ, ಮಟ್ಟ ಹಾಕತಕ್ಕಂಥ ಶಕ್ತಿ ಏನು ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಅವರ ಚಿಕ್ಕಪ್ಪನವರು ನನ್ನ ಸ್ನೇಹಿತರು ಬಹಳ ಒಳ್ಳೆಯವರಾಗಿದ್ದರು. ಇವೊತ್ತು ಇವರು ಜಾತಿಯೆಂಬ ವಿಷ ಬೀಜವನ್ನು ಬಿತ್ತಿದ್ದಾರೆ. ಜಾತಿಯ ದ್ವೇಷವನ್ನು ತಂದಿಟ್ಟಿದ್ದಾರೆ. ಈ ಚುನಾವಣೆಗಳೆಲ್ಲಾ ಒಲೆ ಮೇಲಿರುವ ಮೂರು ಗುಂಡುಗಳ ಹಾಗೆ ಜಾತಿ, ದುಡ್ಡು ಮತ್ತು ಹೆಂಡ ಇವುಗಳ ಮೇಲೆ ನಿಂತಿದೆ. ಶ್ರೀಮಾನ್ ಪಂಚಗಾವಿಯವರು ಈ ವಿಚಾರದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಈ ತಾಲ್ಲೂಕು ಬೋರ್ಡುಗಳ ಚುನಾವಣೆಗೆ ಸಂಬಂಧಪಟ್ಟ ಹಾಗೆ ಬಹುಶಃ ಅನೇಕ ರಿಟ್ ಪಿಟಿಷನ್‌ಗಳು ಹೈಕೋರ್ಟಿನ ಮುಂದಿವೆ.

ಈ ಬಗ್ಗೆ ಅನೇಕ ರಿಟ್ ಅರ್ಜಿಗಳು ಹೈಕೋರ್ಟಿನ ಜಡ್ಜ್ ಒಬ್ಬರು ಈ ಅನ್ಯಾಯಗಳ ಬಗ್ಗೆ ಹೇಳಿದ್ದಾರೆ. ಚಿತ್ರದುರ್ಗದಲ್ಲಿರತಕ್ಕಂಥ ಜಿಲ್ಲಾಧಿಕಾರಿ, ಅಸಿಸ್ಟೆಂಟ್ ಕಮೀಷನರ್ ಮೊದಲುಗೊಂಡು ಎಲ್ಲಾ ಅಧಿಕಾರಿಗಳನ್ನು ಚುನಾವಣೆ ಕೆಲಸಕ್ಕಾಗಿ ಕಾಂಗ್ರೆಸ್ ಮುಖಂಡರು ಉಪಯೋಗಿಸಿಕೊಂಡಿದ್ದಾರೆ. ಅಲ್ಲಿಯ ಅಧಿಕಾರಿಗಳನ್ನು ಬಹಳಷ್ಟು ಮಟ್ಟಿಗೆ ದುರುಪಯೋಗ ಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿರುವ ಜಿಲ್ಲಾಧಿಕಾರಿಯವರು ಬಹಳ ದೊಡ್ಡ ಮನೆತನದವರು. ಇವರ ಮುತ್ತಜ್ಜನವರ ಹೆಸರು ಸರ್ ಪುಟ್ಟಣ್ಣಶೆಟ್ಟರು ಎಂಬುದಾಗಿ. ಇಂತಹ ಅಧಿಕಾರಿಯವರಿಂದ ಮಾಡಬಾರದ ಕೆಲಸಗಳನ್ನು ಮಾಡಿಸಿದ್ದಾರೆ. ಅತಿ ವಿನಯದಿಂದ ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುವುದು ಇಷ್ಟೆ, ನಾಲ್ಕನೆ ದರ್ಜೆಯ ಅಧಿಕಾರಿಗಳನ್ನು ಬಿಟ್ಟು ಇನ್ನಿತರ ಅಧಿಕಾರಿಗಳನ್ನೆಲ್ಲಾ ಈ ಕಾಂಗ್ರೆಸ್ ಮುಖಂಡರು ಚುನಾವಣೆ ಕೆಲಸಕ್ಕಾಗಿ ಉಪಯೋಗಿಸಿಕೊಂಡಿದ್ದಾರೆ. ಆದ್ದರಿಂದ ನಾಲ್ಕನೆ ದರ್ಜೆಯ ನೌಕರರನ್ನು ಬಿಟ್ಟು ಉಳಿದ ಎಲ್ಲಾ ಅಧಿಕಾರಿಗಳನ್ನು ಕೂಡಲೆ ಬೇರೆ ಕಡೆಗೆ ವರ್ಗ ಮಾಡಬೇಕು. ಖಂಡಿತವಾಗಿಯೂ ಇವರನ್ನು ಅಲ್ಲಿ ಇಡಬಾರದು. ಏಕೆಂದರೆ ಜನರು ರೊಚ್ಚಿಗೆದ್ದಿದ್ದಾರೆ. ಒಬ್ಬರು ಶಾಲಾ ಉಪಾಧ್ಯಾಯರು ಬಹಿರಂಗವಾಗಿ ಚುನಾವಣೆಯ ಬಗ್ಗೆ ಕ್ಯಾನ್‌ವಾಸ್ ಮಾಡಿದ್ದಾರೆ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳಾದ ಶ್ರೀ ಶಂಕರಗೌಡರಿಗೆ ಒಂದು ಕಾಗದ ಬರೆದಿದ್ದೆ. ಆದರೆ ಅವರು ಏನೂ ಕ್ರಮ ತೆಗೆದುಕೊಂಡಿಲ್ಲ. ಆ ಉಪಾಧ್ಯಾಯರು ಚೀಟಿಗಳನ್ನು ಬರೆದು ಕ್ಯಾನ್‌ವಾಸ್ ಮಾಡುತ್ತಿದ್ದರು. ಆ ಚೀಟಿಗಳನ್ನು ನಾನು ತಂದಿದ್ದೇನೆ. ತಮಗೆ ಕೊಡುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಈಗಲಾದರೂ ಎನ್‌ಕ್ವೈರಿ ಮಾಡಬೇಕು. ತಾಲ್ಲೂಕ್ ಬೋರ್ಡ್ ಚುನಾವಣೆಯ ಸಮಯದಲ್ಲಿ ಈ ಸರ್ಕಾರದವರು ಹೆಮ್ಮೆಪಡತಕ್ಕಂಥ ಕೆಲಸಗಳನ್ನು ಏನೂ ಮಾಡಿಸಿಲ್ಲ. ಕೇಂದ್ರ

ದಿಂದ ಇವರಿಗೆ ಐದೂವರೆ ಕೋಟಿ ರೂಪಾಯಿಗಳು ಸಿಕ್ಕಿತು, ಅದನ್ನು ಜನರಿಗೆ ಹಂಚಿದರು. ಮಾನ್ಯ ಮಂತ್ರಿಗಳಾದ ಶ್ರೀ ವಿಠಲ್‌ದಾಸ್ ಶೆಟ್ಟರು ಒಂದು ಊರಿಗೆ ಹೋಗಿ ನಮ್ಮ ಸರ್ಕಾರದವರು ಪುಕ್ಕಟೆಯಾಗಿ ಖಾತೆಯ ಆಹಾರವನ್ನು ಕೊಡಿಸುತ್ತಾರೆಂದು ಹೇಳಿಕೊಂಡು ಕೇರ್ ಸಂಸ್ಥೆಯಿಂದ ಬಂದ ಆಹಾರವನ್ನು ಹಂಚಿದ್ದಾರೆ. ಅದೂ ಕೂಡ ಈ ಕೇರ್ ಸಂಸ್ಥೆಯ ಆಹಾರವನ್ನು ಬಡಬಗ್ಗರಿಗೆ ಹಂಚದೆ ಪುಡಾರಿಗಳಿಗೆ ಹಂಚಿದ್ದಾರೆ. ಈ ರೀತಿಯಾಗಿ ಓಟನ್ನು ಪಡೆದಿದ್ದಾರೆ. ಜನರು ಬಂದು ನಮ್ಮನ್ನು ಕೇಳಿದರು, ಅವರು ಪುಕ್ಕಟೆಯಾಗಿ ಅನ್ನ ಕೊಡುತ್ತಾರೆ, ನೀವೇನು ಕೊಡುತ್ತೀರಿ ಎಂದು. ಆಗ ನಾವು ಈ ಪುಕ್ಕಟೆಯಾಗಿ ಕೊಡುವ ಅನ್ನ ಎಲ್ಲಿಂದ ಬರುತ್ತದೆ ಎಂಬುದನ್ನು ಆ ಜನರಿಗೆ ವಿವರಿಸ ಬೇಕಾಯಿತು. ಈ ಸಮಯದಲ್ಲಿ ಒಂದು ವಿಷಯವನ್ನು ಹೇಳಬೇಕಾಗುತ್ತದೆ. ಪೂಜ್ಯ ಮಹಾತ್ಮ ಗಾಂಧಿಯವರು 1942ನೇ ಇಸವಿಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಮಾಡುವ ಸಮಯದಲ್ಲಿ ಕಾಂಗ್ರೆಸ್‌ನವರು ಒಂದು ನಿರ್ಣಯ ಮಾಡಿದರು. ಆ ನಿರ್ಣಯದಲ್ಲಿ ಏನು ಹೇಳಿದೆ ಎಂಬುದನ್ನು ಓದುತ್ತೇನೆ)—

"Lastly, the A.I.C.C. wished to make it clear to all concerned that by carrying on mass struggle it has no intention of gaining power for the Congress. The Power when it comes will belong to the whole people of India."

ಎನ್ನುವ ಒಂದು ನಿರ್ಣಯ ಮಾಡಿದರು. ಆದರೆ ಅದು ಜಾರಿಯಲ್ಲಿ ಬರಲಿಲ್ಲ. ಈ ವಿಚಾರದಲ್ಲಿ ಶ್ರೀ ಮೀರಜ್ ಚೌಧರಿ ಎಂಬುವರು ಒಂದು ಆರ್ಟಿಕಲ್ ಬರೆದಿದ್ದಾರೆ, ಅದನ್ನು ಓದುತ್ತೇನೆ.—

"In recent decades the common people of India has seen paupers acquiring immense fortunes by going into politics. They would not just believe that politics is not a more efficient and less laborious and risky means of making money than even the black market."

ಪೂಜ್ಯ ಮಹಾತ್ಮ ಗಾಂಧಿಯವರು 1948ನೇ ಇಸವಿಯಲ್ಲಿ ಅಂದರೆ ಅವರು ಇಹಲೋಕಯಾತ್ರೆ ಮಾಡುವ ಮುನ್ನ ಅವರ ವಾಣಿಯಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಓದುತ್ತೇನೆ :—

"The Congress has gained the trust of the people on account of its many sacrifices and penances. But if at this moment it were to let the people down by becoming their servant and arrogate to itself a position of master, I venture to prophesy on the strength of my experience of long years that though I may be alive or not a revolution will sweep over the country and that the people will pick-out the white-capped ones individually and finish them and that a third power will stand to gain by this."

ಇದು ಪೂಜ್ಯ ಮಹಾತ್ಮ ಗಾಂಧಿಯವರು ಹೇಳಿರುವ ಮಾತು. ಮಾನ್ಯ ಸ್ನೇಹಿತರುಗಳಲ್ಲಿ ಕೇಳಿಕೊಳ್ಳುತ್ತೇನೆ. ಏನೆಂದರೆ 1969ರಲ್ಲಿ ಗಾಂಧಿ ಶತಮಾನೋತ್ಸವದ ಜಯಂತಿ ಬರುತ್ತದೆ. ಇನ್ನು ಮುಂದಾದರೂ ಸಹ ತಾವು ಪ್ರಾಮಾಣಿಕರಾಗಿ ನಡೆದುಕೊಳ್ಳದೆ ನಮ್ಮಲ್ಲಿ ಸಂಖ್ಯಾಬಲ ಜಾಸ್ತಿಯಾಗಿದೆ, ಮೊದಲು ಇದ್ದ ಸಂಖ್ಯೆಗಿಂತಲೂ ಈಗ ಜಾಸ್ತಿಯಾಗಿದೆ ಎಂದು ತಾವು ತಿಳಿದುಕೊಳ್ಳಬೇಡಿ. ನೀವು 89 ಜನ ಇದ್ದವರು 80 ಜನರಾಗಿದ್ದೀರಿ ಎಂದು ಕೊಂಡು ಸಂಖ್ಯಾಬಲದಿಂದ ನೀವು ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ. ಮಹಾಭಾರತದ 18 ಪರ್ವಗಳಲ್ಲಿ 16 ನೆಯದು ಮೌಸಲ ಪರ್ವ. ಈ ಪರ್ವದಲ್ಲಿ ಯಾದವರು ನಾಶವಾಗುತ್ತಾರೆ. ಈ 16ನೇ ಪರ್ವದ ಸಾರಾಂಶವೇನೆಂದರೆ, ಪಾಂಡವರು ರಾಜ್ಯಭಾರ ವಹಿಸಿಕೊಂಡು ಸುಮಾರು 36 ವರ್ಷಗಳಾಗಿರುತ್ತದೆ. ಯಾದವರು ಸುಖವಾಗಿ ಊಟ ಮಾಡಿಕೊಂಡು ಕಾಲ ಕಳೆಯುತ್ತಿದ್ದರು. ಒಂದು ದಿನ ಯಾದವರು ಕೃಷ್ಣನ ಮಗನಾದ ಶಂಭನಿಗೆ ಸೀರೆಯನ್ನುಡಿಸಿ ಒಬ್ಬ ಋಷಿಗಳ ಹತ್ತಿರ ಕರೆದುಕೊಂಡು ಹೋಗಿ "ಇವಳಿಗೆ ಯಾವ ಮಗು ಹುಟ್ಟುತ್ತದೆ" ಎಂದು ಕೇಳಿದರು, ಅದಕ್ಕೆ ಋಷಿಗಳು ಮೌಸಲ ಎಂಬ ಮಗು ಹುಟ್ಟುತ್ತದೆ ಮತ್ತು ಅದರಿಂದಲೇ ನಿಮ್ಮ ಕುಲ ನಾಶವಾಗುತ್ತದೆಂದು ಹೇಳಿದರು. ಒಂದು ದಿನ ಮೌಸಲ ಎಂಬ ಒನಕೆ ಹುಟ್ಟಿತು. ಅದು

(ಶ್ರೀ ಎಚ್. ಸಿದ್ದವೀರಪ್ಪ)

ಹುಟ್ಟಿದ ತಕ್ಷಣ ಯಾದವರು ಅದನ್ನು ತೆಗೆದುಕೊಂಡು ಹೋಗಿ ಕುಟ್ಟಿ ಪುಡಿ ಪುಡಿ ಮಾಡಿ ಸಮುದ್ರಕ್ಕೆ ಎಸೆದರು. ಆ ಪುಡಿ ಸಮುದ್ರದ ದಡದಲ್ಲಿರುವ ಜೊಂಡಿನಲ್ಲಿ ಸೇರಿಕೊಂಡಿತು. ಮುಂದೆ ಒಂದು ದಿನ ಯಾದವರು ಕ್ರೀಡೆಯಾಡಲು ಆ ಸಮುದ್ರಕ್ಕೆ ಹೋದರು. ಕ್ರೀಡೆಯಾಡತಕ್ಕ ಕಾಲದಲ್ಲಿ ಅವರಲ್ಲಿಯೇ ಜಗಳ ಪ್ರಾರಂಭವಾಯಿತು. ಆಗ ಅವರು ಅಲ್ಲಿ ಬೆಳೆದಿದ್ದ ಜೊಂಡನ್ನು ಕಿತ್ತುಕೊಂಡು ಒಬ್ಬರಿಗೊಬ್ಬರು ಹೊಡೆದಾಡಿ ಎಲ್ಲರೂ ನಾಶವಾಗುತ್ತಾರೆ. ಹಾಗೆ ಆ ಯಾದವರಿಗಾದ ಗತಿಯೇ ನಿಮಗೂ ಆಗಬಹುದು. ನಿಮ್ಮ ಆಡಳಿತದ ಬಗ್ಗೆ ದೇಶದ ಎಲ್ಲಾ ಜನರೂ ನಿಮಗೆ ಶಾಪ ಕೊಡುತ್ತಿದ್ದಾರೆ. ಇದನ್ನು ತಿಳಿದುಕೊಂಡು ತಾವು ತಮ್ಮ ಸಂಸ್ಥೆಯನ್ನು ವಿಸರ್ಜನೆ ಮಾಡಿಕೊಳ್ಳುವುದು ಒಳ್ಳೆಯದು. ಹಿಂದಿನ ಮುಖ್ಯಮಂತ್ರಿಗಳು ನಮ್ಮನ್ನು ಮಂದಮತಿಗಳು ಎಂದು ತಿಳಿದುಕೊಂಡು, ನೀರಿನ ಪ್ರಶ್ನೆ ಬರಲಿ, ಹಣಕಾಸಿನ ಪ್ರಶ್ನೆ ಬರಲಿ, ಯಾವ ಒಂದು ಸಮಸ್ಯೆ ಬರಲಿ ವಿರೋಧಪಕ್ಷದವರ ಅಭಿಪ್ರಾಯ ತಿಳಿದುಕೊಳ್ಳದೆ ಅವರು ತಮ್ಮಿಷ್ಟದಂತೆ ನಡೆದುಕೊಳ್ಳುತ್ತಿದ್ದರು. ಆದರೆ ಶ್ರೀ ವೀರೇಂದ್ರಪಾಟೀಲರ ಸರ್ಕಾರ ಬಂದಮೇಲೆ ಪ್ರತಿಯೊಂದು ಘಟ್ಟದಲ್ಲಿಯೂ ನಮ್ಮ ಸಹಕಾರವನ್ನು ಕೇಳುತ್ತೇನೆಂದು ಹೇಳಿದ್ದಾರೆ ಮತ್ತು ಕೇಳುತ್ತಿದ್ದಾರೆ. ಇವತ್ತಿನದಿವಸ ಈ ರಾಜ್ಯ ಕೇವಲ ಮಂತ್ರಿಗಳ ಕೈಯಲ್ಲಿ ಇಲ್ಲ. ಈ ರಾಜ್ಯ ಎರಡೂವರೆ ಕೋಟಿ ಜನರಿಗೆ ಸೇರಿದ್ದು. ಈ ದಿವಸ ಮೈಸೂರು ರಾಜ್ಯದಲ್ಲಿ ಮತ್ತು ಹಿಂದೂಸ್ಥಾನದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ, ಸರ್ವಾಧಿಕಾರ ತಪ್ಪಬೇಕಾದರೆ ಸಂಯುಕ್ತ ಪಾರ್ಟಿಲೆಸ್ ಸರ್ಕಾರ ಬರಬೇಕು. ಬರೀ ಕಾಂಗ್ರೆಸ್ ಸರ್ಕಾರವೇ ಮುಂದುವರೆದರೆ ಈ ರಾಜ್ಯದಲ್ಲಿ ಇನ್ನು ಐದು ಅಥವಾ ಹತ್ತು ವರ್ಷಗಳ ಕಾಲ ಇದ್ದರೆ ಹೆಚ್ಚಾಯಿತು. ಅನಂತರ ಜನರು ಏನು ಮಾಡುತ್ತಾರೆ, ಯಾವ ರೀತಿ ಮಾಡುತ್ತಾರೆ ಎಂಬುದನ್ನು ನೀವೇ ನೋಡುತ್ತೀರಿ. ಆದರೆ ನಾನು ಇಲ್ಲಿ ಹೇಳುವುದು ನೀವೆಲ್ಲಾ ಯೋಚನೆ ಮಾಡುವವರು ಎಂದು ಇಲ್ಲಿ ಹೇಳುತ್ತಿದ್ದೇನೆ. ನಮ್ಮ ಸ್ನೇಹಿತರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ರಾಜಕೀಯದಲ್ಲಿ ಬಹಳ ನುರಿತವರು. ಇವರು ಸುಮಾರು ನಾಲ್ಕು ಒಳ್ಳೆಯ ಆರ್ಟಿಕಲ್‌ಗಳನ್ನು ಬರಿದಿದ್ದಾರೆ, ಇವರ ಆರ್ಟಿಕಲ್‌ಗಳನ್ನು ಎಲ್ಲರೂ ಕಣ್ಣಿಗೆ ಒತ್ತಿಕೊಳ್ಳಬೇಕು. ಅಷ್ಟು ಚೆನ್ನಾಗಿ ಬರಿದಿದ್ದಾರೆ. ಅವರ ಮನಸ್ಸಿನಲ್ಲಿ ಹೊಳೆದಿದ್ದನ್ನು ಬರೆದಿದ್ದಾರೆ. ಇದು ಕನ್ನಡ ಪ್ರಭಾ ಎನ್ನುವ ಪೇಪರಿನಲ್ಲಿ ಪ್ರಕಟವಾಗಿತ್ತು. ಪ್ರಾಯಶಃ ಇದನ್ನು ಯಾರೂ ತರಿಸಿ ಓದಿಲ್ಲ ಎಂದು ಕಾಣುತ್ತದೆ.

3-30 P.M.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು, ಯೋಜನೆ ಮತ್ತು ಯುವಜನ ಕಲ್ಯಾಣ ಶಾಖೆಗಳ ಮಂತ್ರಿಗಳು).—ಬಂದಿತ್ತು. ನಾನು ಓದಿದ್ದೇನೆ.

ಶ್ರೀ ಹೆಚ್ ಸಿದ್ದವೀರಪ್ಪ.—ಅವರು ಈ ರೀತಿ ಬರೆದಿದ್ದಾರೆ :

"ಅಧಿಕಾರವಿದ್ದವರು ಕೆಲವರು ಅಧಿಕಾರವನ್ನು ಉಪಯೋಗಿಸಿಕೊಂಡು ತಮ್ಮ ಮತ್ತು ತಮ್ಮವರ ಹಿತ ಸಾಧನೆಯಲ್ಲಿ ಮಗ್ನರಾಗಿದ್ದರೆ, ಅಧಿಕಾರ ವಿಲ್ಲದ ಕೆಲವರು ಜನರ ಅತೃಪ್ತಿ ಅಸಹನೆಗಳನ್ನು ಉಪಯೋಗಿಸಿಕೊಂಡು ಆದರ್ಶವಿಲ್ಲದ ಒಣ ಘೋಷಣೆಗಳಿಂದ ಅರಾಜಕತೆಯ ಬೀಜವನ್ನು ಬಿತ್ತುತ್ತಿದ್ದಾರೆ. ಜನಸಾಮಾನ್ಯರು ಮುಖಂಡರಿಂದ ಸದ್ಗುಣಗಳನ್ನೂ ಸಭ್ಯ ವರ್ತನೆಯನ್ನೂ ಕಲಿಯಬೇಕು. ಆದರೆ ಮುಖಂಡರೆನಿಸಿಕೊಂಡವರಲ್ಲಿ ಆ ಗುಣಗಳೇ ಮಾಯವಾಗಿರುವಾಗ ಜನರು ಅವರಿಂದಕಲಿಯುವುದಾದರೂ ಏನಿದೆ"

ಮುಖ್ಯವಾಗಿ ಇವರು ಅನೇಕ ಮಾತುಗಳನ್ನು ಇದರಲ್ಲಿ ಹೇಳಿದ್ದಾರೆ. ಇವರು ಕಾಂಗ್ರೆಸ್ಸಿನವರಾಗಿ ಇನ್ನೂ ಇಲ್ಲಿ ಸದಸ್ಯರಾಗಿದ್ದಾರೆ. ಇವರು ಎಲ್ಲ ಪಕ್ಷಗಳ ಪರವಾಗಿಯೂ ಹೇಳಿದ್ದಾರೆ. ಇದರಲ್ಲಿ ಕಾಂಗ್ರೆಸ್ಸಿನವರು ಆಚರಣೆಗೆ ತರುವುದನ್ನು ಅವರು ಹೇಳಿದ್ದಾರೆ. ಆದರೆ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಯಾವ ಗುಂಪಿಗೂ ಸೇರಿದವರಲ್ಲ. ಅವರು ಕರ್ಣಾಟಕದ ಪರವಾಗಿಯೂ ಇರಲಿಲ್ಲ, ವಿರೋಧವಾಗಿಯೂ ಇರಲಿಲ್ಲ. ಆದುದರಿಂದ ನಾನು ಇಲ್ಲಿ ಹೇಳುತ್ತಿರುವುದು ಈವೊತ್ತಿನ ದಿವಸ ಈ ರೀತಿಯಲ್ಲಿ ಪರಿಸ್ಥಿತಿ ಇರಬೇಕಾದರೆ ಈ ರಾಜ್ಯ ಉಳಿಯುತ್ತದೆಯೇ ಎನ್ನುವುದನ್ನು ನಾವು ದೀರ್ಘವಾಗಿ ಯೋಚನೆ ಮಾಡಬೇಕು, ಈವೊತ್ತು ನಾವು ಸುಖವಾಗಿ ಇರಬಹುದು ನಾಳೆ ಹೋಗಬಹುದು ಎನ್ನುವ ರೀತಿಯಲ್ಲಿ ಹೋಗುವುದಾದರೆ ಪ್ರಜಾಪ್ರಭುತ್ವ ಉಳಿಯುತ್ತದೆಯೇ ಇದನ್ನು ನಾವು ಇಲ್ಲಿ ನೋಡಬೇಕು. ಇದರ ಬಗ್ಗೆ ಇಲ್ಲಿ ನಾನು

ಒಂದು ಸಣ್ಣ ಉದಾಹರಣೆಯನ್ನು ನನ್ನ ಮಾನ್ಯ ಕಾಂಗ್ರೆಸ್ಸು ಸ್ನೇಹಿತರಿಗೆ ಹೇಳುತ್ತೇನೆ. ಇವರು ಯಾವತ್ತೂ ಒಂದು ಒಳ್ಳೆಯ ಧ್ಯೇಯಗಳನ್ನು ಅನುಸರಿಸಬೇಕೆಂದು ಹೇಳುತ್ತಿರುತ್ತಾರೆ. ಅವರಿಗೆ ಮಾನ್ಯ ಶ್ರೀ ಶಂಕರನಾರಾಯಣ ಭಟ್ಟ ಎನ್ನುವವರು ಬರೆದಿರುವ 'ಹಿಂದೂ ಧರ್ಮದ ಪರಿಚಯ' ಎನ್ನುವ ಪುಸ್ತಕದಲ್ಲಿ ಪುಟ 87 ರಲ್ಲಿ ಇವರಿಗೆ ಅನ್ವಯವಾಗುವಂತೆ ಬಹಳ ಚೆನ್ನಾಗಿ ಹೇಳಿದ್ದಾರೆ. ಇದರಲ್ಲೇನಿದೆ ಚಾರ್ವಾಕ ತತ್ವ ಎಂದು ಇದೆ. ಅದು ಒಂದು ಚಾರ್ವಾಕ ದರ್ಶನ ಎಂದೂ ಹೇಳುತ್ತಾರೆ, ಇದರ ತತ್ವ ಬಹಳ ಚೆನ್ನಾಗಿದೆ. ಇದು ಹೇಗಿದೆ ಎಂದರೆ, ಸಾಲ ಮಾಡಿಯಾದರೂ ಹೊಟ್ಟೆ ತುಂಬಾ ತಿನ್ನಬೇಕು ಬೊಜ್ಜು ಬೆಳೆಸಿಕೊಳ್ಳಬೇಕು. ಇವೊತ್ತು ಉಂಡದ್ದೇ ಬಂತು ನಾಳೆ ನಮಗೆ ಸಿಗುತ್ತೋ ಇಲ್ಲವೋ ಎನ್ನುವಂತೆ ಹೇಳಿದ್ದಾರೆ. ಈ ದೃಷ್ಟಿಯಿಂದ ನಾನು ಹೇಳುವುದು ಮುಂದಿನ ಭಾವಿ ಜನಾಂಗಕ್ಕೆ ಇಂತಹ ತೊಂದರೆಗಳನ್ನು ಅನಿವಾರ್ಯವಾಗಿ ತರಬೇಡಿ ಎಂದು ನಾನು ತಮ್ಮಲ್ಲಿ ವಿನಯದಿಂದ ಹೇಳುತ್ತೇನೆ.

ಮತ್ತೆ ಪಾಲಟಿಕ್ಸ್‌ನಲ್ಲಿ ಡಿಫಕ್ಷನ್ ಬಗ್ಗೆ ಹೇಳುತ್ತಾ ಆಯಾರಾಂ, ಗಯಾರಾಂ ಎಂದು ಹೇಳಿದರು. ಆಯಾರಾಂ ಯಾರೋ ಗಯಾರಾಂ ಯಾರೋ ಹೇಳುವುದಕ್ಕಾಗುವುದಿಲ್ಲ. ಪಕ್ಷಾಂತರ ಗೊಳ್ಳುವ ಆಯಾರಾಂಗಳಿಗೆ ಒಂದು ಕಾಲ ಗೊತ್ತುಮಾಡಿ, ಯಾರು ಬರುತ್ತಾರೋ ಕರೆದುಕೊಳ್ಳಿ, ಕಾಲ ಮುಗಿದ ಮೇಲೆ ಬೇಡ. ಈ ಕಡೆಗೆ ಗಯಾರಾಂ ಗಳು ಬರುವ ಕಾಲವೂ ಬರುತ್ತದೆ.

ಗೌರ್ನಮೆಂಟ್ ಆಫ್ ಇಂಡಿಯಾದವರು ನಮ್ಮ ದೇಶದಲ್ಲಿ ಹಾಗೂ ಇತರ ರಾಜ್ಯಗಳಲ್ಲಿ ಚುನಾವಣೆಗಳಲ್ಲಿ ಆದ ಕೆಲವು ಅಂಕಿ ಅಂಶಗಳನ್ನು ಕ್ರೋಢೀಕರಿಸಿ ಪ್ರಕಟ ಮಾಡಿದ್ದಾರೆ. ಅವರೇ ಕೊಟ್ಟಿರುವ ರೆಕ್ಕದ ಪ್ರಕಾರ 1967 ರಲ್ಲಿ ನಡೆದ ಚುನಾವಣೆಯಲ್ಲಿ 520 ಜನ ಇದ್ದ ಮಾನ್ಯ ಲೋಕ ಸಭಾ ಸದಸ್ಯರಲ್ಲಿ 308 ಜನ ಮೆಜಾರಿಟಿ ವೋಟನ್ನು ಪಡೆದು ಬಂದಿಲ್ಲ ಎನ್ನುವುದು ತಿಳಿದು ಬರುತ್ತದೆ. ಇದರಲ್ಲಿ ಕೆಲವು ವೋಟುಗಳೂ ಪೋಲಾಗಿವೆ. ಇದೇ ರೀತಿ 3,486 ಅಸೆಂಬ್ಲಿ ಸದಸ್ಯರಲ್ಲಿ 1,825 ಜನ ಮೈನಾರಿಟಿ ವೋಟಿನಿಂದ ಬಂದವರು ಎಂದು ಇದೆ. ಇದು ನಮ್ಮ ದುರ್ದೈವವೋ ಏನೋ ನಮ್ಮ ಮೈಸೂರು ರಾಜ್ಯದಲ್ಲಿ ಇನ್ನೂ ಒಂದೇ ಪಕ್ಷದ ಸರಕಾರ ಇದೆ. ನಮ್ಮ ಪಕ್ಕದ ಮದ್ರಾಸು ರಾಜ್ಯದಲ್ಲಿ ಡಿ. ಎಂ. ಕೆ. ಪಕ್ಷ ಅಧಿಕಾರದಲ್ಲಿದೆ. ಇನ್ನು ಅನೇಕ ಕಡೆ ಬೇರೆ ಬೇರೆ ಪಕ್ಷಗಳೂ ಇವೆ ಕೆಲವು ವಿರೋಧ ಪಕ್ಷಗಳಲ್ಲಿವೆ. ಹೀಗೆ ಅನೇಕ ಪಕ್ಷಗಳಿರುವುದರಿಂದಲೇ ನಿಮಗೆ ಜೀವದಾನ ದೊರತಿದೆ. ಇದು ಸ್ವಶಕ್ತಿಯಿಂದ ಅಲ್ಲ. 1929 ರಿಂದ ಕಾನ್‌ಸ್ಟಿಟ್ಯೂಷನ್ ಇದೆ ಅದರಂತೆ ಈ ದೇಶದಲ್ಲಿ ಪ್ರಜಾಪ್ರಭುತ್ವ ಇರಬೇಕು ಎಂದು ಇಲ್ಲಿಯವರೆಗೂ ಬರುತ್ತಿದೆ. ನಮ್ಮ ರಾಜ್ಯದಲ್ಲಿ ಇದುವರೆಗೆ ಎಂಟು ಜನ ಮುಖ್ಯ ಮಂತ್ರಿಗಳಾದರು. ಈ ಎಂಟು ಜನರೂ ಈಗಲೂ ಕೂಡ ಇದ್ದಾರೆ. ಈಗ ನಮ್ಮ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರವರು ತರುಣ ರಾಗಿರುವವರು ಮುಖ್ಯ ಮಂತ್ರಿಗಳಾಗಿ ಬಂದು ಇನ್ನೂ ಒಂದು ವರ್ಷವಾಗಿಲ್ಲ. ಈಗ ಜನರಲ್ಲಿ ಏನು ಒಂದು ಭಾವನೆ ಬಂದಿದೆ ಎಂದರೆ ಮಂತ್ರಿಯಾಗುವುದು ದುಡ್ಡು ಹೊಡೆಯುವುದಕ್ಕೆ ಮತ್ತು ವಿಧಾನ ಸಭೆಯ ಸದಸ್ಯರಾಗುವುದು ದುಡ್ಡು ಹೊಡೆಯುವುದಕ್ಕೆ ಎನ್ನುವ ಭಾವನೆ ಎಂದರೆ ಕ್ಯಾಲಂನ್ಯೆಸಿಂಗ್ ಅಂಡ್ ಸ್ಕ್ಯಾಂಡಲೈಸಿಂಗ್ ಎನ್ನುವಂತೆ ನೀವು ಇದನ್ನು ಯಾವ ಹೆಸರಿನಲ್ಲಿ ಬೇಕಾದರೂ ಕರೆಯಿರಿ. ಪರಿಸ್ಥಿತಿ ಹೀಗಿದೆ. ಇದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಸವಿನಯದಿಂದ ಕೇಳಿಕೊಳ್ಳುತ್ತಿರುವುದು: ಎಲ್ಲರ ಆಸ್ತಿಪಾಸ್ತಿಗಳೂ ತಿಳಿಯಲು ಅನುಕೂಲ ವಾಗುವಂತೆ ಒಂದು ಕಾನೂನು ಮಾಡಿ. ಇದರಂತೆ 1947ರಿಂದ ಯಾರು ಯಾರು ಅಧಿಕಾರ ದಲ್ಲಿದ್ದರೋ ಅವರೆಲ್ಲರೂ ಬರಲಿ ಅವರ ಪಟ್ಟಿಯನ್ನು ಕೊಡಲಿ. ಇದನ್ನು ನೀವೆಲ್ಲರೂ ತೆಗೆದುಕೊಂಡು ಬನ್ನಿ ಕುಳಿತು ಏನೇನು ಎಲ್ಲೆಲ್ಲಿ ಆಗಿವೆ ಎನ್ನುವುದು ತಿಳಿಯುತ್ತದೆ, ಅದು ಜನರ ಮುಂದೆ ಬರಲಿ ಅದನ್ನು ರುಜುವಾತು ಮಾಡಲಿ. ಆಗ ಅಂತಹುದೇನಾದರೂ ತಪ್ಪಾಗಿದ್ದರೆ ಅಂತಹವರಿಗೆ ತಕ್ಕ ಶಿಕ್ಷೆ ಕೊಡಲಿ. ಇದು ಬಹಳ ಗುರುತರವಾದ ವಿಚಾರ ಇದನ್ನು ಜನ ಒಂದಲ್ಲ ಒಂದು ರೀತಿಯಿಂದ ನಂಬುತ್ತಾರೆ. ಇದರಿಂದ ಜನತೆಯಲ್ಲಿ ಒಂದು ರೀತಿಯಾದ ಜಿಗುಪ್ಸೆ ಬರುವ ರೀತಿಯಲ್ಲಿ ಆಗಿದೆ. ಹಿಂದೆ ಇದ್ದ ಮುಖ್ಯ ಮಂತ್ರಿಗಳು ಇದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದಾಗ ಅವರೇನೋ ಒಂದು ರೀತಿಯ ಕ್ರಮ ತೆಗೆದುಕೊಂಡರು ಮತ್ತು 76 ಜನ ಸದಸ್ಯರುಗಳು ಅವರ ಆಸ್ತಿಪಾಸ್ತಿಗಳ ವಿವರವನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ಇದನ್ನು ಸಭೆಯ ಮುಂದೆ ಇಡಲಿ. ಜನ ಇದನ್ನು ನಾಳೆ ನೋಡಲಿ. ಆದಷ್ಟು ಜಾಗ್ರತೆ ಇದನ್ನು ಮಾಡಲಿ ಮತ್ತು ಜನತೆಯಲ್ಲಿ ನಂಬಿಕೆ ಬರುವಂತೆ ಮಾಡಬೇಕು. ಇಲ್ಲದಿದ್ದರೆ ಯೋಗ್ಯರೂ ಹಾಗೂ ಸಂಪನ್ನರೂ ಆಗಿರುವವರು ಉಳಿಯುವುದಕ್ಕಾಗುವುದಿಲ್ಲ! ಇದಕ್ಕೋಸ್ಕರ ನಾನು ಹೇಳುವುದು ಯಾರ ಯಾರ ಮೇಲೆ ಚಾರ್ಜು ಇದೆಯೋ ಹಿಂದೆ ಮುಖ್ಯ ಮಂತ್ರಿಗಳಾಗಿದ್ದವರು ಇರಲಿ ಇಲ್ಲವೇ ಸದಸ್ಯರಾಗಿರುವವರು ಇರಲಿ, ಇವರನ್ನೆಲ್ಲಾ ವಿಚಾರಣೆ ಮಾಡಿ ನಿಜವಾದ ಸ್ಥಿತಿ ತಿಳಿಯಬಹುದು.

(ಶ್ರೀ ಎಚ್. ಸಿದ್ದವೀರಪ್ಪ)

ಇದು ಹೇಗಿದೆ ಎಂದರೆ ಗ್ರಹಣ ಹಿಡಿದಂತಾಗಿದೆ. ಗ್ರಹಣ ಹಿಡಿದು ಅದು ಬಿಟ್ಟ ಮೇಲೆ ಸ್ನಾನ ಮಾಡುತ್ತಾರೆ. ಹಾಗೆ ಈಗ ಗ್ರಹಣಗ್ರಸ್ತರಾಗಿರುವ ಜನರನ್ನು ಗ್ರಹಣಮುಕ್ತರನ್ನಾಗಿ ಮಾಡಬೇಕು ಇಲ್ಲದೇ ಇದ್ದರೆ ಇವರಿಗೆ ಹಿಡಿದಿರುವ ಗ್ರಹಣ ಬಿಡುವುದಿಲ್ಲ. ರಾಜಕೀಯ ಮುಖಂಡರು ಒಬ್ಬರು ಗೌರವಯುತವಾದ ಮುಖಂಡರು ಎಂದು ಹೇಳುವುದಕ್ಕೆ ಒಬ್ಬ ಮಹನೀಯರು ಶ್ರೀ ಅಂಡ್ರೂವ್ಸ್ ಅಲಿವರ್ ಎನ್ನುವವರು ಬಹಳ ಚೆನ್ನಾಗಿ ಒಂದು ಕಡೆ ಹೇಳಿದ್ದಾರೆ. ಅದನ್ನು ಮಾತ್ರ ಇಲ್ಲಿ ಸಭೆಯ ಗಮನಕ್ಕೆ ತರುತ್ತೇನೆ, ಅದು ಈ ರೀತಿ ಇದೆ :

> "Politics is the most hazardous of all professions. There is not another in which a man can hope to do so much good to his fellow creature; neither is there any in which he may so easily lose his own soul, nor is there another in which veracity is so difficult. Danger is the inseparable companion of office. With all the temptations and degradations that beset it, politics is still the noblest career that any man can choose."

ಈವೊತ್ತಿನ ದಿವಸ ರಾಜಕೀಯವನ್ನು ಇಷ್ಟು ಅಲ್ಲಗಳೆದು ಇದ್ದರೂ ರಾಜ್ಯಭಾರ ಮಾಡಲೇ ಬೇಕಾಗುತ್ತದೆ. ಆದುದರಿಂದ ನಾನು ವಿನಯದಿಂದ ಕೇಳಿಕೊಳ್ಳುವುದು ನೀವು ಖಂಡಿತವಾಗಿಯೂ ಇಂತಹ ಒಂದು ವಿಚಾರಣೆಗೆ ತಯಾರಾಗಲು ಏರ್ಪಾಡು ಮಾಡಬೇಕು.

ಇನ್ನು ಒಂದು ವಿಷಯ ಹೇಳುತ್ತೇನೆ. ಆಡಳಿತದಲ್ಲಿ ಈವೊತ್ತಿನ ದಿವಸ ಒಂದು ರೀತಿಯಾದ ತೊಡಕಾಗಿದೆ. ಇದು ಒಬ್ಬ ಅಧಿಕಾರಿಗಳ ಬಗ್ಗೆ ಹೇಳುವ ವಿಚಾರವಲ್ಲ. ಬಹುಶಃ ಇದು ಒಂದು ಐಸೋಲೇಟೆಡ್ ಇನ್‌ಸ್ಟೆನ್ಸ್ ಎಂದು ತಿಳಿಯಬೇಡಿ. ಇದರಲ್ಲಿ ಮಂತ್ರಿಗಳಿಗೆ ಆಗದವರು ಇರಲಿ ಅಥವಾ ಬೇಕಾದವರು ಇರಲಿ ಯಾರೇ ಆಗಲಿ ಒಂದು ರೀತಿಯಾದ ನಿಯಮಗಳಲ್ಲಿ ಬದ್ಧರಾಗಿರ ಬೇಕಾಗುತ್ತದೆ. ಇಂದು ಕಾನ್‌ಸ್ಟಿಟ್ಯೂಷನ್ ಇದೆ ಇದಕ್ಕೆ ತಕ್ಕಂತೆ ಎಲ್ಲಾದರೂ ಸ್ವಲ್ಪ ತೊಡಕು ಬಂದರೆ ಹೈ ಕೋರ್ಟಿಗೆ ರಿಟ್ ಹೋಗುವ ಸಂದರ್ಭಗಳಿವೆ. ಇದಕ್ಕೆಲ್ಲಾ ಆಡಳಿತದವರು ಮಾಡು ತ್ತಿರುವ ರೂಲ್ಸುಗಳೇ ಕಾರಣಗಳಾಗುತ್ತಿವೆ ಎಂದು ಹೇಳುತ್ತೇನೆ. ಹೀಗಾದರೆ ಸರಕಾರ ತನ್ನ ಆಡಳಿತವನ್ನು ಯಾವ ರೀತಿಯಲ್ಲಿ ಸರಿಯಾಗಿ ಮಾಡಲು ಸಾಧ್ಯವಾಗುತ್ತದೆ ಮತ್ತು ಎಷ್ಟು ಮಟ್ಟಿಗೆ ನಡೆಯುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಇದು ಬಹು ಶೋಚನೀಯವಾದ ಸಂಗತಿ. ಇದರ ಬಗ್ಗೆ ಮಂತ್ರಿಗಳು ಹಗಲೂ ರಾತ್ರಿ ಯೋಚನೆ ಮಾಡಬೇಕು. ಅಧಿಕಾರಿಗಳು ತಮ್ಮ ರಾಷ್ಟ್ರದ ಬೆಲೆ ಏನು ಎಂದು ತಿಳಿದುಕೊಂಡು ಜನತೆಗೆ ಸೇವೆ ಮಾಡುವಂತಹವರಾಗಿರಬೇಕು. ನಾನು ಇಂತಹ ಅಧಿಕಾರಿಗಳು ಎಂದು ಇಲ್ಲಿ ಹೇಳುತ್ತಿಲ್ಲ.

ಈಗಿನ ಅಧಿಕಾರಿಗಳು ಬಹಳ ಕೆಟ್ಟುಹೋಗಿದ್ದಾರೆ. ಅನ್ನವನ್ನು ಮಾಡುವಾಗ ಅನ್ನ ಬೆಂದಿದೆಯೋ ಇಲ್ಲವೋ ಎಂದು ತಿಳಿಯಬೇಕಾದರೆ ಒಂದು ಅಗಳು ಅನ್ನವನ್ನು ಹಿಸುಕಿ ಹೇಗೆ ನೋಡುತ್ತಾರೋ, ಅದೇ ರೀತಿ ದೊಡ್ಡವರಾದ 8—10 ಜನಕ್ಕೆ ಬರೆ ಎಳೆದರೆ, ಎಲ್ಲಾ ಸರಿ ಹೋಗುತ್ತೆ. ಅದು ಬಿಟ್ಟು ಸಣ್ಣ ಅಧಿಕಾರಿಗಳನ್ನು ಹಿಡಿದರೆ ಏನು ಪ್ರಯೋಜನ? ಲಂಚ ರುಷು ವತ್ತು ಏನು ತೆಗೆದುಕೊಂಡರೂ 100 ಪರ್ಸೆಂಟು ಪ್ರೂಫ್ ಕೊಡುವುದಕ್ಕೆ ಯಾರಿಗೂ ಆಗುವುದಿಲ್ಲ. ಈ ಹೊತ್ತು ಏನಾಗಿದೆ ಎಂದರೆ ಯಾರಾದರೂ ಒಬ್ಬ ಅಸೆಂಬ್ಲಿ ಸದಸ್ಯರನ್ನು ಕೈಯಲ್ಲಿ ಇಟ್ಟು ಕೊಂಡರೆ, ಏನು ತಪ್ಪು ಮಾಡಿದರೂ ತಪ್ಪಿಸಿಕೊಳ್ಳಬಹುದು ಎನ್ನುವ ಭಾವನೆ ಬಂದಿದೆ. ಇದನ್ನು ಸರಿ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಕೈಗಾರಿಕೆ ಮುಂತಾದುವುಗಳ ಮೇಲೆ ಹೇಳುವ ವಿಚಾರಗಳು ಅನೇಕ ಇವೆ. ಅದನ್ನು ಸಮಯ ಬಂದಾಗ ಹೇಳುತ್ತೇನೆ. ಹಣಕಾಸಿನ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ನಮ್ಮ ದೇಶಕ್ಕೆ ದೊಡ್ಡ ದೊಡ್ಡ ಕೈಗಾರಿಕೆಗಳು ಬರುತ್ತವೆ ಎಂದು ಹೇಳುತ್ತಾರೆ. ದೇಶದ ಬಡತನವನ್ನು ಬಗೆಹರಿಸಬೇಕಾದರೆ ಕೈಗಾರಿಕೆಗಳು ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚು ಸ್ಥಾಪನೆ ಮಾಡುವುದು ಒಳ್ಳೆಯದು. ಅದನ್ನು ವಿರೋಧ ಮಾಡುವುದಕ್ಕೆ ಯಾರೂ ಹೋಗು ವುದಿಲ್ಲ. ಕೈಗಾರಿಕೆ ಅಭಿವೃದ್ಧಿ ಮಾಡುವ ಮೂಲಕ ನಮ್ಮ ಜನವನ್ನು ಉದ್ಧಾರ ಮಾಡಲಿಕ್ಕೆ ಪ್ರಯತ್ನ ಮಾಡಿ ಎಂದು ಹೇಳುತ್ತೇನೆ.

ಇನ್ನು ತುಕೋಳ್ ಪೇ ಕಮಿಷನ್ ವಿಚಾರವಾಗಿ ಸದಸ್ಯರು ವಿಚಾರ ಮಾಡಬೇಕಾಗಿದೆ. ಅದರಲ್ಲಿ ಕೆಲವು ಭಾಗ ನೋಡಿದ್ದೇನೆ. ಅವರು ಬಹಳ ದೀರ್ಘವಾಗಿ ಯೋಚನೆ ಮಾಡಿ ಸಲಹೆ

ಗಳನ್ನು ಕೊಟ್ಟಿದ್ದಾರೆ. ಆದರೆ ಅವರು ನಮ್ಮ ರಾಜ್ಯದ ಹಳ್ಳಿಯಲ್ಲಿರುವ 77 ಪರ್ಸೆಂಟು ಪ್ರಜೆಗಳ ಯೋಗಕ್ಷೇಮವನ್ನು ವಿಚಾರ ಮಾಡಿದ್ದಾರೆಯೇ? ಇನ್ನು ಉಳಿದ 23 ಪರ್ಸೆಂಟು, ಎಂದರೆ ಆಫೀಸಿನಲ್ಲಿರುವ ಅಧಿಕಾರಿಗಳು ಮತ್ತು ಇತರರು ಮಾತ್ರ ಪ್ರಜೆಗಳೇ? ಅವನ್ನೆಲ್ಲಾ ಯೋಚನೆ ಮಾಡಬೇಕು. ಈ ತರಹ ಸಮಸ್ಯೆ ಬಂದಾಗ ವಿರೋಧ ಪಕ್ಷದವರನ್ನು ಕೇಳುತ್ತಾರೆ. ಆದುದರಿಂದ ಈ ವಿಚಾರದಲ್ಲಿ ಮುಖ್ಯಮಂತ್ರಿಗಳೇ ಒಂದು ತೀರ್ಮಾನ ತೆಗೆದುಕೊಂಡು ಹೇಳಬೇಕಾಗಿತ್ತು. ನಾವು ಏನಾದರೂ ನಿರ್ಣಯ ತೆಗೆದುಕೊಂಡರೆ, ಅದು ಸಮಗ್ರ ಇಡೀ ದೇಶದ ಜನರ ಹಿತರಕ್ಷಣೆ ಮಾಡುವುದಕ್ಕಾಗಿಯೋ ಹೊರತು ಕೇವಲ ಒಂದು ಭಾಗದ ಜನರ ಹಿತರಕ್ಷಣೆ ಮಾಡುವುದಕ್ಕಲ್ಲ. ಗ್ರಾಮಾಂತರ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆ ಬಹಳ ಜಾಸ್ತಿಯಾಗಿದೆ. 2 ಮತ್ತು 3 ನೇ ಯೋಜನೆಗಳು ಮುಗಿದರೂ ಇನ್ನೂ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗಿದೆ. ಈಗ ಏಳು ಲಕ್ಷ ಜನರು ನಿರುದ್ಯೋಗಿಗಳಾಗಿದ್ದಾರೆ. ಮೊನ್ನೆ ದಿವಸ ಬೆಂಗಳೂರು ಯೂನಿವರ್ಸಿಟಿಯ ಕಾನ್‌ವೊಕೇಷನ್ ಸಂದರ್ಭದಲ್ಲಿ ನಡೆದ ಒಂದು ದೃಶ್ಯವನ್ನು ನೋಡಿದ್ದೇವೆ. ಇದರಿಂದ ನಿರುದ್ಯೋಗ ಸಮಸ್ಯೆ ಎಷ್ಟು ಮಟ್ಟಿಗೆ ದೇಶದಲ್ಲಿ ಇದೆ, ಎಷ್ಟು ಕಠಿಣವಾಗಿದೆ, ಅನ್ನದ ಅಭಾವ ಇದೆ ಎನ್ನುವುದು ಗೊತ್ತಾಗಿದೆ. ಇಂತಹ ಸಮಯದಲ್ಲಿ ಕಾನ್‌ವೊಕೇಷನ್ ಮಾಡುವುದನ್ನು ಕೈಬಿಡಬೇಕು ಎಂದು ನಾನು ಸಲಹೆ ಕೊಡುತ್ತೇನೆ. ಅಮೇರಿಕಾದಲ್ಲಿ ಮಾಡುವ ಹಾಗೆ ಪಾಸ್ ಆದವರಿಗೆ ಪಾಸ್ ಆಗಿದೆಯೆಂದು ಒಂದು ಸರ್ಟಿಫಿಕೇಟ್ ಕೊಟ್ಟರೆ ಸಾಕು. ಅಲ್ಲಿ ಈತರಹ ಕಾನ್‌ವೊಕೇಷನ್ ಮಾಡುವುದಿಲ್ಲ. ಬ್ರಿಟನ್‌ನಲ್ಲಿ ಈ ರೀತಿ ಇದೆ. ಅಮೇರಿಕಾದಲ್ಲಿ ಡಾಕ್ಟರೇಟ್, ಪಿ.ಹೆಚ್.ಡಿ. ಡಿಗ್ರಿ ಕೊಡುವುದು ಇದ್ದರೆ ಆಗ ಮಾತ್ರ ಆ ಹುಡುಗನನ್ನು ಕರೆದು ಡಿಗ್ರಿ ಕೊಡುತ್ತಾರೆ. ಆದುದರಿಂದ ಈ ತರಹ ದುಬಾರಿಯಾದ ಘಟಿಕೋತ್ಸವವನ್ನು ಮಾಡುವುದಕ್ಕೆ ಹೋಗಬಾರದು. ಇದನ್ನು ಯೋಚನೆ ಮಾಡಬೇಕು. ನಾನು ಹೆಚ್ಚು ಕಾಲವನ್ನು ತೆಗೆದುಕೊಂಡಿದಕ್ಕಾಗಿ ಕ್ಷಮಿಸಬೇಕು. ಹೆಚ್ಚು ವಿಷಯವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹೇಳತಕ್ಕಂತ ವಿಷಯಗಳನ್ನು ಬಹಳ ಸೂಕ್ಷ್ಮವಾಗಿ ಹೇಳಿದ್ದೇನೆ. ನಮ್ಮ ಎದುರುಗಡೆ ಪಕ್ಷದ ಸ್ನೇಹಿತರಿಗೆ ಹೇಳುತ್ತೇನೆ, ಪಕ್ಷಾಂತರಗೊಳ್ಳುವ 'ಆಯಾರಾಂ'ಗಳಿಗೆ ಒಂದು ಟೈಂ ಲಿಮಿಟ್ ಗೊತ್ತು ಮಾಡಿ. ಯಾರಾದರೂ ಬರುವುದಿದ್ದರೆ ಕರೆದುಕೊಂಡು ಬಿಡಿ. ಆಮೇಲೆ 'ಗಯಾರಾಂ' ಕಾಲವು ಬರುತ್ತದೆ. ಸಂಖ್ಯಾಬಲ ಎಷ್ಟು ಇದೆ ಎಂದು ನೋಡಿಕೊಳ್ಳುವುದು ಮುಖ್ಯವಲ್ಲ. ದೇಶದಲ್ಲಿ ಪ್ರಭಾವಯುತವಾದ ಬಲಶಾಲಿಗಳಾದ ಕಾಂಗ್ರೆಸ್ಸಿನವರು ಹೆಚ್ಚಿನ ಸಹಕಾರ ನೀಡಬೇಕು. ವಿರೋಧ ಪಕ್ಷದವರನ್ನು ಸಮಾನತೆಯಿಂದ ಕಾಣಬೇಕು ಇಲ್ಲದಿದ್ದರೆ ಅದು ಪ್ರಜಾಪ್ರಭುತ್ವ ಆಗುವುದಿಲ್ಲ, ಡಿಕ್ಟೇಟರ್‌ಷಿಪ್ ಆಗುತ್ತದೆ ಎಂದು ಹೇಳುತ್ತೇನೆ.

ಸ್ವಾಮಿ, ನನ್ನ ಕ್ಷೇತ್ರದಲ್ಲಿ ನಡೆದ ತಾಲ್ಲೂಕು ಬೋರ್ಡ್ ಚುನಾವಣೆಯ ವಿಷಯವಾಗಿ ಒಂದು ವಿಚಾರ ಹೇಳುತ್ತೇನೆ. ಅಲ್ಲಿ ಅಧಿಕಾರಿಗಳ ದುರುಪಯೋಗ ವಿಪರೀತವಾಗಿತ್ತು. ಅಲ್ಲಿ ಒಬ್ಬರು ಅಧಿಕಾರಿಗಳು ಚುನಾವಣಾ ಪ್ರಚಾರಕ್ಕೆ ಇಳಿದಿದ್ದುದು. ಯಾರೇ ಆಗಲಿ, ಯಾವ ಪಕ್ಷದವರೇ ಆಗಲಿ ಇದನ್ನು ಸಮಾನತೆ ದೃಷ್ಟಿಯಿಂದ ಕಾಣಬೇಕು. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಕೊಡುತ್ತೇನೆ. ದೇಶದಲ್ಲಿ ಈ ರೀತಿ ಅಧಿಕಾರಿಗಳ ದುರುಪಯೋಗವನ್ನು ಕಡಿಮೆ ಮಾಡಲು ಯಾವ ಅಧಿಕಾರಿಯೇ ಆಗಲಿ, ಸಣ್ಣವನಾಗಲಿ, ದೊಡ್ಡವನಾಗಲಿ, ಆ ಅಧಿಕಾರಿ ಯಾವ ಜಿಲ್ಲೆಯವನೋ, ಅವನನ್ನು ಅದೇ ಜಿಲ್ಲೆಯಲ್ಲಿ ಇಡಬೇಡಿ. ಹಾಗೆ ಇಟ್ಟರೆ ಅವನು ಒಂದಲ್ಲ ಒಂದು ಗುಂಪಿಗೆ ಸೇರಿಕೊಂಡು ಮಾಡಬಾರದ ಕೆಲಸ ಮಾಡುತ್ತಾನೆ. ಅಧಿಕಾರಿಗಳು ಅನೇಕ ಸಾರಿ ನಮ್ಮ ಹತ್ತಿರ ಬಂದು ಏನು ಸ್ವಾಮಿ, ನಿಮಗೆ ಓಟು ಕೊಡಲಿಲ್ಲವೇ, ಅದಕ್ಕಾಗಿ ನನಗೆ ಇಂಥ ಕಡೆ ಟ್ರಾನ್ಸ್‌ಫರ್ ಮಾಡಿಸಿಕೊಡಿರಿ ಎಂದು ಕೇಳುತ್ತಾರೆ, ಇಲ್ಲವೇ ಇಂಥಾ ಕಡೆ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಿಸಿರಿ ಎಂದು ಕೇಳುತ್ತಾರೆ. ಹೀಗಾಗಿ ವರ್ಗ ಮಾಡಿಸುವುದು, ಇಲ್ಲವೇ ಕ್ಯಾನ್ಸಲ್ ಮಾಡಿಸುವುದು ಈ ಕಾರ್ಯ ವ್ಯಾಪ್ತಿಯಲ್ಲೇ ಅವರು ಇರುತ್ತಾರೆ. 1950 ರಿಂದ 1957 ರವರೆಗೂ ಇಂಥಾ ಪ್ರಶ್ನೆಯೇ ಇರಲಿಲ್ಲ. ಆದುದರಿಂದ ನಾನು ಸಲಹೆ ಮಾಡುವುದು ಯಾವ ಅಧಿಕಾರಿಯೇ ಆಗಲಿ, ಯಾವ ಡಿಪಾರ್ಟ್‌ಮೆಂಟಿನವನೇ ಆಗಲಿ, ಅವನನ್ನು ಅವನ ಸ್ವಂತ ಜಿಲ್ಲೆಯಲ್ಲಿ ಇಡಬೇಡಿ. ಆಗ ಆಡಳಿತ ಸುಗಮವಾಗಿ ನಡೆಯುತ್ತದೆ. ಉದಾಹರಣೆಗೆ ಹೇಳುವುದಾದರೆ ಒಬ್ಬ ಸ್ಕೂಲ್ ಮೇಷ್ಟ್ರು ಓಟುಗಳನ್ನು ಕೊಡಬೇಕೆಂದು 7 ಚೀಟಿಗಳನ್ನು ಸ್ವಹಸ್ತಾಕ್ಷರದಿಂದ ಬರೆದಿದ್ದಾನೆ. ಇವನ್ನು ಅಧ್ಯಕ್ಷರಿಗೆ ಕೊಡುತ್ತೇನೆ.

(ಚೀಟಿಗಳನ್ನು ಅಧ್ಯಕ್ಷರಿಗೆ ಒಪ್ಪಿಸಿದರು)

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ (ವಿದ್ಯಾ ಶಾಖೆಯ ಉಪ ಮಂತ್ರಿಗಳು).—ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ತಿಳಿಸಿದ್ದೇನೆ. ಮಂತ್ರಿಗಳ ಆಫೀಸಿನಿಂದಲೂ, ಅಧಿಕಾರಿಗಳ ಆಫೀಸಿನಿಂದಲೂ ಅದನ್ನು ಪರಿಶೀಲಿಸುತ್ತಿದ್ದಾರೆಂದು ಜವಾಬು ಬಂದಿರುತ್ತದೆ. ಇದನ್ನು ಹೇಳಲು ಬಹಳ ವ್ಯಸನವಾಗುತ್ತದೆ. ಏನೋ ಜವಾಬು ಬರುತ್ತದೆಂದು ನಿರೀಕ್ಷಣೆ ಮಾಡಿಕೊಂಡರೆ ನಿಮ್ಮ ಕಾಗದ ಬಂತು. ಅದನ್ನು ಪರಿಶೀಲಿಸುತ್ತಾ ಇದ್ದೇವೆ ಎನ್ನುವ ಪ್ರಿಂಟು ಮಾಡಿ ಇಟ್ಟಿರುವ ಸಾಮಾನ್ಯ ಉತ್ತರವನ್ನು ಕೊಡುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್.—ಚುನಾವಣೆಯಾಗಿ ಎರಡು ತಿಂಗಳು ಮುಗಿಯಿತಲ್ಲಾ.

ಶ್ರೀ ಎಚ್. ಸಿದ್ದವೀರಪ್ಪ.—ಈ ಕಥೆ 19 ವರ್ಷದಿಂದಲೂ ಇದೆ. ಅವನು ಅದೇ ಊರಿನಲ್ಲೇ ಇನ್ನೂ ಇದ್ದಾನೆ.

[MR. SPEAKER in the Chair]

Non-Official Business

Mysore Sales Tax (Amendment) Bill, 1969.

(Leave to Introduced)

MR. SPEAKER.—Now, we will take up. Non-Official Business. The Private Members' Bill will be introduced by Sri Jwalanaiah.

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಮಾನ್ಯ ಸಭಾಧ್ಯಕ್ಷರೇ, ಮೈಸೂರು ಮಾರಾಟ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿಯು) ವಿಧೇಯಕ, 1969 —ಇದನ್ನು ಮಂಡಿಸಲು ಸಭೆಯ ಅನುಮತಿಯನ್ನು ಕೋರುತ್ತೇನೆ.

MR. SPEAKER.—The question is :

"That leave be granted to Sri H. B. Jwalanaiah to introduce the Mysore Sales Tax (Amendment) Bill, 1969.

The motion was adopted.

Mysore Sales Tax (Amendment) Bill, 1969.

(Introduction)

ಶ್ರೀ ಎಚ್. ಬಿ. ಜ್ವಾಲನಯ್ಯ.—ಮೈಸೂರು ಮಾರಾಟ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿಯು) ವಿಧೇಯಕ, 1969 — ಇದನ್ನು ಮಂಡಿಸುತ್ತೇನೆ.

MR. SPEAKER.—The Mysore Sales Tax (Amendment) Bill, 1969 is introduced.

Non-official Resolution *re*: change of name of Mysore State as "Kannada Nadu"

(Debate Continued)

MR. SPEAKER.—Further discussion on the motion moved by Sri L. Srikantaiah on 10th September 1968 on the question of changing the resent name of the Mysore State as 'Kannada Nadu'.

† ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಮಾನ್ಯ ಸಭಾಪತಿಗಳೇ, ಹಿಂದಿನ ಅಧಿವೇಶನದಲ್ಲಿ ಈ ನಿರ್ಣಯದ ಬಗ್ಗೆ ಅಪೂರ್ಣವಾಗಿ ಕೆಲವು ಮಾತುಗಳನ್ನು ಆಡಿ ನಿಲ್ಲಿಸಿದ್ದೆ. ಈ ಅಧಿವೇಶನದಲ್ಲಿ ಇದರ ವಿಷಯವಾಗಿ ಮುಂದುವರಿಯುವುದಕ್ಕೆ ಮುಂಚೆ ಕೆಲವು ಮಾತುಗಳನ್ನು ಆಡಬೇಕಾದ ಸಂದರ್ಭ ಬಂದಿದೆ. ಇದರ ಬಗ್ಗೆ ಪೂರ್ಣ ವಿವರವನ್ನು ಕೊಡುವುದು ಈಗ ಅವಶ್ಯಕವೇ ಎನ್ನತಕ್ಕ ಒಂದು ಸಂಶಯ ನನ್ನನ್ನು ಕಾಡಿಸುತ್ತಿದೆ. ಏಕೆಂದರೆ ಪತ್ರಿಕೆಗಳಲ್ಲಿ ಪ್ರಕಟವಾಗಿರತಕ್ಕ ಸುದ್ದಿಗಳನ್ನು ನೋಡಿದರೆ ಸರ್ಕಾರದವರು ಇದರ ಬಗ್ಗೆ ಈಗಾಗಲೇ ಒಂದು ನಿಲುವನ್ನು ತಾಳಿದ್ದಾರೆ ಎನ್ನುವ ಸಂಶಯ ನನ್ನ ಮನಸ್ಸಿಗೆ ಬರುತ್ತಿದೆ. ಬಹುಶಃ ಆ ವರದಿ ಎಷ್ಟರಮಟ್ಟಿಗೆ ನಿಜವೋ, ನಿಜವಲ್ಲವೋ ಅದನ್ನು ನಾನು ಹೇಳಲಾರೆ. ಯಾವುದೋ ಕೆಲವು ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕೂಡ ನಮ್ಮ ರಾಜ್ಯಕ್ಕೆ ಕರ್ಣಾಟಕ ಎನ್ನುವ ಹೆಸರೇ ಇಡಬೇಕೆಂದು ಹೇಳಿದರು ಎಂದು ಕೆಲವು ಪತ್ರಿಕೆಗಳಲ್ಲಿ ನಾನು ವರದಿಯನ್ನು ಓದಿದೆ. ಇದು ಬಹುಶಃ ಅವರ ವೈಯಕ್ತಿಕ ಅಭಿಪ್ರಾಯವೋ ಅಥವಾ ಸರ್ಕಾರದ ನಿಲುವನ್ನು ಆ ಮಾತುಗಳ ಮೂಲಕ ಸ್ಪಷ್ಟಪಡಿಸಿದರೋ ಎನ್ನುವ ಅಂಶ ಆ ವರದಿಯಲ್ಲಿ ಅಷ್ಟಾಗಿ ಖಚಿತವಾಗಿಲ್ಲ. ಇದು ಅವರ ವೈಯಕ್ತಿಕ ಅಭಿಪ್ರಾಯ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಚರ್ಚೆಗೆ ಮುನ್ನ ಅಥವಾ ಈ ಒಂದು ಮಾನ್ಯ ಸಭೆ ಇದರ ಬಗ್ಗೆ ಒಂದು ನಿಲುವನ್ನು ತಾಳುವುದಕ್ಕೆ ಮುನ್ನ ಅಧಿಕಾರದಲ್ಲಿರುವವರು, ಅದರಲ್ಲೂ ಮುಖ್ಯ ಮಂತ್ರಿಗಳ ಸ್ಥಾನದಲ್ಲಿರುವವರು ಈ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಅದರ ತೂಕ ಅನೇಕ ಸದಸ್ಯರ ಮೇಲೆ ಉಂಟಾಗುತ್ತದೆ ಎನ್ನುವ ಸಂಶಯವೂ ಕೂಡ ನನಗೆ ಬರುತ್ತಿದೆ. ಅದು ಹಾಗಿರಲಿ.

ಈ ವಿಷಯವನ್ನು ಮಾತನಾಡುವುದಕ್ಕೂ ಹೆಚ್ಚಾಗಿ ಈ ಒಂದು ವಿರಾಮ ಕಾಲದಲ್ಲಿ ಪತ್ರಿಕೆಗಳಿಗೆ ಓದುವವರು ಬರೆಯುವ ಪತ್ರಗಳ ಮುಖೇನ ನಾವು ಸಭೆಯಲ್ಲಿ ಚರ್ಚಿಸುವುದಕ್ಕಿಂತ ಹೆಚ್ಚಾಗಿ ಅನೇಕ ವಿಷಯಗಳು ವಾಚಕರ ಪತ್ರದಲ್ಲಿ ಮನದಟ್ಟಾಗಿವೆ. ಈ ರಾಜ್ಯದ ಹೆಸರು ಯಾವುದು ಇರಬೇಕು ಎನ್ನುವುದರ ಬಗ್ಗೆ ಬಹಳವಾಗಿ ಮತ್ತು ವಿಪುಲವಾಗಿ ವಾಚಕರ ಪತ್ರಗಳ ಮೂಲಕ ಚರ್ಚೆ ನಡೆದಿದೆ ಮತ್ತು ಕೆಲವು ಪತ್ರಿಕೆಗಳು ಇದರ ಬಗ್ಗೆ ಕೆಲವು ಸಂಪಾದಕೀಯಗಳನ್ನೂ ಬರೆದಿದ್ದಾರೆ. ಇದರ ಬಗ್ಗೆ ಅವರಿಗೆ ನಾನು ಚಿರಋಣಿಯಾಗಿದ್ದೇನೆ. ಈ ಚರ್ಚೆ ಪ್ರಾರಂಭವಾದ ನಂತರ ಅನೇಕರು ಈ ವಿಷಯವನ್ನು ತಿಳಿದು, ಆಳವಾಗಿ ಅಭ್ಯಾಸ ಮಾಡಿ ಮುಖ್ಯವಾಗಿ ಕೆಲವು ಕಾಗದಗಳನ್ನು ವಾಚಕರ ಪತ್ರದಲ್ಲಿ ಬರೆದು ಸಾರ್ವಜನಿಕರ ಮುಂದೆ ಇಟ್ಟಿದ್ದಾರೆ. ಕೆಲವರು ಪರವಾಗಿಯೂ ಸಹ ಬರೆದಿದ್ದಾರೆ, ಕೆಲವರು ವಿರೋಧವಾಗಿಯೂ ಸಹ ಬರೆದಿದ್ದಾರೆ. ಅವರ ಹೆಚ್ಚಿನ ಅಭಿಪ್ರಾಯ 'ಕನ್ನಡ ನಾಡು' ಎಂದು ಇರುವುದೇ ಸೂಕ್ತ ಎಂದು ವಾಚಕರ ಪತ್ರಗಳನ್ನು ಓದುವುದರ ಮೂಲಕ ನನಗೆ ಅರ್ಥವಾಯಿತು. ಅದೂ ಹಾಗಿರಲಿ. ಎಲ್ಲೆಲ್ಲಿ ಅವಶ್ಯಕವೋ ಅಲ್ಲಿ ಕೆಲವು ಮಾನ್ಯ ವಾಚಕರು ಬರೆದಿರುವ ಪತ್ರಗಳ ಬಗ್ಗೆ ಅಲ್ಲಲ್ಲಿ ರೆಫರೆನ್ಸ್ ಕೊಡಬೇಕಾಗುತ್ತದೆ. ಅಂಥ ಸಮಯ ಸಂದರ್ಭ ಬಂದಾಗ ಆ ಅವಕಾಶವನ್ನು ಉಪಯೋಗಿಸಿಕೊಂಡು ಅವನ್ನು ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಹಿಂದೇ ಹೇಳಿದುದನ್ನು ಜ್ಞಾಪಿಸಿಕೊಳ್ಳುವುದಾದರೆ ಒಟ್ಟು ದೇಶದಲ್ಲಿ, ಆ ರಾಜ್ಯದ ಹೆಸರನ್ನು ಆ ದೇಶದ ಜನರನ್ನು ಕರೆಯುವ ಹೆಸರಿನಿಂದಾಗಲೀ ಅಥವಾ ಆ ಭಾಗದ ಅಥವಾ ಪ್ರದೇಶದ ಜನರು ಮಾತನಾಡತಕ್ಕ ಭಾಷೆಯಿಂದಾಗಲೀ ಕರೆಯುವುದಕ್ಕೇ ಬಹಳಮಟ್ಟಿಗೆ ಪ್ರೋತ್ಸಾಹ ಸಿಕ್ಕುತ್ತಿದೆ. ಹೋದ ಬಾರಿ ನಾನು ಉದಾಹರಣೆಯನ್ನು ಕೊಟ್ಟ ಹಾಗೆ ಯಾವ ಪ್ರದೇಶದಲ್ಲಿ ತಮಿಳು ಭಾಷೆ ಮಾತೃಭಾಷೆಯನ್ನಾಗಿ ಉಳ್ಳತಕ್ಕ ಜನರು ತಮಿಳರು ಎಂದು ಕರೆದುಕೊಂಡರೋ ಹಾಗೆಯೇ ಆ ದೇಶವನ್ನು ತಮಿಳುನಾಡು ಎಂದು ಅವರು ಕರೆದರು. ಇದಕ್ಕೆ ಕೇಂದ್ರ ಸಂಸತ್ತಿನಿಂದ ಅನುಮತಿ ದೊರೆತು ಆ ರಾಜ್ಯವನ್ನು ಮದ್ರಾಸ್ ರಾಜ್ಯ ಎಂಬುದಕ್ಕೆ ಬದಲಾಗಿ ತಮಿಳುನಾಡು ಎನ್ನುವ ಹೆಸರಿನಿಂದ ಕರೆಯುವುದಕ್ಕೆ ಆರಂಭವಾಗಿದೆ. ಈ ಒಂದು ಚಳುವಳಿ ಏನಿದೆ, ಆ ಶಬ್ದವನ್ನು ಉಪಯೋಗಿಸುವುದಾದರೆ ಈ ಚಳುವಳಿ ಎಲ್ಲ ಪ್ರದೇಶಗಳಿಗೂ ಕೂಡ ಈಗ ಹಬ್ಬುತ್ತಿದೆ. ಈ ಚಳುವಳಿಯ ಒಂದು ಉತ್ಸಾಹದಿಂದಲೇ, ಒಂದು ಸ್ಫೂರ್ತಿಯಿಂದಲೇ ನಾನೂ ಸಹ ನಮ್ಮ ದೇಶವನ್ನು ಕೂಡ ನಮ್ಮ ದೇಶದ ಜನರು ಯಾವ ಭಾಷೆಯನ್ನು ಮಾತನಾಡುತ್ತಿದ್ದಾರೆಯೋ ಅಥವಾ ನಮ್ಮ ದೇಶದ ಜನರನ್ನು ಸಾಮಾನ್ಯವಾಗಿ ಕನ್ನಡಿಗರು ಎಂಬತಕ್ಕ ಯಾವ ಶಬ್ದದಿಂದ ಎಲ್ಲರೂ ಕರೆಯುವುದಕ್ಕೆ ಇಚ್ಛೆ ಪಡುತ್ತಾರೆಯೋ ಅದೇ ಶಬ್ದದ ಮೂಲಕ ಈ ರಾಜ್ಯಕ್ಕೆ ನಾಮಕರಣ ಮಾಡುವುದು ಉತ್ತಮ ಎನ್ನುವ ಆಲೋಚನೆಯಿಂದ ಈ ನಿರ್ಣಯವನ್ನು ತಂದಿದ್ದೇನೆ. ಇದರ ಬಗ್ಗೆ ವಿಪುಲವಾಗಿ ಈ ರಾಜ್ಯದ ಹಿಂದಿನ ಇತಿಹಾಸವನ್ನು ಸಂಕ್ಷಿಪ್ತವಾಗಿ ಎಲ್ಲೆಲ್ಲಿ ಅತ್ಯಾವಶ್ಯಕವೋ ಅಲ್ಲಲ್ಲಿ ಓದಿ ಹೇಳಿ ಮುಂದೆ ಬಂದೆ. ಈಗ ಈ ದೇಶಾದ್ಯಂತ ಕ್ರಾಂತಿಯೊಂದು

(ಶ್ರೀ ಎಲ್. ಶ್ರೀಕಂಠಯ್ಯ)

ರಾಜ್ಯದ ಹೆಸರನ್ನು ಆ ಪ್ರದೇಶದ ಜನರು ಮಾತನಾಡತಕ್ಕ ಭಾಷೆಯಿಂದಾಗಲೀ ಅಥವಾ ಆ ಮಾತೃಭಾಷೆಯನ್ನುಳ್ಳ ಆ ಜನರ ಹೆಸರಿನಿಂದಾಗಲೀ ಕರೆಯುವುದು ವಾಡಿಕೆಯಾಗಿರುವಾಗ ಈ ರಾಜ್ಯಕ್ಕೆ 'ಕನ್ನಡ ನಾಡೇ' ಬಹಳ ಸೂಕ್ತವಾದ ಹೆಸರು ಎಂದು ಪುನಃ ಒತ್ತಿ ಹೇಳಬೇಕಾಗಿದೆ.

4-00 P.M.

ಈ ಸಂದರ್ಭದಲ್ಲಿ ಕೆಲವರು ಇದು ಅಷ್ಟು ಸೂಕ್ತವಾದ ಹೆಸರಾಗಿ ಕಾಣುವುದಿಲ್ಲ, ಕರ್ಣಾಟಕ ಎಂಬ ಹೆಸರು ಬರಬೇಕು, ಕರ್ನಾಟಕ ಎಂಬ ಹೆಸರಿಡಬೇಕು ಎಂದು ವಾದ ಮಂಡಿಸಿದ್ದಾರೆ. ಈ ಒಂದು ವಾದಕ್ಕೆ ಪುಷ್ಟಿ ಕೊಡುವಹಾಗೆ ಕೆಲವರು 3-4 ಕಾರಣಗಳನ್ನು ಆಗಾಗ್ಯೆ ಮುಂದೊಡ್ಡುತ್ತಿದ್ದಾರೆ. ಆ ಕಾರಣಗಳನ್ನು ಕೂಲಂಕಷವಾಗಿ ವಿಮರ್ಶೆಮಾಡಿ ನಾನು ಉತ್ತರವನ್ನು ಸಹ ಕೊಡಬೇಕಾಗಿದೆ. ಈ ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರು ಸೂಕ್ತವಲ್ಲ ಎಂದು ಹೇಳಿ ಆ ಸಲಹೆಯನ್ನು ನಾನು ವಿರೋಧಿಸಬೇಕಾಗಿದೆ. ಕರ್ಣಾಟಕ ಎಂದು ಕೆಲವರೂ ಕರ್ನಾಟಕ ಎಂದು ಮತ್ತೆ ಕೆಲವರೂ ಈ ರಾಜ್ಯಕ್ಕೆ ನಾಮಕರಣ ಮಾಡಬೇಕೆಂದು ಹೇಳುತ್ತಿದ್ದಾರೆ, 'ನ' ಮತ್ತು 'ಣ' ಎಂಬ ಎರಡಕ್ಷರಗಳ ಬಗ್ಗೆ ಯುದ್ಧ ಈಗಲೂ ನಡೆಯುತ್ತಿದೆ. 30 ವರ್ಷಗಳಿಂದ ಯುದ್ಧ ನಡೆದರೂ ಯಾರೂ ಗೆದ್ದಿಲ್ಲ. ಕನ್ನಡನಾಡು ಎಂದು ಕರೆದರೆ ಈ ಗಲಾಟೆಗೆ ಅವಕಾಶವಾಗುವುದಿಲ್ಲ. ಈ ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಕೂಡ ಬಹಳ ವರ್ಷಗಳ ಹಿಂದೆಯೇ ಒಪ್ಪಿದೆ. ಕರ್ಣಾಟಕ ಪ್ರೊವಿನ್‌ಷಿಯಲ್ ಕಾಂಗ್ರೆಸ್ ಕಮಿಟಿಯು ರಾಷ್ಟ್ರೀಯ ಚಳವಳಿ ಕಾಲದಲ್ಲಿ ಆ ಹೆಸರು ಬಂದಿದೆ ಎಂದು ಉದಾಹರಣೆ ಕೊಡುತ್ತಾರೆ. ಇನ್ನು ಕೆಲವರು ಅಂದರೆ ರಾಜಕೀಯ ಪಕ್ಷಗಳವರು ಸಹ ಕರ್ಣಾಟಕ ಪಿ. ಎಸ್. ಪಿ., ಕರ್ಣಾಟಕ ಎಸ್. ಎಸ್. ಪಿ., ಕರ್ಣಾಟಕ ಕಮ್ಯೂನಿಸ್ಟ್ ಪಕ್ಷ ಎಂದು ಹೇಳಿಕೊಂಡಿದ್ದಾರೆ. ಹೀಗೆ ಅಖಿಲ ಭಾರತ ರಾಜಕೀಯ ಪಕ್ಷಗಳು ಮತ್ತು ಅಖಿಲಭಾರತ ಕಾಂಗ್ರೆಸ್ ಸಹ ಕರ್ಣಾಟಕ ಎಂಬ ಹೆಸರನ್ನು ಒಪ್ಪಿರುವಾಗ ನಾವೇಕೆ ವಿರೋಧಿಸಬೇಕು ? ಅದು ಬಹಳ ಮೇಲ್ಮಟ್ಟದವರಿಂದ ಅನುಮೋದಿಸಲ್ಪಟ್ಟಿದೆ ಎಂಬ ವಾದ ಕೆಲವು ಕಡೆ ಇದೆ. ಅದಕ್ಕೆ ನಾನು ಉತ್ತರ ಕೊಡುವುದಿಷ್ಟೇ: ಕೆಲವು ಐತಿಹಾಸಿಕ ಕಾರಣಗಳಿವೆ. ಮೊದಲನೆಯ ಕಾರಣವೇನೆಂದರೆ, ನನಗೆ ಗೊತ್ತಿರುವಹಾಗೆ ರಾಷ್ಟ್ರೀಯ ಚಳವಳಿ ನಡೆದಾಗ ಎಲ್ಲೆಲ್ಲಿ ಕನ್ನಡ ಮಾತನಾಡುತ್ತಿದ್ದರೋ ಆ ಭಾಗದ ಜನರೆಲ್ಲಾ ಒಂದೇ ರಾಜ್ಯದ ಆಶ್ರಯದಲ್ಲಿರಲಿಲ್ಲ. ಕೆಲವು ಭಾಗದ ಜನರು ಮೈಸೂರು ರಾಜ್ಯದ ಆಶ್ರಯದಲ್ಲಿ, ಇನ್ನು ಕೆಲವರು ಮದ್ರಾಸು ರಾಜ್ಯದ ಆಶ್ರಯದಲ್ಲಿ, ಕೆಲವರು ಮುಂಬಯಿ ರಾಜ್ಯದ ಆಶ್ರಯದಲ್ಲಿ, ಮತ್ತೆ ಕೆಲವರು ಹೈದರಾಬಾದು ರಾಜ್ಯದ ಆಶ್ರಯದಲ್ಲಿ ಇದ್ದರು. ಅದರಲ್ಲಿ ಮೈಸೂರಿನಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಾಗಿತ್ತು. ರಾಷ್ಟ್ರೀಯ ಚಳವಳಿ ಆರಂಭವಾದಾಗ, ಭಾರತವು ಸ್ವತಂತ್ರ ರಾಷ್ಟ್ರವಾದ ಮೇಲೆ ಭಾಷಾ ಆಧಾರದಮೇಲೆ ರಾಜ್ಯ ವಿಭಜನೆಯಾಗಬೇಕು ಎಂಬುದನ್ನು ಕಾಂಗ್ರೆಸ್ ಅನುಮೋದಿಸಿತು. ರಾಷ್ಟ್ರೀಯ ಚಳವಳಿಯಾದಮೇಲೆ ಬೇರೆ ಬೇರೆ ಭಾಷಾವಾರು ಪ್ರಾಂತಗಳಾದುವು. ಕರ್ಣಾಟಕ ಕಾಂಗ್ರೆಸ್ ಕಮಿಟಿಯು ಒಂದು ಹೆಸರಿನ್ನಿಟ್ಟಿತು. ಇದರಲ್ಲಿ ಒಂದು ವಿಷಯ. ರಾಷ್ಟ್ರೀಯ ಚಳವಳಿ ಮೈಸೂರು ರಾಜ್ಯಕ್ಕೆ ಅನ್ವಯವಾಗುವುದಿಲ್ಲ. ಮೈಸೂರಿನ ಪ್ರಜೆಗಳು ಅವರು ಸ್ವತಂತ್ರರಾಗಬೇಕೆಂದು ಇಷ್ಟಪಟ್ಟರೂ ಅವರು ಪ್ರತ್ಯೇಕ ಚಳವಳಿ ಮಾಡಲಿಲ್ಲ. ಎಲ್ಲಿ ಅವಶ್ಯಕತೆಯಿದೆಯೋ ಅಲ್ಲಿ ಸಲಹೆ ಕೊಡುತ್ತೇವೆಂದು ರಾಷ್ಟ್ರೀಯ ಕಾಂಗ್ರೆಸ್ ಮೈಸೂರನ್ನು ಬಿಟ್ಟಿತು. ಈ ಕಾರಣದಿಂದ ರಾಷ್ಟ್ರೀಯ ಚಳವಳಿ ಆದಮೇಲೆ ಮೈಸೂರು ಕಾಂಗ್ರೆಸ್ ಕಮಿಟಿಯು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಾಗಿ ಒಂದು ಪ್ರತ್ಯೇಕ ಸಂಸ್ಥೆಯಾಯಿತು. ಇದನ್ನು ಒತ್ತಿ ಹೇಳುತ್ತೇನೆ. ರಾಷ್ಟ್ರೀಯ ಚಳವಳಿ ನಡೆದಾಗ ಮೈಸೂರು ರಾಜ್ಯದಲ್ಲಿ ಪ್ರತ್ಯೇಕ ಚಳವಳಿ ಆರಂಭವಾಯಿತು. ಈ ಒಂದು ಹಿನ್ನೆಲೆಯಿರುವಾಗ ವಿಭಜನೆ ಮಾಡುವುದಕ್ಕೆ ಕರ್ಣಾಟಕ ಕಾಂಗ್ರೆಸ್ ಕಮಿಟಿಗೆ ರೆಫರ್ ಮಾಡಿದರೇ ಹೊರತು ಕರ್ಣಾಟಕ ಕಾಂಗ್ರೆಸ್ ಕಮಿಟಿಗೂ ಮೈಸೂರು ರಾಜ್ಯಕ್ಕೂ ಯಾವ ವಿಧವಾದ ಸಂಬಂಧವೂ ಇಲ್ಲ. ಈ ಕರ್ಣಾಟಕ ಕಾಂಗ್ರೆಸ್ ಕಮಿಟಿಗೂ ಮೈಸೂರು ರಾಜ್ಯಕ್ಕೂ ಯಾವ ವಿಧವಾದ ಸಂಬಂಧವೂ ಇರಲಿಲ್ಲ. ಇದೇ ರೀತಿಯಲ್ಲಿ ಅಖಿಲಭಾರತದ ಪಕ್ಷಗಳು ತಮ್ಮ ಪಕ್ಷಗಳನ್ನು ಸ್ಥಾಪಿಸುವಾಗ ಮೈಸೂರು ರಾಜ್ಯವನ್ನು ಬಿಟ್ಟುವು. ಈ ಒಂದು ರೂಢಿಯಿಂದ ಅಖಿಲಭಾರತದಲ್ಲಿ ಪಕ್ಷಗಳನ್ನು ಸ್ಥಾಪಿಸುವಾಗ ಕರ್ಣಾಟಕ ಪ್ರಜಾ ಸೋಷಿಯಲಿಸ್ಟ್ ಪಕ್ಷ, ಕರ್ಣಾಟಕ ಕಮ್ಯೂನಿಸ್ಟ್ ಪಕ್ಷ ಎಂದು ಕರೆದುಕೊಂಡು ಕರ್ಣಾಟಕ ಎಂದು ಪಕ್ಷದ ಹೆಸರಿನ ಮುಂದೆ ಸೇರಿಸಿಕೊಳ್ಳುವ

ಸಂಪ್ರದಾಯವನ್ನು ಮುಂದುವರಿಸಿದರು. ಮುಖ್ಯವಾದ ಅಂಶ ನಾನು ಗಮನಿಸಬೇಕಾದ್ದು ಎ.ಐ.ಸಿ.ಸಿ. ಆಗಲಿ ಅಥವಾ ಇತರ ರಾಜಕೀಯ ಪಕ್ಷಗಳಾಗಲಿ ಕರ್ಣಾಟಕ ಎಂಬ ಹೆಸರನ್ನು ಹೇಳುವಾಗ ಮೈಸೂರು ರಾಜ್ಯಕ್ಕೆ ಒಳಪಟ್ಟ ಕೆಲವು ಪ್ರದೇಶಗಳನ್ನು ಆ ಹೆಸರಿನ ವ್ಯಾಪ್ತಿಗೆ ತರಲಿಲ್ಲ. ನಮ್ಮ ರಾಜ್ಯಕ್ಕೆ ಮೈಸೂರು ರಾಜ್ಯ ಎಂಬ ಹೆಸರಿತ್ತು. ಕರ್ಣಾಟಕ ಎಂಬ ಹೆಸರಿರಲಿಲ್ಲ. ಒಂದು ಐತಿಹಾಸಿಕ ಕಾರಣದಿಂದಾಗಿ ಕರ್ಣಾಟಕ ಎಂಬ ಹೆಸರು ಸ್ವಲ್ಪಮಟ್ಟಿಗೆ ಪ್ರಚಾರಕ್ಕೆ ಬಂತೇ ಎಂಬ ವಿಚಾರದಲ್ಲಿ ಸಂಶಯವಿದೆ. ಕರ್ಣಾಟಕ ಎಂದು ನಾಮಕರಣ ಮಾಡಿದವರು ಯಾರು ? ಇದರ ಬಗ್ಗೆ ನಾವು ಕೂಲಂಕಷವಾಗಿ ಇತಿಹಾಸವನ್ನು ನೋಡಿದರೆ ಬಹಳ ವರ್ಷಗಳ ಹಿಂದೆ ಕರ್ಣಾಟಕ ಎಂಬ ಮೂಲ ಶಬ್ದವಿತ್ತು. ಅದರಿಂದ ಕರ್ಣಾಟಕ ಎಂಬ ಶಬ್ದ ಉತ್ಪನ್ನವಾಯಿತು. ಈ ಮೂಲಶಬ್ದ ಕರ್ಣಾಟಕವಾಗಿ ಕನ್ನಡ ಎಂಬ ಶಬ್ದ ಬಂದಿದೆ, ಇದಕ್ಕೆ ಕಿಟಲ್ ಡಿಕ್ಷನರಿ ಅಥಾರಿಟಿ. ಅದನ್ನು ರೆಫರ್ ಮಾಡಿದರೆ ಗೊತ್ತಾಗುವುದು. ಕರ್ಣಾಟಕ ಎಂಬುದು ಮೂಲ ಶಬ್ದ.

†ಶ್ರೀ ಎಚ್. ಎಂ. ಚನ್ನಬಸಪ್ಪ (ಪಿರಿಯಪಟ್ಟಣ).—ಒಂದು ಕ್ಲಾರಿಫಿಕೇಸನ್ ಬೇಕಾಗಿದೆ. ಈ ಮೈಸೂರನ್ನು ಕನ್ನಡನಾಡು ಎಂದು ಕರೆಯಬೇಕು, ಕರ್ಣಾಟಕ ಎನ್ನಬಾರದು ಎಂದು ಹೇಳಿ ಅದಕ್ಕೆ ಐತಿಹಾಸಿಕ, ಚಾರಿತ್ರಿಕ ಕಾರಣ ಇತ್ಯಾದಿಗಳನ್ನು ಕೊಡುತ್ತಿದ್ದಾರೆ. ಆದರೆ ಸಾಮಾನ್ಯ ಜನರಿಗೆ ಯಾವುದು ಮುಖ್ಯ ಎಂಬುದನ್ನು ತಿಳಿಸಬೇಕೆಂದು ಅರಿಕೆಮಾಡುತ್ತಿದ್ದೇನೆ. ಮೈಸೂರಿಗೆ ಕನ್ನಡನಾಡು ಅಥವಾ ಕರ್ಣಾಟಕ ಎಂದು ಹೆಸರಿಡುವುದರಿಂದ ಸಾಮಾನ್ಯ ಜನರಿಗೆ ದೊರೆಯುವ ಪ್ರತಿಫಲವೇನು ಎಂಬುದನ್ನು ವಿಚಾರ ಮಾಡಬೇಕು. ಐತಿಹಾಸಿಕ ಮತ್ತು ಚಾರಿತ್ರಿಕ ಕಾರಣ ಕೊಡುತ್ತಾ ಹೋದರೆ ಜನರಿಗೆ ಹೊಟ್ಟೆ ತುಂಬುವುದಿಲ್ಲ. ಮೈಸೂರು ಎಂಬ ಹೆಸರೇ ಇದ್ದರೆ ಅನಾನುಕೂಲವೇನು, ಸಾಮಾನ್ಯ ಜನರಿಗೆ ತೊಂದರೆಯೇನು ? ಹೆಸರು ಬದಲಾಯಿಸಿದರೆ ಲಂಚ ಕಡಮೆಯಾಗುವುದೇ ? ಬೇರೆ ಏನಾದರೂ ಅನುಕೂಲವಾಗುವುದೇ ? ಕನ್ನಡನಾಡು, ಕರ್ಣಾಟಕ, ಮೈಸೂರು ಎಂಬ 3 ಹೆಸರುಗಳಲ್ಲಿ ಯಾವುದನ್ನಿಟ್ಟರೆ ಜನರು ಸತ್ಯದಿಂದ ಕೆಲಸ ಮಾಡುತ್ತಾರೆ, ಲಂಚಗುಳಿತನ ಕಡಮೆಯಾಗುವುದು, ಕೃಷಿ ಉತ್ಪತ್ತಿ ಹೆಚ್ಚುವುದು, ಕೈಗಾರಿಕೆ ಬೆಳೆಯುವುದು, ಉತ್ಪತ್ತಿ ಸರಿಯಾಗಿ ಹಂಚಿಕೆಯಾಗುವುದು, ನಿರುದ್ಯೋಗ ಸಮಸ್ಯೆ ನಿವಾರಣೆಯಾಗುವುದು ಎಂಬುದನ್ನು ಮುಖ್ಯವಾಗಿ ಹೇಳಬೇಕು. ಮುಖ್ಯವಾಗಿ ಸಾಮಾನ್ಯ ಜನತೆಗೆ ಬೇಕಾಗಿರುವುದು ಇದು. ನಾವು ನೀವು ಹೇಳುವುದನ್ನು ಒಪ್ಪುವುದಕ್ಕೆ ಸಿದ್ಧವಾಗಿದ್ದೇವೆ, ಯಾವ ಹೆಸರಿನಿಂದ ಬಹಳ ಅನುಕೂಲ ಎಂಬುದನ್ನು ಹೇಳಿದರೆ ನಾವು ಅದಕ್ಕೆ ಓಟು ಮಾಡುತ್ತೇವೆ.

ಸಾಮಾನ್ಯವಾಗಿ ಜನರ ದೃಷ್ಟಿ, ಐತಿಹಾಸಿಕ ಕಾರಣಗಳು ಏನಾದರೂ ಇರಲಿ ಚಾರಿತ್ರಿಕ ಕಾರಣಗಳು ಏನೇ ಇರಲಿ ಜನಸಾಮಾನ್ಯರ ಜನಜೀವನ ಉತ್ತಮವಾಗಿ ಸುಖವಾಗುವುದಾದರೆ ಅದರ ಹಿನ್ನೆಲೆಯಲ್ಲಿ ಮಾಡುವುದು ಒಳ್ಳೆಯದು. ಆದ್ದರಿಂದ ತಮ್ಮಲ್ಲಿ ಅರಿಕೆ ಮಾಡುವುದೇನೆಂದರೆ ಕರ್ಣಾಟಕ ಅನ್ನುವುದು ಇದ್ದರೆ ಕೃಷ್ಣಾ ಪ್ರಾಜೆಕ್ಟು ಆಗುತ್ತದೆಯೇ ? ಅಥವಾ ಕನ್ನಡ ನಾಡು ಅಂತ ಆದರೆ ಅದರಿಂದ ಕಾವೇರಿ ಕೃಷ್ಣಾ ಪ್ರಾಜೆಕ್ಟುಗಳು ಆಗಿ ಧನಧಾನ್ಯ ಸಮೃದ್ಧಿಯಾಗಿ ಒದಗುತ್ತದೆಯೇ ? ಆ ರೀತಿ ಆಗುವುದಾದರೆ ತಾವು ಹೇಳುವುದನ್ನು ಯಾವುದು ಬೇಕಾದರೂ ಒಪ್ಪಿಕೊಳ್ಳೋಣ. ಜನಸಾಮಾನ್ಯರ ದೃಷ್ಟಿಯಿಂದ ಇದನ್ನು ಮಾಡಬೇಕೇ ಹೊರತು ಕೇವಲ ಒಂದು ಭ್ರಾಂತಿಗಾಗಿ ಈ ಒಂದು ಹೆಸರಿನ ಬಗ್ಗೆ ಹೊಡೆದಾಡಬೇಕಾಗಿಲ್ಲ. ಈ ಬಗ್ಗೆ ಸಾಕಾದಷ್ಟು ಮೆಟೀರಿಯಲ್ಸ್ ನಮಗೆ ತಾವು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

† ಶ್ರೀ ಬಿ. ಪಿ. ಗಂಗಾಧರ್ (ತುಮಕೂರು). —ಶ್ರೀಮಾನ್ ಚನ್ನಬಸಪ್ಪನವರ ದೃಷ್ಟಿಕೋಣ ಒಂದು ರೀತಿಯಲ್ಲಿ ಇದೆ. ಹೆಸರಿನಲ್ಲೇನಿದೆ ಎಂದು ಅನ್ನುವುದು ಅಷ್ಟು ಸುಲಭವಲ್ಲ. ನನ್ನನ್ನು ಗಂಗಾಧರ ಅಂತ ಕರೆಯಬೇಕಾದರೆ, ಅವರನ್ನು ಚನ್ನಬಸಪ್ಪ ಅಂತ ಕರೆಯಬೇಕಾದರೆ ತಂದೆ ತಾಯಿಗಳು ಏನೋ ಒಂದು ಅಭಿಪ್ರಾಯ ಇಟ್ಟುಕೊಂಡಿರುತ್ತಾರೆ. ಅದನ್ನು ಬಿಟ್ಟು ಕಲ್ಲು, ಬಂಡೆ ಅಂತ ಕರೆಯಬಹುದಾಗಿತ್ತಲ್ಲ? ಮಣ್ಣು ಮರ ಅಂತ ಏಕೆ ಕರೆಯಲಿಲ್ಲ ! ಬಹುಶಃ ಅವರು ಹೇಳಿರುವ ರೀತಿಯಲ್ಲಿ ಇದನ್ನು ಅವರು ಅಷ್ಟು ಸೀರಿಯಸ್ ಆಗಿ ತೆಗೆದುಕೊಂಡಿಲ್ಲ ಎಂದು ಅನಿಸುತ್ತದೆ. ಅವರು ಬೇಕಾದಷ್ಟು ಮಾಹಿತಿ ತಿಳಿದುಕೊಂಡಿದ್ದಾರೆ, ಇದನ್ನು ಅಧ್ಯಯನ ಮಾಡಿದ್ದಾರೆ ಆ ಬಗ್ಗೆ ನಾನು ಏನೂ ಹೇಳುತ್ತಿಲ್ಲ. ತಾವು ಆದಷ್ಟು ಸಂಕ್ಷೇಪವಾಗಿ ಹೇಳಿ ಎಂದು ಹೇಳಿದಿರಿ, ನಿಮ್ಮ ಉದ್ದೇಶ ಎಲ್ಲರಿಗೂ ಅವಕಾಶ ಸಿಕ್ಕಲಿ ಎಂಬುದಾಗಿದೆ, ಆದರೆ ಈ ರಾಜ್ಯದ ಹೆಸರನ್ನು ಪುನರ್‌ನಾಮಕರಣ ಮಾಡಬೇಕೆಂದು ಹೇಳುತ್ತಾ ಇರತಕ್ಕ ಈ ವಿಷಯ ಬಹಳ ಮುಖ್ಯವಾದದ್ದು, ಗಹನವಾದದ್ದು ಎಂದು ಮತ್ತೆ ಹೇಳಬೇಕಾಗಿಲ್ಲ, ಇಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರಲ್ಲಿ ಏನು ಮಾಹಿತಿ ಇದೆ ಅದನ್ನು ಪೂರ್ಣವಾಗಿ ಸಭೆಯ ಮುಂದಿಡಲು ಅವರಿಗೆ ಅವಕಾಶ ಕೊಡಬೇಕು. ಅವರು ಹೆಚ್ಚು

(ಶ್ರೀ ಬಿ. ಪಿ. ಗಂಗಾಧರ್)

ವೇಳೆ ತೆಗೆದುಕೊಂಡರೂ ಚಿಂತೆ ಇಲ್ಲ. ಬೇಕಾದರೆ ಇನ್ನೂ ಒಂದು ದಿವಸ ಇದಕ್ಕೆ ಅವಕಾಶ ಕೊಡಬಹುದು, ಸದಸ್ಯರೆಲ್ಲರಿಗೂ ಮನದಟ್ಟಾಗುವ ರೀತಿಯಲ್ಲಿ ಹೇಳಲು ವಿಷಯಗಳನ್ನು ಸಭೆಯ ಮುಂದೆ ಇಡಲು ಅವಕಾಶ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

†ಶ್ರೀ ಎರ್. ಶ್ರೀಕಂಠಯ್ಯ.—ಮಾನ್ಯ ಚನ್ನಬಸಪ್ಪನವರ ವಾಕ್‌ಸರಣಿಯನ್ನು ಕೇಳಿದೆ. ನಾನು ಕೈಗಾರಿಕೆಗಳು ಆಗುವುದು ಬೇಡ ಅಂತ ಹೇಳಲಿಲ್ಲ, ಕೃಷ್ಣಾ ಪ್ರಾಜೆಕ್ಟ್ ಆಗುವುದು ಬೇಡ ಎಂದು ಹೇಳಲಿಲ್ಲ, ದೇಶದಲ್ಲಿ ನಿರುದ್ಯೋಗ ಇರಬೇಕೆಂದು ಹೇಳಲಿಲ್ಲ, ಅಂತಹ ಎಲ್ಲ ಸಕಲ ಸಂಪತ್ತು, ಸಾಧ್ಯತೆಗಳೂ ಈ ದೇಶದ ಜನತೆಗೆ ಒದಗಲಿ ಎಂದು ನಾನು ಹೇಳುತ್ತೇನೆ. ಚನ್ನಬಸಪ್ಪನವರ ವಾದದಲ್ಲಿ ಒಂದು ಅಂಶ ಇದೆ. ಜನ ಯಾವುದು ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೋ ಅದಕ್ಕೆ ಮತ ಕೊಡುತ್ತೇನೆ ಎಂದು ಹೇಳಿದರು, ಕೇವಲ ಹೆಸರಿನಿಂದ ಭ್ರಾಂತಿಪಡದೆ ಯಾವ ಹೆಸರೇ ಇರಲಿ ಮುಖ್ಯವಾಗಿ ನಮಗೆ ಸುಖ ಒದಗುತ್ತದೆ, ನಮ್ಮ ಕಾರ್ಯಕ್ರಮಗಳು ನೆರವೇರುತ್ತವೆ ಅದನ್ನು ಎದುರು ನೋಡುವುದು ಸ್ವಾಭಾವಿಕ, ನಿಜವಾದ ಮಾತು. ನಮಗೆ ಜೀವನದಲ್ಲಿ ಕೇವಲ ಹಣ ಒಂದೇ ಮುಖ್ಯವಲ್ಲ, ಬೇಕಾದಷ್ಟು ನಾವು ಸಂಪಾದನೆ ಮಾಡುತ್ತೇವೆ, ಕಳೆಯುತ್ತೇವೆ, ಮನೆಗಳನ್ನು ಕಟ್ಟುತ್ತೇವೆ, ಅಷ್ಟಾದರೂ ಕೂಡ ಜೀವನದಲ್ಲಿ ಅನೇಕ ಭ್ರಾಂತಿಗಳು ಇರುತ್ತವೆ, ಬಹುಶಃ ಚನ್ನಬಸಪ್ಪನವರಿಗೂ ಕೂಡ ಕೆಲವು ಭ್ರಾಂತಿಗಳು ಇವೆ. ಆ ಭ್ರಾಂತಿಗಳು ಯಾವುವು ಎಂದರೆ ಸಾಮಾನ್ಯವಾಗಿ ಒಂದು ಮಗು ಹುಟ್ಟಿದರೆ ಅದಕ್ಕೆ ಸಾಧ್ಯವಾದಮಟ್ಟಿಗೂ ಒಂದು ಒಳ್ಳೆಯ ಹೆಸರು ಇಡುವುದು—ಶ್ರೀಮಾನ್ ಚನ್ನಬಸಪ್ಪನವರೂ ಕೂಡ—ಒಂದು ಒಳ್ಳೆಯ ದಿನ ನೋಡಿ, ಪುರೋಹಿತರನ್ನು ಕರೆದುಕೊಂಡು ಬಂದು ಶುಭದಿವಸದಲ್ಲಿ ಅದಕ್ಕೆ ಒಂದು ಒಳ್ಳೆಯ ನಾಮಕರಣ ಮಾಡುತ್ತೇವೆ. ಇದು ಭ್ರಾಂತಿಯಾದರೂ ಒಳ್ಳೆಯದಾಗುತ್ತದೆ ಎಂಬ ಭಾವನೆ ಇದೆ. ನಾವು ನಮ್ಮ ಮುನ್ನಡೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಯಾವ ಪ್ರಕಾರ ಗಮನ ಕೊಡುತ್ತಾ ಇದ್ದೇವೆಯೋ ಅದೇ ರೀತಿಯಲ್ಲಿ ನಮ್ಮ ವಿದ್ಯಾಭ್ಯಾಸದ ಮುನ್ನಡೆಯಲ್ಲಿ ಒಂದು ಭಾವಾತ್ಮಕ ದೃಷ್ಟಿಯನ್ನೂ ಕೂಡ ಒಪ್ಪಿಕೊಳ್ಳಲೇಬೇಕಾಗುತ್ತದೆ. ಅಂಥಾ ಒಂದು ದೃಷ್ಟಿಯಿಂದ ಈ ಒಂದು ಹೆಸರು ಬಹಳ ಸೂಕ್ತ. ಅದಕ್ಕೆ ಕಾರಣಗಳೇನು ಎಂಬುದನ್ನು ನಾನೀಗ ಒತ್ತಿ ಹೇಳುತ್ತಿದ್ದೇನೆ. ಹಿಂದೆ ಅನೇಕ ಕಾರಣಗಳಿಂದ ಒಂದೇ ಕಡೆಇದ್ದು ಕನ್ನಡವನ್ನು ಮಾತನಾಡುತ್ತಿದ್ದಂಥ ಜನರು ಹರಿದು ಹಂಚಿಹೋಗಿದ್ದರು. ಹಾಗೆ ಅವರು ಹರಿದು ಹಂಚಿಹೋದಕಾಲದಿಂದಲೂ ಅವರೆಲ್ಲರೂ ಮತ್ತೆ ಒಂದುಕಡೆ ಸೇರಲೇಬೇಕೆಂಬ ಹಂಬಲ ಅವರಲ್ಲಿತ್ತು. ಆದರೆ ಅನೇಕ ಕಾರಣಾಂತರಗಳಿಂದ ಅದು ಸಾಧ್ಯವಾಗಿರಲಿಲ್ಲ. ಹಾಗೆ ಹರಿದು ಹಂಚಿಹೋಗಿದ್ದ ಕನ್ನಡಿಗರೆಲ್ಲರೂ ಮತ್ತೆ ಒಂದು ಕಡೆ ಸೇರಬೇಕೆಂಬ ಒಂದು ಹಂಬಲ ವಿದ್ಯಾವಂತವರ್ಗದಲ್ಲೂ, ಪ್ರಾಜ್ಞರಲ್ಲೂ ಮತ್ತು ಅನೇಕ ಕವಿಪುಂಗವರಲ್ಲೂ—ಸಾಹಿತಿಗಳಲ್ಲೂ ಸದಾ ಸುಳಿದಾಡುತ್ತಲೇ ಇತ್ತು. ಅನೇಕ ಕವಿಗಳು ಸಾಹಿತಿಗಳು ಈ ಬಗ್ಗೆ ಅನೇಕ ಕವನಗಳನ್ನು ಬರೆದು ಪದ್ಯರೂಪದಲ್ಲೂ—ಗದ್ಯರೂಪದಲ್ಲೂ ಹಾಡುತ್ತಲೇ ಇದ್ದರು. ಆ ಒಂದುಗೂಡತಕ್ಕ ಸುದಿನ ಎಂದು ಬಂದೀತು ಎಲ್ಲ ಕನ್ನಡಿಗರೂ ಎಂದು ಮತ್ತೆ ಒಂದುಗೂಡುವರು ಎಂಬ ಸುದಿನವನ್ನೇ ಅವರು ಹಾರೈಸುತ್ತಿದ್ದರು. ಆದರೆ ಕೆಲವು ರಾಜಕೀಯ ಕಾರಣಗಳಿಂದ ಅದು ಸಾಧ್ಯವಾಗದೆ ನಿಂತಿತ್ತು. 1947ರಲ್ಲಿ ನಾವು ಯಾವತ್ತು ಸ್ವಾತಂತ್ರ್ಯವನ್ನು ಗಳಿಸಿದೆವೋ ಆ ನಂತರ ಅಲ್ಲಿಯವರೆಗೂ ದೊರೆಯದಿದ್ದ ಅವಕಾಶ ದೊರೆಯುವುದಕ್ಕೆ ಒಂದು ಅವಕಾಶವನ್ನುಂಡುಮಾಡಿತು. ನಾನಾಗಲೇ ಹಿಂದೆ ಹೇಳಿದಹಾಗೆ ಸಾಧ್ಯವಾದಮಟ್ಟಿಗೂ ಒಂದು ಭಾಷೆಯನ್ನಾಡತಕ್ಕ ಜನರು ಒಂದೆಡೆಯಲ್ಲಿರಬೇಕು, ಅದರಿಂದ ಅನೇಕ ಅನುಕೂಲಗಳಿವೆ ಎಂಬುದನ್ನು ಮನಗಂಡಿದ್ದ ಬ್ರಿಟಿಷರು ಸಾಧ್ಯವಾದಮಟ್ಟಿಗೂ ಒಂದು ಭಾಷೆಯನ್ನಾಡತಕ್ಕ ಜನರನ್ನು ಎಲ್ಲರನ್ನೂ ಒಂದೇ ಕಡೆ ಇರುವುದಕ್ಕೆ ಅವಕಾಶ ಕೊಡದೆ ಸಾಧ್ಯವಾದಮಟ್ಟಿಗೂ ಅವರನ್ನು ಬೇರೆ ಬೇರೆ ಇಡತಕ್ಕದ್ದೇ ಸೂಕ್ತ ಅದೇ ಅವರಿಗೆ ಲಾಭದಾಯಕ ಎಂಬುದನ್ನು ಮನಗಂಡು ಅವರು ಹಿಂದಿದ್ದ ಕನ್ನಡ ನಾಡನ್ನು ಹರಿದು ಭಿನ್ನ ಭಿನ್ನ ಭಾಷೆಗಳ ರಾಜ್ಯದಲ್ಲಿ ಅಳವಡಿಸಿದರು. ಇದು ಆ ದಿವಸ ಆ ಬ್ರಿಟಿಷರು ನಡೆಸಿದ ಒಂದು ಕುತಂತ್ರ. ಹೀಗೆ ಅವರು ಇಂಥದೇ ಕುತಂತ್ರವನ್ನು ಆ ಬೆಂಗಾಲ್ ಪಾರ್ಟಿಷನ್ ಮಾಡಲು ಹೊರಟಾಗ ಅವರು ಹೇಗೆ ಆ ಬ್ರಿಟಿಷರ ಮೇಲೆ ದಂಗೆ ಎದ್ದರು ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಆದರೆ ಅಂಥ ಒಂದು ಚಳವಳಿಯಾಗಲೀ ದಂಗೆಯಾಗಲಿ ಈ ಕನ್ನಡಿಗರ ವಿಭಜನೆಯಾದಾಗ ಇಲ್ಲ ಮೈಸೂರಿನಲ್ಲಿ ಅಂಥಾ ದಂಗೆ ಏಳಲಿಲ್ಲ. ಆ ಕಾಲದಿಂದಲೂ ಈ ಮೈಸೂರು ಒಂದು ಪ್ರಿನ್ಸಲಿ ಸ್ಟೇಟಾಗಿ ಉಳಿಯಿತು. ಅದಕ್ಕೆ ತಕ್ಕಹಾಗೆ ಕೌಲು ಕರಾರುಗಳು ಆದವು. ಅದಕ್ಕನುಸಾರವಾಗಿ ಈ ಮೈಸೂರು ರಾಜ್ಯವು

ಒಂದು ಬ್ರಿಟಿಷರ ಆಶ್ರಿತ ಸಂಸ್ಥಾನವಾಗೇ ಉಳಿದು ಬಂದಿತು. ಹೀಗಾಗಿ ಮೈಸೂರು ರಾಜ್ಯದಲ್ಲಿ ಒಂದು ಕಡೆ ಇದ್ದ ಕನ್ನಡಮಾತನಾಡತಕ್ಕ ಜನರು ಆ ಕಾಲದಿಂದಲೂ ಹರಿದು ಹಂಚಿ ಹೋಗಿ ಅಕ್ಕ ಪಕ್ಕದಲ್ಲಿದ್ದ ಮದ್ರಾಸ್, ಹೈದರಾಬಾದ್ ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ಸೇರಿಸಲ್ಪಟ್ಟಿದ್ದರು. ಆದರೆ ಮೈಸೂರಿನ ರಾಜಮನೆತನದವರೂ ಕೂಡ ಈ ಹಿಂದೆ ಆ ಹರಿದು ಹಂಚಿಹೋಗಿದ್ದ ಕನ್ನಡಿಗರನ್ನು ಒಂದು ಕಡೆ ಕೂಡಿಸತಕ್ಕ ಕಾರ್ಯದಲ್ಲಿ ಅವರು ಮನಸ್ಸನ್ನು ಮಾಡಿದಂತೆ ಕಂಡುಬರುವುದಿಲ್ಲ. ಪ್ರಾಯಶಃ ಅವರ ಒಂದು ಸಿಂಹಾಸನದ ಹಕ್ಕುಬಾಧ್ಯತೆಯ ಬಗ್ಗೆ ತಾಪತ್ರಯ ಬರಬಹುದು ಎಂಬ ಕಾರಣದಿಂದಲೋ ಏನೋ ಅವರು ಇದಕ್ಕೆ ಪ್ರಯತ್ನ ಪಡಲಿಲ್ಲ. ಆದರೆ ಹೀಗೆ ಎಲ್ಲೆಲ್ಲಿ ಒಂದು ಭಾಷೆಯನ್ನಾಡತಕ್ಕ ಜನರನ್ನು ಆ ಬ್ರಿಟಿಷರು ತಮ್ಮ ಒಂದು ಸಾರ್ಥ ಸಾಧನೆಗಾಗಿ ಹರಿದು ಅನ್ಯಭಾಷಾ ಜನರೊಡನೆ ಬೆರೆಸಿದ್ದರೋ ಅಂಥಾ ಜನರನ್ನೆಲ್ಲಾ ಮತ್ತೆ ಒಂದುಗೂಡಿಸಬೇಕು ಎಂಬ ಒಂದು ಹಂಬಲವನ್ನು ಮಹಾತ್ಮಾ ಗಾಂಧಿಯವರೂ ಮತ್ತು ಜವಹರಲಾಲ್ ನೆಹರೂರವರು ಬಹಳ ಹಿಂದಿನಿಂದಲೂ ವ್ಯಕ್ತಪಡಿಸುತ್ತಾ ಬಂದಿದ್ದರು. ಆದ್ದರಿಂದಲೇ ದೇಶಕ್ಕೆ ಸ್ವಾತಂತ್ರ್ಯ ಬಂದಕೂಡಲೇ ದೇಶವನ್ನು ಮತ್ತೆ ಭಾಷಾವಾರು ತಳಹದಿಯ ಮೇಲೆ ವಿಭಜನೆಮಾಡಬೇಕೆಂದು ತೀರ್ಮಾನಕ್ಕೆ ಬಂದರು. ಈ ಒಂದು ವಿಭಜನೆಯ ವಿಚಾರ 1922 ರಿಂದಲೂ ಹೊಗೆಯಾಡುವುದಕ್ಕೆ ಪ್ರಾರಂಭವಾಯಿತು. ಆದರೆ ಇದು ಸಂಪೂರ್ಣವಾಗಿ ಕನಸು ನೆನಸಾದದ್ದು ನಮಗೆ ಸ್ವಾತಂತ್ರ್ಯಬಂದ ನಂತರವೇ. ಹೀಗೆ ರಾಜ್ಯಗಳನ್ನು ಯಾವಾಗ ಸ್ಥೂಲವಾಗಿ ಒಂದು ಬಾಷಾ ತಳಹದಿಯ ಮೇಲೆ ವಿಭಜನೆ ಮಾಡಲಾಯಿತೋ ಆ ಕಾಲದಲ್ಲಿ ಆಯಾಯ ರಾಜ್ಯಗಳಿಗೆ ಆಯಾಯ ಭಾಷೆಯ ಹೆಸರನ್ನೇ ಇಡಬೇಕೆಂಬ ಒಂದು ಪ್ರಶ್ನೆ ಉದ್ಭವವಾದಾಗ ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯವರು ಒಂದು ತಿದ್ದುಪಡಿಯನ್ನು ತಂದು ಆ ಹೆಸರನ್ನಿಡುವುದನ್ನು ಅವರವರ ಒಪ್ಪಿಗೆಗೆ ಬಿಟ್ಟರು. ನ್ಯಾಯವಾಗಿ ಯಾವ ರಾಜ್ಯದಲ್ಲಿ ಯಾವ ಭಾಷೆಯ ಮಾತನಾಡತಕ್ಕ ಜನರಿದ್ದಾರೋ ಆ ರಾಜ್ಯಕ್ಕೆ ಅಥವಾ ಆ ರಾಜ್ಯವನ್ನು ಆ ಭಾಷೆಯ ಹೆಸರಿಂದಲೇ ಕರೆಯಬೇಕೆಂಬುದು ನ್ಯಾಯವಾದದ್ದು. ಆದರೆ ಆಗ ಅದು ಹಾಗೆ ಆಗಲಿಲ್ಲ. ಆ ತತ್ವವನ್ನು ಆಚರಣೆಗೆ ತರಲಿಲ್ಲ. ಮತ್ತು ಮೈಸೂರಿನವರೂ ಕೂಡ ಆ ದಿವಸ ರಾಜ್ಯಕ್ಕೆ ರಾಜ್ಯದ ಮುಖ್ಯ ಭಾಷೆಯಾವುದಿದೆಯೋ ಆ ಭಾಷೆಯ ಹೆಸರಿಂದಲೇ ಈ ರಾಜ್ಯವನ್ನು ಕರೆಯಬೇಕೆಂದು ಇಷ್ಟಪಡಲಿಲ್ಲ. ಆ ವಿಚಾರ ಏನೇ ಇರಲಿ, ನಾವು ಈ ದಿವಸ ಒಂದು ಭಾಷೆಯನ್ನಾಡತಕ್ಕ ಜನ ಒಂದು ಛತ್ರಛಾಯೆಯಲ್ಲಿ ಸೇರಿದ್ದೇವೆ. ಹಿಂದೆ ಈ ಮೈಸೂರಿನವರು ಆ ಎ. ಐ. ಸಿ. ಸಿ. ಯವರ ನಿರ್ಣಯದ ಪ್ರಕಾರ ಈ ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರನ್ನು ಇಡಬೇಕೆಂದು ಹೇಳಿದ್ದನ್ನು ಆಗ ಒಪ್ಪಿರಲಿಲ್ಲ. ಇವರು ಈ ಮೈಸೂರಿನ ಹೆಸರು ಮೈಸೂರಾಗೇ ಉಳಿಯಬೇಕೆಂದು ಹೇಳಿದ್ದರಿಂದ ಈ ರಾಜ್ಯದ ಹೆಸರು ಹಾಗೇ ಉಳಿಯಿತು. ಅದನ್ನೇ ಮೈಸೂರಿನವರು ಮತ್ತು ಮೈಸೂರು ಶಾಸನ ಸಭೆಯವರೂ ಒಪ್ಪಿದ್ದರು. ಆ ಒಂದು ರಾಜೀ ಸೂತ್ರದಿಂದ ಹೇಗೋ ಈಗಿರತಕ್ಕ ಹೆಸರು ಹಾಗೇ ಉಳಿಯಿತು. ಆದರೆ ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಜ್ಞಾಪಕ ಮಾಡಿಕೊಳ್ಳಬೇಕಾದ ಒಂದಂಶವೇನೆಂದರೆ ಹಿಂದೆ ಒಂದು ರಾಜೀಸೂತ್ರದ ಪ್ರಕಾರ ಈ ರಾಜ್ಯಕ್ಕೆ ಏನು ಒಂದು ಹೆಸರನ್ನು ಇಟ್ಟುಕೊಂಡಿದ್ದಾರೆ ಅದನ್ನು ಈಗ ಬದಲಾವಣೆ ಮಾಡುವುದಕ್ಕೆ ಏನಾದರೂ ಕಾನೂನು ಅಡ್ಡಿಬರುತ್ತದೆಯೇ ಅನ್ನುವುದು, ಅದು ಬೇರೆ ವಿಷಯ. ಅದರ ಬಗ್ಗೆ ನಾನೀಗ ಪ್ರಸ್ತಾಪಮಾಡುತ್ತಿಲ್ಲ. ಆದರೆ ಈಗ ಏನು ಅಲ್ಲಲ್ಲೆ ಒಂದು ಚಳವಳಿ, ಈ ರಾಜ್ಯವನ್ನು ಕರ್ಣಾಟಕ ಎಂಬ ಹೆಸರಿನಿಂದ ಕರೆಯಬೇಕು ಎಂಬ ಬಗ್ಗೆ ಏಳುತ್ತಿದೆ, ಅದು ನನ್ನ ಅಭಿಪ್ರಾಯದಲ್ಲಿ ಸರಿಯಿದ್ದಹಾಗೆ ಕಾಣುವುದಿಲ್ಲ. ಅದೇ ರೀತಿ ಈ ರಾಜ್ಯಕ್ಕೆ ಮೈಸೂರು ಎಂದು ಹೆಸರಿಟ್ಟಿರುವುದೂ ಕೂಡ ಸರಿಯಲ್ಲ. ಈ ಎರಡು ಶಬ್ದಗಳೂ ಸರಿಯಲ್ಲ. ಆದರೆ ಈ ರಾಜ್ಯದ ಬಹು ಸಂಖ್ಯಾತ ಜನರು ಯಾವ ಭಾಷೆಯನ್ನು ಬಳಸುತ್ತಿದ್ದಾರೋ ಆ ಭಾಷೆಯ ಹೆಸರಿನಿಂದಲೇ ಈ ರಾಜ್ಯವನ್ನು ಕರೆಯಬೇಕು, ಇದಕ್ಕೆ ಆ ಭಾಷೆಯ ಹೆಸರನ್ನೇ ಇಡಬೇಕಾದ್ದು ನ್ಯಾಯ ಎಂದು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ಈ ಒಂದು ಹಿನ್ನೆಲೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಈಗ ನಮ್ಮ ರಾಜ್ಯಕ್ಕೆ ಕನ್ನಡನಾಡು ಎಂಬ ಹೆಸರನ್ನಿಡಬೇಕು ಎಂಬುದಾಗಿ ಒಂದು ನಿರ್ಣಯವನ್ನು ಸಭೆಯ ಮುಂದೆ ತಂದಿದ್ದೇನೆ. ಆದರೆ ಶ್ರೀಮಾನ್ ಚೆನ್ನಬಸಪ್ಪನವರು ಹೆಸರಿನಲ್ಲೇನಿದೆ, ನಮಗೆ ಯಾವ ಹೆಸರಾದರೇನು ನಮಗೆ ಫಲಕೊಡತಕ್ಕದ್ದು ಮುಖ್ಯ ಎಂದು ಹೇಳುತ್ತಿದ್ದಾರೆ. ಇರಲಿ. ರಾಜ್ಯಕ್ಕೆ ಇಂಥದ್ದೇ ಒಂದು ಹೆಸರಿರಬೇಕು ಎಂಬುದೂ ಕೂಡ ಒಂದು ಬಗೆಯ ಹಂಬಲವೇ. ನಮಗೆ ನಾನಾ ಹಂಬಲಗಳಿರುತ್ತವೆ. ಅವುಗಳಲ್ಲಿ ಈ ಹೆಸರಿನ ಹಂಬಲೂ ಕೂಡ ಒಂದು. ನಮಗೆ ಸ್ವರಾಜ್ಯ ಬಂದರೆ ಮತ್ತೆ ಭಾಷಾವಾರು ರಾಜ್ಯಗಳನ್ನು ನಿರ್ಮಾಣ ಮಾಡುತ್ತೇವೆ ಎಂಬ ಕನಸನ್ನು ಕಾಣುತ್ತಿದ್ದ ಜನಕ್ಕೆ ಅದು ಈ ದಿವಸ ನೆನಸಾಗಿದೆ. ಸಾಲದುದಕ್ಕೆ ರಾಜ್ಯದಲ್ಲಿ ಸಾಕಷ್ಟು ಕೈಗಾರಿಕಾ ಪ್ರಗತಿಯಾಗಿದೆ, ವಿದ್ಯಾ ಪ್ರಗತಿಯಾಗಿದೆ, ಲಂಚನಿವಾರಣೆಯ ಬಗ್ಗೆ ಸಾಕಷ್ಟು ಕ್ರಮವನ್ನು ಕೈಗೊಳ್ಳಲಾಗಿದೆ. ಇಷ್ಟೆಲ್ಲಾ ಆಗಿರುವಾಗ ನಮ್ಮ ಒಂದು ಆ ಭ್ರಾಂತಿಯ ಜೊತೆಗೆ

(ಶ್ರೀ ಎಲ್. ಶ್ರೀಕಂಠಯ್ಯ)

ಸಾಂಸ್ಕೃತಿವಾಗಿಯೂ ಮತ್ತು ಐತಿಹಾಸಿಕವಾಗಿಯೂ ನಾವು ಆ ಒಂದು ಹೆಸರಿಗಾಗಿ ಮಾರು ಹೋಗಿರುವುದರಿಂದ ನಮ್ಮ ರಾಜ್ಯಕ್ಕೆ ಕನ್ನಡನಾಡು ಎಂಬ ನಾಮಕರಣ ಮಾಡುವುದು ಸೂಕ್ತ ಎಂದು ಈ ದಿವಸ ಅನೇಕರು ಹೇಳುತ್ತಿದ್ದಾರೆ. ಅದಕ್ಕೆ ಈಗ ಒಂದು ಉತ್ತಮವಾದ ಸನ್ನಿವೇಶ ಉಂಟಾಗಿದೆ. ಶ್ರೀಮಾನ್ ಚನ್ನಬಸಪ್ಪನವರು ಕೂಡ......

Sri H. M. CHANNABASAPPA.—He is mentioning my name at every stage. Therfore, a word of explanation is necessary. I have not yet spoken. I am going to speak and express my opinion. He is taking for garnted that I said something and goes on misinterpreting my views. I have only requested him to tell us in what manner any one of these names is going to influence these items. ಅದನ್ನು ಹೇಳುವುದನ್ನು ಬಿಟ್ಟು ಚನ್ನಬಸಪ್ಪ ಹಾಗೆ ಹೇಳುತ್ತಾನೆ ಹೀಗೆ ಹೇಳುತ್ತಾನೆ ಅಂತ ಹೇಳಿದರೆ ಅದಕ್ಕೆ ನಾನು ಏನು ಹೇಳಲಿ ?

4–30 P.M.

ಶ್ರೀ ಎಲ್. ಶ್ರೀಕಂಠಯ್ಯ.—ಇನ್ನು ಈ ರಾಜ್ಯಕ್ಕೆ ಕರ್ಣಾಟಕವೆಂದು ಹೆಸರು ಇಡ ಬೇಕೆಂದು ಕರ್ಣಾಟಕವಾದಿಗಳು ಕೊಟ್ಟಿರುವ ಕಾರಣಗಳನ್ನು ನಾನು ಲಿಸ್ಟ್ ಮಾಡಿದೆ. ಈ ರಾಜ್ಯದ ಹೆಸರು ಬಹಳ ಹಿಂದಿನ ಕಾಲದಿಂದಲೂ ಕರ್ಣಾಟಕ ಎಂದು ಇತ್ತು, ಆದುದರಿಂದ ಆ ಶಿರೋನಾಮೆ ಬಹಳ ಒಳ್ಳೆಯ ಹೆಸರು ಎಂದು ಕೆಲವರ ವಾದ. ಕನ್ನಡ ಎಲ್ಲಿ ಮಾತ ನಾಡುತ್ತಾರೋ ಆ ಪ್ರದೇಶದ ಹೆಸರು ಹಿಂದೆ ನಾನು ಕೊಟ್ಟಂತೆ 'ಎರಮೈನಾಡು' ಎಂಬು ದಾಗಿ ಇತ್ತೇ ಹೊರತು, ಕರ್ಣಾಟಕವೆಂದು ಇರಲಿಲ್ಲ. ಐತಿಹಾಸಿಕ ದೃಷ್ಟಿಯಿಂದ ದೊರೆ ಯುವ ಅಂಕಿ ಅಂಶಗಳ ಪ್ರಕಾರ ಈ ರಾಜ್ಯಕ್ಕೆ 'ಕುಂತಳರಾಜ್ಯ' ಎಂಬುದಾಗಿ ಹೆಸ ರಿತ್ತು. ನಾನು ಮೊದಲೇ ಹೇಳಿದಹಾಗೆ ಕರ್ಣಾಟ ಎಂಬ ಶಬ್ದ ಕರ್ಣಾಟಕ ಎಂಬ ಶಬ್ದ ದಿಂದ ಉತ್ಪತ್ತಿಯಾಗಿದೆ. ಅದೇ ಶಬ್ದದಿಂದ ಕನ್ನಡ ಎಂಬ ಶಬ್ದ ಉತ್ಪತ್ತಿಯಾಗಿದೆ. ಕರು, ಣಾಟ, ಕರ್ಣಾಟ. ಹೀಗಿರುವಾಗ ಬಹಳ ಕಾಲದಿಂದ ಕರ್ಣಾಟ ಎಂಬ ಹೆಸರು ಇತ್ತು ಎನ್ನುವ ಬಗ್ಗೆ ದಾಖಲೆಗಳನ್ನು ಈಗ ಒದಗಿಸುವುದಕ್ಕೆ ಸಾಧ್ಯವಿಲ್ಲ. ವಿಜಯನಗರ ಸಾಮ್ರಾಜ್ಯಕಾಲದಲ್ಲಿ ಕರ್ಣಾಟಕ ರತ್ನ ಸಿಂಹಾಸನಾಧೀಶ್ವರ ಎಂಬ ಬಿರುದನ್ನು ಆಗಿನ ಅರಸರು ಇಟ್ಟುಕೊಂಡಿದ್ದರು. ಆದರೆ ವಿಜಯನಗರ ಸಾಮ್ರಾಜ್ಯ ಎಲ್ಲಿಯವರೆಗೆ ವ್ಯಾಪ್ತಿ ಇತ್ತೋ ಆ ಪ್ರದೇಶಕ್ಕೆ ಸೇರಿದ ಹಾಗೆ ಬಹುಶಃ ಮೈಸೂರು ರಾಜ್ಯವೂ ಇತ್ತು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಪುರಾಣಗಳ ಕಾಲದಲ್ಲಿ ಕರ್ಣಾಟಕ ಎಂಬ ರಾಕ್ಷಸ ಇದ್ದನೆಂಬ ಪ್ರತೀತಿ ಇದೆ. ಅದು ಮಾನ್ಯ ಸದಸ್ಯರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಈ ಮಾತನ್ನು ಇಲ್ಲಿ ನಾನು ಹಿಂದೆ ಹೇಳಿದಾಗ ಮಾನ್ಯ ಸದಸ್ಯರು ಇಲ್ಲಿ ಇದ್ದರೊ ಇಲ್ಲವೋ ಗೊತ್ತಿಲ್ಲ. ಆ ವಿಷಯದಲ್ಲಿ ವಿದ್ವಾಂಸರುಗಳಲ್ಲಿ ಭಿನ್ನಾಭಿಪ್ರಾಯ ಇದೆ. ಕರ್ಣಾಟ ಎಂಬ ಶಬ್ದವನ್ನು ಮಹಾಭಾರತದಲ್ಲಿಯೂ ಉಪಯೊಗಿಸಲ್ಪಟ್ಟಿದೆಂಬುದಾಗಿ ಕೆಲವರ ವಾದ. ಕೆಲವರು ಏನು ಹೇಳಿದರು ಅಂದರೆ ಈ ಶಬ್ದ ಕ್ರಮೇಣ ಸೇರಿಸಲ್ಪಟ್ಟ ಶಬ್ದ ಎಂದು. ಆದರೆ ಮೂಲಭಾರತದಲ್ಲಿ ಈ ಶಬ್ದವಿಲ್ಲವೆಂಬ ವಾದವಿದೆ. ಎರಡನೆಯದು ಹಿಂದೆ ಕರ್ಣಾಟಕನೆಂಬ ರಾಕ್ಷಸನಿದ್ದ. ಅದೇ ರೀತಿಯಲ್ಲಿ ಕದಂಬನೆಂಬ ರಾಕ್ಷಸನೂ ಇದ್ದ. ಅಂಥ ನಾಮ ರಾಕ್ಷಸನೂ ಇದ್ದ. ಕನ್ನಡನಾಡಿನಲ್ಲಿ ಕದಂಬ ರಾಜ್ಯವಿತ್ತು. ಆಗ ಕರ್ಣಾಟಕವೆಂಬ ಹೆಸರು ಈ ರಾಜ್ಯಕ್ಕೆ ಇತ್ತು ಎಂಬ ವಾದವಿದೆ. ಮಹಿಷಾಸುರನೆಂಬ ರಾಕ್ಷಸನೂ ಸಹ ಇದ್ದ. ಇದನ್ನು ಸಮರ್ಥಿಸಬೇಕೋ ಅಥವಾ ಬಿಡಬೇಕೋ ಎಂಬ ಬಗ್ಗೆ ಸಾಕಷ್ಟು ಆಧಾರವಿಲ್ಲ. ಕರ್ಣಾಟಕ ಪರವಾಗಿ ಬಹಳ ವಾದಮಾಡುವವರು ಈ ಹೆಸರು ಬಹಳ ಕಾಲದಿಂದ ಇದೆಯೆಂದು ಹೇಳುತ್ತಿದ್ದಾರೆ. ನಾನು ಹೇಳುವುದು ಇದು ಬಹಳ ವರ್ಷಗಳಿಂದೇನೂ ಇಲ್ಲ. ಈಚೆಗೆ ಪ್ರಚಲಿತವಾಗಿ ಬಂದದು. ಬಹುಶಃ ಇದು ಬ್ರಿಟೀಷರ ಕಾಲದಲ್ಲಿ ಇದ್ದುದು ಎಂದು ನನಗೆ ಕಾಣುತ್ತದೆ. ರಾಜ್ಯ ಪುನರ್ವಿಂಗಡನೆ ಯಾದಮೇಲೆ ಮೈಸೂರು ರಾಜ್ಯ ಪ್ರತ್ಯೇಕವಾಗಿ ಉಳಿಯಿತು. ಕನ್ನಡ ಮಾತನಾಡುವವರು ಇತರ

ಭಾಗಗಳಲ್ಲಿಯೂ ಇದ್ದರು. ಹಿಂದೆ ಕರ್ಣಾಟಕ ಇತಿಹಾಸದಲ್ಲಿ ವಿದ್ಯಾವಂತ ವರ್ಗದವರು ಕನ್ನಡ ಮಾತನಾಡುವ ಜನರು ಇರುವ ಪ್ರದೇಶಕ್ಕೆ ಒಂದು ಹೆಸರು ಇಡಬೇಕಾಗಿ ಬಂತು. ಆಗ ಅವರು ಕರ್ಣಾಟಿಕ್ ಎಂದು ಹೇಳಿದರು. ಏಷ್ಯ ಭಾಗದಲ್ಲಿ ಇರುವವರಿಗೆ ಏಷಿಯಾಟಿಕ್ ಎಂದು ಹೇಗೆ ಹೇಳುತ್ತೇವೋ ಹಾಗೆಯೇ ಕರ್ಣಾಟ ಎನ್ನುವುದು ಕರ್ಣಾಟಿಕ್ ಆಯಿತು. ಅದೇ ರೀತಿಯಲ್ಲಿ ಕರ್ಣಾಟಿಕ್ ಮ್ಯೂಸಿಕ್ ಎಂದೂ ಆಯಿತು. ಆಲ್ ಇಂಡಿಯಾ ರೇಡಿಯೋನವರೂ ಸಹ ಬ್ರಾಡ್ ಕ್ಯಾಸ್ಟ್ ಮಾಡುವಾಗ ಕರ್ಣಾಟಿಕ್ ಮ್ಯೂಸಿಕ್ ಎಂದು ಹೇಳುತ್ತಾರೆ. ಏಷಿಯನ್, ಕರ್ಣಾಟಿಯನ್ ಎಂದು ಹೇಳುವುದು ಕಿವಿಗೆ ಅಷ್ಟು ಇಂಪಾಗಿ ಇರುವುದಿಲ್ಲ. ಆದಕ್ಕಾಗಿ ಕರ್ಣಾಟಿಕ್ ಎಂದು ಆಯಿತು. ಅಂದರೆ ಮೈಸೂರು ರಾಜ್ಯ ಬಿಟ್ಟು ಉಳಿದ ಎಲ್ಲೆಲ್ಲಿ ಕನ್ನಡ ಮಾತನಾಡುತ್ತಿದ್ದರೋ ಅಲ್ಲಿ ಕನ್ನಡ ಮಾತನಾಡುವ ಜನರಿಗೆ ಒಂದು ಹೆಸರನ್ನು ಕೊಡುವುದಕ್ಕಾಗಿ ಅವರನ್ನು ಕರ್ಣಾಟಿಕ್ ಎಂದು ಕರೆದರು. ಆ ಕಾಲದಲ್ಲಿಯೇ ಕರ್ಣಾಟಿಕ್ ಎಂಬ ಹೆಸರು ಪ್ರಚಲಿತವಾಗಿ ಬಂತು. ಅದರಲ್ಲಿ ಆ ಹೆಸರಿನ ಹಿನ್ನೆಲೆ ಸೇರಿದೆ. ರಾಷ್ಟ್ರೀಯ ಮುಖಂಡರು ಮೈಸೂರು ರಾಜ್ಯದಲ್ಲಿ ಎಷ್ಟೇ ಹೋರಾಟ ನಡೆಸಿದರೂ ಭಾರತದಂಥ ಒಂದು ದೊಡ್ಡ ಕ್ಯಾನ್‌ವಾಸ್‌ನಲ್ಲಿ ಮೈಸೂರು ರಾಜ್ಯ ಅಷ್ಟು ಪ್ರಾಮುಖ್ಯತೆಗೆ ಬರಲಿಲ್ಲ. ನಾವು ಎಷ್ಟೇ ಮುಖಂಡರುಗಳನ್ನು ಮುಂದೂಡಿದರೂ ಕೂಡ ಅವರು ನ್ಯಾಷನಲ್ ಲೀಡರ್ಸ್ ಆಗುತ್ತಿರಲಿಲ್ಲ. ಮಾನ್ಯ ಶ್ರೀ ಹಾರ್ಡೀಕರ್ ಅವರು ಕನ್ನಡ ಜನತೆಯ ಪರವಾಗಿ ಬಹಳವಾಗಿ ಮಾತನಾಡುತ್ತಿದ್ದರು. ಆದರೆ ಮೈ[illegible]ಊರು ರಾಜ್ಯದಲ್ಲಿ ಮಾನ್ಯ ಶ್ರೀ ಚಂಗಲರಾಯ ರೆಡ್ಡಿಯವರೂ, ಶ್ರೀ ದಾಸಪ್ಪನವರೂ, ಮತ್ತು ಇತರ ಚೋಟಾ ಲೀಡರ್ಸ್ ಮೈಸೂರು ಜನತೆಯ ಪರವಾಗಿ ಮಾತನಾಡುತ್ತಿದ್ದರು. ಆದರೆ ಕರ್ಣಾಟಕ ಪ್ರದೇಶಗಳಲ್ಲಿರತಕ್ಕ ಮುಖಂಡರುಗಳು ಅಲಹಾಬಾದ್ ಮತ್ತು ದೆಹಲಿ ಹತ್ತಿರ ಅಡ್ಡಾಡಿ ಕರ್ಣಾಟಕ ಎಂಬ ಶಬ್ದವನ್ನು ಉಪಯೋಗಿಸಿದ್ದ ರಿಂದ, ಆಲ್ ಇಂಡಿಯಾ ಪೇಪರ್ಸ್‌ನಲ್ಲಿ ಆ ಹೆಸರಿಗೆ ಹೆಚ್ಚು ಪ್ರಾಶಸ್ತ್ಯ ಸಿಕ್ಕಿತು. ಈಗ ಪರಿಸ್ಥಿತಿ ಬೇರೆಯಾಗಿದೆ. ಮದ್ರಾಸ್, ಹೈದರಾಬಾದ್ ಮುಂತಾದ ಪ್ರದೇಶಗಳಿಂದ ಕನ್ನಡ ಮಾತನಾಡು ವವರು ವಿಪುಲ ಸಂಖ್ಯೆಯಲ್ಲಿ ಮೈಸೂರು ರಾಜ್ಯಕ್ಕೆ ಬಂದು ಸೇರಿಕೊಂಡು ಕರ್ಣಾಟಕವೆಂದು ಹೆಸರಿಡಬೇಕೆಂದು ಹೇಳುತ್ತಿದ್ದಾರೆ. ಅದರೆ ಮೈಸೂರು ರಾಜ್ಯದಲ್ಲಿರತಕ್ಕವರು ಆ ಹೆಸರನ್ನು ಒಪ್ಪುತ್ತಾರೆಂದು ನಾನು ಖಂಡಿತವಾಗಿ ತಿಳಿದುಕೊಂಡಿಲ್ಲ. ಈಗ ಉಂಟಾಗಿರತಕ್ಕ ಪರಿಸ್ಥಿತಿಯಲ್ಲಿ ಕರ್ಣಾಟಕವೆಂದು ಹೇಳಿದರೆ ಅದನ್ನು ವಿರೋಧಿಸುವವರೂ ಇದ್ದಾರೆ, ಮೈಸೂರು ಎಂದು ಹೇಳಿದರೆ ಅದನ್ನೂ ಸಹ ವಿರೋಧಿಸುವವರೂ ಇದ್ದಾರೆ. ಈ ದೃಷ್ಟಿಯಲ್ಲಿ ನಾನು ಸೂಚಿಸಿರುವುದು ವೈಯಾಪಿಾಡಿಯಾ ಆಗಿದೆ. ಅವರ ಸೆಂಟಿಮೆಂಟ್, ನಿಮ್ಮ ಸೆಂಟಿಮೆಂಟ್ ಯಾವುದನ್ನೂ ನೋಯಿಸುವುದೂ ಬೇಡ. ನಾವು ಕನ್ನಡಿಗರು ಎಂಬುದಾಗಿ ಕರೆದುಕೊಳ್ಳುವುದಕ್ಕೆ ನಮಗೆ ಹೆಮ್ಮೆ. ಉಭಯತ್ರರಿಗೂ ಸೂಕ್ತವಾಗಿ ಒಪ್ಪುವ ಮಾತು ಅಂದರೆ ನಾವು ಕನ್ನಡಿಗರು ಆದಮೇಲೆ ಕನ್ನಡ ನಾಡು ಎಂಬುದಾಗಿ ಕರೆಯುವುದು. ಇದಕ್ಕೇಕೆ ನಾಚಿಕೆಗೊಳ್ಳಬೇಕು ? ಇದು ಒಂದು ಹೆಮ್ಮೆಯ ಮಾತು. ಮೈಸೂರಿನವರೂ ಅವರ ಒಂದು ತತ್ವವನ್ನು ಈ ಸಭೆಯ ಮುಂದೆ ಇಡುತ್ತಿದ್ದಾರೆ, ಕರ್ಣಾಟಕವಾದಿಗಳೂ ಸಹ ಒಂದು ತತ್ವವನ್ನು ಈಗ ನಮ್ಮ ಮುಂದೆ ಇಡುತ್ತಿದ್ದಾರೆ.

ಇನ್ನೊಂದು ಕಾರಣ ಕರ್ಣಾಟಕವಾದಿಗಳು ಹೇಳುತ್ತಾರೇನೆಂದರೆ ಎಸ್.ಆರ್.ಸಿ. ರಿಪೋರ್ಟು ಬಂದಾಗ ಕೂಡ ರಾಜ್ಯದ ಹೆಸರು ಕರ್ಣಾಟಕ ಎಂದು ಸಮ್ಮತಿಸಿದರು, ಎಂದು. ಅವರು ವಿತರ್ಕೋಸ್ಕರ ಎಸ್.ಆರ್.ಸಿ. ರಿಪೋರ್ಟನಲ್ಲಿ ಕರ್ಣಾಟಕವೆಂದು ಹೇಳಿದ್ದಾರೆಂಬುದಕ್ಕೆ ಅವರು ಕೊಟ್ಟ ಹಿನ್ನೆಲೆಯನ್ನು ಕೊಡುತ್ತೇನೆ. ಎಸ್.ಆರ್.ಸಿ. ಕಮಿಶನ್ ಬರುವಾಗ, ಮೈಸೂರು ರಾಜ್ಯ ಎಂದು ಹೇಳುವುದಕ್ಕೆ ಅವರಿಗೆ ಇಷ್ಟವಿರಲಿಲ್ಲ. ಅವರು ಒಂದು ಬ್ರಾಡ್ ಪ್ರಿನ್ಸಿಪಲ್ ಇಟ್ಟು ಕೊಂಡಿದ್ದಾರೆ. ಎಸ್.ಆರ್.ಸಿ. ಕಮಿಶನ್ ಏನು ಮಾಡಿದರೆಂದರೆ, ತಮಿಳು ನಾಡು, ಆಂಧ್ರ ಪ್ರದೇಶ ಎಂದು ಎಲ್ಲಾ ಮಾಡುತ್ತಾ ಹೋಗುವಾಗ, ನಮ್ಮ ರಾಜ್ಯದಲ್ಲಿ ಒಂದು ಪ್ರಚಲಿತವಾದ ಶಬ್ದಕ್ಕೆ—ಅಂದರೆ ಕರ್ಣಾಟಕ ಪ್ರಜಾ ಸೋಷಲಿಸ್ಟ್ ಪಾರ್ಟಿ, ಕರ್ಣಾಟಕ ಕಮ್ಯೂನಿಸ್ಟ್ ಪಾರ್ಟಿ ಮುಂತಾದ ಶಬ್ದಕ್ಕೆ ಮಹತ್ವವನ್ನು ಕೊಟ್ಟ ಆ ಶಬ್ದವನ್ನೇ ಆಧಾರವಾಗಿ ತೆಗೆದುಕೊಂಡು, ಅದೇ ಹೆಸರನ್ನು ಈ ನಮ್ಮ ರಾಜ್ಯಕ್ಕೆ ಇಟ್ಟರೇ ಹೊರತು ಇನ್ನಾವುದರ ಆಧಾರದಮೇಲೂ ಇಡಲಿಲ್ಲ.

ಮತ್ತೊಂದು ವಾದವೇನೆಂದರೆ—ಮೈಸೂರು ದೇಶದ ಈ ಕನ್ನಡವನ್ನು ಮಾತನಾಡತಕ್ಕಂತಹ ಜನರು, ಎಲ್ಲರನ್ನೂ ಒಂದುಗೂಡಿಸುವುದಕ್ಕೆ, ಜನರೆಲ್ಲಾ ಕನ್ನಡ ಮಾತನಾಡುವುದಕ್ಕೆ ಮೈಸೂರು ರಾಜ್ಯದವರನ್ನು ಬಿಟ್ಟು ಉಳಿದ ಪ್ರದೇಶದಲ್ಲಿರತಕ್ಕಂತಹ ಜನರು ಶ್ರಮಿಸಿದ್ದಾರೆ, ಮೈಸೂರಿನಲ್ಲಿರು ವವರು ಏನೂ ಶ್ರಮಿಸಿರಲಿಲ್ಲ, ಎಂದು, ಆದರೆ ಕನ್ನಡ ಮಾತನಾಡತಕ್ಕ ಜನ ಒಂದುಗೂಡಬೇಕು ಎನ್ನತಕ್ಕವಾದ ಮೈಸೂರು ರಾಜ್ಯದ ಜನರಲ್ಲಿ ಎಷ್ಟು ಹಂಬಲವಿತ್ತೋ, ಅಷ್ಟೇ ಹಂಬಲ ಇತರ ಭಾಗಗಳಲ್ಲಿ ವಾಸಮಾಡತಕ್ಕ ಜನರಲ್ಲೂ ಇತ್ತು. ಈ ರಾಜ್ಯದ ಕನ್ನಡವನ್ನು ಮಾತನಾಡತಕ್ಕ

(ಶ್ರೀ ಎಲ್. ಶ್ರೀಕಂಠಯ್ಯ)

ಜನರೆಲ್ಲರೂ ಕೂಡ ಒಂದುಗೂಡಬೇಕು ಎನ್ನತಕ್ಕ ಛಲ ಮೈಸೂರು ರಾಜ್ಯದವರಿಗೆ ಅಲ್ಲದೆ ಬೇರೆ ಕಡೆಯ ಜನರಿಗೆ ಕೂಡ ಇತ್ತು. ನಮಗೆ ಛಲವಿಲ್ಲವೆಂದು ಹೇಳುವುದರಲ್ಲಿ ಏನೂ ಹುರುಳಿಲ್ಲ. ಆದರೆ ರಾಜಕೀಯ ಕಾರಣಗಳಿಂದ ಅಷ್ಟು ಅವಕಾಶ ಸಿಗಲಿಲ್ಲ, ಈ ಒಂದು ಕಾರಣದಿಂದಲೂ ಕರ್ಣಾಟಕವೆಂದು ಇರಬೇಕೆಂದು ವಾದ ಮಾಡಿದರೆ ಅದು ರಾಜಕೀಯ ದೃಷ್ಟಿಯಿಂದಲೂ, ಮತ್ತು ವಾಸ್ತವಿಕ ದೃಷ್ಟಿಯಿಂದಲೂ, ಒಂದು ಹುರುಳಿಲ್ಲದ ವಾದವಾಗಿದೆ.

ಇಷ್ಟು ಹೇಳಿ ಮುಖ್ಯವಾದ ಎರಡು ವಿಷಯಗಳನ್ನು ಈ ಸಭೆಯ ಮುಂದಿಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ. ಈಗ ಎಲ್ಲೆಲ್ಲಿ ಕನ್ನಡವನ್ನು ಮಾತನಾಡುತ್ತಿದ್ದಾರೆ, ಅಂಥ ಜನರನ್ನು ಯಾರು ಕೂಡ ಕರ್ಣಾಟಕರು ಎಂದು ಕರೆಯುವುದಿಲ್ಲ. ಏಕೆಂದರೆ ನಮ್ಮ ಮೈಸೂರು ಪ್ರದೇಶದಲ್ಲಿ ಕರ್ಣಾಟಕರು ಎಂದರೆ ಅದು ಒಂದು ಜಾತಿಯಾಗಿ ಬಿಟ್ಟಿದೆ. ಅವರಿಗೆ ಹಳೆಯ ಕರ್ಣಾಟಕರು, ಹೊಸ ಕರ್ಣಾಟಕರು ಎಂದು ಕರೆಯುತ್ತಾರೆ. ಅದು ಒಂದು ಪ್ರತ್ಯೇಕವಾದ ಜಾತಿಯಾಗಿ ಬಿಟ್ಟಿದೆ, ಕನ್ನಡ ಮಾತಾಡುವವರನ್ನು ಕನ್ನಡಿಗರೆಂದು ಹೇಳುತ್ತಾರೆಯೇ ಹೊರತು, ಕರ್ಣಾಟಕರು ಎಂದು ಹೇಳುತ್ತಾ ಇಲ್ಲ. ಅದನ್ನು ಸ್ವಲ್ಪ ಜ್ಞಾಪಕದಲ್ಲಿಟ್ಟುಕೊಂಡು ಕರ್ಣಾಟಕರು ಎಂದು ಕರೆಯುವುದಕ್ಕಾಗುವುದಿಲ್ಲ. ಈ ಮೈಸೂರು ಪ್ರದೇಶ ಸೇರಿದಂತಹ ಕರ್ಣಾಟಕ ರಾಜ್ಯ ಇತ್ತು ಎಂದು ಭಾವಿಸುವುದಾದರೆ, ಅದು ಸರಿಯಲ್ಲ, ಹಾಗೆ ನೋಡಿದರೆ ವಿಜಯನಗರ ಸಾಮ್ರಾಜ್ಯವನ್ನು ಕರ್ಣಾಟಕ ರಾಜ್ಯವೆಂದು ಏಕೆ ಕರೆಯಲಿಲ್ಲ? ಅವರು ಏಕೆ ವಿಜಯನಗರ ಸಾಮ್ರಾಜ್ಯವೆಂದು ಕರೆದುಕೊಂಡು ಹೋದರು? ಈ ಒಂದು ದೃಷ್ಟಿಯಿಂದ ಹಿಂದಿನ ರಾಜರು ಕರ್ಣಾಟಕ ರಾಜ್ಯವೆಂದು ಏಕೆ ಕರೆಯಲಿಲ್ಲವೆಂದು ಗೊತ್ತಾಗಿಲ್ಲ. ಎರಡನೆಯದಾಗಿ ಈ ದಿವಸ ಕನ್ನಡ ಮಾತನಾಡತಕ್ಕ ಜನರು ಕನ್ನಡಿಗರಾಗುತ್ತಾರೆ. ಇನ್ನೊಂದು ವಾದ—ಹಿಂದೆ ನಾನು ಹೇಳಿದ ಹಾಗೆ ಎಸ್.ಆರ್.ಸಿ. ವರದಿ ಈ ಸಭೆಯ ಮುಂದೆ ಅಂಗೀಕಾರಕ್ಕೆ ಬಂದಾಗ ಒಂದು ರಾಜಕೀಯ ಚಾತುರ್ಯತೆಯನ್ನು ಮುಂದಿಟ್ಟು ಒಂದು ಮಾನಸಿಕವಾದ ಘರ್ಷಣೆಯಾಗುವುದನ್ನು ತಪ್ಪಿಸುವುದಕ್ಕಾಗಿ, ಒಂದು ರಾಜ್ಯ ಸೂತ್ರವನ್ನು ಮುಂದಿಟ್ಟು, ಮೈಸೂರು ಎಂದು ಮುಂದುವರಿಸಿಕೊಂಡು ಹೋಗುವುದು ಉತ್ತಮವೆಂದು ಈ ಮಾನ್ಯ ಸಭೆಯು ಒಂದು ತೀರ್ಮಾನಕ್ಕೆ ಬಂತು. ಈ ರಾಜ್ಯ ಸೂತ್ರಕ್ಕೆ ಹಿನ್ನೆಲೆ ಏನೆಂಬುದನ್ನು ನಾನು ನನ್ನ ಹಿಂದಿನ ಭಾಷಣದಲ್ಲಿ ತಿಳಿಸಿದ್ದೇನೆ, ಆಗ ಚರ್ಚೆ ವಿಪುಲವಾಗಿ ನಡೆದು ಒಬ್ಬರ ಮನಸ್ಸನ್ನು ಒಬ್ಬರು ನೋಯಿಸುವುದು ಬೇಡ, ಈಗಿರುವ ರಾಜಕೀಯ ಪರಿಸ್ಥಿತಿಯಲ್ಲಿ ಹಳೆಯ ಹೆಸರೇ ಮುಂದುವರಿಸಿಕೊಂಡು ಹೋಗುವುದು ಉತ್ತಮವೆಂದು ಈ ಸಭೆಯು ತೀರ್ಮಾನಕ್ಕೆ ಬಂತು, ಆದರೆ ಈಗ ಆ ರಾಜ್ಯಸೂತ್ರವನ್ನು ಒಂದು ಕಡೆ ಒತ್ತಿಟ್ಟು, ಒಂದು ದೇಶದ ವಾತಾವರಣದಲ್ಲಿ, ಒಂದೊಂದು ರಾಜ್ಯದ ಹೆಸರು ಪುನರ್ ನಾಮಕರಣವಾಗುತ್ತಾ ಇರುವಾಗ ನಮ್ಮ ರಾಜ್ಯಕ್ಕೂ ಕೂಡ ಎಲ್ಲಾ ದೃಷ್ಟಿಯಿಂದಲೂ ಸೂಕ್ತವಾಗಿ ಕಂಡುಬಂದರೆ ಒಂದು ಹೊಸ ನಾಮಕರಣವನ್ನು ಮಾಡತಕ್ಕ ಅವಕಾಶ ಬಂದಿದೆ. ಆ ದೃಷ್ಟಿಯಿಂದ ನಾನು 'ಕನ್ನಡ ನಾಡು' ಎನ್ನತಕ್ಕಂತಹ ಶಬ್ದ ಬಹಳ ಸೂಕ್ತವಾಗಿ ಕಂಡು ಬಂದುದರಿಂದ ಆ ವಿಷಯವನ್ನು ತಮ್ಮ ಮುಂದಿಟ್ಟಿದ್ದೇವೆ. ಕೊನೆಯದಾಗಿ ಒಂದು ಎಚ್ಚರಿಕೆಯ ಮಾತನ್ನು ಹೇಳಬೇಕಾಗಿದೆ. ಕೆಲವರಿಗೆ ಇಲ್ಲಿ ಕರ್ಣಾಟಕ ಎನ್ನತಕ್ಕಂತಹ ಶಬ್ದ ಪ್ರಿಯವಾಗಿದೆ. ಆದರೆ ಅವರು ಮರೆಯಬಾರದು—ಯಾರಿಗೆ ಕರ್ಣಾಟಕವೆಂಬ ಶಬ್ದ ಪ್ರಿಯವಾಗಿದೆಯೋ, ಅದು ಆಗಲೇಬೇಕೆಂಬ ಆಶೆ ಪಡುತ್ತಾರೋ, ಅದೇ ಪ್ರಮಾಣದಲ್ಲಿ ಮೈಸೂರು ಎನ್ನತಕ್ಕಂತಹ ಹೆಸರು ಕೂಡ ಅನೇಕರಿಗೆ ಪ್ರಿಯವಾಗಿದೆ. ನಾವು ರಾಜಕಾರಣಿಗಳು, ರಾಜಕೀಯದಲ್ಲಿರುವವರು ಒಂದು ಕೆಲಸವನ್ನು ಸಾಧನೆ ಮಾಡುವವರು, ಇಬ್ಬರ ಹಿತಾಸಕ್ತಿಗಳಿಗೂ ಒಂದು ಮಾರ್ಗವನ್ನು ಹುಡುಕಬೇಕಾಗಿದೆ. ನನ್ನ ಅಭಿಪ್ರಾಯದಲ್ಲಿ, ಒಂದು ಸಾಮಾನ್ಯ ಅಭಿಪ್ರಾಯದಲ್ಲಿ, ನೀವು ಹೆಚ್ಚು ನೊಂದುಕೊಳ್ಳುವುದು ಬೇಡ, ಎದುರು ಪಕ್ಷದವರಿಂದ ಈ ಹೆಸರನ್ನು ಹೇಳಿಸಿ ಹೋಯಿತು ಎಂದು ನಿಮಗೆ ಅದು ನೋವು ಉಂಟುಮಾಡುವುದೂ ಬೇಡ. ಉಭಯತ್ರರೂ ಒಂದು ರಾಜ ಸೂತ್ರವನ್ನು ಒಪ್ಪುವುದಾದರೆ, ಇಬ್ಬರಿಗೂ ಈ ರಾಜ ಸೂತ್ರ ಸೂಕ್ತವೆಂದು ಕಂಡು ಬರುವುದಾದರೆ, ನಾವು ಕನ್ನಡ ಮಾತನಾಡತಕ್ಕ ಜನರು, ಕನ್ನಡನಾಡು ಎಂಬ ಹೆಸರನ್ನೇ ಇಡಬಹುದು. ಕನ್ನಡ ನಡೆ, ಕನ್ನಡ ನುಡಿ, ಕನ್ನಡ ಭೂಮಿ ಮುಂತಾದ ಕನ್ನಡವೆಂಬ ಮೂಲ ಶಬ್ದವಿರುವುದರಿಂದ ಈ ಹೆಸರಿಗೆ ಪ್ರಾಶಸ್ತ್ಯ ಇದೆ. ಆ ದೃಷ್ಟಿಯಿಂದ ನಮ್ಮ ಉಭಯತ್ರರಲ್ಲೂ ನೋವು ಉಂಟಾಗದ ರೀತಿಯಲ್ಲಿ, ಕನ್ನಡ ನಾಡು ಎನ್ನತಕ್ಕಂತ ಶಬ್ದ ನಮ್ಮ ರಾಜ್ಯಕ್ಕೆ ಉಚಿತವಾಗಿದೆ ಎಂಬ ವಾದವನ್ನು ತಮ್ಮ ಮುಂದಿಟ್ಟು ಮಾನ್ಯ ಸದಸ್ಯರೆಲ್ಲರೂ ನಮ್ಮ ರಾಜ್ಯಕ್ಕೆ ಕನ್ನಡ ನಾಡು ಎನ್ನತಕ್ಕಂತಹ ಹೆಸರನ್ನೇ ಒಪ್ಪಿಕೊಳ್ಳಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Leave of Absence to Sri B. T. Murnal

MR. SPEAKER.—I call upon Sri Gurreddy to speak. But before he begins his speech, I have to put before the Hon'ble House one formal matter. I have received a letter from Sri B. T. Murnal, Member, Legislative Assembly, dated 15th January 1969 requesting under rule 188 for leave of absence from attending the current sittings of the Assembly due to his private work.

Is it the pleasure of the Assembly that permission be granted to Sri B. T. Murnal to remain absent from attending the current sittings of the Assembly ?

HON. MEMBERS.—Yes.

MR. SPEAKER.—Permission to remain absent is granted.

Non-official Resolution *re* : change of name of Mysore State as "Kannada Nadu"

(*Debate continued*)

SRI B. P. GANGADHAR.—Sir, I want to move an amendment to the Resolution.

MR. SPEAKER.—The hon. Member may move it.

SRI B. P. GANGADHAR.—Sir, I beg to move:

"In line 4, for the words 'Kannada Nadu' substitute the word 'Karnataka'."

MR. SPEAKER.—Amendment moved :

"In line 4, for the words 'Kannada Nadu' substitute the word 'Karnataka'."

The members participating in this debate may proceed on the basis that the resolution along with the amendment is before the House for discussion.

SRI T. R. SHAMANNA. (Bangalore-Fort).—Sir, I have got an objection. The amendment moved completely changes the original resolution. Any amendment that is moved must not contradict the original resolution. This amendment contradicts the original resolution. I therefore object to the moving of this amendment and request that the amendment may be ruled out of order.

MR. SPEAKER.—The point raised by the hon. Member Sri Shamanna is in the nature of a point of order. He says that the amendment should not be allowed. Now, it has been moved and so the objection is rather too late in the day. The amendment only seeks to substitute one word for another. So, there is no contradiction. The hon. Member Sri Shamanna can have his say and persuade the House not to accept the amendment.

Sri T. R. SHAMANNA.—I may be permitted to send another amendment.

Mr. SPEAKER.—I have no objection; he may do so.

Sri H. M. CHANNABASAPPA.—Sir, a wrong thing cannot be made right by acceptance. The amendment seeks to change the purpose of the main resolution; it has the effect of reversing the original resolution. Under the rule itself this is not permissible. Simply because it is permitted to be moved, it cannot have the effect of correcting the rule itself. Therefore, I beg to submit that the matter may be looked into by the Chair and a considered ruling given tomorrow.

Mr. SPEAKER.—I do not accept this proposition. I shall, however, bear in mind what the hon. Member has said. In the meanwhile, let the House proceed on the basis that the amendment is before the House.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ಎರ್. ಶ್ರೀಕಂಠಯ್ಯನವರು ಈ ಸಭೆಯ ಮುಂದೆ ತಂದಂಥ ನಿರ್ಣಯವನ್ನು ನಾನು ಪೂರ್ಣವಾಗಿ ವಿರೋಧಿಸುತ್ತಾ, ಅದರಂತೆ ಕನ್ನಡ ನಾಡು ಎನ್ನುವ ಶಬ್ದಕ್ಕೆ ಶ್ರೀಮಾನ್ ಗಂಗಾಧರ್ ಅವರು ತಂದಿರತಕ್ಕಂಥ ತಿದ್ದುಪಡಿಯನ್ನು ನಾನು ಅನುಮೋದಿಸುತ್ತೇನೆ. ಶ್ರೀಮಾನ್ ಶ್ರೀಕಂಠಯ್ಯನವರು ಸುಮಾರು 1½–2 ತಾಸುಗಳಿಂದ ಸುದೀರ್ಘವಾಗಿ ಮೈಸೂರನ್ನು ಕನ್ನಡನಾಡು ಎಂದು ಏತಕ್ಕೆ ಕರೆಯಬೇಕು ಎಂಬುದನ್ನು ಹೇಳಿದ್ದಾರೆ. ಅವರು ಆರೀತಿ ಹೇಳಿರುವಾಗ ಒಂದೆರಡು ಮಾತುಗಳನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಕರ್ನಾಟಕ ಹರಿದು ಹಂಚಿಹೋದ ಸಮಯದಲ್ಲಿ ಕನ್ನಡ ಮಾತನಾಡುವ ಜನ ಮಹಾರಾಷ್ಟ್ರದಲ್ಲಿದ್ದರು. ಹೈದರಾಬಾದಿನಲ್ಲಿದ್ದರು. ತಮಿಳುನಾಡಿನಲ್ಲಿದ್ದರು. ತೆಲಂಗಾಣದಲ್ಲಿದ್ದರು. ಕನ್ನಡ ಬಾಷೆಯನ್ನಾಡುವ ಜನ ಒಂದು ರಾಜ್ಯದಲ್ಲಿ ಬರಬೇಕು ಆ ರಾಜ್ಯವನ್ನು 'ಕರ್ಣಾಟಕ' ಎಂದು ಕರೆಯಬೇಕು ಎಂದು ನಮ್ಮ ಜನತೆಯ ಆಸೆಯಾಗಿತ್ತು. ಕರ್ಣಾಟಕ ಎಂಬ ಶಬ್ದ ಯಾವ ಕಾಲಕ್ಕೂ ಇಲ್ಲ ಎನ್ನುವ ಧಾಟಿಯಲ್ಲಿ ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದ್ದಾರೆ. ನನಗಾದರೂ ಅನಿಸುತ್ತದೆ ಅವರು ಪ್ರೊಫೆಸರ್ ಇದ್ದಾರೆ. ಇತಿಹಾಸಗಳನ್ನೆಲ್ಲಾ ಅವರು ಚೆನ್ನಾಗಿ ಓದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇವೆ. ಕರ್ಣಾಟಕ ಎಂಬ ಹೆಸರು ಈಗ ಹುಟ್ಟಿದ್ದಲ್ಲ. ಅದು ಸಾವಿರಾರು ವರ್ಷಗಳಿಂದ ಇದೆ ಎಂಬುದನ್ನು ಇತಿಹಾಸ ಸಾರಿ ಸಾರಿ ಹೇಳುತ್ತಿದೆ. ನಮ್ಮ ಕರ್ಣಾಟಕದ ಇತಿಹಾಸವನ್ನು ನೋಡುವುದಾದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ನಮ್ಮ ರಾಜ್ಯ ಇತ್ತು ಎನ್ನುವಂಥಾದ್ದು ನಮಗೆ ಇತಿಹಾಸದಿಂದ ಕಂಡುಬರುತ್ತದೆ. ಆದರಲ್ಲಿಯೂ ಸಹ ಕರ್ನಾಟಕ ಎಂದು ಇದೆಯೇ ಹೊರತು ಕನ್ನಡ ನಾಡು ಎಂದು ಇಲ್ಲ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಇದು ಯಾವ ಇತಿಹಾಸದಲ್ಲಿದೆ ?

ಶ್ರೀ ಎಸ್. ಎಂ. ಗುರೆಡ್ಡಿ.—ಮಾನ್ಯ ಸದಸ್ಯರಾದ ಶ್ರೀ ದೇವರಾಜ ಅರಸ್ ಅವರು ರಾಜಮನೆತನದವರು. ಅವರು ಈ ವಿಷಯವನ್ನು ತಿಳಿದುಕೊಂಡಿದ್ದಾರೆಂದು ತಿಳಿಯುತ್ತೇನೆ. ಅವರು ಎಷ್ಟೋ ಸಲ ಕಾಶ್ಮೀರಕ್ಕೆ ಹೋಗಿ ಬಂದಿದ್ದಾರೆ. ಅವರು ಅಲ್ಲಿಯ ಹಳೆ ಕನ್ನಡದ ಲಿಪಿಯನ್ನ ಶಿಲಾಶಾಸನಗಳನ್ನು ನೋಡಿದರೆ ಅವರಿಗೆ ಆಗ ಅದು ಗೋಚರವಾಗುತ್ತದೆ. ಕರ್ನಾಟಕದ ಇತಿಹಾಸ ಆಗಿನ ಕಾಲಕ್ಕೂ ಪ್ರಸಿದ್ಧಿಯಾಗಿತ್ತು. ಇವೊತ್ತು ಈ ರಾಜ್ಯದ ಹೆಸರನ್ನು ಕರ್ಣಾಟಕ ಎಂದು ಕರೆಯುವುದಕ್ಕೆ ಐತಿಹಾಸಿಕವಾಗಿ ಏನು ಕಾರಣಗಳಿವೆ ಎಂಬುದನ್ನು ಸಾಕ್ಷಿ ಸಾಹಿತ್ಯ ಆಧಾರದ ಮೇಲೆ ನಾನು ಹೇಳುತ್ತೇನೆ. ವಿಜಯನಗರದ ರಾಜರು ಕೂಡ ಕರ್ಣಾಟಕದ ಸಿಂಹಾಸನಾಧೀಶ್ವರರಾಗಿದ್ದರು ವಿಜಯನಗರ ಕರ್ಣಾಟಕದ ರಾಜಧಾನಿ ಎಂದು ಕರೆಯಲ್ಪಟ್ಟಿತ್ತು. ಮೈಸೂರು ಮಹಾರಾಜರನ್ನು ಇಂದಿಗೂ ಕರ್ನಾ ಕ ರತ್ನಸಿಂಹಾಸನಾಧೀಶ್ವರ ಎಂದೇ ಕರೆಯಲಾಗುತ್ತಿದೆ. ಮೈಸೂರಿಗೆ ಹೊರಗಡೆಯಿಂದ ಬಂದವರೆ ಈ ರಾಜ್ಯಕ್ಕೆ ಕರ್ಣಾಟಕ ಎನ್ನುವ ಹೆಸರನ್ನು ಇಡಬೇಕು ಎಂದು ಹೇಳುತ್ತಿದ್ದಾರೆ ಎಂದು ತಾವು ಹೇಳಬಹುದು. ಅದು ಸರಿಯಲ್ಲ. ತಾವು ಕೇವಲ ಎಮೋಷನಲ್ ಆಗಿ ಒಂದು ಕಾಂಪ್ರಮೈಜ್ ಫಾರ್ಮ್ಯುಲ ತಂದೊಡ್ಡಿದ್ದಿರಿ. ಕೆಲವು ಜನ ಈ ರಾಜ್ಯದ ಹೆಸರು ಕರ್ಣಾಟಕ ಎಂದು ಆಗಬೇಕೆಂದು ಕೇಳುತ್ತಿದ್ದಾರೆ, ಇನ್ನೂ ಕೆಲವರು ಮೈಸೂರು ಎನ್ನುವುದನ್ನು ಹೀಗೆಯೇ ಉಳಿಸಿಕೊಂಡು ಬರಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇಬ್ಬರ ನಡುವೆ ಶ್ರೀಮಾನ್

ಶ್ರೀಕಂಠಯ್ಯನವರು ಒಂದು ಫಾರ್ಮ್ಯುಲವನ್ನು ತಂದು ಈ ರಾಜ್ಯದ ಹೆಸರನ್ನು ಕನ್ನಡ ನಾಡು ಎಂದು ಇಡಬೇಕೆಂದು ಅವರು ಹೇಳುತ್ತಿದ್ದಾರೆಂದು ನಾನು ಆಶೆ ಮಾಡಿಕೊಂಡಿದ್ದೇನೆ. ಆದಕ್ಕೆ ನನ್ನ ಆಕ್ಷೇಪಣೆ ಇಷ್ಟೆ.

5–00 P.M.

ಆದರೆ ಈ ಸಂದರ್ಭದಲ್ಲಿ ನಾವೂ ಕೂಡ ಸ್ವಲ್ಪ ವಿಚಾರ ಮಾಡಬೇಕಾಗಿದೆ. ಮೈಸೂರು ರಾಜ್ಯ ಒಂದುಗೂಡಿ ಇಲ್ಲಿಗೆ 10-12 ವರ್ಷಗಳಾಯಿತು. ಈ ಅವಧಿಯಲ್ಲಿ ನಮ್ಮಲ್ಲಿ ಎಷ್ಟು ಭಾವೈಕ್ಯತೆಯು ಮೊತ್ತ ಬೆಳೆಯಬೇಕಾಗಿತ್ತೋ ಆ ಒಂದು ಮೊತ್ತ ಬೆಳೆದಿಲ್ಲ. ಇದು ವಿಷಾದಕರ. ಈ ಭಾವನೆ ಬೆಳೆಯಬೇಕಾದರೆ ಈಗಿರುವ ಮೈಸೂರು ರಾಜ್ಯ ಎನ್ನುವುದನ್ನು ಕರ್ಣಾಟಕ ರಾಜ್ಯ ಎಂದು ಬದಲಾವಣೆ ಮಾಡಬೇಕು. ಈ ರೀತಿಯಾದರೆ ಮಾತ್ರ ಭಾವೈಕ್ಯತೆ ಸಾಧಿಸಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಈಗ ನಮ್ಮ ಹಿರಿಯ ಸದಸ್ಯರೊಬ್ಬರು ಹೇಳಿದರು, ಹೆಸರಿನಲ್ಲಿ ಏನಿದೆ, ಹೆಸರು ಏನು ಮಾಡುತ್ತದೆ, ಹೆಸರನ್ನು ಏನಾದರೂ ಬದಲಾವಣೆ ಮಾಡಿಧರೆ ನಮ್ಮ ರಾಜ್ಯವೇನೂ ಶ್ರೀಮಂತ ರಾಜ್ಯವಾಗುವುದಿಲ್ಲ, ನೀರಾವರಿ ಪ್ರದೇಶಗಳು ಜಾಸ್ತಿಯಾಗಿ ದೇಶ ಸಮೃದ್ಧಿಯಾಗುವುದಿಲ್ಲ, ಕೈಗಾರಿಕೆಗಳು ಜಾಸ್ತಿಯಾಗುವುದಿಲ್ಲ ಎನ್ನತಕ್ಕಂಥ ಧಾಟಿಯಲ್ಲಿ ಹೇಳಿದರು, ಎಷ್ಟೋ ಜನ ಶ್ರೀಮಂತರು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಸಿಕೊಂಡು ಇದ್ದಾರೆ. ಅಗರ್ಭ ಶ್ರೀಮಂತರಿದ್ದಾರೆ. ಆದರೂ ಸಹ ಅವರ ಮನಸ್ಸಿನಲ್ಲಿ ಸಮಾಧಾನ ತೃಪ್ತಿ ಇದೆ ಎಂದು ಹೇಳಲಿಕ್ಕೆ ಆಗುವುದಿಲ್ಲ, ಮನಸ್ಸಿನ ತೃಪ್ತಿ ಸಮಾಧಾನವೇ ಬೇರೆ ಜನರ ಮನಸ್ಸಿನ ತೃಪ್ತಿ ಹೆಚ್ಚಿಸಲು ಅವರ ಮನಸ್ಸಿನಲ್ಲಿ ಸಮಾಧಾನ ಒಳಮೂಡಬೇಕಾದರೆ ಕರ್ಣಾಟಕ ಎಂದು ಹೆಸರು ಬದಲಾವಣೆ ಮಾಡುವುದರಿಂದ ಮಾತ್ರ ಸಾಧ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಬೇರೆ ಬೇರೆ ಹೆಸರಿನಿಂದ ನಮ್ಮ ರಾಜ್ಯವನ್ನು ಕರೆದರೆ ಜನತೆಗೆ ಎರಡು ಬಗೆದಂತಾಗುತ್ತದೆಂದು, ಹೆಸರಿನಲ್ಲಿ ಏನಿದೆ ಎಂದುಕೊಂಡು ಇದೇ ರೀತಿ ಮುಂದುವರಿಸಿಕೊಂಡು ಹೋದರೆ ಒಳ್ಳೆಯದಾಗುವುದಿಲ್ಲ. ಹೆಸರನ್ನು ಬದಲಾವಣೆ ಮಾಡದೆ, ನಮ್ಮ ಜನರ ಮನಸ್ಸನ್ನು ಬೇರಾವ ರೀತಿಯಿಂದಲೂ ತೃಪ್ತಿ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತೇನೆ ಮದ್ರಾಸ್ ರಾಜ್ಯದವರು ತಮ್ಮ ರಾಜ್ಯದ ಹೆಸರನ್ನು ತಮಿಳು ನಾಡು ಎಂದು ಬದಲಾಯಿಸಿದರು, ಅದಕ್ಕೋಸ್ಕರ ನಮ್ಮ ರಾಜ್ಯದ ಹೆಸರನ್ನು ಕನ್ನಡ ನಾಡು ಎಂದು ಕರೆಯಬಹುದೆಂದು ಮಾನ್ಯ ಸದಸ್ಯರು ಹೇಳಿದರು. ಮದ್ರಾಸಿನಲ್ಲಿ ಅವರು ತಮಿಳನ್ನು ಮಾತನಾಡುತ್ತಿದ್ದರಿಂದ ಆ ರಾಜ್ಯಕ್ಕೆ ಮೊದಲಿನಿಂದಲೂ ಬೇರಾವ ಹೆಸರೂ ಇದ್ದಿದ್ದಿಲ್ಲ, ಅದು ಅಖಂಡ ತಮಿಳು ನಾಡಿನ ಜನತೆಯ ಪ್ರೇಮದ ಹೆಸರಾಗಿತ್ತು. ಕಾರಣ ಆ ರಾಜ್ಯಕ್ಕೆ "ತಮಿಳುನಾಡು" ಎಂದು ಮಾಡಿಕೊಂಡರು. ಮದ್ರಾಸ್ ರಾಜ್ಯ ಎಂಬುದು ಯಾವ ಕಾಲದಲ್ಲಿಯೂ ಇರಲಿಲ್ಲ. ಬ್ರಿಟಿಷರು ನಮ್ಮ ದೇಶಕ್ಕೆ ಬಂದನಂತರ ನಿರ್ಮಾಣವಾದಂಥ ರಾಜ್ಯ ಇದು. ನನಗೆ ತಿಳಿದಮಟ್ಟಿಗೆ ಮದ್ರಾಸ್ ರಾಜ್ಯಕ್ಕೆ ಮೂಲ ಇತಿಹಾಸದಲ್ಲಿ ಮದ್ರಾಸ್ ರಾಜ್ಯ ಎಂಬ ಹೆಸರೇ ಇದ್ದಿಲ್ಲ ಎಂದು ಹೇಳುತ್ತೇನೆ. ಒಂದೇ ಭಾಷೆ ಮಾತನಾಡುವ ಜನರು ಒಂದು ಕಡೆ ಸೇರಿ ತಮಿಳು ನಾಡು ಎಂದು ಕರೆಸಿಕೊಂಡರು. ಆದರೆ ನಮ್ಮ ಕರ್ಣಾಟಕದ ಇತಿಹಾಸ ಬೇರೆ. ಯಾವ ಇತಿಹಾಸ ಪುಸ್ತಕಗಳನ್ನು ತಿರುವಿ ಹಾಕಿದರೂ ಸಹ ಕನ್ನಡ ನಾಡಿನ ರಾಜ್ಯ ಎಂದು ಯಾವ ಕಡೆಯೂ ಹೇಳಿಲ್ಲ. ಮದ್ರಾಸ್ ರಾಜ್ಯದ ಹೆಸರನ್ನು ತಮಿಳು ನಾಡು ಎಂದು ಕರೆದ ಮೇಲೆ ನಮ್ಮ ರಾಜ್ಯದ ಹೆಸರನ್ನು ಸಹ ಕನ್ನಡ ನಾಡು ಎಂದು ಕರೆದರೆ ಸಾಕು ಎಂಬುದಾಗಿ ಲಘುವಾಗಿ ಹೇಳಿದರೆ ಆಗುವುದಿಲ್ಲ. ಹೆಸರಿನ ಬದಲಾಣೆಯು ಸಮುವಾಗಿ ಬಹಳ ವಿಚಾರ ಮಾಡಬೇಕಾಗಿದೆ. ಈಗ ಅಂತಹ ಒಂದು ಸಂದರ್ಭ ಕೂಡ ಬಂದಿದೆ. ಹೆಸರಿನ ಬದಲಾವಣೆ ಮಾಡುವುದಕ್ಕೆ ಇದು ಸರಿಯಾದ ಸಂದರ್ಭ, ಸರಿಯಾದ ಸಮಯ ಎಂದು ಎಲ್ಲರೂ ತಿಳಿದುಕೊಂಡಿದ್ದಾರೆ. ರಾಜ್ಯದ ಹೆಸರನ್ನು ಬದಲಾವಣೆ ಮಾಡದೆ ಇದೇ ಹೆಸರನ್ನು ಮುಂದುವರಿಸಿಕೊಂಡು ಹೋದರೆ ರಾಜ್ಯದ ಪ್ರಗತಿ ಕುಂಠಿತವಾಗಬಹುದು. ಆದ್ದರಿಂದ ಎಲ್ಲರೂ ಒಪ್ಪುವಂತಹ ಹೆಸರನ್ನು ರಾಜ್ಯಕ್ಕೆ ಇಟ್ಟು ರಾಜ್ಯಭಾರ ಮಾಡುವುದು ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ತಾವುಗಳು ತಮ್ಮ ಒಂದು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು, ಜನಸಾಮಾನ್ಯರ ಮನಸ್ಸು ಏನಿದೆ ಎಂಬುದನ್ನು ತಿಳಿದುಕೊಂಡು, ಈಗಿನ ಹೆಸರನ್ನು ಬದಲಾವಣೆ ಮಾಡುವ ಕಡೆಗೆ ತಮ್ಮ ಲಕ್ಷ್ಯ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇವತ್ತಿನ ದಿವಸ ನಮ್ಮ ಕರ್ನಾಟಕದ ಕನ್ನಡ ಕವಿಗಳು ಕೂಡ ಹೆಸರಿನ ಬದಲಾವಣೆಯಾಗಬೇಕೆಂದು ಮೊದಲಿನಿಂದಲೂ ಹೇಳುತ್ತಾ ಬಂದಿದ್ದಾರೆ. ಮಹಾಕವಿಗಳಾದ ಡಾ|| ಕೆ. ವಿ. ಪುಟ್ಟಪ್ಪನವರು ಸಹ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಬೇಕೆಂದು ಹೇಳಿದ್ದಾರೆ. ದೊಡ್ಡ ದೊಡ್ಡ ಸಾಹಿತಿಗಳು, ಕಲಾವಿದರುಗಳು ಸಹ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಬೇಕೆಂದು ಹೇಳುತ್ತಿದ್ದಾರೆ. ಆದರೆ ಈ ಹೆಸರಿನ ಬದಲಾವಣೆ ಕೆಲವೊಂದು ಕಾರಣ

(ಶ್ರೀ ಎಸ್. ಎಂ. ಗುರೆಡ್ಡಿ)

ಗಳಿಂದ ಮುಂದೆ ಹೋಗುತ್ತಿದೆ. ಇದಕ್ಕಾಗಿ ನಾವು ವಿಷಾದಿಸಬೇಕಾಗಿದೆ. ಈ ರಾಜ್ಯಕ್ಕೆ ಕನ್ನಡ ನಾಡು ಎಂದು ಹೆಸರಿಡಬೇಕೆಂದು ಶ್ರೀಮಾನ್ ಶ್ರೀಕಂಠಯ್ಯನವರು ಏನು ಒಂದು ನಿರ್ಣಯವನ್ನು ತಂದಿದ್ದಾರೆ, ಅದನ್ನು ವಾಪಸ್ ತೆಗೆದುಕೊಂಡು, ಶ್ರೀಮಾನ್ ಗಂಗಾಧರ್ ಅವರು ಇದೇ ನಿರ್ಣಯದ ಮೇಲೆ ಏನು ಒಂದು ತಿದ್ದುಪಡಿಯನ್ನು ತಂದಿದ್ದಾರೆ ಅದನ್ನು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈಗಿನ ಹೆಸರು ಬದಲಾವಣೆಯಾಗಬೇಕು ಎಂಬ ಬಗ್ಗೆ ಸುಮಾರು ಒಂದೂವರೆ ಗಂಟೆ ಕಾಲ ಅವರು ತಮ್ಮ ಅಭಿಪ್ರಾಯವನ್ನು ಒತ್ತಿ ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕರ್ನಾಟಕ ಎಂದು ಹೆಸರಿಡಬೇಕು ಎಂಬ ಬಗ್ಗೆ ಅವರ ಖಚಿತ ಅಭಿಪ್ರಾಯ ತಿಳಿಸಲಿಲ್ಲ. ಈಗಿನ ಹೆಸರಿನ ಬಗ್ಗೆ ಅವರೂ ಕೂಡ ಬೇಸರಪಟ್ಟಿದ್ದಾರೆ. ಅವರ ಭಾವನೆ ಎಷ್ಟರ ಮಟ್ಟಿಗೆ ಹೋಗಿದೆಯೆಂದರೆ ಎಲ್ಲರೂ ಒಂದು ಕಾಂಪ್ರಮೈಸ್‌ಗೆ ಬರುವುದು ಒಳ್ಳೆಯದು ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. 1956ರಲ್ಲಿ ವಿಶಾಲ ಮೈಸೂರು ರಾಜ್ಯ ನಿರ್ಮಾಣವಾದಾಗ ಆಗ ಇದ್ದ ರಾಜಕೀಯ ಕಾರಣಗಳು ಮತ್ತು ರಾಜಕೀಯ ಪರಿಸ್ಥಿತಿಯ ಒತ್ತಡಗಳ ಮೂಲಕ ಆಗಿನ ನಾಯಕರು ವಿಚಾರವಿನಿಮಯ ಮಾಡಿಕೊಂಡು ಈಗಿನ ಹೆಸರನ್ನೇ ಮುಂದುವರೆಸಬೇಕೆಂದು ತೀರ್ಮಾನಿಸಿದರು. ಅದನ್ನು ನಾನು ಒಪ್ಪುತ್ತೇನೆ. 1956ಕ್ಕೆ ಮುಂಚೆ, ಮುಂಬೈ ಕರ್ನಾಟಕ ಹೈದರಾಬಾದ್ ಕರ್ನಾಟಕದಲ್ಲಿ ಇದ್ದ ಕನ್ನಡ ಮಾತನಾಡುವ ಜನರ ಮನಸ್ಸಿನಲ್ಲಿ ಏನಿತ್ತೆಂದರೆ, ಕನ್ನಡ ಮಾತನಾಡುವ ಜನರೆಲ್ಲರೂ ಒಂದು ಕಡೆ ಸೇರದಿದ್ದರೆ ನಮ್ಮ ಪ್ರಗತಿಯಾಗುವುದಿಲ್ಲ, ನಮ್ಮ ರಾಜ್ಯದ ಪ್ರಗತಿಯಾಗುವುದಿಲ್ಲ, ಮೊದಲು ಕರ್ನಾಟಕ ರಾಜ್ಯ ನಿರ್ಮಾಣವಾಗಬೇಕು ಎಂದುಕೊಂಡು ವಿಶಾಲ ಹೃದಯದಿಂದ ಒಪ್ಪಿಕೊಂಡಿದ್ದಾರೆ. ಈಗಿನ ಹೆಸರನ್ನೇ ಮುಂದುವರಿಸಿಕೊಂಡು ಹೋಗಬೇಕೆನ್ನುವ ಭಾವನೆ ಅವರಲ್ಲಿ ಆ ಕಾಲದಲ್ಲಿ ಇರಲಿಲ್ಲ. ನಾನು ತಮ್ಮನ್ನು ಕೇಳಿಕೊಳ್ಳುವುದು ಇಷ್ಟೆ: ನಮ್ಮ ದೇಶದಲ್ಲಿರುವ ಅನೇಕ ರಾಜ್ಯಗಳವರು ತಮ್ಮ ರಾಜ್ಯದ ಹೆಸರನ್ನು ವಾತಾವರಣಕ್ಕೆ ತಕ್ಕಂತೆ ಪರಿವರ್ತಿಸಿಕೊಂಡಿದ್ದಾರೆ. ಮುಂಬೈ ರಾಜ್ಯ ಮಹಾರಾಷ್ಟ್ರವಾಯಿತು. ಆ ರೀತಿ ಬದಲಾವಣೆಯಾದಾಗ ಅಲ್ಲಿಯೂ ಕೂಡ ಕೆಲವು ಜನರು ತಕರಾರು ಮಾಡಿದರು. ಕೊನೆಗೆ ಎಲ್ಲರೂ ಒಪ್ಪಿಕೊಂಡಮೇಲೆ ಮಹಾರಾಷ್ಟ್ರವಾಯಿತು. ಆದಕಾರಣ ಮಾನ್ಯ ಸದಸ್ಯರುಗಳಲ್ಲಿ ಹೆಸರಿನ ಬದಲಾವಣೆಯ ಬಗ್ಗೆ ಇರುವ ಅಭಿಪ್ರಾಯವನ್ನು ಖಂಡಿಸಿ, ಮೈಸೂರು ರಾಜ್ಯದ ಹೆಸರು ಕನ್ನಡ ನಾಡು ಎಂದು ಆಗಬೇಕು ಎಂಬ ಸಂಕುಚಿತ ಭಾವನೆಯನ್ನು ತೊರೆದು ಈ ರಾಜ್ಯಕ್ಕೆ ಒಂದು ವಿಶಾಲವಾದ ಹೆಸರನ್ನು ಕೊಡುವುದಕ್ಕೆ ಒಪ್ಪಬೇಕು. ಧಾರವಾಡ, ಬಿಜಾಪುರ, ಮೈಸೂರು, ಬೆಂಗಳೂರು ಎಂಬುದಾಗಿ ಒಂದು ಪಟ್ಟಣದ ಅಥವಾ ಒಂದು ಊರಿನ ಹೆಸರನ್ನು ಈ ರಾಜ್ಯಕ್ಕೆ ಕರೆಯುವುದು ಬೇಡ. ಎಲ್ಲರ ವಿಶಾಲ ಹೃದಯದಿಂದ ಬರುವ ಹೆಸರೆಂದರೆ ಕರ್ನಾಟಕ ಎಂದು. ಇದು ಎಲ್ಲರ ಮೆಚ್ಚುಗೆಗೆ ಪಾತ್ರವಾದ ಹೆಸರಾಗಿದೆ. ಈ ಹೆಸರಿಗೆ ಯಾರ ಅಭ್ಯಂತರವೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಹೆಸರನ್ನು ಇಡುವುದಕ್ಕೆ ಮಾನ್ಯ ಸದಸ್ಯರೆಲ್ಲರೂ ಒಮ್ಮತದಿಂದ ಬೆಂಬಲ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ನಾನು ಕೇಳಿದ ಮಟ್ಟಿಗೆ ಈ ರಾಜ್ಯದ ಹೆಸರಿನ ಬಗ್ಗೆ ಕೆಲವು ಮಂದಿ ಸದಸ್ಯರು ಇದರ ಬಗ್ಗೆ ಹಿಂದೆಯೂ ಮಾತನಾಡಿದ್ದರು ಇನ್ನು ಮುಂದೂ ಇದರ ಬಗ್ಗೆ ಮಾತನಾಡಬಹುದು. ಹೆಸರಿನಲ್ಲಿ ಏನಿದೆ ಎಂದು ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರು ಇಲ್ಲಿ ಹೇಳಿದರು.

Sri H. M. CHANNABASAPPA.—The Hon'ble Member does not seem to have understood what exactly I have said. He should not misinterpret and mislead the House. I take strong objection for his misleading the House. He can refer to me only after I speak and take a definite stand. What I said was: "you tell us what are the benefits by calling this State as 'Karnataka', what are the material benefits by calling it 'Knnada nadu', what are the difficulties if we have 'Mysore'?"

ಶ್ರೀ ಎಸ್. ಎಂ. ಗುರೆಡ್ಡಿ.—ಮಾನ್ಯ ಸದಸ್ಯರಾದ ಶ್ರೀಮಾನ್ ಹೆಚ್. ಎಂ. ಚನ್ನಬಸಪ್ಪನವರು ಕರ್ನಾಟಕ ರಾಜ್ಯಕ್ಕೆ ವಿರೋಧ ಇದ್ದಾರೆ ಹಾಗೂ ಕರ್ನಾಟಕ ಎನ್ನುವ ಹೆಸರಿಗೆ ವಿರೋಧ ವ್ಯಕ್ತ ಮಾಡುತ್ತಿದ್ದಾರೆ ಎಂದು ನಾನು ಇಲ್ಲಿ ಹೇಳಿಲ್ಲ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಹೇಳುವುದನ್ನು ಊಹಿಸಿ ಅಪಾರ್ಥ ಮಾಡಿಕೊಂಡು ಹೇಳುತ್ತಾರೆಂದು ತೋರುತ್ತೆ.

ನಾನು ಇಲ್ಲಿ ಹೇಳುತ್ತಿರುವುದು ಇಷ್ಟೇ: ಸುಖ ಸಂತೃಪ್ತಿಗಳು ಹೆಸರಿನಿಂದಲೇ ಬರಲಿಕ್ಕಿಲ್ಲ ಮಾನಸಿಕ ಸಂಪತ್ತು ಇದೆ ಮಾನಸಿಕ ಸಂತೋಷವಿದೆ, ಜನರ ಹೃದಯದಲ್ಲಿಯ ಸಂತೋಷವನ್ನು ತಿಳಿದು ಕೊಳ್ಳುವುದೂ ಕೂಡ ಮಹತ್ವದ್ದೇ ಆಗಿದೆ. ಕಾರಣ ಈ ಹಿನ್ನೆಲೆಯಲ್ಲಿ ರಾಜ್ಯದ ಹೆಸರನ್ನು ಪರಿವರ್ತನೆ ಮಾಡುವಾಗ ಇದನ್ನು ಸರಿಯಾಗಿ ಅವರು ಮಾಡಬೇಕು. ನಾವು ಪ್ರೇಮಕ್ಕಾಗಿ ಮನಸ್ಸಿನ ಸಂತೋಷಕ್ಕಾಗಿ ಮಕ್ಕಳಿಗೆ ಒಂದು ಪ್ರೇಮದ ಹೆಸರು ಇಡುತ್ತೇವೆ. ಹೆಸರಿನಲ್ಲೇನಿದೆ ಎಂದು ಬೇಕಾಗದ ಹೆಸರನ್ನು ಇಡುವುದಿಲ್ಲ "ಕರ್ಣಾಟಕ ರಾಜ್ಯ" ಎಂದು ಕರೆದಾಕ್ಷಣವೇ ಜನರೆಲ್ಲ ಎಲ್ಲ ಸಂಪತ್ ಸಮೃದ್ಧರಾಗುತ್ತಾರೆಂದು ನಾನು ಹೇಳುತ್ತಿಲ್ಲ. ಮೈಸೂರು ಎನ್ನುವುದು ಒಂದು ಚಿಕ್ಕ ರಾಜ್ಯವಾಗಿತ್ತು ಎನ್ನುವುದು ಹಿಂದಿನ ಇತಿಹಾಸಗಳಿಂದ ಗೊತ್ತಾಗುತ್ತದೆ. ಹಿಂದೆ ಇಂಡಿಯಾ ದೇಶದಲ್ಲಿ ಸುಮಾರು 70 ಸಂಸ್ಥಾನಗಳು ಇದ್ದವು ಇದರಲ್ಲಿ ಮೈಸೂರು ಕೂಡ ಒಂದು ಸಣ್ಣ ಸಂಸ್ಥಾನವಾಗಿತ್ತು. ಸಣ್ಣ ಸಂಸ್ಥಾನದ ಹೆಸರನ್ನೇ ಅದರಲ್ಲಿ ಒಂದು ಪಟ್ಟಣದ ಹೆಸರನ್ನೇ ಮುಂದೂರಿಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ ಸಮಂಜಸವಲ್ಲ ಎಂದು ಹೇಳಬಹುದು. ಇಂದು ಪರದೇಶಗಳಲ್ಲಿ ಮೈಸೂರು ರಾಜ್ಯದ ಬಗ್ಗೆ ಯಾವ ಅಭಿಪ್ರಾಯವಿದೆ ಎನ್ನುವುದು ನಮಗೆ ತಿಳಿದ ವಿಷಯವಾಗಿದೆ. ಹೊರ ದೇಶಗಳವರು ಇಲ್ಲಿಂದ ಹೋದ ಜನರ ಬಗ್ಗೆ ಏನು ಭಾವನೆ ಮಾಡಿ ಕೊಂಡಿದ್ದಾರೆ ಎಂದರೆ 'ಮೈಸೂರು' ಎಂದಕೂಡಲೇ ಒಂದು ಪಟ್ಟಣದ ಜನ ಬಂದಿದ್ದಾರೆ ಅಥವಾ ಒಂದು ಸಣ್ಣ ಪಟ್ಟಣದಲ್ಲಿ ಇದ್ದಂಥ ಜನ ಎಂಬ ಭಾವನೆ ಇದ್ದಂತೆ ನನಗೆ ತೋರುತ್ತದೆ. ಇದಕ್ಕೆ ಕರ್ಣಾಟಕ ಪ್ರಾಂತ ಎಂದು ಇದ್ದರೆ ಆಗ ಈ ರಾಜ್ಯಕ್ಕೆ ಒಂದು ರೀತಿಯಾದ ಗೌರವ ಬರುತ್ತದೆ. ನಮ್ಮ ಕರ್ಣಾಟಕ ಪ್ರಾಂತ ಆಗುವಾಗ ಬೇರೆ ಬೇರೆ ಕಡೆಗಳಲ್ಲಿ ಇದ್ದಂಥ ಪ್ರದೇಶಗಳು ಬಂದು ಸೇರಿರುವುದರಿಂದ ಇದನ್ನು ಒಂದು ವಿಶಾಲ ದೃಷ್ಟಿಯಿಂದ ನೋಡಬೇಕು ಒಟ್ಟಿನಲ್ಲಿ ಈ ರೆಸಲ್ಯೂಷನ್‌ನ್ನು ಅನುಮೋದಿಸಿರುವವರು ಹಳೆಯ ಕರ್ಣಾಟಕದ ಕಡೆಯಿಂದ ಬಂದವರು ಇದಕ್ಕಾಗಿ ಇವರು ಕರ್ಣಾಟಕ ಎಂಬ ಹೆಸರಿನ ಪ್ರಭಾವ ಬೀರಬೇಕು ಎಂದು ಹೇಳುತ್ತಿದ್ದಾರೆಂದು ತಿಳಿಯದೆ, ಹಿಂದಿನಿಂದಲೂ ಕರ್ಣಾಟಕ ಎನ್ನುವ ಹೆಸರೇ ಇರಬೇಕು ಎಂದು ಹೇಳುತ್ತಾ ಬರುತ್ತಿರುವುದರಿಂದ ಇಂದು ಕೂಡ ಇದಕ್ಕೆ ಕರ್ಣಾಟಕ ಎಂದು ಹೆಸರು ಇಡುವುದು ಸೂಕ್ತ ಎಂದು ನಾನು ಇಲ್ಲಿ ಹೇಳುತ್ತೇನೆ. ಕರ್ಣಾಟಕ ಎಂದು ಹೆಸರು ಇಡುವುದರಲ್ಲಿ ಇಲ್ಲದ ಭೇದ ಭಾವನೆಗಳನ್ನು ತರುವುದು ಬೇಡ. ನಮ್ಮ ಕರ್ಣಾಟಕದ ಬಹು ಭಾಗಗಳು ಹರಿದು ಹಂಚಿ ಹೋಗಿದ್ದುದು ಇಂದು ಒಂದಾಗಿ ಒಂದೇ ರಾಜ್ಯದ ಆಡಳಿತದಲ್ಲಿ ಬಂದಿದೆ, ಇದಕ್ಕೆ ಮುಂಬೈ ಪ್ರಾಂತದ ಕೆಲವು ಭಾಗಗಳು ಹಾಗೂ ಹೈದರಾಬಾದು ಪ್ರಾಂತದ ಕೆಲವು ಭಾಗಗಳು ಹಾಗೂ ಇನ್ನಿತರ ಭಾಗಗಳು ಸೇರಿ ಒಂದೇ ರಾಜ್ಯವಾಗಿದೆ ಇದರಿಂದಾಗಿ ಇಂದು ಅಖಂಡ ಕರ್ಣಾಟಕ ರಾಜ್ಯ ನಿರ್ಮಾಣವಾಗಿದೆ. ಇಂದು ಇಂತಹ ರಾಜ್ಯಕ್ಕೆ ಎಲ್ಲ ಪ್ರದೇಶಗಳೂ ಬಂದು ಒಂದುಗೂಡಿರುವಾಗ ಇದಕ್ಕೆ ಕರ್ಣಾಟಕ ಎಂದು ಹೆಸರು ಇಡುವುದು ಸೂಕ್ತ ಎಂದು ನಾನು ಇಲ್ಲಿ ಒತ್ತಾಯ ಮಾಡುತ್ತೇನೆ. ಇವೊತ್ತಿನ ದಿವಸ ಇದರಲ್ಲಿ ಹಳೆಯ ಮೈಸೂರು ಪ್ರಾಂತದವರು ಹೆಸರಿನಲ್ಲೇನಿದೆ ಎಂದು ಕೇಳಬಹುದು. ಮೈಸೂರು ಎಂದು ಇದ್ದರೆ ಕೇಂದ್ರದವರ ಮೇಲೆ ಹೆಚ್ಚು ಪ್ರಭಾವ ಬೀರುವುದಕ್ಕೆ ಆಗುವುದಿಲ್ಲ ಎಂದು ಹೇಳುವುದು ಅಷ್ಟು ಸಮಂಜಸವಲ್ಲ. ಮೈಸೂರು ಎಂದು ಕರಿಸಿಕೊಳ್ಳುವುದು ಇಲ್ಲಿನ ಜನಕ್ಕೆ ಪ್ರಿಯವಾಗಿದೆ ಎಂದು ಕರ್ಣಾಟಕ ಎಂದು ಕರೆದರೆ ಆ ಹೆಸರಿನ ಪ್ರಭಾವ ಹೇಗೆ ಹೆಚ್ಚಾಗುತ್ತದೆ, ಏನು ಅವಕಾಶಗಳಿವೆ ಎಂದು ಕೇಳಬಹುದು. ಕರ್ಣಾಟಕ ಎನ್ನುವ ಹೆಸರಿಗೆ ಇತಿಹಾಸ ಪರಂಪರೆಗಳು ಇವೆ. ಆದರೆ ಮೈಸೂರು ಎನ್ನುವ ಹೆಸರಿಗೆ ಅಂತಹ ಪರಂಪರೆಗಳಿಲ್ಲ. ಹಾಗಿದ್ದರೂ ಇಂತಹ ಹೆಸರನ್ನು ಉಳಿಸಿಕೊಂಡು ಬರಬೇಕು ಎನ್ನುವ ಹಂಬಲದಿಂದ ಹೇಳುತ್ತಿದ್ದಾರೆ. ಈಗ ಮೈಸೂರು, ಕರ್ಣಾಟಕ, ಕನ್ನಡನಾಡು ಹೀಗೆ ಮೂರು ಹೆಸರುಗಳು ಕೇಳಿ ಬರುತ್ತಿವೆ. ಕೆಲವರು ಮೈಸೂರು ಎನ್ನುವ ಹೆಸರನ್ನೇ ಮುಂದುವರಿಸಿಕೊಂಡು ಬರಬೇಕು ಎಂದೂ ಕೆಲವರು ಕರ್ಣಾಟಕ ಎಂದು ಹೆಸರು ಕರೆಯಬೇಕು, ಕನ್ನಡನಾಡು ಎಂದು ಕೆಲವರು ಹೇಳುತ್ತಾರೆ. "ಕನ್ನಡ ನಾಡು" ಎಂದು ಕರೆಯಬೇಕೆಂದು ಹೊಸದಾಗಿ ತಂದಿದ್ದಾರೆ ಮತ್ತು ಈ ರೆಸಲ್ಯೂಷನ್‌ನನ್ನು ಹೀಗೆ ತರುವುದರಲ್ಲಿ ಏನೂ ಬೆರೆ ಇಲ್ಲ. ಇದು ಅಷ್ಟು ಉಚಿತವೂ ಅಲ್ಲ. ಏಕೆಂದರೆ ಕನ್ನಡನಾಡು ಎಂದು ಎಲ್ಲೂ ಬಂದಿಲ್ಲ. ಕನ್ನಡ ಭಾಷೆ ಎಂದರೆ ಒಂದು ನಾಡಾಗುವುದಿಲ್ಲ. ಕರ್ಣಾಟಕದಲ್ಲಿ ಕನ್ನಡ ಭಾಷೆಯಾಡುವ ಜನರಿದ್ದಾರೆ. ಅಲ್ಲದೆ ಕನ್ನಡ ಭಾಷೆ ಮಾತನಾಡದೇ ಇರುವವರೂ ಇದ್ದಾರೆ. ಅನ್ಯ ಭಾಷೆಗಳನ್ನು ಮಾತನಾಡುವವರ ಮೇಲೆ ಒತ್ತಾಯ ತಂದು ಕೆಲಸ ಮಾಡುತ್ತೇವೆ ಎನ್ನುವ ಭಾವನೆ ಸರಿಯಾದುದಲ್ಲ.

ಅದಕ್ಕಾಗಿ ನಾನು ಹೇಳುವುದು ಏನೆಂದರೆ ಭಾಷಾವಾರು ಪ್ರಾಂತ ರಚನೆಯಾಬೇಕಾದರೆ ಕೇವಲ ಒಂದೇ ಭಾಷೆ ಆಡುವಂಥ ಜನ ಒತ್ತಟ್ಟಿಗೆ ಸೇರಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ನಾನಾ ಭಾಷೆ ಆಡುವ ಜನ ಇದ್ದಾರೆ. ಆ ಅಲ್ಪ ಭಾಷಾಕಾರರ ಮನಸ್ಸಿನ ಮೇಲೆ ಒತ್ತಡ

(ಶ್ರೀ ಎಸ್. ಎಂ. ಗುರೆಡ್ಡಿ)

ತಂದಂತಾಗುತ್ತದೆ. ಆದುದರಿಂದ ಕರ್ನಾಟಕ ರಾಜ್ಯಕ್ಕೆ ಕನ್ನಡನಾಡು ಎನ್ನುವ ಹೆಸರನ್ನು ಇಡುವುದು ಅಷ್ಟು ಸಮರ್ಪಕವಾಗಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ನಮ್ಮ ರಾಜ್ಯದಲ್ಲಿ ಮುಂಬಯಿ ಕರ್ನಾಟಕದಲ್ಲಿ, ಹೈದ್ರಾಬಾದ್ ಕರ್ನಾಟಕದಲ್ಲಿ ಕನ್ನಡ ಮಾತನಾಡತಕ್ಕಂಥ ಜನ ಇದ್ದಾರೆ. ಅವರು ಕನ್ನಡನಾಡು ಆಗಬೇಕು ಎಂದು ಹೇಳಿದರೋ, ಅಥವಾ ಮೈಸೂರು ಭಾಗದಲ್ಲಿರುವ ಕರ್ನಾಟಕ ಜನ ಒಂದುಗೂಡಿ ಕನ್ನಡನಾಡು ಆಗಬೇಕು ಎಂದು ಹೇಳಿದರೋ ?

ಶ್ರೀ ಎಸ್. ಎಂ. ಗುರೆಡ್ಡಿ.—ಕನ್ನಡ ಮಾತಾಡುವ ಜನ ಒತ್ತಟ್ಟಿಗೆ, ಒಂದು ರಾಜ್ಯದ ಕೆಳಗೆ ಬರಬೇಕು, ಕನ್ನಡ ಮಾತನಾಡುವ ಜನರಿಗೆ, ತಮ್ಮದೇ ಆದ ಒಂದು ರಾಜ್ಯ ಬೇಕು, ಅದೂ ಕೂಡ "ಕರ್ನಾಟಕ" ಎಂಬ ಹೆಸರಿನ ರಾಜ್ಯ ಎಂಬ ಭಾವನೆ ಇತ್ತೇ ಹೊರತು ಅವರಲ್ಲಿ ಬೇರಾವ ಹೆಸರಿನ ಕಲ್ಪನೆ ಇದ್ದಿದ್ದಿಲ್ಲ ಎಂದು ಹೇಳುತ್ತೇನೆ. ಇವೊತ್ತು ಮುಂಬಯಿಯಲ್ಲಿ 2-3 ಲಕ್ಷ ಜನ ಇದ್ದಾರೆ. ಅವರು ನಾವು ಕನ್ನಡ ಮಾತನಾಡುವ ಜನ ಎಂದು ಹೇಳುತ್ತಾರೆಯೇ ವಿನಃ ಕನ್ನಡನಾಡಿನ ಜನ ಎನ್ನುವ ಭಾವನೆ ಅವರಲ್ಲಿಲ್ಲ. ಆದುದರಿಂದ ಅವರು ಕರ್ನಾಟಕ ಜನ ಆಗುತ್ತಾರೆ. ಮಾನ್ಯ ಸದಸ್ಯರಾದ ಶ್ರೀಕಂಠಯ್ಯನವರು ಕವಿಗಳಾಗಿದ್ದರಂತೆ, ಪ್ರೊಫೆಸರ್ ಆಗಿದ್ದಾರೆ ಆದರೆ ಅವರು ಕರ್ನಾಟಕ ಎನ್ನುವ ಹೆಸರಿಗೆ ವಿರೋಧವಾಗಿಲ್ಲ ಎಂದು ನಾನು ಧೈರ್ಯದಿಂದ ಹೇಳಬೇಕಾಗಿದೆ. ಅವರು ಯಾವ ಇತಿಹಾಸದ ಪುಟಗಳನ್ನು ತಿರುಗಿ ತಿರುಗಿ ಹಾಕಿ ನೋಡಿದರೂ ಕನ್ನಡನಾಡು ಎಂದು ಕಂಡು ಬರುವುದಿಲ್ಲ. ಒಮ್ಮೆರೆ ಕರ್ನಾಟಕ ಎಂದು ಹೆಸರನ್ನು ರಾಜ್ಯಕ್ಕೆ ಕರೆದರೆ ಕೆಲವು ಜನರ ಭಾವನೆ ಬೇರೆಯಾಗಬಹುದು ಅದಕ್ಕಾಗಿ ಈ ಒಂದು ರೆಸಲ್ಯೂಷನ್ ತಂದಿದ್ದಾರೆಯೇ ವಿನಃ ಕನ್ನಡ ನಾಡು ಎನ್ನುವ ಹೆಸರು ಅವರ ಮನಸ್ಸಿನಲ್ಲಿ ಇಲ್ಲವೆಂದು ಹೇಳುತ್ತೇನೆ. ಎಲ್ಲ ಭಾಗಗಳು ಎಲ್ಲ ರೀತಿಯಿಂದಲೂ ಬೆಳವಣಿಗೆಯಾಗಬೇಕು ಎನ್ನುವ ಭಾವನೆ ಜನತೆಯ ಮನಸ್ಸಿನಲ್ಲೂ ಇದೆ ಮತ್ತು ಎಲ್ಲರ ದೃಷ್ಟಿಯಿಂದಲೂ ಇದು ಆಗಬೇಕಾದ್ದು ಸರಿ. ಇಂದು ಏನಾಗಿದೆ ಹೈದರಾಬಾದ್ ಕರ್ನಾಟಕದಿಂದ ಬಂದಂಥವರು ನಮ್ಮಲ್ಲಿ ಬೆಳವಣಿಗೆ ಆಗಿಲ್ಲ, ಮುಂಬೈ ಕರ್ನಾಟಕ ಪ್ರಾಂತದಿಂದ ಬಂದಂಥವರು ನಮ್ಮಲ್ಲಿ ಬೆಳವಣಿಗೆ ಆಗಿಲ್ಲ, ಹಳೆ ಮೈಸೂರಿನಲ್ಲಿ ಬೆಳವಣಿಗೆ ಆಗುತ್ತಾ ಇದೆ ಎನ್ನುವ ಧಾಟಿಯಲ್ಲಿ ಕೆಲವರು ಮಾತು ಮೇಲಿಂದ ಮೇಲೆ ಕೇಳಿ ಬರುತ್ತಿದೆ. ಇನ್ನೂ ಸ್ವಲ್ಪ ಮಟ್ಟಿಗೆ ಭಾವೈಕ್ಯತೆಯನ್ನು ಸಾಧಿಸಬೇಕಾಗಿದೆ ಎಂದು ಆಶಿಸುತ್ತೇನೆ. ಅದು ಆಗಬೇಕಾದರೆ ಕರ್ನಾಟಕ ಎನ್ನುವ ಹೆಸರನ್ನು ಇಟ್ಟಾಗ ಸಾಧ್ಯ. ಆ ಪ್ರಾಂತದಿಂದ ಬಂದಂಥವರು ಈ ಪ್ರಾಂತ ಬೆಳವಣಿಗೆ ಆಯಿತು, ನಮ್ಮ ಪ್ರಾಂತ ಬೆಳವಣಿಗೆ ಆಗಿಲ್ಲ ಎನ್ನುವ ಮಾತುಗಳೆಲ್ಲಾ ಮಾಯವಾಗುತ್ತದೆ. ಆದುದರಿಂದ ನಮ್ಮಲ್ಲಿ ವಿಶಾಲ ಮನೋಭಾವನೆ ಬೆಳೆಯದೆ ಎಲ್ಲ ಜನರ ಹಿತರಕ್ಷಣೆ ಸಾಧ್ಯವಿಲ್ಲ, ಕಾರಣ ಆ ವಿಷಯದ ಕಡೆಗೆ ಲಕ್ಷ ವಹಿಸಬೇಕಾಗಿದೆ, ಪ್ರತಿಯೊಂದೂ ನಾವು ಹೇಳಿದಂತೆ ಆಗಬೇಕು ಎನ್ನುವ ಮನೋಭಾವನೆ ಯಾರಲ್ಲಿ ಇರಬಾರದು, ಆ ಭಾವನೆ ಬಿಟ್ಟು ಎಲ್ಲರ ಮನಸ್ಸಿಗೆ ಮೆಚ್ಚಿಗೆಯಾದಂಥ ಹೆಸರನ್ನು ಕರೆಯಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

5-30 P.M.

ಸ್ವಾಮಿ, ನಾನು ಮಾನ್ಯ ಸದಸ್ಯರಾದ ಶ್ರೀಕಂಠಯ್ಯನವರನ್ನು ಕೇಳಿಕೊಳ್ಳುವುದು ಏನೆಂದರೆ ಮಾನ್ಯ ಸದಸ್ಯರಾದ ಗಂಗಾಧರ್ ಅವರು ತಂದಂಥ ತಿದ್ದುಪಡಿಯನ್ನು ಅವರು ಒಪ್ಪಿಕೊಳ್ಳಬೇಕು. ಮಾನ್ಯ ಸದಸ್ಯರು ತಂದಂಥ ನಿರ್ಣಯದ ಹಿನ್ನೆಲೆ ಸರಿಯಾಗಿದ್ದರೂ ಕೂಡ ಆ ಶಬ್ದ ಸರಿಯಾಗಿಲ್ಲ; ಕನ್ನಡ ನಾಡು ಎನ್ನುವಂಥದ್ದು ಜನರ ಮೆಚ್ಚುಗೆಗೆ ಪಾತ್ರವಾಗಿಲ್ಲ. ಆದಕಾರಣ ಅದನ್ನು ಅವರು ವಾಪಸು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು, ತಮಗೆ ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—As per rules, the members participating in the debate should not take more than 15 minutes. It is better to regulate time, so that it may be possible to give opportunity to all the hon'ble Members who want to participate in the Debate. If all the members want to participate, I think, only 10 minutes will have to be given to each member

Sri H. M. CHANNABASAPPA.—Sometimes it may not be possible to confine ourselves within 10 minutes. The mover has taken some hours. Some members are very eager to participate and they may exceed the time limit of 10 minutes. Even if the time limit of 15 minutes is given, it may not be possible for them to express their views within that time.

Mr. SPEAKER.—But the rule says only 15 minutes. It would not be difficult for parliamentarians of stature of the Hon'ble Member to finish within 10 or 15 minutes.

Sri D. DEVARAJ URS.—The Speaker may show some latitude wherever there is need for it.

Sri H. M. CHANNABASAPPA.—Has the suggestion of Mr. Devarj Urs been agreed to ? I believe the powers of the Speaker are not limited. Since there are a good number of people to participate in the debate, some latitude might be shown.

Mr. SPEAKER.—The Committee on Private Members' Bills and Resolutions has allotted only 3 hours for this. But anyway it is up to the House to decide. Is it the pleasure of the House to allot more time for this resolution.

HON'BLE MEMBERS.—Yes.

Mr. SPEAKER.—More time is allotted for this resolution. But 15 minutes time limit is there.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಇದು ಬಹಳ ಮುಖ್ಯವಾದ ವಿಷಯ. ಈ ವಿಷಯ ಆಗಿಂದಾಗ್ಗೆ ಎಷ್ಟೋ ಸಲ ಚರ್ಚೆಯಾಗಿ ಚರ್ಚೆಯಲ್ಲಿಯೇ ಮುಕ್ತಾಯವಾಗಿದೆ. ಈ ಸಾರಿ ಒಂದು ತೀರ್ಮಾನಕ್ಕೆ ಬರುವಂಥ ಸೂಚನೆಗಳು ಮುಖ್ಯಮಂತ್ರಿಯವರ ಹೇಳಿಕೆಯಿಂದ, ಶ್ರೀಮಾನ್ ನಿಜಲಿಂಗಪ್ಪನವರ ಹೇಳಿಕೆಯಿಂದ ಕಂಡುಬರುತ್ತಿದೆ. ಅಂಥ ತೀರ್ಮಾನ ತೆಗೆದುಕೊಳ್ಳುವಂಥ ಪರಿಸ್ಥಿತಿಗೆ ಬಂದರೆ ಇದರ ಮೇಲೆ ಪೂರ್ಣ ಚರ್ಚೆಗೆ ಅವಕಾಶ ಕೊಡಬೇಕು. ಸದಸ್ಯರ ಭಾಷಣವನ್ನು 15 ನಿಮಿಷಗಳಿಗೆ ಮಿತಿಗೊಳಿಸುವುದಕ್ಕಾಗುವುದಿಲ್ಲ ಎಂದು ನನ್ನ ನಮ್ರ ಸೂಚನೆ. ಈ ನಿರ್ಣಯವನ್ನು ಮಾನ್ಯ ಸದಸ್ಯರಾದ ಎಲ್. ಶ್ರೀಕಂಠಯ್ಯನವರು ಮಂಡಿಸಿ ಅದರ ಮೇಲೆ ಎರಡೂವರೆ ಗಂಟೆಗಳ ಕಾಲ ಮಾತನಾಡಿದ್ದಾರೆ. ಅದೇ ಧಾಟಿಯಲ್ಲಿ ಮಾತನಾಡುವವರು, ಅಷ್ಟು ಹೊತ್ತು ಮಾತನಾಡುವವರು, ಅದಕ್ಕೆ ವಿರೋಧವಾದ ವಾದವನ್ನು ಹೂಡುವವರು ಈ ಸಭೆಯಲ್ಲಿ ಇದ್ದಾರೆಂದು ನಾನು ಮನಗಂಡಿದ್ದೇನೆ. ಆದುದರಿಂದ ಇದರ ಮೇಲಿನ ಚರ್ಚೆಗೆ ಪೂರ್ಣ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ಪ್ರತಿಯೊಬ್ಬರಿಗೂ ಒಂದೊಂದು ಗಂಟೆ ಅವಕಾಶ ಕೊಟ್ಟರೆ ತಿಂಗಳುಗಟ್ಟಲೆ ಕೊಡಬೇಕಾಗುತ್ತದೆ. ಅದು ಸಾಧುವಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ರಾಜ್ಯದ ಹೆಸರನ್ನು ಬದಲಾಯಿಸುವುದು ಮೂಲಭೂತವಾದ ಪ್ರಶ್ನೆ. ಅಷ್ಟು ಸುಲಭದಲ್ಲಿ ಇದನ್ನು ಡಿಸ್‌ಪೋಸ್ ಆಫ್ ಮಾಡುವುದು ಒಳ್ಳೆಯದಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳದೆ ಹೋದರೆ ಭಾರಿ ತಪ್ಪಾಗುತ್ತದೆ.

Sri H. M. CHANNABASAPPA.—Sir, reiterating my arguments I would like to submit that the Chair has got the discretion to extend the time. Sir, as this is a very important matter, the members might like to influence through their speeches either this side or that side. Also as Sri Hutchamasti Gowda puts it, it may take the course of a decision in

(SRI H. M. CHANNABASAPPA)

this matter during this session. Under these circumstances it should not be taken lightly either by the Chair or by any other member. This matter is of vital importance and has been agitating the minds of the millions of the people of the State. Hence I request that the hon'ble Chair to exercise its special powers and see that sufficient time is given to as many members as possible. Hence, I appeal to you Sir, that this should not be hastened through.

Mr. SPEAKER.—As far as I am concerned, I consider every matter as very important. Secondly, though I have got the discretion to extend the time limit there should be some valid reasons for that. The hon'ble Members Sri Channabasappa and Sri Hutchamasti Gowda suggested that this is a very important matter and time should be extended. Though I have the power, it should not be an unlimited power. At the same time the hon'ble Members should see that the time at the disposal of the House is limited. Therefore limitation must always be there. We cannot avoid it. One of the greatest politicians has said that if he is asked to speak for five minutes he would require a week's time for preparation but if he is asked to speak for hours he can speak without any preparation.

Sri H. M. CHANNABASAPPA.—That may be possible for men of your experience.

Mr. SPEAKER.—I know all the hon'ble Members are able to speak, except myself. Next speaker will be Sri Shamanna.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ಇದು ಬಹಳ ಮುಖ್ಯವಾದ ವಿಚಾರ. ಇದನ್ನು ಈ ವಿಧಾನಸಭೆಯಲ್ಲಿ ಈಗ ಚರ್ಚೆ ಮಾಡುವುದು ಅಷ್ಟು ಸೂಕ್ತವಾದುದಲ್ಲ ಎನ್ನುವುದು ನನ್ನ ಮೊದಲನೆಯ ವಿಚಾರ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾದರೆ ಚುನಾವಣೆಗಳಿಗೆ ಮುಂಚೆ ತೆಗೆದುಕೊಳ್ಳಬೇಕು. ಏಕೆಂದರೆ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ. ಪ್ರಜೆಗಳು ತಮ್ಮ ಅಭಿಪ್ರಾಯವನ್ನು ಇದರ ಬಗ್ಗೆ ಕೊಡುವುದಕ್ಕೆ ಒಂದು ಅವಕಾಶವಿರಬೇಕು. ಆದುದರಿಂದ ಸಾರ್ವತ್ರಿಕ ಚುನಾವಣೆಗಳಿಗೆ ಮುಂಚೆ ಈ ವಿಷಯವನ್ನು ಜನಗಳ ಮುಂದೆ ಇಟ್ಟು, ರಾಜ್ಯದ ಹೆಸರನ್ನು ಬದಲಾವಣೆ ಮಾಡಬೇಕೇ, ಬೇಡವೇ ಎನ್ನುವುದರ ಬಗ್ಗೆ ಜನಗಳು ತೀರ್ಮಾನ ತೆಗೆದುಕೊಳ್ಳಬೇಕೇ ಹೊರತು ನಾವು ಈಗ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಾರದು. ಎಲೆಕ್ಟೊರೇಟ್ ಮುಂದೆ ಈ ವಿಷಯ ಬರಬೇಕು ಎನ್ನುವುದೇ ನನ್ನ ಮೊದಲನೆಯ ವಾದ.

ಶ್ರೀ ಎಂ. ಎಸ್. ಕೃಷ್ಣನ್.—ಕರ್ಣಾಟಕ ಎನ್ನುವ ಹೆಸರಿಡಲು ಜನಗಳು ಒಪ್ಪಿದರೆ ಮಾನ್ಯ ಸದಸ್ಯರು ರಾಜಿನಾಮೆ ಕೊಡುತ್ತಾರೆಯೇ ಸ್ವಾಮಿ?

ಶ್ರೀ ಟಿ. ಆರ್. ಶಾಮಣ್ಣ.—ಮೊದಲನೆಯದಾಗಿ ಈ ನಿರ್ಣಯ ಬಂದಿರತಕ್ಕದು, ಈ ನಿರ್ಣಯದ ಮೇಲೆ ಬಂದಿರತಕ್ಕ ತಿದ್ದುಪಡಿಗಳು ಏನಿವೆಯೋ ಅದು ಅಷ್ಟು ಸೂಕ್ತವಾದುದಲ್ಲ ಎನ್ನುವುದು ನನ್ನ ವಾದ. ಏಕೆಂದರೆ ಕನ್ನಡ ನಾಡು ಅಥವಾ ಕರ್ಣಾಟಕ ಎಂದು ಅನ್ನುವುದಕ್ಕೆ ಮುಂಚೆ ನಾವು ಕನ್ನಡಿಗರಾಗುವುದಕ್ಕೆ ಪ್ರಯತ್ನಪಟ್ಟಿಲ್ಲ. ಕನ್ನಡ ರಾಜ್ಯದಲ್ಲಿ ಆಡಳಿತ ಭಾಷೆ ಕನ್ನಡ ಆಗಿಲ್ಲ, ಕನ್ನಡವನ್ನು ಸರಿಯಾಗಿ ಕಲಿಸುವುದಕ್ಕೆ ನಾವು ಪ್ರಯತ್ನಪಟ್ಟಿಲ್ಲ. ಆದರೆ ಹೆಸರಿಗೆ ಕಿತ್ತಾಡುವುದಕ್ಕೆ ಪ್ರಯತ್ನಪಡುತ್ತಿದ್ದೇವೆ.

ಕರ್ಣಾಟಕ ಎಂದು ಹೇಳತಕ್ಕ ವಾದವನ್ನು ಹೂಡುವುದಕ್ಕೆ ಮುಂಚೆ ಈ ವಿಶಾಲ ಮೈಸೂರಾದ ಮೇಲೆ ಯಾವ ಯಾವ ಸೌಭಾಗ್ಯವನ್ನು ಮೈಸೂರುದೇಶಕ್ಕೆ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಒಂದು ಪಟ್ಟಿ ಮಾಡಿಕೊಟ್ಟಿದ್ದರೆ ಚೆನ್ನಾಗಿತ್ತು. ನಮ್ಮ ಹಳೇ ಮೈಸೂರಿನ ನೌಕರರು ಕಣ್ಣಿನಲ್ಲಿ ನೀರಿಡುತ್ತಿದ್ದಾರೆ, ಏಕೆ ಈ ಕರ್ಣಾಟಕವಾಯಿತು ಎಂದು. ಈಗ ಸಂಬಳ ಸಾರಿಗೆ ಬಗ್ಗೆ, ಅವರ ಸ್ಥಾನ

ಮಾನಗಳ ಬಗ್ಗೆ ನೊಂದುಕೊಂಡು ಕೋರ್ಟಿಗೆ ಹೋಗುವುದಕ್ಕೆ ಶಕ್ತಿ ಇಲ್ಲದೆ ಬಹಳ ವ್ಯಸನಪಡುತ್ತಿರತಕ್ಕ ಈ ಸಂದರ್ಭದಲ್ಲಿ, ಅವರ ಗೋಳು ಯಾವತ್ತಿಗೂ ಮುಟ್ಟುತ್ತದೆ.

ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಪಾಯಿಂಟ್ ಆಫ್ ಆರ್ಡರ್, ಸ್ವಾಮಿ. ರೆಸಲ್ಯೂಷನ್ ಇರುವುದೇ ಬೇರೆ. ಈ ಕಾಲಕ್ಕೆ ರಾಜ್ಯದ ಹೆಸರನ್ನು ಬದಲಾವಣೆ ಮಾಡುವುದು ಯೋಗ್ಯವೋ, ಅಯೋಗ್ಯವೋ ಎನ್ನುವುದು ಸಮಂಜಸವಾಗುವುದಿಲ್ಲ.

Mr. SPEAKER.—I am just watching. Let me see whether he comes to the subject proper.

ಶ್ರೀ ಟಿ. ಆರ್. ಶಾಮಣ್ಣ.—ನಿರ್ಣಯವನ್ನು ತಂದಿರುವುದು ನ್ಯಾಯವಲ್ಲ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ಗ್ರಾಮಾಂತರ).—1972ರಲ್ಲಿ ಚುನಾವಣೆಗಳು ಆಗುವತನಕ ಹೀಗೆಯೇ ನಡೆಯಬೇಕು ಎಂದು ಹೇಳಿದಹಾಗಾಯಿತಲ್ಲವೇ, ಸ್ವಾಮಿ ?

ಶ್ರೀ ಎಂ. ಎಸ್. ಕೃಷ್ಣನ್.—ನಿರ್ಣಯವನ್ನು ತಂದಿರುವುದೇ ತಪ್ಪಾದರೆ ಅವರು ತಿದ್ದುಪಡಿಯನ್ನು ತಂದಿರುವುದೂ ತಪ್ಪಾಯಿತು.

ಶ್ರೀ ಟಿ. ಆರ್. ಶಾಮಣ್ಣ.—ಎರಡೂ ತಪ್ಪು. ಆದ್ದರಿಂದ ಅದನ್ನು ತೆಗೆದುಕೊಳ್ಳಬಾರದು ಎಂದು ಹೇಳುತ್ತಿದ್ದೇನೆ.

Mr. SPEAKER.—The question before the House is whether there should be a change in the name of the State as Kannada Nadu or as Karnatak.

ಶ್ರೀ ಟಿ. ಆರ್. ಶಾಮಣ್ಣ.—ಮೈಸೂರಿಗೆ 5 ಭಾಗಗಳು ಸೇರದಿದ್ದರೆ ಈ ರೀತಿ ಹೆಸರಿನ ಗೊಂದಲವುಂಟಾಗುತ್ತಿರಲಿಲ್ಲ, ಸೇರಿರುವುದರಿಂದ ಒಬ್ಬೊಬ್ಬರು ಒಂದೊಂದು ರೀತಿ ತಮಗೆ ತೋರಿದಂತೆ ದೇಶದ ಹೆಸರನ್ನು ಬದಲಾಯಿಸಬೇಕೆಂದು ಹೇಳುತ್ತಿದ್ದಾರೆ. ಮೈಸೂರಿಗೆ ಬೇರೆ ಭಾಗಗಳು ಸೇರಿದಾಗ ಒಂದು ಆಶ್ವಾಸನೆ ಕೊಟ್ಟಿದ್ದುದು ನನಗೆ ಜ್ಞಾಪಕವಿದೆ. ಮೈಸೂರಿನ ಗವರ್ನರನ್ನು ಬದಲಾಯಿಸುವುದಿಲ್ಲ, ಬೆಂಗಳೂರು ರಾಜಧಾನಿಯಾಗಿರುವುದನ್ನು ಬದಲಾಯಿಸುವುದಿಲ್ಲ ಮತ್ತು ಕರ್ಣಾಟಕ ಎಂದು ಬೇರೆ ಹೆಸರಿಡುವುದಕ್ಕೆ ಹೋಗುವುದಿಲ್ಲ ಎಂದು ಹೇಳಿದ್ದರು. ಮಾನ್ಯ ರೆಡ್ಡಿಯವರು ಮಾತನಾಡುತ್ತಾ ಸೇರ್ಪಡೆಯಾಗಲಿ, ಆಮೇಲೆ ಹೇಗೆ ಬೇಕಾದರೂ ಆಗಲಿ ಎಂದು ಸೇರಿಕೊಂಡೆವು ಎಂದು ಹೇಳಿದ್ದರು. ಒಂಟೆಯು ತನ್ನ ಮೂಗನ್ನು ತೂರಿಸುವುದಕ್ಕೆ ಅವಕಾಶ ಕೊಟ್ಟರೆ ಸಾಕೆಂದು ಹೇಳಿ ಆಮೇಲೆ ತನ್ನ ಇಡೀ ದೇಹವನ್ನು ತೂರಿಸಿದಂತೆ ಇದರ ಬಗ್ಗೆ ಕೂಡ ಆಗಿದೆ. ಸೇರುವಾಗ ಹೇಗಾದರೂ ಸೇರಿದರೆ ಸಾಕು ಎಂದು ಸೇರಿ ನಂತರ ಇದೆಲ್ಲಾ ನಡೆಯುತ್ತಿದೆ. ಈಗ ಹೆಸರನ್ನು ಬದಲಾವಣೆ ಮಾಡುವುದರಿಂದ ಏನು ಅನುಕೂಲವೆಂಬುದನ್ನು ಮೊದಲು ಸ್ಪಷ್ಟಪಡಿಸಬೇಕು. ನಂತರ ಮುಂದಿನ ವಿಚಾರ ಆಲೋಚನೆ ಮಾಡಬಹುದು. ಈಗ ಹಳೆಯ ಮೈಸೂರಿನ ಜನ ವ್ಯಥೆಪಡಬೇಕಾದ ಸಂದರ್ಭವಿದೆ. ಹೊಸ ಮೈಸೂರಾದ ಮೇಲೆ ಸಾಧಾರಣವಾಗಿ ಹಳೆಯ ಮೈಸೂರಿನವರು ನಿರ್ವೀರ್ಯರಾಗಿ ನಪುಂಸಕರಾದರು, ಇನ್ನು ಮುಂದೆ ಏನೇನಾಗುವುದೋ ಎಂದು ಹಳೆಯ ಮೈಸೂರಿನವರು ಗಾಬರಿಯಾಗಿದ್ದಾರೆ. ಯಾರು ಯಾರು ಮೈಸೂರನ್ನು ಕಟ್ಟುವುದಕ್ಕೆ ಪ್ರಯತ್ನ ಪಟ್ಟರೋ, ಯಾರು ಯಾರು ಸ್ವಾತಂತ್ರ್ಯ ತರುವುದಕ್ಕೆ ಪ್ರಯತ್ನಪಟ್ಟರೋ ಅವರನ್ನು ಮೂಲೆಗೆ ಕೂಡಿಸಿದ್ದಾರೆ. ಶ್ರೀ ಎಸ್. ಚನ್ನಯ್ಯನವರು ಇಲ್ಲದ್ದಾರೆ. ಅವರ ಪ್ರಭಾವ ಹಿಂದೆ ಎಷ್ಟಿತ್ತೋ ಅದನ್ನು ಮುರಿಯುವುದಕ್ಕೆ ಬಹಳವಾಗಿ ಪ್ರಯತ್ನ ಪಡುತ್ತಿದ್ದಾರೆ. ಇನ್ನೂ ಅನೇಕರನ್ನು ಮೂಲೆಗೆ ಕೂಡಿಸಲು ಪ್ರಯತ್ನ ನಡೆಯುತ್ತಿದೆ.

ಶ್ರೀ ಪಿ. ಎಂ. ನಾಡಗೌಡ.—ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ನಿರ್ಣಯಕ್ಕೆ ಸಂಬಂಧವಿಲ್ಲದಿರುವ ವಿಚಾರವನ್ನು ಹೇಳುತ್ತಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈ ಹಿನ್ನೆಲೆ ಹೇಳದಿದ್ದರೆ ಪ್ರಯೋಜನವಾಗುವುದಿಲ್ಲ, ಅದನ್ನು ಹೇಳಿ ಮುಂದಿನ ವಿಷಯದ ಮೇಲೆ ಮಾತನಾಡಬೇಕಾಗಿದೆ. ಶ್ರೀ ಚನ್ನಯ್ಯನವರು...

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಶ್ರೀ ಚನ್ನಯ್ಯನವರ ವಿಷಯದಲ್ಲಿ ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪುವುದಿಲ್ಲ. ಅವರು ದೊಡ್ಡವರು.

Mr. SPEAKER.—The question before the House is whether it should be Karnataka or Kannada Nadu.

ಶ್ರೀ ಟಿ. ಆರ್. ಶಾಮಣ್ಣ.—ಶ್ರೀ ಚನ್ನಯ್ಯನವರು ದೇಶವನ್ನು ಕಟ್ಟಲು ಬಹಳವಾಗಿ ಶ್ರಮಿಸಿರುವುದರಿಂದ ಅವರ ಹೆಸರನ್ನು ಹೇಳಬೇಕಾಗಿದೆ.

Mr. SPEAKER.—Hon'ble Member may avoid personal references.

Sri D. DEVARAJ URS.—In this particular context why should the Chair restrict, Sir? We may have to refer to various people who have played some notable part in the formation of the State. If some names are mentioned, I do not think there can be any objection.

Mr. SPEAKER.—Reference to personalities might create unnecessary bitterness and embarrassment and it does not conduce to the dignity or decorum of the House. The debate should proceed on grounds of principles and public policies, not with reference to any names.

Sri D. DEVARAJ URS.—I would like to subuit to the Hon'ble Chair. The Speaker has the right to conduct the debate in a manner which would fit in with the Rules of Procedure. But so far as mentioning of names are concerned, there are some names of leaders who have been in one way or the other connected with in re-organisation of State and I do not think we are doing any injustice or speaking in a tone derogatory to these persons, if we merely refer to their names.

Mr. SPEAKER.—I can understand names being mentioned in a general way. But here reference was made to the hon. Member Sri Channiah and that was of a personal nature. I do not know to what extent it was correct. It is said attempts are made to suppress him. I think it is very bad reference. Some members may say it is not a fact. Such references are undesirable. If Sri Channiah himself wants to express, I have no objection. In the interest of dignity and decorum of the House and of the Members, Hon. Members may avoid personal references. Members who are present on the floor of the House, can argue their case very well. Hon. Member may speak about principles, policies and history—everything. But to say that a particular person is coming to power or he is suppressed will not contribute to dignity of the House. Such references may be avoided.

Sri H. M. CHANNABASAPPA.—References will be made because at the the time of unification of the different parts of Karnataka, so many discussions have taken places, so many people have in different capacities held out assurances. Many of them are public leaders and their utterances will have to be quoted. The context will have to be stated. It is not easy to dissociate ourselves from the men who count in these matters. Therefore it may be desirable not to mention names and make personal references, but certain necessary references will have to be made and it cannot be ruled out.

Mr. SPEAKER.—Probably the hon. Members have not understood me or probably I have not expressed myself in clear terms. My idia is hon. members may refer to opinions expressed from time to time, or refer

ಪ್ರತಿಯೊಂದು ಊರಿನಲ್ಲಿಯೂ ಅದರಲ್ಲೂ ಊರಿನ ಮಧ್ಯದಲ್ಲಿ ಹೆಂಡದಂಗಡಿಗಳನ್ನು ನಡೆಸುವುದಕ್ಕೆ ಪ್ರಾರಂಭಮಾಡಿದ್ದಾರೆ. ಜನರಿಗೆ ಕುಡಿಯುವುದಕ್ಕೆ ನೀರನ್ನು ಒದಗಿಸುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗದೆ ಇದ್ದರೂ ಇವರು ಶುದ್ಧನೀರಿನ ಬದಲು ಜನಕ್ಕೆ ಹೆಂಡವನ್ನಾದರೂ ಕುಡಿಯುವುದಕ್ಕೆ ಒಂದು ಅವಕಾಶ ಮಾಡೋಣ ಎಂದು ಊರಿನ ಮಧ್ಯದಲ್ಲಿ ಹೆಂಡದಂಗಡಿಗಳನ್ನು ತೆಗೆದಿರಬಹುದು. ಇದರಿಂದ ಜನರ ಮನಸ್ಸಿಗೆ ಬಹಳ ನೋವುಂಟಾಗಿದೆ, ಶಾಂತಿ ಕಲಕಿದೆ. ಆದುದರಿಂದ ಆ ಅಂಗಡಿಗಳನ್ನು ಊರಿಂದಾಚೆಗೆ ವರ್ಗಾಯಿಸುವುದಕ್ಕೆ ಸರ್ಕಾರದವರು ಕೂಡಲೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

2-30 P.M.

ಇನ್ನು ಹಿಂದೀ ಭಾಷೆಯ ವಿಚಾರದಲ್ಲಿ ಈಗಾಗಲೇ ಮದ್ರಾಸ್ ಸರಕಾರದವರು ಒಂದು ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಂಡಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರ ಅಂಥಾ ಯಾವ

(ಶ್ರೀ ಎನ್. ಎ. ಚನ್ನೇಗೌಡ)

ಒಂದು ನಿರ್ದಿಷ್ಟವಾದ ನಿಲುವನ್ನೂ ತಾಳಿಲ್ಲ. ಈಗಲಾದರೂ ಶ್ರೀ ವೀರೇಂದ್ರ ಪಾಟೀಲರಲ್ಲಿ ವೀರತ್ವ ಆಗಲಿ ಶೂರತ್ವ ಆಗಲಿ ಇದ್ದರೆ ಈ ಹಿಂದೀ ಚಳವಳಿಯನ್ನು ಧೈರ್ಯದಿಂದ ಎದುರಿಸ ಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆ ಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).—ಮಾನ್ಯ ಅಧ್ಯಕ್ಷರೇ ಸುಮಾರು ಹತ್ತೂವರೆ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈ ರಾಜ್ಯದಲ್ಲಿರತಕ್ಕ ಒಟ್ಟು 174 ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡುಗಳ ಪೈಕಿ ಈಗಾಗಲೇ 171 ತಾಲ್ಲೂಕ್ ಡೆವಲಪ್‌ಮೆಂಟ್ ಮಂಡಲಗಳ ಚುನಾವಣೆ ಗಳು ಮುಗಿದಿವೆ. ಸುಮಾರು 1,02,90,234 ಮತದಾರರಲ್ಲಿ ಸುಮಾರು 68 ಲಕ್ಷದ 96 ಸಾವಿರದ 407 ಜನರು ತಮ್ಮ ಮತವನ್ನು ಚಲಾಯಿಸಿದ್ದಾರೆ. ಅದರಲ್ಲಿ 2 ಲಕ್ಷ 97 ಸಾವಿರದ 307 ಮತಗಳು ಕುಲಗೆಟ್ಟಿವೆ. ಅಂದರೆ ಶೇ. 67ರಷ್ಟು ಮತದಾರರಲ್ಲಿ ಶೇ. 3 ರಷ್ಟು ಮತಕುಲಗೆಟ್ಟವೆಂದು ಹೇಳಬಹುದು. ಹೀಗೆ ಚುನಾವಣೆಯಾದ 171 ತಾಲ್ಲೂಕ್ ಅಭಿವೃದ್ಧಿಮಂಡಲಗಳಲ್ಲಿ 141 ಅಭಿವೃದ್ಧಿಮಂಡಲಗಳ ಆಡಳಿತ ಕಾಂಗ್ರೆಸ್ಸಿನವರ ಕೈಗೆ ಸಿಕ್ಕಿದೆ. ಇನ್ನು ಉಳಿದ ಅಭಿವೃದ್ಧಿ ಮಂಡಲಗಳಲ್ಲಿ 20 ಸ್ವತಂತ್ರ ಪಕ್ಷಕ್ಕೂ, 4 ಮಂಡಲಗಳ ಆಡಳಿತ ಪ್ರಜಾಸತ್ತಾತ್ಮಕಪಕ್ಷಕ್ಕೂ ಇನ್ನೂ 4 ಮಂಡಲಗಳ ಆಡಳಿತ ಸಂಯುಕ್ತಸೋಷಿಯಲಿಸ್ಟ್ ಪಕ್ಷಕ್ಕೂ ಒಂದು ಮಂಡಲಿಯ ಆಡಳಿತ ರೈತಸಂಘಕ್ಕೂ ಮತ್ತು ಒಂದು ಮಂಡಲಿಯ ಆಡಳಿತ ಸರ್ವಸ್ವತಂತ್ರ ಪಕ್ಷಕ್ಕೂ ಸಿಕ್ಕಿದೆ.

ಶ್ರೀ ಬಿ. ಪಿ. ಗಂಗಾಧರ್.—ಅಷ್ಟು ಓಟುಗಳು ಬಂದು ಅಷ್ಟು ತಾಲ್ಲೂಕ್ ಅಭಿವೃದ್ಧಿಮಂಡ ಲಗಳ ಆಡಳಿತ ಕಾಂಗ್ರೆಸ್ಸಿನವರ ಕೈಗೆ ಸಿಕ್ಕಿದ್ದು ಅವರ ವರ್ಚಸ್ಸಿನಿಂದಲ್ಲ, ಅವು ಸಿಕ್ಕಿದ್ದು ಆ ಪಕ್ಷ ಖರ್ಚುಮಾಡಿದ ಹಣದ ಪ್ರಭಾವದಿಂದ ಅವರಿಗೆ ಸಿಕ್ಕಿತು ಅನ್ನುವುದು ತಮಗೆ ಗೊತ್ತಿದೆಯೇ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಆ ವಿಷಯ ಹಾಗಿರಲಿ ಅದಕ್ಕೆ ನಾನು ಅನಂತರ ಬರುತ್ತೇನೆ ಒಟ್ಟು ಚುನಾವಣೆ ನಡೆದ 3006 ಸ್ಥಾನಗಳ ಪೈಕಿ 2896 ಸ್ಥಾನಗಳಿಗೆ ಮಾತ್ರ ಚುನಾವಣೆ ನಡೆದಿದೆ. ಹಾಗೆ ನಡೆಸಲ್ಪಟ್ಟ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ 2027 ಸ್ಥಾನಗಳು ದೊರೆತಿವೆ. ಪ್ರಜಾಸತ್ತಾತ್ಮಕ ಪಕ್ಷಕ್ಕೆ 139 ಸ್ಥಾನಗಳೂ, ಸಂಯುಕ್ತ ಸೋಷಿಯಲಿಸ್ಟ್ ಪಕ್ಷಕ್ಕೆ 50 ಸ್ಥಾನ ಗಳೂ ಸ್ವತಂತ್ರ ಪಕ್ಷಕ್ಕೆ 39 ಸ್ಥಾನಗಳೂ, ಜನಸಂಘಕ್ಕೆ 3 ಸ್ಥಾನಗಳೂ, ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ಸ್ಥಾನ ಸರ್ವಸ್ವತಂತ್ರ ಪಕ್ಷಕ್ಕೆ 625 ಸ್ಥಾನಗಳೂ ಮತ್ತು ರೈತ ಸಂಘಕ್ಕೆ 11 ಸ್ಥಾನಗಳೂ ದೊರೆತಿವೆ. ಇನ್ನು ಅವಿರೋಧವಾಗಿ ಆರಿಸಿ ಬಂದಿರತಕ್ಕ 377 ಸ್ಥಾನಗಳಲ್ಲಿ ಕಾಂಗ್ರೆ ಸ್ಸಿಗೆ 347 ದೊರೆತಿವೆ. ಪಕ್ಷೇತರರಿಗೆ 22 ಸ್ಥಾನಗಳೂ, ಸ್ವತಂತ್ರಪಕ್ಷಕ್ಕೆ 3 ಸ್ಥಾನಗಳು ದೊರೆ ತಿದ್ದು, ಇನ್ನು 27 ತಾಲ್ಲೂಕ್ ಡೆವಲಪ್‌ಮೆಂಟ್ ಮಂಡಲಗಳ ಎಲ್ಲಾ ಸ್ಥಾನಗಳೂ ಸಂಪೂರ್ಣ ವಾಗಿ ಕಾಂಗ್ರೆಸ್ಸಿನವರಿಗೇ ಸಿಕ್ಕಿರುತ್ತವೆ. ಹೀಗೆ ಇಷ್ಟು ಭಾರೀ ಪ್ರಮಾಣದಲ್ಲಿ ಆರಿಸಿ ಬಂದಿರ ತಕ್ಕಂಥ ಒಂದು ಪಕ್ಷಕ್ಕೆ ಕೆಲವರು ಆ ಜಯವು ಅವರಿಗೆ ಹಣದ ಪ್ರಭಾವದಿಂದ, ಹಣದ ವಿತರಣೆಯಿಂದ ದೊರೆತಿದೆ ಎಂದು ಹೇಳತಕ್ಕದ್ದು ನ್ಯಾಯವಾದುದಲ್ಲ. ಮಾನ್ಯ ಅಧ್ಯಕ್ಷರೇ ನಾನು ಬೇಕಾದರೆ ಯಾವ ಅಂಕೆಸಂಖ್ಯೆಗಳನ್ನೂ ಹಾಗೇ ಆಳಿಯಲ್ಲದೆ ರೈಲನ್ನು ಬೇಕಾದರೂ ನಾನು ಬಿಡಬಲ್ಲೆ. ಆದರೆ ವಿಷಯ ಬಹಳ ಮಹತ್ವವಾದದ್ದು. ಇದರ ವ್ಯಾಪ್ತಿ ಮತ್ತು ಇದರ ಪ್ರಮಾಣವನ್ನು ಗಮನದಲ್ಲಿಟ್ಟು ಕೊಂಡು ಈ ಬಗ್ಗೆ ಸ್ಪಷ್ಟವಾದ ಅಂಕೆಸಂಖ್ಯೆಗಳನ್ನು ಕೊಟ್ಟು ನಾನೀಗ ಮಾತನಾಡುತ್ತಿದ್ದೇನೆ. ಹಣವನ್ನು ಹಂಚಿದ ಮಾತ್ರಕ್ಕೇ ಇಷ್ಟು ದೊಡ್ಡ ಪ್ರಮಾಣದಲ್ಲಿ ಜನತೆ ಆರಿಸಿಬರತಕ್ಕದ್ದು ಅಷ್ಟು ಸುಲಭ ವಾದ ಕಾರ್ಯವಲ್ಲ; ಅನ್ನುವುದನ್ನು ವಿವರಿಸುವುದಕ್ಕಾಗಿ ನಾನೀಗ ಈ ವಿವರಗಳನ್ನೆಲ್ಲಾ ಕೊಡಬೇಕಾಗಿ ಬಂತು. ಈಗಾಗಲೇ 4 ಮಹಾ ಚುನಾವಣೆಗಳು ನಡೆದುಹೋಗಿವೆ. ಸರ್ಕಾರದವರು ಈ ಎಲ್ಲಾ ಅಭಿವೃದ್ಧಿಮಂಡಲಗಳಿಗೂ ಸುಮಾರು 6 ಕೋಟಿ ರೂಪಾಯಿಗಳನ್ನು ಹಂಚಿದ್ದರೂ ಅದನ್ನು ಹಂಚಿದನಂತರ ಪ್ರತಿಯೊಂದು ತಾಲ್ಲೂಕ್ ಅಭಿವೃದ್ಧಿ ಮಂಡಲಿಗೂ ಅಂದಾಜು 3 ಲಕ್ಷ ಬಂದಿದ್ದರೆ ಹೆಚ್ಚಾಯಿತು. ಆದರೆ ಈಗಾಗಲೇ ಪ್ರಬುದ್ಧಮತದಾರರು ಚುನಾವಣೆ ಎಂದರೇನು ಎಂಬುದನ್ನು ಚೆನ್ನಾಗಿ ಅರಿತಿದ್ದಾರೆ. ಅಂಥವರಿಗೆ ಎಷ್ಟು ಜನರಿಗೆ ಈ ಹಣದಲ್ಲಿ ಶಾಲೆ, ಬಾವಿ, ಕೆರೆಗಳನ್ನು ಮಾಡಿಸಿ ಕೊಡುವುದಕ್ಕಾದ್ದೀತು ? ಹೀಗೆ ಜನರನ್ನು ವಂಚಿಸಿ ಚುನಾವಣೆಗಳಲ್ಲಿ ಇವರು ಗೆಲ್ಲುತ್ತಿ ದ್ದಾರೆ ಎಂದು ತಿಳಿದುಕೊಂಡಿದ್ದರೆ ಅದು ಸಂಸ್ಥೆಗೆ ಕಳಂಕವಲ್ಲ, ಅದರಿಂದ ಮತದಾರರ ಮೇಲೆ ಒಂದು ಗುರುತರವಾದ ಅಪಾದನೆಯನ್ನು ಮಾಡಿದಂತಾಗುತ್ತದೆ. ಆದರೆ ಇಲ್ಲಿ ಅಂಥ ಅಪಾದನೆಗೆ ಅವಕಾಶ ಇಲ್ಲ. ವಿರೋಧಪಕ್ಷದ ನಾಯಕರ ಸ್ಥಾನವೂ ಸಹಾ ಒಂದು ಬಹಳ ಗುರುತರವಾದದ್ದು ಹಾಗೂ ದೊಡ್ಡ ಜವಾಬ್ದಾರಿಯುತವಾದದ್ದು. ಹಾಗೊಂದು ವೇಳೆ ನಮ್ಮ ವಿರೋಧಪಕ್ಷದ

ನಾಯಕರಿಗೆ ಈ ಚುನಾವಣೆಗಳಲ್ಲಿ ಅಂಥ ಯಾವುದೇ ಅನುಮಾನವಿದ್ದಿದ್ದ ಪಕ್ಷಕ್ಕೆ ಅವರು ಈ
ತಾಲ್ಲೂಕ್ ಅಭಿವೃದ್ಧಿಮಂಡಲಿಗಳ ಚುನಾವಣೆಯ ಕಾಲದಲ್ಲಿ ಇಲ್ಲಿ ಅನ್ಯಾಯಗಳು ನಡೆಯುತ್ತ
ವೆಂದು ಹೇಳಿ ಅವರು ತಮ್ಮ ವಿದೇಶಯಾತ್ರೆಯನ್ನು ನಿಲ್ಲಿಸುತ್ತಿದ್ದರು. ಅವರಿಗೆ ಈ ಚುನಾವಣೆ
ಗಳ ಬಗ್ಗೆ ಅಂಥ ಯಾವ ಅನುಮಾನಗಳೂ ಇಲ್ಲವಿದ್ದುದರಿಂದಲೇ ಅವುಗಳ ಚುನಾವಣೆ ನಡೆಯುತ್ತಿ
ದ್ದರೂ ಅವರು ಧೈರ್ಯವಾಗಿ ವಿದೇಶಯಾತ್ರೆಯನ್ನು ಕೈಗೊಂಡರು. ಇಲ್ಲದಿದ್ದರೆ ಇಲ್ಲೇ ಉಳಿದು
ಎಲ್ಲಾ ಜಿಲ್ಲೆಗಳಲ್ಲೂ ಪ್ರಬಲವಾದ ಪ್ರಚಾರಕಾರ್ಯವನ್ನು ಕೈಗೊಳ್ಳುತ್ತಿದ್ದರು.

ಇನ್ನು ಜಿಲ್ಲಾಪರಿಷತ್ತುಗಳ ರಚನೆಯ ವಿಷಯದಲ್ಲಿ ಬಹಳ ನಿಧಾನವಾಗಿದೆ ಎಂಬುದರಲ್ಲಿ
ಎರಡಭಿಪ್ರಾಯಗಳಿಲ್ಲ. ಇದನ್ನು ಕೂಡಲೆ ಕಾರ್ಯರೂಪಕ್ಕೆ ತರಲು ಇದೇ ಅಧಿವೇಶನದಲ್ಲಿ ಒಂದು
ಅಶೇಷ ಖಾಯಿದೆಯನ್ನು ತಂದು ಇವನ್ನು ಜಾರಿಗೆ ತರಬೇಕೆಂದು ಒತ್ತಾಯಮಾಡುತ್ತೇನೆ.

ಇನ್ನು ಹಿಂದೆ ಇದ್ದ ಮೈಸೂರು ಸರ್ಕಾರದವರು ಗಡೀಮಾತೆತ್ತಿದರೆ ಇನ್ನೆಲ್ಲಿ ಆ ಬೆಳಗಾಮನ್ನು
ಕೈಬಿಡಬೇಕಾದ ಪ್ರಶ್ನೆ ಬರುತ್ತದೋ ಎಂಬ ಕಾರಣದಿಂದ ಅಕ್ಕಪಕ್ಕದ ರಾಜ್ಯದಲ್ಲಿದ್ದ ಕನ್ನಡ
ಪ್ರದೇಶಗಳ ಬಗ್ಗೆ ಯಾವುದನ್ನೂ ಕೇಳದೆ ಹಾಗೇ ಕೈಬಿಟ್ಟರು. ಆದಾಗ್ಯೂ ಆ ಮಹಾಜನ್
ಕಮಿಷನ್ ವರದಿಯಲ್ಲಿ ಘಂಟಾಘೋಷವಾಗಿ ಕನ್ನಡಭಾಗಕ್ಕೆ ಬರಬೇಕಾದ ಭಾಗಗಳೇನಿದ್ದವು
ಅವುಗಳನ್ನು ಕನ್ನಡನಾಡಿಗೆ ಸೇರಿಸಬೇಕು ಎಂಬುದಾಗಿ ತಿಳಿಸಿದ್ದಾರೆ ಆದರೆ ಅದೇಕೋ ನಮ್ಮ
ಸರ್ಕಾರದವರಿಗೆ ಮೊದಲಿನಿಂದಲೂ ಆ ಕಾಸರಗೋಡಿನ ವಿಚಾರದಲ್ಲಿ ಒಂದು ನಿರ್ದಿಷ್ಟನಿಲುವನ್ನು
ತಾಳುತ್ತಿಲ್ಲ. ಆದಾಗ್ಯೂ ಆ ಕಾಸರಗೋಡಿನ ಜನರ ಒಲುವೇನೊ ನಮ್ಮರಾಜ್ಯದ ಕಡೆಗೆ
ಸಂಪೂರ್ಣವಾಗಿದೆ. ಆದುದರಿಂದ ಸರ್ಕಾರದವರು ಈ ಬಗ್ಗೆ ತಮ್ಮ ನಿಲುವೇನೆಂಬುದನ್ನು ಕೂಡಲೆ
ನಿರ್ಧರಿಸಬೇಕೆಂದು ಹೇಳುತ್ತೇನೆ.

ಇನ್ನು ಕನ್ನಡ ಭಾಷೆಯು ರಾಜ್ಯದ ಆಡಳಿತ ಭಾಷೆಯಾಗಬೇಕು ಎಂಬ ಅಭಿಪ್ರಾಯ ಎಲ್ಲ
ರಲ್ಲೂ ಇದ್ದಹಾಗೆ ಕಂಡಬರುತ್ತಿದೆ. ಹಾಗಿದ್ದರೂ ಇದನ್ನು ಅವರು ಯಾವುದೇ ನೆಪದಿಂದಲಾಗಲಿ
ಹಿಂದೂಡುವುದು ಸರಿಯಲ್ಲ. ಹಾಗೆ ಹಿಂದೂಡತಕ್ಕ ಪ್ರಶ್ನೆಯಲ್ಲ ಇದು. ಕನ್ನಡದಲ್ಲೇ ನಾವು
ಆಡಳಿತವನ್ನು ನಡೆಸಬಲ್ಲೆವು ಅದಕ್ಕೆ ಅವಕಾಶವಿದೆ ಎಂಬ ಒಂದು ಮೂಲಭೂತ ನಂಬಿಕೆ ನಮ್ಮಲ್ಲಿ
ಮೂಡಿದರೆ ಸಾಕು. ಅಂಥ ನಂಬಿಕೆ ಇರುವುದಾದರೆ ಇದನ್ನು ಏಕೆ ಹಿಂದೂಡಬೇಕು ? ಆ ಉಸ್ಮಾ
ನಿಯ ಯೂನಿವರ್ಸಿಟಿಯವರು ಈಗಾಗಲೇ ಅಲ್ಲಿ ಎಲ್ಲವನ್ನೂ ಉರ್ದುವಿನಲ್ಲೇ ನಡೆಸಬೇಕೆಂದು
ತೀರ್ಮಾನಮಾಡಿಕೊಂಡಿಲ್ಲವೇ ? ಕನ್ನಡವನ್ನು ಆ ಮಟ್ಟದಲ್ಲಿ ತರುವುದಕ್ಕೆ ಬಹಳ ಕಾಲ ಬೇಕಾಗು
ತ್ತದೆ. ನಮ್ಮಲ್ಲಿರತಕ್ಕ ಜನಗಳಿಗೆ ಧಕ್ಕೆ ಬರುತ್ತದೆಂದು ಅವಿಶ್ವಾಸ ಪಡದೆ ಕನ್ನಡವನ್ನು ಆಡಳಿತ
ಭಾಷೆಯನ್ನಾಗಿ ಮಾಡಿ. ರಾಜ್ಯದ ಹೆಸರನ್ನು ಕರ್ಣಾಟಕವೆಂದು ಮಾಡುವುದಕ್ಕೆ ಇನ್ನೂ
ಹಲವಾರು ವರ್ಷಗಳ ಕಾಲ ಆಗಬೇಕಾಗುತ್ತದೆ. ಎಲ್ಲರ ಮನಸ್ಸನ್ನೂ ಒಲಿಸಬೇಕು. ಒಟ್ಟಿನಲ್ಲಿ
ಈ ರಾಜ್ಯದ ಹೆಸರನ್ನು ಕರ್ಣಾಟಕವೆಂದು ಮಾಡುವುದಕ್ಕೆ ಹಾಗೂ ಈ ದೇಶದ ಆಡಳಿತ ಭಾಷೆ
ಕನ್ನಡ ಮಾಡುವುದಕ್ಕೆ ಸರ್ಕಾರದವರು ತೀವ್ರವಾದ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕು
ಎಂಬುದಾಗಿ ನಾನು ಹೇಳುತ್ತೇನೆ.

ಇನ್ನು ಈಗಾಗಲೇ ಸರ್ಕಾರದವರು ಪಟ್ಟಾ ಫಾರಮ್‌ಗಳನ್ನು ಪಾಸ್ ಬುಕ್ ರೂಪದಲ್ಲಿ
ಪ್ರಿಂಟ್‌ಮಾಡುವುದಕ್ಕೆ ಕೊಟ್ಟಿದ್ದಾರೆ. ಇದರಿಂದ ರೈತರಿಗೆ ಅನೇಕ ಕೆಲಸಗಳನ್ನು ಉಳಿಸಿಕೊಟ್ಟಂತೆ
ಆಗುತ್ತದೆ. ತಾಲ್ಲೂಕು ಕಚೇರಿಗಳಲ್ಲಿ ನಿಂತು ಬೆಂದು ಬರುವುದು ತಪ್ಪಿಸಿದಂತಾಗುತ್ತದೆ.
ಅದಕ್ಕಾಗಿ ಸರ್ಕಾರದವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಇನ್ನು ಗ್ರಾಮಾಂತರದಲ್ಲಿ ವಿದ್ಯುಚ್ಛಕ್ತಿ ಮತ್ತು ನೀರನ್ನು ಒದಗಿರುವುದಕ್ಕೆ ಅಂತ್ಯಂತ ಹೆಚ್ಚಿನ
ಆದ್ಯತೆಯನ್ನು ಕೊಡಬೇಕು. ಪ್ರತಿಯೊಂದು ರಾಜ್ಯಪಾಲರ ಭಾಷಣದಲ್ಲಿಯೂ ಇದರ ಬಗ್ಗೆ ಸೂಕ್ತ
ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಹೇಳುವುದು ಸರ್ಕಾರಕ್ಕೆ ಭೂಷಣವಾದುದಲ್ಲ.
ಪ್ರಾಮಾಣಿಕವಾಗಿ ಹಾಗೂ ಶೀಘ್ರವಾಗಿ ಈ ಕಾರ್ಯಗಳನ್ನು ಕಾರ್ಯಗತಮಾಡಬೇಕು.

ಇನ್ನೊಂದು ವಿಷಯ. ಮಲೆನಾಡಿಗೆ ಸಂಬಂಧಪಟ್ಟ ಧೋರಣೆಯನ್ನು ಈಗ ಬದಲಾವಣೆ
ಮಾಡಬೇಕು. ಮಲೆನಾಡಿನ ಕೆರೆಗಳನ್ನು ಡಿ-ಸಿಲ್ಟ್ ಮಾಡುವುದು, ಮಳೆಯ ಪರಿಸ್ಥಿತಿಯನ್ನು
ಗಮನಿಸಿ ರಸ್ತೆಗಳನ್ನು ವಿಶೇಷವಾದಂಥ ರೀತಿಯಲ್ಲಿ ಉತ್ತಮಪಡಿಸುವುದು—ಇಂತಹ ಅವಶ್ಯಕ
ವಾದಂಥ ಬದಲಾವಣೆಗಳನ್ನು ಅದಷ್ಟು ಜಾಗ್ರತೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ವೇತನ ಆಯೋಗದ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಆಯೋಗ
ಈಗಾಗಲೇ ವರದಿಯನ್ನು ಕೊಟ್ಟಿದೆ. ಆಯೋಗದ ವರದಿಯಲ್ಲಿ ಒಂದು, ಸಂಬಳಸಾರಿಗೆ ಪ್ರಶ್ನೆ,
ಇನ್ನೊಂದು ಆಡಳಿತ ಸುಧಾರಣೆಗೆ ಸಂಬಂಧಪಟ್ಟ ಪ್ರಶ್ನೆ—ಇವುಗಳು ಸೇರಿವೆ. ಇದನ್ನು ಜಾರಿಗೆ

(ಶ್ರೀ ಕೆ. ಎಚ್. ಶ್ರೀನಿವಾಸ್)

ಕೊಟ್ಟರೆ ಒಂದು ವರ್ಷಕ್ಕೆ ಸಂಬಳ ಸಾರಿಗೆ ಸುಮಾರು 60 ಕೋಟಿ ರೂಪಾಯಿಗಳಿಗೆ ಮುಟ್ಟುತ್ತದೆ.
ವೇತನ ಆಯೋಗದ ಎಲ್ಲಾ ಶಿಫಾರ್ಸುಗಳನ್ನು ಕಾರ್ಯಗತಮಾಡಿದರೆ ಸುಮಾರು ಸೇಕಡ 20ರಷ್ಟು
ಖೋತಾ ನಿರೀಕ್ಷೆಮಾಡಬಹುದು. ಪ್ರಥಮ ಹಂತದಲ್ಲಿ 8 ಕೋಟಿ ರೂಪಾಯಿಗಳ ಹೆಚ್ಚಳವಿದ್ದು,
ಇನ್ನು ಮುಂದಿನ ಐದು ವರ್ಷಗಳಲ್ಲಿ ಅದು 16 ಕೋಟಿ ರೂಪಾಯಿಗಳ ಹೆಚ್ಚಳವಾಗುತ್ತದೆ. ಕೆಲವು
ಹುದ್ದೆಗಳನ್ನು ಖೋತ ಮಾಡುವುದು, ಷಾಪ್ಸ್ ಮತ್ತು ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್‌ಗಳನ್ನು
ರಿನ್ಯೂಯಲ್ ಮಾಡುವುದಕ್ಕೆ ಫೀಸ್ ವಸೂಲುಮಾಡುವುದು, ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸನ್ನು
ರ್‍ಯಾಷನಲೈಜ್ ಮಾಡುವುದು—ಈ ರೀತಿಯಲ್ಲಿ ಇನ್ನೂ ಕೆಲವೊಂದು ಸಲಹೆಗಳನ್ನು ವೇತನ ಆಯೋಗ
ಮಾಡಿದೆ. ಇಂತಹ ವರದಿಗಳ ಬಗ್ಗೆ ಎರಡು ರೀತಿಯ ಧೋರಣೆ ಅನುಸರಿಸಬಹುದು. ಒಂದು,
ಅದನ್ನು ಸಂಪೂರ್ಣವಾಗಿ ಜಾರಿಗೆ ತರುವುದು, ಇನ್ನೊಂದು ಎಲ್ಲೋ ಅಲ್ಲೊಂದು ಚೂರು,
ಇಲ್ಲೊಂದು ಚೂರು ಜಾರಿಗೆ ತರುವುದು. ಒಟ್ಟಿನಲ್ಲಿ ಈ ವರದಿಯನ್ನು ಜಾಗ್ರತೆಯಾಗಿ
ಪ್ರಾಮಾಣಿಕವಾಗಿ ವಿಮರ್ಶೆಮಾಡಿ ಇದನ್ನು ಸಮಗ್ರವಾಗಿ ಜಾರಿಗೆ ತರುವುದರಿಂದ ಏನೊಂದು
ಪರಿಣಾಮವಾಗಬಹುದೆಂಬುದನ್ನು ತೀರ್ಮಾನಿಸಬೇಕು. ವೇತನ ಆಯೋಗದವರು ಇನ್ನೂ
ಅನೇಕ ರೀತಿಯ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಗ್ರಾಮಪಂಚಾಯತಿ, ಸ್ಥಳೀಯ ಹಾಗೂ
ತಾಲ್ಲೂಕು ಸಹಕಾರ ಸಂಘಗಳ ಅಧಿನಿಯಮಗಳನ್ನು ತಿದ್ದುಪಾಟು ಮಾಡುವುದು—ಹೀಗೆ ನಾನಾ
ರೀತಿಯ ಸಲಹೆಗಳನ್ನು ಮಾಡಿದ್ದಾರೆ. ಕೆಲವನ್ನು ಒಪ್ಪಿಕೊಳ್ಳುವುದು ಸಾಧುವಲ್ಲ. ಅಂತಹವು
ಗಳನ್ನು ಕೂಲಂಕಷವಾಗಿ ವಿಚಾರಮಾಡಬೇಕು. ಒಟ್ಟಿನಲ್ಲಿ ವೇತನ ಆಯೋಗದ ಶಿಫಾರಸ್ಸುಗಳನ್ನು
ಕಾರ್ಯಗತಮಾಡುವುದು ಅವಶ್ಯಕ.

ಇನ್ನೊಂದು ಪ್ರಶ್ನೆ. ವೇತನ ಆಯೋಗದವರು ಆಡಳಿತ ಸುಧಾರಣೆಯ ಬಗ್ಗೆ ಏನೇನು
ಕಾರ್ಯಕ್ರಮಗಳನ್ನು ಸೂಚಿಸಿದ್ದಾರೋ ಅವನ್ನೂ ಕೂಡ ಜಾರಿಗೆ ಕೊಡಬೇಕು. ವೇತನ ಹೆಚ್ಚು
ಮಾಡುವುದರಿಂದ ನಿರೀಕ್ಷಿಸಿದಷ್ಟು ಕೆಲಸಕಾರ್ಯಗಳು ಸುಗಮವಾಗಿ ನಡೆಯುವ ಬಗ್ಗೆ ಸರ್ಕಾರ
ಹೆಚ್ಚು ಗಮನಕೊಡಬೇಕು. ಒಟ್ಟಿನಲ್ಲಿ ಇವತ್ತು ಆಡಳಿತದಲ್ಲಿ ಸುಧಾರಣೆಯಾಗಬೇಕು, ಆಡಳಿತ
ದಲ್ಲಿ ಪ್ರಜಾಸತ್ತಾತ್ಮಕ ಹತೋಟಿ ಬರಬೇಕೆಂಬುದನ್ನು ಅಧಿಕಾರಿಗಳಿಗೆ ಹೇಳಬೇಕು. ಹತೋಟಿ
ಪ್ರಶ್ನೆ ಬಂದಾಗ ರೂಲ್ಸ್ ಅಂಡ್ ರೆಗ್ಯುಲೇಷನ್ಸ್, ರೆಕ್ರೂಟ್‌ಮೆಂಟ್ ರೂಲ್ಸ್, ಡಿಸಿಪ್ಲಿನರಿ ರೂಲ್ಸ್,
ಇವುಗಳ ಬಗ್ಗೆ ಅನೇಕರು ರಿಟ್ ಹೋಗುತ್ತಾರೆ. ಇವುಗಳ ಬಗ್ಗೆ ಸರಿಯಾದ ತೀರ್ಮಾನಗಳನ್ನು
ಸರ್ಕಾರದವರು ಮಾಡಬೇಕು. ಇವತ್ತು ರೆವಿನ್ಯೂ ಇನ್‌ಸ್ಪೆಕ್ಟರ್ ಅವರನ್ನು ಒಂದು ಹೋಬಳಿ
ಯಿಂದ ಇನ್ನೊಂದು ಹೋಬಳಿಗೆ ಹಾಕಿದರೆ ಅವರು ರಿಟ್ ಹಾಕುತ್ತಾರೆ. ಆಗ ಸರ್ಕಾರ ತನ್ನ
ಸಿಬ್ಬಂದಿಮೇಲೆ ಹತೋಟಿ ಇಟ್ಟುಕೊಳ್ಳುವುದು ಕಷ್ಟ. ಸರ್ಕಾರ ತನ್ನ ಸಿಬ್ಬಂದಿಗೆ ಈ ದೇಶದ
ಜವಾಬ್ದಾರಿ ಏನಿದೆಯೆಂಬುದನ್ನು ತಿಳಿಸಬೇಕು. ಈ ದೃಷ್ಟಿಯಿಂದ ಈ ಸರ್ಕಾರ ಅವರ ಮೇಲೆ
ಹತೋಟಿ ಇಟ್ಟುಕೊಳ್ಳುವುದಕ್ಕೆ ವಿಶೇಷವಾದಂಥ ಅಧಿಕಾರವನ್ನು ಪಡೆಯಬೇಕು. ಅಂತಹ
ಕಾನೂನುಗಳನ್ನು ಜಾರಿಗೆ ಬರುವಂತೆ ಮಾಡಬೇಕು. ಇಲ್ಲದಿದ್ದರೆ ಅವರನ್ನು ಹತೋಟಿಯಲ್ಲಿಡು
ವುದು ಬಹಳ ಸಾಹಸವಾಗುತ್ತದೆ. ಅವರಿಗೆ ರಿಟ್ ಹೋಗುವುದಕ್ಕೆ ಅವಕಾಶ ಕೊಡಬಾರದೆಂದು
ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರ್).—ಅಧ್ಯಕ್ಷರೇ, ಉಭಯ ಸದನಗಳಲ್ಲಿ
ರಾಜ್ಯಪಾಲರು ಮಾಡಿದಂಥ ಭಾಷಣದ ಮೇಲೆ ಸುಮಾರು ಮೂರು ದಿವಸಗಳಿಂದಲೂ ಇಲ್ಲಿ ದೀರ್ಘ
ವಾಗಿ ಚರ್ಚೆ ನಡೆದಿದೆ. ರಾಜ್ಯಪಾಲರ ಭಾಷಣದಲ್ಲಿ ಮೊಟ್ಟಮೊದಲನೆಯದಾಗಿ ತಾಲ್ಲೂಕ್
ಬೋರ್ಡ್ ಚುನಾವಣೆಯ ಬಗ್ಗೆ ಬಹಳ ಉನ್ನತವಾದ ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ.
ಈ ದೇಶದಲ್ಲಿ ಪ್ರಜಾಪ್ರಭುತ್ವ ಬಂದಮೇಲೆ ಬಹುಶಃ ತಾಲ್ಲೂಕುಬೋರ್ಡ್‌ನಲ್ಲಿ ಮಾಡಿದಂಥ
ದುರ್ಘಟನೆಗಳು ಇನ್ನೆಲ್ಲಿಯೂ ಆಗಲಿಲ್ಲವೆಂದು ನನಗನ್ನಿಸುತ್ತದೆ. ಇದಕ್ಕೋಸ್ಕರ ನಾನು
ಹೇಳುವುದೇನೆಂದರೆ, ಇಲ್ಲಿರತಕ್ಕ 216 ಜನ ಸದಸ್ಯರೂ ಸಹ ಈಗ ತಾಲ್ಲೂಕುಬೋರ್ಡ್ ಚುನಾವಣೆ
ಗಳಲ್ಲಿ ಭಾಗವಹಿಸಿದ್ದರು, ಎಲ್ಲರೂ ಕೂಡ ತಮ್ಮ ತಮ್ಮ ತಾಲ್ಲೂಕಿನಲ್ಲಿ, ತಮ್ಮ ತಮ್ಮ ಕ್ಷೇತ್ರದಲ್ಲಿ
ಈ ತಾಲ್ಲೂಕು ಬೋರ್ಡಿನ ಚುನಾವಣೆ ಬಗ್ಗೆ ಪ್ರಚಾರ ಕಾರ್ಯ ನಡೆಸಿದರು. ನನ್ನ ಮಾನ್ಯ
ಸ್ನೇಹಿತರಾಗಿರತಕ್ಕಂತಹ ಶ್ರೀನಿವಾಸರವರು ಒಂದು ಮಾತನ್ನು ಹೇಳಿದರು, ಎಷ್ಟೋ ಸ್ಥಾನ
ಗಳನ್ನು ನಮ್ಮ ಕಾಂಗ್ರೆಸ್ ಗಳಿಸಿದೆ, ಕೆಲವು ಕಡೆ ವಿರೋಧ ಪಕ್ಷದ ಒಂದು ಆಡಳಿತ ಬಂದಿದೆ
ಎನ್ನತಕ್ಕಂತಹ ಏನು ಒಂದು ಮಾತನ್ನು ಹೇಳಿದರು, ಅದು ಸತ್ಯಕ್ಕೆ ದೂರವಾದ ಮಾತು, ಅದನ್ನು
ಅವರು ತಿದ್ದಿಕೊಳ್ಳಬೇಕೆಂದು ಹೇಳುತ್ತೇನೆ. ಪಾನನಿರೋಧ ಸಡಿಲಿಕೆಯಿಂದ ಉಂಟಾದಂತಹ

ಅಶಾಂತಿ ಎಲ್ಲೆಲ್ಲೂ ಹರಡಿದ್ದನ್ನು ಸರ್ಕಾರದವರು ಮನಗಂಡಿರಬೇಕು. ತಾಲ್ಲೂಕು ಬೋರ್ಡಿನ ಚುನಾವಣೆಯಲ್ಲಿ ಇವರು ಎಸಗಿದಂತಹ ಅಪರಾಧ ಬಹಳವಾಗಿವೆ. ರಿಲೀಫ್ ಕಾಮಗಾರಿಗಳನ್ನು ಮಾಡುವಾಗ, ತಮ್ಮ ತಮ್ಮ ಸಂಬಂಧಿಗಳು ಮತ್ತು ತಮಗೆ ಯಾರು ಸಹಾಯಕವಾಗಬಲ್ಲರು ಅಂಥವರಿಗೆ ಪ್ರೋತ್ಸಾಹಿಸಿ, ಹೆಚ್ಚಿನ ಕೆಲಸ ಕಾರ್ಯಗಳನ್ನು ಕೊಟ್ಟು ಸುಳ್ಳು ಬಿಲ್ಲುಗಳನ್ನು ಕೊಟ್ಟಿರ ತಕ್ಕದ್ದು ಅನೇಕ ನಿದರ್ಶನಗಳಿವೆ. ನನ್ನ ತಾಲ್ಲೂಕಿನಲ್ಲೇ ಅನೇಕ ನಿದರ್ಶನಗಳನ್ನು ಕಂಡಿದ್ದೇನೆ. ಇವರು ಚುನಾವಣೆಯಲ್ಲಿ ಸರ್ಕಾರಿ ಜೀಪ್‌ಗಳನ್ನು ಉಪಯೋಗಿಸಿದ್ದನ್ನು ನೋಡಿದರೆ, ಈ ದೇಶದಲ್ಲಿ ಪ್ರಜಾಪ್ರಭುತ್ವವೆಂಬುದು ಇದೆಯೇ ಎಂಬುದನ್ನು ನಾವೆಲ್ಲಾ ಯೋಚನೆ ಮಾಡ ಬೇಕಾಗಿದೆ.

ಅದರ ನಂತರ ಈ ಸಹಕಾರಿ ಸಂಘಗಳ ಬಗ್ಗೆ ಮಾತನಾಡತಕ್ಕ ಸ್ನೇಹಿತರು ಒಂದು ಮಾತನ್ನು ಹೇಳಿದರು. ಸಹಕಾರಿ ಸಂಘಗಳಲ್ಲಿ ಸಾಲವನ್ನು ಕೊಡತಕ್ಕದ್ದನ್ನು ಮುಂದುವರಿಸಿಕೊಂಡು ಹೋಗಿದ್ದಾರೆ, ಮತ್ತು ನೀರಾವರಿ ಬಾವಿಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದಾರೆ ಮತ್ತು ಎಷ್ಟು ಭಾವಿಗಳನ್ನು ತೋಡಿದ್ದಾರೆ, ವಿದ್ಯುಚ್ಛಕ್ತಿ ಒದಗಿಸುವುದಕ್ಕೋಸ್ಕರ ಎಷ್ಟು ಸಾವಿರ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಬಹುಶಃ ಮಾನ್ಯ ಗೋರ್ಪಡೆಯವರು ಹೇಳಿದ ಹಾಗೆ ದೇಶದಲ್ಲಿ ಕೊಟ್ಟಿರತಕ್ಕ ಸಾಲಗಳನ್ನು ವಾಪಸ್ಸು ಪಡೆಯುವುದಕ್ಕೆ ಒಂದು ತೀವ್ರ ಕ್ರಮ ತೆಗೆದುಕೊಳ್ಳದಿದ್ದರೆ, ನಮ್ಮ ಸರ್ಕಾರದ ತಳವೇ ಉಳಿಯಬಾರದು· ಬಹುಶಃ ಈ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿರತಕ್ಕಂತದ್ದು ಈ ಆಡಳಿತ ಪಕ್ಷದವರ ಸುಭದ್ರತೆಗೋಸ್ಕರವೆಂದು ಒತ್ತಿ ಹೇಳಬೇಕಾಗಿದೆ. ಇನ್ನೊಂದು ವಿಷಯ—ಇಲ್ಲಿ ಶಾಸನ ಸುವ್ಯವಸ್ಥೆ ಎನ್ನತಕ್ಕಂಥಹ ಮಾತನ್ನ ಹೇಳಿದ್ದಾರೆ. ''ಬೀಗ ಮುರಿದು ಕಳ್ಳತನ, ದನಗಳ ಕಳವು, ಮೊದಲಾದ ಅಪರಾಧಗಳು ಇಳಿ ಮುಖವಾಗಿದ್ದರೂ ಕನ್ನಗಳ್ಳತನ, ಡಕಾಯಿತಿ, ದರೋಡೆಗಳೇ ಮೊದಲಾದ ಅಪರಾಧಗಳು ಹೆಚ್ಚಿದವು. ಪ್ರಯಾಣಿಕರ ಕಳವಳಕ್ಕೆ ಕಾರಣವಾದ ಹೆದ್ದಾರಿ ದರೋಡೆಗಳಿಗೆ ಸಂಬಂಧಿಸಿದ ಏಳು ಜನ ಅಪರಾಧಿಗಳನ್ನು ಪೋಲೀಸರು ಬಂಧಿಸಿದ್ದಾರೆ'' ...ಎಂದು ಹೇಳಿದ್ದಾರೆ. ಇದು ಹೆಚ್ಚಬೇಕಾದರೆ, ನಿಮ್ಮ ಆಡಳಿತದಲ್ಲಿರತಕ್ಕಂತಹ ಪೋಲೀಸರ ದಕ್ಷತೆ ಸರಿಯಾಗಿಲ್ಲ, ಅಲ್ಲಿಯ ಅದಕ್ಷತೆಯಿಂದಾಗಿ ಇವೆಲ್ಲಾ ಆಗುತ್ತದೆಂದು ಹೇಳಬೇಕಾಗಿದೆ. ಇವತ್ತಿನ ದಿವಸ ಪೋಲೀಸರೇ ಇಂಥ ಕೆಲಸಗಳನ್ನು ಮಾಡಿಸುತ್ತಾರೆ. ಅವರು ಕಳ್ಳತನ ಮಾಡತಕ್ಕವರಿಗೆ, ಬೀಗ ಮುರಿಯತಕ್ಕವರಿಗೆ, ಇವರೇ ಪ್ರೋತ್ಸಾಹ ಮಾಡುತ್ತಾರೆಂಬುದು ಎಲ್ಲರಿಗೂ ಗೊತ್ತೇ ಇದೆ. ಮತ್ತು ಈ ಶಾಸನ ಸುವ್ಯವಸ್ಥೆ ಯಲ್ಲಿ ಪೋಲೀಸರ ಗೂಂಡಾವೃತ್ತಿ ಏನಿದೆ, ಇದನ್ನು ಆದಷ್ಟು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ನಿನ್ನೆಯ ದಿವಸ ನಾನು ಶಿವಮೊಗ್ಗಕ್ಕೆ ಹೋಗಿದ್ದೆ. ಅಲ್ಲಿ ಒಂದು ಹರಿಜನ ಸಮ್ಮೇಳನವನ್ನು ಕರೆದಿ ದ್ದರು. ಅಲ್ಲಿ ಹಾಲಪ್ಪ ಎನ್ನತಕ್ಕಂತಹ ಹರಿಜನ ಪಂಚಾಯಿತಿ ಸದಸ್ಯನನ್ನು ಕೊಲೆ ಮಾಡಿದ ಪ್ರಕರಣ ಒಂದು ಇದೆ. ಈ ಕೊಲೆ 28–9–68ರಲ್ಲಿ ಹೊನ್ನಾಳಿಯಲ್ಲಿ ಆಯಿತು. ಇದಕ್ಕೆ ಪೂರ್ವ ಭಾವಿಯಾಗಿ ಅದೇ ಪೋಲೀಸ್ ಸ್ಟೇಶನಿಗೆ ಅವನು ನನ್ನ ಕೊಲೆಯಾಗಬಹುದು ಎಂಬ ದೂರನ್ನು ಕೊಟ್ಟಿದ್ದಾನೆ. ಆದರೆ, ಅವನ ಆ ದೂರಿನ ಮೇಲೆ ಯಾರೂ ಏನೂ ಕಾರ್ಯಕ್ರಮವನ್ನು ತೆಗೆದು ಕೊಳ್ಳಲಿಲ್ಲ. ಮತ್ತು ಆತನ ಕೊಲೆಯಾದನಂತರ, ಆತನ ಹೆಂಡತಿ ಮತ್ತು ತಮ್ಮನನ್ನು ಪೋಲೀಸ್ ಸ್ಟೇಶನಿಗೆ ತೆಗೆದುಕೊಂಡು ಹೋಗಿ, ಪೋಲೀಸ್ ಕಸ್ಟಡಿಯಲ್ಲಿ ಇಟ್ಟು ಅವರಿಗೆ ನಾನಾ ತರದ ಚಿತ್ರಹಿಂಸೆಗಳನ್ನು ಕೊಟ್ಟರು, ಸೂಜಿಯಿಂದ ಚುಚ್ಚಿದರು ಮತ್ತು ಇನ್ನಿತರ ಚಿತ್ರಹಿಂಸೆಗಳನ್ನು ಕೊಟ್ಟರು, ಮತ್ತು ಅವನ ತಮ್ಮನೊಡನೆ, ನೀನೆ ಏಕೆ ನಿನ್ನ ಅಣ್ಣನ ಕೊಲೆ ಮಾಡಿರ ಬಾರದು ಎಂದು ಹೇಳಿ, ಅವನಿಗೆ ಕೊಡಬಾರದ ಶಿಕ್ಷೆಯನ್ನು ಕೊಟ್ಟರು. ಹಿಂದೆ ಈ ಮಾನ್ಯ ಸಭೆಯಲ್ಲಿ ಒಂದು ದೊಡ್ಡ ಗಲಾಟೆ ನಡೆಯಿತು. ಆ ಗಲಾಟೆಯಲ್ಲಿ ಒಂದು ಕಮಿಶನನ್ನು ನೇಮಕ ಮಾಡಿದರು. ಅನೇಕ ಶಾಸನಸಭೆಯ ಮಾನ್ಯ ಸದಸ್ಯರು ಹೋಗಿ ಕೃತ್ಯವನ್ನು ನೋಡಿ ವಿಚಾರಿಸಿ ಬಂದು ಈ ಸದನದ ಮುಂದಿಟ್ಟಿದ್ದಾರೆ. ಆದರೆ ಈ ವಿಚಾರದಲ್ಲಿ ಎಂತಹ ನಿಲುವನ್ನು ತಾಳು ತ್ತಾರೆಂಬುದಾಗಿ ನೋಡಬೇಕಾಗಿದೆ. ಹರಿಜನರಿಗೆ ಇಂತಿಂಥ ಸೌಕರ್ಯವನ್ನು ಕೊಟ್ಟಿ ದ್ದಾರೆ ಎನ್ನತಕ್ಕಂತಹ ಮಾತನ್ನು ಇಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳುತ್ತಾರೆಂದರೆ —''ಅನುಸೂಚಿತ ಜಾತಿಗಳು, ಅನುಸೂಚಿತ ಆದಿಮಜಾತಿಗಳು ಹಾಗೂ ಸಮಾಜದ ದುರ್ಬಲ ವರ್ಗಗಳ ಪರಿಸ್ಥಿತಿಗಳ ಸುಧಾರಣೋಪಾಯಗಳನ್ನು ಕಂಡು ಹಿಡಿಯುವ ವಿಚಾರಕ್ಕೆ ಸರ್ಕಾರದವರು ಹೆಚ್ಚಿನ ಮಹತ್ವ ನೀಡುತ್ತಲೇ ಬರುವರು... ..''ಎಂದು ಹೇಳಿದ್ದಾರೆ. ಇವರು ಯಾವ ತರದ ಮಹತ್ವವನ್ನು ನೀಡುತ್ತಾರೆ, ಮೇಲೆ ಹೇಳಿದ ಕೇಸಿಗೆ ಎಂಥ ಮಹತ್ವವನ್ನು ಕೊಟ್ಟರು, ಎಂಬುದನ್ನು ಯೋಚನೆ ಮಾಡಬೇಕು. ಈ ಕೇಸ್ ಬೇರೆಯವರದಾಗಿದ್ದರೆ, ಯಾವ ಮಟ್ಟದಲ್ಲಿ ತೆಗೆದುಕೊಂಡು ಹೋಗುತ್ತಿದ್ದರು, ನಿರಪರಾಧಿಗಳಾದ ಹರಿಜನರಿಗೆ ಯಾರೂ ದಿಕ್ಕಿಲ್ಲವೇ, ಯಾರೂ ಕೇಳುವವರಿಲ್ಲವೇ, ಮತ್ತು ಸರ್ಕಾರದವರು ಏಕೆ ಹೆಚ್ಚು ಗಮನವನ್ನು ಇದಕ್ಕೆ ಕೊಟ್ಟಿಲ್ಲ!

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ನಾಲ್ಕು ತಿಂಗಳಾದರೂ ಇದನ್ನು ಏಕೆ ವಿಚಾರ ಮಾಡಿಲ್ಲ, ಗಾಂಧೀಜೀಯವರ ತತ್ವವನ್ನು ಅನುಸರಿಸತಕ್ಕ ಕಾಂಗ್ರೆಸ್ ಸರ್ಕಾರಕ್ಕೆ ದೇವರು ಒಳ್ಳೆಯಬುದ್ಧಿ ಏಕೆ ಕೊಟ್ಟಿಲ್ಲ? ಈ 20 ವರ್ಷಗಳ ಆಡಳಿತದಲ್ಲಿ ಹರಿಜನರ ಕೊಲೆಗಳನ್ನು ಮಾಡಿಸತಕ್ಕದ್ದು, ಗೂಂಡಾಗಿರಿ ಮಾಡುವುದು, ಹರಿಜನರ ಸ್ತ್ರೀಯರನ್ನು ಬತ್ತಲೆ ಮಾಡಿ, ಅವಮಾನ ಮಾಡಿ, ಮೆರವಣಿಗೆ ಮಾಡುವುದು, ಇತ್ಯಾದಿ ಸನ್ನಿವೇಶಗಳನ್ನು ನಾವು ನೋಡುತ್ತಿದ್ದೇವೆ. ಈ ರೀತಿ ಇವರು ಮಾಡುವಾಗ, ಈ ಗಾಂಧೀಜಿ ಯವರ ತತ್ವವನ್ನು ಪಾಲನೆ ಮಾಡತಕ್ಕವರು, ಇಂಥ ಹೇಯ ಕೆಲಸಗಳನ್ನು ಮಾಡುವುದು ತೀರಾ ಶೋಚನೀಯವಾದುದು ಮತ್ತು ದುಃಖಕರವಾದುದು ಎಂದು ಹೇಳಬೇಕಾಗಿದೆ. ಈ ವಿಷಯವನ್ನು ಇಷ್ಟು ಸಂಕಟದಿಂದ ಹೇಳುತ್ತೇನೆ ಏಕೆಂದರೆ, ಇವತ್ತು ಆ ಊರಿ ನಲ್ಲಿ 100 ಮನೆಗಳಿದ್ದರೆ, ಅವುಗಳಲ್ಲಿ 80—90 ಮನೆಯವರು ಊರು ಬಿಟ್ಟು ಓಡಿ ಹೋಗಿದ್ದಾರೆ. ಇದರ ತನಿಖೆಯನ್ನು ಏಕೆ ಮಾಡಿಲ್ಲ? ಆದ್ದರಿಂದ ಈ ವಿಚಾರದ ಬಗ್ಗೆ ಆದಷ್ಟು ಜಾಗ್ರತೆಯಾಗಿ ತನಿಖೆಯನ್ನು ಮಾಡಬೇಕು ಮತ್ತು ನನ್ನ ಸ್ನೇಹಿತರಾಗಿರತಕ್ಕಂತಹ ಜಯ ಪ್ರಕಾಶ್ ನಾರಾಯಣರವರು ಒಂದು ಕಾಲಿಂಗ್ ಅಟೆನ್‌ಶನ್ ಕಳಿಸಿದ ಮೇಲೆ ಅಲ್ಲಿ ನಿರಪರಾಧಿ ಗಳಾದಂತಹ ಮೂರು ಜನರನ್ನು ಬಂಧನದಲ್ಲಿಟ್ಟಿರತಕ್ಕಂತಹ ಪ್ರಸಂಗವನ್ನು ನಾನು ಮೊನ್ನೆ ಪೇಪರಿನಲ್ಲಿ ಓದಿದೆ. ಹಾಗೆ ಆಗಬಾರದು. ಈ ದೇಶದಲ್ಲಿ ಶಾಸನ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಆದಷ್ಟು ತೀವ್ರವಾಗಿ ಕ್ರಮಕೈಗೊಳ್ಳಬೇಕು. ನಿರಪರಾಧಿಗಳಿಗೆ ನ್ಯಾಯ ದೊರಕಬೇಕು. ಅಂಥಾ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಸರ್ಕಾರದವರನ್ನು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

3-00 P.M.

ಕಡೆಯದಾಗಿ ಪ್ರವಾಸೋದ್ಯಮದ ವಿಚಾರವಾಗಿ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಪ್ರವಾಸೋದ್ಯಮದ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಬೇಲೂರು ಮತ್ತು ಹಳೇಬೀಡಿಗೆ ಪರದೇಶಗಳಿಂದ ಪ್ರಪಂಚದ ಮೂಲೆ ಗಳಿಂದ ಪ್ರವಾಸಿಗಳು ಬರುತ್ತಾರೆ. ಪ್ರವಾಸಿಗಳನ್ನು ಆಕರ್ಷಣೆ ಮಾಡತಕ್ಕಂಥ ಆ ದೇವಾಲಯ ಗಳನ್ನು ಸರಿಯಾದ ರೀತಿಯಲ್ಲಿ ಸರ್ಕಾರದವರು ಇಟ್ಟಿಲ್ಲ. ಮತ್ತು ಅಲ್ಲಿ ಬರತಕ್ಕ ಪ್ರವಾಸಿಗಳಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಟ್ಟಿಲ್ಲ. ದುಡ್ಡು ಬರಬೇಕು ಎನ್ನುವ ಮಾತನ್ನು ಹೇಳಿದ್ದಾ ರೆಯೇ ಹೊರತು ಅಲ್ಲಿಗೆ ಬರತಕ್ಕ ಪ್ರವಾಸಿಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಕೊಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಿಲ್ಲ. ಬೇಲೂರು ಹಳೇಬೀಡಿನ ದೇವಸ್ಥಾನಗಳು ಶಿಥಿಲವಾಗಿ ಹೋಗಿವೆ. ಅವುಗಳನ್ನು ಊರ್ಜಿತಾವಸ್ಥೆಗೆ ತರುವುದಕ್ಕೆ ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಏನಾದರೂ ಮನವಿಯನ್ನು ಮಾಡಿದ್ದಾರೆಯೇ ಹೇಗೆ ಎನ್ನುವುದನ್ನು ನಾನು ಸರ್ಕಾರಕ್ಕೆ ಪ್ರಶ್ನೆ ಮಾಡಬೇಕಾಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ರಾಜ್ಯಪಾಲರ ಭಾಷಣ ಹೇಗಿದೆ ಎಂದರೆ ಹರಿಕಥೆಯೋಪಾದಿಯಲ್ಲಿ ಇದೆ. ಅವರು ಒಂದು ಹರಿಕಥೆಯನ್ನು ಮಾಡಿ ಹೋಗಿದ್ದಾರೆ. ಈ ಹರಿ ಕಥೆಯನ್ನು ಹೇಳುವುದಕ್ಕೆ ಒಬ್ಬರು ದಾಸರು ಬೇಕಾಗಿತ್ತು. ಆದ್ದರಿಂದ ರಾಜ್ಯಪಾಲರು ಒಬ್ಬ ದಾಸರಾಗಿ ಬಂದು ಹರಿಕಥೆಯನ್ನು ಹೇಳಿ ಹೋಗಿದ್ದಾರೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ಎದುರು ಪಕ್ಷದ ಸ್ನೇಹಿತರು ಈಗತಾನೆ ಭಾಷಣ ಮಾಡುತ್ತಾ, ರಾಜ್ಯಪಾಲರ ಭಾಷಣ ಹರಿಕಥೆಯೋಪಾದಿ ಯಲ್ಲಿದೆ ಎಂದು ಹೇಳಿದರು. ಮತ್ತು ಹರಿಕಥೆಯನ್ನು ಮಾಡುವುದಕ್ಕೆ ಒಬ್ಬೊಬ್ಬರು ದಾಸರು ಬೇಕಾಗಿತ್ತು, ಅದಕ್ಕಾಗಿ ಸರ್ಕಾರದವರು ರಾಜ್ಯಪಾಲರನ್ನು ಕರೆದುಕೊಂಡು ಬಂದು ಹರಿಕಥೆಯನ್ನು ಮಾಡಿಸಿದರು ಎಂದು ಹೇಳಿದರು. ಆದರೆ ಅದಕ್ಕೆ ನನ್ನ ಅಭಿಪ್ರಾಯ ವಿರೋಧವಾಗಿದೆ. ನನ್ನ 10-12 ವರ್ಷಗಳ ಅನುಭವದಿಂದ ರಾಜ್ಯಪಾಲರ ಭಾಷಣವನ್ನು ನೋಡುತ್ತಿರಾಗಿ ನಿಜವಾಗಿಯೂ ಕೂಡ ನಮ್ಮ ಈ ರಾಜ್ಯಪಾಲರ ಭಾಷಣ ಬಹಳ ವಿಚಾರ ಪೂರಿತವಾಗಿದೆ. ಬಹಳ ಒಳ್ಳೆಯ ಅಡ್ರೆಸ್ಸನ್ನು ಅರ್ಪಣೆ ಕೊಡಿಸಿದ್ದಾರೆ. ನಮ್ಮ ಈಗಿನ ಮಾನ್ಯ ಮುಖ್ಯ ಮಂತ್ರಿಗಳು ಯಾವಾಗಲೂ ಆತ್ಮಶೋಧನೆ ಮಾಡಿಕೊಳ್ಳಬೇಕು ಎಂದು ಹೇಳುತ್ತಿರುತ್ತಾರೆ ಮತ್ತು ಅದಕ್ಕನುಸಾರವಾಗೇ ನಮ್ಮದು ತಪ್ಪು ಏನೇ ಆಗಿದ್ದರೂ ಆ ತಪ್ಪನ್ನು ತಿದ್ದಿಕೊಳ್ಳಬೇಕು. ತಪ್ಪು ಮಾಡಿದವನನ್ನು ಶಿಕ್ಷಿಸ

ಬೇಕು. ಸರಿಯಾಗಿ ನ್ಯಾಯವಾಗಿ ಇರುವವರಿಗೆ ಉತ್ತೇಜನ ಕೊಡಬೇಕು ಎನ್ನುವುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ದೃಷ್ಟಿಯಿಂದ ತಪ್ಪು ಮಾಡಿದವರಿಗೆ ಸರಿಯಾದ ಶಿಕ್ಷೆಯನ್ನು ವಿಧಿಸಿ ಧೈರ್ಯವಾಗಿ ಶುದ್ಧ ಆಡಳಿತವನ್ನು ಮಾಡಿದರೆ ಜನ ಮೆಚ್ಚುತ್ತಾರೆ ಮತ್ತು ಹಾಗೆಯೇ ಆಡಳಿತವನ್ನು ನಡೆಸಿಕೊಂಡು ಹೋಗಬೇಕು. ರಾಜ್ಯಪಾಲರ ಭಾಷಣದಲ್ಲಿ ಕೆಲವು ಸೂಚನೆಗಳನ್ನು ಮಾಡಿದ್ದಾರೆ. ಇದರ ಬಗ್ಗೆ ನನ್ನ ಅಭಿಪ್ರಾಯವನ್ನು ನಾನು ಸೂಚಿಸಬಯಸುತ್ತೇನೆ. ಮೊದಲನೆಯದಾಗಿ ರಾಜ್ಯಪಾಲರು ತಾಲ್ಲೂಕ್‌ಬೋರ್ಡುಗಳ ಚುನಾವಣೆಯ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ತಾಲ್ಲೂಕುಬೋರ್ಡುಗಳ ಚುನಾವಣೆ ಆದದ್ದು ಬಹಳ ದೊಡ್ಡ ಕೆಲಸವಾಗಿದೆ ಎಂದು ಹೇಳಿದ್ದಾರೆ. ನಿಜ, ತಾಲ್ಲೂಕು ಬೋರ್ಡುಗಳ ಚುನಾವಣೆಯಲ್ಲಿ ಆಡಳಿತ ಪಕ್ಷಕ್ಕೆ ಸೇರಿದವರು, ಬಹಳ ಜನ ಆರಿಸಿ ಬಂದಿದ್ದಾರೆ. ಇದು ಬಹಳ ಸಂತೋಷ. ಆದರೆ ಪ್ರಜಾಪ್ರಭುತ್ವ ಧರ್ಮಕ್ಕನುಗುಣವಾಗಿ ಹೋಗಬೇಕಾಗಿರುವ ಈ ಕಾಲದಲ್ಲಿ ಡೆಮಾಕ್ರಸಿಯ ಸರ್ವ ನಾಶವಾಗುವಂಥಾ ಚುನಾವಣೆಗಳು ನಡೆಯುವುದು ಸರಿಯೇ ಎಂದು ದೊಡ್ಡ ಪ್ರಶ್ನೆ, ಯಕ್ಷ ಪಶ್ನೆ. ಈ ಚುನಾವಣೆಗಳು ಹೇಗೆ ನಡೆದಿವೆ ಎಂಬುದಕ್ಕೆ ಪ್ರತಿಯೊಬ್ಬರೂ ಆತ್ಮ ಶೋಧನೆ ಮಾಡಿಕೊಳ್ಳಬೇಕು. ಏಕೆಂದರೆ ಇಂದಿನ ಪ್ರಜಾ ಪ್ರಭುತ್ವ ಯುಗದಲ್ಲಿ ಈ ಕಡೆ ಇರತಕ್ಕವರು ಆಳುವವರು ಆ ಕಡೆ ಹೋಗಬಹುದು, ಆ ಕಡೆ ಇರತಕ್ಕವರು ಅಂದರೆ ವಿರೋಧ ಪಕ್ಷದವರು ಈ ಕಡೆ ಬರಬಹುದು. ಅನೇಕ ಕಡೆ ಈ ರೀತಿ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಒಂದುವೇಳೆ ನಾವು ಅಲ್ಲಿಗೆ ಎಂದರೆ ವಿರೋಧಪಕ್ಷದ ಕಡೆಗೆ ಹೋದಂತಹ ಸಂದರ್ಭದಲ್ಲಿ ಹೋಗಬೇಕಾಗಿ ಬಂದಂಥ ಪ್ರಸಂಗ ಒದಗಿದ್ದರೆ ಈ ತರಹ ಚುನಾವಣೆಗಳು ನಡೆದರೆ ನಮಗೂ ಧಕ್ಕೆ ತಗಲಬಹುದು. ಈ ರೀತಿ ಚುನಾವಣೆಗಳು ಆಗಬೇಕಾದರೆ ಜನ ಹೇಗೆ ವೋಟು ಮಾಡಿದರು ? ಐಡೆಂಟಿಫಿಕೇಷನ್ ಮಾರ್ಕ್ ಇಲ್ಲ. ಜನ ಒಬೊಬ್ಬರು 10 ಸಾರಿ 12 ಸಾರಿ ವೋಟು ಮಾಡಿದ್ದಾರೆ. ಈ ಚುನಾವಣೆಯಲ್ಲಿ ಆಫೀಸರುಗಳು ಬಹಳ ಇಂಟರೆಸ್ಟ್ ತೆಗೆದುಕೊಂಡಿದ್ದಾರೆ. ಆಳುವ ಪಕ್ಷಕ್ಕೆ ಯಶಸ್ಸನ್ನು ಗಳಿಸಿಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಬ್ಯಾಲೆಟ್ ಪೇಪರುಗಳು ರಿಪ್ರಿಂಟ್ ಆದುವು. ಬಾಕ್ಸ್‌ಗಳು ಬದಲಾವಣೆ ಆಯ್ತು ಎಂದು ನಾನು ಕೇಳಿದ್ದೇನೆ. ತಹಶೀಲ್ದಾರರು ಇದಕ್ಕೆಲ್ಲಾ ಬಹಳ ನಿಗಾ ತೆಗೆದುಕೊಂಡಿದ್ದಾರೆ. ಬಹಳ ಆಸಕ್ತಿ ವಹಿಸಿ ಅವರ ಇಂಟರೆಸ್ಟ್ ನ್ನೆಲ್ಲಾ ಕಾನ್‌ಸನ್‌ಟ್ರೇಟ್ ಮಾಡಿ ನಮ್ಮನ್ನು ಗೆಲ್ಲಿಸಿಕೊಟ್ಟಿದ್ದಾರೆ. ಅವರು ಇನ್ನು 5–6 ವರ್ಷಗಳಲ್ಲಿ ರಿಟೈರ್ ಆಗುತ್ತಾರೆ. ಮತ್ತು ಅವರು ನಮ್ಮ ತಾಲ್ಲೂಕಿನಲ್ಲೇ ಸೆಟ್ಲ್ ಆಗುತ್ತಾರಂತೆ. ಆದ್ದರಿಂದ ಅವರಿಗೆ ಕ್ಯಾಷೂ ನಟ್ಸ್ ಬೆಳೆಯುವುದಕ್ಕೆ ಈಗ ತಾನೇ ಕಸಬಾ ಕ್ಯಾಂಡಿಡೇಟಿಗೆ ಸಾಕ್ಷಿ ಆಗಿರುವ 100 ಎಕರೆ ಜಮೀನಿನಲ್ಲಿ 25 ಎಕರೆ ಜಮೀನನ್ನು ಅವರು ಕೊಡುತ್ತಾರಂತೆ ಬಹಳ ಸಂತೋಷ. ನಾಳೆ ಜಿಲ್ಲಾ ಪರಿಷತ್ ಚುನಾವಣೆ ಆಗಬೇಕಾಗಿದೆ. ಪ್ರಜಾ ಪ್ರಭುತ್ವ ಬೆಳೆಯಬೇಕು ದೊಡ್ಡದಾಗಿ ಬೆಳೆಯಬೇಕು ಎನ್ನುವಾಗ, ಈ ತರಹ ಚುನಾವಣೆಗಳು ಆದರೆ, ವಿರೋಧ ಪಕ್ಷದವರೂ ಈ ರೀತಿ ನಡೆದುಕೊಂಡರೆ ನಮ್ಮ ಗತಿ ಏನು ? ರಾಜ್ಯಪಾಲರು ಅಪ್ಪಣೆ ಕೊಡಿಸಿದ ಹಾಗೆ ನಾವು ಬಹಳ ಸೂಕ್ಷ್ಮವಾಗಿ ನಡೆದುಕೊಳ್ಳಬೇಕು, ನ್ಯಾಯ ರೀತಿಯಲ್ಲಿ ನಡೆದುಕೊಳ್ಳಬೇಕು. ಮನುಷ್ಯ ತಪ್ಪು ಮಾಡಬಹುದು. ಆದರೆ ಆ ಮನುಷ್ಯ ತನ್ನ ತಪ್ಪನ್ನು ತಿದ್ದಿಕೊಳ್ಳಬೇಕು. ಅದು ನಮ್ಮ ಕರ್ತವ್ಯ. ತಹಶೀಲ್ದಾರರು ಇಂಥವರಿಗೇ ವೋಟು ಮಾಡಿ ಎಂದು ಜನತೆಗೆ ಹೇಳಿದ್ದಾರೆ. ಹೀಗಾದರೆ ಪ್ರಜಾಪ್ರಭುತ್ವ ಉಳಿಯುತ್ತದೆಯೇ, ಪ್ರಜಾಪ್ರಭುತ್ವದ ಧರ್ಮ ಉಳಿಯುತ್ತದೆಯೇ ? ಇದನ್ನು ಬಹಳ ಯೋಚನೆ ಮಾಬೇಕಾಗಿದೆ.

ಅರಣ್ಯ ಸಂಪತ್ತಿನ ವಿಚಾರದಲ್ಲಿ ರಾಜ್ಯಪಾಲರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ನಮ್ಮ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮೊನ್ನೆ ಒಂದು ಅಮಾನುಷಕರವಾದ ಕೊಲೆ ಆಯಿತು. ಅದು ನೆನೆಸಿಕೊಳ್ಳಲಾಗದ, ಕಿವಿಯಲ್ಲಿ ಕೇಳಲಾಗದ ಮತ್ತು ಬಾಯಲ್ಲಿ ಹೇಳಲಾಗದ ರೀತಿಯಲ್ಲಿ ಇಬ್ಬರು ಅರಣ್ಯ ಅಧಿಕಾರಿಗಳನ್ನು ಕೊಂದಿದ್ದಾರೆ. ಪ್ರಾಮಾಣಿಕವಾಗಿ ಅವರು ಕೆಲಸ ಮಾಡುತ್ತಾ ಇದ್ದ ತಪ್ಪಿಗೆ, ಅವರಿಗೆ ಬೆಂಕಿ ಹಚ್ಚಿ ಕೊಂದು ಹಾಕಿದ್ದಾರೆ. ಆ ವಿಷಯ ಏನಾಗಿದೆ ಎನ್ನುವುದನ್ನು ಫಾರೆಸ್ಟ್ ಇಲಾಖೆಯವರು ಈಚೆಗೆ ಬಿಡುವುದಿಲ್ಲ. ಆ ಅಧಿಕಾರಿಗಳನ್ನು ಕೊಲೆ ಮಾಡಿದವರು ಯಾರು ಎಂಬುದು ಗೊತ್ತಿದ್ದರೂ ಸಹ ಅವರನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಅರಣ್ಯ ಇಲಾಖೆಯ ಅಧಿಕಾರಿಗಳು, ಮತ್ತು ಪೋಲೀಸ್ ಆಫೀಸರು ಇಬ್ಬರೂ ಸೇರಿಕೊಂಡು ಒಂದು ದೊಡ್ಡ ಕಮರ್ಷಿಯಲ್ ವ್ಯಾಪಾರ ಮಾಡುತ್ತಿದ್ದಾರೆ. Commercialise ಮಾಡಿಕೊಂಡಿದ್ದಾರೆ. ಸರಿಯಾದ ಒಬ್ಬ ಆಫೀಸರು ನ್ಯಾಯವಾಗಿ, ಧರ್ಮ ರೀತಿಯಿಂದ ಕೆಲಸ ಮಾಡುತ್ತಿದ್ದರೆ ಅವನಿಗೆ ಇಂಥಾ ಶಿಕ್ಷೆ ಆಗಿದೆ. ಇಂಥಾ ಒಂದು ಕೇಸನ್ನು ನಮ್ಮ ಸರ್ಕಾರದವರು ಪತ್ತೆಮಾಡದೇ ಇರುವುದನ್ನು ನೋಡಿದರೆ ನಿಜವಾಗಿಯೂ ನನಗೆ ನಾಚಿಕೆಯಾಗುತ್ತದೆ. ನಿಜವಾಗಿಯೂ ಇದು ಸರಿಯಲ್ಲ. ಇದನ್ನು ಅವಷ್ಟು ಜಾಗ್ರತೆ ಪತ್ತೆ ಮಾಡುವುದಕ್ಕೆ ತಕ್ಕ ಪ್ರಯತ್ನ ಮಾಡಬೇಕು. ಕಾಡಿನಲ್ಲಿ ಕಳ್ಳತನ ಮಾಡಿ ಮರಗಳನ್ನು ಮುಚ್ಚಿಟ್ಟಿದ್ದ ದೊಡ್ಡ ಮನುಷ್ಯರು ಮತ್ತು ಇನ್‌ಫ್ಲು

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಯನ್ಸ್ ಇರತಕ್ಕವರು ಸಿಕ್ಕಿದ್ದರೆ ಅವರನ್ನು ಮಾತ್ರ ಟಿ.ಬಿ.ಯಲ್ಲಿಟ್ಟುಕೊಂಡು ಅವರ ಮರ್ಯಾದೆಯನ್ನು ಕಾಪಾಡಿ ಅವರನ್ನು ಬಿಟ್ಟುಬಿಡುತ್ತಿದ್ದಾರೆ. ಯಾರಾದರೂ ಬಡವರು ಸಿಕ್ಕಿದರೆ ಅವರನ್ನು ಹಿಡಿದುಕೊಂಡು ಅವರಿಂದ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ. ಇಂಥಾ ಅವ್ಯವಹಾರಗಳು ನಡೆಯುತ್ತಿವೆ. ಇದನ್ನು ಸರ್ಕಾರದವರು ಸರಿಯಾಗಿ ನೋಡಿಕೊಳ್ಳಬೇಕು. ಆ ಆಫೀಸರನ್ನು ಸುಟ್ಟ ಕೇಸು 24 ಘಂಟೆವಳಗೆ ಪತ್ತೆಮಾಡಿ ಅಪರಾಧಿಗಳನ್ನು ಕಂಡುಹಿಡಿಯದಿದ್ದರೆ, ಶುದ್ಧ ಅವಮಾನ. ಸರ್ಕಾರ ಹಳ್ಳಿಯವರ ಮತ್ತು ಬಡ ಆಫೀಸರುಗಳ ಪಾಲಿಗೆ ಇದ್ದೂ ಇಲ್ಲದಂತೆ ಆಗುತ್ತದೆ.

[Mr. CHAIRMAN (Sri B. P. KADAM) in the Chair]

ಇನ್ನು ಮೂರನೆಯದಾಗಿ, ಆಹಾರ ಮತ್ತು paddy levy (ಭತ್ತದಲೆವಿ) ಬಗ್ಗೆ ಹೇಳುವುದಾದರೆ, ಕ್ವಿಂಟಾಲಿಗೆ 5 ರೂಪಾಯಿಗಳಂತೆ ಪಗಡಿ ಬಿಕ್ಷವನ್ನು ಜಾಸ್ತಿ ಮಾಡಿದ್ದಾರೆ. ಇದರಿಂದ ರೈತರಿಗೆ ಬಹಳ ಉಪಕಾರ ಮಾಡಿದಂತಾಗಿದೆಯೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ರೀತಿ ಮಾಡಿರುವುದು ಯಾವ ಊರು ನ್ಯಾಯವೆಂದು ಕೇಳುತ್ತೇನೆ. ಹೋದಸಾರಿ ಹಿಂದಿನ ಮುಖ್ಯಮಂತ್ರಿಗಳು ಮಾರ್ಕೆಟ್ ರೇಟ್‌ನಲ್ಲಿ ರೈತರಿಂದ ಆಹಾರವನ್ನು ಕೊಳ್ಳುವುದಾಗಿ ಪ್ರಾಮಿಸ್ ಮಾಡಿದ್ದರು. ಅದು ಬಿಟ್ಟು ಹಾವು ಹೊಡೆದು ಹದ್ದಿಗೆ ಹಾಕಿದರು ಎಂಬಂತೆ ರೈತರಿಗೆ ಮಾರ್ಕೆಟ್ ರೇಟ್ ಕೊಡದೆ ಕ್ವಿಂಟಾಲ್‌ಗೆ 5 ರೂಪಾಯಿ ಹೆಚ್ಚಿಸಿರುವುದಾಗಿ ಹೇಳಿದ್ದಾರೆ. ರೈತನ ತಲೆ ಹೊಡೆದು ಬೇರೆಯವರಿಗೆ ಉಪಕಾರ ಮಾಡುವುದು ಸರಿಯಲ್ಲ. ರೈತರೇನು ಕಂದಾಯ ಕೊಡುವುದಿಲ್ಲವೇ, ವಾಟರ್ ರೇಟ್ ಕೊಡುವುದಿಲ್ಲವೇ, ಅವರಿಗೇನು ಸರ್ಕಾರದವರು ಫ್ರೀಯಾಗಿ ಗೊಬ್ಬರ, ಡೀಸಲ್ ಎಣ್ಣೆ, ಟ್ರೈರ್ ಕೊಡುತ್ತಾರೇಯೇ, ಅವರ ಮಕ್ಕಳಿಗೆ ಏನಾದರು ಸ್ಕೂಲ್ ಫೀಯನ್ನು ಮಾಫಿ ಮಾಡುತ್ತಾರೆಯೇ, ಆಸ್ಪತ್ರೆಗಳಲ್ಲಿ ಅವರಿಗೆ ಫ್ರೀಯಾಗಿ ಔಷಧವನ್ನು ಕೊಡುತ್ತಾರೆಯೇ, ರೈತರೇನಾದರು ಕೋರ್ಟಿಗೆ ಹೋದರೆ ಅವರ ಪರವಾಗಿ ವಾದಮಾಡಲು ಫ್ರೀಯಾಗಿ ಸರ್ಕಾರಿ ಲಾಯರನ್ನು ಒದಗಿಸುತ್ತಾರೆಯೇ ಎಂದರೆ ಏನೂ ಇಲ್ಲ. ಅವರು ಖರ್ಚು ಮಾಡುವುದನ್ನು ಮಾಡಲೇ ಬೇಕು. ಏತಕ್ಕೋಸ್ಕರ ಈ ರೈತರನ್ನು ನಿರರ್ಥಕವಾಗಿ ಹಿಂಸೆಗೆ ಒಳಪಡಿಸುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಇವರ ತಲೆ ಹೊಡೆದು ಬೇರೆಯವರನ್ನು ಸಾಕುವುದು ಸರಿಯಲ್ಲ. ನಾನು ಸಹ 154 ಕ್ವಿಂಟಾಲ್ ಬತ್ತವನ್ನು ಲೆವಿ ಕೊಟ್ಟಿದ್ದಕ್ಕೆ 7 ಕ್ವಿಂಟಾಲ್‌ಗೆ ಹಣ ಕೊಡುವುದಕ್ಕಾಗುವುದಿಲ್ಲ, 7 ಕ್ವಿಂಟಾಲ್‌ನಷ್ಟು ಅರೆವಾಸಿಯಾಗುತ್ತದೆಂದು ಹೇಳಿದರು. ಈ ರೀತಿ ರೈತರಿಂದ ಅನ್ಯಾಯವಾಗಿ ಲೆವಿಯನ್ನು ವಸೂಲು ಮಾಡಿ ಹೆಚ್ಚಿನ ಹಣವನ್ನು ಕಿಸೆಗೆ ತಮ್ಮ ಸೊಸೈಟಿಗಳ ಪ್ರೆಸಿಡೆಂಟರು ಬಿಡುತ್ತಿದ್ದಾರೆ. ನಂಜನಗೂಡ್ ಸೊಸೈಟಿಗೆ ಈ ಪ್ರಕಾರ 2 ಲಕ್ಷ ರೂಪಾಯಿ ಲಾಭ ಬಂದಿದೆಯೆಂದು ಹೇಳಿದ್ದಾರೆ. ಲಾಭದ ಹಣದಲ್ಲಿ ಪ್ರೆಸಿಡೆಂಟರು ಡೈರೆಕ್ಟರ್ ಎಲ್ಲಾ ತರಹದ ಸುಖ ಸಂತೋಷಪಡುವುದು ಜನಜನಿತವಾಗಿ ಗೊತ್ತಾಗಿದೆ. ಗುಂಡ್ಲುಪೇಟೆ ಸೊಸೈಟಿಯಲ್ಲಿ 195 ಕ್ವಿಂಟಾಲ್ ಜೋಳದ ಲೆಕ್ಕವನ್ನು ಮಾಫಿ ಮಾಡಿದ್ದಾರೆ. ಈ ಸೊಸೈಟಿಯಲ್ಲಿರುವ ಸೆಕ್ರೆಟರಿಯವರು ಬಹಳ ಹಣ ಮಾಡಿಕೊಂಡಿದ್ದಾರೆ, ಮನೆ ಕಟ್ಟಿ ಕೊಂಡಿದ್ದಾರೆ, ಹೆಂಡತಿ ಹೆಸರಿನಲ್ಲಿ 3–4 ಟ್ಯಾಕ್ಸಿ ಇಟ್ಟಿದ್ದಾರೆ. ಇಷ್ಟೆಲ್ಲಾ ಮಾಡಿಕೊಂಡಿದ್ದರೂ ಸಹ ಅವರನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡುವುದಕ್ಕೆ ಸರ್ಕಾರದವರಿಗೆ ಆಗುತ್ತಿಲ್ಲ. ಈ ಟ್ರಾನ್ಸ್‌ಫರ್ ಆಗಬೇಕೆಂದು ಹೇಳಿ ತಾಶೀಲ್ದಾರರು ಡಿ. ಓ. ಮೇಲೆ ಡಿ. ಓ. ಬರೆದಿದ್ದಾರೆ, ಇದಕ್ಕೆ ಲೆಕ್ಕವಿಲ್ಲ ಜಮವಿಲ್ಲ. ಸೊಸೈಟಿಗಳ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗ್ಡೆಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಸೊಸೈಟಿಗಳು ಬಿಳಿಯಾನೆಗಳಾಗಿವೆ, ಕೆಲವರಿಗೆ ಕಾಮಧೇನುವಾಗಿದೆ, ಇಂತಹ ಸೊಸೈಟಿಗಳನ್ನೇ ರದ್ದು ಮಾಡಬೇಕೆಂದು ಹೇಳಿದ್ದಾರೆ. ಅನ್ಯಾಯವಾಗುತ್ತಿದೆಯೆಂದು ಹೇಳಿದರೆ ಮುಖ್ಯಮಂತ್ರಿಗಳು ಬರೆದು ಕೊಡಿ, ಒಂದು ದಿನದಲ್ಲಿ ವಿಜಿಲೆನ್ಸ್ ಕಮಿಷನ್ ಕಳಿಸಿ ತನಿಖೆ ಮಾಡಿಸುತ್ತೇನೆ ಎಂದು ಹೇಳುತ್ತಾರೆ. ಈ ಗುಂಡ್ಲುಪೇಟೆ ಸೊಸೈಟಿಯ ಸೆಕ್ರೆಟರಿ ವಿಚಾರದಲ್ಲಿ ವಿಜಿಲೆನ್ಸ್ ಕಮಿಷನ್‌ಗೂ ಕಂಪ್ಲೈಂಟ್ ಹೋಗಿದೆಯೆಂದು ಕೇಳಿದ್ದೇನೆ. ಆದರೂ ಸಹ ಅವರು ವಿಚಾರಮಾಡಿಲ್ಲ. ಈ ರೀತಿ ಅನ್ಯಾಯವಾಗುತ್ತಿರುವುದನ್ನು ನೋಡಿದರೆ ವ್ಯಸನವಾಗುತ್ತದೆ.

ಇನ್ನು ಇರಿಗೇಷನ್ ವಿಚಾರದಲ್ಲಿ ಮಾತನಾಡಬೇಕೆಂದರೆ, ಇದು ಒಂದು ದೊಡ್ಡ ಕಥೆ. ನಮ್ಮ ತಾಲ್ಲೂಕ್ ಬಡ ತಾಲ್ಲೂಕ್. ಇರುವುದು 3–4 ಪ್ರಾಜೆಕ್ಟ್‌ಗಳು ನಳೂರು ಅಮಾನಿಕೆರೆ ಪ್ರಾಜೆಕ್ಟ್ committed work. ಶ್ರೀ ಚೆನ್ನಬಸಪ್ಪನವರ ಕಾಲದಿಂದಲೂ ಆಗುತ್ತಿಲ್ಲ 5.6 ಲಕ್ಷರೂ ಖರ್ಚು ಮಾಡಿ ನಿಲ್ಲಿಸಿಬಿಟ್ಟಿದ್ದಾರೆ. ಅದೇ ಮಂಗಳ ಪ್ರಾಜೆಕ್ಟ್ ಸರ್ಕಾರದಿಂದ ಮಂಜೂರಾಗಿದೆ. ಈ ಪ್ರಾಜೆಕ್ಟ್‌ನ್ನು

ತೆಗೆದುಕೊಳ್ಳುವ ಬಗ್ಗೆ ಹಿಂದಿನ ಬಡ್ಜೆಟ್‌ನಲ್ಲಿಯೂ ಸೇರಿಸಿರಲಿಲ್ಲ. ಅಂತಹ ಪ್ರಾಜೆಕ್ಟ್ ಈಗ ಇದ್ದಕಿದ್ದಂತೆ ಮಂಜೂರಾಗಿದೆ. ಈ ಪ್ರಾಜೆಕ್ಟ್‌ನಿಂದ ಒಬ್ಬರಿಗೇ 400 ಎಕರೆ ನೀರಾವರಿಯಾಗುತ್ತದೆ. ಅವರಿವರ ಹೆಸರಿನಲ್ಲಿ 500—600 ಎಕರೆ ನೀರಾವರಿ ಆಗುತ್ತೆ ಎಂದು ತಪ್ಪು ಲೆಕ್ಕ ಹೇಳಿ ಹೇಗೋ ಮಂಗಳ ಸ್ಯಾಂಕ್ಷನ್ ಮಾಡಿಕೊಂಡಿದ್ದಾರೆ. ಅದೇ 10 ಸಾವಿರ ಎಕರೆ ನೀರಾವರಿ ಆಗುವ ನಳೂರು ಪ್ರಾಜೆಕ್ಟ್ ಕಡೆ ನಿಗಾಯಿಲ್ಲ. ಆದ್ದರಿಂದ ಸರ್ಕಾರದವರು ಇನ್ನು ಮುಂದೆಯಾದರೂ ಸಹ ಸಾರ್ವಜನಿಕ ರೀತಿಯಲ್ಲಿ ಎಲ್ಲರಿಗೂ ಅನುಕೂಲವಾಗುವ ಪ್ರಾಜೆಕ್ಟ್‌ಗಳಿಗೆ ಮೊದಲು ಪ್ರಾಶಸ್ತ್ಯ ಕೊಡಬೇಕೇ ಹೊರತು individual interest ಗೆ ಪ್ರಾಮುಖ್ಯತೆ ಕೊಡುವುದು ಸರಿಯಲ್ಲ.

ಇನ್ನು ಯುವಜನ ಕಲ್ಯಾಣದ ಬಗ್ಗೆ ಹೊಸದೊಂದು ವಿಭಾಗವನ್ನು ತೆಗೆದಿದ್ದಾರೆ. ಅದಕ್ಕೆ ಶ್ರೀ ರಾಮಕೃಷ್ಣಹೆಗ್ಡೆಯವರೇ ಮಂತ್ರಿಗಳಾಗಿದ್ದಾರೆ. ಈಗಿನ ಕಾಲದಲ್ಲಿ ಯುವಕರ ಕಷ್ಟ ಏನೆಂಬುದು ಅವರಿಗೇ ಗೊತ್ತಿದೆ. ಸ್ವಾತಂತ್ರ್ಯ ಬಂದಾಗ ಹುಟ್ಟಿದವರು ಇವತ್ತಿನದಿವಸ ಯುವಕರಾಗಿದ್ದಾರೆ. ಇವರಿಗೆ ಒಳ್ಳೆಯ ಊಟ ಇವತ್ತು ಸಿಗುತ್ತಿಲ್ಲ, ಕೆಲಸ ಮಾಡಬೇಕೆಂದರೆ ಕೆಲಸ ಸಿಗುತ್ತಿಲ್ಲ, ಕಾಲೇಜ್‌ಗಳಲ್ಲಿ ಸೀಟ್ ಸಿಗುತ್ತಿಲ್ಲ. ಅಂದಮೇಲೆ ಇವರಿಗೆ ಒಳ್ಳೆಯದನ್ನು ನೋಡಿ ಎಂದರೆ ಏನನ್ನು ನೋಡುತ್ತಾರೆ. ಮೈಸೂರಿನಲ್ಲಿ ಇನ್ಸ್‌ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್‌ನಲ್ಲಿ ನಾಲ್ಕು ಸೀಟ್‌ಗಳನ್ನು ಮೈಸೂರಿನವರಿಗೆ ಕೊಡಬೇಕೆಂದು ಇದೆ. ಆದರೆ ಮೈಸೂರಿನವರು ಯಾರು ಬಂದರೂ ಸಹ ಅಲ್ಲಿ ಸೀಟನ್ನು ಕೊಡಲಿಲ್ಲ. ಸರ್ಕಾರ ಸಹಾಯ ಮಾಡಲು ಈ ವಿಚಾರದಲ್ಲಿ ಕಾಗದಪತ್ರಗಳನ್ನು ಅವರು ಇವರಿಗೆ, ಇವರು ಅವರಿಗೆ ಬರೆದರೇ ಹೊರತು ಮೈಸೂರಿನವರಿಗೆ ಮಾತ್ರ ಒಬ್ಬರಿಗೂ ಸೀಟ್ ಸಿಗಲಿಲ್ಲ. ಯಾರಿಗಾದರೂ ಸೀಟ್ ಸಿಕ್ಕಿದ್ದರೆ ಓದುಮುಗಿದ ಕೂಡಲೆ ಒಂದೂವರೇ ಸಾವಿರ ರೂಪಾಯಿಗಳ ಸಂಬಳ ಸಿಗುತ್ತಿತ್ತು. ಸುಮ್ಮನೆ ನಾಲ್ಕು ಸೀಟ್‌ಗಳು ವ್ಯರ್ಥವಾದವು. ಹಳ್ಳಿಯವರು ಒಂದು ಗಾದೆ ಹೇಳುತ್ತಾರೆ, ಏನೆಂದರೆ ಹಿಂತಿರುಗಿ ನೋಡಿ ಮುಂದಲ ಹೆಜ್ಜೆಯನ್ನು ಭದ್ರವಾಗಿ ಇಡು ಎಂದು. ಅದೇ ರೀತಿ ನಮ್ಮ ಸರ್ಕಾರದವರು ಹಿಂದಿನದನ್ನು ಜ್ಞಾಪಿಸಿಕೊಂಡು ಮುಂದೆ ನಡೆಯುವುದಾದರೆ ನಾವು ಶಾಶ್ವತವಾಗಿ ಇದೇ ಜಾಗದಲ್ಲಿ ಇರುತ್ತೇವೆ ಎಂದು ಹೇಳುವುದರಲ್ಲಿ ಯಾವ ಅಭ್ಯಂತರವೂ ಇಲ್ಲವೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್ (ಸಿರ್ಸಿ).—ಸನ್ಮಾನ್ಯ ಸಭಾಪತಿಗಳೇ, ಮೈಸೂರು ರಾಜ್ಯದ ರಾಜ್ಯಪಾಲರು ಈ ಅಧಿವೇಶನದಲ್ಲಿ ಮಾಡಿರತಕ್ಕಂಥ ಭಾಷಣದ ಬಗ್ಗೆ ಇರತಕ್ಕಂಥ ಅಭಿನಂದನಾ ನಿರ್ಣಯದ ಮೇಲೆ ಮೂರು ದಿವಸಗಳಿಂದ ಚರ್ಚೆ ನಡೆದಿದೆ. ಇವತ್ತಿನ ದಿವಸ ಪರವಾಗಿಯೂ ಮತ್ತು ವಿರೋಧವಾಗಿಯೂ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಕಾಂಗ್ರೆಸ್ ಸರ್ಕಾರ ಕಳೆದ 20 ವರ್ಷಗಳ ಆಡಳಿತದಲ್ಲಿ ಸಮಾಜವಾದಿ ಸಮಾಜವನ್ನು ರಚಿಸುತ್ತೇವೆಂದು ಅನ್ನತಕ್ಕಂಥ ಅಭಯವನ್ನು ಜನರಿಗೆ ನೀಡಿಕೊಂಡು ಬಂದಿದ್ದಾರೆಯೇ ವಿನ ಕಾರ್ಯದಲ್ಲಿ ಆ ರೀತಿ ಏನಾದರೂ ಮಾಡಿದ್ದಾರೆಯೇ ಎಂದರೆ, ಅವರು ತಮ್ಮ ಕರ್ತವ್ಯದಲ್ಲಿ ಲೋಪಮಾಡಿದ್ದಾರೆಂದು ಹೇಳಬಹುದು. ಏನು ಅವರು ಒಂದು ಅಭಯವನ್ನು ಕೊಟ್ಟಿದ್ದರೋ ಮತ್ತು ಜನತೆಯ ಮುಂದೆ ಯಾವ ಗುರಿಯನ್ನು ಇಟ್ಟುಕೊಂಡು ಹೇಳುತ್ತಿದ್ದರೋ ಅದಕ್ಕೆ ವಿರೋಧವಾದ ದಿಕ್ಕಿನಲ್ಲಿ ಆಡಳಿತ ನಡೆಸಿಕೊಂಡು ಹೋಗುತ್ತಿದ್ದಾರೆ. ರಾಜ್ಯಪಾಲರು ಯಾವ ನೀತಿಗಳನ್ನೂ ಭಾಷಣದಲ್ಲಿ ಅಳವಡಿಸದೆ ಬರೀ ಇಲಾಖೆಗಳ ಆಡಳಿತದ ಒಂದು ರಿಪೋರ್ಟ್ ಸಿದ್ಧಮಾಡಿ ಅದನ್ನು ರಾಜ್ಯಪಾಲರ ಮೂಲಕ ಓದಿಸಿ ಈ ಸಭೆಗೆ ಅನ್ಯಾಯವನ್ನು ಮಾಡಿದ್ದಾರೆ. ಮುಖ್ಯವಾಗಿ ಬಡವರ ಕೂಲಿಕಾರರ ಹಾಗೂ ನಿರ್ಗತಿಕರ ಸಮಸ್ಯೆಗಳನ್ನು ಬಿಡಿಸುವ ಕಾರ್ಯದಲ್ಲಿ ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಆದುದರಿಂದ ಮಾನ್ಯ ಸದಸ್ಯಣಿ ಶ್ರೀಮತಿ ನಾಗರತ್ನಮ್ಮನವರು ಈಗ ತಾನೇ ಹೇಳಿದಂತಹ ಮಾತುಗಳನ್ನು ನಾವು ಪುಷ್ಟೀಕರಿಸುವುದಕ್ಕೆ ಆಗುವುದಿಲ್ಲ.

ಮೊದಲನೆಯದಾಗಿ ಮೈಸೂರು ರಾಜ್ಯದ ಗೇಣಿ ಕಾನೂನು ಬಗ್ಗೆ ಹೇಳಬೇಕಾದರೆ ಸರಕಾರದವರು ಇಂತಹ ಒಂದು ಗೇಣಿ ಕಾನೂನು ತಂದು ಸಾಮಾನ್ಯನಾದ ಬಡ ರೈತನಿಗೆ ತುಂಬಾ ಅನ್ಯಾಯ ಮಾಡಿದ್ದಾರೆ. ನಮ್ಮ ಮುಂಬಯಿ ಕರ್ನಾಟಕಕ್ಕೆ ಹಿಂದೆ ಸೇರಿದ ಉತ್ತರ ಕನ್ನಡ ಜಿಲ್ಲೆಯನ್ನು ತೆಗೆದುಕೊಂಡರೆ ಒಂದು ಗುಂಟೆ ಜಮೀನಿಗೆ ಐವತ್ತು ಪೈಸೆ ಗೇಣಿ ಕೊಡಬೇಕೆಂದು ಖಾಯಿದೆ ಇತ್ತು. ಇಂದು ಅಂದರೆ ಎಕರೆ ಭೂಮಿಗೆ 20 ರೂಪಾಯಿ ಇತ್ತು. ಈಗ ಎಕರೆಗೆ 1 ಕ್ಕೆ 100 ರಿಂದ 120 ರೂಪಾಯಿಗಳು ಗೇಣಿ ಕೊಡಬೇಕೆಂದು ಕಾಂಗ್ರೆಸ್ಸು ಸರಕಾರದವರು ಈಗ ಕಾನೂನು ಮಾಡಿದ್ದಾರೆ. ರೈತರ ಬಗ್ಗೆ ಪ್ಲಾನಿಂಗು ಕಮಿಷನ್ನಿನವರು ರಾಜ್ಯ ಸರಕಾರಕ್ಕೆ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಸರಿಯಾದ ಒಂದು ಪ್ರೋಗ್ರೆಸೀವ್ ಲೆಜಿಸ್ಲೇಷನ್ ಮಾಡಬೇಕು ಎಂದು ಡೈರಕ್ಷನ್ ಕೊಟ್ಟಿದ್ದರೂ ಸಹ ಅದನ್ನು ಈ ರಾಜ್ಯ ಸರಕಾರ ಮಾಡದೇ ರೈತನಿಗೆ ಇಂತಹ ಒಂದು ಗೇಣಿ ಕಾನೂನು ತಂದು ಇಲ್ಲದ ತೊಂದರೆಗಳನ್ನು ಕೊಟ್ಟಿದ್ದಾರೆ. ಈ ಕಾಯಿದೆಯಲ್ಲಿ ಯಾವ ಪ್ರಗತಿಪರವಾದ ತತ್ವವೂ ಇಲ್ಲ. ಇದಕ್ಕಾಗಿ ನಾನು ಸರಕಾರದಲ್ಲಿ ವಿನಯದಿಂದ ಮನವಿ ಮಾಡಿಕೊಳ್ಳುವುದು ಏನೆಂದರೆ ನಮ್ಮ ಉತ್ತರ ಕನ್ನಡ ಜಿಲ್ಲೆಯ ಪ್ರಜಾಸಮಾಜವಾದಿ ಪಕ್ಷದವರು ಈ ಅನ್ಯಾಯದ ಬಗ್ಗೆ ಒಂದು ದೊಡ್ಡ ಚಳುವಳಿ ಮಾಡುತ್ತಿದ್ದೇವೆ. ಇಂತಹ ಅನ್ಯಾಯಗಳನ್ನು ಸರಿಪಡಿಸಬೇಕೆಂದು ಸರಕಾರಕ್ಕೆ ಈಗಾಗಲೇ ಮನವಿಗಳನ್ನೂ ಕಳುಹಿಸಿಕೊಟ್ಟಿದ್ದೇವೆ. ಆದುದರಿಂದ ಸರಕಾರ ಇದರ ಬಗ್ಗೆ ಸಾಮಾನ್ಯ ರೈತನಿಗೆ ಯಾವ ವಿಧವಾದ ಅನ್ಯಾಯಾಗಳೂ ಆಗದ ರೀತಿಯಲ್ಲಿ ಈ ಕಾನೂನನ್ನ ಬದಲಾವಣೆ ಮಾಡಬೇಕು ಮತ್ತು ಕಾನೂನು ಬಡವನ ರಕ್ಷಣೆಗೆ ಸುಲಲಿತವಾಗಿ ಇರಬೇಕು ಎಂದು ಹೇಳುತ್ತಿದ್ದೇನೆ. ಅಲ್ಲದೆ ಆಹಾರಕ್ಕಾಗಿ ಈ ಸರ್ಕಾರ ಅಮೆರಿಕಾ ದೇಶದ ಮುಂದೆ ಭಿಕ್ಷಾ ಪಾತ್ರೆ ಹಿಡಿದುಕೊಂಡು ಇನ್ನುಮುಂದೆ ಹೋಗಬಾರದು ನಮ್ಮ ದೇಶ ಸ್ವಾವಲಂಬನೆಯಾಗುವುದಕ್ಕೆ ಅವಕಾಶ ಮಾಡಿಕೊಡಲು ಗೇಣಿ ಕಾನೂನನ್ನು ಸುವ್ಯವಸ್ಥೆಯಿಂದ ಬದಲಾವಣೆ ಮಾಡಬೇಕು ಎಂದು ಇಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಸಿರಸಿ ಕ್ಷೇತ್ರದಲ್ಲಿ ಸುಮಾರು 20-25 ವರ್ಷಗಳಿಂದಲೂ ಬಡವರಾಗಿರತಕ್ಕವರು, ನಿರ್ಗತಿಕರಾಗಿರತಕ್ಕವರು, ಕೂಲಿ ಮಾಡುವ ಬಹು ಸಣ್ಣ ರೈತರು ಅರಣ್ಯ ಪ್ರದೇಶಗಳಲ್ಲಿ ಕೆಲವು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ನಮ್ಮ ರಾಜ್ಯದಲ್ಲಿರುವ ಒಂದು ಆರ್ಡರಿನ ಪ್ರಕಾರ 1965ಕ್ಕೆ ಮುಂಚೆ ಯಾರಾದರೂ ಅಕ್ರಮವಾಗಿ ಜಮೀನುಗಳನ್ನು ಹಾಗೂ ಮನೆಗಳನ್ನು ಮಾಡಿಕೊಂಡಿದ್ದರೆ ಅಂತಹ ಮನೆಗಳನ್ನು ಅವರಿಗೇ ಖಾಯಂ ಆಗಿ ಕೊಡಬೇಕೆಂದು ನಿಯಮ ಇದೆ. ಹಾಗಿದ್ದರೂ ಕೂಡ ನಮ್ಮ ಕ್ಷೇತ್ರದಲ್ಲಿ ಅರಣ್ಯ ಪ್ರದೇಶದಲ್ಲಿ ಸುಮಾರು 25 ವರ್ಷಗಳಿಂದಲೂ ಮನೆಕಟ್ಟಿಕೊಂಡು ಬಡ ರೈತರು ವಾಸ ಮಾಡುತ್ತಿದ್ದರೂ ಅವರ ಮನೆಗಳನ್ನು ಅವರ ಹೆಸರಿಗೇ ಖಾತೆ ಮಾಡಿಸಿಕೊಡಬೇಕೆಂದು ಅನೇಕ ರೀತಿ ಕೇಳಿಕೊಳ್ಳುತ್ತಿದ್ದರೂ ಇನ್ನೂ ಖಾಯಂ ಮಾಡಿಲ್ಲ. ಈಗಲಾದರೂ ಇವರಿಗೆ ಖಾತೆ ಮಾಡಿಸಿಕೊಡಬೇಕೆಂದು ಇಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದೂ ಅಲ್ಲದೆ ಸರ್ವೆ ನಂಬರು 268-ಎ ಇದು ಫಾರೆಸ್ಟು ಲ್ಯಾಂಡು. ಇಲ್ಲಿಯ ರೈತರು ಬಹಳ ಬಡವರು. ಎರಡು ಹೊತ್ತು ಕೂಡ ಅನ್ನ ಸಿಗದೇ ಇರುವಂತಹವರು. ಇಂತಹವರು ಈ ಭೂಮಿಯಲ್ಲಿ ಹೇಗೋ ಇದ್ದುಕೊಂಡು ವಾಸ ಮಾಡಿಕೊಂಡು ಬರುತ್ತಿದ್ದಾರೆ ಇಲ್ಲಿ ಗಿಡ ಮರಗಳನ್ನು ಹತ್ತಾರು ವರ್ಷಗಳಿಂದ ಬೆಳೆದಿದ್ದಾರೆ. ಬಾಳೆ ಗಿಡಗಳಿವೆ, ಮಾವಿನ ಮರಗಳಿವೆ ಇನ್ನೂ ಕೆಲವು ಗಿಡಮರಗಳನ್ನು ಬೆಳೆಸಿದ್ದಾರೆ. ಇಂತಹ ಭೂಮಿಯನ್ನು ಯಾರೋ ಪುಡಾರಿಗಳ ಪ್ರಭಾವಕ್ಕೆ ಬಿದ್ದ ಈ ಸರ್ಕಾರ ಇವರ ಮೇಲೆ ''ಎವಿಕ್ಷನ್'' ಆರ್ಡರು ತಂದು ಇವರ ಮೇಲೆ ಕ್ರಮ ಜರುಗಿಸಬೇಕು ಎಂದು ಡೆಪ್ಯೂಟಿ ಕಮಿಷನರಿಗೆ ಸೂಚನೆ ಇತ್ತಿದ್ದಾರೆ. ಇಲ್ಲಿರುವ ಶಿರಸಿ ತಹಶೀಲುದಾರರು ಇವರ ಮನೆಗಳನ್ನು ಒಡೆಸುವುದಕ್ಕೆ ಹೊರಟಿದ್ದಾರೆ. ಇದರ ಬಗ್ಗೆ ನಾನು ಆಗಲೇ ರೆವೆನ್ಯೂ ಮಂತ್ರಿಗಳಿಗೂ ದೂರು ಕೂಡ ಬರಿದಿದ್ದೇನೆ.

Mr. CHAIRMAN.—The hon'ble Member would please note that this is an occasion only to discuss policies and that too, broad policies ; this is not an occasion to discuss minor details. Therefore, he may confine his remarks to broad policies only.

Sri M. H. JAYAPRAKASH NARAYAN.—Sir, they have not taken any action to establish a socialistic society, which is a broad policy of this Government. ಅರಣ್ಯ ಭೂಮಿಯನ್ನು ಯಾರಿಗೂ ಕೊಡುವುದಿಲ್ಲ ಎಂದು ಹೇಳುತ್ತಿದ್ದವರು ಇಂದು ಪ್ರಭಾವಕ್ಕೆ ಒಳಗಾಗಿ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಲಕ್ಷಾಂತರ ಎಕರೆಯಷ್ಟು ಇರುವ ಅರಣ್ಯ ಭೂಮಿಯನ್ನು ವ್ಯವಸಾಯಕ್ಕಾಗಿ ಇನ್ನು ಕೊಟ್ಟಿಲ್ಲ. ಹಿಂದೆ ಇದ್ದ ಅರಣ್ಯ ಖಾತೆಯ ಮಂತ್ರಿಗಳು ಹಾಗೂ ಹಣಕಾಸಿನ ಸಚಿವರು ಇದರ ಬಗ್ಗೆ ಅರಣ್ಯ ಭೂಮಿ ಕೊಡುತ್ತೇವೆಂದು ಹೇಳಿದರು. ಇದಕ್ಕಾಗಿ ಒಂದು ಹೈ ಪವರು ಕಮಿಟಿ ಎಂದು ಮಾಡಿದ್ದಾರೆ. ಇದರಲ್ಲಿ ಡೆಪ್ಯುಟಿ ಕಮಿಷನರು ಅಧ್ಯಕ್ಷರಾಗಿದ್ದಾರೆ. ಹಾಗಿದ್ದರೂ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ 1 ಲಕ್ಷ ಎಕರೆಯಷ್ಟು ಭೂಮಿಯನ್ನು ಬಿಡುಗಡೆಗೆ ಜನ ಒತ್ತಾಯಮಾಡುತ್ತಿದ್ದರೂ ಅದನ್ನು ಬಡವರಿಗೆ ಹಾಗೂ ಕೂಲಿಗಾರರಿಗೆ ಕೊಡಲಿಲ್ಲ. ತಮಗೆ ಬೇಕಾದವರಿಗೆ ಹಾಗೂ ಕಾಂಗ್ರೆಸ್ಸು ಪಕ್ಷದವರಿಗೆ ಅಂದರೆ

ಶ್ರೀ ಆರ್. ಜೆ. ಹೆಗ್ಗಡೆ ಎನ್ನುವವರಿಗೆ ಸುಮಾರು ಮೂವ್ವತ್ತು ಎಕರೆ ಜಮೀನನ್ನು ಕೊಟ್ಟಿದ್ದಾರೆ. ಬಡವರ ಪರಿಸ್ಥಿತಿಗೆ ಇಲ್ಲಿ ಅವರು ಗಮನ ಕೊಡಲಿಲ್ಲ. ಇಲ್ಲಿರುವ ನಿರ್ಗತಿಕರ ಸ್ಥಿತಿ ಏನು ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕೆ ಹೋಗಲಿಲ್ಲ. ಆದುದರಿಂದ ಸರಕಾರದವರು ಇಲ್ಲಿರುವ ಬಡವರ ಹಾಗೂ ನಿರ್ಗತಿಕರ ಬಗ್ಗೆ ಪರಿಶೀಲನೆ ಮಾಡಿ ಇವರೆಲ್ಲರಿಗೂ ಸೂಕ್ತವಾದ ರೀತಿ ಜಮೀನನ್ನು ಮಾಡಿಕೊಡಬೇಕು ಎಂದು ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮೀ, ಇನ್ನೊಂದು ಅಂಶವನ್ನು ಇಲ್ಲಿ ಹೇಳುತ್ತೇನೆ. ಸಿರಸಿಯಲ್ಲಿ ಸರಕಾರ ಇತ್ತೆ ಎನ್ನುವುದರ ಬಗ್ಗೆ ಇಲ್ಲಿ ಹೇಳಬೇಕಾಗಿದೆ. 6-12-1968 ಮತ್ತು 7-12-1968ರಂದು ಸಿರಸಿಯಲ್ಲಿ ನಡೆದ ಕೊಲೆ ಹಾಗೂ ದರೋಡೆ ಇವುಗಳನ್ನು ನೋಡಿದರೆ ಇಲ್ಲಿ ಪೋಲೀಸು ಅಧಿಕಾರಿಗಳು ಇದ್ದರೇ ಎನ್ನುವುದು ಅನುಮಾನವಾಗಿದೆ. ಲಕ್ಷಾಂತರ ರೂಪಾಯಿಗಳಷ್ಟು ದರೋಡೆಯಾಗಲು ಕಾರಣವೇನು ಎನ್ನುವುದನ್ನು ಇದುವರೆಗೂ ಯಾರೂ ಪರಿಶೀಲನೆ ಮಾಡಿದಂತೆ ಕಾಣಲಿಲ್ಲ. ಇಲ್ಲಿರುವ ಪೋಲೀಸು ಸಿಬ್ಬಂದಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದು ಇದರಿಂದ ಕಂಡುಬರುತ್ತಿದೆ. ಸರಕಾರ ಈ ಕೂಡಲೇ ಇದರ ಬಗ್ಗೆ ವಿಚಾರ ಮಾಡಿ ಅನ್ಯಾಯವಾಗಿರುವ ಜನಕ್ಕೆ ಸರಿಯಾದ ರಕ್ಷಣೆ ಕೊಡಬೇಕು ಮತ್ತು ಇಲ್ಲಿರುವ ಪೋಲೀಸು ಸಬ್‌ಇನ್‌ಸ್ಪೆಕ್ಟರನ್ನು ಕೂಡಲೇ ಬೇರೆ ಕಡೆಗೆ ವರ್ಗ ಮಾಡಬೇಕು. ಇಲ್ಲಿರುವ ಈ ಇನ್‌ಸ್ಪೆಕ್ಟರವರಿಂದ ಇಲ್ಲಿ ಸೂಳೆಗಾರಿಕೆ, ದರೋಡೆ ಇತ್ಯಾದಿ ಅನೇಕ ಅನ್ಯಾಯ ಕೆಲಸಗಳಿಗೆ ಉತ್ತೇಜನವಿತ್ತಿದ್ದಾರೆ ಲಂಚರುಷುವತ್ತುಗಳು ಇಲ್ಲಿ ಇವರಿಂದ ಜಾಸ್ತಿಯಾಗುತ್ತ ಬರುತ್ತಿವೆ. ಇಂತಹವರನ್ನು ಬೇರೆ ಕಡೆಗೆ ವರ್ಗ ಮಾಡಿ ಒಳ್ಳೆಯ ದಕ್ಷರಾದ ಪೋಲೀಸ್ ಅಧಿಕಾರಿಗಳನ್ನು ಇಲ್ಲಿಗೆ ನೇಮಕ ಮಾಡಿ ಜನಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ಕೇಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ಲೆವಿ ಶೇಖರಣೆ ಕಾರ್ಯದ ಬಗ್ಗೆ ನಮ್ಮ ಸರಕಾರ ಕಾನೂನು ಮಾಡಿದೆ. ಲೆವಿ ವಸೂಲಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾದ ಅಂಕಿ ಅಂಶಗಳ ಶೇಖರಣೆ ಇಲ್ಲ. ಇವರು ಮಾಡಿರುವ ಪ್ರೊಕ್ಯೂರುಮೆಂಟು ಆರ್ಡರಿನ ಪ್ರಕಾರ ಒಂದು ಎಕರೆ ಜಮೀನಿಗೆ ಮಾಫಿ ಕೊಡಬೇಕೆಂದು ಇದೆ. ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಎಕರೆಗಿಂತ ಜಾಸ್ತಿ ಇರುವವರು ಎಷ್ಟು ಇದ್ದಾರೆ, ಒಂದು ಎಕರೆಗೆ ಕಡಮೆ ಇರುವವರು ಎಷ್ಟು ಇದ್ದಾರೆ ಎನ್ನುವವರ ಅಂಕೆ ಸಂಖ್ಯೆಗಳೊಂದನ್ನೂ ತಯಾರು ಮಾಡಿಲ್ಲ. ಇದರಿಂದ ಯಾವ ರೀತಿಯಾದ ಅಂಕೆ ಸಂಖ್ಯೆಗಳೂ ದೊರೆತ್ತಿಲ್ಲ. ಬಡ ರೈತರಿಗೆ ಇದರಿಂದ ಬಹಳ ಕಷ್ಟಗಳಾಗುತ್ತವೆ. ಸರಕಾರ ತನ್ನ ನೀತಿಯನ್ನು ಸರಿಯಾಗಿ ಪಾಲಿಸಿಕೊಂಡು ಬರುತ್ತಿಲ್ಲ. ಮತ್ತು ಬಡವರಾಗಿರುವ ರೈತರಿಗೆ ಅಂದರೆ ಐದು ಎಕರೆಗಳಷ್ಟು ಜಮೀನಿನವರಿಗೆ ಲೆವಿಯಿಂದ ವಿನಾಯಿತಿ ಕೊಡಬೇಕು ಮತ್ತು ಇಂತಹ ರಿಯಾಯಿತಿಗಳನ್ನು ಕೂಡಲೇ ಕೊಟ್ಟು ಸಹಾಯ ಮಾಡಬೇಕೆಂದು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮಹಾತ್ಮಾ ಗಾಂಧೀಯವರ ಪೋಟೋ ನಮ್ಮ ಮುಂದೆ ಇಲ್ಲಿ ದೊಡ್ಡದಾಗಿ ಇದೆ. ಅದೂ ಅಲ್ಲದೆ ಇತರ ಕಾಂಗ್ರೆಸ್ಸು ಮುಖಂಡರುಗಳ ಪೋಟೋಗಳು ಇವೆ. ಮಹಾತ್ಮಾ ಗಾಂಧೀಜಿಯವರ ತತ್ವವನ್ನು ಏನಾದರೂ ನಿಮ್ಮ ಜೀವನದಲ್ಲಿ ನೀವು ಅಳವಡಿಸಿಕೊಂಡಿದ್ದೀರಾ? ಅಸ್ಪೃಶ್ಯತೆಯನ್ನು ಏನಾದರೂ ರಾಜ್ಯದಲ್ಲಿ ಅಳಿಸಿದ್ದೀರಾ? ಈ ಬಾಬಿಗೆ ಕೇವಲ 2 ಲಕ್ಷ ರೂಪಾಯಿಗಳನ್ನು ಕೊಟ್ಟು, ಗಾಂಧೀಜಿಯವರ ಹೆಸರಿನಲ್ಲಿ ಮಾಂಸದ ಅಂಗಡಿಗಳನ್ನು ತೆರೆದಿದ್ದೀರಿ. ಗಾಂಧೀಜಿಯವರ ತತ್ವವನ್ನು ಅನುಷ್ಠಾನಕ್ಕೆ ತಂದಿಲ್ಲ. ಸಮಾಜವಾದಿ ಸಮಾಜ ಸ್ಥಾಪನೆ ಮಾಡುತ್ತಿಲ್ಲ. ಬಡವರ ಉದ್ಧಾರವನ್ನು ಮಾಡಿಲ್ಲ. ಪಾನನಿರೋಧವನ್ನು ಜಾರಿಗೆ ತಂದು ಹರಿಜನರ ಕೇರಿಗಳ ಮುಂದೆ ಅಂಗಡಿಗಳನ್ನು ಇಟ್ಟಿದ್ದೀರಿ. ಬಂಡವಾಳಶಾಹಿಗಳನ್ನು ಬಂಡವಾಳಸ್ಥರನ್ನಾಗಿ ಮಾಡುತ್ತಿದ್ದೀರಿ. ಉಳುವವನಿಗೆ ಭೂಮಿ, ದುಡಿಯುವವನಿಗೆ ಕೆಲಸ ಎನ್ನುವುದು ಇಲ್ಲ. ಮಹಾತ್ಮಾ ಗಾಂಧಿಯವರ ಹೆಸರನ್ನು ಹೇಳತಕ್ಕಂಥವರು ಅವರ ತತ್ವ ಅನುಷ್ಠಾನಕ್ಕೆ ತರಲು ಯಾರೂ ಪ್ರಯತ್ನ ಮಾಡಿಲ್ಲ.

3-30 P.M.

ಇನ್ನು ಹರಿಜನರ ಸಮಾಜ ಕಲ್ಯಾಣದ ಬಗ್ಗೆ ಹೇಳುವುದಾದರೆ ನನ್ನ ಒಂದು ಪ್ರಶ್ನೆಗೆ ಉತ್ತರವಾಗಿ ಕೊಟ್ಟಿರುವ ಒಂದು ಪಟ್ಟಿಯನ್ನು ಸಭೆ ಮುಂದೆ ಇಡುತ್ತೇನೆ. ಅದು ಸ್ಟಾರ್ಡ್ ಕೊಶ್ಚನ್ ಅದರಲ್ಲಿ 1, 2, 3ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ದುಡ್ಡು ಕೊಟ್ಟಿದ್ದಾರೆ, ಎಷ್ಟು ದುಡ್ಡು

(ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್)

ಖರ್ಚಾಗಿದೆ, ಎಷ್ಟು ಲ್ಯಾಪ್ಸ್ ಆಗಿದೆ. ಎಷ್ಟರಮಟ್ಟಿಗೆ ಪ್ರಗತಿ ಆಗಿದೆ ಎನ್ನುವ ವಿವರಗಳಿವೆ. ಅವು ಈ ರೀತಿ ಇದೆ :

ಇಡೀ ರಾಜ್ಯಕ್ಕೆ ಯೋಜನೆಗಳಲ್ಲಿ ಒದಗಿಸಿದ ಹಣ.	ರಾಜ್ಯದ ಯೋಜನೆ (ಲಕ್ಷಗಳಲ್ಲಿ)		ಕೇಂದ್ರದಿಂದ ರೂಪಿತವಾದ ಯೋಜನೆಗಳು (ಲಕ್ಷಗಳಲ್ಲಿ)
	ಯೋಜನೆಗಳು	ರೂಪಾಯಿ	ರೂಪಾಯಿ
1 ರಾಜ್ಯ ಸರ್ಕಾರಕ್ಕೆ ಒಂದು, ಎರಡು ಮತ್ತು ಮೂರನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ನಿಗದಿ ಮಾಡಿದ ಹಣ.	1 ನೇ ಪ.ವಾ.ಯೋ.ಯಲ್ಲಿ	4,799-00	
	2 ನೇ ಪ.ವಾ.ಯೋ.ಯಲ್ಲಿ	14,513-00	
	3 ನೇ ಪ.ವಾ.ಯೋ.ಯಲ್ಲಿ	25,000-00	
2 ನಿಗದಿ ಮಾಡಿದ್ದ ಹಣದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳಿಗೆ ಒದಗಿಸಿದ ಹಣ.	1 ನೇ ಪ.ವಾ.ಯೋ.ಯಲ್ಲಿ	137-890	ಇಲ್ಲ
	2 ನೇ ಪ.ವಾ.ಯೋ.ಯಲ್ಲಿ	304-686	100-925
	3 ನೇ ಪ.ವಾ.ಯೋ.ಯಲ್ಲಿ	339-000	46-13
ಖರ್ಚು ಮಾಡಲ್ಪಟ್ಟ ಹಣ.			
3 ಈ ರೀತಿ ಒದಗಿಸಿದ ಹಣದಲ್ಲಿ ಖರ್ಚು ಮಾಡಲ್ಪಟ್ಟ ಹಣ ಮತ್ತು ಖರ್ಚು ಮಾಡದೆ ಲ್ಯಾಪ್ಸ್ ಮಾಡಲ್ಪಟ್ಟ ಹಣ.	1 ನೇ ಪ.ವಾ.ಯೋ.ಯಲ್ಲಿ	100-67	ಇಲ್ಲ
	2 ನೇ ಪ.ವಾ.ಯೋ.ಯಲ್ಲಿ	290-72	67-53
	3 ನೇ ಪ.ವಾ.ಯೋ.ಯಲ್ಲಿ	301-98	36-615
ಲ್ಯಾಪ್ಸ್ ಮಾಡಲ್ಪಟ್ಟ ಹಣ.			
	1 ನೇ ಪ.ವಾ.ಯೋ.ಯಲ್ಲಿ	37-000	ಇಲ್ಲ
	2 ನೇ ಪ.ವಾ.ಯೋ.ಯಲ್ಲಿ	13-966	33-395
	3 ನೇ ಪ.ವಾ.ಯೋ.ಯಲ್ಲಿ	37-020	9-515

ಈ ರೀತಿಯಾಗಿ ಈ ಬಾಬಿಗೆ ಕೊಟ್ಟಿರತಕ್ಕಂಥ ಹಣ ಬಹಳ ಕಡಿಮೆ. ಪ್ಲಾನ್ಡ್ ಅಂಡ್ ನಾನ್ ಪ್ಲಾನ್ಡ್ ಸ್ಕೀಂನಲ್ಲಿ 100 ಕ್ಕೆ 18 ಭಾಗದಷ್ಟು ಹಣ ಕೊಡಬೇಕು ಎಂದು ನಿಯಮ ಇದ್ದರೂ ತಮ್ಮ ಕರ್ತವ್ಯದಲ್ಲಿ ಲೋಪ ಮಾಡಿದ್ದಾರೆ. ಅದಕ್ಕಾಗಿ ನಾನು ನೇರವಾಗಿ ಹೇಳುವುದು ಏನೆಂದರೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಿ. ರಾಚಯ್ಯನವರು ಮಂತ್ರಿಮಂಡಲದಲ್ಲಿ ಇದ್ದುಕೊಂಡು ಹರಿಜನ ಮತ್ತು ಗಿರಿಜನರಿಗೆ ರಕ್ಷಣೆ ಕೊಡತಕ್ಕಂಥ ಕಾರ್ಯದಲ್ಲಿ ಲೋಪ ಮಾಡಿದ್ದಾರೆ. ಈ ಸರ್ಕಾರ ಕೊಟ್ಟಿರುವ ಹಣವನ್ನೂ ಲ್ಯಾಪ್ಸ್ ಮಾಡಿದೆ. ಹಿಂದೆ ಮಾಧ್ಯಮಿಕ ಶಿಕ್ಷಣಕ್ಕೆ ಒಬ್ಬ ಹುಡುಗ ವಿದ್ಯಾಭ್ಯಾಸ ಮಾಡುವುದಕ್ಕೆ 1938 ರಲ್ಲಿ 3 ರೂಪಾಯಿ ವಿದ್ಯಾರ್ಥಿ ವೇತನ ಫೀಸ್ ಕೊಡುತ್ತಿದ್ದುದು ಈಗ 1968 ರಲ್ಲಿ 3 ರೂಪಾಯಿ ವಿದ್ಯಾರ್ಥಿವೇತನವೇನಿದೆ? ಇದರಿಂದ ಹರಿಜನರಿಗೆ ಅನ್ಯಾಯ ವಾಗುತ್ತಿದೆ, ಇದರಲ್ಲಿ ಪ್ರಗತಿ ಏನೂ ಇಲ್ಲ ಎಂದು ನಾನು ಹೇಳುತ್ತೇನೆ.

ಇನ್ನು ಹರಿಜನರ ಮತ್ತು ಗಿರಿಜನರ ಅಪಾಯಿಂಟ್‌ಮೆಂಟ್ ವಿಚಾರದಲ್ಲಿ ಹೇಳುವುದಾದರೆ ರೆಕ್ರೂಟ್ ಮಾಡುವಾಗ ಅಲ್ಲೂ ಕೂಡ 100 ಕ್ಕೆ 18 ಭಾಗದಷ್ಟು ಅವರಿಗೆ ಮೀಸಲು ಸ್ಥಾನಗಳನ್ನು ಒದಗಿಸಿದ್ದಾರೆಯೋ ಎನ್ನುವುದನ್ನು ನೋಡಿದರೆ ಅದು ಇಲ್ಲ. ಸೆಲೆಕ್ಷನ್ ಪೋಸ್ಟ್‌ಗಳಲ್ಲೂ ಕೂಡ ಹೆಚ್ಚು ಹೆಚ್ಚಾಗಿ ಹುದ್ದೆಗಳನ್ನು ಈ ಜನಾಂಗಕ್ಕೆ ''ರಿಸರ್ವ್'' ಮಾಡಿಸಬೇಕು.

ಇನ್ನು ಮನೆಗಳನ್ನು ಕಟ್ಟುವ ವಿಚಾರದಲ್ಲಿ ಈಗಾಗಲೇ L.I.C. ನಿಂದ $3\frac{1}{2}$ ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಖರ್ಚು ಮಾಡಿದ್ದಾರೆ. ಅದಕ್ಕೆ ಈಗಾಗಲೇ ಬೇಕಾದಷ್ಟು ಅಪ್ಲಿಕೇಷನ್ ಮತ್ತೆ ಬಂದಿವೆ. ಮತ್ತೆ ಪುನಃ $3\frac{1}{2}$ ಕೋಟಿ ರೂಪಾಯಿಗಳನ್ನು ಎಲ್.ಐ.ಸಿ.ಯಿಂದ

ತೆಗೆದುಕೊಳ್ಳಲು ಸರ್ಕಾರ ನಿರ್ಣಯ ಮಾಡಿದ್ದಾರೆ. ಅದನ್ನು ಜಾಗ್ರತೆಯಾಗಿ ತರಿಸಿಕೊಂಡು ಹರಿಜನರ ಬಗ್ಗೆ ಗೃಹ ಒದಗಿಸುವುದರಲ್ಲಿ ಒಂದು ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಪ್ಲಾನಿಂಗ್ ಬೋರ್ಡ್, ಕಾರ್ಪೊರೇಷನ್ಸ್ ಮತ್ತು ಇತರ ಸಮಿತಿಗಳಲ್ಲಿ ಸಾಕಾದಷ್ಟು ಪ್ರಾತಿನಿಧ್ಯ ಇರುವುದಿಲ್ಲ ಇದು ಒಂದು ಲೋಪವಾಗಿದೆ. ಹರಿಜನರಿಗೆ ಸರಿಯಾದ ಅವಕಾಶ ಎಲ್ಲಾ ಕಡೆಯೂ ಸಿಕ್ಕುವಂತೆ ಮಾಡಬೇಕು. ಶ್ರೀಮಾನ್ ಬಿ. ರಾಚಯ್ಯನವರೂ ಮತ್ತು ಶ್ರೀಮಾನ್ ವೈ. ರಾಮಕೃಷ್ಣ ಅವರು ಈಗ ಮಂತ್ರಿಮಂಡಲದಲ್ಲಿ ಇರುವುದರಿಂದ ನೇರವಾಗಿ ಅವರಿಗೆ ರಕ್ಷಣೆ ಕೊಡಬೇಕು. ಇದನ್ನು ಮಾಡದೇ ಹೋದರೆ ಇಲ್ಲಿರತಕ್ಕಂಥ ಹರಿಜನ ಮತ್ತು ಗಿರಿಜನ ಶಾಸನಸಭಾ ಸದಸ್ಯರುಗಳು ಈ ಇಬ್ಬರು ಸಚಿವರುಗಳ ವಿರುದ್ಧ ಎಚ್ಚರಿಕೆಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಪಾರ್ಲಿಮೆಂಟ್‌ನಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರಿಗೆ ಹಿತರಕ್ಷಣೆ ಸಾಧಿಸಲು ಎಲ್ಲಾ ಸದಸ್ಯರೂ ಯಾವ ರೀತಿ ಒಂದು ಫೋರಂ ಮಾಡಿದರೋ, ಆಂಧ್ರದಲ್ಲಿ ಯಾವ ರೀತಿ ಶಾಸಕರೆಲ್ಲ ಸೇರಿ ಒಂದು ಅಸೋಸಿಯೇಷನ್ ಮಾಡಿದರೋ ಅದೇ ರೀತಿ ಇಲ್ಲಿಯೂ ಒಂದು "ಫೋರಂ" ಮಾಡಬೇಕಾಗುತ್ತದೆ. ನೀವು ಮಾಡಿರತಕ್ಕಂಥ ಲೋಪಗಳನ್ನು ಪ್ರಕಟಣೆ ಮೂಲಕ ಪ್ರಚಾರ ಮಾಡುವುದಲ್ಲದೆ ನೀವು ಅರ್ಹರಾದಂಥ ಮಂತ್ರಿಗಳಲ್ಲ ಎಂದು ಬಹಿರಂಗವಾಗಿ ಪ್ರಕಟಣೆ ಮಾಡಬೇಕಾಗುತ್ತದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಶ್ರೀ ವೀರೇಂದ್ರಪಾಟೀಲ್‌ರವರ ಮಂತ್ರಿಮಂಡಲದಲ್ಲಿ ನೀವು ಇಬ್ಬರೂ 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಹೆಚ್ಚು ಹಣವನ್ನು ಹರಿಜನ ಗಿರಿಜನರಂತೆ ಸಾಗಿಸಲು ಒದಗಿಸಿಕೊಡಿ. ಹರಿಜನ ಮತ್ತು ಗಿರಿಜನರ ಅಭಿವೃದ್ಧಿಗೆ, ಬಡವರ ಅಭಿವೃದ್ಧಿಗೆ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳಿ ಈ ರಾಜ್ಯಪಾಲರ ಭಾಷಣದಲ್ಲಿ 4–5 ಅಂಶಗಳ ಬಗ್ಗೆ ಸಲಹೆ ಮಾಡಿ ಮಾತನಾಡಲು ಅವಕಾಶ ಒದಗಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಆರ್. ಬದರಿನಾರಾಯಣ್ (ಶಿವಮೊಗ್ಗ).—ಸನ್ಮಾನ್ಯ ಸಭಾಪತಿಗಳೇ, ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಅಭಿನಂದನಾ ನಿರ್ಣಯವನ್ನು ಸಮರ್ಥನೆ ಮಾಡುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದು ನಾನು ನಿಂತಿದ್ದೇನೆ. ಇಷ್ಟರವರೆಗೆ ಅನೇಕ ರಾಜ್ಯಪಾಲರುಗಳು ಭಾಷಣ ಮಾಡಿದ್ದಾರೆ. ಆದರೆ ಈ ಸಲದ ರಾಜ್ಯಪಾಲರ ಭಾಷಣ ಒಂದು ಅತ್ಯುತ್ತಮ ರೀತಿಯಲ್ಲಿ ಇತ್ತು. ಸರ್ಕಾರ ಏನು ಕೆಲಸವನ್ನು ಸಾಧಿಸಿದೆ, ಮುಂದೆ ಏನು ಮಾಡಬೇಕು ಎನ್ನುವ ವಿಚಾರಗಳನ್ನು ಹೇಳಿದ್ದಾರೆ. ಅವರ ಭಾಷಣದಲ್ಲಿ ಇಲ್ಲದೇ ಇರತಕ್ಕಂಥ ಕೆಲವು ವಿಚಾರಗಳನ್ನು ರಚನಾತ್ಮಕ ಸಲಹೆಗಳ ಮೂಲಕ ಈ ಸಭೆಯಲ್ಲಿ ಇಡಬೇಕೆಂದು ಅಪೇಕ್ಷೆಪಡುತ್ತೇನೆ. ವ್ಯವಸಾಯಕ್ಕೆ ಬೇಕಾದಷ್ಟು ಧನಸಹಾಯ ಮತ್ತು ಇತರೇ ಸಹಾಯಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಅದರಿಂದಾಗಿ ಈವೊತ್ತಿನ ದಿವಸ ಈ ಆಹಾರದ ಅಭಾವದ ಉತ್ಪನ್ನ ಮುಂದುವರಿದು ಈ ಆಹಾರದ ಅಭಾವ ಪರಿಸ್ಥಿತಿ ಬಹಳಮಟ್ಟಿಗೆ ಕಡಿಮೆಯಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮಲೆನಾಡು ಮೈಸೂರು ರಾಜ್ಯದ ಬತ್ತದ ಕಣಜ ಎನ್ನುವ ಕೀರ್ತಿಯನ್ನು ಹೊಂದಿತ್ತು. ಮಲೆನಾಡಿನಲ್ಲಿ ನೀರಾವರಿ ಪ್ರದೇಶದಲ್ಲಿ ಸೌಕರ್ಯಗಳಿವೆ. ಮಳೆ ಬಂದು ಬೆಳೆಯಾಗುವ ಕಡೆ ನೀರಾವರಿ ಸೌಕರ್ಯಗಳಿಲ್ಲ. ಅಲ್ಲಿನ ವ್ಯವಸಾಯ ಕೇವಲ ಮಳೆಯಿಂದ ಮಾತ್ರ ನಡೆಯುತ್ತದೆ. ಅಂಥ ಕಡೆಗಳಲ್ಲಿ ಹೆಚ್ಚಿನ ಸೌಕರ್ಯಗಳನ್ನು ಕೊಡಬೇಕೆಂಬುದು ನನ್ನ ವಾದ. ಮಲೆನಾಡಿನ ಹವಾಮಾನಕ್ಕನುಸರಿಸಿ, ಭೂಗುಣಕ್ಕನುಸರಿಸಿ ಅಲ್ಲಿನ ವಾಟರ್ ಟೇಬಲ್ ಬಹಳ ಕೆಳಮಟ್ಟದಲ್ಲಿದೆ. ಮಳೆ ಬಂದ ಕೆಲವು ದಿವಸಗಳಲ್ಲಿ ನೀರು ಮೇಲಕ್ಕೆ ಬರುತ್ತದೆ. ಎಷ್ಟು ಬೇಗ ನೀರು ಮೇಲಕ್ಕೆ ಬರುತ್ತದೆಯೋ ಅಷ್ಟೇ ಬೇಗ ಕೆಳಕ್ಕೂ ಹೋಗಿ ನೀರಿಲ್ಲದೆ ಇರತಕ್ಕ ಪರಿಸ್ಥಿತಿಯನ್ನು ನಾವು ನೋಡಬಹುದು. ಅಲ್ಲಿನ ಭೂಗುಣ ಅದು. ಅದು ಲ್ಯಾಟರೇಟ್ ಸಾಯಿಲ್ ಆಗಿದ್ದು ನೀರನ್ನು ಇಡತಕ್ಕ ಶಕ್ತಿ ಆ ಭೂಮಿಯಲ್ಲಿ ಇಲ್ಲದೇ ಇರುವುದರಿಂದ ಅಲ್ಲಿ ನೀರಿನ ಅಭಾವವಿರುತ್ತದೆ. ಅಲ್ಲಿ ಅನೇಕ ಕೆರೆಗಳೂ ಇವೆ ಕಟ್ಟೆಗಳೂ ಇವೆ. ಆದರೆ ಒಬ್ಬ ಸ್ನೇಹಿತರು ಹೇಳಿದ ಹಾಗೆ ಆ ಕೆರೆಗಳಲ್ಲಿ ನೀರು ಇರುವುದಿಲ್ಲ, ಬಾವಿಗಳಲ್ಲಿ ನೀರು ಇರುವುದಿಲ್ಲ. ಅದಕ್ಕೆ ಕಾರಣವೇನೆಂದರೆ ಕೆರೆಗಳಲ್ಲಿ ಹೂಳು ತುಂಬಿ ಮೇಲಿನಿಂದ ಮಣ್ಣು ಕೊಚ್ಚಿ ಬಂದು ತುಂಬಿರುವುದರಿಂದ ನೀರು ನಿಲ್ಲತಕ್ಕ ಪರಿಸ್ಥಿತಿ ಇಲ್ಲ. ವಾಟರ್ ಟೇಬಲ್ ಕೆಳಗೆ ಇರುವುದರಿಂದ ಅದರಿಂದ ಕೂಡ ತೊಂದರೆಯಾಗುವ ಅವಕಾಶವಿರುವುದರಿಂದ ಅದನ್ನು ವೈಜ್ಞಾನಿಕವಾಗಿ ಪರೀಕ್ಷೆ ಮಾಡಬೇಕಾದ ವಿಚಾರವಾಗಿದೆ. ಹಾಗೆ ಮಾಡಿದರೆ ನೀರು ತರುವುದಕ್ಕೆ, ಇರಿಗೇಷನ್‌ವೆಲ್ಸ್ ತೋಡಿಸುವುದಕ್ಕೆ, ಪಂಪ್ ಸೆಟ್‌ಗಳನ್ನು ಹಾಕಿ ಎಲ್ಲಿ ನೀರಾವರಿ ಇಲ್ಲವೋ ಅಲ್ಲಿ ಏನು ಸೌಕರ್ಯಗಳನ್ನು ಮಾಡಿಕೊಡಬೇಕೋ ಅವೆಲ್ಲವನ್ನು ಮಾಡಿಕೊಟ್ಟರೆ ಡೀಪ್ ಇರಿಗೇಷನ್ ವೆಲ್ಸ್, ಡೀಪ್ ಬೋರ್ ವೆಲ್ಸ್ ಹಾಕುವ ವ್ಯವಸ್ಥೆಯನ್ನು ಮಾಡಿದರೆ ಬಹುಶಃ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಹಾರಧಾನ್ಯಗಳನ್ನು ಬೆಳೆಯುವುದಕ್ಕೆ ಅವಕಾಶವಾಗುತ್ತದೆ

(ಶ್ರೀ ಎ. ಆರ್. ಬದರೀನಾರಾಯಣ್)

ಎಂದು ನನಗನ್ನಿಸುತ್ತದೆ. ಇದಕ್ಕಾಗಿ ಸ್ಪೆಷಲ್ ಇನ್‌ವೆಸ್ಟಿಗೇಷನ್ ಮಾಡಿ, ಯಾವರೀತಿಯಲ್ಲಿ ಮಾಡಿದರೆ ಬತ್ತವನ್ನು ವಿಶೇಷವಾಗಿ ಬೆಳೆಯುತಕ್ಕ ಪ್ರದೇಶದಲ್ಲಿ ಆಹಾರವನ್ನು ಹೆಚ್ಚಿಗೆ ಬೆಳೆಯುತಕ್ಕ ಪ್ರದೇಶದಲ್ಲಿ ಏನು ಯೋಚನೆ ಮಾಡಬೇಕು ಎನ್ನುವುದನ್ನು ಸರ್ಕಾರ ಯೋಚನೆ ಮಾಡಬೇಕು.

ಈಗ ಹೊಸದಾಗಿ ಅಗ್ರಿಕಲ್ಚರಲ್ ಫೈನಾನ್ಸಿಂಗ್ ಬ್ಯಾಂಕುಗಳ ಮೂಲಕ ರೈತರಿಗೆ ಧನ ಸಹಾಯ ಮಾಡುತ್ತಿದ್ದಾರೆ. ಅದೂ ಕೂಡ ಇರಿಗೇಷನ್ ಟ್ರಾಕ್ಟ್‌ಗೆ ಮಾತ್ರ ಅನ್ವಯಿಸುತ್ತದೆಯೇ ಹೊರತು ಮಳೆಯಿಂದ ಬೆಳೆಯಾಗತಕ್ಕ ಜಮೀನುಗಳಿಗೆ ಅನ್ವಯಿಸುವುದಿಲ್ಲ ಎಂದು ಹೇಳಿದ್ದಾರೆ. ಮಳೆಯಿಂದ ಬೆಳೆಯಾಗತಕ್ಕ ಜಮೀನುಗಳಿಗೆ ಕೂಡ ಅಗ್ರಿಕಲ್ಚರಲ್ ಫೈನಾನ್ಸಿಂಗ್ ಬ್ಯಾಂಕುಗಳ ಮೂಲಕ ಸಹಾಯವನ್ನು ಕೊಡಬೇಕು ಎಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

ಮಲೆನಾಡಿನಲ್ಲಿ ಮಳೆ ಬಹಳ ಕಡಿಮೆಯಾಗಿದೆ ಎನ್ನುವುದು ನಿರ್ವಿವಾದವಾದ ವಿಚಾರ. ಹಿಂದೆ ಎಷ್ಟು ಮಳೆ ಆಗುತ್ತಿತ್ತೋ, ಆದರಿಂದ ಎಷ್ಟು ದೊಡ್ಡ ದೊಡ್ಡ ಜಲಾಶಯಗಳು ತುಂಬುತ್ತಿದ್ದುವೋ ಅದನ್ನೆಲ್ಲ ನಾವು ನೋಡಿದ್ದೇವೆ. ಆದರೆ ಈಗಿನ ಸಂದರ್ಭದಲ್ಲಿ ಮಳೆ ಬಹಳ ಕಡಮೆಯಾಗಿರುವುದರಿಂದ ರಿಸರ್ವಾಯರ್‌ನಲ್ಲಿ ನೀರು ತುಂಬಲು ಅವಕಾಶವಿಲ್ಲದ ಹಾಗೆ ಆಗಿದೆ. ಬಹುಶಃ ಬೇಸಿಗೆಯಲ್ಲಿ ನಮ್ಮ ಮಲೆನಾಡಿನ ಯಾವ ಭಾಗದಲ್ಲಿ ಹೋದರೂ ಕೂಡ ಅಲ್ಲಿ ಕಾಡಿನ ಅಭಾವ ನಮ್ಮ ಕಣ್ಣಿಗೆ ಕಾಣುತ್ತದೆ. ಕಾಡುಗಳನ್ನು ಸ್ವೇಚ್ಛೆಯಾಗಿ ಕಡಿಯುತ್ತ ಇರುವುದರಿಂದ, ಟ್ರಾನ್ಸ್‌ಮಿಷನ್ ಲೈನ್ ಹಾಕುವುದಕ್ಕಾಗಿ ಕಾಡುಗಳು ಹೋಗುತ್ತಿರುವುದರಿಂದ, ರೈತನಿಗೆ ಜಮೀನು ಕೊಡಬೇಕೆಂದು ಕಾಡುಗಳನ್ನು ಕಡಿಯುತ್ತಿರುವುದರಿಂದ, ಕಾಡು ಇರುವ ಪ್ರದೇಶ ಕಡಮೆಯಾಗುತ್ತಿದೆ. ಇದರಿಂದ ಮಲೆನಾಡಿನಲ್ಲಿ ಕೂಡ ಮಳೆಯ ಅಭಾವ ಬಹಳವಾಗಿ ಕಾಣುತ್ತಿದೆ. ಅನೇಕ ಜನ ಮಲೆನಾಡಿನಿಂದ ಬಂದಿರುವ ಮಿತ್ರರು ಇಲ್ಲಿದ್ದಾರೆ. ಅವರಿಗೂ ಈ ಅನುಭವ ಬಂದಿರಬಹುದು. ಹೀಗೆ ಆಗುತ್ತ ಹೋದರೆ ಕ್ರಮೇಣ ಮಲೆನಾಡಿನಲ್ಲಿ ಮಳೆ ಕಡಿಮೆಯಾಗಿ ಯಾವ ಕೆರೆಗಳಲ್ಲಿಯೂ, ಯಾವ ನೀರಾವರಿ ಪ್ರದೇಶದಲ್ಲಿಯೂ ನೀರು ಇರುವುದಿಲ್ಲ ಎನ್ನುವ ನಿರೀಕ್ಷೆ ಮಾಡಬಹುದು. ಇದಕ್ಕೆ ಕಾಡನ್ನು ಹೆಚ್ಚಾಗಿ ಬೆಳೆಸುವುದಕ್ಕೆ ಕ್ಷಿಪ್ರವಾದ ಯೋಜನೆಯನ್ನು ಹಾಕಿಕೊಳ್ಳದೆ ಹೋದರೆ ಬಹಳ ತೊಂದರೆಯಾಗುತ್ತದೆ. ಸ್ವಾಭಾವಿಕವಾಗಿ ಬೆಳೆಯುತಕ್ಕ ಕಾಡನ್ನು ಕಡಿದು ಹೊಸದಾಗಿ ಕಾಡನ್ನು ಬೆಳೆಸುವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಇರುವಂಥ ಕಾಡನ್ನು ಕಡಿದು ಹೊಸದಾಗಿ ಬೆಳೆಸಬೇಕಾದರೆ ಎಷ್ಟು ಕಾಲ ಹಿಡಿಯುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಎಲ್ಲಿ ಕಾಡುಗಳಿಲ್ಲ ಅಂಥ ಕಡೆಗಳಲ್ಲಿ ಕಾಡನ್ನು ಬೆಳೆಸುವುದು ಅಥವಾ ಪ್ಲಾಂಟೇಷನ್ ಮಾಡುವುದು ಉತ್ತಮ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಬಹಳವಾಗಿದೆ. ಎಲ್ಲಿ ನೋಡಿದರೂ ಕೂಡ ಹಳ್ಳಿ ಹಳ್ಳಿಗಳಲ್ಲಿ ಹೈಸ್ಕೂಲುಗಳೂ, ತಾಲ್ಲೂಕು ಮಟ್ಟದಲ್ಲಿ ಕಾಲೇಜುಗಳೂ, ತಾಂತ್ರಿಕ ಕಾಲೇಜುಗಳೂ ಜಾಸ್ತಿಯಾಗಿವೆ. ಅಲ್ಲಿಂದ ಪಾಸ್ ಮಾಡಿ ಬರತಕ್ಕ ವಿದ್ಯಾರ್ಥಿಗಳಿಗೆ ಮುಂದಿನ ಜೀವನೋಪಾಯವೇ ದೊಡ್ಡ ಸಮಸ್ಯೆಯಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಎಲ್. ಎಸ್. ಸ್ಟೇಜಿನಲ್ಲಿ, ಎಸ್. ಎಸ್. ಎಲ್. ಸಿ. ಸ್ಟೇಜಿನಲ್ಲಿ ವಿದ್ಯಾಭ್ಯಾಸವನ್ನು ಡೈವರ್ಸಿಫೈ ಮಾಡುತ್ತಾರೆ. ವಿದ್ಯಾಭ್ಯಾಸವನ್ನು ಕೊಡುವಾಗ, ಮರಗೆಲಸ, ಚಮ್ಮಾರರ ಕೆಲಸ, ಕಮ್ಮಾರ ಕೆಲಸ ಹೀಗೆ ಡೈವರ್ಸಿಫೈ ಮಾಡಿ ಮೂರು ನಾಲ್ಕು ವರ್ಷ ತಾಂತ್ರಿಕ ವಿದ್ಯಾಭ್ಯಾಸವನ್ನು ಕೊಟ್ಟು ಅವನಿಗೆ ಬೇಕಾದ ತಾಂತ್ರಿಕ ಸಲಕರಣೆಯನ್ನು ಕೊಟ್ಟು ಜೀವನೋಪಾಯ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. ಅನೇಕ ಕಡೆಗಳಲ್ಲಿ ಒಬ್ಬ ಮರಗೆಲಸವನ್ನು ಒಬ್ಬ ಚಮ್ಮಾರ, ಒಬ್ಬ ಕಮ್ಮಾರ ಹೀಗೆ ಇರುತ್ತಾರೆ. ವಿಲೇಜ್ ಆರ್ಟಿಸಾನ್ಸ್ ಏನಿರುತ್ತವೆ ಅವುಗಳ ಬಗ್ಗೆ ಸರಿಯಾದ ತಾಂತ್ರಿಕ ಶಿಕ್ಷಣವನ್ನು ಕೊಟ್ಟು ಅವರಿಗೆ ಬೇಕಾದ ಉಲಕರಣೆಗಳನ್ನೂ ಒದಗಿಸಬೇಕು. ಹೀಗೆ ಮಾಡಿದರೆ ಬಹಳ ಜನಗಳಿಗೆ ಹಳ್ಳಿಗಳಲ್ಲಿ ನೆಲಸಿ ಜಿವನೋಪಾಯವನ್ನು ಕಲ್ಪಿಸಿದ ಹಾಗೆ ಆಗುತ್ತದೆ. ಇತ್ತ ಕಡೆಗೂ ಸರ್ಕಾರದವರು ಗಮನ ಕೊಡಬೇಕು ಎನ್ನುವುದನ್ನು ಹೇಳುತ್ತೇನೆ. ವಿದ್ಯಾಭ್ಯಾಸವನ್ನು ಬೇಕಾದಷ್ಟು ಮಾಡುತ್ತಿದ್ದರೂ ಉಪಯುಕ್ತವಾದ ವಿದ್ಯಾಭ್ಯಾಸವನ್ನು ನಮ್ಮ ಮಕ್ಕಳಿಗೆ ಕೊಡುತ್ತಿದ್ದೇವೆಯೇ ಎನ್ನುವುದನ್ನೂ ಸ್ವಲ್ಪ ವಿಚಾರಮಾಡಿ ನೋಡಬೇಕು. ಎಸ್. ಎಸ್. ಎಲ್. ಸಿ. ಬೇಸಿಕ್ ಎಜುಕೇಷನ್ ಸಾಕು. ಮುಂದೆ ಜೀವನೋಪಾಯಕ್ಕೆ ಬೇಕಾದ ತಾಂತ್ರಿಕ ಶಿಕ್ಷಣವನ್ನು ಕೊಡತಕ್ಕದು ಬಹಳ ಅವಶ್ಯ. ಇದಕ್ಕೆ ಅನುಕೂಲವಾಗುವಂತೆ ಕರಿಕ್ಯುಲಂ ಬದಲಾಯಿಸಬೇಕೆಂದು ಹೇಳುತ್ತೇನೆ.

ಭೂ ಸುಧಾರಣೆ ಬಗ್ಗೆ ಅನೇಕರು ಹೇಳುತ್ತಿದ್ದಾರೆ. ಕಾನೂನು ಪಾಸಾಗಿ ಅನೇಕ ವರ್ಷಗಳಾದರೂ ಅದು ಕಾರ್ಯಗತವಾಗಿದೆಯೇ ಎನ್ನುವುದನ್ನು ನೋಡಬೇಕು ಈ ಸಂಬಂಧದಲ್ಲಿ ಲ್ಯಾಂಡ್ ಟ್ರಿಬ್ಯುನಲ್ಸ್ ಮಾಡಿದ್ದಾರೆ. ಇವು ಈಗ ಒಂದು ವರ್ಷದಿಂದ ಮಾತ್ರ ಕೆಲಸ ಮಾಡುತ್ತಿವೆ. ಅಲ್ಲಿ ಹೆಚ್ಚಾಗಿ ಕೆಲಸವಾಗಿಲ್ಲ. ರೈತರಿಗೂ ಜಮೀನು ಇರುವವರಿಗೂ ಕಹಿ ವಾತಾವರಣವುಂಟಾಗಿದೆ. ಅವರ ಭವಿಷ್ಯವೇನು ಎನ್ನುವುದು ನಿಗದಿಯಾಗಿ ಗೊತ್ತಿಲ್ಲದೆ ಇರುವ ಪರಿಸ್ಥಿತಿಯುಂಟಾಗಿದೆ. ಅದಕ್ಕೆ ಕೂಡ ಸ್ವಲ್ಪ ಗಮನವನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ಕೊಡಬೇಕೆಂದು ಹೇಳುತ್ತೇನೆ.

ಮುಖ್ಯವಾಗಿ ದೇಶದ ಮುಂದೆ ಇರುವ ಕೆಲವು ದೊಡ್ಡ ಸಮಸ್ಯೆಗಳೆಂದರೆ ನಿರುದ್ಯೋಗ ಸಮಸ್ಯೆ, ಭೂ ಸುಧಾರಣೆಯನ್ನು ಕಾರ್ಯಗತ ಮಾಡದೆ ಇರತಕ್ಕದು ಮತ್ತು ವಿದ್ಯಾರ್ಥಿಗಳಲ್ಲಿ ಉಂಟಾಗಿರತಕ್ಕ ಅಶಾಂತಿ ಮತ್ತು ಅಶಿಸ್ತು. ವಿದ್ಯಾರ್ಥಿಗಳಲ್ಲಿರುವ ಅಶಾಂತಿ ಮತ್ತು ಅಶಿಸ್ತಿಗೆ ಕಾರಣವೇನು ! ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿ ಉತ್ಸಾಹ ಇರುತ್ತದೆ. ಆ ಉತ್ಸಾಹವನ್ನು ಕೇಂದ್ರೀಕರಿಸಿ ಸರಿಯಾದ ರೀತಿಯಲ್ಲಿ ಹೋಗುವಹಾಗೆ ಮಾಡತಕ್ಕ ಕಲ್ಚರಲ್ ಆಕ್ಟಿವಿಟೀಸ್ ಸ್ಪೋರ್ಟ್ಸ್ ಆಕ್ಟಿವಿಟೀಸ್ ಮುಂತಾದ ಪಾಠಪ್ರವಚನಗಳೇನಿವೆ ಅದನ್ನು ಸರಿಯಾದ ರೀತಿಯಲ್ಲಿ ಅವರಿಗೆ ಕೊಟ್ಟರೆ ಬಹುಶಃ ತಪ್ಪು ದಾರಿಯಲ್ಲಿ ಹೋಗಲಾರರು ಎಂದು ನಿರೀಕ್ಷಣೆ ಮಾಡಬಹುದು. ಈಗಿರುವ ವಿದ್ಯಾಭ್ಯಾಸ ಪದ್ಧತಿಯಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಣೆ ಮಾಡಿ ಅವರನ್ನು ಸರಿಯಾದ ರೀತಿಯಲ್ಲಿ ತರತಕ್ಕದು, ಅದಕ್ಕೆ ಕೂಡ ಸರಿಯಾದ ವ್ಯವಸ್ಥೆಯನ್ನು ಮಾಡತಕ್ಕದು ಮುಖ್ಯವಾದ ವಿಚಾರ.

ಇಷ್ಟು ಹೇಳಿ, ರಾಜ್ಯಪಾಲರು ಮಾಡಿರುವ ಭಾಷಣಕ್ಕೆ ವಂದನೆಯನ್ನು ಸೂಚಿಸಲು ತಂದಿರುವ ಅಭಿನಂದನಾ ನಿರ್ಣಯವನ್ನು ಬಹಳ ಸಂತೋಷದಿಂದ ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ನಾನು ತುಲನಾತ್ಮಕ ದೃಷ್ಟಿಯಿಂದ ಮತ್ತು ವಿವೇಚನಾತ್ಮಕ ದೃಷ್ಟಿಯಿಂದ ನೋಡಿದಾಗ ನಿರಾಶಾದಾಯಕವಾದ ಸಂಗತಿಗಳು ಕಂಡುಬಂದವು. ಕಳೆದ 2-3 ವರ್ಷಗಳಿಂದ ಮಾಡಿದ ಭಾಷಣ ಧಾಟಿಯೇ ಈ ವರ್ಷ ಕೂಡ ಇದ್ದಹಾಗೆ ಮಾಡಿ ನಿರಾಶಾದಾಯಕವಾದ ವಿಷಯಗಳನ್ನು ಮಾನ್ಯ ಸಭೆಯ ಮುಂದಿಟ್ಟಿದ್ದಾರೆ. ಇದನ್ನು ನೋಡಿದರೆ ಹಾಡಿದ್ದೇ ಹಾಡೋ ಕಿಸುಬಾಯಿದಾಸ ಎಂಬ ಗಾದೆಯು ಜ್ಞಾಪಕಕ್ಕೆ ಬರುತ್ತದೆ. ಆ ಪ್ರಕಾರ ಈ ಭಾಷಣ ಇದೆ. ಇದನ್ನು ಓದಬೇಕಾದ ಅಗತ್ಯವೇ ಕಾಣುತ್ತಿಲ್ಲ. ಸರಕಾರದವರ ವಿಫಲತೆ ಕಳೆದ 20 ವರ್ಷಗಳಲ್ಲೇನಿದೆ ಎಂಬುದಕ್ಕೆ ಈ ಭಾಷಣ ಕನ್ನಡಿ ಇದ್ದಹಾಗಿದೆ. ಹಳೇ ಹಾಡನ್ನೇ ಈ ರೀತಿಯಾಗಿ ಹೇಳುತ್ತಿದ್ದರೆ ಬಹಳ ಕಾಲ ಕಾಂಗ್ರೆಸ್ ಸರಕಾರ ಬಹಳ ಕಾಲ ಉಳಿಯುವುದಿಲ್ಲ ಅದಕ್ಕೆ ಧಕ್ಕೆ ಬರುತ್ತದೆ ಎಂದು ಇಂದು ಒತ್ತಿ ಹೇಳಬೇಕಾಗಿದೆ.

ಇನ್ನು ತಾಲ್ಲೂಕು ಬೋರ್ಡ್‌ಗಳು ಪ್ರಜಾಪ್ರಭುತ್ವದ ತಳಹದಿ, ಅವುಗಳಿಗೆ ನಡೆದಿರುವ ಚುನಾವಣೆಯು ಮಹತ್ವಪೂರ್ಣವಾದುದು ಎಂದು ಹೇಳಿದ್ದಾರೆ. ಆ ಸಂಬಂಧದಲ್ಲೇನು ಚುನಾವಣೆಗಳಲ್ಲಿ ಅನ್ಯಾಯ ನಡೆದಿದೆ ಎಂಬುದಕ್ಕೆ ಬಿಜಾಪುರ ಜಿಲ್ಲೆಯಲ್ಲಿ ನಡೆದ ವಿಚಾರ ಉದಾಹರಣೆಯಾಗಿದೆ. ಅಲ್ಲಿ ಚುನಾವಣೆ ನಡೆಯುವುದಕ್ಕೆ ನಾಮ ಪತ್ರಗಳನ್ನು ಸಲ್ಲಿಸಲು ನವೆಂಬರ್ 8ನೆಯ ತಾರೀಖೇ ಕೊನೆಯ ದಿವಸವಾಗಿತ್ತು. ಅದನ್ನು 15ನೇ ತಾರೀಖಿನವರೆಗೆ ಮುಂದಕ್ಕೆ ಹಾಕಿದರು. ಇದಕ್ಕಾಗಿ ಇಂದು ಮುಧೋಳ ತಾಲ್ಲೂಕಿನವರು ಹೈಕೋರ್ಟಿಗೆ ರಿಟ್ ಹಾಗಿದ್ದಾರೆ. ಇನ್ನೊಂದು ಸಲ ಇಡೀ ಬಿಜಾಪುರ ಜಿಲ್ಲೆಯಲ್ಲಿ ಮರು ಚುನಾವಣೆ ನಡೆಯುವ ಪರಿಸ್ಥಿತಿ ಇದೆ. ಸರಕಾರ ಅಲ್ಲಿ ತನ್ನ ಪ್ರಭಾವ ಬೀರಿ ಗೊತ್ತಾದ ತಾರೀಖನ್ನು 8 ದಿವಸ ಮುಂದಕ್ಕೆ ಹಾಕಿರುವುದು ಪ್ರಜಾ ರಾಜ್ಯದ ತತ್ವವನ್ನು ಕೊಲೆಮಾಡಿದಂತೆ ಎಂದು ನಾನು ಒತ್ತಿ ಹೇಳುತ್ತೇನೆ. ಅಲ್ಲಿ ಪ್ರಚಾರ ನಡೆದ ರೀತಿ ನೋಡಬೇಕಾದ್ದು, ಮುಂದಿನ ಜೀಪಿನಲ್ಲಿ ನಾಲ್ಕು ಜನ ಕಾಂಗ್ರೆಸ್ ಪುಡಾರಿಗಳು ಹಿಂದಿನ ಜೀಪಿನಲ್ಲಿ ಹಿಂದೆ ಸಾರಾಯಿ, ಹೆಂಡ ಇರುವ ಬಾಟಲುಗಳು ಹೀಗೆ ಹೋಗಿ ಅನೇಕ ಕಡೆ ಪ್ರಚಾರ ಮಾಡಿದರು. ಕೆಲವು ಭಾಗಗಳಲ್ಲಿ ಕೊನೆಯ ತಾರೀಖಿಗೆ ಮುಂದೆ ಉಮೇದುವಾರಿಕೆ ವಾಪಸು ತೆಗೆದುಕೊಳ್ಳುವುದಕ್ಕೆ ಅವಕಾಶವಿರುವಾಗ ವಿರೋಧ

(ಶ್ರೀ ಎಸ್. ಎಸ್. ಅರಕೇರಿ)

ಪಕ್ಷದವರನ್ನು ಬುಟ್ಟಿಗೆ ಹಾಕಿಕೊಂಡು ಮತ್ತು ಕೆಲವರಿಗೆ ಭಯ ಹಚ್ಚಿಸಿ ಅವರು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆಯುವಂತೆ ಮಾಡಿದ್ದಾರೆ. ಹೀಗೆ ಮಾಡಿ ಪ್ರಜಾ ರಾಜ್ಯದ ನಾಂದಿಗೆ ಬದಲಾಗಿ ಕೊರೆ ಮಾಡುವುದಕ್ಕೆ ತಾಲ್ಲೂಕು ಬೋರ್ಡಿನ ಚುನಾವಣೆ ಅವಕಾಶ ಮಾಡಿದೆ. ಇಷ್ಟೇ ಅಲ್ಲದೆ ಪಂಚಾಯಿತಿ ರಾಜ್ಯ ಸಂಸ್ಥೆಯನ್ನು ಭದ್ರಪಡಿಸಬೇಕೆಂದು ರಾಜ್ಯಪಾಲರು ಹೇಳಿದ್ದಾರೆ. ಆದರೆ ಇವತ್ತಿನ ದಿವಸ ಹಳ್ಳಿಗಳಲ್ಲಿ, ಗ್ರಾಮಾಂತರಗಳಲ್ಲಿ ರಾಜಕೀಯ ಕೊಲೆಗಳು ನಡೆಯುತ್ತಿದೆ. ಪೋಲೀಸು ದಬ್ಬಾಳಿಕೆ ಎಲ್ಲೆಲ್ಲೂ ಹೆಚ್ಚಿದೆ. ಇದಕ್ಕೆ ಮುಖ್ಯ ಕಾರಣ ಜಾತೀಯತೆ ಭಾವನೆ ಹೆಚ್ಚಾಗಿದೆ. ಮತ್ತು ಹಳ್ಳಿ ಊರುಗಳಲ್ಲಿ ಇರುವ ಬಹು ಸಂಖ್ಯಾತರ ದಬ್ಬಾಳಿಕೆ ಅಲ್ಪ ಸಂಖ್ಯಾತರ ಮೇಲೆ ಹೆಚ್ಚಿರುವುದು. ಬಡವರ ವಿಷಯದಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ಇದನ್ನು ನೋಡಿ ಬಹಳ ವಿಷಾದವಾಗುತ್ತಿದೆ. ದೇಶದಲ್ಲಿ ಪ್ರಜಾ ಪ್ರಭುತ್ವವನ್ನು ಬೆಳೆಸುವುದಕ್ಕೆ ಬದಲಾಗಿ ಅದರ ನಾಶದ ಕಾಲ ಸಮೀಪಿಸುತ್ತಿದೆ. ಇಷ್ಟೇ ಅಲ್ಲದೆ ಹಿಂದಿನ ಮನುವಿನ ಕಾಲದಲ್ಲಿ ಯಾವರೀತಿ ದಬ್ಬಾಳಿಕೆ ಅಜ್ಞಾನಿಗಳ ಮೇಲೆ ಮತ್ತು ಬಡವರಮೇಲೆ ನಡೆಯುತ್ತಿತ್ತೋ ಅದೇ ರೀತಿಯಲ್ಲಿ ಪಂಚಾಯಿತಿ ರಾಜ್ಯದಲ್ಲಿ ನಡೆಯುತ್ತಿದೆ. ಇಂಥ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾಗಿರುವುದರಿಂದ ಪಂಚಾಯಿತಿ ರಾಜ್ಯದಲ್ಲಿ ಸರಕಾರಕ್ಕೆ ನಂಬಿಕೆಯಿದ್ದರೆ ಸರಿಯಾದ ಒಂದು ಧೋರಣೆಯನ್ನು ತಾಳಿ ಜಾತಿಯ ಗೊಂದಲವನ್ನು ತಪ್ಪಿಸಿ ವೈಷಮ್ಯಭಾವನೆಯನ್ನು ತೊಡೆದುಹಾಕಬೇಕು. Panchayathraj system is reviving the caste Rule which is symbol of Manu rule'' I warn the Government.

ಅಭಾವ ಪರಿಸ್ಥಿತಿಯ ವಿಚಾರ ಹೇಳುವುದಾದರೆ ನವೆಂಬರ್ ತಿಂಗಳಲ್ಲಿ ಸುಮಾರು 10-11ನೆಯ ತಾರೀಖು ಇದರ ಕೆಲಸ ಆರಂಭವಾಯಿತು. ಚುನಾವಣೆಗಳು ಮುಗಿದ ಕೂಡಲೇ ಈ ಕೆಲಸವನ್ನು ನಿಲ್ಲಿಸಿದರು. ಇದನ್ನು ನೋಡಿದರೆ ಮತದಾರರನ್ನು ಮೋಸ ಮಾಡುವುದಕ್ಕೆ 20 ದಿವಸಗಳ ಕಾಲ ಒಂದು ಚುನಾವಣೆ ಪ್ರಚಾರಕ್ಕಾಗಿ ಅಭಾವ ಪರಿಸ್ಥಿತಿ ಕೆಲಸವನ್ನು ನಡೆಸಿದರು ಎಂದು ಕಾಣುತ್ತದೆ ಇದು ಸ್ಪಷ್ಟವಾಗಿದೆ. ನಿಜವಾಗಿಯೂ ಪರಿಹಾರ ಕಾರ್ಯ ಮಾಡಬೇಕಾದರೆ 20 ಕೋಟಿ ರೂಪಾಯಿಗಳನ್ನು ಈ ಬಗ್ಗೆ ಖರ್ಚುಮಾಡಲು ಒಂದು ಯೋಜನೆಮಾಡುವುದಾಗಿ ಹೇಳಿದವರು ಇಂದು 6 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚುಮಾಡುತ್ತಿರಲಿಲ್ಲ. ಈಗ ಮಾಡಿರುವ ಕೆಲಸದ ಪ್ರಕಾರ ಒಂದೊಂದು ಜಿಲ್ಲೆಗೆ ಸುಮಾರು 10-15 ಲಕ್ಷ ರೂಪಾಯಿ ಮಾತ್ರ ಖರ್ಚಾಗಿದೆ ಯಾವ ರಸ್ತೆ ಮತ್ತು ಕೆರೆ ಕೆಲಸಗಳು 8-10 ದಿವಸಗಳವರೆಗೆ ಮಾತ್ರ ನಡೆದು ಅರ್ಧ ಕೆಲಸ ಮಾತ್ರ ಆಗಿದೆ. ಇದನ್ನು ನೋಡಿದರೆ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿಗೆ ಚುನಾವಣೆಯಲ್ಲಿ ಕಾಂಗ್ರೆಸಿಗೆ ಜಯ ಆಗಬೇಕಾಗಿದ್ದುದರ ಕಾರಣ ಆ ಕೆಲಸಕ್ಕೆ ಸಹಾಯವಾಗಲೆಂದು ಕೆಲವು ಕಾಲ ಕೆಲಸ ಮಾಡಿ ಆನಂತರ ನಿಲ್ಲಿಸಿದ್ದಾರೆಂದು ಗೊತ್ತಾಗುವುದು. ಈ ಧೋರಣೆಯಿಂದ ಗ್ರಾಮಾಂತರ ಪ್ರದೇಶ ಉದ್ಧಾರವಾಗುವುದಿಲ್ಲ. ರೈತರ ಉದ್ಧಾರವಾಗುವುದಿಲ್ಲ. ಆದುದರಿಂದ ಸರಕಾರ ಸರಿಯಾದ ಧೋರಣೆ ಅನುಸರಿಸಬೇಕು, ತನ್ನ ನೀತಿಯನ್ನು ಮಾರ್ಪಾಡುಮಾಡಿ ಕೊಳ್ಳಬೇಕು ಎಂದು ಸೂಚಿಸುತ್ತೇನೆ. ಅರಣ್ಯ ಖಾತೆ ವಿಷಯ. ಮಳೆ ಚೆನ್ನಾಗಿ ಬರಬೇಕು, ಅರಣ್ಯ ಸಂಪತ್ತನ್ನು ಚೆನ್ನಾಗಿ ಬೆಳೆಸಿದರೆ ಮಳೆ ಬರುತ್ತದೆ ಎಂಬುದನ್ನರಿತು ಸರ್ಕಾರದವರು ಒಂದು ಯೋಜನೆ ಹಾಕಿ ಆದರಂತೆ ಗಿಡಗಳನ್ನು ಬೆಳೆಸುತ್ತಿದ್ದಾರೆ. ಆದರೆ ಸರಕಾರದಮೇಲೆ ಅಪಾದನೆ ಹೊರಿಸಬೇಕಾಗಿದೆ. ಹರಿಜನರಿಗೆ ಸೇಕಡ 50 ರಷ್ಟು ಫಾರೆಸ್ಟ್ ಜಮೀನನ್ನು ಕೊಡಲು ಅದನ್ನು ರಿಲೀಸ್ ಮಾಡಬೇಕಾಗಿತ್ತು. ಈ ದಿವಸ ಅವರಿಗೆ ಅನ್ನವಿಲ್ಲ, ಭೂಮಿಯಿಲ್ಲ, ಕೆಲಸವಿಲ್ಲ ಮನೆಯಿಲ್ಲ. ಆದರೆ ದೀನದಲಿತರನ್ನು ಕಡೆಗೆಣಿಸಿ ಗ್ರ್ಯಾಂಟ್ ರೂಲ್ಸನ್ನು ಅಲಕ್ಷಿಸಿ ಅರಣ್ಯ ಬೆಳಿಸುವ ನೆವದಿಂದ ಯೋಜನೆ ಮಾಡಿ ಹರಿಜನರಿಗೆ ಮೋಸಮಾಡುತ್ತಿದ್ದಾರೆ. ಇದು ಸರಿಯಲ್ಲ. ಹರಿಜನರಿಗೆ ಗ್ರ್ಯಾಂಟ್ ರೂಲ್ಸ ಪ್ರಕಾರ ಕೊಡಬೇಕಾದ್ದನ್ನು ಕೊಟ್ಟು ಉಳಿದಿರುವುದರಲ್ಲಿ ಅರಣ್ಯ ಬೆಳೆಸಬೇಕು. ಮುಖ್ಯವಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಹಕಾರ ಸಂಘಗಳ ಬಗ್ಗೆ ಹೆಮ್ಮೆಯಿಂದ ಹೇಳಿದ್ದಾರೆ. ಅದರೆ ಈ ಸಂಘಗಳಲ್ಲಿ ನೋಡಿದರೆ ಬಂಡವಾಳವೇ ಮಾಯವಾಗುತ್ತಿದೆ. ರೈತರನ್ನು ಉದ್ಧಾರ ಮಾಡಬೇಕು. ಬಡವರನ್ನು ಉದ್ಧಾರಮಾಡಬೇಕು ಎಂದೇನು ಈ ಚಳಿವಳಿಯ ಉದ್ದೇಶವಿದೆ ಅದು ಈಡೇರುತ್ತಿಲ್ಲ.

4 P.M.

ಇಂಟರ್ ಮೀಡಿಯರಿಗಳ ಕೈಯಲ್ಲಿ ಹೋಗುವಂತಹ ಒಂದು ಸನ್ನಿವೇಶ ಉಂಟಾಗಿದೆ, ಕೆಲವರಿಗೆ ಇದು ಒಂದು ಉಪಜೀವನ ಮಾಡಲಿಕ್ಕೆ ಅನುಕೂಲವಾಗಿದೆ ಸರ್ಕಾರದವರು ಇದನ್ನು ಪುನರ್ ಪರಿಶೀಲನೆ ಮಾಡಿ ಸರಿಯಾದ ಮಾರ್ಪಾಡುಗಳನ್ನು ಮಾಡಿ ಗ್ರಾಮಾಂತರದ ರೈತರಿಗೆ, ಸಾರ್ವಜನಿಕರಿಗೆ ಕಲ್ಯಾಣ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಜನತಾಬಜಾರಿನ ವಿಷಯ ಹೇಳುವಾಗ ಇವತ್ತು ನಮ್ಮ ನಾಡಿನಲ್ಲಿ 9 ಜನತಾಬಜಾರುಗಳು ಇವೆ ಎಂದು ಹೇಳುತ್ತೀರಿ ಮತ್ತು ಸೂಪರ್ ಬಜಾರುಗಳು ನಿರ್ಮಾಣವಾಗುತ್ತಾ ಇವೆ. ಇವತ್ತಿನ ದಿವಸ ಜನತಾಬಜಾರುಗಳಲ್ಲಿ ಇದ್ದಂತಹ ಷೇರ್ ಹೋಲ್ಡರ್ಸ್ ಅಥವಾ ಮೆಂಬರುಗಳನ್ನು ನೋಡಿದಾಗ ಈ ಸಹಕಾರ ಅಂಧೋಳನ ಏನಿದೆ ಇದು ಬಡವರನ್ನು, ದೀನದಲಿತರನ್ನು, ಸಾಮಾನ್ಯ ರೈತರನ್ನು ಕೈಬಿಟ್ಟು ಬಂಡವಾಳ ಶಾಹಿಗಳ ಕೈಗೆ ಹೋಗುತ್ತಾ ಇದೆ. ಸರ್ಕಾರದವರು ದುಡ್ಡಿಲ್ಲ ಎಂದು ಹೇಳುತ್ತಾ ಇದ್ದಾಗ್ಯೂ ಕೂಡ ಇವತ್ತಿನ ದಿವಸ ಅದೆಲ್ಲಾ ದೊಡ್ಡ ವ್ಯಕ್ತಿಗಳ ಕೈಗೇ ಹೋಗುತ್ತಾ ಇದೆ, ಆದರಿಂದ ಯಾವುದೇ ರೀತಿಯಲ್ಲೂ ಧಾನ್ಯಗಳ ಬೆಲೆಯನ್ನು ಹತೋಟಿಯಲ್ಲಿಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಕೋಟ್ಯಾಂತರ ರೂಪಾಯಿಗಳು ಅನ್ಯಾಯವಾಗುತ್ತಾ ಇದೆ, ಹಾಳಾಗುತ್ತಾ ಇದೆ ಎಂದು ಹೇಳಬಯಸುತ್ತೇನೆ. ಸಹಕಾರ ಆಂದೋಲನ ಸತ್ತ ಆಂದೋಲನವಾಗುತ್ತಿದೆ. ಸಾಮಾನ್ಯ ಜನರಿಂದ ದೂರು ಹೋಗುತ್ತಿದೆ.

ರಾಜ್ಯಪಾಲರ ಭಾಷಣದಲ್ಲಿ ನಿರುದ್ಯೋಗದ ಬಗ್ಗೆ ಆಗಲಿ ಅಥವಾ ಲೇಬರ್ ಬಗ್ಗೆ ಆಗಲಿ ಯಾವ ಒಂದು ವಿಚಾರವನ್ನು ಸೂಚನೆ ಮಾಡಿಲ್ಲ, ಇದಕ್ಕೆ ಕಾರಣವೇನೆಂದರೆ ಈ ನಿರುದ್ಯೋಗ ಸಮಸ್ಯೆಯನ್ನು ಎದುರಿಸುವಾಗ ಒಂದು ಎಚ್ಚರಿಕೆಯ ನೀತಿ ಸರ್ಕಾರದಲ್ಲಿ ಇಲ್ಲವೇನೋ ಎಂದು ಅನಿಸುತ್ತದೆ. ನಮ್ಮ ರಾಜ್ಯದಲ್ಲಿನ ಕೆಲವು ಅಂಕಿ ಅಂಶಗಳನ್ನು ಕೊಡುವುದಾದರೆ ಸುಮಾರು ಒಂದೂವರೆ ಲಕ್ಷ ಜನ ಇವತ್ತಿನ ದಿವಸ ಇಂಜನಿಯರುಗಳು ಮತ್ತು ಟೆಕ್ನೀಷಿಯನ್ಸ್ ಕೆಲಸವಿಲ್ಲದೇ ಇದ್ದಾರೆ. ಎಸ್.ಎಸ್.ಎಲ್.ಸಿ. ಮತ್ತು ಬಿ.ಎ., ಬಿ.ಎಸ್.ಸಿ. ಪಾಸ್ ಆದವರು 12 ಲಕ್ಷ ಜನ ಇರಬಹುದು. ಇವರ ಬಗ್ಗೆ ಯಾವ ಒಂದು ನಿರ್ದಿಷ್ಟವಾದ ನೀತಿಯನ್ನೂ ಕೂಡ ನಿರೂಪಣೆ ಮಾಡಿಲ್ಲ. ಷೆಡ್ಯೂಲ್ ಕ್ಯಾಸ್ಟ್‌ನವರಿಗೆ 18 ಪರ್ಸೆಂಟ್ ಎಂಪ್ಲಾಯ್‌ಮೆಂಟ್ ಕೊಡಬೇಕೆಂದು ಗವರ್ನಮೆಂಟ್ ಆರ್ಡರ್ ಇದ್ದರೂ ಕೂಡ 127 ಮುನಿಸಿಪಾಲಿಟಿಗಳು, ಟ್ರಸ್ಟ್ ಬೋರ್ಡು, ಹದಿನೆಂಟು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕುಗಳಲ್ಲಿ ಮತ್ತು ಇತರ ಅನೇಕ ಬ್ಯಾಂಕುಗಳಲ್ಲಿ ಕೆಲಸ ಮಾಡುವಂತಹ ಜನರು ಸುಮಾರು 50 ಸಾವಿರಕ್ಕಿಂತಲೂ ಜಾಸ್ತಿ ಇದ್ದರೂ ಕೂಡ ಅವರಲ್ಲಿ ಹರಿಜನರಸಂಖ್ಯೆ ಶೇಕಡ ಒಂದು ಪರ್ಸೆಂಟ್ ಕೂಡ ಇಲ್ಲ. ಆಟಾನಮಸ್ ಬಾಡಿ ಆಗಿ ಅವು ಕೆಲಸ ಮಾಡುತ್ತಾ ಇವೆ. ಬೀರಪ್ಪ ಕಮಿಟಿಯವರು ಏನು ಶಿಫಾರಸ್ಸು ಮಾಡಿದ್ದಾರೆ ಎಂದರೆ ಹತ್ತು ವರ್ಷಗಳಲ್ಲಿ ಈ 18 ಪರ್ಸೆಂಟೇಜ್ ನೇಮಕ ಪೂರ್ತಿ ಮಾಡಬೇಕೆಂದು ಹೇಳಿರುವುದನ್ನು ಶಿಫಾರಸು ಮಾಡಿದ್ದಾರೆ ಅದನ್ನು ಜಾರಿಗೆ ಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಮೈಸೂರು ಸ್ಪಿನ್ನಿಂಗ್ ಮಿಲ್ಸ್ ಮತ್ತು ಪ್ರೊಸೆಸಿಂಗ್ ಫ್ಯಾಕ್ಟರಿಯಲ್ಲಿ 1965 ರಿಂದ ಒಂದೂವರೆ ಸಾವಿರ ನೌಕರರಿಗೆ 4 ಪರ್ಸೆಂಟ್ ಬೋನಸ್ ಬರಬೇಕಾಗಿತ್ತು. ಅದನ್ನು ಮ್ಯಾನೇಜ್‌ಮೆಂಟಿನವರು ಕೊಟ್ಟಿಲ್ಲ. 1966ನೇ ಇಸವಿಯಲ್ಲಿ ಮ್ಯಾನೇಜ್‌ಮೆಂಟಿನವರು ತಾವಾಗಿ ಅದನ್ನು ಬಂದು ಮಾಡಿದ್ದಾರೆ ರೂಲ್ಸ್ ಪ್ರಕಾರ ಲೇ ಆಫ್ ಕೊಟ್ಟರೂ 22 ದಿನಗಳ ಸಂಬಳ ಕೊಡಬೇಕು, ಅದನ್ನೂ ಕೊಡಲಿಲ್ಲ. ಈ ಒಂದು ಅನ್ಯಾಯ ನಡೆದಿರುವುವನ್ನು ಮಾನ್ಯ ಕಾರ್ಮಿಕ ಮಂತ್ರಿಗಳು ಸರಿಪಡಿಸುತ್ತಾರೆ ಎಂದು ಹೇಳಿ ನಾನು ಆಶಿಸುತ್ತೇನೆ.

ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿನ ವಿಷಯ ಹೇಳುವುದಾದರೆ ಗಾರ್ಡನ್ ಡಿಪಾರ್ಟ್‌ಮೆಂಟ್ ಅಂತ ಇದೆ, ಅಲ್ಲಿ ಕೆಲಸ ಮಾಡುವಂತಹ ಕೆಲಸಗಾರರು ಬೆಂಗಳೂರಿನಲ್ಲಿರುವವರನ್ನೂ ತೆಗೆದುಕೊಂಡರೆ ಸುಮಾರು 5–6 ಸಾವಿರ ಜನ ಇದ್ದಾರೆ. ಮಿನಿಸ್ಟರುಗಳವರ ಮನೆಯಲ್ಲಿ ಸುಂದರವಾದ ತೋಟ ನಿರ್ಮಾಣ ಮಾಡುತ್ತಾರೆ, 8 ತಾಸು ಕೆಲಸ ಮಾಡುವಂತಹ ಆ ನೌಕರರ ಪಗಾರ ಎಷ್ಟು ಎಂದರೆ ಕೇವಲ 45 ರೂಪಾಯಿ ಸಿಕ್ಕುತ್ತದೆ. ತುಕೋಳ್ ಕಮಿಷನ್ ಅವರ ವರದಿಯಲ್ಲಿ ಅವರ ಬಗ್ಗೆ ಏನನ್ನು ಮಾಡಿಲ್ಲ. ಇವತ್ತಿನ ಸ್ಟಾಂಡರ್ಡ್ ಆಫ್ ಲಿವಿಂಗ್‌ಗೆ ಅನುಗುಣವಾಗಿ ಅವರ ಮಿನಿಮಂ ಸಂಬಳವನ್ನು ನಿಗದಿ ಮಾಡಬೇಕು. ಸುಮಾರು 10–15 ವರ್ಷದಿಂದ ಗಾರ್ಡನರ್ಸ್ ಆಗಿ ಕೆಲಸ ಮಾಡಿದರೂ ಕೂಡ ಅನೇಕರಿಗೆ ಕಾಯಂ ಆಗಿ ನೌಕರಿಯಿಲ್ಲ. ಇವರ ಬಗ್ಗೆ ಸರ್ಕಾರದವರು ಲಕ್ಷ್ಯ ಕೊಟ್ಟು ಸರಿಯಾದ ಒಂದು ಪಗಾರವನ್ನು ಗೊತ್ತುಮಾಡಬೇಕೆಂದು ಹೇಳುತ್ತೇನೆ.

(ಶ್ರೀ ಎಸ್. ಎಸ್. ಅರಕೇರಿ)

ಇನ್ನು ಕೊನೆಯ ಮಾತು ಎಂದರೆ ಸಣ್ಣ ಪೇಪರುಗಳ ಬಗ್ಗೆ ನಮ್ಮ ಮಾನ್ಯ ಮಂತ್ರಿಗಳು ಶ್ರೀಮಾನ್ ರಾಜಶೇಖರ ಮೂರ್ತಿಗಳು ಹೆಚ್ಚಿನ ಉತ್ತೇಜನ ಕೊಡುವ ಸಲುವಾಗಿ ಅವರಿಗೆ ಸರಕಾರಿ ಅಡ್ವರ್ಟೈಸ್‌ಮೆಂಟುಗಳು ಸಿಕ್ಕುವಂತೆ ಅವಕಾಶ ಮಾಡಿಕೊಡಬೇಕೆಂದು ಸೂಚನೆ ಮಾಡುತ್ತೇನೆ. ಸಣ್ಣ ಪೇಪರುಗಳ ಪ್ರಜಾಪ್ರಭುತ್ವದ ಬೆಳವಣಿಗೆಗೆ ಸಕ್ರಿಯಪಾತ್ರ ವಹಿಸುತ್ತಿವೆ ಅನ್ನುವುದನ್ನು ಸರಕಾರ ಮರೆಯಬಾರದು· ಮುಖ್ಯಮಂತ್ರಿಗಳು ತಿಂಗಳಿಗೊಮ್ಮೆ ಸಣ್ಣ ಪೇಪರುಗಳ ಪ್ರೆಸ್‌ಕಾನ್‌ಫರನ್ಸನ್ನು ಕರೆಯಬೇಕೆಂದು ಸೂಚಿಸುತ್ತೇನೆ.

ಎನ್. ಜಿ. ಓ. ಗಳಿಗೆ ಕೊಡಬೇಕಾದ ತಡೆಹಿಡಿದಿರುವ ತುಟ್ಟಿಭತ್ಯವನ್ನು ಜಾಗ್ರತೆ ಪಾವತಿ ಮಾಡುತ್ತಾರೆ ಎಂದು ಹೇಳಿ ಆಶೆ ಮಾಡುತ್ತೇನೆ. ನನಗೆ ಹತ್ತು ನಿಮಿಷ ಮಾತ್ರ ಅಲಾಟ್ ಮಾಡಿದ್ದೀರಿ, ಉಳಿದವರಿಗೆ ಅರ್ಧತಾಸು ಕೊಡುತ್ತೀರಿ, ಪಾರ್ಟಿ ವಿಪ್ ಹೇಳಿದಂತೆ ತಾವು ಮಾಡುತ್ತಾ ಇದ್ದೀರಿ, ತಮ್ಮ ತಪ್ಪಲ್ಲ ಇನ್ನು ಮುಂದಾದರೂ ಇಂಥಹ ಅನ್ಯಾಯವಾಗದಂತೆ ತಾವು ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ R.P.I. ಪಾರ್ಟಿಯವರು ಹಿಂದುಳಿದವರು ಏನಿದ್ದಾರೆ ಅವರು ನಮ್ಮನ್ನು ಕೇಳುತ್ತಾರೆ ಏನ್ರಿ ಅರಕೇರಿಯವರೇ ನಮ್ಮ ವಿಷಯ ಏನೂ ಹೇಳಲೇ ಇಲ್ಲವಲ್ಲಾ ಎಂದು ಹೇಳುವಂತಹ ಒಂದು ಅಪವಾದ ನನ್ನಮೇಲೆ ಬರುತ್ತದೆ ಅದರ ಸಲುವಾಗಿ ಚೀಫ್ ವಿಪ್ ರವರೂ ಕೂಡ ಇದನ್ನು ವಿಚಾರಮಾಡಿ ಮುಂದಾದರೂ ಸರಿಯಾದ ಕಾಲಾವಕಾಶವನ್ನು ಕೊಡಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಕಾಲವನ್ನು ಕೊಟ್ಟದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri R. DAYANANDA SAGAR.—Mr. Speaker, Sri, I rise to support the motion moved by my hon'ble friend Sri D. M. Siddiah, thanking His Excellency the Governor for his thought-provoking Address. As a student of history I am fond of taking instances from world history. Just to quote here and create a background in the world history, if you turn to pages of the history of Europe you can come across a personality, whose name is Hitler. Hitler was a Dictator and he was the head of Nazi-group-Nazism. The Nazis as is well established, were usurpers, schemers and anti-democratic people, whom the whole world shunned. They had no respect for the means; but the concentration was for the end. They were up to do anything. To achieve their end, they adopted any means. They ruled Germany by the gun, by the lathis, by the point of bayonet. There was a policeraj and military rule. If any one did not agree with them, he was persecuted, bullied, punished, burried hundred fathoms below the earth. They were highly communal. The key positions in that State were held by their own community men. Nobody ever had any opportunity of thinking, or dreaming of occupying positions of importance to serve their nation. Money was their God; departments like the P.W.D. and Industries, Excise, Finance and rest of them were held by them for control. Money makes many things; money can buy support; money can induce many things, petty jobs can be given, support may be gained, many may be bought over and Nazi rule can remain. If a person is incorruptible, if he does not take money, if he does not yield to the pressure of taking a position, he was suppressed, man-handled, bullied. These Nazis had no respect for their own orders. They had no respect for promises; they would make promises and break them; they would even make Government Orders and withdraw them. Such was the rule of the Nazis in Germany. Even the highest tribunal

in the administration, the Supreme Court there, for example, passed a stricture against them, they would not be honoured ; they were not caring for that ; they would not resign from their positions because the Nazi Government was an arbitrary Government. It was not a democratic government like that of ours. The people of Germany were disgusted with that Government, but they could not help ; they could not question. They whispered, murmured but they could not mutter ; they could not make a speech ; they could not criticise because of fear of life, because of the fear of losing bread. Thus Hitler ruled Germany. The people of Germany were worried ; so much feelings in the hearts were bursting but they could not help. Ultimately nature had to find a way. Germany was attacked by other nations and Hitler was involved in the Second World War. The people of Germany could not come to the aid of Hitler. Even his lieutenants, Goring and Goebels forsook him. He had no other way but to shoot himself and died, Ours is a democratic Government. Ours is rule by the people, for the people, of the people. Our Government being democratic has been doing many activities most democratically. I must congratulate our young, energetic and dynamic Chief Minister who is doing many acts making wonderful progress in the State. The thought-provoking Governor's Address is a document which contains many of the activities of our Government. Many more matters of public interest have not been touched in this important document, perhaps for want of time.

In agriculture quite a lot of developments have taken place. I must congratulate the Minister for Agriculture for evolving and organising high yielding programme. The area under this has increased to 4.16 lakhs of acres. Many more wonderful things have been done in this department. But, with all that we have been doing quite a lot for agriculture and food, our people in our State and our country are suffering for want of food. What can the poor government do? On the one hand the land refuses to grow more and on the other, the population is increasing heavily, in spite of the fact that our Hon'ble Health Minister has launched a very effective family planning progamme. In the department of Health and Family Planning the achievements are no less. Hospitals are wonderfully managed. On the other day I just went to Vani Vilas Hospital. I found a very few patients there. I asked a doctor nearby " madam what is the matter ? " Pat came the reply " this is the result of family planning", no more pregnancies and no more child birth". There was a social worker on my right side who whispered to me : " Sir, will you please come with me for a minute ?" As she was a social worker, I honoured her and I went with her to a number of nursing homes in the neighbourhood where the seats were full of pregnant women or new-born babies, the future citizens of this great State and country.

Sri M. NAGAPPA.—May I know what is the object of the hon'ble member ? Does he support the Chief Minister ?

Sri R. DAYANANDA SAGAR.—I am a Congressman. I have got to stand behind him and I stand behind him and I will always stand behind him.

Coming to Industries Department, our Mysore State has always been a model State, model in many ways, in the case of industries it is model-most. Even in the days when the Maharaja ruled this State, this was considered a model State so far as industries were concerned and now it is more progressing, more modern than before, because it is headed by an Hon. Minister who is himself an industrialist, who knows the many difficulties confronting the industrialists. He is there trying to solve all those difficulties and industralise the State. No less a person than our Hon. Chief Minister himself is the Chairman of our Industrial Development Council and you can imagine the great wonders that could be done in the field of industries. Only this House should have the patience to wait and see and also see what has happend already in this great department of Industries.

Sharavathy is producing electricity. Our industrial progress is so much that it has not made use of all the electricity that Sharavathy has produced. Perhaps mother Sharavathy has produced so much of electricity not considering the progress of the industries we are making, as a result of which the Electrcity Board is incurring heavy losses. This is a testimony to the fact how wonderfully our industries are progressing.

I do not know why the Governor made no mention about sericulture. The silk industry engages not less than 10 crores of people of the State in that industry. Perhaps the Government thought that this is too insignificant an industry to be thought of. The filatures have been making heavy losses which go to the tune of Rs. 30 lakhs and that is going on for ever and ever. There is a report of the ex-Deputy Minister for minimizing the basins to 500 and minimizing the losses to the least and that report, Sir, is kept in cold storage.

I come to the last point. I do not want to bore you with a long speech. There is a whisper going round in this house and elsewhere for the change of the name of this State. This, Sir, is a very serious matter. People have got to think very seriously. This is not a matter to be hustled. There are nearly 1½ crores of Kannadigas in old Mysore State watching with interest what this House is going to do in this matter. When reorganisation of States took place every one of the 3 crores of Kannadigas felt happy, felt honoured, felt extremely obliged because there came a time which would mark the integration of the entire Kannadigas who would come together. All the Kannadigas came together and the State was formed by name Greater Mysore. At that time great hopes were aroused and the Kannadigas felt that their future is going to be very bright, very great, very wonderful, etc. Reorganisation took place and Greater Mysore was formed. What happened to the fate of 1½ crores of Kannadigas of old Mysore State ? They were suppressed ; they were depressed ; they were buried ; they were put hundred fethoms down the earth. As a Kannadiga I feel proud of my language ;

I feel proud of my nation; I feel proud of Bhuvaneswari Kannada Matha. If a neighbouring Kannadiga were to kill my brother, were to kill my uncle, were to kill my sister, I get enraged ; I rise to the occasion and I would like to understand why such injustices should happen to them ? What is the fate of these 1½ crores of Kannadigas ? The leaders of old Mysore area have been eliminated one after the other successfully, calmly, quietly, destroyed, killed and tore asunder. Integration was thought of—integration of services, integration in the Ministry, integration and understanding between one Kannadiga and the other as a brother, as a friend and a family man, etc. Has it been done ? Sir, I ask you, has it been done ? I will quote an instance here. I take the instance of the formation of this Ministry. We have a Ministry of 29 people, which my Opposition friends would say is too much in size. Perhaps I may agree with them. But in the formation of this Ministry consisting of 29 people, we have 12 Lingayats, 8 Vokkaligas, 2 Harijans, 1 Kuruba, 1 Muslim, 1 Brahmin, 1 Maharashtrian, 1 Bedar and 1 Coorgi. The Lingayats in this State form 20 per cent of the population of the State and in the representation in the Ministry they have got a lion's share of 41 per cent. The Harijans and Vokkaligas have almost equal population as Lingayats, but Vokkaligas have a representation of only 20 per cent. That means 50 per cent less than that of Lingayats. The Harijans, poor people, have a representation of 5 per cent in the Cabinet. In the Services it is a horrible state of affairs. I cannot narrate it here. It is so very hopeless. Almost all the key positions are held by Lingayats and almost all people of old Mysore area have been deprived of their positions. This is what has happened after the formation of linguistic State. Here I recall a great statement of our President of the A.I.C.C. Sri S. Nijalingappa, who is also an hon. member of this House. Many a time he has stated that if linguistic States come in the way of the real integration of the nation's progress and the people's prosperity, then re-thinking on this subject is necessary and re-division of the States may be necessary. Such a time has now come and we have now got to re-thinking on the whole subject. There have been several acts of injustice and we cannot tolerate it any longer. Now I demand division of Mysore State into as Mysore State and Karnatak State if they want to call it by that name. I call upon such of those friends who think like me to joining hands and do justice to the people of the State and also to this great country.

4-30 P.M.

Sri AZIZ SAIT.—Are you going to resign from the Congress ?

Sri R. DAYANANDA SAGAR.—Why should I resign from the Congress ? I am Congressman first and last and always.

So saying, Sir, I conclude by supporting the motion of thanks moved by my friend Sri S. M. Siddaiah.

Thank you very much.

† ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ರಾಜ್ಯಪಾಲರು ನಮ್ಮ ಮುಂದಿಟ್ಟಿರತಕ್ಕಂತಹ ವರದಿಯನ್ನು ನಾನು ವಿರೋಧಿಸುತ್ತಾ ಒಂದು ನಾಲ್ಕು ಮಾತುಗಳನ್ನು ಮಾತ್ರ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಾಲ್ಕನೇಯ ಪಂಚವಾರ್ಷಿಕ ಯೋಜನೆಯು ಸುಮಾರು ಎರಡು ವರ್ಷದಿಂದ ಆಗಬೇಕಾದ ಯೋಜನೆ, ಅದು ಈ ವರೆಗೂ ಆಗಲಿಲ್ಲ. ಆಡಳಿತದ ಅವ್ಯವಸ್ಥೆಯಿಂದ ಕೂಡಿದ ಈ ಒಂದು ಯೋಜನೆಯನ್ನು ಕಳೆದ ಮೂರು ಪಂಚವಾರ್ಷಿಕ ಯೋಜನೆಯವರೆಗೆ ಮಾಡಿ ಸಮಗ್ರವಾಗಿ ರಾಜ್ಯಕ್ಕೆ ಬೇಕಾದಂತಹ ಎಲ್ಲಾ ಸೌಲಭ್ಯಗಳನ್ನು ರೂಪಿಸಿಕೊಳ್ಳುವ ಬದಲು ಇವರು ಕಳೆದ 21 ವರ್ಷಗಳ ಅವಧಿಯಲ್ಲಿ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಭಿಕ್ಷೆ ಬೇಡುವ ಒಂದು ನೀತಿಯನ್ನು ಮಾಡಿಕೊಂಡು ಬಂದಿರುವಾಗ ನಾನು ಈ ಭಾಷಣವನ್ನು ಯಾವ ರೀತಿಯಿಂದ ವರ್ಣನೆ ಮಾಡಲಿ, ಎಂದು ಯೋಚನೆ ಮಾಡುತ್ತಿದ್ದೇನೆ. ಈ ವರದಿಯು ಒಂದು ಯಕ್ಷಗಾನ ನಾಟಕದ ರೀತಿಯಲ್ಲಿದೆ. ಯಕ್ಷಗಾನ ನಾಟಕ ಮಾಡುವ ಸಂದರ್ಭದಲ್ಲಿ ಯಾರು ನಾಟಕ ಮಾಡುತ್ತಾರೆ, ಅವರು ಒಂದು ಹಿನ್ನೆಲೆಯಲ್ಲಿ ಮಾಡುತ್ತಾರೆ. ಆ ರೀತಿಯಲ್ಲಿ ರಾಜ್ಯಪಾಲರು ಈ ಭಾಷಣವನ್ನು ಮಾಡಿದ್ದಾರೆ. ರಾಜ್ಯಪಾಲರು ರಾಜ್ಯದ ಸಮಗ್ರವಾದ ಯಾವ ಕಾರ್ಯಕ್ರಮದಲ್ಲೂ ಯಾವ ರೀತಿಯಲ್ಲೂ ಮನಗಂಡಿಲ್ಲ. ಸರ್ಕಾರ 20 ವರ್ಷದ ಅವಧಿಯಲ್ಲಿ ಕೈಕೊಂಡ ರೀತಿಯಲ್ಲಿ ಈ ಭಾಷಣವನ್ನು ಕೂಡ ಆಡಳಿತ ಪಕ್ಷದವರು, ಈ ವರ್ಷ ರಾಜ್ಯಪಾಲರವರಿಂದ ಹೇಳಿಸಿದ್ದಾರೆ. ಈ ವರದಿ ಸತ್ಯಕ್ಕೆ ಬಹಳ ದೂರವಾದ ವರದಿಯಾಗಿದೆ. ಮೊದಲನೆಯದಾಗಿ ತಾಲ್ಲೂಕು ಬೋರ್ಡು ಚುನಾವಣೆಯ ವಿಷಯವಾಗಿ ಪ್ರಸ್ತಾಪ ಮಾಡುತ್ತೇನೆ. ಸರ್ವಸಾಮಾನ್ಯವಾಗಿ ಆಡಳಿತ ಪಕ್ಷದ ಎಲ್ಲಾ ಸದಸ್ಯರಿಗೂ ಮತ್ತು ಮಂತ್ರಿಯವರಿಗೂ ಗೊತ್ತಿರತಕ್ಕ ವಿಚಾರ, ಈ ತಾಲ್ಲೂಕು ಬೋರ್ಡಿನ ವಿಚಾರ. ಕಳೆದ ಸಪ್ಟೆಂಬರ್ ತಿಂಗಳಲ್ಲಿ ರಾಜ್ಯದಲ್ಲಿ ಒದಗಿರತಕ್ಕಂತಹ ಕ್ಷಾಮಡಾಮರಗಳಿಗೆ ಒದಗಿಸಿದಂತಹ ಹಣದಲ್ಲಿ ಸುಮಾರು 80 ಪರ್ ಸೆಂಟ್ ಇವರು ತಾಲ್ಲೂಕು ಬೋರ್ಡು ಚುನಾವಣೆಗೆ ಉಪಯೋಗಿಸಿಕೊಂಡಿದ್ದಾರೆ ; ಮತ್ತು 9 ಜಿಲ್ಲೆಗಳಲ್ಲೂ ಕೂಡ ಮಂತ್ರಿಗಳಲ್ಲಿ ಒಬ್ಬರು ಇಬ್ಬರು ಪ್ರವಾಸ ಕೈಗೊಂಡು ಅಲ್ಲಿನ ಚುನಾವಣೆಯ ಕೆಲಸಕಾರ್ಯಗಳಲ್ಲಿ ಭಾಗವಹಿಸಿದ್ದಾರೆ ಹೀಗೆ ಅವರು ಇದರಲ್ಲಿ ಹಸ್ತಕ್ಷೇಪ ಮಾಡಲಿಲ್ಲವೆಂದು ಧೈರ್ಯವಾಗಿ ಹೇಳಲಿ, ಹಾಗೆ ಹೇಳಿದರೆ, ನನ್ನ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟು ಹೋಗುತ್ತೇನೆ. ಇವರು ಸರ್ಕಾರದಿಂದ ಟಿ. ಎ. ಡಿ. ಎ. ತೆಗೆದುಕೊಂಡಿದ್ದಾರೆ, ಸರ್ಕಾರಿ ಕಾರುಗಳನ್ನು ಡಜನ್‌ಗಟ್ಟಲೆ ಉಪಯೋಗಿಸಿ ಪ್ರವಾಸ ಮಾಡಿದ್ದಾರೆ. ಈಗ ಆ ಕಾರುಗಳನ್ನು ಚೆಕ್ ಮಾಡಿಸಿದರೆ ಅದೆಲ್ಲಾ ಗೊತ್ತಾಗುತ್ತದೆ. ಹೀಗೆ ನಮ್ಮ ಮಂತ್ರಿಗಳವರು ತಾಲ್ಲೂಕು ಬೋರ್ಡು ಚುನಾವಣೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಇದು ಬಹಳ ದುಃಖಕರವಾದುದು ಮತ್ತು ವ್ಯಸನಕರವಾದುದು. ಚುನಾವಣೆಯು ಕೂಡ ಅದು ಚುನಾವಣೆಯಲ್ಲ. ಏಕೆ ಈ ಸರ್ಕಾರದವರು ಆ ಚುನಾವಣೆಯನ್ನು ನಡೆಸಿದ್ದಾರೆ? ಅಲ್ಲಿ ಒಬ್ಬ ಸದಸ್ಯ 8—10 ಓಟುಗಳನ್ನು ಮಾಡಿದ್ದಾನೆ. ಯಾವ ರೀತಿಯ ಚಿಹ್ನೆಯನ್ನೂ ಓಟು ಮಾಡಿದವನಿಗೆ ಹಾಕಲಿಲ್ಲ. ನನ್ನ ಕ್ಷೇತ್ರದಲ್ಲಿ ಮಾನ್ಯ ಮಂತ್ರಿಯವರು ಪ್ರವಾಸ ಮಾಡಿ ಒಂದು ಬೂತಿನಲ್ಲಿ ಒಂದು ಒಂದೂವರೆ ಗಂಟೆ ನಿಂತು ಓಟು ಮಾಡಿಸಿ ಬಂದಿದ್ದಾರೆ. ಇದು ಜನತೆಯ ಹಕ್ಕನ್ನು ಮೊಟಕುಮಾಡುವುದಲ್ಲವೇ ಎಂಬುದನ್ನು ಇವರು ಹೇಳಲಿ. ಅದೇ ರೀತಿ ರಾಜ್ಯದಲ್ಲಿ ಜನತೆಯ ಆಗುಹೋಗುಗಳನ್ನು ಅಳವಡಿಸಿಕೊಂಡು ಈ ಯೋಜನೆಗಳನ್ನು ಮಾಡುವುದರಲ್ಲಿಯೂ ಬಹಳ ವಿಳಂಬ ಮಾಡುತ್ತಿದ್ದಾರೆ. ಇದಕ್ಕೆ ಕಾರಣವಾದರೂ ಏನು ? ಇವರು ಮಾಡಿದಂತಹ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಜನತೆಗೆ ಬೇಕಾದಂತಹ ನೀರಾವರಿ ಸೌಲಭ್ಯವಾಗಲಿ, ಆರೋಗ್ಯದ ವಿಚಾರದಲ್ಲಾಗಲಿ, ವ್ಯವಸಾಯ ಸೌಲಭ್ಯವಾಗಲಿ, ಅಥವ ಆಹಾರದ ವಿಷಯದಲ್ಲಾಗಲಿ, ಯಾವುದನ್ನೂ ಸಮಗ್ರವಾಗಿ, ಈ ರಾಜ್ಯದ ಜನತೆಗೆ ನೀಡಿಲ್ಲ.

ಮೂರು ಪಂಚವಾರ್ಷಿಕಯೋಜನೆಗಳನ್ನು ಮಾಡಿದಾಗ್ಯೂ ಕೂಡ ನಮ್ಮ ದೇಶದಲ್ಲಿ ಅನ್ನದ ಭಿಕ್ಷಾ ಪಾತ್ರೆಯನ್ನು ಇನ್ನೂ ಕೆಳಗಡೆ ಇಟ್ಟಿಲ್ಲ. ದೇಶವಿದೇಶಗಳಿಗೆ ಆಹಾರದ ಭಿಕ್ಷಾ ಪಾತ್ರೆಯನ್ನು ಹಿಡಿದು ಹೊರಟಿದ್ದಾರೆ. ಈ ಭಿಕ್ಷಾ ಪಾತ್ರೆಗೆ ನಮ್ಮ ದೇಶಕ್ಕೆ ಧನಸಹಾಯ ಸಿಕ್ಕುತ್ತದೆ. ಪಂಚವಾರ್ಷಿಕಯೋಜನೆಗಳನ್ನು ಮಾಡುವ ನೆಪದಲ್ಲಿ ದೊಡ್ಡ ದೊಡ್ಡ ಕಂಟ್ರಾಕ್ಟರುಗಳನ್ನು ನೇಮಕ ಮಾಡಿ ದೇಶದ ಅಭ್ಯುದಯವನ್ನು ಸಾಧನೆ ಮಾಡುತ್ತಿದ್ದಾರೆ. ಆಹಾರಕ್ಕೆ ಸಂಬಂಧಪಟ್ಟ ಹಾಗೆ ಈ ರಾಜ್ಯದಲ್ಲಿ 21 ವರ್ಷಗಳ ಅವಧಿಯಲ್ಲಿ ಎಷ್ಟು ಆಹಾರ ಉತ್ಪಾದನೆಯನ್ನು ಹೆಚ್ಚು ಮಾಡಿದ್ದೀರಿ? ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಎರಡು ಕೋಟಿ ವ್ಯವಸಾಯಗಾರರಿಗೆ ನೀವು ಏನೇನು ನೆರವನ್ನು ನೀಡಿದ್ದೀರಿ ಎಂಬುದನ್ನು ಪೂರ್ಣವಾಗಿ ರಾಜ್ಯಪಾಲರ ಭಾಷಣದಲ್ಲಿ ವಿವರಿಸಿಲ್ಲ. ವ್ಯವಸಾಯದ ವಿಷಯದಲ್ಲಿ ಸರ್ಕಾರದ ನೀತಿ ಏನಿದೆ ಇದು ಸರಿಯಾಗಿಲ್ಲ. ಸಮಗ್ರವಾಗಿ ಜನತೆಯ ಕಲ್ಯಾಣಕ್ಕಾಗಿ ಜನತೆಯ ಅಭ್ಯುದಯಕ್ಕಾಗಿ ದುಡಿಯತಕ್ಕ ರೈತನಿಗೆ ಸರ್ಕಾರ ಯಾವರೀತಿಯ ಸೌಲಭ್ಯಗಳನು

ಒದಗಿಸಿಕೊಟ್ಟಿದೆ? ಒಂದು ಗುಂಟೆಯೂ ಜಮೀನು ಇಲ್ಲದ, ಒಂದು ಅಂಕಣ ಮನೆಯೂ ಇಲ್ಲದೆ ಇರುವ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರಿಗೆ ನೀವು ಏನು ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದೀರಿ? ರೈತರಿಂದ ವಸೂಲು ಮಾಡಿದ ಲೆವಿಯಲ್ಲಿ ಅವರಿಗೆ ಏನಾದರೂ ಆಹಾರಧಾನವನ್ನು ಕೊಟ್ಟಿದ್ದೀರಾ? ಬಡವರಿಗೆ ಯಾವ ಆಹಾರಧಾನ್ಯವನ್ನೂ ಸರ್ಕಾರದವರು ಒದಗಿಸಿಲ್ಲ. ರೈತರಿಂದ ಲೆವಿ ವಸೂಲುಮಾಡುವ ಏತ್ತಕ್ಕೆ ಒಂದು ಕ್ವಿಂಟಾಲಿಗೆ 77 ರೂಪಾಯಿ ಧಾರಣೆಯನ್ನು ಕೊಟ್ಟು ತಂದು ಅದನ್ನು ಪೇಟೆಯಲ್ಲಿ 101 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದೀರಿ ಇದು ಯಾವ ಧರ್ಮ? ರೈತರಿಂದ ಕೊಂಡುಕೊಂಡಬಂದ ದವಸದಲ್ಲಿ 24 ರೂಪಾಯಿಗಳ ಲಾಭವನ್ನು ಸಂಪಾದನೆ ಮಾಡಿರುವುದು ಜನತಾ ಸರ್ಕಾರವೇ ನನ್ನ ಕ್ಷೇತ್ರದಲ್ಲಿ ಹೋದ ಸಾರಿ ಮೈಸೂರು ರಾಜ್ಯದಲ್ಲಿ ಪ್ರಥಮತಃ ಲೆವಿ ರೂಪದಲ್ಲಿ ಆಹಾರಧಾನ್ಯವನ್ನು ವಸೂಲು ಮಾಡಿದ್ದಾರೆ. ಅಲ್ಲಿ 49 ಗ್ರಾಮಗಳಿಗೆ ಕುಡಿಯುವುದಕ್ಕೆ ನೀರಿಲ್ಲ, ತಿನ್ನುವುದಕ್ಕೆ ಅನ್ನವಿಲ್ಲ. ತಾವು ಯಾವ ಯಾವ ಗ್ರಾಮಗಳಿಗೆ ಏನೇನು ಸೌಲಭ್ಯಗಳನ್ನು ಒದಗಿಸಿದ್ದೀರಿ? ಪಕ್ಕದ ಜಿಲ್ಲೆಗೆ 100 ಮೂಟೆ ಜೋಳವನ್ನು ಒಂದು ತಿಂಗಳಿಗೆ ಕೊಟ್ಟಿದ್ದೀರಿ. ವ್ಯವಸಾಯದ ಕೂಲಿಯನ್ನೆ ನಂಬಿಕೊಂಡಿರುವವರಿಗೆ, ಸಾಮಾನ್ಯ ಜನಗಳಿಗೆ ಸರ್ಕಾರದವರು ಏನು ನೆರವನ್ನು ನೀಡಿದ್ದೀರಿ! ತುಕೋಲ್ ವರದಿಯಿಂದ ಸರ್ಕಾರಿ ಅಧಿಕಾರಿಗಳಿಗೆ ಸುಮಾರು ಎರಡು ಲಕ್ಷ ನೀಡಿದ್ದೀರಿ? ತುಕೋಲ್ ವರದಿಯಿಂದ ಸರ್ಕಾರಿ ಅಧಿಕಾರಿಗಳಿಗೆ ಸುಮಾರು ಎರಡು ಲಕ್ಷ ಜನಗಳಿಗೆ ನೆರವು ಸಿಕ್ಕುತ್ತದೆ ಎಂದು ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ. ಆದರೆ ವ್ಯವಸಾಯವನ್ನೇ ನಂಬಿಕೊಂಡಿರುವ ವ್ಯವಸಾಯ ಕೂಲಿಗಾರರಿಗೆ, ಜನ ಸಾಮಾನ್ಯರಿಗೆ ಯಾವ ನೆರವನ್ನು ಸರ್ಕಾರದವರು ನೀಡಿದ್ದಾರೆ? ಇವರು ಕೇವಲ ಅಧಿಕಾರಿಗಳು ಮತ್ತು ಇವರ ಅನುಯಾಯಿಗಳ ಶ್ರೇಯಸ್ಸಿಗೋಸ್ಕರ ಸುಖೀ ರಾಜ್ಯವನ್ನು ನಿರ್ಮಾಣ ಮಾಡುತ್ತಿದ್ದಾರೆ. ನೀರಾವರಿ ಯೋಜನೆಯ ವಿಚಾರವನ್ನು ಹೇಳುವುದಾದರೆ ರಾಜ್ಯದಲ್ಲಿರತಕ್ಕ ಗ್ರಾಮಗಳ ಸಂಖ್ಯೆ ಏನಿದೆ ಅದರ ಪ್ರಕಾರ ಪ್ರತಿಯೊಂದು ಗ್ರಾಮಕ್ಕೂ ನಾಲ್ಕು ಎಕರೆಯ ಪ್ರಕಾರ ನೀರಾವರಿಯನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಇನ್ನೂ 25 ಲಕ್ಷ ಎಕರೆ ನೀರಾವರಿಯಾಗುತ್ತದೆ. 21 ವರ್ಷಗಳ ಕಾಂಗ್ರೆಸ್ಸಿನವರ ಆಡಳಿತದಲ್ಲಿ ಎಷ್ಟು ಲಕ್ಷ ಎಕರೆ ನೀರಾವರಿಯನ್ನು ಮಾಡಿದ್ದಾರೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿದೆಯೇ? ಸರ್ಕಾರದವರು ಯಾವ ನೀರಾವರಿ ಯೋಜನೆಯನ್ನು ಕೈಗೊಂಡು ಪೂರ್ತಿ ಮಾಡಿದ್ದಾರೆ? ಕಪಿಲಾ ಪ್ರಾಜೆಕ್ಟ್ ಅನ್ನು 1959ನೇ ಇಸವಿಯಲ್ಲಿ ನಿರ್ಮಾಣ ಮಾಡಿದರು. ಆ ಯೋಜನೆ 21 ಕೋಟಿ ರೂಪಾಯಿಗಳ ಯೋಜನೆ. ಆ ಯೋಜನೆಗೆ ಇದುವರೆಗೆ $2\frac{1}{2}$ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಕಳೆದ ವರ್ಷ 20 ಲಕ್ಷ ರೂಪಾಯಿಗಳನ್ನು ಈ ಯೋಜನೆಗೆ ಕೊಟ್ಟಿದ್ದಾರೆ. ಈ ಯೋಜನೆಯನ್ನು ಈ ವೇಗದಲ್ಲಿ ಮಾಡುವುದಾದರೆ, ಯಾವ ತಲೆಮಾರಿನ ಜನ ಇದರಿಂದ ನೀರಾವರಿ ಸೌಲಭ್ಯವನ್ನು ಪಡೆಯುತ್ತಾರೆಯೋ ಗೊತ್ತಿಲ್ಲ. ಇಂಥಾ ನೀರಾವರಿ ಯೋಜನೆಯನ್ನು ಅಳವಡಿಸಿಕೊಂಡು ಎಲ್ಲಾ ಕಾಮಗಾರಿಗಳಲ್ಲೂ ನಿಮಗೆ ಬೇಕಾದಂತಹ ಏಜೆಂಟರುಗಳನ್ನು ಇಟ್ಟುಕೊಂಡು ಈ ರೀತಿಯಲ್ಲಿ ಸುಖೀರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದೀರಿ.

ಆ ನಂತರ ಕೈಗಾರಿಕೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಮಂಡ್ಯಾದಲ್ಲಿಯರತಕ್ಕ ಅಸಿಟೇಟ್ ಕಾರ್ಖಾನೆಗೆ ಮತ್ತು ಕೆಮಿಕಲ್ ಇಂಡಸ್ಟ್ರೀಸ್‌ಗೆ ಎಷ್ಟರಮಟ್ಟಿನ ಪ್ರೋತ್ಸಾಹವನ್ನು ಸರ್ಕಾರದವರು ಕೊಡುತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿದೆ. ಮಂಡ್ಯಾದಲ್ಲಿರತಕ್ಕ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟಹಾಗೆ ಈಗ ಸುಮಾರು 10 ವರ್ಷಗಳಿಂದಲೂ ಅಲ್ಲಿ ಮೂರು ಸಾವಿರ ಟನ್ ಕಬ್ಬನ್ನು ಅರೆಯುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. 1959ನೇ ಇಸವಿಯಲ್ಲಿ ತಜ್ಞರಿಂದ ಸಲ್ಲಿಸಲ್ಪಟ್ಟಂಥ ವರದಿಯ ಆಧಾರದ ಮೇಲೆ ಸುಮಾರು 20–25 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮೂರು ಸಾವಿರ ಟನ್ ಕಬ್ಬನ್ನು ಕ್ರಷ್ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಜನರಲ್ ಬಾಡಿಯಲ್ಲಿ ಅಪ್ರೂವ್ ಮಾಡಿದರೂ ಕೂಡ ಆಡಳಿತ ಮಂಡಲಿಯವರು ಆ ವ್ಯವಸ್ಥೆಯನ್ನು ಮಾಡಿಲ್ಲ. ಕಾರ್ಖಾನೆಗೆ ಸೇರಿದ ಒಂದು ಸಾವಿರ ಎಕರೆ ಜಮೀನನ್ನು ತಮಗೆ ಬೇಕಾದವರಿಗೆ ಮಾರಾಟ ಮಾಡಿದ್ದಾರೆ. ಆ ಸಕ್ಕರೆ ಕಬ್ಬನ್ನು ಕೊಡತಕ್ಕ ರೈತರಿಗೆ ಒಂದು ಟನ್ ಕಬ್ಬಿಗೆ 100 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದರೆ ಪಾಂಡವಪುರ ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಕೊಡತಕ್ಕ ರೈತರಿಗೆ ಒಂದು ಟನ್ ಕಬ್ಬಿಗೆ 170 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಕಳೆದ 20 ವರ್ಷಗಳಿಂದ ಈ ಮಂಡ್ಯ ಸಕ್ಕರೆ ಕಾರ್ಖಾನೆಯ ಅಭ್ಯುದಯದ ಬಗ್ಗೆ ಸರ್ಕಾರದವರು ಏನು ಕೆಲಸವನ್ನು ಮಾಡಿದ್ದಾರೆ? ಈ ಸಂಬಂಧವಲ್ಲಿ ರಾಜ್ಯಕ್ಕೆ ಒಂದು ಒಳ್ಳೆಯ ಹೆಸರು ಬರಬೇಕಾದರೆ ಮಂಡ್ಯ ಸಕ್ಕರೆ ಕಾರ್ಖಾನೆಯ ಆಡಳಿತದಬಗ್ಗೆ ವಿಚಾರಣೆ ಮಾಡಲು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ನಾನು

(ಶ್ರೀ ಬಿ. ದೊಡ್ಡಬೋರೇಗೌಡ)

ಹೇಳುತ್ತೇನೆ. ಕಳೆದ ಸೆಪ್ಟೆಂಬರ್ ತಿಂಗಳ ಅಧಿವೇಶನದಲ್ಲಿ ಈ ವಿಚಾರದಲ್ಲಿ ಚರ್ಚೆ ಮಾಡಲು ಒಂದು ಗಂಟೆಯ ಕಾಲಾವಕಾಶವನ್ನು ಕೊಡಬೇಕೆಂದು ಕೇಳಿದ್ದೆನು. ಆದರೆ ಅದಕ್ಕೆ ಆಗ ಕಾಲಾವಕಾಶವನ್ನು ಕೊಡಲಿಲ್ಲ. ಆದ್ದರಿಂದ ಈ ಅಧಿವೇಶನದಲ್ಲಾದರೂ ಆ ವಿಷಯವನ್ನು ಚರ್ಚೆ ಮಾಡುವುದಕ್ಕೆ ಒಂದು ಗಂಟೆಯ ಕಾಲಾವಕಾಶವನ್ನು ಕೊಟ್ಟರೆ ಅದರಲ್ಲಿ ಏನು ಲೋಪ ದೋಷಗಳು ಆಗಿದೆ ಎನ್ನತಕ್ಕಂಥಾದ್ದನ್ನು ಹೇಳುವುದಕ್ಕೆ ನಾನು ತಯಾರಾಗಿದ್ದೇನೆ.

ಇನ್ನೊಂದು ವಿಚಾರ. ಪ್ರವಾಸೋದ್ಯಮದ ವಿಷಯದಲ್ಲಿ ನಾವು ಬಹಳ ಮುಂದೆ ಹೋಗಿದ್ದೇವೆ. ವಿದೇಶಗಳಿಂದ ನಮ್ಮ ದೇಶಕ್ಕೆ ಬರತಕ್ಕ ಪ್ರವಾಸಿಗಳಿಗೆ ಬೇಕಾದ ಸೌಲಭ್ಯಗಳನ್ನು ನಾವು ಒದಗಿಸಿಕೊಡುತ್ತಿದ್ದೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ನನ್ನ ಕ್ಷೇತ್ರವಾದ ಶ್ರೀರಂಗಪಟ್ಟಣ ಕಾವೇರಿ ನದಿಯು ಹರಿಯತಕ್ಕ ಪುಣ್ಯ ಕ್ಷೇತ್ರವಾಗಿದೆ. ಅಲ್ಲಿಗೆ ಅನೇಕ ಪ್ರವಾಸಿಗಳು ಬರುತ್ತಾರೆ. ಬಸ್ಸು ಹೋಗುವುದಕ್ಕೆ ರೋಡು ಚೆನ್ನಾಗಿಲ್ಲ. ಮಣ್ಣು ಮತ್ತು ಜಲ್ಲಿ ರೋಡು ಇದೆ. ಅದು ಬಸ್ಸುಗಳು ಹೋಗುವುದಕ್ಕೆ ಅಷ್ಟು ಅನುಕೂಲವಾಗಿಲ್ಲ. ಆ ಮೇಲೆ ಶ್ರೀರಂಗಪಟ್ಟಣಕ್ಕೆ 3 ಮೈಲಿ ದೂರದಲ್ಲಿ ಬರ್ಡ್ಸ್ ಸ್ಯಾಂಚ್ಯುಯರಿ ಇದೆ. ಅದನ್ನು ನೋಡುವುದಕ್ಕೆ ದೇಶವಿದೇಶಗಳಿಂದ ಹತ್ತಾರುಕಡೆಗಳಿಂದ ಪ್ರವಾಸಿಗಳು ಬರುತ್ತಾರೆ. ಕೆಲವು ವೇಳೆ ಪ್ರವಾಸಿಗಳು ಅಲ್ಲಿಯೇ ನಿಲ್ಲುತ್ತಾರೆ. ಆ ಪ್ರವಾಸಿಗಳಿಗೆ ಬೇಕಾದ ಸೌಲಭ್ಯಗಳನ್ನು ಸರ್ಕಾರ ದವರು ಕಲ್ಪಿಸಿಕೊಟ್ಟಿಲ್ಲ. ಪ್ರವಾಸಿಗರಿಗೆ ಸರ್ಕಾರದವರು ಕಲ್ಪಿಸಿಕೊಟ್ಟಿರತಕ್ಕ ಸೌಲಭ್ಯ ಇದು. ಕೆ. ಆರ್. ಸಾಗರ ನಿರ್ಮಾಣವಾದಾಗ ಹಿಂದೆ ಅಲ್ಲಿ ಒಂದು ಬೃಂದಾವನವನ್ನು ಮಾಡಿದ್ದಾರೆ. ಅಲ್ಲಿಯೂ ಸಹ ಜನಗಳಿಗೆ ಸರಿಯಾದ ಸೌಲಭ್ಯಗಳನ್ನು ಒದಗಿಸಿಕೊಟ್ಟಿಲ್ಲ.

ಹಾಸನ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣವನ್ನು ಮಾಡುತ್ತೇವೆಂದು ಹೇಳಿಕೊಂಡೇ ಬರುತ್ತಿದ್ದಾರೆ. ಇನ್ನೂ ಮಾಡಿಲ್ಲ. ಶ್ರೀರಂಗಪಟ್ಟಣ 300–400 ವರ್ಷಗಳಿಂದ ಪುಣ್ಯಸ್ಥಳವೆಂದು ಹೆಸರು ಪಡೆದಿದೆ. ಇಂತಹ ಪುಣ್ಯಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರದವರು ಎಷ್ಟು ಮಾಡಿದ್ದಾರೆಂದು ಕೇಳುತ್ತೇನೆ. ಕೆ. ಆರ್. ಎಸ್. ಮೈಸೂರಿಗೆ 8 ಮೈಲಿಗಳ ದೂರದಲ್ಲಿದೆ. ಈ ಸ್ಥಳಕ್ಕೆ ಪ್ರವಾಸಿಗಳು ಹೊರದೇಶದಿಂದ ಮತ್ತು ನಮ್ಮ ರಾಜ್ಯದಿಂದ ಪ್ರತಿದಿನ ಬೇಕಾದಷ್ಟು ಜನರು ಬರುತ್ತಾರೆ. ಅಲ್ಲಿ ಕೂಡ ಏನು ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದಾರೆಂದು ಕೇಳುತ್ತೇನೆ. ಇನ್ನು ಮುಂದಾದರೂ ಸರ್ಕಾರದವರು ಮುಂಜಾಗ್ರತೆ ಕ್ರಮ ತೆಗೆದುಕೊಂಡು ಶ್ರೀರಂಗಪಟ್ಟಣದಲ್ಲಿರುವ ದೇವಸ್ಥಾನಗಳನ್ನು ಕಾವೇರಿ ನದಿಯ ಸುತ್ತಮುತ್ತಲ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುತ್ತಾರೆಂದು ತಿಳಿದಿದ್ದೇನೆ.

ಇನ್ನು ನಮ್ಮ ರಾಜ್ಯಪಾಲರು ಆರೋಗ್ಯದ ಬಗ್ಗೆ ಹೇಳಿದ್ದಾರೆ. ದೊಡ್ಡ ದೊಡ್ಡ ನಗರ ಗಳಲ್ಲಿರುವ ಆಸ್ಪತ್ರೆಗಳಿಗೆ ಇನ್ನೂ 400 ಮಂಚಗಳನ್ನು ಒದಗಿಸಲಾಗುವುದು ಎಂದು ರಾಜ್ಯ ಪಾಲರು ಹೇಳಿದ್ದಾರೆ. ಕೇವಲ ನಗರಗಳಲ್ಲಿರುವ ಆಸ್ಪತ್ರೆಗಳಿಗೆ ಮಾತ್ರ ಸೌಲಭ್ಯಗಳನ್ನು ಕಲ್ಪಿಸುವುದಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ರೀತಿಯ ಸೌಲಭ್ಯವನ್ನು ಸರ್ಕಾರದವರು ಕಲ್ಪಿಸುತ್ತಾರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಶ್ರೀರಂಗಪಟ್ಟಣದ ಹತ್ತಿರವಿರುವ ಒಂದು ಗ್ರಾಮದ ಸಣ್ಣಮ್ಮ ಎಂಬುವರು ತಮ್ಮ ಗ್ರಾಮಕ್ಕೆ ಒಂದು ಆರೋಗ್ಯ ಕೇಂದ್ರ ಬೇಕೆಂದು 12 ಸಾವಿರ ರೂಪಾಯಿಗಳನ್ನು ಕಟ್ಟಿ 5 ವರ್ಷವಾಯಿತು. ಸರ್ಕಾರದವರು ಇನ್ನೂ ಕೊಟ್ಟಿಲ್ಲ. ಮಾನ್ಯ ಆರೋಗ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಕೇವಲ ನಗರಗಳಲ್ಲಿಯೇ ಆರೋಗ್ಯ ಕೇಂದ್ರಗಳನ್ನು ತೆರೆಯುವುದನ್ನು ಬಿಟ್ಟು ಪ್ರತಿಯೊಂದು ಗ್ರಾಮಗಳಲ್ಲಿಯೂ ತೆರೆಯಬೇಕು, ಮತ್ತು ಪ್ರತಿಯೊಬ್ಬ ಮನುಷ್ಯನಿಗೂ ಇದರ ಸೌಲಭ್ಯ ಸಿಗುವಂತೆ ಏರ್ಪಾಡು ಮಾಡಬೇಕು. ಈ ಒಂದು ನೀತಿಯನ್ನು ಮಹಾತ್ಮಗಾಂಧಿಯವರು ಹೇಳಿದ್ದರೂ ಸಹ, ಸರ್ಕಾರದವರು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೇವಲ ಪಟ್ಟಣಗಳಲ್ಲಿ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದಾರೆ. ಇದನ್ನು ನಾನು ವಿರೋಧಿಸುತ್ತೇನೆ. ದಿನಬಳಕೆ ಪದಾರ್ಥಗಳನ್ನು ಪಟ್ಟಣಗಳಲ್ಲಿ ಎಲ್ಲರಿಗೂ ಸಿಗುವಂತೆ ಯಾವ ರೀತಿ ಸರ್ಕಾರದವರು ಏರ್ಪಾಡು ಮಾಡಿದ್ದಾರೋ, ಅದೇ ರೀತಿಯಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ, ಒಂದೊಂದು ಗ್ರಾಮಪಂಚಾಯಿತಿಗೂ ಒಂದೊಂದು ಮೈನರ್ ಹೆಲ್ತ್ ಯೂನಿಟ್ಟನ್ನು ಮಂಜೂರುಮಾಡಿ, ಸಾಯುವಂತಹ ಮನುಷ್ಯರಿಗೆ ಔಷಧ ಸಿಗುವಂತೆ ಏರ್ಪಾಡು ಮಾಡಬೇಕು. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಯಾವ ಒಂದು ಅಭಿನಂದನಾ ನಿರ್ಣಯವನ್ನು ಚರ್ಚೆ ಮಾಡತಕ್ಕಂಥ ಕಾಲದಲ್ಲಿ, ಆ ಒಂದು ನಿರ್ಣಯವನ್ನು ನಾನು ಸ್ವಾಗತಿಸುತ್ತಾ, ಒಂದು-ಎರಡು—ಮೂರು ಪ್ರಶ್ನೆಗಳಿಗೆ ಮಾತ್ರ ನನ್ನ ಮಾತನ್ನು ಸ್ಥಿಮಿತಗೊಳಿಸಿಕೊಂಡು ಹೇಳುತ್ತೇನೆ. ಮೊದಲನೆಯದಾಗಿ ರಾಜ್ಯಪಾಲರು ಚುನಾವಣೆಯ ಬಗ್ಗೆ ಹೇಳಿದ್ದಾರೆ. ಯಾವ ರೀತಿ ಚುನಾವಣೆಯಾಯಿತು ಎಂಬ ಬಗ್ಗೆ ರಾಜ್ಯಪಾಲರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ವಿಚಾರದಲ್ಲಿ ಶ್ರೀಮತಿ ನಾಗರತ್ನಮ್ಮನವರು ಮಾತನಾಡಿದ್ದಾರೆ. ಚುನಾವಣೆ ವಿಚಾರದಲ್ಲಿ ಅವರು ಯಾವ ಅಭಿಪ್ರಾಯವನ್ನು ವ್ಯಕ್ತಪಡಿಸಿದರೋ ಅದೇ ಅಭಿಪ್ರಾಯವನ್ನು ನಾನೂ ಸಹ ಉಳ್ಳವನಾಗಿದ್ದೇನೆ. ಇದರ ಜೊತೆಗೆ ನಾನಾದರೂ ಹೇಳುತ್ತೇನೆ, ಯಾವ ಒಂದು ಸ್ವಾತಂತ್ರ್ಯ ಬಂದಮೇಲೆ, ಪಂಚಾಯತ್ ರಾಜ್ಯ ಬಂದಮೇಲೆ ಎಷ್ಟರಮಟ್ಟಿಗೆ ಹಿಂದುಳಿದ ವರ್ಗದವರ ಹಿತಸಾಧನೆಯಾಗುತ್ತಿದೆ ಎಂಬುದನ್ನು ನೋಡುವುದಾದರೆ, ಪ್ರತಿದಿವಸ ಈ ಜನಾಂಗದವರಿಗೆ ಆಗುತ್ತಿರುವ ಕಿರುಕುಳ, ಅಪಮಾನ, ಅಸ್ಪೃಶ್ಯತೆಯ ಕಳಂಕ ಮುಂತಾದುವನ್ನು ನೋಡಿದರೆ ಏಕೆ ಬಂತು ಈ ಪಂಚಾಯತ್ ರಾಜ ಎಂದು ಕೇಳುತ್ತೇನೆ. ಡಾಕ್ಟರ್ ಅಂಬೇಡ್ಕರ್ ಅವರು ಒಂದು ಮಾತನ್ನು ಹೇಳಿದ್ದಾರೆ,

"Village in India has not contributed to the prosperity of the country in the past. It has led to localization and communalism. Therefore, I am not in favour of this directive principle of the State policy."

ಪಂಚಾಯತ್ ರಾಜ್ಯವೇ ಬೇಡ ಎಂದು ಅವರು ಹೇಳಿದರು. ಇವತ್ತಿನದಿವಸ ಎಲ್ಲೆಲ್ಲೂ ಕುಲ ಪಕ್ಷಪಾತ, ಜಾತಿ ಪಕ್ಷಪಾತ ಎಂಬುದು ತಾಂಡವವಾಡುತ್ತಿದೆ. ಎಂಬುದನ್ನು ನಾವು ನೋಡಬಹುದಾಗಿದೆ. ಪಂಚಾಯಿತಿಯವರು ಹರಿಜನರು ವಾಸಮಾಡತಕ್ಕಂಥ ಪ್ರದೇಶಗಳಲ್ಲಿ ಯಾವ ಒಂದು ಕೆಲಸವನ್ನೂ ಮಾಡಿಸುತ್ತಿಲ್ಲ.

"The requisite facilities like drainage facilities, etc., have not been undertaken to this Harijan locality."

ಇವರ ಹಿತಸಾಧನೆ ಎಷ್ಟರಮಟ್ಟಿಗೆ ಆಗುತ್ತಿದೆ ಎಂಬ ಬಗ್ಗೆ ಹೇಳುತ್ತೇನೆ. ಈ ವರ್ಷ ಗಾಂಧಿ ಶತಾಬ್ದಿಯನ್ನು ಆಚರಿಸಲಾಗುವುದೆಂದು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಆದರೆ ಸರ್ಕಾರದವರು ನಮ್ಮ ರಾಜ್ಯದಲ್ಲಿ ಪಾನನಿರೋಧವನ್ನು ರದ್ದು ಮಾಡಿದ್ದಾರೆ. ಮದ್ರಾಸ್ ರಾಜ್ಯ ಒಂದು ಬಿಟ್ಟು ಉಳಿದ ರಾಜ್ಯಗಳಲ್ಲಿ ಗಾಂಧಿ ಶತಾಬ್ದಿಯನ್ನು ಆಚರಿಸುವ ನೈತಿಕ ಹಕ್ಕು ಇಲ್ಲ ಎಂದು ಈ ಸಂದರ್ಭದಲ್ಲಿ ನಾನು ಕಾಂಗ್ರೆಸ್ ಸರ್ಕಾರಗಳಿಗೆ ಹೇಳುತ್ತಿದ್ದೇನೆ. ಇಡೀ ವಿಶ್ವದಲ್ಲಿಯೇ ಈ ವರ್ಷ ಗಾಂಧಿ ಶತಾಬ್ದಿಯನ್ನು ಆಚರಿಸಲು ಸಿದ್ಧತೆಗಳಾಗುತ್ತಿವೆ. ನಮ್ಮ ರಾಜ್ಯದಲ್ಲಿ ಮಾತ್ರ ಮಹಾತ್ಮಗಾಂಧಿ ಮತ್ತು ನಿಜಲಿಂಗಪ್ಪನವರ ಫೋಟೋಗಳಿಗೆ ಹೆಂಡದ ಅಭಿಷೇಕವಾಗುತ್ತಿದೆ. ನತದೃಷ್ಟರಾದ ಹರಿಜನರ ನಿತ್ಯ ಜೀವನವನ್ನು ನೋಡಿದಾಗ, 15-20 ವರ್ಷಗಳ ಹಿಂದೆ ಇವರ ಸ್ಥಿತಿ ಯಾವ ರೀತಿ ಇತ್ತೋ, ಇವತ್ತಿನದಿವಸ ಆ ಸ್ಥಿತಿಯಲ್ಲಿ ಇಲ್ಲ ಎಂಬುದನ್ನು ನೋಡಿದರೆ ನಮ್ಮ ಕಣ್ಣಲ್ಲಿ ನೀರು ಬರುವುದಿಲ್ಲ, ರಕ್ತ ಬರುತ್ತದೆ. ಮೊನ್ನೆ ಕೊಳ್ಳೆಗಾಲದಲ್ಲಿ ಪಾನನಿರೋಧವನ್ನು ರದ್ದು ಮಾಡಿದರು. ಇವತ್ತಿನದಿವಸ ಅಲ್ಲಿಯ ಹರಿಜನರು ತಮ್ಮ ಮನೆಯ ಹಂಚನ್ನು ಮಾರಿ ಹೆಂಡ ಕುಡಿಯುತ್ತಿದ್ದಾರೆ. ಮನೆಯಲ್ಲಿರುವ ಸೀರೆಗಳಿಗೆ ಬಣ್ಣ ಹಾಕಿಸಿ ಮಾರಿ ಬಂದ ಹಣದಿಂದ ಹೆಂಡ ಕುಡಿಯುತ್ತಿದ್ದಾರೆ. ಇನ್ನು ನೂರು ಜನ ಗಾಂಧಿಜೀಯವರಂಥವರು, ನೂರು ಜನ ಅಂಬೇಡ್ಕರ್ ಅಂತಹವರು ಹುಟ್ಟಿದರೂ ಸಹ ಈ ಹರಿಜನರನ್ನು ಮೊದಲಿನ ಸ್ಥಿತಿಗೆ ತರುವುದಕ್ಕಾಗುವುದಿಲ್ಲ. 1957ರಲ್ಲಿ ಈ ಸಭೆಗೆ ಆರಿಸಿ ಬಂದಾಗ, ಬಿದರ್, ಗುಲ್ಬರ್ಗ, ಹೈದರಾಬಾದ್ ಕರ್ನಾಟಕ ಮುಂತಾದ ಕಡೆಗಳಿಗೆ ಹೋಗಿದ್ದೆ. ಅಲ್ಲಿ ಹರಿಜನರ ಸ್ಥಿತಿ ಯಾವ ರೀತಿಯಲ್ಲಿ ಇದೆಯೆಂದರೆ, ಸಪ್ತ ನರಕಗಳು ಎಂದು ಹೇಳಬಹುದು. ಅಲ್ಲಿ ವಾಸಮಾಡುತ್ತಿರುವವರು ಮನುಷ್ಯರೇ ಅಲ್ಲ. ಇವತ್ತಿಗೂ ಸತ್ತ ದನಗಳನ್ನು ಹೊರಬೇಕು. ಅವರಿಗೆ ಯಾವ ರೀತಿಯ ಸ್ವಾತಂತ್ರ್ಯ ಎಂಬುದೇ ಇಲ್ಲ. ಬೇರೆ ಜಾತಿಯವರನ್ನು ಸ್ವಾಮಿ, ಬುದ್ಧಿ, ಅಪ್ಪಾ ಎಂದು ಹೇಳಿಕೊಂಡು ಇರಬೇಕು. ಇವರುಗಳ ಸ್ಥಿತಿ ಚಿಂತಾಜನಕವಾಗಿದೆಯೆಂದು ನಾನಾದರೂ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಚತುರ್ವರ್ಣದಲ್ಲಿ ನನಗೆ ನಂಬಿಕೆ ಇಲ್ಲ. ಒಂದು ವಿಚಾರ ಹೇಳಬೇಕೆಂದರೆ ನನಗೆ ಬೆಂಗಳೂರಿನಲ್ಲಿ ಒಂದು ಮನೆ ಎರಡು ವರ್ಷ ಹುಡುಕಿದರೂ ಸಹ ಸಿಗಲಿಲ್ಲ. ಅಂದಮೇಲೆ ಬೆಂಗಳೂರಿನಲ್ಲಿಯೂ ಅಸ್ಪೃಶ್ಯತೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನೋಡಬಹುದು.

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಈಗ ನನಗೆ ಕಂಟೋನ್ಮೆಂಟ್‌ನಲ್ಲಿ ಮನೆ ಸಿಕ್ಕಿದೆ. ಬಹಳ ಸಂತೋಷದಿಂದ ಇದ್ದೇನೆ. ಏಕೆಂದರೆ ನನ್ನ ಸುತ್ತ ಮುತ್ತ ವಾಸ ಮಾಡುವ ಜನರೆಂದರೆ ಕ್ರಿಶ್ಚಿಯನರು, ಮುಸ್ಲಿಮರು, ಪಾರ್ಸಿಗಳು, ಆಂಗ್ಲೋ ಇಂಡಿಯನರು. ಇವರು ಮೈನಾರಿಟಿ ಕಮ್ಯುನಿಟಿಗೆ ಸೇರಿದವರು. ಇವರಿಗೆ ಜಾತಿಭೇದವಿಲ್ಲ. ಎಲ್ಲಿಯವರೆಗೆ ಪಾನನಿರೋಧ ಜಾರಿಗೆ ಬರುವುದಿಲ್ಲವೋ ಅಲ್ಲಿಯವರೆಗೆ ಹರಿಜನರ ಕಲ್ಯಾಣವಾಗುವುದಿಲ್ಲ.

> "Throughout the length and breadth of the Indian Union, no Brahmin leader is for scrapping probibition ; it is only the Shudra leaders who are bent upon scrapping prohibition."

ಇವತ್ತಿನದಿವಸ ಹರಿಜನರು ಸಾಯಬೇಕೆಂದು ಪಾನನಿರೋಧವನ್ನು ರದ್ದು ಮಾಡಿದ್ದಾರೆ. ಮುಖ್ಯ ಮಂತ್ರಿಗಳ ಒತ್ತಾಯಕ್ಕೆ ಮಣಿದು ಶ್ರೀ ರಾಮಕೃಷ್ಣ ಹೆಗಡೆಯವರು ಪಾನ ನಿರೋಧವನ್ನು ರದ್ದು ಮಾಡಿದರು. ನಾನಾದರೂ ಇದನ್ನು ಸುಮಾರು ಏಳು ವರ್ಷದಿಂದಲೂ ಹೇಳುತ್ತಲೇ ಇದ್ದೇನೆ. ಎಷ್ಟರಮಟ್ಟಿಗೆ ಇದು ಕಾರ್ಯಗತವಾಗುತ್ತದೆ ಎನ್ನುವುದನ್ನು ನಾವು ನೋಡೋಣ.

5–00 P.M.

ಇನ್ನೊಂದು ಪ್ರಮುಖವಾದ ವಿಷಯವನ್ನು ಈ ಸಂದರ್ಭದಲ್ಲಿ ಚರ್ಚೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅಸ್ಪೃಶ್ಯತೆ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಒಂದು ಪಾರ್ಲಿಮೆಂಟರಿ ಕಮಿಟಿ ಬಂದಿತ್ತು. ಇದರಲ್ಲಿ ಅಸ್ಪೃಶ್ಯರಲ್ಲದ ಹಾಗೂ ಅಸ್ಪೃಶ್ಯರು ಎನ್ನುವ ಎಲ್ಲ ಜನರೂ ಹೋಗಿ ಈ ಕಮಿಟಿ ಮುಂದೆ ಅವರ ವಿಚಾರಗಳನ್ನು ತಿಳಿಸಿದರು ನಾವೂ ಕೂಡ ಅವರ ಮುಂದೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾಯಿತು. ಇದರಲ್ಲಿ ಕಾಂಗ್ರೆಸ್ಸು ಮುಖಂಡರೆಲ್ಲರೂ ಆಸಕ್ತಿ ವಹಿಸಿದ್ದರು. ಅಸ್ಪೃಶ್ಯರು ಹಾಗೂ ಅಸ್ಪೃಶ್ಯರು ಎಂದು ಯಾರೂ ಇಲ್ಲ. ಅಸ್ಪೃಶ್ಯತೆ ಎನ್ನುವುದು ಹಿಂದಿನ ಮಹಾರಾಜರ ಕಾಲದಿಂದಲೂ ಇದೆ, ಹರಿಜನರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ ಎಂದು ಇತ್ತು. ಈಗ ಹರಿಜನರು ಎನ್ನುವವರನ್ನು ಲಿಸ್ಟ್‌ನಿಂದ ತೆಗೆದುಹಾಕಬೇಕು ಎಂದು ನಮ್ಮ ಮುಖಂಡರುಗಳು ಅನೇಕರು ತೀರ್ಮಾನ ತೆಗೆದುಕೊಂಡರು ಎಂದು ತಿಳಿದುಬಂದಿದೆ. ನಮ್ಮ ಮಾನ್ಯ ಸದಸ್ಯರಾದ ಶ್ರೀ ನಿಜಲಿಂಗಪ್ಪನವರು ಹಿಂದೆ ಎ.ಐ.ಸಿ.ಸಿ. ಸದಸ್ಯರಾಗಿ, ಸರಕಾರದ ಮುಖಂಡರಾಗಿದ್ದಾಗ, ಒಂದು ತೀರ್ಮಾನ ತೆಗೆದುಕೊಂಡರು. ಇದರ ಪ್ರಕಾರ ಷೆಡ್ಯೂಲು ಟ್ರೈಬ್ಸ್ ಹಾಗೂ ಬೋವಿ ಇತ್ಯಾದಿ ವರ್ಗಗಳನ್ನು ಪಟ್ಟಿಗಳಲ್ಲಿ ಸೇರಿಸಬೇಕು ಎಂದು ಹೇಳಿದ್ದರೂ ಕೂಡ, ಅದನ್ನು ಮಾಡಲಿಲ್ಲ, ಇದರ ಬಗ್ಗೆ ಮಾನ್ಯ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಾಗಪ್ಪ ಆಳ್ವರವರೂ ಕೂಡ ಆಸಕ್ತಿ ವಹಿಸಿದ್ದರು. ಹೀಗೆ ನೂರಾರು ತೀರ್ಮಾನಗಳನ್ನು ಕೈಗೊಂಡರು. Have you implemented the decisions ? Nothing has been done so far. Do you call this democracy ? The democratic principles are burried. The dream of Mahathmaji has not been fulfilled. ಆದರೂ ಸತ್ಯಾಂಶ ಏನು ಎನ್ನುವುದು ಗೊತ್ತಾಗುತ್ತದೆ. ಅಸತ್ಯವನ್ನು ಎಂದೂ ಉಳಿಸುವುದಕ್ಕೆ ಸಾಧ್ಯವಿಲ್ಲ. ನಾವು ನಮ್ಮ ಹರಿಜನರಲ್ಲಿ ಇಬ್ಬರು ಪ್ರಭಾವವುಳ್ಳವರನ್ನು ಮಂತ್ರಿ ಮಂಡಲದಲ್ಲಿ ಸೇರಿಸಬೇಕೆಂದು ಹೇಳಿದ್ದೆವು. ಅದೇ ರೀತಿ ನಮ್ಮ ಕ್ಯಾಬಿನೆಟ್‌ನಲ್ಲಿ ಶ್ರೀಮಾನ್ ಬಸಪ್ಪಣ್ಣಪ್ಪನವರನ್ನು ಹಾಗೂ ಶ್ರೀಮಾನ್ ರಾಚಯ್ಯನವರನ್ನು ಮಂತ್ರಿ ಮಂಡಲದಲ್ಲಿ ತೆಗೆದುಕೊಂಡಿದ್ದಾರೆ. ಹಾಗಿದ್ದರೂ ಇದರ ಬಗ್ಗೆ ಅವರು ಏನೂ ತೀರ್ಮಾನ ತೆಗೆದುಕೊಂಡಿಲ್ಲ. That is why we want to have best men in our cabinet. We should have effective representatives in the Cabinet. They cannot be effective representatives because you don't want to be effective. In the light of the Constitution, weaker section of the Society should be effectively safeguared. ಇಂದು ಈ ಸಭೆಗೆ ಬರುವುದಕ್ಕೆ ಮುನ್ನ ಇಂದು ಬೆಳಗ್ಗೆ ಮಾನ್ಯ ಸ್ನೇಹಿತರಾದ ಶ್ರೀಮಾನ್ ಕಂಠಿಯವರ ಜೊತೆಯಲ್ಲಿ ರೈಟ್ ಆಫ್ ಡಿಫೆಕ್ಷನ್ ಬಗ್ಗೆ ಚರ್ಚೆ ಮಾಡುತ್ತಲಿದ್ದೆ. ನಾನಾದರೂ ಹೇಳುವುದು ಕಾಂಗ್ರೆಸ್ಸಿನಂತಹ ಸಂಸ್ಥೆ ಸರಿಯಾಗಿ ಕೆಲಸ ಮಾಡದೆ ಇವೊತ್ತು ದೊಡ್ಡದಾಗಿ ಗಾಂಧಿಯವರ ಶತಮಾನೋತ್ಸವ ಆಚರಿಸುತ್ತೇವೆ ಎಂದು ಹೇಳುತ್ತಿದ್ದಾರೆ. ನಮ್ಮ ಮಂತ್ರಿಮಂಡಲದಲ್ಲಿರುವ ಜನರು ಜನತೆಯ ಸ್ನೇಹಿತರಾಗಿರುವುದರಿಂದ ಇದರ ಬಗ್ಗೆ ಸರಿಯಾಗಿ

ಗಮನ ಕೊಡಬೇಕು. ಹಿಂದೆ ನಮ್ಮ ಜನರ ಮುಖಂಡರಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಇದರ ಬಗ್ಗೆ ಏನೂ ಮಾಡಲಿಲ್ಲ. ಇಂದು ಕಾಂಗ್ರೆಸ್ಸು ಜನತೆಯ ಪರವಾಗಿ ಯುವಕರಾಗಿರುವ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರವರಿಗೆ ನಾನು ಹೇಳುವುದು ಇಷ್ಟೇ. ಅವರು ಒಂದು ಅನುಭವ ಮಂಟಪ ಮಾಡಲಿ, ಹಿಂದೆ ಬಸವಣ್ಣನವರು ಒಂದು ಅನುಭವ ಮಂಟಪ ಮಾಡಿದ್ದರು. ಅವರು ಆಗ ಮಾದಿಗರ ಹರಳಯ್ಯನ ಮಗನಿಗೆ ಬಿಜ್ಜಳನ ಆಸ್ಥಾನದಲ್ಲಿದ್ದ ಮಧುವರಸನ ಮಗಳನ್ನು ತಂದು ಮದುವೆ ಮಾಡಿಸಿದರು. ಹೀಗೆ ಅವರೂ ಬೇಕಾದರೆ ಮಾಡಲಿ ಅಥವಾ ಬೇರೆ ಯಾವ ದೃಷ್ಟಿಯಿಂದಲಾದರೂ ಮಾಡಲಿ. ನಾನು ಹೇಳುವುದು ಇಷ್ಟೇ. ನಾವು ಒಂದು ಮೆಮೊರ್ಯಾಂಡಂ ಕೊಟ್ಟಾಗ ಮಂತ್ರಿಮಂಡಲದವರು ಡೆವಲಪ್‌ಮೆಂಟು ಶಾಖೆಯ ಕಾರ್ಯದರ್ಶಿಗಳಾದ ಶ್ರೀಮಾನ್ ಡಿ. ವಿ. ಕೆ. ರಾಯರನ್ನು ಕರಿಸಿ ಅವರಿಗೆ ಇದು ನಮ್ಮ ಅಭಿಪ್ರಾಯ ಎಂದು ತಿಳಿಸಲಿ. ಆ ರೀತಿ ಕಾಂಗ್ರೆಸ್ಸು ಸರಕಾರ ಏನಾದರೂ ಮಾಡಿದೆಯೋ ಎಂದು ಕೇಳಬೇಕಾಗಿದೆ. ಇದರಲ್ಲೇನೂ ರಾಜಕೀಯ ಇಲ್ಲ. ಈಚೆಗೆ ನಿಮಗೆಲ್ಲಾ ಗೊತ್ತಿರುವ ಹಾಗೆ ತಂಜಾವೂರು ಜಿಲ್ಲೆಯಲ್ಲಿ ಸುಮಾರು 43 ಜನರನ್ನು ಸಜೀವವಾಗಿ ಸುಟ್ಟರು ಎಂದು ಗೊತ್ತಿದೆ. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡರೇ ? ಹಾಗೆ ಇಂದು ಅಮೆರಿಕಾದಲ್ಲಿ ನೀಗ್ರೋಗಳು ಅವರ ಹಕ್ಕುಬಾಧ್ಯತೆಗಳಿಗಾಗಿ ಹೊಡೆದಾಡುತ್ತಿದ್ದಾರೆ. ಆದುದರಿಂದ ನಮ್ಮ ಮುಖಂಡರುಗಳಿಗೆ ಹೇಳುವುದು ಇದರಲ್ಲಿ ಸ್ಪೃಶ್ಯರು ಹಾಗೂ ಅಸ್ಪೃಶ್ಯರು ಎನ್ನುವುದನ್ನು ತರಲು ಹೋಗಬೇಡಿ. ಇದರಲ್ಲಿ ನಿಮ್ಮ ಜವಾಬುದಾರಿ ಸಂಪೂರ್ಣವಾಗಿ ಬಿದ್ದಿದೆ. ಜಾತೀಯತೆ ಎನ್ನುವುದು ಎಲ್ಲೆಲ್ಲಿಯೂ ಇದೆ. ಹಿಂದೆ ನಾವು ಮಿಡಲ್ ಸ್ಕೂಲಿನಲ್ಲಿ ಒಂದು ಪಾಠ ಓದಿದ್ದೆವು ಅದು ಇಲ್ಲಿ ಈಗ ನೆನಪಿಗೆ ಬರುತ್ತದೆ. ಅದು ಪುಸ್ಸಿಕ್ಯಾಟ್ ಎನ್ನುವ ಪಾಠ. ಇದರಲ್ಲಿ ಬೆಕ್ಕೇ ಬೆಕ್ಕೇ ಎಲ್ಲಿಂದ ಬಂದೆ ಏನು ಮಾಡುತ್ತಿದ್ದೀಯೆ? ಏತಕ್ಕೆ ಬಂದೆ ಎಂದು ಕೇಳಿದಾಗ ಅದು ನಾನು ಬೆಟ್ಟದ ಬುಡದಿಂದ ಇಲಿ ತೆಗೆದುಕೊಂಡು ಬರಲು ಬಂದೆ ಎನ್ನುವಂತೆ ಆಗಿದೆ ಇಂದು ನಡೆಯುತ್ತಿರುವ ವಿಚಾರಗಳು. ಇವೊತ್ತು ಒಂದು ಸಿಂಹಾಸನದಲ್ಲಿ ಕುಳಿತಿರಬಹುದು ಆದರೆ ಜನತೆಗೆ ಅನುಕೂಲವಾಗುವಂತಹ ಯಾವ ಕಾರ್ಯ ತಾನೆ ಮಾಡುತ್ತಿದ್ದೀರಿ ಎಂದು ಕೇಳಬೇಕಾಗಿದೆ. Therefore the report is only a mechanical report. Nothing has been implemented. The economic conditions of the poorer sections of the people remains the same or even worse. Everywhere there is the domination of richer class. ನಮ್ಮ ಮಂತ್ರಿಮಂಡಲದಲ್ಲಿ ನಮ್ಮ ಜನಾಂಗಕ್ಕೆ ಸರಿಯಾದ ಪ್ರಾತಿನಿಧ್ಯ ಕೊಡುತ್ತಿಲ್ಲ. ಸುಮ್ಮನೆ ಹೊಗಳಿಕೆಗಾಗಿ ಇಲ್ಲಿ ಹೇಳುತ್ತಾರೆ. ನಾವೇನೋ ಮೈನಾರಿಟಿಯಲ್ಲಿರಬಹುದು, ಇಲ್ಲಿ ನೀವು ಪೊಲಿಟಿಕಲ್ ಮೆಜಾರಿಟಿ ಇರಬಹುದು. ಇದು ಬ್ರೇಕ್ ಆದರೆ ಖಂಡಿತ ಕಾಂಗ್ರೆಸ್ ಪಕ್ಷ ಉಳಿಯುವುದಿಲ್ಲ. ಇಂತಹ ತುರ್ತು ಸಮಯದಲ್ಲಿ ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳಲಿ ಎಂದು ಹೇಳಿ ಕಾಂಗ್ರೆಸ್ಸಿಗೂ ಮುಖ್ಯ ಮಂತ್ರಿಗಳು ಒಳ್ಳೆಯ ಬಾಂಧವ್ಯ ಬೆಳೆಯಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಜೈಹಿಂದ್.

†Sri G. AMARE GOWDA (Sindhnoor).—Mr. Deputy Speaker Sir, much has been spoken by the Hon'ble Members on both sides on the Governor's address. It can be called only as a report of the Government. The Governor's address contains nothing fresh, but only a catalogue of past events. His Excellancy the Governor has spoken much on the Taluk Board elections. The Members of the Ruling party on the other side have spoken much on that subject. Some of them contradicted the statements of their own party members. The question is whether there were democratic elections at all. There were none. Just on the eve of the elections, there was a boon in the name of scarcity relief works which played a very important part in giving majority to the Congress party in the Local Boards Elections and other elections. They have totally burried democracy. Democracy cannot survive in the hands of these people.

They have spoken much to implement the Land Reforms Act by the Panchayat Boards and Taluk Boards etc. All the key jobs are in the hands of rich people who are in Congress. All the loans granted

(SRI G. AMARE GOWDA)

to these Democratic Institutions go to these people. Can we expect the Land Reforms to be implemented by these people? We cannot. The Governor has clearly stated that the Government has determined to build a socialistic pattern of society. What kind of society they are going to build, I do not know. We have passed 25 years. They have done nothing. The father of the Nation Mahathmaji gave up his life thinking that these people will cherish his ideals. Have they done it? Casteism and favouritism are dominating everywhere. The aspiration of Mahathmaji that caste and creed should be rooted out is not yet fulfilled. It is becoming worse day by day. As long as exploitation exists and as long as economic ills exist, this connot be achieved. The poor people cannot get out of the clutches of the rich, and there connot be equality at all. When there is no equality there will not be domocracy at all. As long as illtereacy and unemoployment exist, the economic development will not be there. Have they attended to all these anomalies? No. Their programmes are all in paper. Nothing has been done in a perfect manner.

I take up agriculture Food Supplies and Co-operation. Agriculture requires the agriculturists to be contented. To keep them contented, they should be supplied with what they require. They require water supply whether it is natural or artificial, fertilizers good seeds, etc. Have they provided them with these facilities? They go on saying that agriculture needs mechanization. I want to know whether it has been actually mechanized. Even in regard to the sanctioning of loans, there is discrmination between the rich and the poor. An amount of Rs. 1.40 crores is advanced to the weaker section of the Society but whereas Rs. 25 crores have been advanced to the richer class. Is there any comparison? The richer class will have all the advantages of getting fertilizers, tractors and all that. This is just because all the Co-operatives are in their hands. Justice cannot be expected at the doors of the Co-operatives. When this is the position, the Government is boasting about the co-operative movement. As long as these improvements are not brought about, there will be no salvation at all to the poorer section of the people. There is blackmarketing in the Co-operative Societies and corruption is rampant. They have talked about levy system. We must consider what is the difference between the market rate and the levy price. If a ryot sells his produce in the open market, he gets only Rs. 70 to 80, whereas he gets only Rs. 55 from Government as levy price. Is there any justice? As long as agriculture is in a deteriorating condition, the economic condition of the agriculturists will not be solved. The poor man cannot get water to his land which is at the tail end. Many complaints have been lodged. But no action has been taken so far. No step has been taken to supply water to the tail end. But they demand pady and land revenue and all that. This is the Kind of justice being done to the agriculturists.

There is another aspect which I want to touch upon. The third Five year Plan was prepared at an estimated cost of Rs. 318.5 crores for major irrigation out of which only adout Rs. 25.65 crores have been spent. When that is the position, how can we expect the Government to complete the programme? As long as the major irrigation works are not completed, you cannot achieve your goal. On the other hand the Minor Irrigation schemes have not been tackled adequately. This is a very importent aspect in the development of agriculture. If the Minor irrigation works are taken up and executed properly and consciously, they may yield more results than mojor Irrigation. Mojor Irrigation works take long time as compared to the minor irrigation works.

Regarding establishment of industries, the Government always expects the capitalists to establish industries. Take for example Gangavathi Sugar Factory. A capitalist is being induced to take over sugar factory. There is another foctory at Kampli and another factory at Hospet. These foctories should be run in the interests of agriculturists who grow sugar cane sufficiently to feed these factories. If these factories are in the hands of capitalists, the agriculturists will have to suffer.

I have nothing to say regarding law and order. My friends on the opposition side have spoken. Day-time robberies and high-way robberies are on the increase. When a thief finds himself incapable of breaking a lock, finds it good to rob on the highway because he finds there no law and order. We can say in that respect he has made a progress. If there was strict law and order such a thing cannot exist.

More significant thing is, in the Governor's Address there is no reference to unemployment and corruption. In the previous years we found some reference about corruption and unemployment and how it has to be solved. Our universities are celebrating at high cost–Ceremonies for conferment of degrees. It is not known whether these are ceremonies for awarding degrees or ceremonies for unemployed persons. If they cannot solve unemployment problem, no progress can be made in any way.

[Mr. SPEAKER in the Chair]

The whole Address of His Excellency the Governor is vague and unrealistic. For achieving a socialistic pattern of society, what is this Government going to do? So far as agriculturists are concerned, it is completely vague. What is the past failure and what action they are going to take in future, are not mentioned. The Address lacks all programmes and ideals and without mention of any policy, how can they be expected to achieve anything? It appears this Government is groping in the dark and can achieve nothing.

Regarding labour and employer relations, the only thing they have done is to introduce one more INTUC union sometimes to disrupt the relations between the employer and employees.

(SRI G. AMARE GOWDA)

On the whole the Governor's Address contains nothing but catalogue of past events.

I thank the Chair for giving me this opportunity.

†ಶ್ರೀ ಎಸ್. ಎಚ್. ಬಸಣ್ಣ (ಮೊಳಕಾಲ್ಮೂರು).—ಸ್ವಾಮಿ, ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆಯನ್ನು ಸಲ್ಲಿಸಲು ಶ್ರೀಮಾನ್ ಸಿದ್ದಯ್ಯನವರು ಸೂಚಿಸಿರುವ ನಿರ್ಣಯವನ್ನು ನಾನು ಅನುಮೋದಿಸುತ್ತ ಒಂದೆರಡು ಮಾತುಗಳನ್ನು ಆಡಲು ಅಪೇಕ್ಷಿಸುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ವಿದ್ಯುಚ್ಛಕ್ತಿ ವಿಷಯವಾಗಿ ಹೇಳಿರುವುದರ ಬಗ್ಗೆ ಮೊದಲು ಪ್ರಸ್ತಾಪ ಮಾಡುತ್ತೇನೆ. ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿ ವಿಶೇಷವಾಗಿ ದೊರೆಯುತ್ತದೆ. ಆದರೆ ರೈತರಿಗೆ ಸುಲಭ ದರದಲ್ಲಿ ಸಿಕ್ಕುತ್ತಿಲ್ಲ. ಪರ ರಾಜ್ಯಗಳಿಗೆ ನಮ್ಮ ಸರ್ಕಾರ ಕಡಮೆ ದರದಲ್ಲಿ ವಿದ್ಯುತ್ತನ್ನು ಕೊಟ್ಟು ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಉಪಯೋಗಿಸತಕ್ಕ ರೈತನಿಗೆ ಹೆಚ್ಚಿನ ದರದಲ್ಲಿ ಕೊಡುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಪಕ್ಕದಲ್ಲಿರುವ ಮದ್ರಾಸ್ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಒಂದು ಯೂನಿಟ್‌ಗೆ ಐದು ಪೈಸೆಯಂತೆ ಕೊಟ್ಟು ಇಲ್ಲಿನ ರೈತರಿಗೆ 11 ಪೈಸೆಯಂತೆ ವಿಧಿಸಿ ವಸೂಲ್ಮಾಡುತ್ತಿರುವುದು ಬಹಳ ಅನ್ಯಾಯ. ಇದರಿಂದ ರೈತರಿಗೆ ತುಂಬ ತೊಂದರೆಯಾಗುತ್ತಿದೆ ಎಂದು ಹೇಳಲು ಬಯಸುತ್ತೇನೆ.

ವಾಟರ್ ರೇಟ್ ವಿಚಾರವಾಗಿ ಹೇಳಬೇಕಾದರೆ, ಕೆಲವು ರೈತರು ತಮ್ಮ ಸ್ವಂತ ಖರ್ಚಿನಿಂದ ಕಾಲುವೆಗಳನ್ನು ಮಾಡಿಕೊಂಡು ನೀರು ಹಾಯಿಸಿಕೊಂಡು ಬೆಳೆ ಬೆಳೆಯುತ್ತಿದ್ದಾರೆ. ಅವರಿಗೂ ಸಹ ವಾಟರ್ ರೇಟ್ ಹಾಕಿರುತ್ತಾರೆ. ಸರ್ಕಾರದವರು ಕೆರೆ ಕಟ್ಟೆಗಳನ್ನು ಕಟ್ಟಿಸಿಕೊಟ್ಟು ರೈತರಿಗೆ ಅನುಕೂಲ ಮಾಡಿಸಿಕೊಟ್ಟಿರುವ ಕಡೆ ವಾಟರ್ ರೇಟ್ ಹಾಕಿರುವಂತೆಯೇ ತಮ್ಮ ಸ್ವಂತ ಖರ್ಚಿನಿಂದ ಕೆಲಸ ಮಾಡಿಕೊಂಡು ನೀರು ಹಾಯಿಸಿಕೊಂಡು ಬೆಳೆ ತೆಗೆಯತಕ್ಕ ರೈತರಿಗೂ ವಾಟರ್ ರೇಟ್ ಹಾಕಿರುವುದು ಅನ್ಯಾಯ. ಸ್ವಂತ ಖರ್ಚಿನಿಂದ ನೀರು ಹಾಯಿಸಿಕೊಳ್ಳುವ ರೈತರಿಗೆ ವಾಟರ್ ರೇಟ್ ತಪ್ಪಿಸಬೇಕು ಎಂದು ಸರ್ಕಾರದಲ್ಲಿ ಒತ್ತಾಯಪಡಿಸುತ್ತಿದ್ದೇನೆ.

ಮೊಳಕಾಲ್ಮೂರು ತಾಲ್ಲೂಕು ವಿಚಾರವಾಗಿ ಒಂದೆರಡು ವಿಷಯಗಳನ್ನು ಹೇಳಲು ಅಪೇಕ್ಷೆಪಡುತ್ತೇನೆ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಇದುವರೆಗೂ ಯಾವ ನೀರಾವರಿ ಪ್ರಾಜೆಕ್ಟೂ ಆಗಿಲ್ಲ. ಈ ತಾಲ್ಲೂಕಿನಲ್ಲಿ ಜಿನಗಿ ಹಳ್ಳ ಒಂದು ಮಾತ್ರ ಸಾಧ್ಯವಾದಷ್ಟೂ ನೀರಾವರಿ ಅನುಕೂಲತೆಯನ್ನು ಕಲ್ಪಿಸಿಕೊಡುತ್ತಿದೆ. ಚಿನ್ನಹಗರಿ ಬಳಿ ರಂಗಯ್ಯನ ಕಟ್ಟೆ ಪ್ರಾಜೆಕ್ಟ್ ಮಾಡಿದರೆ ಸುಮಾರು 10–12 ಸಾವಿರ ಎಕರೆಗೆ ನೀರಾವರಿ ಅನುಕೂಲವಾಗುತ್ತದೆ. ಅದರಿಂದ ಅಲ್ಲಿನ ಪ್ರಜೆಗಳಿಗೆ ತುಂಬ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಇದನ್ನು ಮುಂದಿನ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಜನತೆಗೆ ಅನುಕೂಲತೆಯನ್ನು ಕಲ್ಪಿಸಿಕೊಡಬೇಕೆಂದು ನಾನು ಒತ್ತಾಯಪಡಿಸುತ್ತೇನೆ. ಈ ಒಳಗಾಗಿ ಜಿನಗಿ ಹಳ್ಳದಿಂದ ಚಳ್ಳಕೆರೆ ತಾಲ್ಲೂಕು ನಾಯ್ಕನ ಹಟ್ಟಿ ಹಿರೆಕೆರೆಗೆ ಫೀಡರ್ ಚಾನಲ್ ತೆಗೆದುಕೊಂಡು ಹೋಗಬೇಕೆಂದು ಸರ್ವೆ ಆಗಿ ಅಂದಾಜುಗಳು ತಯಾರಾಗಿದ್ದರೂ ಇನ್ನೂ ಕೆಲಸವನ್ನು ತೆಗೆದುಕೊಂಡಿಲ್ಲ. ಸುಮಾರು 33 ಹಳ್ಳಿಗಳ ರೈತರಿಗೆ ಅದರಿಂದ ಅನುಕೂಲವಾಗುತ್ತದೆ ಎಂದು ಸರ್ಕಾರಕ್ಕೆ ಗೊತ್ತಿದ್ದಾಗೂ ಕೂಡ ಅವರು ಇದುವರೆಗೂ ಆ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ. ಆದಷ್ಟು ಜಾಗ್ರತೆ ಸರ್ಕಾರದವರು ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ವ್ಯವಸಾಯ ವರಮಾನ ತೆರಿಗೆ ಜಾರಿಗೆ ತರಬೇಕು ಎನ್ನುವ ಸೂಚನೆಯನ್ನು ಮಾಡಿದ್ದಾರೆ. ರೈತರಿಗೆ ಇದರಿಂದ ಎಷ್ಟು ತೊಂದರೆ, ಅನಾನುಕೂಲ ಇದೆ, ಎಷ್ಟರಮಟ್ಟಿಗೆ ವ್ಯಥೆ ಇದೆ ಎನ್ನುವುದನ್ನು ಸ್ವಲ್ಪ ಮಟ್ಟಿಗೆ ಯೋಚನೆ ಮಾಡಬೇಕಾಗಿದೆ. ಪಹಣಿ ಕಾಪಿಯನ್ನು ತೆಗೆದುಕೊಳ್ಳಬೇಕಾದರೆ ರೈತ ಕಣ್ಣೀರು ಹಾಕಬೇಕಾಗಿದೆ. ಹೀಗಿರುವಾಗ ಅವನು ವ್ಯವಸಾಯ ವರಮಾನ ತೆರಿಗೆಗೆ ಸಂಬಂಧಪಟ್ಟಂತೆ ಎಷ್ಟರಮಟ್ಟಿಗೆ ಲೆಕ್ಕವನ್ನು ಇಡಬಲ್ಲ ಮತ್ತು ಅದನ್ನು ಸರ್ಕಾರಕ್ಕೆ ಕೊಡಬಲ್ಲ ಎನ್ನುವುದನ್ನು ಯೋಚನೆ ಮಾಡಬೇಕು. ಪಹಣಿ ಕಾಪಿ ತೆಗೆದುಕೊಳ್ಳುವುದಕ್ಕೆ ನೂರಾರು ರೂಪಾಯಿಗಳ ಲಂಚ ತೆರಬೇಕಾಗಿದೆ. ಇಂಥದ್ದರಲ್ಲಿ ಅವನು ವ್ಯವಸಾಯ

ವರಮಾನ ತೆರಿಗೆ ಲೆಕ್ಕ ಇಟ್ಟು ತೆರಿಗೆಯನ್ನು ಎಷ್ಟು ಮಾತ್ರ ಕೊಡಬಲ್ಲ ! ವರಮಾನ ತೆರಿಗೆಯನ್ನು ಕೊಡಬಾರದು ಎನ್ನುವುದು ನನ್ನ ಭಾವನೆ ಅಲ್ಲ. ವ್ಯವಸಾಯಗಾರನು ಲೆಕ್ಕವನ್ನು ಇಟ್ಟು ಅದನ್ನು ಅಧಿಕಾರಿಗಳಿಗೆ ಕೊಟ್ಟರೂ ಅವರು ಅದನ್ನು ಒಪ್ಪಿಕೊಳ್ಳುವುದಿಲ್ಲ. ಅವರು ಹಾಕಿದಷ್ಟು ತೆರಿಗೆಯನ್ನು ಕೊಡಬೇಕಾಗುತ್ತದೆ. ಇದರಿಂದ ರೈತ ಬಹಳ ತೊಂದರೆಗೆ ಈಡಾಗಬೇಕಾಗುತ್ತದೆ. ಆದ್ದರಿಂದ ವ್ಯವಸಾಯ ವರಮಾನ ತೆರಿಗೆಯನ್ನು ತಪ್ಪಿಸಿ ಸುಮಾರು 50 ಎಕರೆ ಅಥವಾ 100 ಎಕರೆಗೆ ಮೇಲ್ಪಟ್ಟು ಜಮೀನು ಇರುವವರಿಗೆ ಎಕರೆಗೆ ಇಷ್ಟು ಎಂದು ಕಂದಾಯವನ್ನು ಜಾಸ್ತಿ ಮಾಡಿ ಅಥವಾ ಬೇರೆ ರೂಪದಲ್ಲಿ ಒಂದು ಎಕರೆಗೆ ಇಷ್ಟು ಎಂದು ತೆಗೆದುಕೊಳ್ಳುವಂತೆ ಮಾಡಿದರೆ ರೈತರಿಗೆ ತುಂಬ ಅನುಕೂಲವಾಗುತ್ತದೆ.

ರೈತನು ಲೆವಿಯನ್ನು ಕೊಡಬೇಕೆಂದು ಸರ್ಕಾರ ಒತ್ತಾಯ ಮಾಡುತ್ತಿದೆ. ಲೆವಿ ಏತಕ್ಕಾಗಿ ಕೊಡಬೇಕು ಎನ್ನುವುದು ರೈತನಿಗೆ ತಿಳಿಯದಾಗಿದೆ. ಅವರು ಕೊಟ್ಟರೂ ಕೊಡಲಿಲ್ಲ ಎನ್ನುವ ಪರಿಸ್ಥಿತಿ ಬಂದಿದೆ. ರೈತರಿಗೆ ಸರ್ಕಾರದಿಂದ ಯಾವ ಯಾವ ವಿಧದಲ್ಲಿ ಅನುಕೂಲತೆಗಳು ದೊರಕುತ್ತಿವೆ ! ರೈತನು ಕೊಡುವ ಧಾನ್ಯಕ್ಕೆ ಮಾರುಕಟ್ಟೆಯಲ್ಲಿ 80 ರೂಪಾಯಿ ಇದ್ದರೆ ಅವನಿಗೆ ಸರ್ಕಾರದವರು 50 ರೂಪಾಯಿ ಕೊಡುತ್ತಾರೆ. ಅವನಿಗೆ 30 ರೂಪಾಯಿ ನಷ್ಟವಾಯಿತು. ಅದರ ಬದಲು ಸರ್ಕಾರದಿಂದ ಯಾವ ವಿಧವಲ್ಲಿಯಾದರೂ ಅನುಕೂಲವನ್ನು ಮಾಡಿಕೊಡುತ್ತಿದ್ದರೆ, ಏಕೆ ಲೆವಿ ಕೊಡಬಾರದು ಎಂದು ಹೇಳುವುದಕ್ಕೆ ಅವಕಾಶವಿರುತ್ತದೆ. ಆಗ ರೈತ ಸಂತೋಷದಿಂದ ಲೆವಿ ಕೊಡುತ್ತಾನೆ, ಎಲ್ಲರಿಗೂ ಅನುಕೂಲವಾಗುತ್ತದೆ. ಬಜಾರ್ ದರ 80 ರೂಪಾಯಿ ಇರುವಾಗ 30 ರೂಪಾಯಿ ಕಳೆದುಕೊಂಡು ಕೊಡಬೇಕೆಂದರೆ ವ್ಯಥೆಯಿಂದ ರೈತ ಲೆವಿ ಕೊಡುತ್ತಿದ್ದಾನೆ. ಹೀಗೆ ಕಡಮೆ ಬೆಲೆಗೆ ರೈತನಿಂದ ತೆಗೆದುಕೊಳ್ಳಲು ಏರ್ಪಾಡು ಮಾಡಿರುವುದು ಸರಿಯಲ್ಲ ಎಂಬುದು ನನ್ನ ಭಾವನೆ. ರೈತನಿಗೆ ಫರ್ಟಿಲೈಜರ್ ಮುಂತಾದ ಅನುಕೂಲಗಳನ್ನೊದಗಿಸಿ, ಕಬ್ಬಿಣ ಮತ್ತು ಇತರ ಅವಶ್ಯಕವಾದ ಸಾಮಾನುಗಳನ್ನು ಕಡಮೆ ದರದಲ್ಲಿ ಕೊಡಿ. ಹಾಗೆ ಏನೂ ಮಾಡದೆ ಬೆಳೆಯುವುದನ್ನು ಬಜಾರು ದರಕ್ಕಿಂತ ಕಡಮೆ ದರದಲ್ಲಿ ಕೊಡಬೇಕೆಂದು ಹೇಳುವುದು ಅನ್ಯಾಯ. ಇದನ್ನು ಪರ್ಯಾಲೋಚಿಸಿ ಅಲ್ಪಸ್ವಲ್ಪ ಅನುಕೂಲ ಮಾಡಬೇಕು. ಈ ಬಗ್ಗೆ ಒತ್ತಾಯ ಮಾಡುತ್ತೇನೆ.

5-30 P.M.

ಕೈಗಾರಿಕೆ. ಈಗ ಪ್ರತಿಯೊಂದು ಕೈಗಾರಿಕೆಯನ್ನೂ ಸಿಟಿ ಮತ್ತು ಟೌನುಗಳಲ್ಲಿ ಸ್ಥಾಪಿಸುತ್ತಿದ್ದಾರೆ, ಹಳ್ಳಿಗಳಲ್ಲಿ ಯಾವ ಕೈಗಾರಿಕೆಯೂ ಇಲ್ಲ. ಹಳ್ಳಿಯ ರೈತರಿಗೆ 3 ತಿಂಗಳು ಮಾತ್ರ ಕೆಲಸವಿರುತ್ತದೆ, ಉಳಿದ 9 ತಿಂಗಳು ಹಳ್ಳಿಗರು ಒಂದು ಹೊತ್ತು ಊಟ ಮಾಡಿಕೊಂಡು ಕಾಲ ಹಾಕಬೇಕಾಗಿದೆ. ಹಾಗಿರುವಾಗ ಅದಷ್ಟುಮಟ್ಟಿಗೆ ಹಳ್ಳಿಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿದರೆ ಅಲ್ಲಿನ ಜನರಿಗೆ ಅನುಕೂಲವಾಗುವುದರಿಂದ ಹಾಗೆ ಮಾಡಬೇಕು.

ರಾಜ್ಯಪಾಲರ ಭಾಷಣದಲ್ಲಿ ರೈಲು ಮಾರ್ಗಗಳ ವಿಚಾರ ತಿಳಿಸಿದ್ದಾರೆ. ರಾಯದುರ್ಗ–ಚಿತ್ರದುರ್ಗ ರೈಲು ಮಾರ್ಗವನ್ನು ತೆಗೆದುಕೊಳ್ಳಬೇಕೆಂದು ಸುಮಾರು 50 ವರ್ಷಗಳಿಂದ ಕೇಳುತ್ತಿದ್ದೇವೆ. ಅಲ್ಲದೆ ಮೊಳಕಾಲ್ಮುರು–ಚಳ್ಳಕೆರೆ–ಈ ಎರಡು ತಾಲ್ಲೂಕುಗಳಲ್ಲಿ ಯಾವಾಗಲೂ ಬರಗಾಲವಿರುತ್ತದೆ, ಅಲ್ಲಿ ಮಳೆಯಾದರೂ ಜಮೀನು ಫಲವತ್ತಾಗಿಲ್ಲದಿರುವುದರಿಂದ ಜನರಿಗೆ ಯಾವ ವಿಧದ ಅನುಕೂಲವೂ ಇಲ್ಲ. ಆದುದರಿಂದ ರಾಯದುರ್ಗ—ಚಿತ್ರದುರ್ಗ ರೈಲುಮಾರ್ಗದ ಕೆಲಸ ತೆಗೆದುಕೊಳ್ಳುವಂತೆ ಕೇಂದ್ರ ಸರಕಾರವನ್ನು ಒತ್ತಾಯ ಮಾಡಬೇಕು.

ಮಹಾಜನ್ ತೀರ್ಪಿನ ವಿಚಾರ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಬಳ್ಳಾರಿ ಸುತ್ತಮುತ್ತ ಆಂಧ್ರ ಪ್ರದೇಶವಿರುವುದರಿಂದ ಮಾಲನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ತೊಂದರೆಯಾಗಿದೆ, ಜನರು 5 ಸೇರು ಧಾನ್ಯವನ್ನು ತೆಗೆದುಕೊಂಡು ಹೋಗಬೇಕಾದರೆ ಆಂಧ್ರ ಪ್ರದೇಶದ ಅನುಮತಿ ಬೇಕು. ಸುಮಾರು 10 ಮೈಲಿ ಪ್ರದೇಶದಲ್ಲಿ ರೈತ ತನ್ನ ಧಾನ್ಯವನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಆದುದರಿಂದ ಈಗ ನಾವು ಕೇಳುತ್ತಿರುವ ಆಂಧ್ರದ ಬಾರ್ಡರಿನಲ್ಲಿರುವ ಪ್ರದೇಶಗಳನ್ನು ನಮ್ಮ ಸಂಸ್ಥಾನಕ್ಕೆ ಸೇರಿಸಲು ಸರಕಾರ ಒತ್ತಾಯ ಮಾಡಬೇಕು. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್.—ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯಪಾಲರ ಭಾಷಣವು ಸರಕಾರದ ಕೈಪಿಡಿಯಂತೆಯೂ, ಸರಕಾರದವರು ತಯಾರಿಸಿರುವ ಭಾಷಣಕ್ಕೆ ರಾಜ್ಯಪಾಲರು ಸಹಿ ಹಾಕಿರುವಂತೆಯೂ ಕಂಡುಬರುತ್ತದೆ. ಇದರಲ್ಲಿ ಯಾವ ಸುಧಾರಣೆಯ ವಿಚಾರವೂ ಅಡಕವಾಗಿಲ್ಲ ಎಂದು ಘಂಟಾಘೋಷವಾಗಿ ತಿಳಿಸಬೇಕಾಗಿದೆ. ಮೊದಲನೆಯದಾಗಿ ನಮ್ಮ ರಾಜ್ಯದ ಮಂತ್ರಿಮಂಡಲದ ಸಂಖ್ಯೆ ಜಾಸ್ತಿಯಾಗಿರುವ ವಿಚಾರವನ್ನು ಈ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ. ಪಕ್ಕದ ಮದ್ರಾಸು ರಾಜ್ಯಕ್ಕಿಂತ ನಮ್ಮ ರಾಜ್ಯದಲ್ಲಿ ಮಂತ್ರಿಗಳ ಸಂಖ್ಯೆ ಜಾಸ್ತಿಯಾಗಿದೆ, 29 ಜನ ಮಂತ್ರಿಗಳಿರುವುದು ಬಹಳ ಹೆಚ್ಚು ಎಂದು ಬಹಳ ಕಟುವಾಗಿ ಹೇಳಬೇಕಾಗಿದೆ. ಇಂದು ಜನಸಾಮಾನ್ಯರಿಗೆ ನಾನು ನೋಡಿರುವ ಹಾಗೆ ಅನೇಕ ಕಡೆ ಹೊಟ್ಟೆ ಬಟ್ಟೆಗೆ ಗತಿಯಿಲ್ಲ, ನೀರಿಲ್ಲ, ಇಂಥ ದಾರುಣ ಪರಿಸ್ಥಿತಿ ಇದೆ. ಹಾಗಿರುವಾಗ 29 ಜನ ಮಂತ್ರಿಗಳು ಈ ರಾಜ್ಯದಲ್ಲಿದ್ದಾರೆ, ಇದಕ್ಕಿಂತ ಅಪಮಾನಕರವಾದ ವಿಷಯ ಇನ್ಯಾವುದೂ ಇಲ್ಲ, ಇಂಥ ಅನ್ಯಾಯ ಯಾವ ರಾಜ್ಯದಲ್ಲೂ ನಡೆಯುವುದಿಲ್ಲ ಎಂದು ವ್ಯಥೆಯಿಂದ ಹೇಳಬೇಕಾಗಿದೆ. ಗಾಂಧಿಯ ಹೆಸರನ್ನು ಹೇಳುವ ಈ ಜನ ವೈಭವದ ಜೀವನ ನಡೆಸುತ್ತಿದ್ದಾರೆ. ಇವರು ಆ ಹೆಸರನ್ನು ಹೇಳಲು ಯೋಗ್ಯರಲ್ಲ; ನೀತಿವಂತರಲ್ಲ ಎಂದು ವ್ಯಥೆಯಿಂದ ಹೇಳಬೇಕಾಗಿದೆ. ಕಾಂಗ್ರೆಸ್ ಆಡಳಿತ ಬಂದು 22 ವರ್ಷಗಳಾಗಿವೆ, ಸ್ವಾತಂತ್ರ್ಯ ಬಂದು ಇಷ್ಟು ಕಾಲವಾಗಿದ್ದರೂ ಕೂಡ ಮಹಾಜನರ ಕಲ್ಯಾಣವಾಗಿಲ್ಲ, ಎಲ್ಲಿ ನೋಡಿದರೂ ಸಾಮಾನ್ಯ ಜನರಿಗೆ ತೊಂದರೆಯಾಗುತ್ತಿದೆ, ಎಲ್ಲ ವಿಚಾರಗಳಲ್ಲೂ ರಾಜಕೀಯ ನಡೆಯುತ್ತಿದೆ. ಸೋಷಿಯಲಿಸ್ಟಿಕ್ ಪ್ಯಾಟ್ರನ್ ಸಮಾಜ ಕಟ್ಟುವುದಾಗಿ ಹೇಳುವಾಗ ಮಾಡಿರುವುದಾದರೂ ಏನು? ಕೇವಲ ಕಂಟ್ರಾಕ್ಟರುಗಳಿಗೆ ಸಹಾಯ, ಕಾಳಸಂತೆಕೋರರು, ಬಿಳಿ ಟೋಪಿಯವರಿಗೆ ಅನುಕೂಲ ಇದು ಮಾತ್ರ ಆಗುತ್ತಿದೆ. ಅನೇಕರು ಹೊರಗೆ ಹಾಕಿದ ಎಂಜಲು ಎಲೆಯಲ್ಲಿ ಬಿಟ್ಟಿರುವುದನ್ನು ತಿನ್ನಬೇಕಾದ ಪರಿಸ್ಥಿತಿ ಇಂದು ಕಾಣಬರುತ್ತಿದೆ. ಅನೇಕರು ಮದುವೆ ಮನೆಗಳಲ್ಲಿ ಹೊರಗೆ ಹಾಕುವ ಎಂಜಲು ಎಲೆಗಳಿಗಾಗಿ ಕಾದಿರುತ್ತಾರೆ. ಇಂದು ಜನಸಾಮಾನ್ಯರ ಸಮಾಧಿಯ ಮೇಲೆ ರಾಜ್ಯವನ್ನು ಕಟ್ಟಿ ನರ್ತನ ಮಾಡುತ್ತಿದ್ದಾರೆ. ಈ ದುರಾಡಳಿತದ ವಿರುದ್ಧ ದೇಶದಲ್ಲಿ ಜನರ ಕ್ರಾಂತಿ ಆಗಬೇಕು. ಆದಾಗದಿದ್ದರೆ ಸರಿಪಡಿಸುವುದಕ್ಕೆ ಯಾವ ಬ್ರಹ್ಮನಿಂದ ಕೂಡ ಸಾಧ್ಯವಾಗುವುದಿಲ್ಲ ಎಂದು ಘಂಟಾಘೋಷವಾಗಿ ಹೇಳಬೇಕಾಗಿದೆ. ನಮ್ಮ ರಾಜ್ಯದ ಮಂತ್ರಿಮಂಡಲ ಬಹಳ ದೊಡ್ಡದು, 29 ಜನರಿದ್ದಾರೆ, ಅವರ ಹೆಸರು ಎಷ್ಟೋ ಮಂದಿಗೆ ಗೊತ್ತಿಲ್ಲ. ಯಾರು ಪೂರ್ಣ ಮಂತ್ರಿಗಳು, ಯಾರು ಮುಕ್ಕಾಲು ಮಂತ್ರಿಗಳು, ಯಾರು ಅರ್ಧ ಮಂತ್ರಿಗಳು ಎಂಬುದು ಜನರಿಗೆ ಗೊತ್ತಿಲ್ಲ. ಎಷ್ಟೋ ಜನ ಮಂತ್ರಿಗಳಿದ್ದರೂ ಕೂಡ ಜನರ ಜೀವನ ಸುಖಮಯವಾಗಿಲ್ಲ. ನಮ್ಮ ಮುಖ್ಯ ಮಂತ್ರಿಗಳು ಮತ್ತು ಕೈಗಾರಿಕೆ ಮಂತ್ರಿಗಳು ಬೊಂಬಾಯಿಗೆ ಹೋಗಿ ನಮ್ಮ ರಾಜ್ಯಕ್ಕೆ ಬಂದು ಕೈಗಾರಿಕೆ ಸ್ಥಾಪಿಸಬೇಕೆಂದು ಅಲ್ಲಿನವರನ್ನು ಕೇಳಲು ಹೋಗಿದ್ದರು. ಹೀಗೆ ಮಾಡಲು ಅವರಿಗೆ ನಾಚಿಕೆಯಾಗಲಿಲ್ಲವೆ? ಅವರಿಗೆ ಸಾಮರ್ಥ್ಯವಿದ್ದರೆ ಇಲ್ಲೇ ಕುಳಿತುಕೊಂಡು ಅವರನ್ನು ಬರಮಾಡಿಕೊಳ್ಳಬಹುದಾಗಿತ್ತು. ಸರಕಾರದ ಯೋಗ್ಯತೆ ಎಲ್ಲಿಗೆ ಬಂದಿದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಚುನಾವಣೆಗಾಗಿ ಹಣವನ್ನು ಮಂತ್ರಿಗಳು ಅನೇಕರಿಂದ ವಸೂಲು ಮಾಡುತ್ತಿದ್ದಾರೆಂಬ ಅನುಮಾನ ಮೂಡಿದೆ. ಇದು ನಿಜವಾದರೆ ಈ ರಾಜ್ಯದಲ್ಲಿ ಆಡಳಿತ ನಡೆಸಲು ಈ ಮಂತ್ರಿಮಂಡಲಕ್ಕೆ ಯೋಗ್ಯತೆಯಿಲ್ಲ.

ಮಹಾಜನ್ ವರದಿ ಬಗ್ಗೆ ಮಾತನಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದವರಿಗೆ ಒತ್ತಾಯವನ್ನು ಮಾಡುತ್ತಾ ಇದ್ದೇವೆ ಎಂದು ಹೇಳುತ್ತಾ ಇದ್ದಾರೆ. ಕೇವಲ ಒತ್ತಾಯದಲ್ಲಿಯೇ ಕುಳಿತಿದ್ದಾರೆ. ಮೇಲ್‌ಮನೆಯಲ್ಲಿ ಒಬ್ಬ ಸದಸ್ಯರು ಈ ರೀತಿ ಕೇವಲ ಒತ್ತಾಯದಲ್ಲಿಯೇ ಕುಳಿತಿದ್ದರೆ ಏಪ್ರಲ್ ತಿಂಗಳಿನಲ್ಲಿ ಚಳುವಳಿಯನ್ನು ಮಾಡುತ್ತೇವೆ ಎಂದು ಹೇಳಿದರು. ಈ ಮಹಾಜನ್ ವರದಿ ಜಾರಿಗೆ ಬರವೇ ನಿಂತಿದ್ದರೆ ಅದು ಒಂದು ಬರೀ ಮಹಾರಾಷ್ಟ್ರದವರಿಂದ ಅಲ್ಲ, ಕೇಂದ್ರದವರಿಂದಲೂ ಅಲ್ಲ ನಿರ್ಲಕ್ಷ್ಯ ಮಾಡುತ್ತಿರುವ ಈ ಮೈಸೂರು ಮಂತ್ರಿಮಂಡಲದಿಂದ ಇತ್ಯರ್ಥವಾಗದೇ ಉಳಿದಿದೆ ಎಂದು ಹೇಳುತ್ತೇನೆ. ನಾನೂ ಕೂಡ ಏಪ್ರಲ್‌ನಿಂದ ಚಳುವಳಿ ಮಾಡುತ್ತೇನೆ ಯಾವುದಕ್ಕೆ ಎಂದರೆ ಮಂತ್ರಿಮಂಡಲ ರಾಜೀನಾಮೆ ಕೊಡಬೇಕು ಎನ್ನುವುದಕ್ಕೆ ಚಳುವಳಿ ನನ್ನದು. ಈ ಮಹಾಜನ್ ವರದಿ ಕಾರ್ಯಗತವಾಗುವುದಕ್ಕೆ ಯಾರು ಕಂಟಕಪ್ರಾಯವಾಗಿದ್ದಾರೆ ಎಂದರೆ ನಮ್ಮಲ್ಲಿ ಇರತಕ್ಕ ಈ ನಿಸ್ತೇಜಿಯಾಗಿರತಕ್ಕ ಮಂತ್ರಿಮಂಡಲ ಎಂದು ಹೇಳುತ್ತೇನೆ. ಇವರು ರಾಜಿನಾಮೆ ಕೊಟ್ಟ ಪಕ್ಷದಲ್ಲಿ ನಮ್ಮ ರಾಜ್ಯದ ಭವಿಷ್ಯ ಒಳ್ಳೆಯದಾಗುತ್ತದೆ. ಮಹಾಜನ್ ವರದಿಯ ಬಗ್ಗೆ ಒಂದು ಸರಿಯಾದ ದಕ್ಷ ನಿಲುವನ್ನು ಪ್ರತಿಭಾವಂತ ನಿಲುವನ್ನು ತೆಗೆದುಕೊಳ್ಳದೇ ಇರತಕ್ಕಂತ ಮಂತ್ರಿಮಂಡಲ ರಾಜೀನಾಮೆ ಕೊಡಬೇಕು ಎಂದು ಹೇಳಿ ಆ ಬಗ್ಗೆ ಏಪ್ರಲ್‌ನಿಂದ ಚಳುವಳಿಯನ್ನು ಪ್ರಾರಂಭ ಮಾಡುತ್ತೇನೆ ಎಂಬ ಮಾತನ್ನು ಹೇಳುತ್ತಾ ಇದ್ದೇನೆ.

ಈ ರಾಜ್ಯದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆ ಎಂದು ಹೇಳಿ ಅನೇಕ ಸಾರಿ ಮುಖ್ಯ ಮಂತ್ರಿಗಳು ಹೇಳುತ್ತಾ ಇದ್ದಾರೆ, ಮಂತ್ರಿಗಳು ಹೇಳುತ್ತಾ ಇದ್ದಾರೆ. ಈ ರಾಜ್ಯ ಒಂದು ಸಂಘಟನೆಯಾಗಿ 12 ವರ್ಷವಾಗುತ್ತಾ ಬಂತು. ಈ 12 ವರ್ಷದಲ್ಲಿ ರಾಜ್ಯ ಭಾಷೆ ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಮಾಡುವುದರಲ್ಲಿ ಅವರು ವಿಫಲರಾಗಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಕನ್ನಡ ಅಧಿಕೃತ ಭಾಷೆಯನ್ನಾಗಿ ಮಾಡಿದ್ದಾರಂತೆ, ಅಲ್ಲಿರತಕ್ಕ ತಹಸೀಲ್ದಾರರ ಪ್ರೀತಿ ವಿಶ್ವಾಸ ಇಂಗ್ಲೀಷ್ ಮೇಲೆ. ಹಳ್ಳಿಯ ರೈತನಿಗೆ ಅದು ತಿಳಿಯುವ ಹಾಗಿಲ್ಲ. ಮಂತ್ರಿಗಳ ಮಕ್ಕಳನ್ನು ಕಾನ್‌ವೆಂಟಿಗೆ ಕಳುಹಿಸುತ್ತಾರೆ, ಮನೆಗೆ ಬಂದಮೇಲೆ ತಂದೆಯನ್ನು ಡ್ಯಾಡಿ ಅಂತ ಅನ್ನುತ್ತಾರೆ, ತಾಯಿಯನ್ನು ಮಮ್ಮಿ ಅಂತ ಅನ್ನುತ್ತಾರೆ, ಇಂಗ್ಲೀಷಿನಲ್ಲಿ ಹೇಳುವಾಗ ಒಂದೊಂದು ಸಾರಿ ತಂದೆಯನ್ನು ಕರೆಯುವುದು ಮಮ್ಮಿ ಅಂತ ಆಗುತ್ತದೆ, ತಾಯಿಯನ್ನು ಕರೆಯುವುದು ಡ್ಯಾಡಿ ಅಂತ ಆಗುತ್ತದೆ. ಈ ಪರಿಸ್ಥಿತಿ ಇವತ್ತಿನ ದಿವಸ ಉಂಟಾಗಿದೆ. (ಸಭೆಯಲ್ಲಿ ನಗು). ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದರಲ್ಲಿ ರಾಜ್ಯ ಸರ್ಕಾರ ಸಂಪೂರ್ಣವಾಗಿ ಕೆಳ ಮಟ್ಟಕ್ಕೆ ಹೋಗಿದೆ. ಇವತ್ತು ಒಂದು ರಾಜ್ಯದ ಮಂತ್ರಿ ಎಂದರೆ ಅವರಿಗೆ ಯಾವ ರೀತಿಯ ಗೌರವ ಇರಬೇಕು ಎಂಬುದನ್ನು ಅವರು ತಿಳಿದುಕೊಂಡಿಲ್ಲ. ಶ್ರೀಮಾನ್ ಮಾಣಿಕರಾವ್ ಪಾಟೀಲರವರು ಉಪಮಂತ್ರಿಗಳಾಗಿದ್ದಾರೋ, ಪೋಲೀಸ್ ಇಲಾಖೆಯ ಆಡಳಿತದಲ್ಲಿ ಅವರ ಜವಾಬ್ದಾರಿ ಏನು, ಅದನ್ನು ಯಾವ ಮಟ್ಟದಲ್ಲಿ ನಡೆಸಬೇಕು ಎಂಬ ಜವಾಬ್ದಾರಿಯನ್ನು ಅರಿತು ಕೊಳ್ಳದೆ ಈ ರಾಜ್ಯದಲ್ಲಿ ವ್ಯಭಿಚಾರವನ್ನು ತೊಡೆದು ಹಾಕುತ್ತೇವೆ ಎಂದು ಹೇಳಿ ಆ ಕಾರ್ಯವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದಕ್ಕಿಂತ ನಾಚಿಕೆಗೇಡಿನ ವಿಷಯ ಮತ್ತೊಂದು ಇಲ್ಲ ಎಂದು ಹೇಳುತ್ತೇನೆ. ಪೋಲೀಸ್ ಇಲಾಖೆಯಲ್ಲಿ ಅವರು ಮಾಡಿರತಕ್ಕ ಸುಧಾರಣೆ ಯಾವುದು ? ದಾವಣಗೆರೆಯಲ್ಲಿ ನಡೆದ ಚುನಾವಣೆಯಲ್ಲಿ ಹರಿಜನ ಅಭ್ಯರ್ಥಿಯಾದ ವೆಂಕಟೇಶ್ ಅನ್ನುವವರನ್ನು ಅಲ್ಲಿರತಕ್ಕ ಕಾಂಗ್ರೆಸ್ ಪುಡಾರಿಗಳ ಕೃಪಾಶ್ರಯದಲ್ಲಿ 7—8 ವರ್ಷಗಳಿಂದ ಇರತಕ್ಕ ಒಬ್ಬ ಸಬ್ ಇನ್‌ಸ್ಪೆಕ್ಟರು ಆತನಿಗೆ ಚುನಾವಣೆಯಲ್ಲಿ ಓಟು ಮಾಡುವುದನ್ನು ತಪ್ಪಿಸಬೇಕೆಂದು ಅವನನ್ನು ಕಿಡ್ನ್ಯಾಪ ಮಾಡಿಕೊಂಡು ಹೋದಂತಹ ಸನ್ನಿವೇಶದಲ್ಲಿ ಆ ಸಂಗತಿಯನ್ನು ತಿಳಿಸುವ ಒಂದು ಪತ್ರ ಆತನಿಂದ ನನಗೆ ಬಂದಿದೆ.

ಅಧ್ಯಕ್ಷರು.—ಅದರ ಕಂಟೆಂಟ್ಸ್ ಸರಿ ಅಂತ ಗೊತ್ತಿದ್ದರೆ ಅದನ್ನು ಸ್ಟೇಟ್ ಮಾಡಬಹುದು. ಇಲ್ಲದೇ ಇದ್ದರೆ ಅದನ್ನು ಓದಬಾರದು.

ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ಕೆ. ವೆಂಕಟೇಶ್ ಅನ್ನುವವರು ಇಲ್ಲಿ ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಅವರನ್ನು ಉಪಾಧ್ಯಕ್ಷತೆಗೆ ನಿಲ್ಲಿಸದೇ ಇರತಕ್ಕ ರೀತಿಯಲ್ಲಿ ಮತ್ತು ಅವರಿಗೆ ಯಾವುದೇ ರೀತಿಯಲ್ಲಿ ಓಟು ಮಾಡದೇ ಇರತಕ್ಕ ರೀತಿಯಲ್ಲಿ ಅವರನ್ನು ರಾತ್ರಿ ಒಂದೂವರೆ ಗಂಟೆಯಲ್ಲಿ ಅಲ್ಲಿರತಕ್ಕ ಒಬ್ಬ ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಕರೆದುಕೊಂಡು ಹೋದದ್ದನ್ನು ಅಲ್ಲಿನ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದರೂ ಕೂಡ ನಮ್ಮ ಸರ್ಕಾರದವರು, ಒಳಾಡಳಿತ ಸಚಿವರು ಹೋಗಿ ಅವರ ಬಗ್ಗೆ ಏನು ವಿಚಾರಣೆ ಮಾಡಿದ್ದಾರೆ ಎಂದು ಮೇಲ್ ಮನೆಯಲ್ಲಿ ಶ್ರೀಮಾನ್ ಶಿವಾನಂದಸ್ವಾಮಿಯವರು ಕೇಳಿದ್ದಕ್ಕೆ, ಅವರು ಆ ಸಬ್ ಇನ್‌ಸ್ಪೆಕ್ಟರನ್ನು ವರ್ಗ ಮಾಡುವುದಕ್ಕೆ ಕೇಳುತ್ತಾರೆ ಎಂದು ಹೇಳಿ ಉತ್ತರ ಕೊಡಲಾಯಿತು. ಶ್ರೀಮಾನ್ ಶಿವಾನಂದಸ್ವಾಮಿಯವರಿಗೆ ಬೇರೆ ಇನ್ನೇನೂ ಕೆಲಸವಿಲ್ಲದೇ ಈ ಸಬ್ ಇನ್‌ಸ್ಪೆಕ್ಟರನ್ನು ವರ್ಗ ಮಾಡಿಸಬೇಕಾಗಿತ್ತೇನು ? ನನ್ನ ಹತ್ತಿರ ಅವರು ಬರೆದಿರುವ ಕಾಗದ ಇದೆ.

ಅಧ್ಯಕ್ಷರು.—ಅದು ಖರೆ ಅಂತ ನಂಬಿಕೆ ಇದ್ದರೆ ಅದರ ಸಾರಾಂಶ ಹೇಳಿ.

Sri M. NAGAPPA.—May I know under what rule the hon. member is asked not to refer to the letter ? Under rule 238 there are certain restrictions enumerated. Apart from that there is no rule which prohibits a member from referring to any other matter not enumerated in the rule.

ಅಧ್ಯಕ್ಷರು.—ಅದರ ಸಾರಾಂಶ ಏನಿದೆ ಅದನ್ನು ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್.—ಆ ಪತ್ರದಲ್ಲಿ ಈ ರೀತಿ ಇದೆ.—

"ದಿನಾಂಕ 25—12—68ರಂದು ದಾವಣಗೆರೆ ನಗರದಲ್ಲಿ ರಾತ್ರಿ ಸುಮಾರು ಒಂದು ಗಂಟೆ (26—12—68) ರ ಮುಂಜಾನೆಯಲ್ಲಿ ನನ್ನನ್ನು ದಾವಣಗೆರೆ ಎಕ್ಸ್‌ಟೆನ್‌ಷನ್ ಪೋಲೀಸು ಸ್ಟೇಷನ್ ಸಬ್ ಇನ್‌ಸ್ಪೆಕ್ಟರ್ ಶ್ರೀ ವೇಣುಗೋಪಾಲರು ನಮ್ಮ ಮನೆಯಿಂದ ಬಲಾತ್ಕಾರವಾಗಿ ಪೋಲೀಸ್

(ಶ್ರೀ ವಾಟಾಳ್ ನಾಗರಾಜ್)

ಜೀಪಿನಲ್ಲಿ ಕರೆದುಕೊಂಡು ಹೋಗಿ ನನ್ನನ್ನು ತಾರೀಖು 18—1—69 ರಂದು ನಡೆಯಬೇಕಾಗಿದ್ದ ದಾವಣಗೆರೆ ನಗರ ಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯಲ್ಲಿ ನನ್ನ ಮನಸ್ಸಿಗೆ ವಿರುದ್ಧವಾಗಿ ಓಟು ಮಾಡುವಂತೆ ಮಾಡಲು ಪ್ರಯತ್ನಿಸಿದರು. ನಾನು ತಾರೀಖು 18—1—69 ಕ್ಕೆ ಚುನಾವಣೆ ಇದ್ದುದ್ದರಿಂದ ನನ್ನನ್ನು ಓಟು ಮಾಡದಂತೆ ತಡೆಗಟ್ಟುವರೆಂದು ಹೆದರಿ ಯಾರಿಗೂ ಕಂಪ್ಲೇಂಟ್ ಕೊಡಲಿಲ್ಲ. ಆದರೆ ತಾರೀಖು 18—1—69 ರಂದು ಸದರಿ ಚುನಾವಣೆ ಮುಗಿದ ಕೂಡಲೆ ಈ ವಿಷಯವನ್ನು ಚಿತ್ರದುರ್ಗ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡಲು ಏರ್ಪಡಿಸಬೇಕು, ಅಲ್ಲದೆ ನನಗೆ ರಕ್ಷಣೆಯನ್ನು ಕೊಡಬೇಕಾಗಿ ಪ್ರಾರ್ಥನೆ''.

ಒಬ್ಬ ಸಬ್ ಇನ್‌ಸ್ಪೆಕ್ಟರು ರಾತ್ರಿ ಒಂದೂವರೆ ಗಂಟೆಯಲ್ಲಿ ಆತನ ಮನೆಗೆ ಹೋಗಿ ಆತನನ್ನು ಜೀಪಿನಲ್ಲಿ ಕರೆದುಕೊಂಡು ಹೋಗಬೇಕಾಗಿದ್ದರೆ ಇದು ಒಂದು ಕಾಂಗ್ರೆಸು ಸರ್ಕಾರವೇ! ಕಾಂಗ್ರೆಸು ಸಂಸ್ಥೆ ಗಾಂಧಿಜಿಯವರ ಹೆಸರನ್ನು ಹೇಳಿಕೊಂಡು ಈ ಸರ್ಕಾರ ತಮ್ಮ ಆಡಳಿತವನ್ನು ನಡೆಸುತ್ತಾ ಇರುವಾಗ ಇದು ಹರಿಜನರಿಗೆ ಆಗಿರತಕ್ಕ ಅನ್ಯಾಯ. ಯಾವ ಒಬ್ಬ ಮನುಷ್ಯನಿಗೂ ಈ ರಾಜ್ಯದಲ್ಲಿ ರಕ್ಷಣೆ ಇಲ್ಲ ಎನ್ನುವುದಕ್ಕೆ ಇದೇ ಒಂದು ಸಾಕ್ಷಿ. ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಲಿ. ಅಲ್ಲಿರತಕ್ಕ ಆ ಸಬ್‌ಇನ್‌ಸ್ಪೆಕ್ಟರ ಬಗ್ಗೆ ಸರಿಯಾದ ಒಂದು ತನಿಖೆ ನಡೆಸಿ ಆತನನ್ನು ಸಸ್‌ಪೆಂಡ್ ಮಾಡಬೇಕಾಗಿದೆ. ಇವತ್ತಿನ ದಿವಸ ಅವನು ಹೇಳುತ್ತಾ ಇದ್ದಾನಂತೆ ಮುಖ್ಯಮಂತ್ರಿಗಳು ನನಗೆ ಸಹಾಯಕರಾಗಿದ್ದಾರೆ. ಈವತ್ತು ನಾನು ಏನು ಬೇಕಾದರೂ ಮಾಡುತ್ತೇನೆ ಎಂದು ಧೈರ್ಯದಿಂದ ಇದ್ದಾನೆಯಂತೆ. ಇಂತಹ ಒಂದು ಕಾಲ ಈಗ ಒದಗಿ ಜನತೆಗೆ ರಕ್ಷಣೆ ಇಲ್ಲದಂತಾಗಿದೆ ಎಂದು ಬಹಳ ವ್ಯಥೆಯಿಂದ ಸಂಕಟದಿಂದ ಹೇಳಬೇಕಾಗಿದೆ.

ಇನ್ನು ಬಳಕೆದಾರರಿಗೆ ಅನುಕೂಲವಾಗುವಂತೆ ಕೆಲವು ಜನತಾ ಬಜಾರುಗಳನ್ನು ತೆಗೆಯುತ್ತೇವೆ ಎಂದು ಹೇಳಿದ್ದಾರೆ. ನಾನು ಈ ಜನತಾಬಜಾರಿಗೆ ಹೋಗಿದ್ದೇನೆ. ಈ ಜನತಾ ಬಜಾರು ಮೋಸದ ಬಜಾರಾಗಿದೆ. ನಾನು ಇಲ್ಲಿ ಒಂದು ಪೊಟ್ಟಣವನ್ನು ತಂದಿದ್ದೇನೆ ಇದು 100 ಗ್ರಾಂ ಅಂತ ಹೇಳುತ್ತಾರೆ ಇದರಲ್ಲಿ 20 ಗ್ರಾಂ ಮೋಸ ಇದೆ. ಈ ಕರ್ಪೂರದ ಪೊಟ್ಟಣ 50 ಗ್ರಾಂ ಅಂತ ಮಾರುತ್ತಾರೆ, ಇದರ ತೂಕ ಇರುವುದು 40 ಗ್ರಾಂ ಈ ರೀತಿ ಮೋಸ ಮಾಡುತ್ತಾ ಜನರಿಗೆ ಅನುಕೂಲಮಾಡುವುದಕ್ಕಾಗಿ ಜನತಾ ಬಜಾರುಗಳನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳುತ್ತಾ ಇದ್ದಾರೆ, ಇದು ಒಳ್ಳೆಯದಲ್ಲ. ಈ ಮಾರ್ಗ ಸರಿಯಾದ್ದಲ್ಲ. ಎಂಬ ಮಾತನ್ನು ಈ ಸಭೆಯಲ್ಲಿ ಹೊರಪಡಿಸಬೇಕೆಂಬ ಉದ್ದೇಶದಿಂದ ಈ ಸಾಮಾನುಗಳನ್ನು ತಂದಿದ್ದೇನೆ, ತಾವು ಇದನ್ನು ಪರಿಶೀಲನೆ ಮಾಡಿ ಸಂಬಂಧಪಟ್ಟವರಿಗೆ ಪರಿಶೀಲನೆ ಮಾಡುವುದಕ್ಕೆ ಆಜ್ಞೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ

ಕೊನೆಯದಾಗಿ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಈ ರಾಜ್ಯದ ಹೆಸರಿನ ಬಗ್ಗೆ ಅನೇಕ ವಿಧವಾದ ಜಿಜ್ಞಾಸೆಗಳು ನಮ್ಮಲ್ಲಿ ಬರುತ್ತಾ ಇವೆ. ಕರ್ಣಾಟಕ ಎಂದರೆ ಒಂದು ತರಹ, ಮೈಸೂರು ಎಂದರೆ ಒಂದು ತರಹ. ಈ ರೀತಿ ಜಾತೀಯತೆಯ ಸ್ವರೂಪವನ್ನು ಇದು ತಾಳುತ್ತಾ ಇದೆ. ಎಂದು ನನಗೆ ಅನಿಸುತ್ತಾ ಇದೆ. ಪವಿತ್ರವಾದ ಈ ರಾಜ್ಯದ ಹೆಸರಿನ ಬದಲಾವಣೆಯನ್ನು ಜಾತಿಯಗೊಂದಲಕ್ಕೆ ಸಿಕ್ಕಿಸದೆ, ಪೂರ್ಣವಾಗಿ ಈ ರಾಜ್ಯಕ್ಕೆ ಕರ್ಣಾಟಕ ಎಂದು ಹೆಸರು ಇಡಬೇಕಾದ್ದು ನಮ್ಮ ಕರ್ತವ್ಯ. ಇವತ್ತು ಈ ರಾಜ್ಯವನ್ನು ಆಳತಕ್ಕವರು ಕೇವಲ ಲಿಂಗಾಯಿತರೂ ಅಲ್ಲ, ಒಕ್ಕಲಿಗರೂ ಅಲ್ಲ, ಇದು ಜನತೆಯ ರಾಜ್ಯ. ಹರಿಜನರು ಮುಖ್ಯಮಂತ್ರಿಯಾಗಬೇಕೆಂದು ಅನೇಕ ಸಲ ಹೇಳಿದ್ದೇವೆ. ಧೈರ್ಯ ಇದ್ದರೆ ಆ ಕಡೆ ಇದ್ದವರು ನಮ್ಮ ಕಡೆಗೆ ಬನ್ನಿ, ಈ ರಾಜ್ಯಕ್ಕೆ ಅನುಕೂಲವಾಗಬೇಕಾದರೆ ಗಾಂಧಿವಾದವನ್ನು ಅನುಸರಣೆ ಮಾಡಬೇಕಾಗಿದ್ದರೆ ಇವತ್ತು ಜಾತೀಯತೆ ಹೋಗಬೇಕು, ಜಾತೀಯತೆಯನ್ನು ಮುಂದಕ್ಕೆ ತರುತ್ತಾ ಇರುವುದು ಬಹಳ ಅನ್ಯಾಯ. ಇವತ್ತು ಇದು ಜಾತ್ಯಾತೀತ ಸರ್ಕಾರವಾಗಬೇಕು, ರಾಷ್ಟ್ರವಾಗಬೇಕು ಅಲ್ಲಿಗೆ ನಾವು ಗಾಂಧೀಜಿಯವರ ಹೆಸರನ್ನು ಹೇಳುವುದಕ್ಕೆ ಅರ್ಹರಾಗುತ್ತೇವೆಯೇ ಹೊರತು ಅಲ್ಲಿಯವರೆಗೂ ಇಲ್ಲ ಎಂದು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ದೇಶದಲ್ಲಿ ಈ ಚುನಾವಣೆಗಳು ಮತ್ತೆ ನಡೆಯಬೇಕು. ಅವು ಜಾತ್ಯಾತೀತವಾಗಿ ನಡೆಯಬೇಕು. ಇಲ್ಲಿ ಜಾತಿ ಕುಲದ ಹೆಸರನ್ನು ಗೋತ್ರಗಳ ಹೆಸರನ್ನು ಹೇಳುವುದಕ್ಕೆ ಅವಕಾಶವಿಲ್ಲ. ನಮ್ಮಲ್ಲಿರತಕ್ಕದ್ದು ಶ್ರೀಸಾಮಾನ್ಯ ಜಾತಿ ಒಂದೇ. ಹಾಗಿದ್ದರೂ ಈ ದಿವಸ ಯಾವ ಟೋಪಿ ಹಾಕಿಕೊಂಡು ತಮಗೇನೂ ಸ್ಥಾನಮಾನ ಸಿಕ್ಕಿರುವುದಿಲ್ಲವೋ ಅವರು ತಮಗೆ ಒಂದು ಉಪಮಂತ್ರಿ ಸ್ಥಾನಕ್ಕೋ ಅಥವಾ ಮತ್ತೆ ಏನಾದರೂ ಒಂದು ಹೊಟ್ಟೆ ಹೊರೆಯುತಕ್ಕ ಸ್ಥಾನಕ್ಕಾಗಿ ಹೋರಾಟ

ಮಾಡತಕ್ಕ ಜನರು ಈ ಜಾತಿ ಕುಲ ಗೋತ್ರಗಳ ಹೆಸರಿನಲ್ಲಿ ಗೊಂದಲ ಎಬ್ಬಿಸುವುದಕ್ಕೆ ಹೊರಟಿದ್ದಾರೇ ಶಿವಾಯಿ ಬೇರೆ ಯಾವ ಜನರಲ್ಲೂ ಈ ಕುಲಗೋತ್ರಗಳ ಕೋಟಲೆಯಿಲ್ಲ. ಹೀಗೆ ಜಾತಿಯ ಹೆಸರಿನಲ್ಲಿ ಚುನಾವಣೆಗಳು ಎಲ್ಲಿನವರೆಗೂ ನಡೆಯುತ್ತವೆಯೋ ಅಲ್ಲಿನವರೆಗೂ ರಾಜ್ಯಕ್ಕೆ ಅನುಕೂಲವಾಗುವುದಿಲ್ಲ. ಜನರಿಗೆ ಕ್ಷೇಮ ಉಂಟಾಗುವುದೂ ಇಲ್ಲ. ಆದ್ದರಿಂದ ಇದನ್ನು ಬೇಗ ಅಳಿಸಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಆಗಲೆ ಓದಿದ ಪತ್ರವನ್ನು ದಯವಿಟ್ಟು ಹಾಜರ್ಮಾಡಿ...

Sri AZIZ SAIT.—Sir, I overheard you telling the Secretary : "Let us examine whether it is genuine or not". That means you are doubting the *bona fides* of the hon'ble member.

Mr. SPEAKER.—I did not say that.

Sri AZIZ SAIT.—I overheard you.

Mr. SPEAKER.—Nobody said so. It is provided in the rules that whenever a document is referred to or read it must be produced. That is way I asked him to produce it.

Sri AZIZ SAIT.—I overheard you saying "Let us examine whether it is genuine or not". That means you have doubted the bona fides of the hon. member. You should not say like that.

Mr. SPEAKER.—I did not say.

Sri AZIZ SAIT.—I overheard you.

Mr. SPEAKER.—It is wrong to overhear.

† ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ್ (ಮುಂಡರ್ಗಿ).—ಅಧ್ಯಕ್ಷರೇ, ನಾನು ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅಧ್ಯಕ್ಷರೇ, ನಾನಾಗಲೇ ಓದಿದ ಕಾಗದವಿತ್ತಲ್ಲಾ ಅದರ ವಿಷಯಕ್ಕೆ ಸಂಬಂಧಪಟ್ಟ ವೆಂಕಟೇಶ್ ಎಂಬಾತನು ಇಲ್ಲೇ ಬಂದಿದ್ದಾನೆ. ಹೊರಗಡೆ ಕುಳಿತಿದ್ದಾನೆ. ತಾವು ಅಪ್ಪಣೆ ಕೊಟ್ಟರೆ ಆತನನ್ನು ಒಳಗಡೆಗೆ ಕರೆಸಿ ತಾವೇ ಖುದ್ದಾಗಿ ವಿಚಾರ ಮಾಡಿ, ಹರಿಜನ ಸದಸ್ಯರ........

ಅಧ್ಯಕ್ಷರು.—ಆಗತ್ಯವಿಲ್ಲ.

ಶ್ರೀ ಸಿ ಎಂ. ಚುರ್ಚಿಹಾಳ್‌ಮಠ್.—ನಾವು ರಾಜ್ಯದಲ್ಲಿ ಅನೇಕ ಭಾಗದಲ್ಲಿ ಸಾಧನೆಯಾಗಿರ ತಕ್ಕ ಪ್ರಗತಿಯನ್ನು ನಿರೀಕ್ಷಿಸಿದಾಗ ಕಣ್ಣಿಗೆ ಕಾಣಿಸುತ್ತಿರುವುದನ್ನೂ ಕೂಡ ನೋಡದೆ ಜನತೆಗೆ ನಾವು ಸರ್ಕಾರದವರೇನೂ ಸಾಧನೆ ಮಾಡಿಲ್ಲವೆಂದೇ ಹೇಳುತ್ತಿದ್ದೇವೆ. ಆದರೆ ನಾವು ಹಿಂದೆ ರಾಜ್ಯದಲ್ಲಿ ಈ ಯಾವ ಒಂದು ಯೋಜನೆಗಳನ್ನೂ ಇಟ್ಟುಕೊಳ್ಳದಿದ್ದಾಗ ಇಲ್ಲಿ ಏನಾಗಿತ್ತು ಏನಿತ್ತು ಎಂಬುದನ್ನು ನೋಡದೆ, ಯೋಜನೆಗಳನ್ನು ಕೈಗೊಂಡಮೇಲೆ ನಾವೆಷ್ಟು ಸಾಧನೆ ಮಾಡಬೇಕಾಗಿತ್ತು ಅಷ್ಟನ್ನು ನಾವು ಸಾಧಿಸಿಲ್ಲ ಅನ್ನುವುದು ಒಂದೇ ಮುಖ್ಯವಾದುದಲ್ಲ. ಯೋಜನೆಗಳಿಗೂ ಹಿಂದೆ ಇಲ್ಲಿ ಏನಾಗಿತ್ತು ಎಂಬುದನ್ನು ಗಣನೆಗೆ ತಂದುಕೊಂಡರೆ ಇಲ್ಲಿ ಈಗ ಏನಾಗಿದೆ ಎಂಬುದು ತಾನಾಗೇ ಎದ್ದು ಕಾಣುತ್ತದೆ. ನಮ್ಮಲ್ಲಿ ಎಷ್ಟೆಷ್ಟು ಅಭಿವೃದ್ಧಿಯನ್ನು ಸಾಧಿಸಿದ್ದೇವೆಂಬುದು ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತದೆ.

ಇನ್ನು ತುಕ್ಕೋಳ್ ವರದಿಯನ್ನು ಪ್ರಸ್ತಾಪಮಾಡುತ್ತಾ ಕೆಲವರು ಸರ್ಕಾರಿಯ ಅಧಿಕಾರಿ ಗಳಿಗೆ ಮಾತ್ರ ಪ್ರಗತಿಯನ್ನು ಸರ್ಕಾರ ಕೊಡುತ್ತಿದೆಯೇ ವಿನಾ ಈ ಸರ್ಕಾರ ರೈತರ ಕ್ಷೇಮಾಭ್ಯು ದಯದ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ ಎಂದು ಹೇಳಿದ್ದಾರೆ. ನಮ್ಮ ಸರ್ಕಾರ ಆ ರೈತರ ವಿಷಯದಲ್ಲಿ ಅವರ ಅಭಿವೃದ್ಧಿಯ ವಿಷಯದಲ್ಲಿ ಅನೇಕ ರೀತಿಯಲ್ಲಿ ಅನುಕೂಲವನ್ನು ಕಲ್ಪಿಸಿದೆ. ರೈತರಿಗೆ ಭೂಮಿ ಇಲ್ಲದವರಿಗೆ ಭೂಮಿಯನ್ನು ಹಂಚುವುದು, ಉತ್ತಮ ರೀತಿಯ ಬಿತ್ತನೆಯ ಬೀಜ, ಗೊಬ್ಬರ ಇತ್ಯಾದಿ ಗಳನ್ನು ಒದಗಿಸುವುದು ಭೂಮಿಯನ್ನು ಹಸನು ಮಾಡಲಿಕ್ಕೆ ಅನುಕೂಲ ಕಲ್ಪಿಸುವುದು, ದನಕರು ಗಳಿಗೆ ಮೇವನ್ನು ಒದಗಿಸುವುದು ಹೀಗೆ ನಾನಾ ರೀತಿಯಲ್ಲಿ ಸೌಲಭ್ಯಗಳನ್ನು ರೈತರಿಗೂ ಸರ್ಕಾರ

(ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ್)

ಒದಗಿಸಿದೆ. ಇನ್ನು ಎಲ್ಲೆಲ್ಲಿ ಮಳೆಯ ಅಭಾವವಿದೆಯೋ ಅಲ್ಲೆಲ್ಲಾ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅನೇಕ ರೈತರಿಗೆ ಪಂಪ್‌ಸೆಟ್ ವಿದ್ಯುಚ್ಛಕ್ತಿ ಇತ್ಯಾದಿ ಸೌಲಭ್ಯಗಳನ್ನೂ ಒದಗಿಸಲಾಗಿದೆ. ಹೀಗೆ ಸರ್ಕಾರದವರು ಕೇವಲ ಸರ್ಕಾರಿಯ ನೌಕರದಾರರಿಗೊಬ್ಬರಿಗೇ ಅಲ್ಲದೇ ರೈತಾಪಿ ಜನತೆಯ ಅನುಕೂಲಕ್ಕೂ ಸಾಕಷ್ಟು ಗಮನ ಕೊಟ್ಟಿದೆ ಎಂಬುದರಲ್ಲಿ ಸಂಶಯವೇ ಇಲ್ಲ. ಇದೇ ರೀತಿಯಾಗಿ ನಾವು ನಮ್ಮ ವಿದ್ಯಾ ಪ್ರಗತಿಯ ವಿಚಾರಕ್ಕೆ ಬಂದರೆ ಕಳೆದ 20 ವರ್ಷಗಳಲ್ಲಿ ಎಷ್ಟೆಷ್ಟು ಸಾಧನೆ ಮಾಡಿದೆ ಅನ್ನುವುದನ್ನು ಹೇಳತೀರದಾಗಿದೆ. ಆರೋಗ್ಯ ಸೌಲಭ್ಯಗಳೂ ಕೂಡ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿವೆ. ಇಷ್ಟೆಲ್ಲಾ ಪ್ರಗತಿಯನ್ನು ಸಾಧಿಸಿದ್ದರೂ ಅದನ್ನು ಮರೆಮಾಚಿ ಏನೂ ಮಾಡಿಲ್ಲ ಅಂತ ಟೀಕೆ ಮಾಡುವುದು ಸರಿಯಲ್ಲ. ನಮ್ಮ ಸರ್ಕಾರ ಸಂಪೂರ್ಣ ಗುರಿಯನ್ನು ಅಭಿವೃದ್ಧಿಯ ಪಥದಲ್ಲಿ ಮುಟ್ಟದೆ ಇದ್ದರೂ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಆದರೆ ಗುರಿ ಮುಟ್ಟದಿರಬಹುದು. ಆದರೆ ನಾನು ಈ ಹಿನ್ನೆಲೆಯಲ್ಲಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ರಾಜ್ಯಪಾಲರು ತಮ್ಮ ವರದಿಯಲ್ಲಿ ಎರಡು ಆಯುರ್ವೇದ ಕಾಲೇಜುಗಳು ನಮ್ಮಲ್ಲಿ ನಡೆಯುತ್ತಿರುವುದಾಗಿ ಹೇಳಿದ್ದಾರೆ. ಆದರೆ ಅವು ಸರ್ಕಾರಿಯ ಕಾಲೇಜುಗಳು ಅನಿಸಿಕೊಳ್ಳುವುದಕ್ಕೆ ಅವು ಲಾಯಕ್ಕಾಗಿಲ್ಲ. ಅಲ್ಲಿ ಸರಿಯಾದ ಶಿಕ್ಷಕವರ್ಗವಿಲ್ಲ, ಅಲ್ಲಿ ಎಕ್ವಿಪ್‌ಮೆಂಟುಗಳಿಲ್ಲ, ಸಾಕಷ್ಟು ಸಿಬ್ಬಂದಿಯಿಲ್ಲ, ಫಾರಂ ಇಲ್ಲ, ಹೀಗೆ ಯಾವ ಒಂದೂ ಸೌಲಭ್ಯಗಳಿಲ್ಲದ ಕಡೆ ಕೊಡತಕ್ಕ ಶಿಕ್ಷಣದಲ್ಲಿ ಯಾವ ಮಟ್ಟದ ಶಿಕ್ಷಣ ಇರುತ್ತೆ? ಅಲ್ಲಿ ತಯಾರಾದವರು ಪರಿಣತರಾಗುವುದಕ್ಕಾಗಲೀ ಒಳ್ಳೆಯ ಡಾಕ್ಟರುಗಳಾಗುವುದಕ್ಕಾಗಲೀ ಸಾಧ್ಯವಿಲ್ಲ. ಸರ್ಕಾರದವರು ಇವುಗಳಿಗೆ ಕೂಡಲೇ ಸೂಕ್ತ ಸೌಕರ್ಯಗಳನ್ನು ಒದಗಿಸಬೇಕು.

MR. SPEAKER.—Hon'ble Member may stop now and resume his speech on 22nd as it is 6 o'clock now.

SRI M. NAGAPPA.—I was promised to be allowed to move my motion.

MR. SPEAKER.—There are two motions for which I have promised to give time today. As it is getting 6 o'clock, I extend the time of today's sitting by 15 minutes to take up these two motions.

6-00 P.M.

Allotment of seats to defectors

SRI M. NAGAPPA.—Sir, a notice has been given by me under Rule 312 to bring certain matters which cannot be raised as a Point of Order on the Floor of the House, and it is this matter, I saw in the last Session that some of the Members who were just sitting on this Side of the House were found sitting on the other side of the House. The allotment of seats is the concern of the Hon. Speaker as per rule 4 of the Rules of Procedure, and there is also a convention that has been laid down by the several Parliaments and Legislatures, that if we take it as a defection, definitely the defector must necessarily not only inform to his Leader, but also he has to resign from his Party. After resigning, he can request the Hon. Speaker to allot him a seat on the other side. So far as I know, the Hon. Deputy Minister, when he crossed the Floor, he had not resigned his membership from the Party to which he originally belonged. It is also a rule of the Congress Party that a member cannot have membership of two political parties.

Therefore, they should not also accept the defectors unless they are satisfied that members have resigned from the Party to which they belonged previously. I do not want to discuss about the conduct and other things. The Hon. Speaker should be satisfied whether he has resigned his party, and if he is not a partyman, then the Leader of the Opposition should be satisfied that he has resigned. Supposing the speaker may say that he has not yet been recognised as the Leader of the Opposition, still I submit that for all purposes, he is taken as the Leader of the Oppsition. Therefore, such members, till they submit a letter to the Hon. Speaker that they have resigned from their particular party or to the Leader of the Opposition if they do not belong to any Party, the Hon. Speaker is not supposed to allot them a seat on the other Side. So far as I know none of these persons have tendered their resignation to the Opposition Party. Under the circumstances, I take strong objection regarding the allotment of seats on the other Side merely on the letter of some Congress leaders. I submit that this convention which has been laid down by the Speakers of various sister Assemblies as well as Parliament should be followed here also. In support of my argument, I quote a decision from the Chair of the Andhra Pradesh Assembly :

> "On the 17th February, 1959, the Speaker gave the following ruling with regard to the Members who intended to resign from their previous parties and from the Democratic Party :
>
> I want to know whether the hon. Members who want to join the new block (Democratic Party) have sent in their resignation to the Leaders of their respective parties, *i. e.*, those who belong to the Congress Legislature Party to the Leader of that Party and those belonging to the Nationalist Party to the Leader of that party because they were part and parcel of that particular party. Therefore, it is but necessary that they should send their resignations to their party leaders and I hope that they have already sent them.........
>
> It is not necessary that the concerned party leader should inform me that they have submitted their resignations. You may even submit your resignations through me, if you so desire.........while I am not interested in the mutual disputes I have to tell this because it is my duty to ask you to submit your resignations as required under the parliamentary conventions."

It is by convention that the first seat on the right side is allotted to the Chief Minister. But, the rule is silent about it. Seats are allotted to the Ruling Party on the right side and to the Opposition on the left side. The seats should be given according to the strength of the parties. This convention is there. But the conventions are not adopted in this House. Some fine morning some Member sitting on this Side will be sitting on the other side, and we do not know it. First of all, the Hon. Speaker must be satisfied that a member has resigned his Party ;

(SRI M. NAGAPPA)

otherwise such a member may be asked to come and resume his original seat till such time the Speaker is assured that he has tendered his resignation to his original Party.

Defection is very bad for democracy. We see some of the Members are even capped. This capping business is bad and I submit that this should be stopped. Even today I read an artical in a Paper that at least political parties must be so moraly bound that they should not allow a defector. Unless they do it, the situation prevailing in the country cannot be avoided. Therefore, please do not accept such defectors. They must resign and go and seek the verdict of the people from whom they are elected.

With these observations, I submit that this is a very bad and unhealthy situation that has been created. Therefore, well established conventions should be followed henceforth.

Sri D. B. KALMANKAR.—What the rule says is, reallotment of seats should be made.

Mr. SPEAKER.—The hon. member has already explained. Sri Nagappa has explained it thoroughly. Whenever an hon. Member of this House crosses the floor, it is incumbent on my part to inform the Leader of the Party or the group to which he belongs before he joins this party or that party.

Sri K. H. PATIL.—Each member represents one lakh people. Every member is responsible to his Constituency from which he is elected. For example, I am elected against a Congress candidature, the people of my constituency believe that I am here as an opposition member. The purpose for which a member is elected will be defeated if he crosses the floor. That is the point I want to bring to your notice.

Sri M. S. KRISHNAN.—The Congress party has made him to resign. He must seek re-election.

Mr. SPEAKER.—That is not the point before me.

ಶ್ರೀ ವಾಟಾಳ್ ನಾಗರಾಜ್.—ಈ ಪಕ್ಷಾಂತರದ ಬಗ್ಗೆ ಒಂದು ಕಾಗದ ಇದೆ. ಅದನ್ನು ತಮ್ಮಲ್ಲಿ ಕಳಿಸುತ್ತೇನೆ. ಅವರಿಗೆ ಬಹುಮಾನವಾಗಿ ಬಿಚ್ಚಾಲೆ, ಕರಿಮಣಿ ಕಳಿಸಿದ್ದಾರೆ ಅದನ್ನು ತಮ್ಮಲ್ಲಿ ಕಳಿಸುತ್ತೇನೆ.

Mr. SPEAKER.—The hon. member may pass on that paper to me.

Sri H. N NANJEGOUDA (Arkalgud).—It appears he may be made Chairman of the Janatha Bazaar.

Mr. SPEAKER.—I am not concerned with it. I am only concerned with seating arrangements.

Sri D. B. KALMANKAR.—Let us be permitted to have our say in the matter.

Mr. SPEAKER.—I am not concerned with defection. Therefore I cannot allow anybody to speak.

Sri D. B. KALMANKAR.—If every M.L.A. does like this, every one of us will be looked down by electorates.

Mr. SPEAKER.—I have not given my consent for this. So, let there be no more discussion over it. I call upon Sri Bommai to speak.

Sri M NAGAPPA.—Under what rule the Chair asks Mr. Bommai to speak ?

Mr. SPEAKER.—I have heard some members. Therefore, for the same reasons, he wants to be heard.

Sri H. N. NANJE GOWDA.—He will be appointed as Chairman of the Janatha Bazaar, Hubli. It is not the business of the House to hear him. I cannot understand why the Chair is permitting him to speak.

Mr. SPEAKER.—The points raised by Sri Nanje Gowda has no force in it. Sri Nagappa has asked me whether seating arrangements have been made for Sri Bommai. That is the only thing that I have to look into. I am not concerned whether a member has left his party and joined the other party

Sri N. HUTCHMASTI GOWDA.—There are some persons to speak on that. They may please be allowed.

Mr. SPEAKER.—Sri Nagappa and Sri Kalmankar have sufficiently covered all the points. There should be no more discussion on this. This is not a matter to be decided by discussion. The Chair will make the necessary seating arrangement.

Sri M. S. KRISHNAN.—I rise to a point of order Sir. My point of order is that you were pleased to state that it is a matter of only seating and that is why Sri Bommai is called upon to speak. But it is not merely a matter of seating but a matter of cheating the public. If he is prepared to explain that also then you can permit him to speak.

Sri V. N. PATIL.—Sir Bommai is not the only member who should be made a target to explain. There are other members also who have changed their parties. I want to know under what provisions of the rules, the Chair is asking Sri Bommai to explain ?

Mr. SPEAKER.—I am not asking him to explain. I am just giving him an opportunity to express himself if he so desires.

Sri G. CHANDRAKANTH.—Sir when you are giving Sri Bommai an opportunity, then I may also be given an opportunity to speak.

Sri K. H. RANGANATH.—Sir, by now we know that the hon. member has joined Congress and we have read about that in the news papers. He has been offered a cap and he is satisfied. He is also satisfied with the seating arrangement. Unnecessarily why should we sit to hear his views.

ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ್).—ಈ ದಿವಸ ಮಾನ್ಯ ಮಿತ್ರರು ಕೆಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ಆದರಲ್ಲಿಯೂ ಪಕ್ಷಾಂತರದ ಬಗ್ಗೆ ಮತ್ತು ನನಗೆ ಕೊಟ್ಟಿರುವ ಸೀಟಿನ ಬಗ್ಗೆ ಮಾತನಾಡಿದ್ದಾರೆ.

Sri G. CHANDRAKANTH.—I rise to a point of order. May I know under what provisions of the rules, Sri Bommai is given an opportunity to speak. Sri Nagappa while speaking has not referred either to Sri Bommai or to any other member. Therefore Sri Bommai cannot explain his views.

Mr. SPEAKER.—I think the hon'ble member has heard Sri K. H. Patil and some other members. Sri Bommai wants to speak only with regard to the fact whether consent should be given to speak or not.

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಮಾನ್ಯ ಮಿತ್ರರು ಕೆಲವೊಂದು ವಿಷಯಗಳನ್ನು ಮಾತನಾಡಿದ್ದಾರೆ. ನನ್ನ ಮೇಲೆ ಕೆಲವು ಅಪಾದನೆಗಳನ್ನು ಮಾಡಿದ್ದಾರೆ. ನಾಗಪ್ಪನವರ ಮೋಷನ್ ನಲ್ಲಿ........

Sri S. SIVAPPA.—I want to know from the Chair whether any discussion will be allowed on this matter.

Mr. SPEAKER.—No.

Sri S. SIVPPA.—Then why are you calling upon Sri Bommai to speak ?

Sri K. PUTTASWAMY.—May I make a submission Sir. The hon. Member Mr. Nagappa having obtained your permission to raise his point stated his views. I suppose the Chair has taken all relevant factors in allotting the seats. Therefore I humbly submit that it is for the Chair to state its point of view to the hon. Member and there need not be any need for discussion. One other thing is that let not my friends on the Opposition side mistake me; if they had only taken up this point little earlier, it would have saved a lot of time. But still, now they have taken up, better late than never, it is for the Chair to express its re-actions.

Mr. SPEAKER.—I think it is not necessary for Sri Bommai to explain. When no reference has been made why does he want to involve himself unnecessarily ?

Sri S. R. BOMMAI.—I want to make an explanation only as to whether I have resigned from a particicular party and joined the other party. I will speek only on this point.

Sri M. S. KRISHNAN.—I rise to a point of order. Sir, you were pleased to permit Sri Bommai few minutes earlier to speak. Now whether you have got the power to withdraw that permission, I want to know.

Mr. SPEAKER.—I can request the hon. Member not to press his point.

Sri S. R. BOMMAI.—Sir, my point is that while speaking some hon. Member has mentioned my name. I want to defend myself and explain to this House.

ಶ್ರೀ ಎಸ್. ಶಿವಪ್ಪ.—ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಎಂದು ಹೇಳಿದಹಾಗೆ.

Sri K. PUTTASWAMY.—Sir, as far as hon. Member Mr. Nagappa is concerned he has not made any reference to any member. But particularly hon. Member Mr. Krishnan not only made reference to Sri Bommai but also stated that he has cheated and he has to explain. I am very sorry that in this August House an hon. Member like Sri Krishnan should have stated like that.

(Several members rose to speak)

Mr. SPEAKER.—I shall give my ruling tomorrow.

6–30 P.M.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಯಾವ ಪಕ್ಷಕ್ಕೆ ಸೇರಿದ್ದೆನೋ ಆ ಪಕ್ಷವಾದ ಲೋಕ ಸೇವಾ ಸಂಘಕ್ಕೆ ರಾಜೀನಾಮೆ ಕೊಟ್ಟಿದ್ದೇನೆ. ಇಲ್ಲಿ ಶಾಸಕಪಕ್ಷದ ನಾಯಕ ನಾನೇ ಆಗಿರುವುದ ರಿಂದ ರಾಜೀನಾಮೆ ಪ್ರಶ್ನೆ ಬರುವುದಿಲ್ಲ. ಈ ಬಗ್ಗೆ ನಾನು ಶ್ರೀ ಶಿವಪ್ಪನವರಿಗೆ ತಿಳಿಸಿದ್ದೇನೆ. ವಿರೋಧ ಪಕ್ಷಕ್ಕೆ ರಾಜಿನಾಮೆ ನೀಡುವ ಬಗ್ಗೆ ಹೇಳುವುದಾದರೆ ಅವರು ನನ್ನನ್ನು ಮೆಂಬರ್‌ಷಿಪ್‌ಗೆ ಅಲೋ ಮಾಡಿಲ್ಲ...

(Interruption from Opposition Benches)

Mr. SPEAKER.—I shall give a ruling. I have heard all the Members including Sri Bommai. I shall give my ruling tomorrow on this.

Meanwhile, I promised that I would give an opportunity to Sri Vatal Nagaraj this evening. Let him say what he wants to say within a couple of minutes. Members are evidently tired at the end of the day. It is probably necessary to extend the time. I extend the time by another five minutes.

Ruling re: Breach of Privilege committed by a Minister by Undertaking Tour in the Constituency of an Opposition Member.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನವೆಂಬರ್ 10ನೇ ತಾರೀಖು ನನ್ನ ಕ್ಷೇತ್ರವಾದ ಚಿಕ್ಕಪೇಟೆಗೆ ಆಗಿನ ಪುರಸಭಾ ಸಚಿವರಾಗಿದ್ದ ಶ್ರೀ ಪುಟ್ಟಸ್ವಾಮಿಯವರು ಪರಿಶೀಲನೆಗೆ ಬಂದಾಗ ಜೊತೆಯಲ್ಲಿ ಬೆಂಗಳೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ವೈ. ರಾಮಚಂದ್ರ ಅವರನ್ನು ಕರೆದುಕೊಂಡು ಬಂದಿದ್ದರು. ನನಗನ್ನಿಸುತ್ತದೆ, ಬೇರೆ ಪಕ್ಷಗಳಾದ ಪಿ.ಎಸ್.ಪಿ., ಎಸ್.ಎಸ್.ಪಿ. ಮುಂತಾದ ಪಕ್ಷಗಳ ಅಧ್ಯಕ್ಷರನ್ನು ಬಿಟ್ಟು ಕೇವಲ ಕಾಂಗ್ರೆಸ್ ಪಕ್ಷದ ಅಧ್ಯಕ್ಷರನ್ನು ಕರೆದುಕೊಂಡು ಬಂದಿದ್ದು ಶ್ರೀ ವೈ. ರಾಮಚಂದ್ರ ಅವರ ಪ್ರಭಾವವನ್ನು ನನ್ನ ಕ್ಷೇತ್ರದಲ್ಲಿ ಬೆಳೆಸುವುದಕ್ಕಾಗಿ, ಕಾಂಗ್ರೆಸ್ ಪಕ್ಷದ ಪ್ರಭಾವವನ್ನು ಬೆಳೆಸುವುದಕ್ಕಾಗಿ ಮತ್ತು ನನ್ನ ಕೆಲಸಗಳಿಗೆ ಅಡ್ಡಿ ಆತಂಕವನ್ನು ಉಂಟು ಮಾಡುವುದಕ್ಕಾಗಿ ಅವರನ್ನು ಕರೆದುಕೊಂಡು ಬಂದಿದ್ದರು ಎಂಬುದಾಗಿ. ವೈ. ರಾಮಚಂದ್ರ ಅವರು ಇವರ ಜೊತೆಯಲ್ಲಿ ಬರುವುದಕ್ಕೆ ಅಧಿಕಾರವಿಲ್ಲ. ಇವತ್ತಿನ ದಿವಸ ಶ್ರೀ ವೈ. ರಾಮಚಂದ್ರ ಅವರು ನನ್ನ ಕ್ಷೇತ್ರದಲ್ಲಿ ಮತ್ತೆ ತಮ್ಮ ಪ್ರಭಾವವನ್ನು ಬೆಳೆಸುವುದಕ್ಕೋಸ್ಕರ ಪ್ರಯತ್ನ ಮಾಡು ತ್ತಿದ್ದಾರೆ. ನನ್ನ ಜೊತೆಯಲ್ಲಿ ಮಂತ್ರಿಗಳು ಬರುತ್ತಾರೆ, ಆದರೆ ವಾಟಾಳ್ ನಾಗರಾಜ್ ಅವರ ಜೊತೆಯಲ್ಲಿ ಯಾವ ಮಂತ್ರಿಗಳು ಸಹ ಬರುವುದಿಲ್ಲ, ಆದ್ದರಿಂದ ನನಗೆ ಹಣ ಕೊಡಿ, ಸನ್ಮಾನ ಮಾಡಿ ಎಂದು ಕಂಟ್ರಾಕ್ಟರ್‌ಗಳ ಹತ್ತಿರ ಕೇಳಿಕೊಳ್ಳುತ್ತಿದ್ದಾರೆ. ನಾನು ಮತ್ತೆ ಈ ಕ್ಷೇತ್ರದಿಂದ ಆರಿಸಿ ಬರುವುದಕ್ಕೆ ಪ್ರೋತ್ಸಾಹ ಕೊಡಬೇಕೆಂದು ನನ್ನ ಕ್ಷೇತ್ರದಲ್ಲಿ ಟಾಂ ಟಾಂ ಮಾಡಿಕೊಂಡು ಬರುತ್ತಿದ್ದಾರೆ. ತನ್ನ ಸ್ವಂತ ಪ್ರಭಾವವನ್ನು ನನ್ನ ಕ್ಷೇತ್ರದಲ್ಲಿ ಬೆಳೆಸಿಕೊಳ್ಳುವುದಕ್ಕೆ ಅವರು ಹೋಗುತ್ತಿರುವುದರಿಂದ ನನ್ನ ಹಕ್ಕುಬಾಧ್ಯತೆಗೆ ಧಕ್ಕೆಯಾಗುತ್ತಿದೆಯೆಂದು ತಿಳಿಸುತ್ತೇನೆ.

SRI M. S. KRISHNAN.—I want to draw your attention to the circular which you have issued. Probably you have seen that circular...

SRI K. PUTTASWAMY.—Sri Vatal Nagaraj stated that I had gone for an inspection along with Sri Y. Ramachandra. If he had come I would have been very happy. I had informed him that I am going there. But due to certain pre-occupation, he did not come. That is a matter of fact. As far as the question of privilege that the hon'ble Member is complaining of is concerned, may I humbly submit that the question of privilege does not arise for an action which the Minister takes outside the House, especially when the rights of the hon. Member are not interfered with. I have not interfered with the rights of the hon'ble Member and I therefore humbly submit that there is no question of breach of privilege.

MR. SPEAKER.—The ruling is already given on the motion of Sri Vatal Nagaraj. When I received his notice, I heard the hon'ble Member Sri Nagaraj in my chambers and after hearing him fully, and after giving him an opportunity to state his case here also, I came to the conclusion that no breach of privilege is involved. His complaint is that the Hon'ble Minister Sri K. Puttaswamy invited the President of the Bangalore District Congress Committee, Sri Y. Ramachandra to accompany him. Whom the Minister should invite and whom he should not invite, is a matter entirely left to the Hon'ble Minister. My only concern here is to see whether the rights of Sri Vatal Nagaraj were in any way interfered with in any manner. One of the tests of breach of privilege is, the conduct of the Minister complained of by the hon'ble Member should be such as to render him not to function effectively or participate in the business of the House in an effective manner on the floor of the House as a Member. Viewed by this standard, I find that the alleged conduct of the Hon'ble Minister Sri K. Puttaswamy has not interfered with the rights of Sri Vatal Nagaraj. Hence I came to the conclusion and that conclusion is already conveyed to him. I find that there is no breach of privilege involved in it.

The House will now rise and meet at 12 Noon tomorrow.

The Assembly adjourned at Forty Minutes past Six of the Clock to meet again at Twelve of the Clock on Tuesday, the 21st January 1969.

WO 11907 -GPB-600-24-2-69

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 21st January 1969

The House met in the Assembly Chamber, Vidhana Soudha, Bangalore at Twelve of the Clock.

MR. SPEAKER (Sri S. D. KOTHAVALE) in the Chair.

STARRED QUESTIONS

(to which oral answers were given)

Payment of withheld D.A.

132. Sri K. P. NADAGOUDA (Mudhol).—

Will the Minister for Finance, Planning and Youth Welfare be pleased to state :—

(*a*) whether Government propose to issue separate orders indicating the procedure to be followed for payment of increased (withheld) D.A. to the N.G.Os' of the State ;

(*b*) the opinion of the Accountant General in this respect ;

(*c*) whether there is any time limit to implement this procedure ?

Sri RAMAKRISHNA HEGDE (Minister for Finance, Planning and Youth Welfare).—

(*a*) Yes.

(*b*) The Accountant General has pointed out certain difficulties in accounting if the amounts are held in Government Accounts since thousands of accounts have to be maintained by the Offices.

(*c*) No.

ಈ ಪ್ರಶ್ನೆಯ ಸಂದರ್ಭದಲ್ಲಿ ಈ ಮಾನ್ಯ ಸಭೆಗೆ ಒಂದು ವಿಷಯವನ್ನು ತಿಳಿಸಬಯಸುತ್ತೇನೆ. ಜನವರಿ ಒಂದನೇ ತಾರೀಖಿನಿಂದ ಹೆಚ್ಚುವರಿ ತುಟ್ಟಿಭತ್ಯವನ್ನು ಸರ್ಕಾರದ ನೌಕರರಿಗೆ ನಗದಾಗಿ ಕೊಡಬೇಕೆಂದು ಸರ್ಕಾರ ತೀರ್ಮಾನಿಸಿದೆ.

ಶ್ರೀ ಕೆ. ಪಿ. ನಾಡಗೌಡ.—ಹೆಚ್ಚಿಸಲ್ಪಟ್ಟ ತುಟ್ಟಿಭತ್ಯವನ್ನು ತಡೆಹಿಡಿದಿದ್ದು ರಾಜ್ಯ ಸರ್ಕಾರದಲ್ಲಿ ಹಣವಿಲ್ಲವೆಂತಲೋ ಅಥವಾ ಕಾರ್ಯವಿಧಾನವನ್ನು ಕಂಡುಹಿಡಿಯುವುದರಲ್ಲಿ ಸರ್ಕಾರದ ಉದ್ಯಮಕ್ಕೆ ಅಭಾವವೆಂತಲೋ? ಇದರಲ್ಲಿ ಸರ್ಕಾರದ ಬುದ್ಧಿಮಟ್ಟ ಅಭಾವವೋ ಅಥವಾ ಹಣದ ಅಭಾವವೋ ?

† ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ನೆನಪು ಇದ್ದರೆ, ಈ ನಿರ್ಣಯವನ್ನು ನಾವು ಘೋಷಿಸುವಾಗಲೇ ಸುಮಾರು ಮೂರನೇ ಒಂದು ಭಾಗದಷ್ಟು ಹೆಚ್ಚುವರಿ ತುಟ್ಟಿಭತ್ಯವನ್ನು ಸರ್ಕಾರದಲ್ಲಿಯೇ ನಾವು ಇಟ್ಟುಕೊಳ್ಳುತ್ತೇವೆಂದು ಹೇಳಿದ್ದೆವು. ಅದರ ಉದ್ದೇಶ ಎರಡು. ಮೊದಲನೆಯದು, ಅಷ್ಟು ಹಣವನ್ನು ಒಮ್ಮೆಲೇ ಸರ್ಕಾರದಿಂದ ಕೊಡುವುದಕ್ಕೆ ಸಾಧ್ಯವಾಗುವ ಪರಿಸ್ಥಿತಿಯಲ್ಲಿರಲಿಲ್ಲ. ಎರಡನೆಯದು, ಹೆಚ್ಚು ಹಣವನ್ನು ಪುನಃ ಸರ್ಕ್ಯುಲೇಷನ್‌ಗೆ ಹಾಕಿದರೆ ಅದರ ಪರಿಣಾಮ ಬೆಲೆಯ ಮೇಲೆ ಮತ್ತಷ್ಟು ಆಗುತ್ತದೆ. ಈ ಎರಡು ಕಾರಣಗಳಿಂದ ಮೂರನೆಯ ಒಂದು ಭಾಗದಷ್ಟು ತುಟ್ಟಿಭತ್ಯವನ್ನು ಅವರದಾಗಿ ಸರ್ಕಾರದಲ್ಲಿಡಬೇಕೆಂಬ ತೀರ್ಮಾನಮಾಡಿದ್ದು. ಈಗ ಅವರ ಬೇಡಿಕೆಯನ್ನು ಅನುಲಕ್ಷಿಸಿ ಇದೇ ತಿಂಗಳ ಮೊದಲನೆಯ ತಾರೀಖಿನಿಂದ ಹೆಚ್ಚುವರಿ ತುಟ್ಟಿಭತ್ಯವನ್ನು ನಗದಾಗಿ ಕೊಡುವ ತೀರ್ಮಾನ ಸರ್ಕಾರ ಮಾಡಿದೆ. ಮತ್ತು ಕಳೆದ ಮಾರ್ಚಿ ತಿಂಗಳಿಂದ ಡಿಸೆಂಬರ್ ಕೊನೆವರಿಗೆ ಅವರಿಗೆ ಕೊಡಬೇಕಾದ ಒಟ್ಟು ತಡೆಹಿಡಿದ ತುಟ್ಟಿಭತ್ಯ ಏನಿದೆಯೋ ಅದನ್ನು ರಾಷ್ಟ್ರೀಯ ಉಳಿತಾಯದಲ್ಲಿ ಅವರ ಹೆಸರಿನಲ್ಲಿ ತೊಡಗಿಸುತ್ತೇವೆ. ಅದು ಕೆಲವು ಕಾಲದನಂತರ ಅವರಿಗೆ ಸಿಗುತ್ತದೆ.

Arrack and Toddy Vending Licence

137. Sri SADASHIVAPPA PATIL (Deodurg).—

Will the Minister for Finance, Planning and Youth Welfare be pleased to state :—

(*a*) whether the Supreme Court has set aside the order of Divisional Commissioner, Gulbarga cancelling the Arrack and Toddy vending licence given to a contractor and directed to Mysore Government to immediately restore the licence in his favour ;

(*b*) whether the Government in persuance of the direction of the Supreme Court has restored the licence in favour of the above contractor ?

Sri RAMAKRISHNA HEGDE (Minister for Finance, Planning and Youth Welfare).—

(*a*) Yes.

(*b*) Yes.

ಶ್ರೀ ಸದಾಶಿವಪ್ಪ ಪಾಟೀಲ್.—(ಅ) ದ ಪ್ರಶ್ನೆಯಲ್ಲಿ ವಿಭಾಗಾಧಿಕಾರಿಯವರು ನೀಡಿದ್ದ ಆದೇಶವನ್ನು ಉಚ್ಚತಮ ನ್ಯಾಯಾಲಯದವರು ತಳ್ಳಿಹಾಕಿ ಅವರಿಗೆ ಕೊಟ್ಟಿದ್ದ ಪರವಾನೆಯನ್ನು ಕೂಡಲೇ ಹಿಂತೆಗೆದುಕೊಳ್ಳುವಂತೆ ರಾಜ್ಯಸರ್ಕಾರದವರಿಗೆ ನಿರ್ದೇಶಿಸಿದ್ದಾರೆಯೇ ಎಂದು ಕೇಳಿದ್ದಕ್ಕೆ, ಹೌದು ಎಂದು ಹೇಳಿದ್ದೀರಿ. ಈಗ ಮೊದಲು ಇರತಕ್ಕಂತಹ ಕಂಟ್ರಾಕ್ಟರಿಂದ ಉಚ್ಚನ್ಯಾಯಾಲಯದಲ್ಲಿ ತೀರ್ಪು ಕೊಟ್ಟ ಬಳಿಕ ಎಷ್ಟು ದಿವಸಗಳಲ್ಲಿ ನಿರಂಜನರವರಿಗೆ 12,000 ಶಾಪ್‌ಗಳನ್ನು ಕೊಡಿಸಿದ್ದೀರಿ ?

† Indicates that the remarks or speeches have not been revised by the member consernd

†ಶ್ರೀ ರಾಮಕೃಷ್ಣ ಹೆಗಡೆ.—ಹೈಕೋರ್ಟಿನ ಆಜ್ಞೆ ಮೊದಲನೇ ಸಲ ಆದಾಗ ಒಂದು ಸಲ ಭೂಮರೆಡ್ಡಿಯವರಿಗೆ ಒಂದು ಸಾವಿರದ ಒಂದು ನೂರು ಚಿಲ್ಲರೆ ಅಂಗಡಿಗಳನ್ನು ಕೊಡಲಾಯಿತು. ಪುನಃ ಹೈಕೋರ್ಟಿನ ಆಜ್ಞೆ ಆದಮೇಲೆ ಎಷ್ಟೋ ಅಂಗಡಿಗಳಿಗೆ ಲೈಸೆನ್ಸ್ ಸರ್ಕಾರ ಕೊಟ್ಟಿದೆ. ಮೊದಲಿನ ಸಲ ಹೈಕೋರ್ಟಿನ ಏನು ಸ್ಟೇ ಆರ್ಡರ್ ಕೊಟ್ಟರು, ಡೈರೆಕ್ಷನ್ಸ್ ಏನು ಕೊಟ್ಟರು, ಆ ದಿನ ಭಾನುವಾರ ಇದ್ದರೂ, ಕೂಡ ಒಂದು ದಿವಸದೊಳಗೆ ಅಧಿಕಾರಿಗಳು ಕೆಲಸ ಮಾಡಿ ಎಲ್ಲಾ ಲೈಸೆನ್ಸ್ ಕೊಟ್ಟಿದ್ದಾರೆ.

ಶ್ರೀ ಸದಾಶಿವಪ್ಪ ಪಾಟೀಲ್.—ಒಂದೇ ದಿವಸದಲ್ಲಿ ಈ ಹೈಕೋರ್ಟಿನ ಆರ್ಡರ್ ಪ್ರಕಾರ ಅವರಿಗೆ ಇವರಿಗೆ ಕೊಡಿಸಿದ್ದಾರೆಂದು ಹೇಳಿದ್ದೀರಿ. ಈ ಸುಪ್ರೀಂ ಕೋರ್ಟಿನ ತೀರ್ಪು ಆದ ಬಳಿಕ ಭೂಮರೆಡ್ಡಿಯವರಿಗೆ ಕೊಡಲು 8-10 ದಿವಸವಾಗಲು ಕಾರಣವೇನು ? ಅಷ್ಟು ದಿವಸ ಏಕೆ ತಗಲಿತು ?

Mr. SPEAKER.—The second part of the supplementary is not permitted.

ಶ್ರೀ ರಾಮಕೃಷ್ಣ ಹೆಗಡೆ.—ಸುಪ್ರೀಂ ಕೋರ್ಟಿನಲ್ಲಿ ಜಡ್ಜ್‌ಮೆಂಟ್ ಆದುದು ಡಿಸೆಂಬರ್ 5ನೇ ತಾರೀಕು. ನಮ್ಮ ಸರ್ಕಾರಕ್ಕೆ ಅದರ ಕನ್‌ಫರ್ಮೇಟರಿ ಇನ್‌ಫರ್ಮೇಶನ್ ಬಂದದ್ದು 7ನೇ ತಾರೀಕಿಗೆ. 7ನೇ ತಾರೀಕು ಶನಿವಾರ ಮತ್ತು 3 ದಿವಸದ ಹಿಂದೆ ಎಕ್ಸೈಸ್ ಕಮಿಷನರ್ ದಕ್ಷಿಣ ಭಾರತದ ಸೇಲ್ಸ್‌ಟ್ಯಾಕ್ಸ್ ಕಾನ್‌ಫರೆನ್ಸಿಗೆ ಕೇರಳಕ್ಕೆ ಹೋಗಿದ್ದರು ; ಸುಪ್ರೀಂ ಕೋರ್ಟಿನ ಆಜ್ಞೆ ಪ್ರಕಾರ ಕಮಿಷನರ್ ಲೈಸೆನ್ಸ್ ಕೊಡಬೇಕೆಂದು ಒಂದು ಆಜ್ಞೆ ಇದೆ. ಅದರಿಂದಾಗಿ 8ನೇ ತಾರೀಖಿಗೆ ಭಾನುವಾರ ಕಮಿಷನರ್ ಬೆಂಗಳೂರಿಗೆ ಬಂದ ದಿವಸ ಸುಪ್ರೀಂ ಕೋರ್ಟಿನ ಆರ್ಡರ್ ಜಾರಿಗೆ ಕೊಟ್ಟರು.

Beedi and Cigar Premises Act

181. Sri M. S. KRISHNAN (Malleswaram).—

Will the Minister for Law, Labour and Parliamentary Affairs be pleased to state :—

(a) whether the Government is aware that the Beedi and Cigar Premises Act passed by the Parliament has to be implemented by the State Government ;

(b) whether Government is aware that due to the non-implementation/non-enforcement of this Act governing conditions of salaries of the Beedi workers in our State and the implementation of the same in Kerala State some of the biggest Beedi managements have closed down their factories in Kerala and shifted to Mysore ;

(c) the action the Government intend to take to enforce the above Act ?

Mr. K. PUTTASWAMY (Minister for Law, Labour and Parliamentary Affairs).—

(a) No.

(b) No.

(c) The State Government have already taken a decision to repeal the State Act—The Mysore Beedi Industrial Premises (Regulation of Conditions of Work) Act 1964. After repealing the State Act, the Central Act will be brought into force.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಮೈಸೂರು ರಾಜ್ಯದಲ್ಲಿ ಬೀಡಿ ಕೆಲಸಗಾರರಿಗೆ ಸಂಬಂಧಪಟ್ಟ ಹಾಗೆ ಒಂದು ಶಾಸನ ಇದೆ. ಕೇಂದ್ರ ಸರ್ಕಾರದಲ್ಲಿಯೂ ಇಂಥಾ ಒಂದು ಶಾಸನವನ್ನು ತೆಗೆದುಕೊಂಡು ಬಂದಿದ್ದಾರೆ. ಈ ಎರಡು ಶಾಸನಗಳಲ್ಲಿ ಏನು ವ್ಯತ್ಯಾಸಗಳಿವೆ, ಇದರಲ್ಲಿ ಯಾವುದು ಉತ್ತಮವಾಗಿದೆ ಎಂಬುದನ್ನ ಹೇಳುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಎರಡು ಶಾಸನಗಳಲ್ಲಿ ವ್ಯತ್ಯಾಸ ಇದೆ ಎನ್ನುವುದನ್ನು ಮಾನ್ಯ ಸದಸ್ಯರು ಓದಿ ತಿಳಿದುಕೊಳ್ಳುವುದಕ್ಕೆ ಅವಕಾಶ ಇದೆ. ಈಗ ಅದಕ್ಕೆ ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ಸಮಯವಿಲ್ಲ ಎಂದು ನಾನು ಭಾವನೆ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಅದನ್ನು ಓದಿ ತಿಳಿದುಕೊಂಡಿದ್ದೇನೆ. ಇಲ್ಲಿ ನನ್ನ ಪ್ರಶ್ನೆ ಏನೆಂದರೆ ಈ ಶಾಸನಗಳಲ್ಲಿ ಯಾವುದು ಉತ್ತಮವಾಗಿದೆ ಎಂದು. ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ, ಕೇಂದ್ರದ ಶಾಸನವನ್ನು ರಾಜ್ಯದಲ್ಲಿ ಜಾರಿಗೆ ತರುತ್ತೀರಾ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ, ಮೂರನೇ ಪ್ರಶ್ನೆಗೆ ಉತ್ತರವಾಗಿ ಇದನ್ನು ಜಾರಿಗೆ ತರುತ್ತೇವೆ ಎಂದು ಹೇಳಿದ್ದೀರಿ. ಇದರಲ್ಲಿ ಯಾವುದು ಉತ್ತಮವಾಗಿದೆ ?

SrI K. PUTTASWAMY.—There are almost similar.

Structural Plant of M. I. S. L.

209. Sri ABDUL KHUDDUS ANWAR (Bhadravathi)-—

Will the Minister for Industries, Information and Publicity be pleased to state :—

(*a*) the amount spent over the renovation of new structural plant in the Mysore Iron and Steel Ltd., Bhadravathi ;

(*b*) the type of machinery installed in this plant ;

(*c*) who fabricated the structural works of the new-steel plant ?

Sri M. RAJASEKHARA MURTHY (Minister for Industries, Information and Publicity).—

(*a*) No renovation of this unit was done. The old structural shop was shifted to a new locality and it was expanded. The expenditure for the construction of the new structural shop was Rs. 25,92,000.

(*b*) The following type of machineries are installed :—

(1) Guillotine shearing and punching machines.
(2) Oxy-Acetylene gas cutting equipment.
(3) Metal Cutting cold saws.
(4) Radial drilling machines.
(5) Structural bending machine.
(6) Plate bending rolls.
(7) Spot welding machine.
(8) Arc welding sets.
(9) Air compressors and tools.
(10) E. O. T. Cranes.
(11) Power hammers and Air blower.

(c) The structural works for the new steel plant were fabricated in the structural shop of the Mysore Iron and Steel Limited.

Sri ABDUL KHUDDUS ANWAR.—Supplementary to (a) are the machinery and plant working now ?

Sri M. RAJASEKHARA MURTHY.—Yes.

Sri ABDUL KHUDDUS ANWAR.—What warranted the Government to give this contract to I. D. C. and Verghese Co.? Is it that other people were not capable of manufacturing these materials ?

Sri M. RAJASEKHARA MURTHY.—The capacity of the old structural plant was only 3000 tons per annum. We required a capacity of 13,356 tons of structural steel, but we were able to manufacture only 6000 tons in two years and so the rest had to be got done from an outside agency and so tenders were invited and the contract was given.

Sri ABDUL KHUDDUS ANWAR.—What is the investment by I.D.C.?

Sri M. RAJASEKHARA MURTHY.—They are only Consultants and they are not investing anything.

Distruction of Standing Sugar Crops

224. Sri S. S. ARAKERI (Balloli).—

Will the Chief Minister be pleased to state.—

(a) the date when the standing sugarcane crops belonging to Harijans in S. Nos. I and 2 of Margol village of Chittapur Taluk in Gulbarga district was destroyed ;

(b) the reasons for not registering complaints against 32 persons who were involved in this offence ;

(c) the steps the Government propose to take against the Police Officer of Chittapur who did not register the case ;

(d) whether the Government has received any complaint from the complainant, if so, the action taken for the safety of the complainant and his property ?

Sri MANIKRAO PATIL (Deputy Minister for Home).—

(a) 1st November 1968 as alleged by the complainant.

(b) A complaint has been registered.

(c) There has been a little delay in registering the complaint and the Officer responsible for the same is being dealt with departmentally.

(d) Yes ; one P.C. was deputed to afford protection and to avert breach of peace.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕು ಮಾರ್ಗೋಳ್ ಗ್ರಾಮದ ಕೊಯ್ಲಿಗೆ ಬಂದಿದ್ದ ಹರಿಜನರಿಗೆ ಸೇರಿದ್ದ ಕಬ್ಬಿನ ಬೆಳೆಗಳ ನಾಶದ ಸಂಬಂಧದಲ್ಲಿ ಒಂದು ದೂರನ್ನು ದಾಖಲ್ ಮಾಡಲಾಗಿದೆ ಎಂದು ಹೇಳಿದ್ದೀರಿ, ಈ ಅಪರಾಧದಲ್ಲಿ ಸಿಕ್ಕಿಕೊಂಡಿದ್ದ 32 ಜನಗಳಲ್ಲಿ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆ ?

† **Sri MANIK RAO PATIL.**—Almost all persons have been arrested and they have been released on bail.

ಶ್ರೀ ಎಸ್. ಎಸ್. ಅರಕೇರಿ.—ಕಬ್ಬಿನ ಬೆಳೆಯನ್ನು ನಾಶಮಾಡಲ್ಪಟ್ಟ ಜಮೀನಿನ ಮಾಲೀಕರಿಗೆ ಏನಾದರೂ ಕಾಂಪೆನ್‌ಸೇಷನ್ ಕೊಟ್ಟಿದ್ದೀರಾ ?

Sri MANIK RAO PATIL.—It is a dispute between the mortgagee and the mortgagor. It will be dealt with according to law and no question of compensation arises.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಈ ರೀತಿಯಾಗಿ ಈ ರಾಜ್ಯದಲ್ಲಿ ಹರಿಜನ ಗಿರಿಜನರಿಗೆ ಸೇರಿದ ಜಮೀನುಗಳಲ್ಲಿ ದರೋಡೆ ಮಾಡತಕ್ಕದ್ದು, ಅವರನ್ನು ಕೊಲೆಮಾಡತಕ್ಕದ್ದು, ಮತ್ತು ಅವರನ್ನು ಸರ್ವನಾಶ ಮಾಡತಕ್ಕದ್ದು ವಿಶೇಷವಾಗಿದೆ. ಇದನ್ನು ತಡೆಮಾಡತಕ್ಕ ಮಾರ್ಗವನ್ನು ಹೇಳುತ್ತೀರಾ ?

Sri MANIK RAO PATIL.—I have already replied it is a dispute between the mortgagee and mortgagor and no question of atrocity against Harijans comes here. If there are any specific instances before the hon. Member, he can pass on the same and Government has potential capacity to take drastic action against these people.

Holenarasipur Taluk Regulated Market Committee

268. **Sri H. D. DEVE GOWDA** (Holenarasipur).—

Will the Minister for Development be pleased to state :—

(*a*) the amount of loan, Managerial cost and grant given to Holenarasipur Taluk Regulated Market Committee, since its inception till today from the State Government ;

(*b*) the revenue and expenditure of Taluk Regulated Market Committee from its inception till today (Yearwis breakup may kindly be furnished) ;

(*c*) whether there is any proposal to close this Regulated Market as there is no scope for its development by sanctioning alternatively a Sub-Market for Holenarasipur ?

Sri B. L. GOWDA (Deputy Minister for Co-operation).—

(*a*) Rs. 5,000 as loan.

No managerial cost or grant has been sanctioned.

(*b*)	*Year*	*Receipts*	*Expenditure*
	1965-66	Rs. 5,250-00	Rs. 546-00
	1966-67	Rs. 2,918-44	Rs. 4,370-92
	1967-68	Rs. 4,270-97	Rs. 5,788-21
	1968-69*	Rs. 2,909-16	Rs. 4,324-21

* from 1-4-1968 to 30-11-1968.

(*c*) No.

There is scope for developing this market and necessary action is being taken.

ಶ್ರೀ ಎಚ್. ಡಿ. ದೇವೇಗೌಡ.—1965ರಿಂದ 1968ರವರೆಗೆ ಆದಾಯ ಮತ್ತು ಖರ್ಚನ್ನು ನೋಡುವುದಾದರೆ ನಷ್ಟವಾಗುತ್ತಿದೆಯೆಂದು ಗೊತ್ತಾಗುತ್ತದೆ. (ಇ) ಉತ್ತರವಾಗಿ ಕ್ರಮ ವನ್ನು ಕೈಕೊಳ್ಳಲಾಗುತ್ತಿದೆಯೆಂದು ಹೇಳಿದ್ದೀರಿ. ಯಾವ ಯಾವ ಕ್ರಮವನ್ನು ತೆಗೆದುಕೊಂಡಿ ದ್ದೀರಿ ಎಂದು ಹೇಳುತ್ತೀರಾ ?

† ಶ್ರೀ ಬಿ. ಎಲ್. ಗೌಡ.—ಈಗ ನಷ್ಟವಾಗುತ್ತಿಲ್ಲ. ಎರಡು ಮೂರು ವರ್ಷಗಳಿಂದ ಸರ್ಕಾ ರದಿಂದ ತೆಗೆದುಕೊಂಡ ಸಾಲವನ್ನು ವಾಪಸ್ ಕೊಟ್ಟಿದ್ದಾರೆ. ಈಗ ಆದಾಯ ಖರ್ಚು ಸರಿಸಮ ವಾಗಿದೆ. ಆದ್ದರಿಂದ ಈ ನಿಯಂತ್ರಿತ ಮಾರುಕಟ್ಟೆಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಅವಕಾಶ ಇದೆ. ಆದ್ದರಿಂದ ಮುಂದುವರಿಸುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.— ಮುಂದುವರಿಸುವುದಕ್ಕೆ ನನ್ನ ಅಡ್ಡಿ ಇಲ್ಲ. ಆದರೆ ಅಭಿವೃದ್ಧಿ ಗೊಳಿಸುವುದಕ್ಕೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಹೊಸ ಕಾಯಿದೆ ಪ್ರಕಾರ ಇಡೀ ತಾಲ್ಲೂಕ್‌ಗೆ ಅನ್ವಯವಾಗುವು ದರಿಂದ ಈ ನಿಯಂತ್ರಿತ ಮಾರುಕಟ್ಟೆಯನ್ನು ಮುಂದುವರಿಸುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಹೊಸ ಕಾಯಿದೆ ಇಡೀ ತಾಲ್ಲೂಕ್‌ಗೆ ಅನ್ವಯವಾಗುತ್ತ ದೆಂದು ಹೇಳಿದಿರಿ. ದಿನಬಳಕೆಯ ಎಲ್ಲಾ ವಸ್ತುಗಳ ಮೇಲೆಯೂ ತೆರಿಗೆಯನ್ನು ವಸೂಲು ಮಾಡ ಲಾಗುತ್ತದೆಯೇ ಅಥವಾ ಕೆಲವು ಪದಾರ್ಥಗಳ ಮೇಲೆ ಮಾತ್ರ ತೆರಿಗೆಯನ್ನು ವಸೂಲು ಮಾಡು ತ್ತೀರಾ ಎಂಬ ಬಗ್ಗೆ ನಿರ್ದಿಷ್ಟವಾದ ಉತ್ತರ ಹೇಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಈ ಕಾಯಿದೆ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿದೆ. ಯಾರು ವಸ್ತುಗಳನ್ನು ಕೊಂಡುಕೊಳ್ಳುತ್ತಾರೋ ಅವರಿಗೆ ಮಾತ್ರ ತೆರಿಗೆ ಬೀಳುತ್ತದೆ, ಬೇರೆಯವರಿಗೆ ತೆರಿಗೆ ಭಾರ ಬೀಳುವುದಿಲ್ಲ.

Drinking Water Wells in Villages

308. Sri M. MALLAPPA (Birur).—

Will the Minister for Development be pleased to state :—

(*a*) the number of villages in Chikmagalur District where there are no drinking water wells ;

(*b*) the action Government intends to take to provide adequate number of drinking water wells to these villages ?

Sri B. L. GOWDA (Deputy Minister for Co-operation).—

(*a*) 177 Asali Villages and 610 Hamlets.

(*b*) Government intend to provide one well to each village which has no drinking water facility. Similarly Government intend to provide a well to each hamlet having a population of 50 and more, which has no drinking water facility. Necessary funds have been provided for the purpose and the local officers have been instructed suitably.

ಶ್ರೀ ಎಂ. ಮಲ್ಲಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ 177 ಅಸಲಿ ಗ್ರಾಮಗಳು ಮತ್ತು 610 ಕೊಪ್ಪಲುಗಳು ಎಂದು ಹೇಳಿದ್ದೀರಿ. ಈ ಗ್ರಾಮಗಳಿಗೆ ಬಾವಿಗಳನ್ನು ಒದಗಿಸಲು ಎಷ್ಟು ಹಣವನ್ನು ಒದಗಿಸಿದ್ದೀರಾ ?

† ಶ್ರೀ ಬಿ. ಎಲ್. ಗೌಡ.—ಈ ವರ್ಷ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

Drinking Water Wells

318. Sri G. DUGGAPPA (Bharamasagar).—

Will the Minister for Development be pleased to state :—

(*a*) the number of villages in Chitradurga District, where there are no drinking water wells ;

(*b*) whether Government have made a Survey of these villages and formulated any scheme to provide drinking Water Wells to the Villages ;

(*c*) whether the Government intend to provide drinking Water Wells at least within the Gandhi Centenary Celebration period ?

Sri B. L. GOWDA (Deputy Minister for Co-operation).—

(*a*) 49 Hamlets.

(*b*) Yes.

(*c*) Yes.

ಶ್ರೀ ಜಿ. ದುಗ್ಗಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ 49 ಕೊಪ್ಪಲುಗಳು ಎಂದು ಹೇಳಿದ್ದೀರಿ. ಈ ಬಾಬಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂಬುದನ್ನು ಹೇಳುತ್ತೀರಾ !

† ಶ್ರೀ ಬಿ. ಎಲ್. ಗೌಡ.—ಹೋದ ವರ್ಷ 3 ಲಕ್ಷ ರೂಪಾಯಿಗಳನ್ನು ಇದಕ್ಕೋಸ್ಕರ ಖರ್ಚು ಮಾಡಲಾಯಿತು. ಈ ವರ್ಷ 3 ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿದ್ದೇವೆ ; ಮತ್ತು ಎಲ್ಲಾ ಅಸಲಿ ಗ್ರಾಮಗಳಿಗೂ ನೀರಿನ ಸೌಲಭ್ಯವನ್ನು ಒದಗಿಸಲಾಗಿವೆ.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ನನ್ನ ಪ್ರಶ್ನೆ ನಂ. 308ಗೆ ಉತ್ತರವಾಗಿ 610 ಕೊಪ್ಪಲುಗಳಿಗೆ ಬಾವಿಗಳನ್ನು ಒದಗಿಸಲು 2 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆಯೆಂದು ಹೇಳಿದಿರಿ. ಆದರೆ ಇವರ ಪ್ರಶ್ನೆಗೆ ಉತ್ತರವಾಗಿ 49 ಕೊಪ್ಪಲುಗಳಿಗೆ 3 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆಯೆಂದು ಹೇಳಿದಿರಿ. ಇದು ಸರಿಯೇ ?

ಶ್ರೀ ಬಿ. ಎಲ್. ಗೌಡ.—ಹೆಚ್ಚಿಗೆ ಹಣವನ್ನು ಉಪಯೋಗಿಸಿಕೊಂಡಂತೆ ಹಣವನ್ನು ಕೊಡುತ್ತೇವೆ.

Denial of Foreign Exchange and Passport Facilities

392. Sri G. CHANDRAKANTH (Bidar).—

Will the Minister for Industries, Information and Publicity be pleased to state :—

(a) whether passport and foreign exchange facilities were denied to the present Minister for Industries Sri Rajasekhara Murthi ;

(b) whether the Ex-Chief Minister and the present Minister for Industries had both applied for the passport and foreign exchange facilities at the same time and whether Government recommended for both of them ;

(c) if so, the reasons for according them to one and denying it to the other ?

Sri M. RAJASEKHARA MURTHY (Minister for Industries, Information and Publicity).—

(a) No.

(b) The Minister for Industries had applied for passport. Government are not aware whether the Ex-Chief Minister had applied for passport or foreign exchange.

(c) Passport was issued to the Minister for Industries.

ಶ್ರೀ ಜಿ. ಚಂದ್ರಕಾಂತ್.—ಸಪ್ಲಿಮೆಂಟರಿಗಳಿಲ್ಲ, ಸ್ವಾಮಿ.

Acquisition of Land for Harijan Colony

31. Sri S. S. ARAKERI (Balloli).—

Will the Minister for Revenue be pleased to state :—

(a) the year in which two acres of land in S. No. 484 of Wadi village in Chitapur taluk of Gulbarga district was acquired for Harijan Colony ;

(b) the date of handing over of the possession of 1½ acres of acquired land to Harijans ;

(c) the reasons for not handing over the remaining ½ acre of land ?

Sri H. V. KOUJALGI (Minister for Revenue).—

(a) One acre was acquired during the year 1955, another one acre was acquired during the year 1959.

(b) One acre was handed over on 1-6-1955 and the remaining one acre was handed over on 27-2-1959.

(c) The entire extent of two acres acquired was handed over.

ಶ್ರೀ ಎಸ್. ಎಸ್. ಅರಕೇರಿ.—ಸಪ್ಲಿಮೆಂಟರಿ ಇಲ್ಲ, ಸ್ವಾಮಿ.

Sanction of Advance Increment to Graduate Clerks

49. Sri B. P. KADAM (Karwar).—

Will the Minister for Education be pleased to state :—

(*a*) whether the benefit of higher starting pay or advance increments is given to graduates seeking employment in II Division and to non-graduates II Division Clerks graduating while holding the II Division post in the High Schools run by Government from 1-9-1964 under Government Order No. FD 10 SRP (2) 61, dated the 9th October 1964 ;

(*b*) if so, whether the same benefit is extended to clerks under the same category in the schools run by private agencies ?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) No.

Sri B. P. KADAM.—Is it not the policy of Government that the same treatment given to Government school teachers is extended also to teachers in private schools ?

† Sri N. M. KOTRABASAIAH SOGI.—Government is seriously considering the matter. We have called for some details. We are at it.

Purchase of Tea by Large-Scale Society, Gurgunta

54. Sri K. SANGAN GOWDA (Lingsugur).—

Will the Minister for Development be pleased to state :—

(*a*) the quantity of Brooke Bond Tea purchased by the ex-Chairman of Large Scale Society of Gurgunta of Lingsugur Taluk from out of the Society Fund ;

(*b*) the profit the Society has earned by this transaction and the amount of the Society involved in this transaction ?

Sri B. L. GOWDA (Deputy Minister for Co-operation).—

(*a*) 960 Kgs. of Lipton Tea was purchased and not Brooke Bond Tea.

(*b*) Rs. 99.34 P. and Rs. 7,884.90 P. respectively.

ಶ್ರೀ ಕೆ. ಸಂಗನಗೌಡ.—ಪ್ರೊಕ್ಯೂರ್‌ಮೆಂಟು ಹಾಗೂ ಲೆವಿಯನ್ನು ಇದೇ ಸೊಸೈಟಿಗೆ ವಹಿಸಿದ್ದಾರಾ ?

ಶ್ರೀ ಬಿ. ಎಲ್. ಗೌಡ.—ಈ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

National Rural Water Supply Scheme

83. Sri M. K. BOMME GOWDA (K. R. Pet).—

Will the Minister for Development be pleased to state :—

(a) the number of villages now taken up for investigation in K. R. Pet Taluk of Mandya District in connection with the National Rural Water Supply Scheme;

(b) the number of villages where investigation has been completed and where the Rural Water Supply Schemes have been sanctioned in K. R. Pet Taluk of Mandya District (names of the villages may be furnished);

(c) the number of villages for which the N.R.W.S. Schemes have been sanctioned but the work has not been executed ?

Sri B. L. GOWDA (Deputy Minister for Co-operation).—

(a) 7 (Seven).
(b) One (Agraharabachahally).
(c) None.

ಶ್ರೀ ಎಂ. ಕೆ. ಬೊಮ್ಮೆಗೌಡ.— ಏಳು ಗ್ರಾಮಗಳು ಎಂದು ಹೇಳಿದ್ದೀರಿ. ಅವು ಯಾವುವು ಎಂದು ಹೇಳುತ್ತೀರಾ ?

† ಶ್ರೀ ಬಿ. ಎಲ್. ಗೌಡ.—ಮಡವಿನಕೋಡಿ, ಸಂತೇಬಾಚಹಳ್ಳಿ, ಅಕ್ಕಿಹೆಬ್ಬಾಳು, ಹರಿಹರಪುರ, ಸಿದ್ಧನಘಟ್ಟ, ಮಾರಪ್ಪನ ಹಳ್ಳಿ, ಕಿಕ್ಕೇರಿ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ಸ್ಕೀಂ ಮಂಜೂರಾಗಿ ಹತ್ತು ವರ್ಷಗಳಾದರೂ ಇದರ ಕೆಲಸ ಮಾಡದೇ ಇರಲು ಕಾರಣವೇನು ?

ಶ್ರೀ ಬಿ. ಎಲ್. ಗೌಡ.—ಇಲ್ಲಿ ಕಂಟ್ರಾಕ್ಟರಿಗೆ ಕೆಲಸ ಒಪ್ಪಿಸಿದ್ದರೂ ಅವರು ಇಲ್ಲಿಯವರೆಗೂ ಕೆಲಸವನ್ನೇ ಪ್ರಾರಂಭ ಮಾಡಲಿಲ್ಲ. ಈಗ ಅವರನ್ನು ರೂಲ್ಸ್ ಪ್ರಕಾರ ವಜಾ ಮಾಡಿ ಬೇರೆಯವರಿಗೆ ವಹಿಸಲಾಗಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ಕೆಲಸ ಮಂಜೂರಾಗಿ 15 ವರ್ಷಗಳಾದರೂ ಇಲ್ಲಿ ಕೆಲಸ ಮಾಡದೆ ಇದ್ದರೆ ಇದರ ಬಡ್ಡಿ ಇತ್ಯಾದಿಗಳನ್ನು ಹೊರುವವರು ಯಾರ ಮತ್ತು ಪೆನಾಲ್ಟಿ ಕೊಡುವವರು ಯಾರು ?

ಶ್ರೀ ಬಿ. ಎಲ್. ಗೌಡ.—ಪಿ. ಡಬ್ಲ್ಯು. ಡಿ. ಇಲಾಖೆಯವರು ಕೆಲಸ ಮಾಡಲು ಕಂಟ್ರಾಕ್ಟರಿಗೆ ವಹಿಸಿದರು. ಅವರು ಕೆಲಸ ಮಾಡದೇ ಇದ್ದುದರಿಂದ ಅವರ ಮೇಲೆ ಎಲ್ಲಾ ಪೆನಾಲ್ಟಿಗಳೂ ಬೀಳುತ್ತವೆ.

Moodabidri Government Hospital

103. Sri RATNAKUMAR KATTEMAR (Moodabidri).—

Will the Minister for Health be pleased to state :—

(a) whether the foundation stone for the extension of Moodabidri Government Hospital was laid by the late Sri B. V. Baliga, the then Labour Minister of Mysore Government;

(SRI RATNAKUMAR KATTEMAR)

(*b*) whether the Moodabidri Town Panchayat has deposited about Rs. 12,000 for the extension work of the Hospital ;

(*c*) whether the District Health Officer had recommended for the extension of the Hospital with 100 beds, maternity ward, X-ray operation theatre unit and other modern facilities;

(*d*) the final decision taken by the Government with regard to extension and when the same is expected to be completed ?

Sri Y. RAMAKRISHNA (Minister for Health).—

(*a*), (*b*) and (*c*) No.

(*d*) Does not arise.

ಶ್ರೀ ರತ್ನಕುಮಾರ್ ಕಟ್ಟೆಮಾರ್.—ಶ್ರೀ ವೈಕುಂಠ ಬಾಳಿಗಾರವರು ಈ ಸಭೆಯ ಸದಸ್ಯರಾಗಿದ್ದರೋ ಇಲ್ಲವೋ ?

ಶ್ರೀ ವೈ. ರಾಮಕೃಷ್ಣ.—ಹೌದು ಆಗಿದ್ದರು.

ಶ್ರೀ ರತ್ನಕುಮಾರ್ ಕಟ್ಟೇಮಾರ್.—ಇವರು ಕಾರ್ಮಿಕ ಮಂತ್ರಿಗಳಾಗಿದ್ದಾಗ ಈ ಆಸ್ಪತ್ರೆಯ ಎಕ್ಸಟೆನ್‌ಷನ್‌ಗಾಗಿ ಒಂದು ಫೌಂಡೇಷನ್ ಸ್ಟೋನ್ ಹಾಕಿರಲಿಲ್ಲವೇ ? ಮತ್ತು ಅಲ್ಲಿರುವ ನಿಯಮದ ಪ್ರಕಾರ ಅಲ್ಲಿನ ಪಂಚಾಯಿತಿಯವರು ಸುಮಾರು 12 ಸಾವಿರದಷ್ಟು ಹಣವನ್ನು ಡಿಪಾಸಿಟ್ಟು ಮಾಡಿದ್ದರು ಎನ್ನುವುದನ್ನು ತಮಗೆ ರುಜುವಾತುಪಡಿಸಿಕೊಟ್ಟರೆ ತಾವು ತಮ್ಮ ಈಗಿನ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೀರಾ ? ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಅವರು ಆಸ್ಪತ್ರೆಗೆ ಫೌಂಡೇಷನ್ ಸ್ಟೋನು ಹಾಕಿರಲಿಲ್ಲ. ಇಲ್ಲಿರುವ ಪ್ರೈಮರಿ ಹೆಲ್ತ್ ಸೆಂಟರಿಗಾಗಿ ಫೌಂಡೇಷನ್ ಸ್ಟೋನ್ ಹಾಕಿದ್ದರು ಮತ್ತು ಇಲ್ಲ ಈಗಾಗಲೇ ಕೆಲಸಕಾರ್ಯಗಳು ಆರಂಭವಾಗಿವೆ.

ಶ್ರೀ ರತ್ನಕುಮಾರ್ ಕಟ್ಟೇಮಾರ್.—ಪ್ರೈಮರಿ ಹೆಲ್ತ್ ಸೆಂಟರಿನಲ್ಲಿ ಆಗಲಿ ಇದರ ಕಾರ್ಯಕ್ರಮವನ್ನು ಬೇಗನೆ ತೆಗೆದುಕೊಳ್ಳುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಈಗಾಗಲೇ ಇಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ಇದುವರೆಗೆ ಸುಮಾರು 88 ಸಾವಿರದಷ್ಟು ಖರ್ಚಾಗಿದೆ.

Farming Society in Mudhol Taluk

134. Sri K. P. NADAGOUDA (Mudhol).—

Will the Minister for Development be pleased to state :—

(*a*) The number of Farming Societies existence in Mudhol Taluk ;

(*b*) the amount given by the State Government in the form of grant and loan to each such Society ;

(*c*) the number of share holders and acres of land given by such share holders to each such Society ;

(*d*) the number of such Societies working and how many of them are bogus ;

(*e*) the action Government proposes to take against such bogus Societies ?

Sri B. L. GOWDA (Deputy Minister for Co-operation).—

(*a*) 2 (Two).

(*b*) amount given as :—

Name of the Society	*Share Capital*	*Loan*	*Subsidy*
Halki Joint Farming Co-operative Society.	Rs. 2,000	Rs. 7,750	Rs. 2,450
Naganapur Harijan Joint Co-operative Society.	Rs. 2,000	Rs. 18,167	Rs. 3,533

(*c*) Halki Joint Farming Co-operative Society
21 share holders. 110-14 Acres.

Naganapura Joint Farming Co-operative Society
20 share holders. 68-19 Acres.

(*d*) The societies referred to in reply to clause (*b*) are working. None are bogus.

(*e*) Does not arise in view of reply at clause (*a*) above.

ಶ್ರೀ ಕೆ. ಪಿ. ನಾಡಗೌಡ.—ಇವೆರಡು ಸೊಸೈಟಿಗಳಲ್ಲಿ ಇದ್ದ ಚೇರ್ಮನ್‌ಗಳು ಯಾರು ? ಈ ಸೊಸೈಟಿಗಳಲ್ಲಿ ಎರಡು ವರ್ಷಗಳಿಂದಲೂ ಸರಿಯಾಗಿ ಆಡಿಟ್ ಆಗಿದೆಯೇ ? ಹಾಗೆ ಮಾಡಿದ್ದರೆ ಆಡಿಟ್ ರಿಪೋರ್ಟನ್ನು ಟೇಬಲ್ ಮೇಲೆ ಇಡುತ್ತೀರಾ ?

† ಶ್ರೀ ಬಿ. ಎಲ್. ಗೌಡ.—ಹೋದ ಸಾಲಿನ ಆಡಿಟ್ ರಿಪೋರ್ಟು ಬಂದಿದೆ, ಅದನ್ನು ಇಡಲು ತಯಾರಿದ್ದೇನೆ ಮತ್ತು ಚೇರ್ಮನ್‌ಗಳ ಹೆಸರು ಯಾವುದು ಎನ್ನುವುದರ ಮಾಹಿತಿ ನನ್ನಲ್ಲಿಲ್ಲ.

Plantation and other Developmental Works in Raichur Forest Division

138. Sri SADASHIVAPPA PATIL (Deodrug).—

Will the Minister of State for Forests be pleased to state :—

(*a*) the total amount of expenditure barring the pay and allowances of watchmen and Jeep maintenance incurred for the past three years (*i.e.*, 1965-66, 1966-67 and 1967-68) in the Raichur Forest Division for plantation and other developmental works connected with forestry (yearwise figures may be furnished) :

(SRI SADASHIVAPPA PATIL)

(*b*) the total amount of expenditure incurred during the past three years as at (*a*) on the pay, allowances and T.A. of the Divisional Forest Officer, his staff, Forest Range Officers and other staff and watchmen and also on maintenance of Jeep;

(*c*) the number of acres of plantations that were actually raised during the past three years in the Raichur Forest Division;

(*d*) the total amount of revenue realised by the said Division in the past three years as at (*a*) (Yearwise figures may be furnished)?

Sri ALUR HANUMANTHAPPA (Minister of State for Forests).—

(*a*) 1965-66	...	Rs.	1,94,224·15
1966-67	...	Rs.	1,71,993·54
1967-68	...	Rs.	1,31,748·70
	Total	Rs.	4,97,966·39
(*b*) 1965-66	...	Rs.	1,27,226·04
1966-67	...	Rs.	1,32,054·14
1967-68	...	Rs.	1,36,033·48
	Total	Rs.	3,95,313·66
(*c*) 2,886 Acres.			
(*d*) 1965-66	...	Rs.	93,724·83
1966-67	...	Rs.	49,412·58
1967-68	...	Rs.	1,40,759·51
	Total	Rs.	2,23,896.92

ಶ್ರೀ ಸದಾಶಿವಪ್ಪ ಪಾಟೀಲ್.—ಮೂರು ವರ್ಷಗಳಿಂದಲೂ ಅರಣ್ಯಕ್ಕಾಗಿ ಖರ್ಚು ಮಾಡಿರುವುದು ಸಾಕಾಗುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೇ? ಅರಣ್ಯವನ್ನು ಹೆಚ್ಚು ಮಾಡಲು ಸರಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎನ್ನುವುದನ್ನು ತಿಳಿಸುತ್ತೀರಾ?

ವಿಶಿಷ್ಟವಾದ ಹಕ್ಕಾಗಿದೆ. ಇವತ್ತು ಸರ್ಕಾರವೇ ಮದ್ಯವನ್ನು ತಯಾರಿಸತಕ್ಕ ಮತ್ತು ಮಾರಾಟ ಮಾಡತಕ್ಕ ವಿಶಿಷ್ಟವಾದ ಹಕ್ಕನ್ನು ಈ ರಾಜ್ಯದಲ್ಲಿ ನೇರವಾಗಿ ಹೊಂದಿದೆ. ಈ ಮದ್ಯವನ್ನು ಮಾರಾಟ ಮಾಡುವ ಮತ್ತು ಹಂಚಿಕೆ ಮಾಡುವ ವ್ಯವಸ್ಥೆಯನ್ನು ಯಾವ ರೀತಿ ಸರ್ಕಾರ ಮಾಡಿಕೊಂಡು ಬಂದಿದೆ ಎಂಬ ವಿಚಾರವನ್ನೂ ಕೂಡ ನಾವು ಸ್ವಲ್ಪ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗಿದೆ. ಮೈಸೂರು ದೇಶದಲ್ಲಿ 19 ಜಿಲ್ಲೆಗಳು ಇವೆ, ಇವತ್ತು 19 ಜಿಲ್ಲೆಗಳಲ್ಲೂ ಕೂಡ ಮದ್ಯ ಮಾರಾಟ ಮಾಡತಕ್ಕ ಪದ್ಧತಿಯನ್ನು ಜಾರಿಗೆ ತಂದಿದೆ. ಇಡೀ ದೇಶದಲ್ಲಿ ಮದ್ಯ ಮಾರಾಟಮಾಡಿ ಅದರಿಂದ ಅಪಾರವಾಗಿ ಬರತಕ್ಕ ಹಣವನ್ನು ತಂದು ಖಜಾನೆಯನ್ನು ಭರ್ತಿಮಾಡಬೇಕಾದುದೂ ಸರ್ಕಾರದ ಕರ್ತವ್ಯವೇ. ಆದರೆ ಆ ಹೆಂಡ ಅಥವಾ ಸಾರಾಯಿಯನ್ನು ಯಾವ ರೀತಿಯಲ್ಲಿ ಮಾರಾಟ ಮಾಡಬೇಕು ಎಂಬ ವಿಷಯದಲ್ಲಿ ಸರ್ಕಾರದವರು ತಮ್ಮದೇ ಆದ ರೂಲ್ಸ್‌ಗಳನ್ನು ಮಾಡಿಕೊಂಡಿದ್ದಾರೆ. ಇನ್ನು ಮುಂದೆ ಈ ಮದ್ಯವನ್ನು ಯಾವ ರೀತಿಯಲ್ಲಿ ಮಾರಾಟ ಮಾಡಿ ಹಣವನ್ನು ಗಳಿಸಬೇಕು ಎನ್ನುವ ವಿಚಾರದಲ್ಲಿ ಉಭಯ ಸದನಗಳವರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಸರ್ಕಾರದವರ ಮುಂದಿಟ್ಟಿದ್ದಾರೆ. ಆದಾಗ್ಯೂ 19 ಜಿಲ್ಲೆಗಳಲ್ಲಿರತಕ್ಕ ಈ ಮದ್ಯದ ಮಾರಾಟವನ್ನು ಸರ್ಕಾರದವರು ತಮ್ಮ ಹಕ್ಕಿನಲ್ಲಿಟ್ಟುಕೊಂಡು ಎಲ್ಲಾ ಪ್ರದೇಶಕ್ಕೂ ಅನ್ವಯಿಸುವಂಥ ಒಂದು ಏಕರೂಪತೆಯ ಕಾನೂನನ್ನು ಜಾರಿಯಲ್ಲಿ ತಾರದೇ ಇವರು ಒಂದೊಂದು ಪ್ರದೇಶಕ್ಕೆ ಒಂದೊಂದು ರೀತಿಯ ಕಾನೂನನ್ನು ಜಾರಿಗೆ ತಂದಿದ್ದಾರೆ. ಆದರೆ ಹರಾಜಿನಲ್ಲಿ ಯಾರು ಹೈಯೆಸ್ಟ್ ಬಿಡ್ಡರಾಗಿರುತ್ತಾರೋ ಅಂಥವರಿಗೆ ಅದರ ವ್ಯಾಪಾರವನ್ನು ಕೊಡಲಾಗುತ್ತದೆ. ಈ ದಿವಸ ಸರ್ಕಾರದವರು ಬೆಂಗಳೂರು ಮತ್ತು ಹೈದ್ರಾಬಾದ್ ಕರ್ಣಾಟಕದ ಗುಲ್ಬರ್ಗ ಮತ್ತು ರಾಯಚೂರು ಈ ಮೂರು ಜಿಲ್ಲೆಗಳ ಮಾರಾಟವೇ ಒಂದು ರೀತಿ ಇದ್ದರೆ ಇನ್ನುಳಿದ ಎಲ್ಲಾ ಜಿಲ್ಲೆಗಳ ವ್ಯವಹಾರ ಇನ್ನೊಂದು ರೀತಿಯಾಗಿದೆ. ಹೀಗೆ ಭಿನ್ನ ಭಿನ್ನವಾದ ಕಾನೂನನ್ನು ಬೇರೆ ಬೇರೆ ಭಾಗದ ರಾಜ್ಯಕ್ಕೆ ಅನ್ವಯಿಸುವಂತೆ ಮಾಡಿದ್ದಾರೆ. ಒಂದೇ ರಾಜ್ಯದಲ್ಲಿ ಹೀಗೆ ಮಾಡಿರತಕ್ಕದ್ದು ಸರಿಯಾದ್ದಲ್ಲ. ಬೆಂಗಳೂರು ಜಿಲ್ಲೆ ಮತ್ತು ಗುಲ್ಬರ್ಗ ಹಾಗೂ ರಾಯಚೂರು ಈ ಮೂರು ಜಿಲ್ಲೆಗಳಲ್ಲಿರತಕ್ಕ ಎಲ್ಲಾ ಮದ್ಯದ ಹಾಗೂ ಸಾರಾಯಿಯ ಅಂಗಡಿಗಳನ್ನು ಒಟ್ಟಾಗಿ ಸೇರಿಸಿ ಮಾರಾಟಮಾಡುವುದಕ್ಕೇನು ಕಾರಣ, ಇನ್ನುಳಿದ ಜಿಲ್ಲೆಗಳಲ್ಲಿ ಬೇರೆ ರೀತಿಯಲ್ಲಿ ಮಾರಾಟ ಮಾಡುವುದಕ್ಕೇನು ಕಾರಣ, ಎಂಬುದನ್ನು ನಾವೀಗ ವಿಚಾರ ಮಾಡಬೇಕಾಗಿದೆ. ಹಿಂದೆ ಈ ಮದ್ಯ ಮಾರಾಟ ಮಾಡತಕ್ಕ ಸಂದರ್ಭಗಳಲ್ಲಿ ಒಂದೊಂದು ಅಂಗಡಿ ಅಂಗಡಿಯನ್ನೇ ಪ್ರತ್ಯೇಕ ಪ್ರತ್ಯೇಕವಾಗಿ ಹರಾಜ್ ಮಾಡಲಾಗುತ್ತಿತ್ತು. ಆ ಪದ್ಧತಿಯನ್ನು ಈ ಏಕೆ ಬದಲಾಯಿಸಿದ್ದಾರೆ ? ಹಿಂದೆ ಅತಿ ಹೆಚ್ಚೆಂದರೆ ಸಣ್ಣ ಸಣ್ಣ 5—10 ಅಂಗಡಿಗಳನ್ನು ಒಟ್ಟುಗೂಡಿಸಿ ಹರಾಜ್ ಮಾಡುತ್ತಿದ್ದರು. ಅದನ್ನು ಈ ದಿವಸ ತಪ್ಪಿಸಿ 5–10 ಹೋಬಳಿಗಳನ್ನು, ಇಡೀ ತಾಲ್ಲೂಕನ್ನೇ ಒಟ್ಟೊಟ್ಟಿಗೆ ಜಿಲ್ಲೆಯನ್ನೇ ಒಟ್ಟು ಒಟ್ಟಾಗಿ ಹರಾಜ್ ಹಾಕತಕ್ಕ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಇದು ಬಡವರಿಗೆ ಸಹಾಯ ಮಾಡತಕ್ಕ ವಿಧಾನವಲ್ಲ. ಇದು ಕೇವಲ ಬಂಡವಾಳಶಾಹಿಗಳನ್ನು ಬದುಕಿಸತಕ್ಕ ಮಾರ್ಗ. ಮತ್ತೆ ಇವರ ಬಾಯಲ್ಲಿ ಸಮತಾವಾದ ಸಮಾಜದ ನಿರ್ಮಾಣ. ಕೋಟ್ಯಾಧೀಶ್ವರರನ್ನು ಬದುಕಿಸಲು ಹೊರಟಿರತಕ್ಕ ಈ ಸರ್ಕಾರಕ್ಕೆ ಸಮತಾವಾದ ಸಮಾಜವನ್ನು ನಿರ್ಮಾಣಮಾಡತಕ್ಕ ಮನಸ್ಸಿದೆಯೇ, ಎಂದು ಕೇಳುತ್ತೇನೆ ಅಲ್ಲದೆ ಹಿಂದೆ ಹೆಂಡವನ್ನೇ ಪ್ರತ್ಯೇಕವಾಗಿ ಹರಾಜ್ ಮಾಡಿ ಸಾರಾಯಿಯನ್ನು ಕೂಡ ಪ್ರತ್ಯೇಕವಾಗಿ ಹರಾಜ್ ಮಾಡತಕ್ಕ ಪದ್ಧತಿ ಇತ್ತು. ಈಗ ಅದನ್ನೂ ಬದಲಾಯಿಸಿದ್ದಾರೆ. ಎಲ್ಲವನ್ನೂ ಒಟ್ಟಿಗೇ ಹರಾಜ್ ಮಾಡುತ್ತಿದ್ದಾರೆ. ಹೀಗೆ ಮಾಡುತ್ತಿರುವುದರ ಗೂಢಾರ್ಥವೇನು ಎಂಬುದನ್ನು ಈ ಮಾನ್ಯ ಸಭೆ ಈಗ ಪರಿಶೀಲಿಸಬೇಕಾಗಿದೆ. ಇದು ಬಂಡವಾಳಗಾರರನ್ನು ಸಾಕತಕ್ಕ ಸರ್ಕಾರ ಎಂಬುದನ್ನು ಇದು ಎತ್ತಿ ತೋರಿಸುತ್ತಿದೆ. ಈ ದಿವಸ ಸಣ್ಣ ಪುಟ್ಟ ಹರಾಜ್‌ದಾರರಿಗೆ ಇಲ್ಲಿ ಅವಕಾಶವಿಲ್ಲ. ಇಲ್ಲೇನಿದ್ದರೂ ಲಕ್ಷಾಧಿಕಾರಿಗಳೇ ಹರಾಜ್‌ಗೆ ಬರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈ ಎರಡು ಜಿಲ್ಲೆಗಳಲ್ಲಿಯೂ, ಹೆಂಡ ಮತ್ತು ಸಾರಾಯಿ ಅಂಗಡಿಗಳನ್ನು ಪ್ರತ್ಯೇಕವಾಗಿ ತಾಲ್ಲೂಕುವಾರಾಗಿ ಹರಾಜು ಮಾಡಿದೆ. ಈ ಎರಡು ಜಿಲ್ಲೆಗಳಲ್ಲಿಯೂ ಯಾವ ರೀತಿ ಹರಾಜು ಆಗುತ್ತದೆ ಎನ್ನುವ ಬಗ್ಗೆ ಸತ್ಯ ಸಂಗತಿ ಗೊತ್ತಿಲ್ಲದೆ ಅವರು ಹೇಳುತ್ತಿದ್ದಾರೆ. ಅವರು ಅದನ್ನು ವಿಚಾರಮಾಡಿ ಹೇಳಿದರೆ ಒಳ್ಳೆಯದು.

ಶ್ರೀ ಎಸ್. ಶಿವಪ್ಪ.—ಇನ್ನೊಂದು ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಅಬ್ಕಾರಿ ಸಚಿವರು ಒಂದು ವಿವರಣೆಯನ್ನು ಕೊಟ್ಟು ಮತ್ತಷ್ಟು ಗೊಂದಲವನ್ನುಂಟು ಮಾಡಿದ್ದಾರೆ. ಸಮರ್ಥನೀಯವಾದ ನೀತಿಯನ್ನು ಹೇಳುತ್ತಾ ತಾಲ್ಲೂಕಿನಲ್ಲಿ ಮಾಡಿದ್ದೇವೆ, ಹೋಬಳಿಯಲ್ಲಿ ಮಾಡಿದ್ದೇವೆ, ಅಲ್ಲಿ ಮಾಡಿದ್ದೇವೆ, ಇಲ್ಲಿ ಮಾಡಿದ್ದೇವೆಂದು ಹೇಳಿದ್ದಾರೆ. ಎರಡು ಜಿಲ್ಲೆಗಳನ್ನೂ ಸೇರಿಸಿ ಯಾರು ಟೆಂಡರ್ ಜಾಸ್ತಿ ಕೊಡುತ್ತಾರೋ ಅಂತಹವರಿಗೆ ಅದರಲ್ಲಿಯೂ

(ಶ್ರೀ ಎಸ್. ಶಿವಪ್ಪ)

ಯಾವನೋ ಒಬ್ಬ ಶ್ರೀಮಂತನಿಗೆ ಇದನ್ನು ಮನಾಪಲಿ ಕೊಟ್ಟಿದ್ದಾರೆ. ಇದರಿಂದ ಇದು ಈ ದೇಶವನ್ನೇ ಗುತ್ತಿಗೆಗೆ ಕೊಟ್ಟಹಾಗೆ ಆಗಿದೆ. ಮುಂದೆ ಇವರು ಇಡೀ ದೇಶವನ್ನೇ ಹರಾಜುಮಾಡುವ ಪರಿಸ್ಥಿತಿಯೂ ಬರಬಹುದು. ಸಣ್ಣಪುಟ್ಟ ಮಿಾನುಗಳನ್ನು ಒಂದು ದೊಡ್ಡ ಮಿಾನು ತಿಂದಹಾಗೆ ಆಗಿದೆ. ತಾಲ್ಲೂಕುವಾರು ಮತ್ತು ಜಿಲ್ಲಾವಾರು ಹರಾಜು ಹಾಕುವುದಕ್ಕಿಂತ ಮುಂಚೆ ಯಾರು ಸಣ್ಣಪುಟ್ಟ ವರ್ತಕರು ಇದ್ದಾರೋ, ಅವರ ಹತ್ತಿರ ಒಬ್ಬ ಬಂಡವಾಳಗಾರ ಬಂದು, ಅಡ್ವಾನ್ಸ್ ತೆಗೆದುಕೊಂಡು, ಒಂದು ಲಕ್ಷ ರೂಪಾಯಿ ಸರ್ಕಾರದ ಹರಾಜು ಇದ್ದರೆ, ಈವೊತ್ತು ಆ ಮನಾಪಲಿಸ್ಟ್ ಅವರಿಗೆ ಹೆಚ್ಚು ಹಣಕ್ಕೆ ವಿಲೇ ಮಾಡಿರುತ್ತಾರೆ. ಇಂತಹ ಒಂದು ಕೆಟ್ಟ ಪದ್ಧತಿ ಈ ದೇಶದಲ್ಲಿ ಜಾರಿಗೆ ಬಂದಿದೆ. ಇದು ಸರ್ಕಾರದವರು ಒಬ್ಬರಿಗೇ ಒಬ್ಬರಿಗೇ ಭೂಮಿಯ ಒಡೆತನವನ್ನು ಅಥವಾ ಭೂಮಾಲೀಕತ್ವವನ್ನು ಕೊಟ್ಟಹಾಗೆ ಆಗುತ್ತದೆ. ಇದೇ ವಿಚಾರವನ್ನು ಮೇಲ್ಮನೆಯಲ್ಲಿ ಈ ಸಭೆಯ ನಾಯಕರು ಒಂದು ಸಾರಿ ಇದು ತಾಲೂಕುವಾರ್ ಹರಾಜು ಆಗಬೇಕೆಂದು ಹೇಳಿದ್ದಾರೆ. ಆದ್ದರಿಂದ ಇದನ್ನು ತಾಲ್ಲೂಕುವೈಜ್ ಹರಾಜು ಮಾಡಬೇಕೆಂದು ಅವರೇ ಒಪ್ಪಿಕೊಂಡಿದ್ದಾರೆ. ಇವೊತ್ತಿನ ದಿವಸ ರಾಯಚೂರು ಅಬ್ಕಾರಿ ಹರಾಜು ಏನಿದೆ ಅಲ್ಲಿ ಎರಡು ಜಿಲ್ಲೆಗಳು ಅಂದರೆ ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಇರತಕ್ಕ ಸುಮಾರು 1168 ಅಂಗಡಿಗಳ ಮಧ್ಯ ಮಾರಾಟದ ಹಕ್ಕನ್ನು ಯಾರಿಗೆ ಕೊಡಬೇಕೆಂದು ನಿರ್ಧಾರಮಾಡಲು ಟೆಂಡರ್ ಕರೆದಿದ್ದಕ್ಕೆ, ಇಬ್ಬರು ಮಾತ್ರ ಟೆಂಡರ್‌ಗಳನ್ನು ಹಾಕಿದ್ದರು. ಒಂದು 9 ಲಕ್ಷದ 99 ಸಾವಿರದ 999 ರೂಪಾಯಿಗಳು. ಮತ್ತೊಂದು 9 ಲಕ್ಷ 69 ಸಾವಿರದ 999 ರೂಪಾಯಿಗಳು. ಗುಲ್ಬರ್ಗಾ ಮತ್ತು ರಾಯಚೂರಿಗೆ ಸಂಬಂಧವಾಗಿ ಟೆಂಡರುಗಳು ಮೇ 27ನೇ ತಾರೀಖಿನೊಳಗೆ ಬಂದಿವೆ. ಈ ಟೆಂಡರುಗಳನ್ನು ವಿಲೇವಾರಿ ಮಾಡುವ ತಾರೀಖು 28ನೇ ಮೇ 1968 ಆಗಿದ್ದರಿಂದ ಆ ದಿವಸ ಟೆಂಡರನ್ನು ಒಡೆದಮೇಲೆ ಶ್ರೀ ಭೂಮರೆಡ್ಡಿಯವರ ಹೈಯಸ್ಟ್ ಟೆಂಡರ್ ಎಂದರೆ 9,99,999 ರೂಪಾಯಿಗಳ ಟೆಂಡರನ್ನು ಒಪ್ಪಿಕೊಂಡಹಾಗೆ ಇಲ್ಲಿ ವರದಿಯಾಗಿದೆ. ಆದರೆ ಶ್ರೀಮಾನ್ ನಿರಂಜನ್ ಅವರು ಯಾರೋ ಅವರ ಮುಖವನ್ನು ನಾನು ನೋಡಿಲ್ಲ. ಅವರ ಹಿಂದೆ ಮುಂದೆ ಸಂಬಂಧವೇನಿದೆಯೋ ಆ ವಿಚಾರ ನನಗೆ ಬೇಕಿಲ್ಲ. ಈವೊತ್ತು ಮಾನ್ಯ ಶ್ರೀ ಭೂಮರೆಡ್ಡಿ ಮತ್ತು ಮಾನ್ಯ ಶ್ರೀ ನಿರಂಜನ್ ಅವರ ವ್ಯವಹಾರ ಏನಿದೆಯೋ ಅದೆಲ್ಲವೂ ಈಗ ನಮ್ಮ ಮುಂದಿದೆ. ಈ ವ್ಯವಹಾರದಲ್ಲಿ ಇಲ್ಲಿ ಎಲ್ಲರ ಕುತೂಹಲವನ್ನು ಕೆರಳಿಸಿದೆ. ಸರ್ಕಾರ ಇದರಲ್ಲಿ ಪ್ರವೇಶ ಮಾಡಿದೆ. ಅದನ್ನು ಯಾರ ಪರವಾಗಿ ಮಾಡಿದೆ ಎಂಬುದನ್ನು ವಿಚಾರಮಾಡಬೇಕು. ಸರ್ಕಾರ ಇದರ ಬಗ್ಗೆ ತನ್ನ ಅಧಿಕಾರವನ್ನು ದುರುಪಯೋಗ ಮಾಡಿದ್ದರೆ, ಅಂಥಾದ್ದು ಏನಾದರೂ ಅಲ್ಲಿ ನಡೆದಿದ್ದರೆ ಆಗ ಏನು ಮಾಡಬೇಕೆಂಬ ಪ್ರಶ್ನೆಯನ್ನು ನಾವು ಯೋಚನೆಮಾಡಬೇಕು. ಇವತ್ತು ಮಾನ್ಯ ಶ್ರೀ ಭೂಮರೆಡ್ಡಿಯವರ ಟೆಂಡರನ್ನು ಡಿವಿಷನಲ್ ಕಮಿಷನರ್ ಜೂನ್ 4ನೇ ತಾರೀಖು ಒಪ್ಪಿಕೊಂಡಿದ್ದಾರೆ. ಅವರೇ ಹೈಯಸ್ಟ್ ಬಿಡ್ಡರ್. ಅವರ ಅಬ್ಕಾರಿ ಟೆಂಡರಿನ 19ನೇ ರೂಲ್ ಪ್ರಕಾರ ಇಷ್ಟಿಷ್ಟು ಹಣವನ್ನು ಕಟ್ಟಬೇಕೆಂದು ಅವರಿಗೆ ತಿಳಿಸಿದ್ದಾರೆ. ಅದೇ ಪ್ರಕಾರ ಅಬ್ಕಾರಿ ಕಂಟ್ರಾಕ್ಟರ್ ಅವರು ಮೊದಲನೆಯ ಕಂತು ಒಂದು ಸಾರಿಯೇ 20 ಲಕ್ಷ ಮತ್ತೆ ಸುಮಾರು 15 ದಿವಸಗಳೊಳಗೆ 20 ಲಕ್ಷ ರೂಪಾಯಿಗಳನ್ನು ಐದು ಕಂತುಗಳಲ್ಲಿ ಕಟ್ಟಿ ಒಟ್ಟು 40 ಲಕ್ಷ ರೂಪಾಯಿಗಳನ್ನು ಸರ್ಕಾರದ ಕಜಾನೆಗೆ ಕಟ್ಟಿದ್ದಾರೆ. ನಂತರ ಅವರು ವ್ಯಾಪಾರ ಮಾಡುವುದಕ್ಕೆ ಲೈಸನ್ಸ್ ಕೊಡಬೇಕು ಎಂಬುದಾಗಿ ಅರ್ಜಿ ಹಾಕಿದ್ದಾಗ ಡಿವಿಷನಲ್ ಕಮಿಷನರ್ ಅವರು 19ನೇ ರೂಲ್ ಪ್ರಕಾರವಾಗಿ ಡಿಪಾಜಿಟ್ ಮಾಡಬೇಕೆಂದು ನೋಟೀಸು ಕೊಟ್ಟಿದ್ದಾರೆ. ಆಗ 19ನೇ ರೂಲ್ ಪ್ರಕಾರ ನಾನು ಕಿಸ್ತನ್ನು ಕಟ್ಟಿದ್ದೇನೆ. ಮೈಸೂರಿನ ಇತರೇ ಜಿಲ್ಲೆಗಳಲ್ಲಿ ಯಾವ ರೀತಿ ಮಾಡುತ್ತಿದ್ದಾರೋ ಅದೇ ಪ್ರಕಾರ ನಾನು ಹಣವನ್ನು ಕಟ್ಟಿದ್ದೇನೆ. ಆದ್ದರಿಂದ ನನಗೆ ಲೈಸನ್ಸ್ ಕೊಡಬೇಕೆಂದು ಶ್ರೀ ರೆಡ್ಡಿಯವರು ಅರ್ಜಿ ಹಾಕಿದ್ದಾರೆ. ನನಗೆ ತಿಳಿದಮಟ್ಟಿಗೆ ಇವತ್ತು ಮಾನ್ಯ ಶ್ರೀ ಭೂಮರೆಡ್ಡಿಯವರು ಎರಡು ಅಥವಾ ನಾಲ್ಕೈದು ಕಂತುಗಳಲ್ಲಿ ಕಿಸ್ತಿನ ರೂಪದಲ್ಲಿ ಪೂರ್ತಿ ಹಣವನ್ನು ಕಟ್ಟಿದ್ದಾರೆ. ಆದರೆ ಇದೇ ತರಹ ಯಾರಾದರೂ ಎಕ್ಸೈಜು ಕಂಟ್ರಾಕ್ಟರ್ ಬೆಂಗಳೂರು ಮತ್ತು ಇನ್ನು ಇತರೇ ಜಿಲ್ಲೆಗಳಲ್ಲಿ 2 ಅಥವಾ 4 ಕಂತುಗಳನ್ನು ಕಟ್ಟಿದ ಮಾತ್ರಕ್ಕೆ ಸರ್ಕಾರದವರು ಲೈಸನ್ಸ್ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆಯೇ ಇಲ್ಲವೇ ಎಂಬುದು ಇವತ್ತು ಸರ್ಕಾರದ ಮುಂದೆ ಇರುವ ಪ್ರಶ್ನೆ. ಆ ರೀತಿಯಾಗಿ ಅವರು ಲೈಸನ್ಸ್ ಹಣವನ್ನು ಕಟ್ಟಿದ್ದರೂ ಶ್ರೀ ಭೂಮರೆಡ್ಡಿಯವರಿಗೆ ಮಾತ್ರ ಲೈಸನ್ಸ್ ಕೊಡುವುದಕ್ಕೆ ಸಾಧ್ಯವಿಲ್ಲವೆಂಬುದಾಗಿ ಡಿವಿಷನಲ್ ಕಮಿಷನರ್ ನೋಟಿಸು ಕೊಡುವುದಕ್ಕೆ ಏನು ಪ್ರಬಲವಾದ ಕಾರಣಗಳಿದ್ದುವು? 40 ಲಕ್ಷ ರೂಪಾಯಿಗಳನ್ನು ಕಟ್ಟಿದಂಥ ಒಬ್ಬ ವ್ಯಕ್ತಿಗೆ ಜೂನ್

23ನೇ ತಾರೀಖಿನ ದಿವಸ ಡಿವಿಷನರ್ ಕಮೀಷನರ್ ಒಂದು ನೋಟೀಸು ಕೊಟ್ಟಿದ್ದಾರೆ. ಅದೇನೆಂದರೆ ನೀನು 25ನೇ ತಾರೀಖಿನೊಳಗೆ ಬಾಕಿ 20 ಲಕ್ಷ ರೂಪಾಯಿಗಳನ್ನು ಕೊಡದೆ ಹೋದರೆ ನಿನಗೆ ಲೈಸನ್ಸ್ ಕೊಡುವುದಿಲ್ಲ ಎಂಬುದಾಗಿ ಸುಗ್ರೀವಾಜ್ಞೆಯನ್ನು ಅತನಿಗೆ ಕೊಟ್ಟಿದ್ದಾರೆ. ಬೇರೆ ಪ್ರದೇಶಗಳಲ್ಲಿ ಯಾವರೀತಿ ಸೌಲಭ್ಯಗಳನ್ನು ಕಂಟ್ರಾಕ್ಟ್‌ದಾರರಿಗೆ ಕೊಟ್ಟಿದ್ದಾರೋ ಅದೇ ರೀತಿಯ ಸೌಲಭ್ಯಗಳನ್ನು ನನಗೂ ಕೊಡಬೇಕು. ಅದು ವೈಯಕ್ತಿಕವಾದರೂ ಒಂದು ಮಾನವೀಯತೆಯ ದೃಷ್ಟಿಯಿಂದ ನಾನು ಹಣವನ್ನು ಒದಗಿಸಲು ನನಗೆ ಕಾಲಾವಕಾಶ ಬೇಕು ಎಂಬುದಾಗಿ ಅರ್ಜಿ ಹಾಕಿದ್ದಾರೆ. 19ನೇ ತಾರೀಖಿನ ದಿವಸ ನೋಟೀಸನ್ನು ಕಳುಹಿಸಲ್ಪಟ್ಟಿದ್ದರೂ ಅದು 23ನೇ ತಾರೀಖಿನ ದಿವಸ ಈ ಕಂಟ್ರಾಕ್ಟರಿಗೆ ಸಿಕ್ಕಿದೆ. ಯಾರೇ ಆಗಲೀ 25ನೇ ತಾರೀಖಿನೊಳಗೆ 25 ಲಕ್ಷ ರೂಪಾಯಿಗಳನ್ನು ಒದಗಿಸಬೇಕಾದರೆ ಬಹಳ ಕಷ್ಟ. ಅವರಿಗೆ ರೀಜನಬಲ್ ಟೈಂ ಕೊಡಬೇಕು. 45 ಲಕ್ಷ ರೂಪಾಯಿಗಳನ್ನು ಟ್ರೆಜರಿಯಲ್ಲಿ ಕಟ್ಟಬೇಕೆನ್ನುವಾಗ, 25 ಲಕ್ಷ ರೂಪಾಯಿಗಳನ್ನು ಕಟ್ಟುವುದಕ್ಕೆ ಕಾಲಾವಕಾಶ ಬೇಕೆಂದು ಹೇಳಿದರೆ, ಅವರಿಗೆ ಅವಕಾಶ ಕೊಡದೆ ಏಕಾ ಏಕಿ 26ನೇ ತಾರೀಖು ಡಿವಿಜನರ್ ಕಮಿಷನರ್ ಅವರ ಲೈಸೆನ್ಸನ್ನು ರದ್ದುಮಾಡಿ ನಿನ್ನ ಹಣವನ್ನು ಫರ್‌ಫೀಟ್ ಮಾಡಿದ್ದೇವೆಂದು ಆರ್ಡರ್ ಮಾಡಿದ್ದಾರೆ. ಇದರಿಂದ ಇವತ್ತು ಮತ್ತೊಂದು ಪ್ರಶ್ನೆ ಉದ್ಭವವಾಗುತ್ತದೆ. ಜೂನ್ 4ನೇ ತಾರೀಖಿನ ದಿವಸ ಡಿವಿಜನಲ್ ಕಮಿಷನರ್ ಅವರು ಸೇಲ್ ಲೈಸೆನ್ಸನ್ನು ಕನ್‌ಫರ್ಮ್ ಮಾಡಿದ್ದಾರೆ. ಲೈಸೆನ್ಸನ್ನು ರದ್ದುಮಾಡುವ ಅಧಿಕಾರ ಡಿವಿಜನರ್ ಕಮಿಷನರಿಗೆ ಇದೆಯೋ ಇಲ್ಲವೋ ಗೊತ್ತಿಲ್ಲ. ಸುಪ್ರೀಂ ಕೋರ್ಟಿನಲ್ಲಿ ಡಿವಿಷನರ್ ಕಮಿಷನರ್ ತಮ್ಮ ಅಧಿಕಾರವನ್ನು ಮೀರಿ 26ನೇ ತಾರೀಖಿನ ದಿವಸ ಈ ರೀತಿ ರದ್ದುಮಾಡುವ ಆರ್ಡರನ್ನು ಮಾಡಿದ್ದಾರೆಂದು ಹೇಳಿದ್ದಾರೆ. ರೂಲ್ ಪ್ರಕಾರ ಈ ರೀತಿ ರದ್ದುಮಾಡುವ ವಿಷಯ ಎಕ್ಸೈಜ್ ಕಮಿಷನರ್ ಅವರಿಗೆ ಅಥವಾ ಸರ್ಕಾರಕ್ಕೆ ಸಂಬಂಧಪಟ್ಟುದು. Rule 20 (2) of the Mysore Excise (Disposal of Privileges of Retail Vend of liquors) Rules, 1967 reads thus :—

> "20 (2) On failure of any person to comply with the provisions of rules 17 and 19, the deposits already made shall be forfeited and the right of retail vend of liquor in such shop or group of shops disposed of in such manner under these rules, as the Excise Commissioner may direct."

ಅದನ್ನು ಸುಪ್ರೀಂ ಕೋರ್ಟಿನಲ್ಲಿ ವ್ಯಾಖ್ಯಾನ ಮಾಡಿ ಹೇಳಿದ್ದಾರೆ. ಡಿವಿಜನ್ ಕಮಿಶನರ್ ಕಾನೂನನ್ನು ಮುರಿದು ಮಾಡಿದ್ದಾರೆಂದು ಹೇಳಿದ್ದಾರೆ. ಅವರು ಒಂದು ಕಾನೂನನ್ನು ಮುರಿದು ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಡಿವಿಜನರ್ ಕಮಿಶನರಿಗೆ ಕ್ಯಾನ್ಸಲ್ ಮಾಡುವ ರೈಟ್ ರೂಲ್ 17 (2) ಪ್ರಕಾರ ಇಲ್ಲವೆಂದು ಹೇಳಿದ್ದಾರೆ. ಆಮೇಲೆ ಇನ್ನೊಂದು ಹೇಳಿದ್ದಾರೆ. ಹೀಗೆ ಡಿವಿಜನಲ್ ಕಮಿಶನರ್ ಕೂಡ ಏತಕ್ಕೋಸ್ಕರ ಇಷ್ಟೊಂದು ಆತುರವಾಗಿ 23ನೇ ತಾರೀಖಿಗೆ ಎರಡು ದಿನಸದೊಳಗೆ ಹಣವನ್ನು ಕೊಡಬೇಕೆಂದು ಹೇಳಿ, 26ನೇ ತಾರೀಖಿಗೆ ಅಧಿಕಾರವನ್ನು ಚಲಾಯಿಸಿದರು! ಇದು ಎಕ್ಸೈಜ್ ಕಮಿಶನರಿಗೆ ಮತ್ತು ಸರ್ಕಾರಕ್ಕೆ ಇರುವ ಅಧಿಕಾರ. ಅವರಿಗೆ ಎಷ್ಟೊಂದು ಕುಮ್ಮಕ್ಕು ಇರಬೇಕು? ಡಿವಿಜನರ್ ಕಮಿಶನರಿಂದ ಸರ್ಕಾರದವರು ಈ ಕೆಲಸವನ್ನು ಮಾಡಿಸಿದ್ದಾರೆ. 23ನೇ ತಾರೀಖಿಗೆ ಸುಗ್ರೀವಾಜ್ಞೆಯನ್ನು ಹೊರಡಿಸಿ ಕ್ಯಾನ್ಸಲ್ ಮಾಡಿದ್ದಾರೆ. ಭೂಮರೆಡ್ಡಿಯವರು ಸರ್ಕಾರಕ್ಕೆ ಅರ್ಜಿ ಹಾಕಿದ್ದಾರೆ. ಅವರು ಇದರಿಂದ ರಕ್ಷಣೆ ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಆದರೂ ಸರ್ಕಾರದವರು ಮೌನವಾಗಿದ್ದು, ಇವರ ಜವಾಬ್ದಾರಿ ತಪ್ಪಿಸುವುದಕೋಸ್ಕರ ಹೋಂ ಸೆಕ್ರೆಟರಿಗೆ ಇದನ್ನು ಕೊಟ್ಟಿದ್ದಾರೆ. ಒಬ್ಬ ಕಂಟ್ರಾಕ್ಟುದಾರನು 40ಲಕ್ಷ ರೂಪಾಯಿ ಕಟ್ಟಿ, ನನಗೆ ಸ್ವಲ್ಪ ಕಾಲಾವಕಾಶ ಕೊಡಿ ಎಂದು ಕೇಳಿದಾಗ, ಅದಕ್ಕೆ ಉಂಟೋ, ಇಲ್ಲವೋ ಎನ್ನತಕ್ಕಂತ ಜವಾಬ್ದಾರಿ ಸರ್ಕಾರದ ಅಬ್ಕಾರಿ ಸಚಿವರಿಗೆ ಇಲ್ಲವೇ? ಇದನ್ನು ಹೋಂ ಸೆಕ್ರಟರಿಗೆ ಕೊಟ್ಟು ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಹೀಗೆ ಮಾಡಿದ್ದಾರೆಂದು ನಾನು ಆಪಾದನೆ ಮಾಡುತ್ತೇನೆ. ಈ ನಿಧಾನ ನೀತಿಯಿಂದ ಅವರು ಹೈಕೋರ್ಟಿಗೆ ಹೋಗಬೇಕಾದ ಸಂದರ್ಭ ಬಂತು. 28ನೇ ತಾರೀಖಿಗೆ ಹೈಕೋರ್ಟಿಗೆ ರಿಟ್ ಹಾಕಿ ಡಿವಿಜನಲ್ ಕಮಿಶನರ್ ಏನು ಆರ್ಡರ್ ಮಾಡಿದ್ದಾರೆ, ಅದನ್ನು ತಡೆಹಿಡಿಯುತ್ತಾರೆ. ಬಹಳ ಬುದ್ಧಿವಂತಿಕೆಯನ್ನು ಇದರಲ್ಲಿ ಮಾಡಿದ್ದಾರೆ. ಹೈಕೋರ್ಟಿನಲ್ಲಿ ಸ್ಟೇ ಕೊಟ್ಟವರು ಒಬ್ಬ ನ್ಯಾಯಧೀಶರು. ಅವರ ಸಂಬಂಧಿಕರನ್ನೊಬ್ಬರನ್ನು ಇವರು ರಾಯರಾಗಿ ಮಾಡುತ್ತಾರೆ.

MR. SPEAKER.—The hon. Member Perhaps wants so say something regarding the conduct of the judges. Hon. Member can say that the judgement is erroneous or wrong. But the conduct of the judges should not come in for comment and motives should not be attributed to them. Article 211 says :

> "No discussion shall take place in the legislature of a State with respect to the conduct of any judge of the supreme Court or high court in the discharge of his duties."

Let this Article be kept in view. Hon. Members may point out errors in a judgement and say that the Supreme Court or the High Court has erred. But it is not proper to attribute personal motives. The hon. Members should not comment upon the conduct of the judges.

SRI M. NAGAPPA.—Shall we not name the Judges? Shall we not attribute motives? Please look into article 194 (2). There is no restriction. In respect of article 191 (1) there is restriction in article 211. Under article 194 (2) there is no such restriction. A legislator is competent to discuss and even attribute motives against the Supreme Court and against any judge. We can attribute motives against judiciary or High Court or the Supreme Court and for that I have got sufficient rulings and authorities. If the Speaker permits I will read 1959 Supreme Court-1958 Rajasthan, 1959 Orissa, wherein they have said that legislators can discuss and even attribute motives against judges and any particular judgement.

SRI S. BANGARAPPA (Sorab).—The view expressed by Sri Nagappa is correct,. I have also certain authorities to cite, if I am permitted.

SRI K. H. RANGANATH (Mudigere).—Sir, Sri Sivappa was not attributing any motive to any of the judges. The fact is that the interim order was passed by a particular bench. Subsequently, the writ petition filed by Respondent No. 4 and a relative of the Judge of that Bench was engaged. This was done with a view and with a motive to see that the petition is transferred to some other Bench. I am not attributing any motive to any Bench. The Writ Petitioner to see that the petition is transferred to some other Bench, engaged a counsel who was related to that Judge on a particular Bench, so that, immediately the Judge came to know that a particular counsel was to appear, he transferred the writ petition to some other bench. So, we are not attributing any motives to any particular Bench. We only want to expose the facts. This was done because of the cleverness of respondent No. 4 who got license in this case for a period of two months by virtue of the judgement of the High Court. This has got to be exposed in this House. That is one of the charges also.

MR. SPEAKER —Hon. members Sri M. Nagappa and Sri S. Bangarappa wanted to cite an authority. I welcome them. Till that authority is cited, my ruling stands, namely, the conduct of the Judges of the High Court and Supreme Court should not be discussed and no

personal motives should be attributed in the House. If they cite any authority I shall revise my ruling. I may bring to the notice of the hon. Members one passage from the Book of Practice and Procedure by Sri M. N. Kaul.

> "In order to secure the independence of the Judges, both from the Executive as also from the Legislature, specific provisions have been made in the Constitution to provide that the conduct of a Judge of the Supreme Court or of a High Court 'in the discharge of his duties' cannot be discussed in parliament except upon a substantive motion for presenting an address to the president for removal of a Judge.
>
> Thus, judicial conduct of a Judge of the Supreme Court or of a High Court cannot be discussed on the floor of the House in any debate or commented upon collaterally, by way of a motion for adjournment, or question, etc. The only mode of discussing the conduct of a Judge in the discharge of his duties is upon a motion for his removal and that too when the motion is tabled under the specified provisions and the procedure prescribed therein is followed. If in the discharge of his judicial functions, a Judge comes to an erroneous finding or makes adverse comments upon any person, the only course open is to appeal against that decision, if an appeal, review or revision lies. The protection of the Judge in this regard is restricted only in respect of his judicial duties and does not apply to his private conduct.
>
> The State Legislatures are prohibited from discussing the conduct of a Judge of the Supreme Court or of a High Court in the discharge of his duties."

Therefore when we owe allegiance to the Constitution, we should determinedly adhere to the provisions of the Constitution. I therefore request the hon. Members to observe in letter and spirit the provisions of Art. 211 of the Constitution.

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಹೈಕೋರ್ಟಿನ ನ್ಯಾಯಾಧೀಶರನ್ನು ಮತ್ತು ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ಈ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಇವೊತ್ತು ಹೈಕೋರ್ಟಿಗೆ ರಿಟ್ ಹಾಕಿದ್ದಾರಲ್ಲ ಅವರು ಎಷ್ಟೊಂದು ಬುದ್ಧಿವಂತರು ಎನ್ನುವುದಕ್ಕೆ ನಾನು ಹೇಳಿದ್ದೇನೆ. ಬುದ್ಧಿವಂತಿಕೆಯನ್ನು ಉಪಯೋಗ ಮಾಡಿ ಈ ಪ್ರಯೋಗವನ್ನು ಮಾಡಿದರು. ಹೈಕೋರ್ಟಿನಲ್ಲಿ ಏನು ತೀರ್ಮಾನ ಕೊಟ್ಟರು, ಅವರ ತೀರ್ಮಾನದ ಪ್ರಕಾರ ಡಿವಿಜನರ್ ಕಮೀಷನರು ಏನು ಹೇಳಿದ್ದಾರೆಯೋ ಅದನ್ನು ಎತ್ತಿ ಹಿಡಿದರು. ಆದ್ದರಿಂದ ಭೂಮರೆಡ್ಡಿ ಎನ್ನತಕ್ಕವರು ಅದರಿಂದ ಎಂದರೆ ಆ ಜಡ್ಜ್‌ಮೆಂಟಿನಿಂದ ಬಹಳ ಹತಾಶರಾಗಿ ಸುಪ್ರೀಂ ಕೋರ್ಟಿಗೆ ಹೋಗಬೇಕಾದ ಸಂದರ್ಭ ಬರುತ್ತದೆ. ಸೆಪ್ಟೆಂಬರ್ 17ನೇ ತಾರೀಖಿನ ದಿವಸ ಹೈಕೋರ್ಟಿನವರು ಆರ್ಡರ್ ಮಾಡುತ್ತಾರೆ. ಭೂಮರೆಡ್ಡಿಯವರ ರಿಟ್ ಪಿಟಿಷನ್ ಡಿಸ್‌ಮಿಸ್ ಮಾಡುತ್ತಾರೆ. ಆಮೇಲೆ ಮುಂದೆ ಇರತಕ್ಕಂಥ ದಾರಿ ಏನು ಎಂದರೆ ಪುನಃ ಟೆಂಡರ್ ಕರೆದು ಸರ್ಕಾರದ ಆದಾಯದ ದೃಷ್ಟಿಯಿಂದ ಯಾರು ಹೆಚ್ಚಿಗೆ ಹಣವನ್ನು ಕೊಡುತ್ತಾರೆಯೋ ಅಂಥವರಿಗೆ ಲೈಸನ್ಸ್ ಕೊಡುವುದು ನ್ಯಾಯಮಾರ್ಗ. ಅದನ್ನು ಬಿಟ್ಟು ಹೈಕೋರ್ಟಿನವರು ಒಂದು ಸೂಚನೆಯನ್ನು ಕೊಟ್ಟಿದೆಯೆಂದು ಹೇಳಿ ನಾಲ್ಕನೇ ರಿಸ್ಪಾಂಡೆಂಟಿಗೆ ಕೊಟ್ಟರು. ಇದು ದುರದೃಷ್ಟಕರವಾದ ವಿಷಯ. ಆ ದಿವಸ ಕೂಡ

(ಶ್ರೀ ಎಸ್. ಶಿವಪ್ಪ)

ರಾಯರುಗಳು ಮೇಧಾವಿಗಳು ಈ ವಿಷಯವನ್ನು ಯೋಚನೆ ಮಾಡಬಹುದಾಗಿತ್ತು. ನಾಲ್ಕನೇ ರಿಸ್ಪಾಂಡೆಂಟ್ ನಿರಂಜನ್ ಅವರಿಗೆ ಲೈಸೆನ್ಸ್ ಕೊಡುವ ವಿಷಯದಲ್ಲಿ ಸರ್ಕಾರದವರು ಯೋಚನೆ ಮಾಡಬಹುದಾಗಿತ್ತು. ಸರ್ಕಾರದ ಆದಾಯದ ದೃಷ್ಟಿಯಿಂದ ಅವರು ಹೆಚ್ಚಿಗೆ ಹಣವನ್ನು ಸಂಪಾದನೆ ಮಾಡಬೇಕು ಎಂದು ಸರ್ಕಾರದವರು ಯೋಚನೆ ಮಾಡಬೇಕಾಗಿತ್ತು. ಆದರೆ ಸರ್ಕಾರದವರು ಅದನ್ನು ಗಣನೆಗೆ ತೆಗೆದುಕೊಳ್ಳದೆ ನಾಲ್ಕನೆ ರೆಸ್ಪಾಂಡೆಂಟಿನ ಪ್ರೀತಿಗೋಸ್ಕರ, ಪ್ರೇಮಕ್ಕೋಸ್ಕರ ಸರ್ಕಾರದ ಖಜಾನೆಗೆ ಹೆಚ್ಚು ಹಣ ಬರುವುದನ್ನು ತಪ್ಪಿಸಿ ನಾಲ್ಕನೇ ರಿಸ್ಪಾಂಡೆಂಟಿಗೆ ಸಹಾಯ ಮಾಡಿದ್ದಾರೆ. ಸರ್ಕಾರದ ಖಜಾನೆಗೆ ನಾಲ್ಕು ಲಕ್ಷ ರೂಪಾಯಿಗಳು ಕಡಿಮೆ ಬರತಕ್ಕದ್ದಾದರೂ ಕೂಡ ಅದನ್ನು ಒಪ್ಪಿ ನಾಲ್ಕನೇ ರೆಸ್ಪಾಂಡೆಂಟಿಗೆ ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರ ನಾಲ್ಕನೇ ರಿಸ್ಪಾಂಡೆಂಟಿನ ಪರವಾಗಿ ಅವನ ಬೆನ್ನು ಹಿಂದೆ ಇದೆಯೆಂಬುದನ್ನು ತೋರಿಸುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಹೈಕೋರ್ಟ್ ಆರ್ಡರ್ ಆದಮೇಲೆ ಹರಾಜು ಹಾಕಬೇಕಾದರೆ ಆ ಕಾಲದಲ್ಲಿ ಈ ಅಂಗಡಿಗಳನ್ನೆಲ್ಲಾ ಯಾರು ನಡೆಸಬೇಕಾಗಿತ್ತು?

ಶ್ರೀ ಎಸ್. ಶಿವಪ್ಪ.—ಏನು ಸ್ವಾಮಿ ಕಾಕಮ್ಮನ ಕತೆ ಹೇಳುತ್ತೀರಿ! ಯಾರು ಬಿಡ್ ಮಾಡಿ ತೆಗೆದುಕೊಳ್ಳುತ್ತಾರೆಯೋ ಅವರೇ ಮಾಡುತ್ತಾರೆ. ಸರ್ಕಾರದವರು ನಾಲ್ಕನೇ ರಿಸ್ಪಾಂಡೆಂಟಿನ ಮೇಲೆ ಎಷ್ಟೊಂದು ಪರವಹಿಸಿದ್ದಾರೆ ಎಂದರೆ 17ನೇ ತಾರೀಖಿನ ದಿವಸ ಹೈಕೋರ್ಟಿನ ಜಡ್ಜ್‌ಮೆಂಟ್ ಆಗಿದೆ. 18ನೇ ತಾರೀಖಿನ ದಿವಸ ಎಕ್ಸೈಜ್ ಕಮೀಷನರ ಮುಖಾಂತರ ಡಿವಿಜನಲ್ ಕಮೀಷನರು 1168 ಅಂಗಡಿಗಳಿಗೆ ಮದ್ಯದ ಮಾರಾಟಕ್ಕೆ ಲೈಸೆನ್ಸ್ ಕೊಟ್ಟು ಅದೇ ದಿವಸ ಇಡೀ ಎರಡು ಜಿಲ್ಲೆಗಳಲ್ಲಿ 1168 ಅಂಗಡಿಗಳನ್ನು ತೆರೆದು ಈ ಮದ್ಯವನ್ನು ಮಾರತಕ್ಕ ವ್ಯವಸ್ಥೆಗೆ ಸರ್ಕಾರ ಸಹಾಯ ಮಾಡಿದೆ. ಇದಕ್ಕೆ ಸರ್ಕಾರ ಸಹಾಯ ಮಾಡದಿದ್ದರೆ ಯಾರಿಂದಲೂ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಶ್ರೀ ಭೂಮರೆಡ್ಡಿಯವರು 24 ದಿನಗಳಿಂದ ಮಾರಾಟದ ವ್ಯವಸ್ಥೆ ಮಾಡಿಕೊಂಡಿದ್ದರು. ಇವರು ಒಂದೇ ದಿವಸದಲ್ಲಿ ಮಾರಾಟದ ವ್ಯವಸ್ಥೆ ಮಾಡಿಕೊಳ್ಳಲು ಅವರಿಗೆ ನನಗೇ ಸಿಕ್ಕುತ್ತದೆ ಎಂದು ಮುಂಚೆಯೇ ಗೊತ್ತಿತ್ತೇ? 17ನೇ ತಾರೀಖು ಅವರು ಮಧ್ಯಾಹ್ನ 2 ಗಂಟೆಗೆ ಹಣ ಕಟ್ಟಿದ್ದಾರೆ. ಸಾಯಂಕಾಲ 4 ಗಂಟೆಗೆ ಹೈಕೋರ್ಟ್ ಆರ್ಡರಾಗಿದೆ. ಆ ಹೊತ್ತೇ ಖಜಾನೆಗೆ ಅವರು ಹಣ ಕಟ್ಟುವುದಕ್ಕೆ ಹೇಗೆ ಸಾಧ್ಯ! ಯಾರಾದರೂ ಅವರಿಗೆ ಭವಿಷ್ಯ ಹೇಳಿದ್ದರೆ, ಅಥವಾ ಮಂತ್ರವಾದಿ ಅವರಿಗೆ ಹೇಳಿದ್ದನೇ? ಒಂದೇ ದಿವಸದಲ್ಲಿ 1168 ಅಂಗಡಿಗಳನ್ನು ತೆರೆದು ಮದ್ಯ ವ್ಯಾಪಾರ ಮಾಡತಕ್ಕ ಒಂದು ವ್ಯವಸ್ಥೆಗೆ ಈ ಸರ್ಕಾರದ ಸಹಾಯ ಇಲ್ಲದೆ ಯಾರಿಗೂ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಶ್ರೀ ಭೂಮರೆಡ್ಡಿಯವರು ಸ್ಟೇ ಆರ್ಡರ್ ತಂದಾರು ಎಂದು ಸರ್ಕಾರ ಎಲ್ಲಾ ಅಧಿಕಾರವನ್ನು ಉಪಯೋಗಿಸಿ ಒಬ್ಬ ವ್ಯಕ್ತಿಗಾಗಿ ಸರ್ಕಾರ ಅಧಿಕಾರವನ್ನು ದುರುಪಯೋಗ ಮಾಡಿದೆ. ಅದಕ್ಕಾಗಿ ಮರ್ಯಾದೆ ಇದ್ದರೆ ಈ ಸರ್ಕಾರ, ಈ ಮಂತ್ರಿಮಂಡಲ ರಾಜೀನಾಮೆ ಕೊಡಬೇಕು. ಈಗ ಮಾಡಿರತಕ್ಕ ಒಂದು ಅಪಾದನೆಯೇ ಸಾಕು. ಇದಕ್ಕಾಗಿ ಈ ಮಂತ್ರಿ ಮಂಡಲ ರಾಜೀನಾಮೆ ಕೊಡಬೇಕು ಎಂದು ನಾನು ಹೇಳುತ್ತೇನೆ. ಸುಪ್ರೀಂ ಕೋರ್ಟಿನವರು ಹೇಳುತ್ತಾರೆ.

> "It is rather surprising that the Government acted so hastily and issued licences to respondent No. 4 on or about September 18. It is not quite clear how licences in respect of 1168 shops could be issued on a single day. The effect of this precipitate action on the part of the Government was that the appellant could not on the next day obtain a stay of the operation of the High Court's order. There is ground for suspecting that the Government was favouring respondent No. 4."

ಎಂದು, ಏನೋ ರಾಜಕೀಯ ದೃಷ್ಟಿಯಿಂದ, ರಾಜಕೀಯದ ಎದುರು ಪಕ್ಷದವರು ಹೇಳುತ್ತಾರೆ ಎಂದರೆ ನಮ್ಮ ಮೇಲೆ ಆಪಾದನೆ ಮಾಡಬಹುದಾಗಿತ್ತು. ಆದರೆ ದೇಶದ ಅತ್ಯುನ್ನತ ನ್ಯಾಯಮಂಡಲಿಯಿಂದ ನ್ಯಾಯಾಲಯದಿಂದ ಈ ಒಂದು ತೀರ್ಮಾನ ಬರಬೇಕಾದರೆ ಈ ಸರ್ಕಾರ ಇಷ್ಟೊಂದು ಆತುರ ಆತುರವಾಗಿ ತಮಗೆ ಬೇಕಾದಂತಹ ಒಬ್ಬ ವ್ಯಕ್ತಿಗೆ ಸಹಾಯ ಮಾಡಬೇಕು ಎಂದು ಹೇಳಿ ಎಲ್ಲಾ ಸಹಾಯವನ್ನು ಸರ್ಕಾರ ಒಬ್ಬ ವ್ಯಕ್ತಿಗೆ ಕೊಟ್ಟಿದೆ. ಏತಕ್ಕೋಸ್ಕರ ಆ ರೀತಿ ಸಹಾಯವನ್ನು ಕೊಡಬೇಕಾಗಿತ್ತು?

3-00 P.M.

ಸರ್ಕಾರದವರು ಈ ಬಗ್ಗೆ ತಿಳಿಸಬೇಕು. ಸುಪ್ರೀಂ ಕೋರ್ಟಿನ ದೃಷ್ಟಿಯಲ್ಲಿ ಈ ಸರ್ಕಾರ ಸಂಶಯಾತ್ಮಕವಾಗಿದೆ. ವಿರೋಧಪಕ್ಷದವರ ಕೆಲಸವಾದರೂ ಕೂಡ ಸರ್ಕಾರ ಮಾಡುವ ತಪ್ಪುಗಳನ್ನು ಆಗಿಂದಾಗ್ಗೆ ಎತ್ತಿ ತೋರಿಸುವುದು. ಇದು ವಿರೋಧಪಕ್ಷದವರ ಪವಿತ್ರವಾದ ಕರ್ತವ್ಯ. ಈ ಬಗ್ಗೆ ಒಬ್ಬರು ಹೇಳಿದ್ದಾರೆ :

" So soon as ever thou seest him draw and as thou triest swear horribly." ಎಂಬುದಾಗಿ.

This is the essence of Opposition. ಈ ಒಂದು ಪವಿತ್ರವಾದ ಕರ್ತವ್ಯವನ್ನು ನಾವು ಮಾಡುತ್ತಿದ್ದೇವೆ. ಪ್ರಜಾಪ್ರಭುತ್ವ ಈ ದೇಶದಲ್ಲಿ ಸುಭದ್ರವಾಗಿ ಬಾಳಿ ಬೆಳಗಬೇಕಾದರೆ, ಒಬ್ಬ ವ್ಯಕ್ತಿ ಎಂತಹವನೇ ಆಗಿರಲಿ, ಅವನಿಗೆ ಸಹಾಯ ಮಾಡುವುದೆಂದರೆ ಸರ್ಕಾರ ತನ್ನ ಅಧಿಕಾರವನ್ನು ದುರುಪಯೋಗಿಸಿಕೊಂಡಂತೆ ಆಗುತ್ತದೆಂದು ಹೇಳುತ್ತೇನೆ. ಈ ರೀತಿ ಅನ್ಯಾಯವಾಗಿರುವುದು ಈ ವ್ಯವಹಾರದಲ್ಲಿ ಎದ್ದು ಕಾಣುತ್ತದೆ. ಪ್ರಜಾಪ್ರಭುತ್ವದಲ್ಲಿ ಈ ಸರ್ಕಾರದವರಿಗೆ ಕಿಂಚಿತ್ತಾದರೂ ನಂಬಿಕೆ ಇದ್ದರೆ ರಾಜೀನಾಮೆ ಕೊಡುವುದು ಅವರ ಕರ್ತವ್ಯವೆಂದು ನಾನು ಒತ್ತಾಯದಿಂದ ಹೇಳುತ್ತೇನೆ. ಹಿಂದಿನ ಆಂಧ್ರದ ಮುಖ್ಯಮಂತ್ರಿಗಳಾದ ಶ್ರೀ ಸಂಜೀವರೆಡ್ಡಿಯವರು ಬಸ್ ರಾಷ್ಟ್ರೀಕರಣದ ವ್ಯವಹಾರದಲ್ಲಿ ಇಂತಹ ಒಂದು ಪ್ರಸಂಗ ಬಂದಾಗ ರಾಜೀನಾಮೆ ಕೊಟ್ಟು ಹೇಳಿದರು. ಏನೆಂದರೆ ಶ್ರೇಷ್ಠ ನ್ಯಾಯಾಲಯದಲ್ಲಿ ನನ್ನ ಮೇಲೆ ಅನುಮಾನ ಬಂದಮೇಲೆ ನಾನು ಅಧಿಕಾರದಲ್ಲಿರುವುದಕ್ಕೆ ಲಾಯಕ್ ಅಲ್ಲ ಎಂದು ರಾಜೀನಾಮೆ ಕೊಟ್ಟಿದ್ದೇನೆ ಎಂಬುದಾಗಿ. ಕೇವಲ ಲಘುವಾದ ಕಾರಣಗಳಿಗಾಗಿ ದೊಡ್ಡ ದೊಡ್ಡ ವ್ಯಕ್ತಿಗಳು ರಾಜೀನಾಮೆ ಕೊಟ್ಟ ನಿದರ್ಶನಗಳು ಅನೇಕ ಇವೆ. ಯಾವಾಗಲೂ ಅಧಿಕಾರದ ದುರುಪಯೋಗವಾದಾಗ ಅವರವರೇ ತಿಳಿದುಕೊಂಡು ರಾಜೀನಾಮೆ ಕೊಡುವುದು ಒಂದು ಒಳ್ಳೆಯ ಮಾರ್ಗ. ನಾವು ನಿಮ್ಮನ್ನು ತಪ್ಪು ಮಾಡಿದ್ದೀರಿ ಎಂದು ಹೊರಕ್ಕೆ ಎಳೆದು ಹಾಕುವುದಕ್ಕೆ ಸಾಧ್ಯವಿಲ್ಲ. ಈ ವರ್ಷ ಗಾಂಧೀಯವರ ಶತಾಬ್ದಿಯನ್ನು ಆಚರಿಸಲಿದ್ದೀರಿ. ಗಾಂಧೀಜೀಯವರು ಹೇಳಿದಂತೆ ನಡೆಯಬೇಕೆಂದು ಆ ಕಡೆಯ ಸದಸ್ಯರು ಹೇಳಿದ್ದಾರೆ. ಆದಕಾರಣ ಯಾರಲ್ಲಿ ಕಿಂಚಿತ್ತಾದರೂ ದೇಶಪ್ರೇಮ ಇದೆಯೋ, ಯಾರಲ್ಲಿ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆಯೋ, ಯಾರಲ್ಲಿ ದೇಶದ ಹಣ ದುರುಪಯೋಗವಾಗಬಾರದು ಎಂಬ ಉದ್ದೇಶವಿದೆಯೋ ಮತ್ತು ಪ್ರಜಾಸತ್ತೆಯಲ್ಲಿ ಆಸಕ್ತಿ ಇರುವ ಪ್ರತಿಯೊಬ್ಬರೂ ಉದಾತ್ತ ಧ್ಯೇಯದಿಂದ ನನ್ನ ಈ ನಿರ್ಣಯಕ್ಕೆ ಬೆಂಬಲ ಕೊಟ್ಟು, ಸರ್ಕಾರ ರಾಜೀನಾಮೆ ಕೊಡಬೇಕೆಂಬ ಬಗ್ಗೆ ಎಲ್ಲರೂ ಬೆಂಬಲ ಕೊಡಬೇಕೆಂದು ಹೇಳಿ ಈ ನನ್ನ ನಿರ್ಣಯವನ್ನು ಸಭೆಯ ಮುಂದೆ ಇಡುತ್ತೇನೆ.

Sri H. M. CHANNABASAPPA.—Before any hon. Member speaks I would like to have a clarification from the Hon. Minister for Excise so that it may improve the debate. Is it a fact that the Government have given time for depositing monies in the case of Bangalore as against refusal of time in the case of Raichur ?

†Sri RAMAKRISHNA HEGDE.—So far as I could recollect, I do not think so; but I will have to get the information. This is subject to getting offical information from the department.

Sri H. M. CHANNABASAPPA.—It is a very serious matter. It should not be difficult for him to get the information. Within five minutes he can get the information. I wish he gets the information and places it before the House.

Sri RAMAKRISHNA HEGDE.—I shall get it as early as possible.

Sri B. P. GANGADHAR (Tumkur).—Is it a fact that time was granted with respect to other contractors elsewhere and that only in this particular case time was rejected and at the same time a fabulous sum of nearly Rs. 20 lakhs over and above Rs. 40 lakhs asked was to be deposited ? Is it also a fact that it was insisted that it must be paid within two days only lest the licenses should be cancelled ?

Sri RAMAKRISHNA HEGDE.—It is very difficult to say off hand whether time was granted to any other contractor in any other place. I would like to give this much information to the hon. Members, namely, that in this particular case we must bear in mind as a background two or three important factors. One is that the time that was left before the commencement of the contract was very short. This particular contrator was orally told first by the Divisional Commissioner that he has to fulfil the requirements of rule 19. When he failed to do so, the Divisional Commissioner wrote to him a letter by way of notice asking him to deposit. That letter was dated 19th June. It may be that according to the contention of the contractor, it was received by him on the 23rd because that contractor was not a local resident; the letter had to go to some place in Hyderabad or Andhra Pradesh. May be that rule 19 is not as clear as it should be. The Supreme Court has also said that it is not properly drafted, but that rule is still in force and we have to act according to that rule. Therefore, according to rule 19 if a contractor fails to give a list of the immovable properties situate in Mysore State, he is further required to deposit another sum equal to two months. What the Divisional Commissioner did in this particular case was to ask the particular contractor to conform to the rules. It is true that this particular contractor later on requested the Divisional Commissioner to give some more time. It was already 25th and if we did not start the work on the 30th June, the old contract would come to an end, with the result that there will be a gap and Government cannot run the shops. Therefore, it was necessary to take precaution to see that the business started with effect from 1st of July.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ನನ್ನ ಒಂದು ಪ್ರಶ್ನೆಯೆಂದರೆ, ಹೈಕೋರ್ಟ್ ತೀರ್ಪು ಆದಬಳಿಕ ಎಕ್ಸೈಜ್ ಕಮೀಷನರ್ ಆಫೀಸ್‌ನಿಂದ ಒಬ್ಬ ಸ್ಪೆಷಲ್ ಅಧಿಕಾರಿಯನ್ನು ತಾವು ಗುಲ್ಬರ್ಗ ಡಿವಿಜನಲ್ ಕಮೀಷನರ್ ಆಫೀಸಿಗೆ 24 ಗಂಟೆಯೊಳಗೆ ಸರ್ಕಾರದವರು ಕಳಿಸಿ, ಭೂಮಾ ರೆಡ್ಡಿಯವರಿಂದ ನಿರಂಜನ್ ಅವರಿಗೆ ಚಾರ್ಜು ಕೊಡಿಸುವುದಕ್ಕೆ ಏರ್ಪಾಡು ಮಾಡಿದಿರಿ. ಇದೇರೀತಿ ಸುಪ್ರೀಂ ಕೋರ್ಟ್ ತೀರ್ಪಾದ ಬಳಿಕ ಸರ್ಕಾರದವರು ಒಬ್ಬ ಸ್ಪೆಷಲ್ ಅಧಿಕಾರಿಯನ್ನು ಕಳಿಸುವುದಕ್ಕೆ ಏರ್ಪಾಡು ಮಾಡಿದಿರಾ ?

ಶ್ರೀ ರಾಮಕೃಷ್ಣ ಹೆಗಡೆ.—ಸ್ವಾಮಿ, ಸುಪ್ರೀಂ ಕೋರ್ಟು ಡಿಸಿಷನ್ ಆದಮೇಲೆ ಡಿಸೆಂಬರು 5ನೇ ತಾರೀಖು ರಾತ್ರಿ 11 ಗಂಟೆ ಹೊತ್ತಿನಲ್ಲಿ ಒಂದು ಟೆಲಿಗ್ರಾಂ ಬಂತು. ಆದರೆ ಅಂದು ಶನಿವಾರ ಆಗಿತ್ತು ಮತ್ತು 5ನೇ ತಾರೀಖಿನಿಂದ 7ನೇ ತಾರೀಖಿನವರೆಗೆ ಎಕ್ಸೈಜು ಕಮಿಷನರವರು ಯಾವುದೋ ಒಂದು ಕಾನ್‌ಫರೆನ್ಸ್‌ಗಾಗಿ ಕೇರಳಕ್ಕೆ ಹೋಗಿದ್ದರು. ಅವರು 7ನೇ ತಾರೀಖು ಬಂದ ತಕ್ಷಣ ಯಾವ ತರಹದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಿರ್ಧಾರ ಮಾಡಲು ಅಂದು ಶನಿವಾರವಾಗಿತ್ತು. ಅದರ ಬಗ್ಗೆ ತೀರ್ಮಾನವನ್ನು ಮರು ದಿವಸ ತೆಗೆದುಕೊಂಡು 8ನೇ ತಾರೀಖಿನ ದಿನ ಎಕ್ಸೈಜು ಕಮಿಷನರವರು ಲೈಸನ್ಸ್‌ನ್ನು ಇಷ್ಯೂ ಮಾಡಿದ್ದಾರೆ. ಇದಕ್ಕಾಗಿ ಒಬ್ಬರು ಸ್ಪೆಷಲ್ ಮೆಸೆಂಜರನ್ನು ಕಳುಹಿಸುವ ಅಗತ್ಯವಿರಲಿಲ್ಲ. Sir, according to the Supreme Court judgement the competent officer to issue licences was only the Excise Commissioner and not the Divisional Commissioner and when the Excise Commissioner returned to the headquarters on 8th the same day licences were issued and a Special messenger was also sent to Gulbarga on the same day with instructions of the Divisional Commissioner. On 9th, the Divisional Commissioner took further action and licence was issued to Sri Bhooma Reddy and then Mr. Bhooma Reddy started his business.

Mr. SPEAKER.—I want to know from the Government how much time they would require for reply.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಸ್ವಾಮಿ, ಈಗಾಗಲೇ ಸುಮಾರು ಒಂದೂವರೆ ಗಂಟೆ ಕಾಲ ಬೇರೆ ವಿಚಾರಗಳಲ್ಲಿ ಇಂದು ಕಳೆಯಬೇಕಾಗಿ ಬಂತು. ಇದನ್ನು ತಾವು ಇಂದು ಚರ್ಚೆ ಮಾಡುವಾಗ ಕೂಡಿಸಿಕೊಡಬೇಕು ಎಂದು ಕೇಳುತ್ತೇನೆ.

Mr. SPEAKER.—Instead of adjourning at six why not we sit till 7 P.M. and finish it? Today we have adopted the report of the Business Advisory Committee which has allotted only one day for this subject. The Committee's mind is the mind of this House. If we go on extending the time then probably we will be losing time unnecessarily and members would be delayed in returning to their constituencies. If we sit up to 7 P.M. I think about 2 hours and 45 minutes would be available for discussion on this subject. There are 8 hon. members on the opposition side. I think ten minutes for each member could be allowed for purposes of speaking on this motion. If the debate is concluded by six of the clock, then the Government reply could be concluded by seven of the clock.

Sri VEERENDRA PATIL.—Sir, now I feel that one hour is sufficient for reply. But much depends upon the discussion that takes place. If the debate is over by 5-30 P.M. then I will be able to finish my reply by 7 P.M.

Mr. SPEAKER.—The Parliament in England sits throughout night sometimes. Hon. Members must also know that extension of sittings of the House would cost thousands of rupees to the State exchequer.

†**Sri H. M. CHANNABASAPPA.**—I would like to submit that I am very glad that the Hon. Speaker draw the attention of the hon. Members to the expenditure incurred by the State exchequer. But I am sorry that the Hon. Speaker has not assessed the quantum of loss the State would suffer if such things are to continue. But the Hon. Speaker is well aware that a lot of time has already been consumed by the house discussing so many extraneous matters. Now it would be too much if we are called upon to sit here till 7 P.M. and ask the members to take only 10 minutes each to speak on a motion of no-confidence especially when acts of moral turpitudes are attributed to the Government of Mysore not by myself, but by the highest judicial authority in the Country. It is not an ordinary question for which we except to get an ordinary reply to be satisfied with. We have to make out case which the whole country is eager to know. Therefore in the interest of doing justice to hon. Members and also in the interest of the State and the country as a whole, I would request the Hon. Speaker not to deal with this vital matter so lightly.

Mr. SPEAKER.—I have already stated that I consider any matter coming up before the House, as importent. I repeat it again. Hon. Member should not accuse that the Chair is treating any matter in a

(MR. SPEAKER)

lighter way. In furtherance of the understanding that was arrived at yesterday in the Business Advisory Committee representing all sections of this House, one day was allotted. Unfortunately an hour or so was lost to-day because of our own fault in the House. Therefore by way of self-punishment and self-discipline let us sit one hour more and make up the loss of time. I think there is no necessity for making long speeches. Hon. Members may bring out their view points precisely in short speeches which would serve a good purpose.

Sri H. M. CHANNABASAPPA.—Sir, I understand that five hours have been allotted for this subject.

Mr. SPEAKER.—Hours were not mentioned. Only a day has been allotted.

ಶ್ರೀ ಎಸ್. ಶಿವಪ್ಪ.—ಒಂದು ದಿವಸ ಎಂದರೆ ಐದು ಗಂಟೆಗಳ ಕಾಲ ಎಂದು ನಾವು ಕಮಿಟಿಯಲ್ಲಿ ಹೇಳಿದ್ದುದು. ಈಗ ಇಲ್ಲಿ ಸುಮಾರು ಒಂದೂವರೆ ಗಂಟೆ ಕಾಲ ಹೋಗಿದೆ. ನಾವು ನಮ್ಮ ಚರ್ಚೆಯನ್ನು ಆರು ಗಂಟೆಯವರೆಗೆ ಮಾಡೋಣ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಇಂದು ಬೇಕಾದರೂ ಕೊಡಲಿ ನಾಳೆ ಬೇಕಾದರೂ ಕೊಡಲಿ.

Mr. SPEAKER.—Yes, let the Hon. Chief Minister reply to-day itself.

Sri VEERENDRA PATIL.—Yes. I will reply.

Mr. SPEAKER.—Shall we put a time limit for speeches ?

Sri H. M. CHANNABASAPPA.—Sir, if the Chair puts a time limit, it is impossible to speak.

Mr. SPEAKER.—Will there be any speakers from the ruling party ?

Sri K. PUTTASWAMY.—If the Opposition Members confine themselves only to the judgement of the Supreme Court, then the Hon. Chief Minister and Excise Minister will reply. If the scope of debate is widend whoever is dragged into the field will have to defend himself.

Mr. SPEAKER.—Sri D. Devaraj Urs will participate in the debate and he is given fifteen minutes. The Opposition Whips may apportion the time among the different speakers on their side and pass is on to me.

Sri S. SIVAPPA.—I have a right of reply. The Chair will kindly bear that also in mind Sir.

Mr. SPEAKER.—Mr. Shivappa will get 15 minutes at the end for reply.

Sri K. H. PATIL.—If time is not available, many of us will have to keep mum. It is not our fault. Let not the impression go about that only a few Members spoke and not others.

Sri H. N. NANGE GOWDA.—The Hon. Minister Sri K. Puttaswamy should remember that the motion of no-confidence is against the entire Ministry, not against any one Minister. If he is under that illusion, it cannot be helped.

Sri K. PUTTASWAMY.—I am not under any illusion.

ಶ್ರೀ ಹೆಚ್. ಎನ್. ನಂಜೇಗೌಡ.—ಮಾನ್ಯ ಸಭಾಪತಿಗಳೇ, ಈ ದಿವಸ ಈ ಮಂತ್ರಿಮಂಡಲದಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸತಕ್ಕಂಥ ಚರ್ಚೆಯನ್ನು ಪ್ರಾರಂಭ ಮಾಡುತ್ತಾ ಇರತಕ್ಕಂಥ ಪರಿಸ್ಥಿತಿಯೇ ಬೇರೆ. ಹಿಂದೆ ಅನೇಕ ಬಾರಿ ಅವಿಶ್ವಾಸ ನಿರ್ಣಯ ಚರ್ಚೆ ಆಗಿರಬಹುದು.

[Mr. Deputy Speaker in the Chair]

ಆದರೆ ಇಂದಿನ ಪರಿಸ್ಥಿತಿಯೇ ಬೇರೆ. ಹಿಂದಿನ ಅರ್ಥಕ್ಕೂ ಇಂದಿನ ಅರ್ಥಕ್ಕೂ ಬಹಳ ವ್ಯತ್ಯಾಸ ಇದೆ. ಹಿಂದೆ ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕಂಥ ಕಾಲದಲ್ಲಿ ಕೇವಲ ವಿರೋಧಪಕ್ಷದವರು ಕೇವಲ ಒಂದು ರಾಜಕೀಯ ಉದ್ದೇಶದಿಂದ ಈ ನಿರ್ಣಯ ತರುತ್ತಾರೆ ಎನ್ನತಕ್ಕಂಥ ಅಭಿಪ್ರಾಯ ಇರುತ್ತಿತ್ತು. ಇವೊತ್ತಿನ ದಿವಸ ಈ ನಿರ್ಣಯ ಬಹಳ ಗಂಭೀರ ಪರಿಸ್ಥಿತಿ ತಾಳಿದೆ. ನಮ್ಮ ದೇಶದ ಉಚ್ಚ ನ್ಯಾಯಾಲಯ ನಿಮ್ಮ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದೆ. ಆದುದರಿಂದ ಏನೋ ಒಂದು ರಾಜಕೀಯ ಉದ್ದೇಶದಿಂದ ಹೇಳುತ್ತಾ ಇದ್ದಾರೆ ಎನ್ನುವ ಹಾರಿಕೆ ಮಾತು ಹೇಳುವುದಕ್ಕೆ ಅವಕಾಶವಿಲ್ಲ. ಈವೊತ್ತಿನ ದಿವಸ ನಿಮ್ಮ ಪಕ್ಷದವರೇ ಆದಂಥ ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರು ಹೇಳಿರತಕ್ಕಂಥ ಮಾತುಗಳನ್ನು ನೆನಪು ಮಾಡಿಕೊಳ್ಳಬಹುದು. ಮಂತ್ರಿಮಂಡಲದ ಆದ್ಯಕ್ಷತೆ ಪ್ರಾಮಾಣಿಕತೆ ಬಗ್ಗೆ ಒಂದು ರಹಸ್ಯವರದಿಯನ್ನು ಕಳುಹಿಸುತ್ತೇನೆ ಎನ್ನುವ ಮಾತನ್ನು ಶ್ರೀಮಾನ್ ಕೆ. ಹನುಮಂತಯ್ಯನವರು ಹೇಳಿರುವುದು ವಿರೋಧ ಪಕ್ಷದವರು ಮತ್ತು ನಿಮ್ಮ ಪಕ್ಷದವರು ಕೊಟ್ಟಿರತಕ್ಕಂಥ ಹೇಳಿಕೆಯನ್ನು ಈ ಸಂಧರ್ಭದಲ್ಲಿ ಆಲೋಚನೆ ಮಾಡಿ ನೋಡಿದರೆ ಇದರಲ್ಲಿ ಮೊದಲಗೂ ಈಗಿಗೂ ವ್ಯತ್ಯಾಸ ಇವೆ ಎನ್ನುವುದು ಕಂಡುಬರುತ್ತದೆ. ಇದನ್ನು ದೇಶದ ಜನತೆ ಕಾದು ನೋಡುತ್ತಿದೆ. ನಿಮ್ಮಲ್ಲಿ ಅನೇಕರು ಏನು ಅರ್ಥ ಮಾಡಿಕೊಂಡಿದ್ದಾರೋ ಅದೇರೀತಿ ನಮ್ಮಲ್ಲೂ ಅನೇಕರು ಅರ್ಥ ಮಾಡಿಕೊಂಡಿದ್ದಾರೆ. ಇಡೀ ಸಂಸ್ಥಾನದಲ್ಲಿ ಹೆಂಡದ ಹರಾಜನ್ನು ತಾಲ್ಲೂಕ್‌ವಾರು ಮಾಡುತ್ತೇವೆ ಎಂದು ಹೇಳಿದಿರಿ. ಇದರ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಬೆಂಗಳೂರು ರಾಯಚೂರು, ಗುಲ್ಬರ್ಗ ಇವುಗಳನ್ನು ಜಿಲ್ಲಾವಾರು ಹರಾಜು ಮಾಡಿದ್ದೀರಿ. ಅದೇರೀತಿ ಬೆಂಗಳೂರಿನಲ್ಲಿ ಯಾರ ಹೆಸರಿಗೆ ಕಂಟ್ರಾಕ್ಟ್ ಆಗಿದೆ ಎನ್ನತಕ್ಕಂಥಾದ್ದು, ರಾಯಚೂರು ಗುಲಬರ್ಗಾದಲ್ಲಿ ಯಾರ ಹೆಸರಿಗೆ ಕಂಟ್ರಾಕ್ಟ್ ಆಗಿದೆ ಎನ್ನತಕ್ಕಂಥಾದ್ದು ಗೊತ್ತಿದೆ. ಅವರ ಸಂಬಂಧಿಕರಿಗೆ ಕೊಟ್ಟಹಾಗೆ ಇದೆ. ಇದನ್ನು ಅರ್ಥ ಮಾಡಿಕೊಂಡರೆ ಇದರಲ್ಲಿ ರಾಜಕೀಯ ಇದೆ ಎನ್ನುವುದು ಗೊತ್ತಾಗುತ್ತದೆ. ಸರ್ಕಾರದವರು ಯಾವರೀತಿ ಜನತೆಯ ಹಿತಾಸಕ್ತಿಗಳನ್ನು ಕಾಪಾಡುತ್ತಿದ್ದಾರೆ ಮತ್ತು ದೇಶದ ಆಡಳಿತವನ್ನು ನಡೆಸುತ್ತಿದ್ದಾರೆ ಎಂದು ಜನತೆಯು ಕಾದುನೋಡುತ್ತಿದೆ. ಅವರ ಸಂಬಂಧಿಕರ ಹಿತಾಸಕ್ತಿಗಳನ್ನು ಕಾಪಾಡಿರುವುದಕ್ಕೆ ಇದು ಒಂದು ಪ್ರೈಮಾ ಫೇಸಿ ಕೇಸ್. ಬೆಂಗಳೂರು, ರಾಯಚೂರು, ಗುಲ್ಬರ್ಗ ಈ ಮೂರು ಜಿಲ್ಲೆಗಳಲ್ಲಿ ತಾಲ್ಲೂಕುವಾರು ಮಾಡದೆ ಜಿಲ್ಲಾವಾರು ಮಾಡಿದ್ದೀರಿ, ಇದನ್ನು ದೇಶದ ಜನ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಇದರಲ್ಲಿ ರಾಜಕೀಯ ಇದೆ, ಈವೊತ್ತು ಉಚ್ಚನ್ಯಾಯಾಲಯವೂ ಕೂಡ ಈ ಒಂದು ಅನುಮಾನವನ್ನು ವ್ಯಕ್ತಪಡಿಸಿದೆ. ಸರ್ಕಾರದವರು ಕಾನೂನನ್ನು ಮೀರಿದ್ದಾರೆ ಅಸತ್ಯದ ದಾರಿಯಲ್ಲಿ ಹೋಗುತ್ತಿದ್ದೀರಿ. ಇದು ಒಂದೇ ಅಲ್ಲ, ಎಲ್ಲಾ ಕಾರ್ಯದಲ್ಲೂ ಕೂಡ ಸತ್ಯ ಸಂಗತಿ ಇಲ್ಲವೆಂದು ಹೇಳುತ್ತೇನೆ. ಹೈಕೋರ್ಟಿನಲ್ಲಿ ಅಫಿಡವಿಟ್ ಹಾಕಿರುವ ಒಂದು ದಾಖಲೆ ಇದೆ. ಇದಲ್ಲದೆ ಹಾರಂಗಿ ಹೇಮಾವತಿ ಬಗ್ಗೆ ನಮ್ಮ ಈಗಿನ ಮುಖ್ಯ ಮಂತ್ರಿಗಳಾಗಿರತಕ್ಕ ಶ್ರೀಮಾನ್ ವೀರೇಂದ್ರ ಪಾಟೀಲರು 4 ವರ್ಷದ ಹಿಂದೆ ಇದರ ಬಗ್ಗೆ ತಾಂತ್ರಿಕ ಮಂಜೂರಾತಿ ದೊರೆತಿದೆ ಎನ್ನುವುದನ್ನು ಅಪ್ಪಣೆ ಕೊಡಿಸಿದರು. ಈವೊತ್ತು ಅದರ ಬಗ್ಗೆ ತಾಂತ್ರಿಕ ಮಂಜೂರಾತಿ ದೊರೆತಿಲ್ಲವೆಂದು ಎಲ್ಲರಿಗೂ ಹೇಳುತ್ತಿದ್ದಾರೆ. ಹಿಂದೆ ಹೇಳಿದ್ದು ಅವರಿಗೆ ನೆನಪು ಇಲ್ಲ.

ಶ್ರೀ ವೀರೇಂದ್ರ ಪಾಟೀಲ್.— ನಾನು ಹೇಳಲಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ.—ಖಡ್ಡಾಯವಾಗಿ ಹೇಳಲಿಲ್ಲವೇ ?

ಶ್ರೀ ವೀರೇಂದ್ರಪಾಟೀಲ್.—ಹೇಳಲಿಲ್ಲ.

ಶ್ರೀ ಹೆಚ್. ಎನ್ ನಂಜೇಗೌಡ.—It is on record. ಮುಖ್ಯ ಮಂತ್ರಿಗಳು ಹೇಳಲಿಲ್ಲವೆಂದು ಹೇಳುತ್ತಿದ್ದಾರೆ. ಅಸತ್ಯ ಸಂಗತಿಗಳನ್ನು ಹೇಳುತ್ತಿದ್ದಾರೆ. ಈಗ ನಾನು ಹೇಳುತ್ತೇನೆ. ಅದು ಮೈಸೂರು ಲೆಜಿಸ್ಲೇಟರ್ ಡಿಬೇಟ್ಸ್ ಪುಸ್ತಕದಲ್ಲಿ ವಾಲ್ಯೂಂ ನಂಬರ್ 4 ರಲ್ಲಿ, ಸೋಮವಾರ, 16 ಮಾರ್ಚಿ, 1964 ರಲ್ಲಿ ಶ್ರೀ ವೀರೇಂದ್ರಪಾಟೀಲರು ಈಗ ಕಾಂಗ್ರೆಸ್ಸಿಗೆ ಸೇರಿಕೊಂಡಿರತಕ್ಕಂಥ ಪಕ್ಷಾಂತರ ಹೊಂದಿದ ಶ್ರೀ ಮಾನ್ ದೇವೇಗೌಡರಿಗೆ ಕೇಳಿರುವ ಪ್ರಶ್ನೆಗೆ ಈ ರೀತಿ ಉತ್ತರ ಕೊಟ್ಟಿದ್ದೀರಿ. ನೀವು ಪಕ್ಷಾಂತರ ಮಾಡಿಸುವುದು ಸರಿಯೋ, ದೊಡ್ಡದಾಗಿ ಭಾಷಣ ಮಾಡುತ್ತಿದ್ದೀರಿ.

> "ಶ್ರೀ ಹೆಚ್. ಡಿ. ದೇವೇಗೌಡರು ಕೇಳಿರುವ ಪ್ರಶ್ನೆ: ಈಗತಾನೇ ತಾವು ತಿಳಿಸಿದ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿರತಕ್ಕ ಯೋಜನೆಗಳ ಬಗ್ಗೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯಲು ತಾವೇನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ?" ಎಂದು ಕೇಳಿದ್ದಕ್ಕೆ ಅವರ ಉತ್ತರ.—

> "ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಹಾರಂಗಿ ಮತ್ತು ಹೇಮಾವತಿ ಪ್ರಾಜೆಕ್ಟ್ ಗಳ ಬಗ್ಗೆ ಟೆಕ್ನಿಕಲ್ ಕ್ಲಿಯರೆನ್ಸ್‌ನ್ನು ಪಡೆದಿರುತ್ತೇವೆ. ಇನ್ನು ಬಾಕಿ ಪ್ರಾಜೆಕ್ಟ್‌ಗಳ ಬಗ್ಗೆ ಬರೆದಿರುತ್ತೇವೆ. ಸದ್ಯದಲ್ಲಿ ಅವುಗಳಿಗೂ ಟೆಕ್ನಿಕಲ್ ಕ್ಲಿಯರೆನ್ಸ್ ಬರಬಹುದೆಂದು ಅಂದಾಜು ಮಾಡಿದ್ದೇವೆ."

ವೀರೇಂದ್ರ ಪಾಟೀಲರೇ ಲೋಕೋಪಯೋಗಿ ಖಾತೆಯ ಮಂತ್ರಿಗಳಾಗಿ ಇದ್ದು ಈ ಉತ್ತರವನ್ನು ಕೊಟ್ಟಿದ್ದಾರೆ. ಈ ಸಭೆಯಲ್ಲಿ ಹಿಂದೆ ಹೇಳಿರುವ ಮಾತನ್ನೇ ಹೇಳಲಿಲ್ಲ ಎನ್ನುವ ಪರಿಸ್ಥಿತಿಗೆ ಹೋಗತಕ್ಕದ್ದು ಸರಿಯಲ್ಲ. ದೇಶ ಇದನ್ನು ಕಾದು ನೋಡುತ್ತಿದೆ. ಜನ ನಿಮ್ಮನ್ನು ಸಹಿಸಿಕೊಂಡು ಹೋಗುತ್ತಾ ಇದ್ದಾರೆ. ಈ ತರಹ ಎಲ್ಲಿಯವರೆಗೆ ಇರುತ್ತಾರೆ ಎನ್ನುವುದು ಆಲೋಚನೆ ಮಾಡಬೇಕಾದ ಸಂಗತಿ.

3–30 P.M.

ಅದೇ ರೀತಿ ನಮ್ಮಲ್ಲಿ ಜನಗಳು ಮಾತನಾಡಿಕೊಳ್ಳುತ್ತಿದ್ದಾರೆ, ಈಗಿನ ಮುಖ್ಯ ಮಂತ್ರಿಗಳು, ಹಿಂದೆ ಲೋಕೋಪಯೋಗಿ ಖಾತೆಯ ಮಂತ್ರಿಗಳಾಗಿದ್ದವರು ಹಣವಂತರ ಪ್ರಭಾವಕ್ಕೆ ಒಳಗಾಗಿ ಹಾರಂಗಿ ಅಣೆ ಕಟ್ಟುವ ಜಾಗವನ್ನು ಬದಲಾವಣೆ ಮಾಡಿದ್ದಾರೆ ಎಂದು. ಅವರು ಅಸತ್ಯ ಸಂಗತಿಗಳನ್ನು ಮಾತನಾಡುತ್ತಿದ್ದಾರೆ. ಸರ್ಕಾರ ಒಳ್ಳೆಯದನ್ನು ಮಾಡಲಿಕ್ಕೆ ಮೇಲಿನಿಂದ ಸೈಟನ್ನು ಕೆಳಗಡೆಗೆ ಬದಲಾಯಿಸಿರಬಹುದು ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದೆ. ಇದರ ನಿಜಾಂಶವನ್ನು ತಿಳಿದುಕೊಳ್ಳಬೇಕು ಎಂದು ನಾನು ಒಂದು ಪ್ರಶ್ನೆಯನ್ನು ಕಳಿಸಿದ್ದೆ. ಅದಕ್ಕೆ ಉತ್ತರ ಬಂದಿದೆ. ಅದರಲ್ಲಿ ಕಂಪ್ಯಾರಟಿವ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಹರದೂರು ಮತ್ತು ಹುದಗೂರು ಈ ಎರಡು ಸೈಟುಗಳಿಗೂ ಸಂಬಂಧಪಟ್ಟಂತೆ ವಿವರಗಳನ್ನು ಕೊಟ್ಟಿದ್ದಾರೆ. ದೇಶ ಮತ್ತು ಈ ಸಭೆಯಲ್ಲಿರುವವರು ಅರ್ಥ ಮಾಡಿಕೊಳ್ಳಲಿ ಎನ್ನುವ ದೃಷ್ಟಿಯಿಂದ ಆ ವಿವರಗಳನ್ನು ಹೇಳುತ್ತಿದ್ದೇನೆ. ಹರದೂರು ಬಳಿ 4·308 ಟಿ.ಎಂ.ಸಿ. ನೀರನ್ನು ನಿಲ್ಲಿಸಬಹುದಾದರೆ ಹುದಗೂರು ಬಳಿ 1.435 ಟಿ.ಎಂ.ಸಿ. ನೀರನ್ನು ನಿಲ್ಲಿಸಬಹುದು ಎಂದರೆ ಕೆಳಗಡೆ ಕಟ್ಟತಕ್ಕ ಕಟ್ಟೆಯಲ್ಲಿ ನಾಲ್ಕನೇ ಒಂದು ಭಾಗದಷ್ಟು ನೀರನ್ನು ಮಾತ್ರ ನಾವು ನಿಲ್ಲಿಸಿಕೊಳ್ಳಬಹುದು. ಅದೇ ರೀತಿ ಮೇಲ್ಗಡೆ ಕಟ್ಟೆಯ ಎತ್ತರ 180 ಅಡಿಗಳಷ್ಟು ಇದ್ದರೆ ಕೆಳಗಡೆ ಕಟ್ಟುವ ಕಟ್ಟೆ ಎತ್ತರ 140 ಅಡಿಗಳು. ಹೀಗೆ ಪ್ರತಿಯೊಂದನ್ನೂ ಒಂದಕ್ಕೊಂದು ಹೋಲಿಸಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವ ಪ್ರಕಾರ ಕೆಳಗಡೆ ಸೈಟಿನಲ್ಲಿ ಅರ್ಧ ಅಥವಾ ಮೂರನೇ ಒಂದು ಭಾಗದಷ್ಟು ನೀರು ಮಾತ್ರ ಇಟ್ಟುಕೊಳ್ಳಬಹುದು. ಇದೇ ರೀತಿಯಾಗಿ ಮುಳುಗಡೆಯಾಗುವ ಜಮೀನು ಮೇಲ್ಗಡೆ ಕಡಮೆ ಇದ್ದರೆ ಕೆಳಗಡೆ ಜಾಸ್ತಿ ಮುಳುಗಡೆಯಾಗುತ್ತದೆ. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ ಈವೊತ್ತು ಸರ್ಕಾರ ಸತ್ಯ, ಧರ್ಮದಿಂದ ಆಡಳಿತ ನಡೆಸಿಲ್ಲ ಎನ್ನುವುದನ್ನು ಜನತೆ ಅರಿಯಬೇಕು. ಈ ಸರ್ಕಾರ ಕಂಟ್ರಾಕ್ಟರುಗಳ ಕೈಕೆಳಗೆ, ಹಣವಂತರ ಕೈಕೆಳಗೆ, ಕಾಫಿ ಪ್ಲಾಂಟರುಗಳ ಕೈಕೆಳಗೆ ಅವರು ಹೇಳಿದಂತೆ ಹುಕುಂ ಮಾಡಿಕೊಂಡು ಇದೆ. ಬೆಂಗಳೂರು, ಗುಲ್ಬರ್ಗ ಮತ್ತು ರಾಯಚೂರಿನಲ್ಲಿರುವ ಯಾವ ಟಾಡಿ ಕಂಟ್ರಾಕ್ಟರುಗಳಿದ್ದಾರೆ ಅವರ ಕೈಯಲ್ಲಿ, ಹಣವಂತರ ಕೈಯಲ್ಲಿ ಸಿಕ್ಕಿಕೊಂಡು ಅವರ ಕೈಗೊಂಬೆಗಳಾಗಿ ಆಡಳಿತ ನಡೆಸುತ್ತಿರುವ ಸರ್ಕಾರವಾಗಿದೆ. ಸತ್ಯ ಸಂಗತಿಗಳನ್ನು ಮರೆಮಾಚಿ ಅಸತ್ಯ ಸಂಗತಿಗಳನ್ನು ಈ ಪವಿತ್ರವಾದ ಸಭೆಯಲ್ಲಿಟ್ಟು ರಾಜ್ಯಾಡಳಿತ ನಡೆಸ

ತಕ್ಕ ಈ ವೀರೇಂದ್ರ ಪಾಟೀಲರ ಸರ್ಕಾರ ಅಧಿಕಾರದಲ್ಲಿ ಉಳಿಯುವುದಕ್ಕೆ ನೈತಿಕವಾದ ಹಕ್ಕು ಹಿನಿದೆ ಎನ್ನುವುದನ್ನು ನಾವು ಪ್ರಾಮುಖ್ಯವಾಗಿ ಯೋಚನೆ ಮಾಡತಕ್ಕ ಕಾಲ ಬಂದಿದೆ. ಜನತೆ ಕೂಡ ಲಘುವಾಗಿ ಭಾವನೆ ಮಾಡಿಲ್ಲ. ಅವಿಶ್ವಾಸ ನಿರ್ಣಯದ ಚರ್ಚೆ ಇದೆ ಎನ್ನುವುದನ್ನು ಕೇಳಿ ಇಡೀ ದೇಶ ಕಾಯುತ್ತಿದೆ. ಇವೊತ್ತಿನ ಪರಿಸ್ಥಿತಿ ಬೇರೆ ಇದೆ. ಸತ್ಯ ಸಂಗತಿಗಳನ್ನು ಮರು ಮಾಚತಕ್ಕ ಸರ್ಕಾರ ಇರಬೇಕೇ ಎನ್ನುವುದು ಪ್ರಶ್ನೆ. ಅದು ಮುಂದುವರಿಯುವುದಕ್ಕೆ ಯಾವ ನೈತಿಕ ಹಕ್ಕಿದೆ ಎಂದು ಕೇಳುತ್ತೇನೆ.

ಕಾನೂನು ಕಟ್ಟಳೆಗಳಿಗೆ ಮರ್ಯಾದೆಯನ್ನು ಕೊಡತಕ್ಕದು ಸರ್ಕಾರದ ಮೊದಲನೆಯ ಕೆಲಸ. ಒಂದು ಉದಾಹರಣೆಯನ್ನು ಕೊಡುವುದಾದರೆ ನಮ್ಮ ರಾಜ್ಯದ ರಸ್ತೆ ಸಾರಿಗೆ ಕಾರ್ಪೊರೇಷನ್ನಿಗೆ ಏನೂ ಕಾನೂನು ಕಟ್ಟಳೆಗಳು ಇದ್ದ ಹಾಗೆ ಕಾಣುವುದಿಲ್ಲ. ಕಾನೂನು ಕಟ್ಟಳೆಗೆ ಈ ಮಂತ್ರಿ ಮಂಡಲದಲ್ಲಿ ಬೆರೆ ಇದ್ದ ಹಾಗೆ ಕಾಣುವುದಿಲ್ಲ. ಮಂತ್ರಿಗಳು ಇಂಥ ಕಾರ್ಪೊರೇಷನ್ನಿನ ಅಧ್ಯಕ್ಷರಾಗಿ ಬೇರೆ ಯಾವ ರಾಜ್ಯದಲ್ಲಿಯೂ ಇರುವುದು ನನಗೆ ತಿಳಿದಮಟ್ಟಿಗೆ ಇಲ್ಲ. ಇದರಲ್ಲಿ ಇನ್ನೊಂದು ವೈಶಿಷ್ಟ್ಯವೇನೆಂದರೆ ಸಾರಿಗೆ ಮಂತ್ರಿಗಳಾದ ಮೊಹಮದ್ ಅಲಿ ಅವರು ಮೂರು ಕಾರುಗಳನ್ನು ಹೊಂದಿದ್ದಾರೆ. ಅವು ಸ್ವಂತ ಕಾರುಗಳಲ್ಲ. ಮರ್ಸಿಡೆಸ್ ಬೆಂಜ್ ಮತ್ತು ಆಸ್ಟಿನ್ ಈ ಎರಡು ಕಾರುಗಳೂ ಅವರು ಸಾರಿಗೆ ಕಾರ್ಪೊರೇಷನ್ ಅಧ್ಯಕ್ಷರಾಗಿರುವುದರಿಂದ ಕೊಟ್ಟಿರುವುದು, ಮತ್ತೊಂದು ಅವರು ಮಂತ್ರಿಗಳಾಗಿ ಇರುವುದಕ್ಕೆ ಕೊಟ್ಟಿರುವುದು.

ಶ್ರೀ ಎಚ್. ಸಿ. ಬೋರಯ್ಯ.—ಅವರು ಅಧ್ಯಕ್ಷರಾಗಿ ಸಾರಿಗೆ ಕಾರ್ಪೊರೇಷನ್ ಕೆಲಸಕ್ಕೆ ಹೋಗುವಾಗ ಅಲ್ಲಿನ ಕಾರನ್ನು ಉಪಯೋಗ ಮಾಡುತ್ತಾರೆ, ಮಂತ್ರಿಯಾಗಿ ರಾಜ್ಯದ ಕೆಲಸವನ್ನು ಮಾಡಬೇಕಾದರೆ ರಾಜ್ಯ ಸರ್ಕಾರದ ಕಾರನ್ನು ಉಪಯೋಗಿಸುತ್ತಾರೆ.

ಶ್ರೀ ಎಚ್. ಎನ್. ನಂಜೇ ಗೌಡ.—ಮಾನ್ಯ ಉಪಮಂತ್ರಿಗಳು ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕು. ಈ ಮಂತ್ರಿಗಳು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಅರ್ಹರಲ್ಲ. ಅದಕ್ಕೆ ಕಾರಣವೇನೆಂದರೆ ಇವರು ಟ್ರಾನ್ಸ್‌ಪೋರ್ಟ್ ಮಂತ್ರಿಯಾದ ಮೇಲೆ ಎಂಟು ಹತ್ತು ಸಾರಿ ಹೈದರಾಬಾದಿಗೆ ಈ ವರ್ಷದಲ್ಲಿ ಹೋಗಿರಬಹುದು ಎಂದು ಕಾಣುತ್ತದೆ. ನನ್ನ ಹತ್ತಿರ ಸ್ವಲ್ಪ ಎವಿಡೆನ್ಸ್ ಇದೆ. ಅದರ ಬಗ್ಗೆ ವಿಚಾರಣೆ ನಡೆಸಿ ಅದು ಸತ್ಯವಾಗಿದ್ದಲ್ಲಿ ಅವರಿಂದ ರಾಜಿನಾಮೆ ಕೊಡಿಸುತ್ತೇವೆ, ಶಿಕ್ಷೆ ಮಾಡುತ್ತೇವೆ ಎಂದು ಮೊದಲು ನೀವು ಒಪ್ಪಿಕೊಂಡರೆ ಅದನ್ನೆಲ್ಲ ನಿಮ್ಮ ಮುಂದೆ ಇಡುತ್ತೇನೆ. ನನ್ನ ಹತ್ತಿರ ಅಂಕಿ ಅಂಶಗಳಿವೆ. ಹೈದರಾಬಾದಿಗೆ ಹೋಗುವಾಗ ವಿಮಾನದಲ್ಲಿ ಹೋಗುತ್ತಾರೆ. ರೋಡ್ ಟ್ರಾನ್ಸ್‌ಪೋರ್ಟ್ ಕಮಿಷನರ ಸಂಗಡ ಮಾತನಾಡಲು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಹೈದರಾಬಾದಿಗೆ ಹೋದರು ಎಂದು ಹೇಳಿದ್ದಾರೆ. ಆದರೆ ಅವರು ಅಲ್ಲಿ ಯಾರ ಸಂಗಡಲೂ ಮಾತನಾಡಲಿಲ್ಲ. ಅಂತರರಾಜ್ಯ ಬಸ್ ಮಾರ್ಗಗಳ ಸಂಬಂಧದಲ್ಲಿ ಚರ್ಚೆ ಮಾಡಲು ಸ್ವಲ್ಪ ಸರ್ಕಾರಿ ವ್ಯವಹಾರವಿತ್ತು ಎಂದು ಅವರು ಹೋಗಿದ್ದರು ಎಂದರೆ.........

ಶ್ರೀ ಎಚ್. ಸಿ. ಬೋರಯ್ಯ.—ಟೂರ್ ಪ್ರೋಗ್ರಾಂನಲ್ಲಿ ಯಾವ ಕೆಲಸಕ್ಕಾಗಿ ಹೋಗಿದ್ದರು ಎಂದು ಸ್ಪಷ್ಟವಾಗಿ ನಮೂದಾಗಿರುತ್ತದೆ. ಹೈದರಾಬಾದಿಗೆ ಏತಕ್ಕಾಗಿ ಹೋದರು ಎನ್ನುವುದು ಪ್ರೋಗ್ರಾಂನಲ್ಲಿದೆ.

Sri H. N. NANJE GOWDA.—It is an allegation that he has not participated in the said meeting. He went to Madras but he failed to attend the meeting. Then why did he go? Had he no better business than to spend the money of the exchequer? He is not here now. I pity him.

ಮಾನ್ಯ ದೇವರಾಜ ಅರಸ್ ಅವರು ಸಾರಿಗೆ ಸಚಿವರಾಗಿದ್ದಾಗ ಎರಡು ಕಮಿಟಿಗಳನ್ನು ಮಾಡಿದ್ದರು. ಆಡಳಿತದಲ್ಲಿನ ದಕ್ಷತೆಗೆ ಸಂಬಂಧಪಟ್ಟ ಒಂದು ಕಮಿಟಿ ಮತ್ತು ತಾಂತ್ರಿಕ ವಿವರಗಳಿಗೆ ಸಂಬಂಧಪಟ್ಟ ಒಂದು ಕಮಿಟಿ. ಈ ಎರಡು ಕಮಿಟಿಗಳನ್ನೂ ಮಾಡಿದ್ದರು. ಅದಕ್ಕೆ ಸುಮಾರು 3.5 ಲಕ್ಷ ರೂಪಾಯಿ ಖರ್ಚಾಗಿದೆ. ಆ ಕಮಿಟಿಗಳವರು ಕೊಟ್ಟ ರಿಪೋರ್ಟನ್ನೂ ಇಂಪ್ಲಿಮೆಂಟ್ ಮಾಡಲಿಲ್ಲ. ಈ ಸರ್ಕಾರಕ್ಕೆ ಯಾವ ಒಳ್ಳೆಯ ರಿಪೋರ್ಟನ್ನೂ ಇಂಪ್ಲಿಮೆಂಟ್ ಮಾಡಿ ಅಭ್ಯಾಸವಿಲ್ಲ. ದೇಶದ ಜನತೆ ಅದನ್ನು ಸಹಿಸಿಕೊಂಡಿದೆ. ಅದು ಸ್ವಾಭಾವಿಕ. ಆದರೆ ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಕೊಟ್ಟಾಗ ಅದರಲ್ಲಿ ಏನು ಸಲಹೆಗಳನ್ನು ಮಾಡಿದ್ದರು ಅವುಗಳನ್ನು ಕಾರ್ಯಗತ ಮಾಡಲಿಲ್ಲ. ನಾನು ಒಂದು ಉದಾಹರಣೆಯನ್ನು ಕೊಡಬೇಕಾದರೆ ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ಎರಡು ವರ್ಕ್‌ಷಾಪ್ಸ್ ಇವೆ. ಇವುಗಳಲ್ಲಿ ಟಾಪ್ ಹೆವಿ ಎಸ್ಟಾಬ್ಲಿಷ್‌ಮೆಂಟ್ ಇದೆ, ಅದನ್ನು ರಿಟ್ರೆಂಚ್ ಮಾಡಬೇಕು ಎಂದು ಆ ಕಮಿಟಿ ರಿಪೋರ್ಟ್ ಹೇಳಿದರೆ ಈ ಚೇರ್ಮನ್ ಸಾಹೇಬರು

(SRI H. N. NANJE GOWDA)

650 ಹೊಸ ಹುದ್ದೆಗಳನ್ನು ನಿರ್ಮಾಣ ಮಾಡಿ ಸ್ವಜನ ಪಕ್ಷಪಾತ ಮಾಡಿದ್ದಾರೆ. ಆಡಳಿತ ನಡೆಸುವವರು ನೈತಿಕ ಮಟ್ಟವನ್ನು ಉಳಿಸಿಕೊಳ್ಳಬೇಕು. ಆದರೆ ಸಾರಿಗೆ ಮಂತ್ರಿಗಳು ಸ್ವಜನ ಪಕ್ಷಪಾತ ಮಾಡಿದ್ದರಿಂದ ಇದರಲ್ಲಿ ಕೂಡ ನೈತಿಕ ಪತನವಾಯಿತು. ನೈತಿಕ ಪತನ ಮಾಡುತ್ತಿರುವ ಸರ್ಕಾರ, ನೀತಿಯ ಮಟ್ಟವನ್ನು ಕಳೆದುಕೊಂಡಿರುವ ಸರ್ಕಾರ ಆಡಳಿತದಲ್ಲಿ ಇರಬೇಕೇ ಎನ್ನುವುದು ಪ್ರಶ್ನೆ. ಟಾಪ್ ಹೆವಿ ಎಸ್ಟಾಬ್ಲಿಷ್‌ಮೆಂಟ್ ಆಗಿದೆ, ಅದನ್ನು ರಿಟ್ರೆಂಚ್ ಮಾಡಿರಿ ಎಂದು ಹೇಳಿದರೆ 650 ಹುದ್ದೆಗಳನ್ನು ಹೆಚ್ಚಾಗಿ ಮಾಡಿದರು. ಮಾನ್ಯ ಬೋರಯ್ಯನವರಿಗೆ ಇದು ಗೊತ್ತಿರಬೇಕು. ಇವರ ಇಲಾಖೆಯಲ್ಲಿ ಇಂಥ ಆಶ್ಚರ್ಯ ಸಂಗತಿಗಳು ಆಗುತ್ತಿವೆ, ಮಾಯಾ ಮಂತ್ರ ಆಗುತ್ತಿದೆ.

1967ನೇ ಇಸವಿ ಆಗಸ್ಟ್ ತಿಂಗಳಿನಲ್ಲಿ 720 ರೂಪಾಯಿ ಸಂಬಳ ಒಬ್ಬರು ತೆಗೆದುಕೊಳ್ಳುತ್ತಿದ್ದರು.

ಶ್ರೀ ಎಚ್. ಸಿ. ಬೋರಯ್ಯ.—ಅದು ಸ್ಟ್ಯಾಚ್ಯೂಟರಿ ಬಾಡಿ. ಇಂಟರ್ನಲ್ ಅಫೇರ್ಸ್‌ನಲ್ಲಿ ಪ್ರವೇಶ ಮಾಡುವ ಹಾಗೆ ಇಲ್ಲ. ಮಾನ್ಯ ಸಭೆಯ ಮುಂದೆ ಅದಕ್ಕೆ ಸಂಬಂಧಪಟ್ಟ ರಿಪೋರ್ಟ್ ಬರುತ್ತದೆ. ಅದು ಬಂದ ಕಾಲದಲ್ಲಿ ಅದರ ಮೇಲೆ ಮಾತನಾಡಬಹುದು.

Sri H. N. NANJE GOWDA.—You cannot shirk your responsibility. Your own Minister is the Chairman of this statutory body. You cannot express your ignorance on the floor of the House.

ಆಗಸ್ಟ್ 1968ರಲ್ಲಿ 720 ರೂಪಾಯಿಗಳ ಸಂಬಳ ಪಡೆಯುತ್ತಿದ್ದವನಿಗೆ ಎರಡು ತಿಂಗಳ ಅವಧಿಯೊಳಗಾಗಿ ನವೆಂಬರ್ ತಿಂಗಳಲ್ಲಿ 1,600 ರೂಪಾಯಿಗಳನ್ನು ಕೊಟ್ಟರು. ಸ್ವಜನ ಪಕ್ಷಪಾತಕ್ಕೆ ಇದೊಂದು ಉದಾಹರಣೆ. ಕಾಂಪಿಟೆಂಟ್ ಪರ್ಸನ್ಸ್ ಇದ್ದರೂ ಕೂಡ ಎರಡು ವರ್ಷಗಳ ಕಾಲ ಒಂದು ಹುದ್ದೆಯನ್ನು ಫಿಲಪ್ ಮಾಡದೆ ಹಾಗೆಯೇ ಖಾಲಿ ಇಟ್ಟು ಬೇಕಾದವರಿಗೆ ಕೊಟ್ಟರು. ಅದೂ ಸೆಲೆಕ್ಷನ್ ಜಾಬ್ ವಿಚಾರವಲ್ಲ. ಹೀಗೆ ನಿಧಾನ ಮಾಡಿ ಬೇಕಾದವರಿಗೆ ಕೊಟ್ಟಿದ್ದಾರೆ. ಸರಕಾರದವರು ತಮ್ಮ ನೈತಿಕ ಮಟ್ಟವನ್ನು ಕಳೆದುಕೊಂಡಿದ್ದಾರೆಂಬುದಕ್ಕೆ ಇದೊಂದು ಉದಾಹರಣೆ. ಇನ್ನೊಂದು ಕೆಲಸ ಕೂಡ ಮಾಡಿದ್ದಾರೆ. 6-7 ವರ್ಷಗಳ ಹಿಂದೆ ಡಿಸ್‌ಮಿಸ್ ಆಗಿದ್ದ 306 ಜನರನ್ನು ರೀ ಇನ್‌ಸ್ಟೇಟ್ ಮಾಡಿದ್ದಾರೆ. ಅದು ಕೋರ್ಟ್ ಆರ್ಡರಿನ ಮೇಲೆ ಮಾಡಿರುವುದಿಲ್ಲ. ಕೆಲವರನ್ನು ವರ್ಗ ಮಾಡಿರುವುದನ್ನು ಸರಿಯಲ್ಲವೆಂದು ಕೋರ್ಟು ಚೀಮಾರಿ ಮಾಡಿದೆ. ವರ್ಗ ಮಾಡುವುದರಲ್ಲೂ ಕೂಡ ಸ್ವಜನ ಪಕ್ಷಪಾತ. ಮಾಡಿದ್ದರಮೇಲೆ ಹೈಕೋರ್ಟು ಸ್ಟೇ ಆರ್ಡರನ್ನು ಕೊಟ್ಟಿದೆ. ಶ್ರೀ ಮಹಮದಾಲಿಯವರು ಛೇರ್ಮನ್ ಆದಮೇಲೆ ಸುಮಾರು 50 ರಿಟ್ ಪೆಟೀಷನ್‌ಗಳು ಹೋಗಿವೆ, ಈ ಅಂಕಿ ಸ್ವಲ್ಪ ಹೆಚ್ಚು ಕಡಮೆ ಇರಬಹುದು, ಒಂದೆರಡು ಇದರಲ್ಲಿ ವೆತ್ಯಾಸವಿರಬಹುದು. ಇವು ಕೋರ್ಟಿನ ಮುಂದಿವೆ. ಕೆಲಸದಿಂದ ತೆಗೆದುಹಾಕಿದ್ದ 306 ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ, ಇದರಲ್ಲಿ 7 ವರ್ಷಗಳ ಹಿಂದೆ ಡಿಸ್‌ಮಿಸ್ ಆಗಿದ್ದವರನ್ನೂ ಕೂಡ ತೆಗೆದುಕೊಂಡಿದ್ದಾರೆ, ಹೀಗೆ ತೆಗೆದುಕೊಂಡಿರುವುದು ಚೇರ್ಮನ್ ಆರ್ಡರಿನ ಪ್ರಕಾರ. ಅವರ ವಿಚಾರದಲ್ಲಿ ಹೊಟ್ಟೆಕಿಚ್ಚಿಲ್ಲ. ಆದರೆ ದುರದೃಷ್ಟವಶಾತ್ ಅದರಲ್ಲಿ 250 ಚಿಲ್ಲರೆ ಜನ ಅವರ ಜನಾಂಗದವರೇ. ಇದರಿಂದ ನನಗೆ ದುಃಖವಿಲ್ಲ. ಆದರೆ ಸ್ವಜನ ಪಕ್ಷಪಾತವಿದೆ ಎಂಬುದನ್ನು ಹೇಳಬೇಕಾಗಿದೆ. ಶ್ರೀ ಮಹಮದಾಲಿಯವರು ಒಳ್ಳೆಯವರಿರಬಹುದು. ಆದರೆ ಅವರು ಸ್ವಜನ ಪಕ್ಷಪಾತ ಮಾಡಿದ್ದಾರೆಂಬುದು ನಿಜ. ರಿಟ್ರೆಂಚ್ ಆಗಿರುವವರ ಪೈಕಿ ಅವರ ಜನಾಂಗದ 250 ಜನರನ್ನು ತೆಗೆದುಕೊಂಡಿರುವುದು ಗೊತ್ತಾಗಿದೆ. ಅವರಿಗೆ ಹಳೆಯ ಪಗಾರವನ್ನೆಲ್ಲಾ ಕೂಡಿಸಿಕೊಟ್ಟರೆ ಕೆಲವಾರು ರೂಪಾಯಿ ಆಗಬಹುದು. ಆರೇಳು ವರ್ಷಗಳಿಂದ ಕೊಡಬೇಕೆಂದು ಆರ್ಡರು ಮಾಡಿದ್ದಾರೆ. ಇದು ಕೋರ್ಟ್ ಆರ್ಡರಲ್ಲ. ಅವರೇ ಆರ್ಡರು ಮಾಡಿರುವುದರಿಂದ ಭಾರಿ ಅನುಮಾನಾಸ್ಪಷ್ಟವಾಗಿದೆ. ಇದು ಕಂಟ್ರಾಕ್ಟರ ಸರ್ಕಾರವಾಗಿದೆ ಎಂದು ಹೇಳುವಾಗ ಉದಾಹರಣೆ ಕೊಡುತ್ತೇನೆ. 50 ಛಾಸಿಸ್ ಬಿಲ್ಡ್ ಮಾಡುವುದಕ್ಕೆ ಕಂಟ್ರಾಕ್ಟ್ ಕೊಟ್ಟರು, ಶ್ರೀ ಜಯನಕೀರ ಎಂಬುವರಿಗೆ, ಬೊಂಬಾಯಿನವರಿಗೆ ಕೊಟ್ಟರು. ಇದರ ರೆಲವೆನ್ಸಿ ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಇಂಥ ಕಂಟ್ರಾಕ್ಟರು ಬಂದು ಹೋಗಬೇಕಾದರೆ ಅವರ ಸ್ವಂತ ಖರ್ಚಿನಲ್ಲಿ ಬಂದುಹೋಗಬೇಕು. ಈ ಬಗ್ಗೆ ಮೈಸೂರು ದೇಶದವರು ಲೋಯರ್ ಕೊಟೇಷನ್ ಕೊಟ್ಟರೂ ಅವರಿಗೆ ಕೆಲಸ ಕೊಡದೆ ಬೊಂಬಾಯಿನವರಿಗೆ ಕೊಡಲು ಕಾರಣವೇನು ? ಎಂ. ಎಸ್. ಆರ್. ಟಿ. ಸಿ.ಯವರಲ್ಲೇ ಬಾಡಿ ಬಿಲ್ಡ್ ಮಾಡುವುದಕ್ಕೆ ವರ್ಕ್‌ಷಾಪ್ ಆಗಿ 11 ತಿಂಗಳಾಗಿದೆ. ಲೇಲೆಂಡ್ ಬಸ್ಸುಗಳನ್ನು ತರಿಸಿದರು, 7 ಬಸ್ಸುಗಳಿಗೆ ಸ್ಟಾರ್ಟರ್ ಇಲ್ಲ.

Sri K. H. SRINIVAS (Sagar).—I rise to a point of order, Sir. The hon'ble Member is addressing the members of the Treasury Benches directly many a time. He may kindly be directed to address the Chair.

Sri H. N. NANJE GOWDA.—Hitherto there have been many rulings on such a point of order. I request the Chair to direct the hon'ble Member to go through those previous rulings.

ಎಂ.ಎಸ್.ಆರ್.ಟಿ.ಸಿ.ಯಲ್ಲಿ 7 ಜನರಿರಬೇಕು, ಒಬ್ಬ ಅಡ್ವೋಕೇಟ್ ಕೂಡ ಇದ್ದಾರೆ, ಅಷ್ಟು ಮಂದಿ ಇದ್ದರೂ ಕೂಡ ಛೇರ್ಮನ್ ಸ್ಪೆಷಲ್ ಆಗಿ ಇಬ್ಬರನ್ನು ನೇಮಕ ಮಾಡಬಹುದು ಎಂದಿದೆ. ಇದರ ಅರ್ಥವೇನು ? ಅಡ್ವೋಕೇಟ್ ಮತ್ತಿತರು ಸಾಕಷ್ಟು ಜನರಿದ್ದರೂ ಇಬ್ಬರನ್ನು ನೇಮಕ ಮಾಡಿಕೊಳ್ಳಲು ಅವಕಾಶವಿರುವುದರ ಅರ್ಥವೇನು ? ನಿಮ್ಮ ಕಾರ್ಯವೇ ಇದು ಸ್ವಜನಪಕ್ಷಪಾತ ಎಂದು ತೋರಿಸುತ್ತದೆ.

ಇನ್ನೊಂದು ವಿಷಯ ಹೇಳಬೇಕಾಗಿದೆ, ಇದನ್ನು ಬೇರೆ ಸಂದರ್ಭದಲ್ಲಿ ಹೇಳಬಹುದು. ಅವರ ಸರಕಾರ ನೈತಿಕಮಟ್ಟವನ್ನು ಕಳೆದುಕೊಂಡಿದೆ ಎಂಬುದಕ್ಕೆ ಇದನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

(Mr. Speaker in the Chair)

ಸೆಕ್ಯೂರ್ಡ್ ಡೆಟ್ಸ್ ಮತ್ತು ಅನ್‌ಸೆಕ್ಯೂರ್ಡ್ ಡೆಟ್ಸ್ ಎಂದಿದೆ, ಇದಕ್ಕೆ ಬಡ್ಡಿ ಇದೆ; ಸೆಕ್ಯೂರ್ಡ್ ಡೆಟ್ಸ್‌ಗೆ 12 ರೂಪಾಯಿ ಬಡ್ಡಿ ಇದೆ unsecured debtsಗೆ 18 ಪರ್‌ಸೆಂಟ್ ಬಡ್ಡಿ ಇದೆ 20 ಕೋಟಿ ರೂಪಾಯಿ ಬಂಡವಾಳ ಹಾಕಿ ಇನ್‌ಕಂಟ್ಯಾಕ್ಸ್ ವಗೈರೆ ಎಲ್ಲಾ ಕಳೆದು ನಮಗೆ 60 ಲಕ್ಷವೋ ಏನೋ ಆದಾಯ ಬಂದಿದೆ ಎಂದು ಹೇಳುತ್ತಾರೆ. ಇದಕ್ಕೆ ಬಡ್ಡಿ ಹಾಕಿದ್ದರೂ ಬಡ್ಡಿಯಲ್ಲೂ ಜಾಸ್ತಿ ಆದಾಯ ಬರುವುದು. ನೈತಿಕ ಮಟ್ಟವಿಲ್ಲದಿರುವವರು, ಯಾವ ರೀತಿಯಾದ ಅರ್ಹತೆಯೂ ಇಲ್ಲದಿರುವವರು ಆಡಳಿತ ನಡೆಸಿದರೆ ಏನಾಗುತ್ತದೆ ಎಂಬುದಕ್ಕೆ ಉದಾಹರಣೆ ಹೇಳಬಹುದು. ಕಾನೂನಿಗೆ ಬೆಲೆಯಿಲ್ಲ, ನೈತಿಕವಾಗಿ ನಿಮಗೆ ಆಡಳಿತ ನಡೆಸಲು ಹಕ್ಕಿಲ್ಲ. ಇಂದು ನಿಮ್ಮ ಕಡೆ ತಲೆ ಏನೋ ಜಾಸ್ತಿ ಇವೆ, ಅದೂ ಕಡಮೆಯಾಗುವ ಕಾಲ ಬಂದಿದೆ, ತಲೆಗಳ ಸಂಖ್ಯೆ ಹೆಚ್ಚಾಗಿರುವವರೆಗೆ ನೀವು ಅಧಿಕಾರ ಉಳಿಸಿಕೊಳ್ಳಬಹುದು, ದೇಶಕ್ಕೆ ಇದು ಅರ್ಥವಾಗಿದೆ. ಆದರೆ ಇರುವ ನಿಜ ಸಂಗತಿಯನ್ನು ಮರೆಮಾಚುವುದಕ್ಕಾಗುವುದಿಲ್ಲ. ನಿಮಗೆ ಆಡಳಿತದಲ್ಲಿ ಮುಂದುವರೆಯಲು ನೈತಿಕ ಬೆಂಬಲವಿಲ್ಲವೆಂಬುದು ನಿಜ. ಉದಾಹರಣೆಗೆ ಮೈಸೂರು ಸ್ಟೇಟ್ ಫೆಡರೇಷನ್ ಆಫ್ ಕನ್‌ಸ್ಯೂಮರ್ಸ್ ಎಂಬುದಿದೆ. ಕೇಂದ್ರ ಸರಕಾರ ಪಾಲಿಸಿ ವಿಚಾರವಲ್ಲಿ ಬೇಕಾದಷ್ಟು ಸರ್ಕ್ಯುಲರ್ಸ್ ಕಳಿಸಿದೆ, ರೂಲ್ಸ್ ವಗೈರೆ ಮಾಡಿದೆ, ಹಾಗೆ ಮಾಡಿ ಯಾವ ರೀತಿ ಇರಬೇಕೆಂದು ತಿಳಿಸಿದೆ, ಈ ಸಂಬಂಧವಾದ ಒಂದು ಪುಸ್ತಕ ಕೂಡ ಇದೆ, ಅದರಲ್ಲಿ 50-51ನೆಯ ಪುಟಗಳನ್ನು ನೋಡಬಹುದು, ಅದರಲ್ಲಿ ಎಸೆನ್‌ಷಿಯಲ್ ಕನ್‌ಸ್ಯೂಮರ್ಸ್ ಗುಡ್ಸ್ ಎಂದಿದೆ. ಅದನ್ನು ಫ್ಯಾಕ್ಟರಿ ದರದಲ್ಲಿ ನೀವು ಸೊಸೈಟಿಗಳಿಗೆ ಸರಬರಾಯಿ ಮಾಡಬೇಕೆಂದಿದೆ. ಕನ್‌ಸ್ಯೂಮರ್ಸ್ ಫೆಡರೇಷನ್‌ಗೆ ಸರ್ಕಾರ ಒಂದು ಸಾವಿರ ಕ್ವಿಂಟಾಲ್ ಸಕ್ಕರೆಯನ್ನು ಅಲಾಟ್ ಮಾಡುವುದು, ಅದನ್ನು ಕನ್‌ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿಗೆ ಗೌರ್ನಮೆಂಟ್ ರೇಟಿನಲ್ಲಿ ಕೊಡುವ ಬದಲು ಇವರು ಟೆಂಡರ್ ಮೂಲಕ ಮಾರಾಟ ಮಾಡುವರು. ಹಾಗೆ ಮಾಡುವಾಗ ಒಂದು ಕ್ವಿಂಟಾಲಿಗೆ 350 ರೂಪಾಯಿಗಳಂತೆಯೂ ಮಾರಾಟ ಮಾಡಿದ್ದಾರೆ.

ಕಾನೂನು ಕಟ್ಟಳೆಗೆ ಬೆಲೆ ಇದ್ದರೆ, ಕಾನೂನು ಪ್ರಕಾರ ಆಡಳಿತ ಈ ದೇಶದಲ್ಲಿ ನಡೆಯುತ್ತಾ ಇದ್ದರೆ ಸರಕಾರದ ಡೈರೆಕ್ಷನ್‌ನನ್ನೂ ಮೀರಿ ಸರ್ಕಾರದವರು ಕೊಟ್ಟಿರತಕ್ಕ ಸಕ್ಕರೆಯನ್ನು ಆ ಕನ್‌ಸ್ಯೂಮರ್ ಸೊಸೈಟಿಯವರು ಪಬ್ಲಿಕ್ ಮಾರ್ಕೆಟ್‌ನಲ್ಲಿ ಒಂದು ಕ್ವಿಂಟಾಲಿಗೆ ಮುನ್ನೂರು ರೂಪಾಯಿಗಳಿಗಿಂತಲೂ ಹೆಚ್ಚಾಗಿ ಮಾರಿದ್ದಾರೆ ಅಂತ ಅನ್ನುವುದನ್ನು ನೆನೆಸಿಕೊಂಡರೆ ಈ ಮಂತ್ರಿಮಂಡಲ ಅಧಿಕಾರದಲ್ಲಿ ಇರುವುದಕ್ಕೆ ಸಾಧ್ಯವೇ ? ಅವರಿಗೆ ಆತ್ಮ ವಿಶ್ವಾಸ ಇದೆಯೇ ಎಂದು ಕೇಳುತ್ತೇನೆ. ತಮಗೆ ಆತ್ಮ ಎಂಬುದು ಏನಾದರೂ ಇದ್ದ ಪಕ್ಷದಲ್ಲಿ ತಾವು ಅಧಿಕಾರದಲ್ಲಿ ಇರುವುದಕ್ಕೆ ಅರ್ಹತೆ ಇದೆಯೇ ಅಂತ ಹೇಳಿ ತಾವೇ ತಮ್ಮ ಆತ್ಮಶೋಧನೆ ಮಾಡಿಕೊಳ್ಳಿ. ಮಾನ್ಯ ಸಭಾಪತಿಗಳೇ, ದೇಶ ಇವತ್ತು ಎರಡನ್ನು ನಿರೀಕ್ಷೆ ಮಾಡುತ್ತಾ ಇದೆ. ಬಹುಶಃ ಸದ್ಯದಲ್ಲಿರತಕ್ಕ ಮಂತ್ರಿಮಂಡಲದವರು ಒಳ್ಳೆಯ ಜನ ಇದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ತಾವು ಸಕ್ಕರೆ ವಿಚಾರ ಹೇಳಿದಿರಲ್ಲಾ, ಅದು ಕಂಟ್ರೋಲ್ಡ್ ಶುಗರ್ ಅಲ್ಲ, ಫ್ರೀ ಮಾರ್ಕೆಟ್ಟಿನಲ್ಲಿ ದೊರಕುತ್ತಾ ಇರುವ ಸಕ್ಕರೆ ಅದು, ಅದನ್ನು ಆ ಪ್ರಕಾರ ಮಾರಿರುತ್ತಾರೆ. ಮನೆಯ ಉಪಯೋಗಕ್ಕೆ ಬಳಸತಕ್ಕ ಸಕ್ಕರೆ ಅದು ಅಲ್ಲ.

Sri H. N. NANJE GOWDA.—Sir, I am very sorry the Hon. Minister has misinterpreted my statement. What I said was that sugar is being allotted to the Consumers Federation. If you have got anything to say to the contrary prove it. I have got evidence to prove that.

Sri K. H. PATIL.—Is it the allegation of the Hon. Member that there is a clique in the Government?

Sri H. N. NANJE GOWDA.—Yes. That is why I am telling this Ministry has appointed a Chairman who comes once in three months to Bangalore. He is a Taluk Development Board President and he is paid a salary of Rs. 1,000 per month and more.

Mr. SPEAKER.—Sri Nanje Gowda, may please continue his speech.

ಶ್ರೀ ಎಚ್. ಎನ್. ನಂಜೇಗೌಡ.—ಈವೊತ್ತು ಜನತೆ ಎರಡನ್ನು ನಿರೀಕ್ಷೆ ಮಾಡುತ್ತಾ ಇದೆ. ಒಂದು ಈ ಸರ್ಕಾರಕ್ಕೆ ಆತ್ಮಗೌರವ ಅಂತ ಅನ್ನುವುದು ಒಂದು ಇದ್ದರೆ, ಅವರಲ್ಲಿ ಹೃದಯ ಪರಿವರ್ತನೆ ಅನ್ನುವುದು ಏನಾದರೂ ಆಗುವುದು ಇದ್ದರೆ, ಅವರಿಗೆ ಏನಾದರೂ ಕೊಂಚವಾದರೂ ಸೆನ್ಸಿಟೀವನೆಸ್ ಇದ್ದರೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟು ಮತ್ತು ಅನುಚಿತವಾಗಿ ಆಗಿರತಕ್ಕ ನಾನಾ ನ್ಯೂನತೆಗಳನ್ನು ತಾವಾಗಿಯೇ ಅರಿತುಕೊಂಡು ರಾಜೀನಾಮೆ ಕೊಡುತ್ತಾರೆಯೇ ಎಂದು ನಿರೀಕ್ಷೆ ಮಾಡುತ್ತಾ ಇದ್ದಾರೆ. ಇನ್ನೊಂದು ಕಾಂಗ್ರೆಸ್ ಸಂಸ್ಥೆಯೊಳಗೂ ಕೂಡ ಕೆಲವು ಪ್ರಾಮಾಣಿಕ ವ್ಯಕ್ತಿಗಳಿಗೆ ಓಟು ಕೊಟ್ಟಿದ್ದೇವೆ, ಅವರಾದರೂ ಕೂಡ ವಿರೋಧ ಪಕ್ಷದವರ ಜೊತೆಯಲ್ಲಿ ಸೇರಿಕೊಂಡು ಇವರನ್ನು ಅಧಿಕಾರದಿಂದ ಕೆಳಕ್ಕೆ ಇಳಿಸುತ್ತಾರೆಯೇ ಎಂದು ಜನ ನಿರೀಕ್ಷೆ ಮಾಡುತ್ತಾ ಇದೆ. ಆದ್ದರಿಂದ ಅವರಿಗೆ ನೈತಿಕವಾಗಿ ಅಧಿಕಾರದಲ್ಲಿ ಇರುವುದಕ್ಕೆ ಹಕ್ಕು ಇಲ್ಲ. ಈ ಕಡೆ ಆ ಕಡೆ ಎಂಬ ಭೇದಭಾವ ಇಲ್ಲದೆ ರಾಜ್ಯದ ಬೊಕ್ಕಸಕ್ಕೆ ಕೊಕ್ಕೆ ಹಾಕತಕ್ಕ ಕಾರ್ಯಗಳನ್ನು ಅವರು ಮಾಡುತ್ತಾ ಇರತಕ್ಕ ಕಾಲದಲ್ಲಿ ಅವರನ್ನು ಅಧಿಕಾರದಿಂದ ಇಳಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before hon. Member Mr. Channabasappa begins to speak, I want to make one request to him. I know the hon. Member has the capacity to make lengthy speeches. But I would be very happy if he were to make a short speech bringing out all his arguments.

Sri H. M. CHANNABASAPPA.—Sir, if I were to be a lawyer like you I think I could have done that. But I am sorry that I have not been a lawyer. Therefore, I would take a little more time to make clear my views on this issue before the hon. Members of this House and others outside this House.

Mr. SPEAKER.—Hon. Members are requested not to address their arguments to the public outside but to address them only to the Members within the House.

† **Sri H. M. CHANNABASAPPA.**—Mr. Speaker Sir, the no-confidence motion that has been Tabled by my hon. friend Mr. Shivappa stands on quite a different footing than the no-confidence motions that were Tabled many a time age. The present no-confidence motion is an off-spring of the situation that arose when an adjournment motion was moved. If

